ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಸಂಪುಟ ೫೧
ಸಂಚಿಕೆ ೧೮

Vol. 51
No. 18

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, 6—1—1972

ವಿರೋಧ ಪಕ್ಷಗಳು

ಭಗೀರಥ ಪ್ರಯತ್ನ ಮಾಡಬೇಕಾಗುತ್ತದೆ

ಫೆಬ್ರವರಿ ೩ರಲ್ಲಿ ನಡೆಯಬೇಕಾಗಿದ್ದ ಚುನಾವಣೆಗಳನ್ನು ಒಂದು ವರ್ಷ ಮುಂದೆ ಹಾಕಲಾಯ್ತು— ಕಾರಣ, ಭಾರತ—ಪಾಕ್ ಸಮರ. ಇದು ಎರಡೇ ವಾರಗಳಲ್ಲಿ ಭಾರತದ ಅದ್ವಿತೀಯ ವಿಜಯದಲ್ಲಿ ಪರ್ಯವಸಾನಗೊಂಡುದರಿಂದ ಸರಕಾರ ತನ್ನ ನಿರ್ಧಾರವನ್ನು ಬದಲಾಯಿಸಿತು.

ವಿರೋಧಿ ಪಕ್ಷಗಳೂ ಒಪ್ಪಿದುವು; ಒಪ್ಪದೆ ಮತ್ತೇನು ಮಾಡಿಯಾವು? ಮಾರ್ಚಿ ೩ರಲ್ಲಿ ಚುನಾವಣೆಗಳು ನಡೆಯಬೇಕೆಂದೀಗ ಗೊತ್ತಾಗಿದೆ. ರಾಜ್ಯಕೀಯ ಪರಿಸ್ಥಿತಿ ವಿಕೋಪಕ್ಕೆ ಹೋಗುವುದಕ್ಕೆ ಮೊದಲೇ ನಡೆಯಬೇಕಾದ ಸಂಪ್ರದಾಯಗಳು ಮುಗಿಯಲಿ ಎಂದು ಈ ಕಾರಣದಿಂದಲಾದರೂ ಅಪಪ್ರಚಾರ ನಿರತ ವಿದೇಶೀಯ ಮಿತ್ರರು ತಮ್ಮ್ ವಾದವೈಖರಿಯನ್ನು ಬದಲಾಯಿಸುವುದಾದರೆ ಬದಲಾಯಿಸಲೆಂದು ಆಶಯ.

ಯುದ್ಧಕ್ಕೆ ಮೊದಲಿದ್ದ ರಾಜ್ಯಕೀಯ ಪರಿಸ್ಥಿತಿ ಯುದ್ಧಾನಂತರ ಸಂಪೂರ್ಣ ಬದಲಾಗಿದೆ. ಇದು ಅತಿಶಯೋಕ್ತಿಯೆನಿಸಬಹುದಾದರೂ ರಾಜ್ಯಕೀಯ ಪ್ರಭಾವದ ಮಟ್ಟಗೆ ಸತ್ಯಕ್ಕೆ ತೀರ ಹತ್ತಿರವಾದದ್ದು. ಸಮರ ವೇಳೆಯಲ್ಲಿ ಎಲ್ಲ ರಾಜ್ಯಕೀಯ ಪಕ್ಷಗಳೂ ತಮ್ಮ ಆಂತರಿಕ ಭೇದ ಭಾವನೆಗಳನ್ನು ತ್ಯಜಿಸಿ ಏಕ ಪಕ್ಷದಂತೆ ಸುಸಂಘಟಿತಗೊಂಡದ್ದು, ಜನತೆಯನ್ನು ಜಾಗ್ರತಗೊಳಿಸಿದ್ದು ನಿಜವಾದರೂ, ಸಮರ ವಿಜಯದಲ್ಲಿ ವಿರೋಧಿಪಕ್ಷಗಳು ಸಕ್ರಿಯವಾಗಿ ಸಹಕಾರ ನೀಡಿದ್ದರಿಂದ, ಪಾಲು ಬಯಸುವುದು ನ್ಯಾಯವಾದರೂ, ವಿಜಯವು ಇಡಿಯ ಭಾರತೀಯ ಜನತೆಯದ್ದೆಂದು ಹೇಳಬೇಕಾದರೂ ಕೀರ್ತಿಕಿರೀಟವನ್ನು ಪ್ರಧಾನಿ ಇಂದಿರಾಗಾಂಧಿಯವರೇ ತಮ್ಮ ತಲೆಯ ಮೇಲೆ ಇಟ್ಟುಕೊಂಡಿದ್ದಾರೆ. ಒಂದು ನೇಲೆ ಅದನ್ನು ಅವರು ಮೆಚ್ಚಲಾರರಾದರೂ ಮಹಾಭಾರತೀಯ ಜನತೆ ಯಶಸ್‌ಕಿರೀಟವನ್ನು ಆಕೆಯ ತಲೆಯಿಂದ ಇಳಿಸಲು ಬಯಸದಿರುವುದು ಸಹಜ.

ರಣರಂಗದಲ್ಲಿ ಪ್ರಾಣತ್ಯಜಿಸಿ ಮಾತೃ ಭೂಮಿಯ ರಕ್ಷಣೆಗಾಗಿ ಹೋರಾಡಿದವರಿಗಿಂತ ಜೋಲು ಬಜಾಯಿಸಿ ವಿಜಯಗೀತೆ ಹಾಡುವವರಿಗೇ ಅಭಿನಂದನೆಯ ಸುರಿಮಳೆ. ಈ ಮಾನಸಿಕ ಪ್ರಭಾವವನ್ನು ಬದಲಾಯಿಸುವುದು ಕಷ್ಟ ಸಾಧ್ಯ. ನಮ್ಮ ವಿರೋಧ ಪಕ್ಷಗಳು ಅಂದು ಪರಿಣಾಮಕಾರಿಯಾದ ವಿರೋಧವನ್ನು ಆಡಳಿತ ಪಕ್ಷಕ್ಕೆ ನೀಡುವ ಪರಿಸ್ಥಿತಿಯಲ್ಲಿದ್ದರೆ, ಇಂದು ಕಂಗಾಲಾಗಿ ಹೋಗಿರುವುದು ಸುವಿದಿತ.

ಕೆಲವು ರಾಜ್ಯಕೀಯ ಪಕ್ಷಗಳ ನಾಯಕರು ಇಂಡಿಕೇಟಿಗೆ ಇದರ ಸೂಚನೆಯನ್ನೂ ಕೊಟ್ಟಿದ್ದಾರೆ. 'ಸಮರ ವಿಜಯ'ದ ಅನುಚಿತ ಲಾಭ ಪಡೆಯಬಾರದೆಂದು ಎಚ್ಚರಿಕೆ ನೀಡಿದ್ದಾರೆ. ಆದರೆ, ಬೌದ್ಧಿಕ ದಾಸರಾಗಿರುವ ಭಾರತೀಯರು ಈ ಕೀರೀಟವನ್ನು ಪ್ರಧಾನಿಯ ತಲೆಗೇ ಏರಿಸಿದ್ದಾರೆ. ಕೀರೀಟಾಧಿಪತಿಗಳು ಪ್ರಜೆಗಳಂಬುದನ್ನು ಒಪ್ಪಿಕೊಂಡರೂ ತಮ್ಮೆಲ್ಲರ ಪರವಾಗಿ ಅವರೇ ಇಟ್ಟುಕೊಳ್ಳಲೆಂದು ಬೊಬ್ಬಿಡುತ್ತಾರೆ.

ಇದು ವ್ಯಕ್ತಿ ಪೂಜೆಯ ಇನ್ನೊಂದು ಅವತಾರವೆನಿಸಬಹುದು; ಇದು ಅನುಚಿತ ವಿದ್ದರೂ ಇರಬಹುದು; ಆದರೆ, ಭಾರತೀಯ ಜನಕೋಟಿಯ ಮನಸ್ಸನ್ನು ಬದಲಾಯಿಸಲು ಈಗ ಕಾಲಾವಕಾಶವಿಲ್ಲ. ಆದ್ದರಿಂದ, ಮಾರ್ಚಿ ಚುನಾವಣೆಗಳ ವೇಳೆ ವಿರೋಧಿ ಪಕ್ಷಗಳು ಪಡಪ್ರಭವನಿಸದೆ ಹೋದರೆ ಅದೇ ಆಶ್ಚರ್ಯವೆನಿಸುವುದು.

ಈ ಬಗೆಯ ಇಕ್ಕಟ್ಟಿನ ಸ್ಥಿತಿಗೆ ಸಿಕ್ಕಿಬಿದ್ದ ಹಲವು ಪಕ್ಷಗಳಲ್ಲಿ ಸಿಂಡಿಕೇಟು ಕೂಡ ಒಂದು ಕಾಂಗ್ರೆಸ್ ಮಹಾ ವಿಘಟನಾನಂತರ ಇಂಡಿಕೇಟು ಬಲವತ್ತರವಾಗಿ ಹಲವು ರಾಜ್ಯಗಳಲ್ಲೂ ಕೇಂದ್ರಗಳಲ್ಲೂ ತುಂಬಿದ ಬಹುಮತದಿಂದ ಆಡಳಿತೆ ನಡೆಸುತ್ತಿರುವುದು ಮಾತ್ರವಲ್ಲ. ಸಿಂಡಿಕೇಟು ತನ್ನ ಅಧಿಕಾರವನ್ನೆಲ್ಲ ಕಳೆದು ಕೊಂಡಿರುವುದು ಸರ್ವಶ್ರುತ.

ಸಿಂಡಿಕೇಟಿನ ಬಲವಾದ ಕಂಬಗಳೂ ಉರುಳಿ ಇಂಡಿಕೇಟಿನತ್ತ ಪಕ್ಷಾಂತರ ಗೊಂಡವು;ಈ ಕ್ರಮ ಇನ್ನೂ ಮುಂದುವರಿದಿದೆ. ಸತ್ಯ ಹೇಳುವುದಾದರೆ, ಉಳಿದೆಲ್ಲ ರಾಜಕೀಯ ಪಕ್ಷಗಳಿಗಿಂತಲೂ ಅತ್ಯಂತ ಮುರುವ ಸ್ಥಿಗೀತಾದ ಪಕ್ಷವೆಂದರೆ ಸಿಂಡಿಕೇಟು. ತಾನೇ ನಿಜವಾದ ಕಾಂಗ್ರೆಸ್ಸು ಎಂದು ಹೇಳಿಕೊಳ್ಳುತ್ತ ಬಂದಿರುವ ಅದು ಕಾಂಗ್ರೆಸ್ಸಿನ ಧ್ಯೇಯ ನೀತಿಗಳನ್ನೇ ಅನುಸರಿಸಿಕೊಂಡು ಬರುತ್ತಿರುವುದಾದರೂ ಸೋಲನ್ನು ಒಪ್ಪಿ ಕೊಳ್ಳುತ್ತಲೇ ಬಂದಿದೆ; ಬರಬೇಕಾಗಿದೆ. ಕಾಂಗ್ರೆಸಿಗರಲ್ಲಿ ಹೆಚ್ಚಿನವರು ಇಂದು ಇಂಡಿಕೇಟಿನಿಂದ ಅಕರ್ಷಿತರಾಗಿರುವುದು ಸತ್ಯ. ಇದಕ್ಕೆ ಅಧಿಕಾರದ ಮೋಹ, ವ್ಯಕ್ತಿ ನಿಷ್ಠೆ ಅಥವಾ ಮತ್ತಾವುದೇ ಕಾರಣವಿರಬಹುದು; ಅದು ಗೆದ್ದು ಬಂದುದನ್ನು ಅಲ್ಲ ವೆನ್ನಲಾಗದು. ಆದರೆಪುರು ಸಿಂಡಿಕೇಟು ತನ್ನ ಪ್ರತಿಭೆಯೆಲ್ಲವನ್ನೂ ಕಳೆದುಕೊಂಡಿರುವುದು ಸ್ಪಷ್ಟವಾಗಿದೆ.

ಒಂದು ಕಾಲದಲ್ಲಿ ಮತ್ತು ತುಸುಮಟ್ಟಿಗೆ ಈಗಲೂ ಸಿಂಡಿಕೇಟಿನ ಗಂಡುಸ್ಥಳವೆಂದು ಹೆಸರಾದ ಕರ್ನಾಟಕದಲ್ಲೂ ಅದರ ಪಾಡು ಇದಕ್ಕಿಂತ ತೀರ ಬೇರೆಯಲ್ಲ. ಪ್ರಾಯಃ ಇಲ್ಲಿನ ನಾಯಕರ ಬಗ್ಗೆ ಶ್ರೀ ಸಾಮೂರ್ಯರ ಅನುಕಂಪ ತುಸು ಹೆಚ್ಚಿರಬಹುದು. ಆದರೆ, ಈ ಅನುಕಂಪದಿಂದ ಯಾವುದೇ ಪ್ರಯೋಜನ ಲಭ್ಯವಾಗದು. 'ನೀವು ತೂತಾದ ದೋಣಿಯೇರಿದ್ದೀರಿ' ಎಂದು ಜನತೆ ಅವರಿಗೆ ಹೇಳಿದರೂ ತಪ್ಪಾಗದು. ಇಂಡಿಕೇಟಿನ ಪ್ರಭಾವ ಮಿತಿಮೀರಿ ಹರಡುತ್ತಿರುವಾಗ ಶ್ರೀ ಸಾಮೂರ್ಯರೆಲ್ಲರೂ ಇದರಿಂದ ಪ್ರಭಾವಿತರಾಗುವುದು ನ್ಯಾಯ.

ಸಿಂಡಿಕೇಟ್ ರಾಷ್ಟ್ರೀಯ ಮಟ್ಟದಲ್ಲೇ ನಿಸ್ತೇಜವಾಗುತ್ತಿರುವಾಗ ಅದರ ಸಂಪರ್ಕ ಕಡಿದುಕೊಳ್ಳಿ ಎಂದವರೂ ಇವ್ವಾರೆ. ಆಗ ನೋಡೋಣವೆಂದು ಭರವಸೆ ನೀಡಿದವರೂ ಇದ್ದಾರೆ.

ಆದುದರಿಂಲೇ ರಾಜ್ಯದ ಸಿಂಡಿಕೇಟಿಗೆ ಪರೀಕ್ಷಾಕಾಲ. ಆದರ ಕಾರ್ಯಾಲಯಕ್ಕೆ ಬೀಗ ಮುದ್ರೆ ಬಿದ್ದಿದೆ. ಅದು ಕೇಂದ್ರದೊಡನೆ ಸಂಬಂಧವಿಟ್ಟುಕೊಂಡರೆ,ಹೀನ ಸ್ಥಿತಿಯಿಂದ ಪಯನೀಯ ಸ್ಥಿತಿಗಿಳಿಯಬಹುದೆಂಬ ಭೀತಿಯೂ ಕೆಲವರು ಕಾರ್ಯಕರ್ತರಲ್ಲಿ ಹುದುಗಿದೆ. ಆದುದರಿಂದ ಕೇಂದ್ರದಿಂದ ಸಿಡಿದು, ರಾಜ್ಯಮಟ್ಟದ ಪಕ್ಷವಾಗಿ ರೂಪಾಂತರ ಗೊಳ್ಳಬೇಕು ಎಂದು ಹೇಳುವವರು ಹಲವರಿದ್ದಾರೆ.

ರಾಜ್ಯದಲ್ಲಿ ಅಧಿಕಾರವನ್ನು ಗಳಿಸಲು ಸರ್ವಪ್ರಯತ್ನವನ್ನೂ ಇಂಡಿಕೇಟಿಗರು ನೂಡುತಿವ್ವಾರೆ. ಪಕ್ಷಾಂತರಗೊಂಡವರೆಲ್ಲರಿಗೂ ಪಕ್ಷದ ಬಾಗಿಲನ್ನು ತೆರೆದಿಟ್ಟಿದರ ಮೂಲೋದ್ದೇಶವೇ ಇದು. ಇದಕ್ಕೆ ಒಂದಷ್ಟು ವಿರೋಧ ವ್ಯಕ್ತನಾದರೂ ಆವೆಲ್ಲ ಬರಿಯ ನಾಟಕವೆಂಬಂತೆ ನಡೆದು ಹೋಯ್ತು. ಇನ್ನು ಚುನಾವಣೆಗಳಲ್ಲಿ ವಿಜಯ ಪ್ರಾಪ್ತಯತ್ನ ದೃಷ್ಟಿ. ಪಾಕಿನ ಸೋಲಿನಿಂದ ಈ ವಿಜಯ ಮುಷ್ಟಿಯೊಳಗೆ ಬಂದಂತೆಯೇ.

ಆದುದರಿಂದ, ಬಹುಮತಗಳಿಸುವ ಆಶಯ ಹೊಂದಿದ್ದ ಸಿಂಡಿಕೇಟು ಪ್ರಬಲ ವಿರೋಧ ಪಕ್ಷವಾಗಿ ಯಾದರೂ ಉಳಿದು ಬರಬೇಕಾದರೆ ಭಗೀರಥ ಪ್ರಯತ್ನವನ್ನೇ ಮಾಡಬೇಕಾಗುತ್ತದೆ. ಈ ಬಾರಿ ಹಾಗೆಯೇ ನೋಡಿ ಜನಾಭಿಪ್ರಾಯ ತಿಳಿದು ಮುಂದೆ ಮುಂದುವರಿಯಬಹುದು.

ಇನ್ನೂ ಒಂದು ಹೆಜ್ಜೆ ದೂರ ಹೋದರೂ ಹೋಗಬಹುದು. ಎಲ್ಲ ಪಕ್ಷಾಂತರಿಗಳಿಗೂ ಸ್ವಾಗತ ನೀಡಿದಂತೆ ಸಿಂಡಿಕೇಟಿಗೂ ಇಂಡಿಕೇಟು ಸ್ವಾಗತ ನೀಡಬಹುದು. ಇದು ಅನನ್ಯ ಶರಣಾಗತಿಗಿಂತ ಬೇರೆಯಲ್ಲ. ಆದರೆ, ಇದಕ್ಕೆ ಒರಿಯರಲ್ಲಿ ಕೆಲವರಾದರೂ ರಾಜ್ಯಕೀಯ ನಿವೃತ್ತಿ ಹೊಂದಬೇಕಾಗುತ್ತದೆ; ತಮ್ಮ್ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಶ್ರೀಮತಿ ಗಾಂಧಿಯ ವಿಜಯವನ್ನು ಮೂರ್ಯ ಮಾಡಬೇಕಾಗುತ್ತದೆ.

ಪ್ರಜಾಪ್ರಭುತ್ವದಲ್ಲಿ ನೀತಿಯು ಪ್ರಜೆಗಳ ಅಪೇಕ್ಷೆಯಂತೆ ರೂಪುಗೊಳ್ಳುತ್ತದೆ. ಸಿಂಡಿಕೇಟೇ ಕಾನೂನಿನ ದೃಷ್ಟಿಯಿಂದ ನಿಜವಾದ ಕಾಂಗ್ರೆಸ್ಸಾಗಿರಬಹುದು; ಆದರೆ, ಜನಬಲವಿಲ್ಲದೆ ಬರಿಯ ಕಾನೂನಿನ ಬಲದಿಂದ ರಾಜಪದವಿಯನ್ನಾದರೂ ನಿರ್ಭಾಯಿಸುವುದು ಅಸಾಧ್ಯವಾಗಿರುವಾಗ, ತನ್ನ ಬರಿಯ ಅಸ್ತಿತ್ವದಿಂದ ಅದೇನನ್ನು ಸಾಧಿಸಬಹುದು?

'ಬಹು ಜನಾಯೇನ ಗತಾ ಸಾ ಪಂಥಾ' ಎಂಬ ಲೋಕ ನ್ಯಾಯವನ್ನು ಸಂಪೂರ್ಣ ತಿರಸ್ಕರಿಸುವುದು ಸಾಧ್ಯವಿಲ್ಲ. ಆದರೆ, ಕರ್ನಾಟಕದ ಸಿಂಡಿಕೇಟ್ ನಾಯಕರನ್ನು ಇಂಡಿಕೇಟ್ ನಾಯಕರು ಸುತರಾಂ ಸ್ವಾಗತಿಸುವುದಿಲ್ಲ.

ಮೊನ್ನೆ ಸೇರಿದ ಎಂಪಿಸಿಸಿಯ ಕಾರ್ಯಕಾರಿ ಸಮಿತಿಯು ಜನವರಿ ಎರಡನೆ ವಾರದ ಎಂಪಿಸಿಸಿಗೆ ಭವಿಷ್ಯ ನಿರ್ಧಾರದ ಹೊಣೆ ವಹಿಸಿದೆ. ಕೇಂದ್ರದಿಂದ ಪ್ರತ್ಯೇಕವಾಗುವ ಸೂಚನೆಗಳೇ ಈಗ ಹೆಚ್ಚು. ಆಗ, ಕೆಲವು ಉತ್ತಮ ಮಟ್ಟದ ರಾಜ್ಯಕಾರಣಿಗಳ ಪ್ರತಿಭೆ ಪರಿಸೀಮಿತವಾಗುವುದು ಎಂದು ದುಃಖವ್ಯಕ್ತವಾಗುತ್ತದೆ. ಆದರೆ ಗಂಧದ ಕೊರಡನ್ನು ತೇಜು ಕೆಲವರಿಗಾದರೂ ಪರಿಮಳವೀಯುವಂತಾಗುತ್ತದೆಂದಾದರೂ ಸಮಾಧಾನ ಪಡಬೇಕಾಗುತ್ತದೆ.

ಜನಕಾಂಗ್ರೆಸ್ಸು ಸತ್ತು ಹೋಯ್ತು; ಕರ್ನಾಟಕ ಕಾಂಗ್ರೆಸ್ಸು ಹುಟ್ಟಬಹುದು. ಮತ್ತೆ ಪ್ರಶ್ನೆ ಕರ್ನಾಟಕ ಕಾಂಗ್ರೆಸ್ಸೇ, ವೈಸೂರು ಕಾಂಗ್ರೆಸ್ಸೆ?—ಇದರಿಂದಲೇ ಕಾಂಗ್ರೆಸ್ಸು ಕೆಟ್ಟು ಹೋದದ್ದು.

●●

ಆಡು ಮುನಿದೊಡೆ ಏರುತ್ತದೆಂದು ಆನೆಯನ್ನೂ ಏರಿಸುವುದೆ?

ಂ ಂ ಂ

ಗೋಪಾಲನ ಬಾಲಲೀಲೆ

ಅವನಿಗೆ ಐದು ವರ್ಷಗಳು ತುಂಬಿರಲಿಲ್ಲ. ಉರುಟು ಮುಖ ಅವನದು. ಅವನ ಕೂದಲು ಗುಂಗುರು– ಗುಂಗುರಾಗಿತ್ತು. ಅವನ ಬಣ್ಣವೂ ಕಪ್ಪಿನಂತೆಯೇ ಸರಿ. ಆ ಪದಕ್ಕೆ ಸರಿಯೊಗಿ ಅವನು ಧೂಳಿನಲ್ಲಿ ಆಡಿ ಬಣ್ಣವನ್ನು ಹೆಚ್ಚಿಸಿಕೊಳ್ಳುತ್ತಿದ್ದನು. ಅವನ ಹೆಸರು ಗೋಪಾಲ. ಆದರೆ ಅವ್ವಾರೂ ಆ ಹೆಸರಿನಿಂದ ಅವನನ್ನು ಕರೆಯುತ್ತಿರಲಿಲ್ಲ. ಅವನ ಹೆತ್ತವರಿಗೆ ಅವನು ಗೋಪು. ಹೆಂಗಸರು ಅವನನ್ನು ಏ, ಬನ್ಯಾಷೆ'ಂದು ಕರೆಯುತ್ತಿದ್ದರು.

ಅವರಿದ್ದದ್ದು ಸರಕಾರಿ ಕಾಲೊನಿಯಲ್ಲಿ. ಅದರಲ್ಲಿ ನಾಲ್ಕು ಕಟ್ಟಡಗಳಿದ್ದುವು; ಪ್ರತಿಯೊಂದರಲ್ಲೂ ಮೂರು ಮಹಡಿಗಳಿದ್ದುವು. ಒಂದು ಮಹಡಿಯು ಎರಡು ಕುಟುಂಬಗಳಿಗಾಗಿ ಕಟ್ಟಲ್ಪಟ್ಟಿದ್ದಾಗಿತ್ತು. ಅವನು ದಾವಾದಿನಲ್ಲಿ ಬಳಕೆಯಲ್ಲಿರುವ ಬಾಡಿಗೆ ಯೊಡನೆ ಹೋಲಿಸಿದರೆ ಇದು ಎಷ್ಟೋ ಮೇಲು, ಅಲ್ಲಿ ವಾಸಿಸುತ್ತಿದ್ದವರಲ್ಲಿ ಹೆಚ್ಚಿನವರು ಗುಜರಾತಿಗಳು.

ಗೋಪುವಿನ ತಂದೆ ಸರಕಾರಿ ನೌಕರ. ಅವನು ಗುಜರಾತಿ ಅಲ್ಲ. ಅವರು ಇದ್ದದ್ದು ಮೂರನೆಯ ಮಹಡಿಯಲ್ಲಿ. ತನಗೇನಾದರೂ ಅಹುಗೆಯ ಕೆಲಸಗಳಿದ್ದಾಗ ಗೋಪುವಿನ ತಾಯಿಯು ಅವನನ್ನು ಎದುರಿನ ಮೈದಾನದಲ್ಲಿ ಆಡಲು ಕಳುಹಿಸುತ್ತಿದ್ದಳು. ಆದರಿಂದಾಗಿ ಅವನು ಜಾಗರೆಯಲ್ಲಿ ನಿಂತುಕೊಂಡು ಕೆಳಗೆ ತಾಯಿಕಾಣುವೆಸ್ಸು ಆಕೆ ತಪ್ಪಿಸುತ್ತಿದ್ದಳು. ಅವನನ್ನು ಮೇಲಕ್ಕೆ ಬರಲು ಕರೆಯಬೇಕಾದಲ್ಲಿ ಅವಳು ಜಗಲಿಯಲ್ಲಿ ನಿಂತುಕೊಂಡು 'ಗೋಪು, ಮೇಲೆ ಬಾ' ಅನ್ನುತ್ತಿದ್ದಳು. ಗೋಪು ಮೇಲಕ್ಕೆ ಬರಬೇಕಾದಲ್ಲಿ ಕೊನೆಯ ಪಕ್ಷ ಹನ್ನೆರಡು ಸಲವಾದರೂ ಆಕೆ ಕರೆಯಬೇಕಾಗುತ್ತಿತ್ತು. ಆಗ ಅವನು ಮೆಟ್ಟಿಲಿಗೆ ಭಯದಿಂದ ಹತ್ತಿಯ ಮೇಲೆ ಕೈಬಟ್ಟೆಕೊಂಡು ಬರುತ್ತಿದ್ದನು. ಅಲ್ಲಿ ಇಷ್ಟಿ ಹೊತ್ತು ಹೋಗಿದೆಂಬುದನ್ನು ಕಂಡುಕೊಂಡ ಗೋಪುವಿನ ತಾಯಿ ಒಡನೆ ಅವನ್ನು ಒರೆಸಿಕೊಂಡು ಬಾಲ್ಕನಿಯ ಮೆಟ್ಟಿಲಿಗೆ ಬರುತ್ತಿದ್ದಳು. ಅಷ್ಟರಲ್ಲಿ ಅವನ ಅಗಲವಾದ ಬೂಮುಗಣ್ಣುಗಳಿಂದ ಒಬ್ಬಾಣಿ ನೀರು ಪ್ರವಹಿಸುತ್ತಿತ್ತು. ಅವನ್ನು ಕಂಡೊಡನೆ ಅವಳ ಕೋಪಾಗ್ನಿಯು ನಂದಿಹೋಗುತ್ತಿತ್ತು. ಆಗ ಆಕೆಯು ಅವನನ್ನು ತಬ್ಬಿಕೊಂಡು ಪೀಡಿಸಿತ್ತಿ. ಬಚ್ಚಲು ಕೋಣೆಗೆ ಕರೆದೊಯ್ಯುತ್ತಿದ್ದಳು. 'ಕಳ್ಳ ಇನ್ನೆಂದೂ ಈ ರೀತಿ ಮಾಡಿಕೊಳ್ಳಕೂಡದೆ'ನ್ನುತ್ತಿದ್ದಳು.

ಅವನೂ 'ಸರಿ'ಯೆಂದು ತಲೆಯಲ್ಲಾಡಿಸುತ್ತಿದ್ದನು. ಆಗ ಕಣ್ಣೀರ ಹನಿ ಅವನ ಗಲ್ಲಗಳ ಮೇಲೆ ಬೀಳುತ್ತಿದ್ದುವು.

ಆದರೂ ಮರುದಿನ ಯಥಾಪ್ರಕಾರ ಅವನು ಜಾರಿಕೊಂಡು ಹೋಗುತ್ತಿದ್ದನು. ಹೌದು ಅವಸೊಟ್ಟ ತುಂಟ. ಅದು ಅವಳಿಗೂ ಗೊತ್ತು.

ಅವಳ ಶೀರೆಯಲ್ಲಿ ಬೆರಳಿನ ಮುದ್ರೆಗಳಿದ್ದುವೆಂದರೆ ತನ್ನ ಮುದ್ದುಗುವರನು ಅದನ್ನು ಕರವಸ್ತ್ರವನ್ನಾಗಿ ಉಪಯೋಗಿಸಿಕೊಂಡಿದ್ದನೆಂದು ಗೊತ್ತಾಗುತ್ತಿತ್ತು. ಮನೆಯಲ್ಲಿ ಇರುವೆ ದಿಬ್ಬಣ ಹೊರಟಿಸೆಯೆಂದರೆ ತನ್ನ ಪುಟ್ಟನು ಸಕ್ಕರೆಯನ್ನು ಕನ್ದು ತಿಂದು ಅಲ್ಲಿ ಜೇಲ್ಲಿದ್ದಾನೆಂದೇ ಅರ್ಥ. ಅವನು ಕೋಣೆಯಲ್ಲಿರುವಾಗ ಆಕೆ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕಾದರೆ ಅದನ್ನು ಹಿಡಿದು ಕೊಂಡು ನಂತರ ಕುಳಿತುಕೊಳ್ಳುತ್ತಿದ್ದಳು. ಅವನ ಬಾಲಲೀಲೆಯೇ ಅದಕ್ಕೆ ಕಾರಣ. ಹಿಂದೊಮ್ಮೆ ಅವಳು ಕುಳಿತುಕೊಳ್ಳಲು ಹೋದಾಗ ಅಲ್ಲಿ ಕುರ್ಚಿ ಇರುತ್ತಿರಲಿಲ್ಲ. ಪೊಪ್ಪನೆ ನೆಲದ ಮೇಲೆ ಬಿದ್ದುದರಿಂದ ಅವಳಿಗೆ ಆ ಜಾಗ್ರತೆ ತಾನಾಗಿ ಬಂದಿದೆ.

ಹೀಗೆಲ್ಲಾ ಇದ್ದರೂ ಅವನು ಕರುಣಾಮಯಿಯೂ ಹೌದು ಅವಳು ಭೀಸಲು ಭೀಸುಗಲ್ಲಿನ ಮುಂದೆ ಕುಳಿತುಕೊಂಡರೆ ಸಾಕು. ಅವನೆಲ್ಲಿದ್ದರೂ ಓಡಿಬಂದು ಆಕೆಯೆದುರಿನಲ್ಲಿ ಕುಳಿತುಕೊಂಡು, ಕಲ್ಲನ್ನು ತಿರುಗಿಸುತ್ತಿದ್ದನು ಮತ್ತು ಮುಗುಳ್ನಗುತ್ತಿದ್ದನು.

ಆಕೆ ಒಮ್ಮೆ ಹೊಟ್ಟೆನೋವಿನಿಂದಾಗಿ ಹಾಸಿಗೆಯಲ್ಲಿ ಹೊರಳಾಡುತ್ತಿದ್ದಳು. ಆಗ ಅವನು ಬಿಸಿನೀರಿನ ಚೀಲದಲ್ಲಿ ಕೊಳಸೀರನ್ನು ತುಂಬಿಸಿ ತಂದುಕೊಟ್ಟನು.

ಕೆಲವೊಮ್ಮೆ ಮನೆಗೆ ಯಾರಾದರೂ ಅತಿಥೀಕ್ಷೆಪವಾಗಿ ಬಂದಾಗ ಕಾಫಿಮಾಡಿಕೊಡಲೆಂದು ಆಕೆ ಅಡುಗೆ ಕೋಣೆಗೆ ಕಾಲಿಡುತ್ತಿದ್ದಾಗ, ಆಕೆಯ ಕಣ್ಮಣಿ ಅಲ್ಲಿ ಪಕ್ಕದ ಮನೆಯ ಬೆಕ್ಕಿಗೆ ಹಾಲೆರೆಯುತ್ತಿರುವದನ್ನು ಕಾಣಬೇಕಾಗುತ್ತಿತ್ತು.

ಬ್ರೆಡ್ಡಿನವನು ಬಂದಾಗ ದಿವಸಾಗಲೂ ಸರಿಯೊದ ಋಣವನ್ನು ಕೊಟ್ಟು ಬ್ರೆಡ್ಡ್ ತರಲು ಗೋಪುವನ್ನು ತಾಯಿ ಕಳುಹಿಸುತ್ತಿದ್ದಳು. ಅವನು ಹಣಕೊಟ್ಟು ಬ್ರೆಡ್ಡ್ ತಂದು ಒಡನೆ ತನ್ನ ಮಜೂರಿ ಕೇಳುತ್ತಿದ್ದನು. ಬ್ರೆಡ್ಡ್‌ಜಾಮ್ ತಿಂದಾಗಲೇ ಅವನು ಸುಮ್ಮನಾಗುವದು.

ಎಂದಿನಂತೆ ಒಂದು ದಿನ ಆಕೆ ಹಣಕೊಟ್ಟು ಕಳುಹಿಸಿದ್ದಳು. ಎಷ್ಟು ಹೊತ್ತಾದರೂ ಗೋಪು ಮೇಲಕ್ಕೆ ಬರಲೇ ಇಲ್ಲ. ಅವನನ್ನು ಹುಡುಕಿಕೊಂಡು ಅವಳೇ ಕೆಳಗಿಳಿದು ಬಂದಳು. ಅಲ್ಲಿ ನೆಟ್ಟಲಿನ ಮೇಲೆ ರೊಟ್ಟಿಯನ್ನಿಟ್ಟು ಗಾಡಿಯಂತೆ ಮಾಡಿಟ್ಟು ಕೊನೆಯ ತುಂಡನ್ನು ಮಾಡಿದಾಗ ಮುಂದಿನ ತುಂಡು ಚಲಿಸುತ್ತಿದ್ದುದನ್ನು ಕಂಡು ಆ ಆಟದಲ್ಲಿ ತಲ್ಲೀನನಾಗಿದ್ದ ಗೋಪುವನ್ನು ಕಂಡಳು. ಅಯ್ಯಯ್ಯೋ! ಈಗೇನು ಮಾಡುವದು? ರೊಟ್ಟಿ ಧೂಳಿನಿಂದ ತುಂಬಿ ಹೋಗಿದೆ!

"ಗೋಪು! ಇದೇನು ಮಾಡುತ್ತಿರುವದು?"

'ಅಮ್ಮಾ, ಟ್ರೈನ್ ನೋಡಿ. ಮುಂದಕ್ಕೆ ಇರುವದು ಇಂಜಿನು. ಹಿಂದಕ್ಕೆ ಕೊಟಡಿಗಳಿವೆ. ಆದರೆ ನೋಡಿ. ಈ ಇಂಜಿನು ಟ್ರೈನನ್ನು ಎಳೆದುಕೊಂಡು ಹೋಗುತ್ತಿಲ್ಲ! ಟ್ರೈನೇ ಇಂಜಿನನ್ನು ತಳ್ಳುತ್ತಿದೆ!'

ಅಬ್ಬಬ್ಬಾ! ರೊಟ್ಟಿಯ ಅವಸ್ಥೆಯೇ! ಆದರೆ, ಮಗನ ಆಟ!

ಂ ಂ ಂ

ದಿನಗಳುರುಳಿದಂತೆ ಗೋಪುವಿನ ಖ್ಯಾತಿ ಕಾಲೋನಿಯಲ್ಲಿ ಪ್ರಚಾರವಾಯಿತು. ಅಕ್ಕಪಕ್ಕದ ಮನೆಯ ಹೂನಿನಿಯರು ದಿವಸಾಗಲೂ ಗೋಪುವಿನ ತಾಯಿಯನ್ನು ಕಾಣ ಬರಲಾರಂಭಿಸಿದರು. ಮೊದ ಮೊದಲು ಮಹಿಳೆಯರ ಮೂಮೂಲಿನ ಮಾತಿನಿಂದ ಆರಂಭನಾಗಿ, ಕೊನೆಗೆ ಮೆಲ್ಲನೆ, 'ನನಗೆ ಹೇಳಲು ಮನಸ್ಸಿಲ್ಲ, ಆದರೂ ನೋಡಿ, ನಿಮ್ಮ ಹುಡುಗನು ನಮ್ಮ ಹುಡುಗನ ಪೆನ್ಸಿಲನ್ನು ಕಸಿದುಕೊಂಡು ಅದರ ಸೀಸವನ್ನು ತುಂಡು ಮಾಡಿದ್ದಾನಂತೆ. ನೀವು ದಯವಿಟ್ಟು ಅವನನ್ನು ಸ್ವಲ್ಪ ಹೆದರಿಸುತ್ತೀರಾ?' ರಾಗದಿಂದ ಮುಗಿಯುತ್ತಿತ್ತು.

ಮತ್ತೊಂದು ದಿನ ಮತ್ತೊಬ್ಬಾಕೆ "ನೋಡೀಂದ್ರೆ ನಿಮ್ಮ ಮಗ ದಿನಾಲೂ ಬಸ್ಸಿನಲ್ಲಿ ನಮ್ಮ ಹುಡುಗನ ಕಾಲು ತುಳಿಯುತ್ತಾನೆ, ಕಣ್ರೀ ಅವನಿಗೆ ಸ್ವಲ್ಪ ಬುದ್ಧಿ ಹೇಳಿಯನ್ಯೋ'ಂದು ಮುಗಿಸಿದಳು.

ತನ್ನ ಮಗನ ಪ್ರತಾಪದರಿವು ತಾಯಿಗಾಯಿತು. ಅವನು ಹೀಗೆ ಮಾಡಿರುವದರಿಂದ ತಾನೇ ಈ ದೂರುಗಳು. ಆದರೆ ತನ್ನ ಮಾತುಗಳನ್ನು ಅವನೆಲ್ಲಿ ಕೇಳುತ್ತಾನೆ? ಆದುದರಿಂದ ಆಕೆ ಅನಂರಿಗೆ, "ಖಂಡಿತವಾಗಿ ಹೇಳುತ್ತೇನಮ್ಮ, ಕೋಪಗೊಳ್ಳಬೇಡಿ.ಅವನಿನ್ನೂ ಮಗು, ನಿಮಗೆ ಗೊತ್ತಿದೆ"ಯೆಂದು ಸಂತೈಸಲು ಏನಾದರೂ ಹೇಳುತ್ತಿದ್ದಳು. ಮತ್ತು ಅಂತಹ ದೂರುಗಳು ಮುಂದಕ್ಕೆ ಬರಬಾರದೆಂದು ಕೊಂಡು,"ಇವೆಲ್ಲಾ ಹುಡುಗರ ವಿಷಯಗಳು. ಅವು ಹೊಡೆದುಕೊಳ್ಳುತ್ತವೆ, ಆಡುತ್ತವೆ. ಆ ವಿಷಯದಲ್ಲಿ ದೊಡ್ಡವರು ತಲೆ ಹಾಕುವದು ನನಗೇನೋ ಸರಿ ಕಂಡು ಬರುವದಿಲ್ಲ.ಆದರೂ ನೀವು ಬಂದು ಹೇಳಿದುದರಿಂದ ಅವನಿಗೆ ಹೇಳುತ್ತೇನೆ'ನ್ನುತ್ತಿದ್ದಳು.

ಅಂದು ಗೋಪುವನ್ನು ಅಡಿಕೋಲು ಕಾಯುತ್ತಿತ್ತು. ಅವನು ಬಂದೊಡನೆ ಅದರಿಂದ ಚೆನ್ನಾಗಿ ಆಕೆ ಬಾರಿಸುತ್ತಿದ್ದಳು. "ನೀನು ನೀಚ! ಇಡೀ ಕಾಲೋನಿ ನಿನ್ನ ಮೇಲೆ ಮೂರು ತಂದಿದೆ. ಥತ್..ಧತ್...ಕಾಲೋನಿಯಲ್ಲಿ ನಾನು ಮುಖ ತೋರಿಸುವಂತಿಲ್ಲ ನಿನ್ನಿಂದಾಗಿ...."

"ಇಲ್ಲಮ್ಮಾ, ಇಲ್ಲಮ್ಮಾ...."ಕಣ್ಣೀರ ಕಾಲುವೆಯನ್ನು ಹರಿಯಿಸುತ್ತ "ಇನ್ನೆಂದಿಗೂ ಹಾಗೆ ಮಾಡುವದಿಲ್ಲವೆಂದು" ಬಿಕ್ಕಳಿಸುತ್ತ ಅವನು ಅನ್ನುತ್ತಿದ್ದನು

ಂ ಂ ಂ

ಆದೊಂದು ದಿನ ಸಾಯಂಕಾಲ ಅವನು ಆಟಕ್ಕೆ ಹೋಗಿ ಹದಿನೈದು ನಿಮಿಷಗಳು ಕಳೆದಿದ್ದವು ಅಷ್ಟರಲ್ಲಿ,'ಬಾ ಗೋಪು

(ಹನ್ನೊಂದನೆ ಪುಟ ನೋಡಿರಿ)

ಅಮೃತಾಂಜನ

● ತಲೆ ನೋವು ● ಮೈ ನೋವು
● ಉಳುಕು ● ಕಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾವ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದೆ ದಶಾಲಾ (ಪೆವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 18

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟಿರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೫೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಮುಳುಗುವ ದೋಣಿ ಉಳಿಸಲು ಕೊನೆಯ ಗಳಿಗೆಯ ಯತ್ನ

'ಸಿಂಡಿಕೇಟು' ತನ್ನ ಹೆಸರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಸಂಸ್ಥಾ) ಎಂದು ಇರಿಸಿಕೊಂಡು ಚುನಾವಣೆಗಳಲ್ಲಿ ಚರ ಕದಲ್ಲಿ ನೂಲುವ ಮಹಿಳೆಯ ಚಿಹ್ನೆ ತನಗೆ ಮೀಸಲಿದಬೇಕೆಂದು ಚುನಾವಣಾ ಆಯೋಗವನ್ನು ಕೇಳಿಕೊಂಡಿದ್ದು, ಇದಕ್ಕೆ ಅಂಗೀಕಾರ ಮುದ್ರೆ ಬಿದ್ದಿದೆ. ಆದುದರಿಂದ ಪಕ್ಷದ ಮುಂದಿದ್ದ ಸಮಸ್ಯೆಯೊಂದು ಮೋಡದಂತೆ ಸರಿದು ಹೋದಂತಾಯಿತು. ಪಕ್ಷದ ಹೆಸರನ್ನು ಬದಲಾಯಿಸುವಂತೆ ಆಯೋಗವು ಕೇಳಿಕೊಂಡಿದ್ದನ್ನು ಇಲ್ಲಿ ನೆನಪಿಸಬಹುದು. ವಿಧಾನ ಸಭೆಗಳ ಚುನಾವಣೆಗಳು ಹತ್ತಿರವಾಗುತ್ತಿರುವಂತೆ ಸಿಂಡಿಕೇಟು ತನ್ನ ಅಸ್ತಿತ್ವಕ್ಕಾಗಿ ಹೊಡೆಬಾಡಬೇಕಾಗಿಬರುತ್ತಿದೆ. ಗುಜರಾತ ಮತ್ತು ಉತ್ತರ ಪ್ರದೇಶಗಳಲ್ಲಿನ ಹಲವಾರು ಪ್ರಮುಖರು ಇಂಡಿಕೇಟಿಗೆ ಪಕ್ಷಾಂತರ ಮಾಡಿ ಅಲ್ಲಿನ ಸಿಂಡಿಕೇಟನಲ್ಲಿ ಮತ್ತೊಂದು ಬಿರುಗಾಳಿಯೆಬ್ಬಿಸಿದರು. ಕರ್ನಾಟಕದಲ್ಲೂ ಈ ಪಕ್ಷಾಂತರ ನಿಂತಿಲ್ಲ. ಈ ವಾರಾಂತ್ಯದಲ್ಲಿ ಕೈಕೊಳ್ಳುವ ನಿರ್ಧಾರದ ಮೇಲೆ ಇವಕ್ಕೊಮ್ಮೆ ಕೊನೆಬಂದರೂ ಬರಬಹುದು. ಹೋಗುವವರೆಲ್ಲರೂ ಹೋಗಲಿ, ತಮಗೆ ನಿಷ್ಠೆಯಿರುವ ಕೆಲವೇ ಸಿಪಾಯಿಗಳು ಸಾಕು ಎಂದು ಸಮೂಹಾನ ತಾಳುವುದು ಶಕ್ತಿ ಸಂಚಯದ ವಿಧಾನವಾಗುವುದಿಲ್ಲ ಪಕ್ಷದ ಬಲ ಅದರ ಸದಸ್ಯ ಬಲವನ್ನೂ ಹೊಂದಿಕೊಂಡಿರುತ್ತದೆ.

ಸಿಂಡಿಕೇಟು ಮುಂದಿನ ಚುನಾವಣೆಯಲ್ಲಿ ಯಾವ ರಾಜ್ಯದಲ್ಲೂ ಅಧಿಕಾರ ಸೂತ್ರ ಹಿಡಿಯುವ ಲಕ್ಷಣಗಳಿಲ್ಲ ಕರ್ನಾಟಕದಲ್ಲಿ ಕೆಲವು ನಾಯಕರ ಮೇಲಾದರೂ ಸದಭಿಪ್ರಾಯ ಉಳಿದಿದ್ದುದರಿಂದ ಅಂತಹ ಆಶಾಂಕುರವಿತ್ತೆಂಬುದು ನಿಜ. ಆದರೆ, ಅನಿಭಜಿತ ಕಾಂಗ್ರೆಸ್ ಚಿಹ್ನೆಯು ಇಂಡಿಕೇಟಿಗೆ ಸೇರಿದ್ದೆಂಬ ನ್ಯಾಯ ತೀರ್ಮಾನದಿಂದ ಮತ್ತೀಗ ಪಾಕ್ ಸಮರದಲ್ಲಿ ಭಾರತ ಅದ್ವಿತೀಯ ವಿಜಯ ಸಂಪಾದಿಸಿದ್ದರಿಂದ ಜನತೆಯೊಲವು ಇಂಡಿಕೇಟಿನತ್ತ ಹರಿದಿರುವುದು ಸಹಜವೇ. ರಣರಂಗದ ವಿಜಯ ದೇಶದ ವಿಜಯವೆಂಬುದು ನಿಜವಾದರೂ ದೇಶದ ಪ್ರಧಾನ ಮಂತ್ರಿಯನ್ನು ಇದಕ್ಕಾಗಿ ಅಭಿನಂದಿಸುವುದು ತಪ್ಪಾಗಲಾರದು. ಪ್ರಧಾನಿಯು ಕೆಚ್ಚೆದೆಯ ನಿರ್ಣಯವನ್ನು ಕೈಕೊಂಡು, ವಿಶ್ವದ ಗುತ್ತೇದಾರ ಅಮೆರಿಕೆಯನ್ನೂ ಕಡೆಗಣಿಸಿ, ಪಾಕ್ ದೈತ್ಯರಿಗೆ ಸರಿಯಾದ ಉತ್ತರವನ್ನು ನೀಡಿದ್ದನ್ನು ಪ್ರತಿಯೊಬ್ಬನೂ ಸಮರ್ಥಿಸಲೇ ಬೇಕು. ದೇಶದ ಗೌರವವನ್ನು ಉಳಿಸುವ ಅಥವಾ ಏಳಿಸುವ ಸ್ಥಾನವಲ್ಲಿರುವವರ ಮೇಲೆ ಆಗುಹೋಗುಗಳ ಪ್ರಭಾವ ಬೀರುವುದು ಸಹಜವೇ. ಹಾಗಿರುವಾಗ ಕೆಲವರು ಪ್ರಧಾನಿಯ ಪ್ರಶಂಸೆಯನ್ನು ಸಹಿಸಲಾರದಾದರೆ ಅದು ಹೇಯವಾದುದೆನ್ನಲೇ ಬೇಕು. ಜನತೆಯ ಮೇಲೆ ಪ್ರಧಾನಿ ಗಾಂಧಿಯವರು ತಮ್ಮ ಪ್ರಭಾವ ಬೀರುವುದಕ್ಕಾಗಿಯೇ ಸಮರವಾರಂಭ ಮಾಡಿದರೆಂದು ಹೇಳುವುದಕ್ಕೆ ಸದ್ಯ ಯಾರೊಬ್ಬರೂ ಮುಂದುವರಿದಿಲ್ಲವೆಂಬುದು ಸಮಾಧಾನದ ಸಂಗತಿ.

ಚುನಾವಣೆಗಳ ಪೂರ್ವಸಂಧ್ಯೆಯಲ್ಲಿ ಮುಕ್ತೊಮ್ಮೆ ಪಕ್ಷಾಂತರದ ಮಿಡತೆ ಹಾವಳಿ ವಿಪರೀತವಾಗಬಹುದು. ಆದುದರಿಂದಲೇ ಇಂಡಿಕೇಟು ಸೇರುವ ಹೊಸ ಸದಸ್ಯರ ಪೂರ್ವೋತ್ತರಗಳನ್ನು ಪರಿಶೀಲಿಸಬೇಕೆಂದು ಶ್ರೀ ಅಮೃತ ನಹತಾ ಕರೆ ಕೊಟ್ಟಿದ್ದಾರೆ. ಹೀಗೆ ಸೇರುವ ಹೊಸಬರಿಗೆ ಮೂರು ವರ್ಷಗಳ ಕಾಲ ಯಾವುದೇ ಸ್ಥಾನಮಾನ ನೀಡಬಾರದೆಂದು ಅವರ ಅಭಿಪ್ರಾಯ. ಕಳೆದ ವರ್ಷ ಅಧಿಕಾರದ ಆಶೆಯಿಂದಲೇ ಇಂಡಿಕೇಟ್ ಕೋಣೆಯೊಳ ಹೊಕ್ಕು ಹಲವರು ಅದನ್ನು ಪಡೆದೂ ಪಡೆದರು; ಚುನಾವಣೆಯ ನಂತರವೂ ಭಾರಿ ಪಕ್ಷಾಂತರವಾಗಿ, ಅವರು ವಿವಾದಗ್ರಸ್ತರಾದರು. ಈ ಬಾರಿಯೂ ನೆರೆಯೋರುವುದು ಖಂಡಿತ. ಏಕೆಂದರೆ, ಕಾಂಗ್ರೆಸ್ ವಿಭಜನಾನಂತರದ ದಿನಗಳಲ್ಲಿ ಪಕ್ಷಾಂತರಕ್ಕೆ ಇದುವೇ ಕೊನೆಯ ಸುವರ್ಣಾವಕಾಶ. ಆದುದರಿಂದಲೇ ಇವರ ಸದುಪಯೋಗ ಮಾಡಿಕೊಳ್ಳಲು ಹಲವರು ಮುಂದೆ ಬಂದಿದ್ದಾರೆ. ಹಣವಂತರು, ಭೂಸುಧಾರಣಾ ನಿರೋಧಿಗಳು, ಆರ್ಥಿಕ ಸ್ಥಿತಿ ಸುನಶ್ಚೇತನವನ್ನು ಬಯಸದವರು ಮೊದಲಾದವರಿಗೆ ಇಂಡಿಕೇಟಿನ ಟಿಕೇಟು ಕೊಡಬಾರದೆಂದು ಶ್ರೀ ನಹತಾ ಅಭಿಪ್ರಾಯ ಪಡುತ್ತಾರೆ. ಇದು ಸಾಧುವಾದುದೇ. ಚುನಾವಣೆಗಳ ಪೇಳೆ ಗೆಲ್ಲುವ ಅರ್ಹತೆಯೊಂದೇ ಉಳಿದೆಲ್ಲ ಅರ್ಹತೆಗಳ ಮೇಲೆ ಸವಾರಿ ಮಾಡಿದ ಉದಾಹರಣೆಗಳುಂಟು. ಇಂಡಿಕೇಟು 'ಗುಣ'ಕ್ಕೆ ಮಾತ್ರ ಮನ್ನಣೆ ನೀಡಿದರೆ, ಅದು ಮುಂಬೆ ತೇಜಶ್ಚಾಲಿಯೂದ ದಾರಿದೀಪವಾಗುವುದು. ಹಲವಾರು ಸಂಗತಿಗಳಲ್ಲಿ ವಿಶಿಷ್ಟರೀತಿಯಾಗಿ ನಡೆದು ಬಂದಿರುವ ಇಂಡಿಕೇಟು ಇಲ್ಲಿಯೂ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ಬರಬೇಕು. ಅಂದರೆ, ದೇಶದ ಚುನಾವಣಾ ರಂಗದಲ್ಲಿ ಸಾವಿತ್ರ್ಯವನ್ನು ತಂದುಹಾಕಿದ ಪುಣ್ಯ ಬರುತ್ತದೆ.

ಭಾರತದ ವಿವಿಧ ರಾಜ್ಯಗಳಲ್ಲಿ ಸಿಂಡಿಕೇಟು ಪತನದ ವಾರಾಯಲ್ಲಿದೆಯೆಂಬುದು ಹೇಳಲೇಬೇಕಾಗುತ್ತದೆ. ಕೆಲವೆಡೆ ಅದರ ಹೆಸರೂ ಇಲ್ಲವೆಂಬಂತಾಗಿದೆ. ಇದಕ್ಕೆ ಬೇರೆ ಬೇರೆ ಕಾರಣವಿರಬಹುದು; ಆದರೆ, ಅದರ ನಾಯಕರಲ್ಲೂ ದೋಷನಿದೆಯೆಂಬುದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಈ ದೋಷಗಳು ಯಾವುವೆಂದು ಆಯಾ ನಾಯಕರಿಗೇ ಗೊತ್ತು. ಸದಸ್ಯರ ಅಧಿಕಾರ ನೋಹೆಯೊಂದೇ ಇದಕ್ಕೆ ಕಾರಣವಾಗಿದ್ದರೆ, ಅಂತಹ ಆಸೆ–ಆಮಿಷಗಳನ್ನು ತೋರಿಸಿಯೇ ನಾಯಕರು ಪಕ್ಷ ಬೆಳೆಸಿಕೊಂಡರು ಎಂದು ದೂರ ಬೇಕಾಗುತ್ತದೆ. ಪಕ್ಷದ ನಾಯಕರಿಗೂ ಕಾರ್ಯಕರ್ತರಿಗೂ ಆರಂಭವಾಗಿದ್ದ ಸಮರ ಇನ್ನೂ ನಿಂತಿಲ್ಲ. ದಾ| ರಾಮ ಸುಭಗಸಿಂಗ್, ಶ್ರೀಮತಿ ತಾರಕೇಶ್ವರಿ ಸಿಂಹ ಮೊದಲಾದವರು ತೀವ್ರ ಅಸಮಾಧಾನಗೊಂಡಿದ್ದಾರೆ. ಕರ್ನಾಟಕದ ಶ್ರೀ ಪಾಟೀಲ್, ಶ್ರೀ ಹೆಗ್ಡೆ, ಉತ್ತರ ಪ್ರದೇಶದ ಶ್ರೀ ಗುಪ್ತಾ, ಗುಜರಾತದ ಶ್ರೀ ದೇಸಾಯಿ ಮೊದಲಾದವರೂ ಅತೃಪ್ತರೇ ಆಗಿದ್ದಾರೆ. ಪ್ರಾಯಃ ತಾವು ಹತ್ತಿರುವ ದೋಣಿ ಮುಳುಗುತ್ತಿದೆಯೆಂದವರಿಗೆ ಅನಿಸುತ್ತಿರಬಹುದು. ಈಗ ತಮ್ಮ ಪ್ರಾಣ ರಕ್ಷಣೆ ಹೇಗೆಂದವರು ಚಿಂತಿಸುತ್ತಿರಬಹುದು. ಕರ್ನಾಟಕದಲ್ಲಿ ರಾಜ್ಯ ಮಟ್ಟದ ಪಕ್ಷ ಕಟ್ಟುವ ಯೋಚನೆ ಮೂಡಿದ್ದು ಈ ಕಾರಣದಿಂದಲೇ. ಸಿಂಡಿಕೇಟ್ ನಾಯಕರು ವಸ್ತುಸ್ಥಿತಿಯನ್ನು ಅರಿತುಕೊಳ್ಳಲು ಯಾವ ಪ್ರಯತ್ನವನ್ನೂ ಕೈಕೊಂಡಿಲ್ಲ; ಸದಸ್ಯರ ಅಸಮಾಧಾನವನ್ನು ದೂರ ಮಾಡಲು ಅವರು ಪ್ರಯತ್ನಿಸಿಲ್ಲ. ಸಿಡಿದಾಗಿಯೂ ಅವರಿಗೆ ಪಕ್ಷವನ್ನು ಉಳಿಸುವ ಇರಾದೆಯಿದ್ದರೆ, ಎಂತಸಿ ಕರೆಯಬೇಕು; ಬಿಜ್ಜು ಮನಸ್ಸಿನ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಸೂಕ್ತ ನಿರ್ಣಯಕ್ಕೆ ಬರಬೇಕು. ಇಲ್ಲವಾದರೆ, ಪಕ್ಷವು ಖಂಡಿತಕ್ಕೂ ನಿರ್ನಾಮ ಹೊಂದುವುದು. ಜೆರಳೆಣಿಕೆಯ ನಾಯಕರು ಜನಬಲವಿಲ್ಲದೆ ಏನು ಮಾಡುವುದಕ್ಕೂ ಅಸಮರ್ಥರು. ಕರ್ನಾಟಕದ ರಾಜ್ಯ ಮಟ್ಟದ ಪಕ್ಷಕಟ್ಟುವವರೂ ಈ ಬಗ್ಗೆ ಆಲೋಚಿಸಿ ನಿರ್ಧಾರಕ್ಕೆ ಬರಬೇಕು.

ನಿಜ್ಞಾನ ಲೋಕದ ಗಂಡ

ಭಾರತದ ಅಣುಶಕ್ತಿ ಆಯೋಗದ ಅಧ್ಯಕ್ಷರಾದ ಡಾ| ವಿಕ್ರಂ ಸಾರಾಭಾಯ್ ಅವರು ಕೇರಳದ ಸಂಜಾರದ ವೇಳೆ ಅನಿರೀಕ್ಷಿತವಾಗಿ ನಿಧನರಾದುದು ದೇಶದ ದುರ್ದೈವವೆನ್ನಲೇಬೇಕು. ಈ ಹಿಂದಿನ ತಪ್ಪಕ್ಷಡಾ| ಹೋಮಿ ಭಾಭಾ ಅವರು ವಿಮಾನಪಘಾತದ ನೋವರಲ್ಲಿ ಇಹಲೋಕ ತ್ಯಜಿಸಿದರೆಂಬುದನ್ನು ನಾವು ನೆನಪಿಸಬಹುದು. ಡಾ| ಭಾಭಾ ಅಣುಶಕ್ತಿ ನಿರ್ಮಾಪಕರೆಂದು ಹೆಸರು ಗಳಿಸಿದರೆ, ಡಾ| ಸಾರಾಭಾಯಿ ಅಂತರಿಕ್ಷ ವಿಜ್ಞಾನದ ಜನಕರೆನಿಂದು ಖ್ಯಾತಿ ಪಡೆದವರು ರಾಷ್ಟ್ರರಲ್ಲಿ ಆಹಮ್ಮಿಕಾಭಾವ ಬೆಳ್ಳಿ ಪ್ರಸಿದ್ಧ ನಿರಣಿ ಮೂಲಕರ ಕುಟುಂಬದಲ್ಲಿ ಜನಿಸಿದ ಡಾ| ಸಾರಾಭಾಯಿ ದೇಶದ ಪ್ರಗತಿಗೆ ಮತ್ತು ಜ್ಞಾನದ ಪ್ರಸಾರಕ್ಕೆ ಅಹರ್ನಿಶಿ ಹೋರಾಡಿದ್ದ ಅಂತಾರಾಷ್ಟ್ರೀಯ ವ್ಯಕ್ತಿಯುಳ್ಳ ಪರಮಾಣು ವಿಜ್ಞಾನಿ. ವಿಜ್ಞಾನವು ಶ್ರೀ ಸಾಮಾನ್ಯನಿಗೆ ಉಪಯೋಗಿಯೂಗಬೇಕೆಂಬುದು ಅವರ ಮನೀಷೆ. ಅವರ ದುಡಿತವೂ ಅದಕ್ಕೆಯೇ. ದೇಶದಮೂಲೆ ಮೂಲೆಯಲ್ಲಿಕಾರ್ಯಮನ್ನವಾಗುತ್ತಿರುವ ಹಲವಾರು ವೈಜ್ಞಾನಿಕ ಪ್ರಯೋಗಾಲಯಗಳ ಸ್ಥಾಪನೆಗೆ ಅವರೇ ಕಾರಣೀಭೂತರು. 'ಭಾರತವೂ ಬಯಸಿದರೆ ಅಣು ಬಾಂಬನ್ನು

(ಪತ್ತನೇ ಪುಟ ನೋಡಿರಿ)

ನಿರೀಕ್ಷಿಸಿರಿ!

ಧಾರವಾಹಿಯಾಗಿ ಪ್ರಕಟವಾಗಲಿದೆ –

ನಿಮ್ಮ ಆಚ್ಚುಮೆಚ್ಚಿನ ಬರಹಗಾರ
ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರ

ನ ನ ನ

ಸ್ವತಂತ್ರ ಐತಿಹಾಸಿಕ ಕಾದಂಬರಿ
ಯೊಂದು.

ಮುಂದು

ಗೇಹರಾಜ್ಯದಲ್ಲಿ

ಸುಸಂಸ್ಕೃತ ಲೇಬಲ್ದಾರಿಗಳು

'ನೌದೂಂ....'

"ಏನು?"

"ಅಲ್ಲ. ಸುಂದರ ದಾಸರ ಪೂರ್ವಾಶ್ರಮದ ಹೆಸರೇನೂಂತ...."

"ಶ್ರೀನಿವಾಸನಾಯಕ ಎಂದಿರಬೇಕು.."

"ಆಲ್ರಿ, ಈ ಶ್ರೀನಿವಾಸ ನಾಯಕನಿಗೆ ಸ್ವಾತಂತ್ರ್ಯದ ಪೂರ್ತ ಹೇಳಲು ಅವ್ರು ಮುದಿ ಬ್ರಾಹ್ಮಣ ಹೇಗೆದೆಲ್ಲಿ ಎಂದರಿಂತಲ್ಲಾ...."

'ಹ್ಞೂಂ, ತನ್ನ ಮಗನಿಗೆ ಮುಂಜಿ ಮಾಡಿಸ್ಬೇಕು; ಏನಾದ್ರೂ ಸಹಾಯ ಮಾಡು ಅಂದನಂತೆ....'

"ನಾಳೆ ಬಾ ನಾಡನ್ನು ಬಾ ಅಂತ ಒಂದು ವರ್ಷಕಾಲ ತಳ್ಳಿದನೂ ಬೆನ್ನು ಬಿಡದವ ಬ್ರಾಹ್ಮಣನನ್ನು ಕೆಡು ಕೋಸಿಸಿಕೊಂಡ ನೀತಿ..."

"ಹೇಯ ಮನ್ಸಾನೆ ತುಂಬಿಟ್ಟ ಚೀಲ ಜತನ ಮಾಡಿದೆ ಕುರಿದು ಬೇಕಾದ್ದೊಂದನ್ನ ತಿನಿಸಿದೆಯಾ?...'

"ಪಾಪೊಲ್ಲ ಮಾರಾಯ ಅಂತ ಹಿಂದೆ ಹೋದನಂತೆ ..."

'ಹ್ಞೂಂ....ಆ ಮೇಲೇನೇ ಹೆಂಡತಿ ನಕ್ಕಿನಕಾಳೆ ..."

"ಅವಿಸ್ಲಿ, ಆ ಬ್ರಾಹ್ಮಣ ಮಗ್ನಾಗಿಯು ನ್ನ ಮಾಕೆ ಒಪ್ಪೆ ಅಂದೆ"

'ಮುಂಜಿ ಮಗ್ನಾಚೆಯೆಲ್ಲಿ ಮುಗಿಯುವುದೂಂತೆ?'

'ಇರಿ ಏಹುದು. ಅಮ್ರಿ ಇದೇ ರೀತಿ ದೇವರಿಂಬವರನ್ನೂ ಬೇಡಿ ...'

'ಆಲ್ರೆ, ಇವನಿಗೆ ಮುಂಜಿ ಮಾಡುವ ದುಂಬರ್ಪೆಸ್ಥಿತ್ತು? ಇವ ಬಂದಮ್ಲ ನಾಯಕ ಕಾಸನ್ನು ಕಿತ್ಕೊಳ್ಳಿ ಎಕೆಂತಕೊಳ್ಳಕಲು....'

'ಅಮ್ತು ಒಟ್ಟಿಕೊಳ್ಳುವ. ನಾಯಕ ಸೇಕೆ ಬಾರ್ಯಾನಾಗಲಿತ್ತೆ? ಹೇಳೆಯ ಮುಗ್ನಾ ಬೆಗಳ್ಲಿಲ ಒಂದನ್ನು ಮಾತ್ರ ಕೊಡ ಹೋಮೆ"

'ಆಲ್ರೆ, ಅಮ ಮಾನವ ಒಂದು ವೈಶಿಷ್ಟ್ಯ ನಚೆಕೇಂತ ಅವ್ರ ಮುದುಕಲು ದ ನಗಾನ್ನು ದಾನ ಮಾಡಲಿತ್ತವೆ? ಹಾಗೆಯೇ ನಡೆಯುವ ನಾಣ್ಯಗಳಿಗೆ ಭಿಕ್ಷುಕರು ಗಿರಾಕಿ!'

"ಪಾಪೆಲ್ಲ ಆಗಾಯುತ್ತಾಂತ ಈಗಲಾಗಮು."

"ಮೂಕೆ! ನೀವು ನಯೋಪೈಸೆ ಕೊಟ್ಟ ಲೇನೇ ನಮ್ಮ ಮುಖಕ್ಕೆ ಎಸೆದು ಹೋಗುತ್ತಾರೆ...."

'ಛೇಷ. ದೇವರ ಡಬ್ಬಿಯೊಡರೂ ಇದೆ ತಾನೆ!'

'ಇಲ್ಲಿ ಸಲ್ಲದವರು ಅಲ್ಲಿ ಸಲ್ಲುತ್ತಾರೆ....'

'ಅಲ್ಲವೇ ಮತ್ತೆ? ಡಬ್ಬಿಗೆ ಹಾಕುವಾಗ ದೇವರು ಅದು ನಡೆಯದ ನಾಣ್ಯವೆಂದು ದೂರುವುದಿಲ್ಲ. ಕಡಮೆಯೊಯ್ತೆಂದು ಆಕ್ಷೇಪಿಸುವುದಿಲ್ಲ.'

"ಡಬ್ಬಿ ಒದೆವಾಗ?'

'ಒದೆಯುವವರಿಗೆ ಅಂತಹ ಮಹೋದ್ಧಾರಿ ಯಾರೆಂದು ತಿಳಿಯುವುದಿಲ್ಲ.'

'ನಿಜಾನ್ನಿ, ಹಾಗೇನೇ....'

'ಏನು?'

'ಮತ್ತೇನು ಇಲ್ಲ. ನೋಡಿ ನಮ್ಮ ಸೇನೆ ಪಾಕಿಸ್ತಾನದೊಡನೆ ಹೋರಾಡಿ ಯಶಗಳಿಸಿತಲ್ಲಾ....'

'ಅಲ್ಲವೆ ಮತ್ತೆ?'

'ಈ ಯಶತಂಮುಕೊಟ್ಟ ಸೈನಿಕರ ಮೇಲೆ ದೇಶಕ್ಕೆ ದೇವನೇ ಪ್ರಸನ್ನವಾಗಿದೆ...'

'ಖಂಡಿತಕ್ಕೂ....'

'ಅದ್ದರಿಂದ ರಾಷ್ಟ್ರೀಯ ರಕ್ಷಣಾ ನಿಧಿಗೆ ಭಾರಿ ಭಾರಿ ವಂತಿಗೆ ಕೂಡುತ್ತಿದೆ....'

'ಹೌದಂತೆ ..'

'ನಗದು ಹಣದೊಡನೆ ಒಡವೆ ವಸ್ತುಗಳನ್ನೂ ನೀರ ಯೋಧರಿಗೆ ಉಡುಗೊರೆಯಾಗಿ ಕೊಡಲಾಗುತ್ತಿದೆಯಂತೆ....'

'ಹ್ಞೂಂ....'

'ಆದರೆ ನೋಡಿ....'

'ಏನು?'

'ಇಲ್ಲಿಯೂ ನಮ್ಮ ನೀಚತನ ವ್ಯಕ್ತವಾಗುತ್ತಿದೆಯಂತೆ....'

'ಹಾಗೆಂದರೆ?'

'ಯೋಧರಿಗೆ ನೀಡುವ ಉಡುಗೊರೆಗಳು ನೇವರ ಡಬ್ಬಿ ಸೇರುವ ನಾಣ್ಯಗಳಂತೆ....'

'ಸವಕಲು?'

'ಹ್ಞೂಂ...ನಾವು ಕೊಡಬೇಕು; ಕೊಟ್ಟಿದೆಂದು ಇತರರು ತಿಳಿಯುವಂತಾಗಬೇಕೆಂದು ತಮಗೆ ಆಗತ್ಯವಲ್ಲದ ಉಪಯೋಗಕ್ಕೆ ಬಾರದ ವಸ್ತುಗಳನ್ನು ಸೈನ್ಯಕ್ಕೆ ಉಡುಗೊರೆಯಾಗಿ ಕೊಡುತ್ತಿದ್ದಾರಂತೆ....'

'ಛೇಷ್ ಕಣೆ ಛೇಷ್....'

'ಏಕೆ?'

'ನಮ್ಮ ದಾನ ಶೀಲತೆಗೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ? '

'ಆಲ್ರಿ, ಹಿಂದಿನ ಕಾಲದಲ್ಲಾದರೂ ಈ ಸಂಕುಚಿತ ಬುದ್ಧಿಯಿತ್ತು ಎನ್ನಿ ಈಗ ಸುಸಂಸ್ಕೃತ ಯುಗದಲ್ಲೂ....'

'ನೋಡಮ್ಮ, ಸತ್ಯ ಹೇಳಬೇಕಾದರೆ ನಾವು ಸುಸಂಸ್ಕೃತರಲ್ಲ ಸುಸಂಸ್ಕೃತ ಲೇಬಲ್ ಧಾರಿಗಳು ಮಾತ್ರ....'

'ಏಕೆ?'

'ಹಿಂದಿನವರು ದಾನ-ತ್ಯಾಗಗಳಿಗೆ ಹೆಸರಾದವರು. ಅವರು ಉಪಯುಕ್ತವಾದುದನ್ನೇ ದಾನ ಮಾಡುತ್ತಿದ್ದರು; ತಮಗಗತ್ಯವಾಮದನ್ನೆತ್ಯಜಿಸುತ್ತಿದ್ದರು....'

'ಹ್ಞೂಂ....ಕರ್ಣನ ಹಾಗೆ....'

'ಈಗಿನವರು ಇದಕ್ಕೆ ವಿಪರೀತರು. ಮನೆಯಲ್ಲಿನ ಅನಗತ್ಯ ಸಂತೆಯನ್ನು ರಕ್ಷಣಾ ಯೋಧರಿಗೆ ದಾಟಿಸಿಕೊಡುತ್ತಾರೆ....'

'ಆಲ್ರಿ, ನನಗೊಂದು ಸಂದೇಹ.'

"ಏನು?"

"ಮನೆ ಮನೆಗೆ-ಅಂಗಡಿ ಅಂಗಡಿಗೆ ಬಂದು ಯೋಧರ ಹೆಸರಲ್ಲಿ ನಿರಾಶ್ರಿತರ ಹೆಸರಲ್ಲಿ ಒಡವೆ ವಸ್ತುಗಳನ್ನೂ ಬೇಡಿ ಒಯ್ಯುತ್ತಿದ್ದಾರಲ್ಲಾ'....

'ಓ, ಅವೆಲ್ಲ ಮೆಜಿಸ್ಟಿಕ್ ಬಜಾರಕ್ಕೆ ಹೋಗುತ್ತವೆ.'

'ಅಂದ್ರೆ?'

'ಬೆಂಗ್ಳೂರಲ್ಲಿ ಮೆಜಿಸ್ಟಿಕ್ ಸರ್ಕಲ್ ಬಳಿ ಕತ್ತಲಾಗುತ್ತಲೇ ಇಂಥ ಬಾಜಾರು ಬೀದಿ ಬಾಗಿಲಲ್ಲಿ ತೆರೆಯುತ್ತವೆ. ಸೆಕೆಂಡಿನಿಂದ ತೊಡಗಿ ಲಾಸ್ಟ್‌ಪ್ಯಾಂಡ್ ಒಡವೆಗಳು ಬಿನಾವಟೆ ವಸ್ತುಗಳು ಇಲ್ಲಿ ಪೇಟೆಂಟು....'

'ಆಲ್ರಿ, ಒಂದು ವೇಳೆ ಕೆಟ್ಟ ಉಡುಗೊರೆಗಳು ಯೋಧರ ಕೈ ಸೇರಿದರೆ?'

'ತಮ್ಮ ಬಗ್ಗೆ ದೇಶಭಕ್ತ ಶ್ರೀಮಂತರ ಬಲವು ಹೇಗಿದೆಯೆಂಬುದು ಅವರಿಗೆ ವೇದ್ಯವಾಗುತ್ತದೆ ....'

'ಈ ಒಲವು ಉತ್ತೇಜನಾಕಾರಿಯಾಗಿ ಲ್ಲವೆಂಬುದು....'

'ತಿಳಿಯುತ್ತದೆ. ದೇಶದ ಹೆಸರಿನಲ್ಲಿ ಪ್ರಾಣವಿಟ್ಟು ಹೋರಾಡುವವರನ್ನು ಹಣದ ಪ್ರಪಂಚ ಹೇಗೆ ಕಾಣುತ್ತಿದೆಯೆಂಬುದನ್ನು ಅರಿತು ಅವರ ಮುಖ ಮುದುಡಬಹುದು.'

'ಅದು ಸರಿನ್ನಿ. ನೋಡಿ, ಯಾವ ಯಾವುದೋ ಹೆಸರಲ್ಲಿ ಸಂಗ್ರಹವಾದ ನಿಧಿಗಳು ಯಾರಿಗೆ ತಲಪಬೇಕೋ ಅವರಿಗೆ ತಲಪುವುದೇ ಇಲ್ಲವೆಂದು ಸುದ್ದಿ'

'ಆಲ್ರೆ, ನೋಡು ನಮ್ಮೂರಿಗೆ ದೇವರ ಹೆಸರು ಹೇಳಿ ಪ್ರಸಾದ ಕೊಟ್ಟು ಕಾಣಿಕೆ ಸ್ವೀಕರಿಸುವವರ ಬಳಗ ಬರುವುದಿದೆಯಲ್ಲಾ....'

'ಹ್ಞೂಂ, ಕಾಮು ಮೂರಿಯಮ್ಮ, ಧರ್ಮಸ್ಥಳ ಮಂಜುನಾಥ, ಕೊಲ್ಲೂರು ಮುಕಾಂಬಿಕೆ, ಉಡುಪಿ ಕೃಷ್ಣ....'

'ಹೌದು ಹೌದು....ಆ ಬಳಗ ವಸೂಲು ಮಾಡಿದ ಕಾಣಿಕೆ ಆಯೂ ದೇವರಿಗೆಲ್ಲಿ ಸಲ್ಲುತ್ತದೆ? ಸತ್ಯ ಹೇಳುವುದಾದರೆ ಆ ದೇವರಿಗೆ ಕಾಣಿಕೆ ವಸೂಲಿಗೆ ಯಾರನ್ನೂ ಕಳಿಸಿಕೊಡುವ ಸಂಪ್ರದಾಯವೇ ಇಲ್ಲ....'

"ಅದು ಶ್ರದ್ಧಾವಂತ ಭಾವುಕರಿಗೆ ಹೇಗೆ ಗೊತ್ತಾಗಬೇಕು? ಒಂದು ವೇಳೆ ಗೊತ್ತಾದರೂ ದೇವರ ಹೆಸರು ಹೇಳಿ ಬಂದವರನ್ನು ಭಂಗಿಸಿ ಕಳಿಸುವಷ್ಟು ನಾಸ್ತಿಕರು ಹೇಗಾದಾರು?'

'ಅದೇ ನೋಡು, ನಾನಾ ಪ್ರಕಾರದ ನಿಧಿಯನ್ನು ಕೂಡಿಸುವಲ್ಲಿಯೂ ಆಷ್ಟೆ. ಇಂತಹ ಅವಕಾಶವನ್ನು ಕಾಂದುಕೊಂಡಿರುವವರು ಏನೂ ಮಾಡಿಯಾರು ...'

'ಮೋಟರ್ ಆಕ್ಸಿಡೆಂಟ್‌ನಲ್ಲಿ ಮಡಿದವರ ಪಸ್ಸನ್ನು ಪೊಲೀಸು ತನ್ನ ಜೇಬಿಗೆ ತುರುಕಿಸಿಕೊಂಡು ಕರುಣೆ ತೋರುವವರು....'

'ಹ್ಞೂಂ....ನೀರಿದ್ದಲ್ಲಿ ಕೆಸರು ಇದೇಂತ ನೀರನ್ನು ಬಿಟ್ಟು ಬಿಡುವುದು ಸಾಧ್ಯವಿಲ್ಲ ನೋಡು ..'

'ಆದರೂ ಈ ಬಗ್ಗೆ ಭಾರೀ ಎಚ್ಚರಿಕೆಯಿಂದಿರಬೇಕು....'

'ನಿಜಕ್ಕೂ....'

'ಆಲ್ರಿ, ಅನಸ್ತಾಸುವಲ್ಲೇನು ವಿಶೇಷ?'

(ಒಂಭತ್ತನೇ ಪುಟ ನೋಡಿರಿ)

ನಿಮ್ಮ ಮನೆ ಹೊಸ್ತಿಲಲ್ಲಿ ನಮ್ಮ ಪ್ರತಿನಿಧಿ

ಆದರ್ಶ ಡಿಪಾಜಿಟ್

ಎಂಬ ನಮ್ಮ ನೂತನ ಯೋಜನೆಯ ಪರಿಚಯವನ್ನು ಮಾಡಿಸುವನು.

ನೀವು ದಿನಂಪ್ರತಿ 25 ಪೈಸೆಗಳನ್ನು ಗ್ರಾಣ ಮೊತ್ತವನ್ನು ಉಳಿಸಿದರೂ ಸರಿ; ಸಿಂಡಿಕೇಟ್ ಬ್ಯಾಂಕು ನಿಮ್ಮ ಮನೆ ಬಾಗಿಲಿಗೇ ಬಂದು ಆ ಮೊತ್ತವನ್ನು ಸಂಗ್ರಹಿಸಿಕೊಳ್ಳುವುದು.ವೈಸಂದಿನ ಉಳಿತಾಯಗಾರರಿಗೆ ಆನನ್ಯವಾದ ಯೋಜನೆ ಇದು. ಸಂಗ್ರಹವಾದ ಮೊಬಲಗನ್ನು 5 ವರ್ಷಗಳ ನಂತರ ಸಾಲಿಯಾನ್ 5% ಬಡ್ಡಿಯೊಂದಿಗೆ ಮರಳಿ ಪಡೆಯಬಹುದು. ಎರಡು ವರ್ಷಗಳ ನಂತರವೂ ಭಾಗಶಃ ಬಡ್ಡಿಯೊಂದಿಗೆ ಮೊಬಲಗನ್ನು ಪಡಕೊಳ್ಳುವ ಅವಕಾಶವಿದೆ. ಜನವರಿ 1, 1973 ರಿಂದ ಈ ಯೋಜನೆಯು ಈ ಕೆಳಗಿನ ಸ್ಥಳಗಳಲ್ಲಿರುವ ನಮ್ಮ ಶಾಖೆಗಳಲ್ಲಿ ಕಾರ್ಯಾಚರಣೆಗೆ ಬರುವುದು:

ಕಮದರಾಸು ಕಪೈದರಾಬಾದು ಕಸೆಕುಂದರಾಬಾದ್ ಕಪೂನಾ ಕವೈಸೂರು ಕಬೆಂಗಳೂರು ಕಮಂಗಳೂರು ಕಹುಬ್ಬಳ್ಳಿ ಕಬೆಳಗಾಂವಿ ಕಉಡುಪಿ ಕನಾಣಿಪಾಲ.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ: ಕೆ. ಕೆ. ಪೈ
ಮಣಿಪಾಲ ಕಸ್ಟೋಡಿಯನ್
(ಮೈಸೂರು ರಾಜ್ಯ)

ಬಂಗ್ಲಾ ದೇಶದ ಗಂಡುಗಲಿ—

ಶೇಖ್ ಮುಜೀಬುರ್

ಆವರಲ್ಲಿ ಆಯುಧಗಳಿವೆ. ನನ್ನನ್ನು ಕೊಂದರೂ ಕೊಲ್ಲಬಹುದು. ಆದರೆ ಬಂಗ್ಲಾ ದೇಶದ ಏಳೂವರೆ ಕೋಟಿ ಜನರ ಕಚ್ಚನ್ನು ಆವರೆಂದೂ ದಮನ ಮಾಡಲಾರರು.

—ಶೇಖ್ ಮುಜೀಬುರ್ ರಹಮಾನ್

ಬಂಗ್ಲಾ ಬಂಧು ಎಂದು ಜನಪ್ರಿಯರಾಗಿರುವ ಶೇಖ್ ಮುಜೀಬುರ್ ರಹಮಾನ್ ಅವರು 1920ರ ಮಾರ್ಚಿ ತಿಂಗಳ 17ರಂದು ಬಂಗ್ಲಾದೇಶದ-ಫರೀದಪುರ ಜಿಲ್ಲೆಯ ತಂಗಿಪಾರ ಎಂಬಲ್ಲಿ ಜನಿಸಿದರು. ಗೋಪಾಲಗಂಜ್‌ನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಉನ್ನತ ವ್ಯಾಸಂಗಕ್ಕಾಗಿ ಕಲ್ಕತ್ತಾ ಸೇರಿದರು. ಕಲ್ಕತ್ತಾದ ಇಸ್ಲಾಮಿಯಾ ಕಾಲೇಜಿನಲ್ಲಿ ಅಂದರೆ ಇಂದಿನ ಮೌಲಾನಾ ಆಜಾದ್ ಕಾಲೇಜಿನಲ್ಲಿ ಅವರು ಪದವಿ ಶಿಕ್ಷಣ ಪಡೆದರು. ಆವರು ಕಾರಾಗೃಹವಾಸವನ್ನು ಅನುಭವಿಸುತ್ತಿರುವಾಗ ನ್ಯಾಯಶಾಸ್ತ್ರ ಪದವಿಯಲ್ಲಿ ಉತ್ತೀರ್ಣರಾದರು.

ತಾವು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಶೇಖರು ರಾಜಕೀಯರಂಗಕ್ಕೆ ಕಾಲಿಟ್ಟರು. ತಮ್ಮ 17ನೆಯ ವಯಸ್ಸಿನಲ್ಲಿ ರಾಜಕೀಯ ಪ್ರದರ್ಶನವೊಂದರಲ್ಲಿ ಭಾಗವಹಿಸಿದ್ದ ಕಾರಣ ಒಂದುವಾರದ ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು. ಪಾಕಿಸ್ತಾನದ ಪ್ರಧಾನಿಯೊಗಿದ್ದ ಸುಹ್ರವರ್ದಿಯವರ ಆಪೇಕ್ಷೆಯಂತೆ ಮುಸ್ಲಿಂಲೀಗ್‌ನ್ನು ಸೇರಿದರು. ಇಸ್ಲಾಮಿಯಾ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಅವರು ಲೀಗ್ ಪ್ರಮುಖ ವ್ಯಕ್ತಿಯೂಗಿದ್ದರು. 1941ರಲ್ಲಿ ನೇತಾಜಿ ಸುಭಾಸ್ ಚಂದ್ರ ಬೋಸ್ ಅವರು ನಡೆಸಿದ ಚಲುವಳಿಯಲ್ಲಿ ಸಕ್ರಿಯ ಸದಸ್ಯರಾಗಿ ಭಾಗವಹಿಸಿದರು. 1946ರಲ್ಲಿ ನಡೆದ ಚುನಾವಣೆಗಳಲ್ಲಿ ಮುಸ್ಲಿಂಲೀಗಿಗೆ ತಮ್ಮ ಬೆಂಬಲ ನೀಡಿ ಲೀಗ್‌ನಲ್ಲಿ ಯಶಸ್ವಿಯೂಗಿ ದುಡಿದರು. ಆದರೆ ನಿರೀಕ್ಷಿಸಿದಕ್ಕಿಂತ ಮೊದಲೇ ಅವರಿಗೆ ಲೀಗಿನ ಬಗ್ಗೆ ಅಸಮಾಧಾನ ಉಂಟಾಯಿತು.

ಭಾರತ ಮತ್ತು ಪಾಕಿಸ್ತಾನಗಳು ವಿಭಜನೆಯಾದ ಕೆಲವೇ ದಿನಗಳಲ್ಲಿ ನಡೆದ ಘಟನೆ ಶೇಖರ ಕಣ್ಣು ತೆರೆಸಿತು. 1948ರ ಮಾರ್ಚಿ 21ರಂದು ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಮಹಮದ್ ಆಲಿ ಜಿನ್ನಾ ಆವರು 'ಉರ್ದು ಭಾಷೆ ಪಾಕಿಸ್ತಾನದ ರಾಷ್ಟ್ರೀಯ ಭಾಷೆಯೊಗುವುದು.ಇದರ ವಿರುದ್ಧ ಮಾತನಾಡಿದವರನ್ನು ದೇಶದ ಶತ್ರುವೆಂದುಪರಿಗಣಿಸಲಾಗುವುದು'ಎಂದರು. ಆದರೆ ಬಂಗ್ಲಾದೇಶದ ಜನತೆಯ ಮೇಲೆ ಉರ್ದುವನ್ನು ಹೇರುವುದುಶೇಖರಿಗೆ ಸ್ವಲ್ಪವೂ ಸಹಿಸಲಿಲ್ಲ.ಶೇಖ್ ರ ನುಂಡಾಳುತ್ವದಲ್ಲಿ ಕೆಲವು ವಿದ್ಯಾರ್ಥಿಗಳು ಜಿನ್ನಾ ಹೇಳಿಕೆಯನ್ನುಪ್ರತಿಭಟಿಸಿದರು. ಆದರೆ ಆವರನ್ನು ಬಂಧಿಸಲಾಯಿತು. ಬಂಗ್ಲಾದೇಶದ ಮೂಲೆ ಮೂಲೆಯಲ್ಲೂ ಉರ್ದುಹೇರಿಕೆಯ ವಿರುದ್ಧ ಚಳುವಳಿ ಆರಂಭವಾಯಿತು. ಶೇಖರು ಅನೇಕಬಾರಿ ಸುಮಾರು 10ವರ್ಷಗಳ ಅವಧಿಯುವರೆಗೆ ಜೈಲುವಾಸ ಅನುಭವಿಸಬೇಕಾಯಿತು. ಶೇಖರು ಬಂಧನ ಮುಕ್ತರಾದ ಮೇಲೆ ಬಂಗ್ಲಾದೇಶದ ಬಂಗಾಳಿಗಳಿಗೆ ಪಾಕ್ ಸರ್ಕಾರ ಮಾಡುತ್ತಿದ್ದ ಅನ್ಯಾಯಗಳ ವಿರುದ್ಧ ಪ್ರತಿಭಟಿಸಿದರು. ಕೇಂದ್ರ ಶಾಸನಸಭೆಗಳಲ್ಲಿ ಬಂಗಾಳಿಯರು ಮತ್ತು ಮುಸ್ಲಿಂರಿಗೆ ಜನಸಂಖ್ಯೆ ಆಧಾರದ ಮೇಲೆ ಅವಕಾಶವಿರಬೇಕೆಂದು ಹೋರಾಡಿದರು. ಇಲ್ಲೂ ಶೇಖರನ್ನು ಪಾಕ್‌ಸರ್ಕಾರ ಬಂಧಿಸಿ 1952ರ ಮಧ್ಯದನಂತರೆಗೆ ಅಂದರೆ ಸುಮಾರು ಎರಡೂವರೆ ವರ್ಷಗಳ ಕಾಲ ಬಂಧನದಲ್ಲಿರಿಸಿತು.

1952ರವೇಳೆಗೆ ಶೇಖ್ ಬಂಗ್ಲಾ ಜನತೆಯ ಜನಪ್ರೀಯ ಮಿಕ್ರಾರದರು ಜೈಲಿನಲ್ಲಿರುವಾಗಲೇ ಆವರು ಅವಾಮಿಲೀಗಿನ ಜಂಟಿಕಾರ್ಯದರ್ಶಿಯೂಗಿ ಆಯ್ಕೆಯೂದರು. 1954ರಲ್ಲಿ ನಡೆದ ಪ್ರಾದೇಶಿಕ ಚುನಾವಣೆಗಳಲ್ಲಿ ಅವರು ಮತ್ತೊಮ್ಮೆ ಪಾಸನ ಸಭೆಗೆ ಆಯ್ಕೆಯೂದರು. 1954ರಿಂದ ಕೆಲಕಾಲ ಫಜಲರಹಕ್‌ರ ಮಂತ್ರಿಮಂಡಲದಲ್ಲಿ ಸೇವೆ ಸಲ್ಲಿಸಿದರು. 1954 ಮತ್ತು 1957ರಲ್ಲಿ ಆವರು ಪೀಕಿಂಗಿಗೆ ಭೇಟಿ ನೀಡಿದ ಪಾಕಿಸ್ತಾನದ ಪಾರ್ಲಿಮೆಂಟ್ ಸದಸ್ಯರ ನಿಯೋಗದ ನಾಯಕರಾಗಿದ್ದರು. ಆವರ ವ್ಯವಾಸದ ನಂತರ ಮತ್ತೊಮ್ಮೆ ಆವರನ್ನು ಕೇಂದ್ರ ಮಂತ್ರಿ ಮಂಡಲಕ್ಕೆ ಆರಿಸಲಾಯಿತು. ಆದರೆ ಮಂತ್ರಿಗಳ ಆಯ್ಕೆಯಲ್ಲಿ ನಡೆದ ಅಕ್ರಮ ಅನ್ಯಾಯಗಳನ್ನು ನೋಡಿ ಅವರು ಮಂತ್ರಿಪದವಿಯನ್ನು ಸ್ವೀಕರಿಸಲಿಲ್ಲ.

1956ರಲ್ಲಿ ಪಾಕಿಸ್ತಾನಕ್ಕೆ ಹೊಸ ಸಂವಿಧಾನವನ್ನು ರೂಪಿಸಿದಾಗ ಆದರಲ್ಲಿ ಇದ್ದ ವ್ಯಾದೇಶಿಕ ದೋಷಗಳನ್ನು ಗ್ರಹಿಸಿ ಅದರ ವಿರುದ್ಧ ಹೋರಾಟ ನಡೆಸಿದರು. ಬಂಗ್ಲಾದೇಶಕ್ಕೆ ಪೂರ್ಣ ಸ್ವಾಯತ್ತತೆಯನ್ನು ನೀಡಬೇಕೆಂದು ಕೇಳಿದರು. ಆದರೆ 1958ರಲ್ಲಿ ಪಾಕ್‌ಸರ್ಕಾರ ಮಿಲಿಟರಿ ವರ್ಕೆಗೆ ಒಂದು ಹೊಸ ಸಂವಿಧಾನಕ್ಕೆ ಯೂನ ಮಹತ್ವವೂ ಇಲ್ಲವಾಯಿತು ಕೇಂದ್ರ ಮತ್ತು ಪ್ರಾದೇಶಿಕ ಸರ್ಕಾರಗಳನ್ನು ರದ್ದು ಮಾಡಲಾಯಿತು ರಾಜಕೀಯ ಪಕ್ಷಗಳನ್ನು ನಿಷೇಧಿಸಲಾಯಿತು. ಪಾಕಿಸ್ತಾನ ಸುರಕ್ಷತಾ ಸುಗ್ರೀವಾಜ್ಞೆಯ ಪ್ರಕಾರ 1958ರ ಆಕ್ಟೋಬರ್ 12ರಂದು ಮುಜೀಬುರ್‌ನ್ನು ಒಂದು ವರ್ಷ ಬಂಧಿಸಲಾಯಿತು. 1959ರ ಡಿಸೆಂಬರ್‌ನಲ್ಲಿ ಆವರನ್ನು ಬಿಡುಗಡೆ ಮಾಡಲಾಯಿತು.

1962ರ ಸಂವಿಧಾನವನ್ನು ಬಂಗ್ಲಾದೇಶದ ಜನತೆಯ ಮೇಲೆ ಹೇರಲು ಯತ್ನಿಸಿದಾಗ ಮತ್ತೊಮ್ಮೆ ಮುಜೀಬ್ ಕಾರಾಗೃಹಕ್ಕೆ ಹೋಗಬೇಕಾಯಿತು. 1965ರ ಆದಿಯಲ್ಲಿ ಪಾಕಿಸ್ತಾನದ ಅಧ್ಯಕ್ಷಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆಯೂಬ್‌ಖಾನ್‌ರಿಗೆ ವಿರುದ್ಧವಾಗಿ ಕುಮೂರಿ ಜಿನ್ನಾರಿಗೆ ಶೇಖ್ ತಮ್ಮ ಪಕ್ಷದ ಬೆಂಬಲ ನೀಡಿದರು. ಈ ಕಾರಣಕ್ಕಾಗಿ ಶೇಖರು ಪಾಕ್ ಮಿಲಿಟರಿ ಸರ್ಕಾರದ ಕಿರುಕುಳಕ್ಕೀಡಾದರು. 1965ರಲ್ಲಿ ನಡೆದ ಭಾರತ—ಪಾಕ್ ಯುದ್ಧದಲ್ಲಿ ಶೇಖರ 'ಅವಾಮಿಲೀಗ್'ಗೆ ಜನತೆಯಿಂದ-ಹೆಚ್ಚಿನ ಪ್ರೋತ್ಸಾಹ ದೊರೆಯಿತು. 1966ರಲ್ಲಿ ಅಂದರೆ ಪಾಕಿಸ್ತಾನದಲ್ಲಿ ರಾಜಕೀಯ ಚಟುವಟಿಕೆ ಬಗ್ಗೆ ವಿಧಿಸಿದ್ದ ನಿಷೇಧಾಜ್ಞೆ ರದ್ದುಪಡಿಸಿದ ಮೇಲೆ ಬಂಗ್ಲಾ ದೇಶಕ್ಕೆ ಸಂಬಂಧಿಸಿದಂತೆ ಮುಜೀಬ್ ತಮ್ಮ ಪಕ್ಷವ ಪರವಾಗಿ ಆರು ಅಂಶಗಳ ಕಾರ್ಯಯೋಜನೆಯನ್ನು ಘೋಷಿಸಿದರು. ಬಂಗ್ಲಾದೇಶದ ಪೂರ್ಣ ಪ್ರಾದೇಶಿಕ ಸ್ವಾಯತ್ತತೆ ಈ ಆರು ಅಂಶಗಳ ಮುಖ್ಯ ಉದ್ದೇಶ. ಈ ಉದ್ದೇಶ ಸಾಧನೆ ಬಗ್ಗೆ ಅವಾಮಿಲೀಗ್ ಜನತಾ ಅಭಿಪ್ರಾಯವನ್ನು ಸಂಗ್ರಹಿಸಿತು. ಈ ಸಂದರ್ಭದಲ್ಲೂ ಶೇಖರನ್ನು ಪಾಕ್ ಸರ್ಕಾರ ದೀರ್ಘಕಾಲ ಬಂಧಿಸಿತು ಮುಜೀಬ್‌ರ ಮೇಲೆ ಮಿಲಿಟರಿ ಸರ್ಕಾರ 12 ಮೊಕದ್ದಮೆಗಳನ್ನು ಹೂಡಿತು 1968ರ ಜನವರಿ 18ರಂದು ಆವರ ಬಿಡುಗಡೆ ಯೂಯಿತು ಇದಾದ ನಂತರ ಅಗರ್ತಾಲ ಪ್ರಕರಣದಲ್ಲಿ ಶೇಖ್‌ರ ಮೇಲೆ ಸುಳ್ಳು ಆಪಾದನೆ ಹೊರಿಸಿ ಮತ್ತೊಮ್ಮೆ ಪಾಕ್ ಸರ್ಕಾರ ಆವರನ್ನು ಬಂಧಿಸಿತು.

ಈ ಪ್ರಕರಣದಲ್ಲಿ ಮೊಕದ್ದಮೆಯನ್ನು ಋಜುವಾತುಪಡಿಸುವಲ್ಲಿ ಪಾಕ್ ಸರ್ಕಾರ ವಿಫಲವಾಯಿತು. ಆಲ್ಲದೆ 1969ರ ಮಾರ್ಚಿ 25ರಂದು ಆಯೂಬ್‌ಖಾನರ ಪತನವಾಗಲು ಮುಜೀಬರ್ ಚಳುವಳಿಯೇ ಮುಖ್ಯಕಾರಣವಾಯಿತು.

ಆಯೂಬ್‌ಖಾನರ ಸ್ಥಾನವನ್ನು ಆಕ್ರಮಿಸಿಕೊಂಡ ಯಹ್ಯಾಖಾನ್ ಅವರು ಚುನಾವಣೆಗಳ ನಂತರ ಬಹುಮತಗಳಿಸಿದ ಪಕ್ಷಕ್ಕೆ ತಮ್ಮ ಸರ್ಕಾರವನ್ನು ಬಿಟ್ಟುಕೊಡುವುದಾಗಿಯೂ ಜನತಾ ಸರ್ಕಾರ ಸ್ಥಾಪನೆಯೇ ತಮ್ಮ ಗುರಿಯೆಂದೂ ಪಾಕ್ ಜನತೆಗೆ ವಾಗ್ದಾನ ನೂಡಿದರು 1970ರ ಡಿಸೆಂಬರ್‌ನಲ್ಲಿ ಪ್ರಧನುಬಾರಿಗೆ ಒಬ್ಬನಿಗೆ ಒಂದು ಮತ ಆಧಾರದ ಮೇಲೆ ಚುನಾವಣೆ ನಡೆಯಿತು ತಮ್ಮ ಆರು ಅಂಶಗಳ ಕಾರ್ಯಕ್ರಮದಿಂದಾಗಿ ಶೇಖ್ ಮುಜೀಬ್ ರಹಮಾನರ ಅವಾಮಿಲೀಗ್ ಪಕ್ಷಕ್ಕೆ ಅದ್ವಿತೀಯ ಜಯ ದೊರೆಯಿತು. ರಾಷ್ಟ್ರೀಯ ಅಸೆಂಬ್ಲಿಯ 313 ಸ್ಥಾನಗಳಲ್ಲಿ 167 ಸ್ಥಾನಗಳನ್ನು ಮತ್ತು ಬಂಗ್ಲಾದೇಶದ ಪ್ರಾದೇಶಿಕ ಅಸೆಂಬ್ಲಿಯ 300 ಸ್ಥಾನಗಳಲ್ಲಿ 288 ಸ್ಥಾನಗಳನ್ನು ಈ ಪಕ್ಷ ಗಳಿಸಿತು. ಯೂವ ರಾಜಕೀಯ ಪಕ್ಷಕ್ಕೂ ಬಹುಮತ ಬರಲಾರದೆಂಬ ಯೂಹ್ಯಾರ ನಿರೀಕ್ಷೆ ತಪ್ಪಿರುವ್ಯವಾಯಿತು. ವಿನಾಕಾರಣ ಯಹ್ಯಾಖಾನ್ ಮಾರ್ಚಿ 3ರಂದು ನಮೋಷೇಶಗೊಳ್ಳಬೇಕಿದ್ದ ರಾಷ್ಟ್ರೀಯ ಅಸೆಂಬ್ಲಿಯನ್ನು ಮುಂದೂಡಿದರು. ಈ ನಿರ್ಣಯವನ್ನು ವಿರೋಧಿಸಿ ಬಂಗ್ಲಾದೇಶದ ಚಿತ್ತಗಾಂಗ್, ಸಿಲ್ಹಟ್, ಡೆಕ್ಕಾ ಮತ್ತು ಇತರ ನಗರಗಳಲ್ಲಿ ಪ್ರದರ್ಶನಗಳು ನಡೆದವು ಮಾರ್ಚಿ 2ರಂದು ರಾಷ್ಟ್ರೀಯ ಅಸೆಂಬ್ಲಿಯನ್ನು ಕರೆಯುವಂತೆ ಮತ್ತೊಮ್ಮೆ ಯೂಹ್ಯಾ ಪ್ರಕಟಿಸಿದರು. ಆದರೆ ಬಂಗ್ಲಾ ದೇಶಕ್ಕೆ ಪೂರ್ಣ ಸ್ವಾಯತ್ತತೆಯನ್ನು ನೀಡುವಂತಹ ಯಾವುದೇ ಸಂವಿಧಾನವನ್ನು ತಾವು ಒಪ್ಪುವುದಿಲ್ಲವೆಂದು ಯಹ್ಯಾ ಹೇಳಿದರು. ತಾವು ಮತ್ತು ತಮ್ಮ ಪಕ್ಷದ ಸದಸ್ಯರು ಮಾರ್ಚಿ 2ರಂದು ರಾಷ್ಟ್ರೀಯ ಅಸೆಂಬ್ಲಿಗೆ ಹಾಜರಾಗಲು ಮುಜಿಬ್ ನಾಲ್ಕು ಷರತ್ತುಗಳನ್ನು ವಿಧಿಸಿದರು. ದೇಶದಲ್ಲಿ ಮಿಲಿಟರಿ ಆಡಳಿತ ಕೊನೆಗೊಳ್ಳಬೇಕು, ಸೈನಿಕ ಶಿಬಿರಗಳನ್ನು ಬಾಪಸು ಕರೆಯಬೇಕು. ಪ್ರದರ್ಶನಕಾರರ ಮೇಲೆ ನಡೆಸಿರುವ ಅನ್ಯಾಯಗಳ ಬಗ್ಗೆ ವಿಚಾರಣೆ ನಡೆಸಬೇಕು ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಪೂರ್ಣ ಅಧಿಕಾರವಿರಬೇಕು.

ಬಂಗ್ಲಾದೇಶದಲ್ಲಿ ಮಿಲಿಟರಿ ಅಧಿಕಾರವನ್ನು ಬಲಪಡಿಸಲು ಮತ್ತು ಜನತಾ ಸೇವೆಯನ್ನು ದಮನ ಗೊಳಿಸುವ ಸಲುವಾಗಿ ಯೂಹ್ಯಾಖಾನ್ ನರಾಕ್ಷಸ ಟಿಕ್ಕಾಖಾನ್‌ನನ್ನು ಬಂಗ್ಲಾದೇಶದ ಮಿಲಿಟರಿ ಅಧಿಕಾರಿಯೂಗಿ ನೇಮಿಸಿದರು. ಯೂಹ್ಯಾರ ಆದೇಶದಂತೆ ಮುಜೀಬುರ್‌ರನ್ನು ಮಾರ್ಚಿ 26ರಂದು ಬಂಧಿಸಿ ಆವರನ್ನು ಪಶ್ಚಿಮ ಪಾಕಿಸ್ತಾನಕ್ಕೆ ಕರೆದೊಯ್ಯಲಾಯಿತು. ಅಂದೇ ರಾತ್ರಿ ಯೂಹ್ಯಾ ಮಾಡಿದ ರೇಡಿಯೋ ಭಾಷಣದಲ್ಲಿ ಮುಜೀಬುರ್ ಪಾಕಿಸ್ತಾನದ ಶತ್ರು ಎಂದು ನುಡಿದರು. ಪಾಕ್ ಸರ್ಕಾರದ ವಿರುದ್ಧ ಯುದ್ಧ ನಡೆಸಲು

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
141 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು:— ಟೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.
ಎಮ್. ಸುಂದರ್‌ರಾಮ್ ಶೆಟ್ಟಿ,
ಜೆಯರ್‌ಮೆನ್.

ಪ್ರಗತಿಯ ರಾಮಬಾಣ

ಕತ್ತಲೆಯ ಕೋಣೆಯಿಂದ ಹೊರಗೆ ಕರೆತನ್ನಿ

ಪಾಕಿಸ್ತಾನದ ಹೊಸ ನಾಗರಿಕ ಅಧ್ಯಕ್ಷ ಜುಲ್ಫಿಕರ್ ಆಲಿ ಭುಟ್ಟೊ ತನ್ನ ಆರಂಭ ಭಾಷಣವನ್ನು ಹುಚ್ಚು ಹುಚ್ಚಾಗಿ ಮಾಡಿದರೂ ಮುಂದೆ ಸುಸು ಸುಧಾರಿಸಿಕೊಂಡರು. ಪಾಕಿಸ್ತಾನದ ಸಮಸ್ಯೆಗಳಿಗೆ ಭೂತಾಕಾರ ನೀತಿ ಜನತೆಯನ್ನು ಬೆದರಿಸುವ ಹವಣಿಕೆಯಲ್ಲಿದ್ದ ಅವರು ತನಗೆ ತುಸು ಕಾಲಾವಧಿ ನೀಡಿದರೆ, ತಾನೆಲ್ಲವನ್ನೂ ಸಾಧಿಸುವುದಾಗಿ ಭರವಸೆ ನೀಡಿದ್ದಾರೆ. ಈ ಕಾಲಾವಧಿಯೆಷ್ಟುಯೆಂಬುದನ್ನು ಮಾತ್ರ ಅವರು ತಿಳಿಸಲಿಲ್ಲ. ಜನ್ಮದಿಂದಲೂ ಭಾರತ ವಿರೋಧಿಯಾಗಿರುವ ಭುಟ್ಟೊ ಮುಖಾಮುಖಿಯಲ್ಲಿ ಪಾಕಿಸ್ತಾನಿ ಜನತೆ ತನ್ನ ವಿಶ್ವಾಸವನ್ನು ಇಟ್ಟಿದೆಯೆನ್ನುವುದಕ್ಕಿಂತ ಜನತೆಯ ವಿಶ್ವಾಸವನ್ನು ಗಳಿಸುವ ಪ್ರಯತ್ನವನ್ನು ಸ್ವಲ್ಪ ಮಾಡುತ್ತಿವಾರೆನ್ನಬಹುದು.

ಕತ್ತಲೆಯ ಯುಗವಲ್ಲೇ ಬೆಳೆದು ಬಂದ ಪಾಕಿಸ್ತಾನಿ ಜನತೆಗೆ ಬೆಳಕು ತೋರುವ ಸ್ಪಾವಸದಲ್ಲಿ ಮಂಡಿಸಿರುವ ಭುಟ್ಟೊ ಅವರನ್ನು ಪುತ್ತಪ್ಪ ಗಾಢಾಂಧಕಾರವನ್ನು ಓಯ್ಯುವ ಪ್ರಯತ್ನವನ್ನೇ ನೂಡಿ, ತನ್ನ ಸರ್ವಾಧಿಕಾರ ಮುಂದುವರಿಸು ತಾನೂ ತನ್ನವರೂ ಸುಖವನ್ನುಣ್ಣುವ ತಂತ್ರಕ್ಕೆ ಕೈ ಹಾಕಿದ್ದಾರೆ. ಪಂಗ ಬಂಧು ಮುಜಿಬುರ್ ರೆಹಮಾನರೊಡನೆ ಯೂಹ್ಯಾಖಾನರೊಮ್ಮೆ ಒಡಂಬಡಿಕೆಗೆ ಸಿದ್ಧರಾಗಿ, ಅದನ್ನು ತಪ್ಪಿಸಿದ ಭುಟ್ಟೊ ಪುತ್ತೆ ಸಂಧಾನ ಬಯಸಿರುವುದು ವಿಚಿತ್ರವಲ್ಲವೆ? ಒಂಗ್ಲಾ ಸ್ವತಂತ್ರ ಸಾರ್ವಭೌಮ ಪ್ರದೇಶವೆಂದು ಘೋಷಿಸಿದ ನೀಲೆ ಭುಟ್ಟೊ ಪಾಕಿಸ್ತಾನ ಸಂಧಾನ ಎಂದರೆ ಬಸ್ಸಿಗೆ ಮಾತ್ರ-ಬಂಗ್ಲಾದೇಶದ ಮನ್ನಣೆ-ಶೇಕ ಮುಜಿಬುರ್ ವಿಷಯವಲ್ಲ.

ಅವರು ಮಾತ್ರ ಭುಟ್ಟೊ ಇನ್ನು ಬೆದಳಿಕೆ ಪಾಕಿಸ್ತಾನವನ್ನು ಬಿಡಲಿಲ್ಲ. ಒಂಗ್ಲಾದೇಶವನ್ನು ಮಿಸ್ಸಿಸುವೆನೆಂಬ ಗೆಳೆಗಳಿಗೆ ಪ್ರತಿಕಾರವ ಬಯಸಿ ಕೋಣಿಸಿದ್ದಾರೆ. ಸದ್ಯದ ಯುದ್ಧಾನಂತರ ತಾನು ಕೆಳೆದ ಹಕ್ಕೆ ಮರಳಿ ಪಡೆಯುವೆನೆನ್ನುವುದು ಅವರಿಗೆ ಇನ್ನೂ ಖಚಿತವಾಗಿಲ್ಲವೆಂಬಂತಿಲ್ಲ. ವಿಮಾನಗಳ ಕಳೆದು ಮುರಿದರೆ ಅವಿರಿಕೆ ಅವನ್ನು ಸೂರೆಯ್ಯಬಹುದಿತ್ತು. ಆದರೆ. ಈ ಕೆಳೆಕ್ಕೆ ತಾನಾಗಿಯೇ ಮುಂಡಿಯಿರಬೇಕಾದದ್ದು ತಾನೆ? ಬಂಗ್ಲಾವಿಷಯದ ಪಾಕಿಸ್ತಾನ ತನ್ನ ಹೊಟ್ಟೆ ಹೊರೆಯುವುದೇ ತ್ರಾಸದಾಗಿರುವಾಗ ಏನೆಂತು ಸಾಧ್ಯ? ತವರೆ ಎನೆಂಬಿಕನ್ ಮಿತ್ರರೂ ಚೀನೀಯ ಸ್ನೇಹಿತರೂ ಅರಬ ಬಂಧುಗಳೂ ಕೂಟ್ಟರೆ, ಭುಟ್ಟೋರಿಗೆಲ್ಲ ಉಂಟು. ಕೊಡದೆ ಹೋದರೆ, ಏನೂ ಇಲ್ಲ. ಹಸ್ತಲ್ಲದ ಭುಟ್ಟೊ ಹಾರಾಡುವುದನ್ನು ನೋಡುವಾಗ ಅವರ ಬಗ್ಗೆ ಕಶ್ಮಲವಿಗೂ ಕನಿಕರ ಮೂಡಬೇಕು.

ಂ ಂ ಂ

ಭುಟ್ಟೊ ಪಾಕಿಸ್ತಾನಿಗಳ ಉನ್ನತಿಯನ್ನು ಹಾರಯ್ಸುವುದಾದರೆ, ಒಂದೇ ಒಂದು ರಾಮಬಾಣ. ಅದಾವುದೆಂದು ಭಾರತದ ಪ್ರಧಾನಿ—ಪ್ರಜೆಗಳು ಬಹಿರಂಗವಾಗಿಯೇ ಹೇಳುತ್ತಾರೆ. ಭಾರತ ವಿದ್ವೇಷವನ್ನೇ ಪಾಕಿಸ್ತಾನದ ನೀತಿ ಭಾರತವನ್ನು ಸದೆಬಡಿಯಬೇಕೆಂಬುದೇ ಅವರ ನಿಲುಮೆ. ಈ ಕಾರಣಕ್ಕಾಗಿಯೇ ಪಾಕಿಸ್ತಾನ ತನ್ನ ಮೇರೆದ ಬದವನ್ನವನ್ನು ನಿರ್ಮೂಲ ಮಾಡುವ ಕರ್ತವ್ಯವನ್ನು ಕದೆಗಣಿಸಿತು. ನಾಲ್ಕೂ ಸುತ್ತಲಿಂದ ಮಿಲಿಟರಿ ಶಕ್ತಿಯನ್ನು ಸ್ವಾಗತಿಸಿತು. ಇದನ್ನು ಸಾಕಲು ಬಂಗ್ಲಾದೇಶವನ್ನು ಲೂಟಿ ಮಾಡಿತು. ಹತ್ತಿಯಂತಹ ಕೋಮಲ ವಸ್ತುವನ್ನಾದರೂ ದಬಾಯಿಸಿ ಕರೋರಗೊಳಿಸುವುದು ಸಾಧ್ಯವೆಂಬುದನ್ನು ತೋರಿಸಿತು ಈ ದೈತ್ಯ ಶಕ್ತಿಯನ್ನು ಭಾರತದ ಮೇಲೆ ಪ್ರಯೋಗಿಸಿ ಮೈ-ಕೈ ಸುಟ್ಟುಕೊಂಡಿತು.

ಶಸ್ತ್ರಾಸ್ತ್ರಗಳ ಬಲದಿಂದಲೇ ದೇಶಕಟ್ಟಲಿಲ್ಲವೆ. ಅವನ್ನು ಬಲಾಢ್ಯಗೊಳಿಸಬಲ್ಲೆನೆಂದು ಇದುವರೆಗೂ ಪಾಕ್ ನಾಯಕರು ತಪ್ಪಾಗಿ ತಿಳಿದು ಬಂದಿದ್ದಾರೆ. ಭಾರತ ಉಪಖಂಡದಲ್ಲಿ ಶಾಂತಿ ನೆಲಸಿದರೆ ಮಾತ್ರ ಭಾರತ-ಪಾಕಿಸ್ತಾನದ ಪ್ರಗತಿ ಸಾಧ್ಯ. ಇದಕ್ಕೆ ಶಸ್ತ್ರಾಸ್ತ್ರ ಸಂಗ್ರಹವನ್ನು ಬಿಟ್ಟು ಜನಹಿತಸಾಧನೆಗಾಗಿ ತಮ್ಮ ಶಕ್ತಿ ಸರ್ವಸ್ವವನ್ನು ಕೇಂದ್ರೀಕರಿಸಬೇಕು. ಅದಕ್ಕಾಗಿ ಪಾಕ್ ನಾಯಕರು ಭಾರತದೊಡನೆ ಸ್ನೇಹ-ಸಹೋದರತೆಯಿಂದಿರಲು ಆರಂಭಮಾಡಬೇಕು. ಪ್ರಾಸ್ತವಿಕ ಸಂಗತಿಗಳನ್ನು ಒಪ್ಪಿಕೊಂಡು, ಮುಂಪಾದರೂ ಪಾಕ್ ಜನತೆಯನ್ನು ಮತಾಚಾರದ ಕತ್ತಲೆಯ ಕೋಣೆಯಿಂದ ವಿಶಾಲ ವೈದಾನಕ್ಕೆ ಕರೆತಂದರೆ ಎಲ್ಲವೂ ಸರಿಹೋದುವುದು.

ಭುಟ್ಟೋ ಬಾಣವನ್ನು ಬಯಸಿಯೂರು; ಆದರೆ 'ರಾಮ'ನನ್ನು ಮಾತ್ರ ಸಹಿಸಲಾರರು ರಾಮಬಾಣದ ಬದಲು ರಹೀಮ ಬಾಣವೆಂದಿದನ್ನು ಕರೆದರೆ ಭುಟ್ಟೊ ಒಪ್ಪಿಕೊಳ್ಳುವುದುಂಟೆ? ಭಾರತ ವಿದ್ವೇಷದಿಂದ ಉಂಧರಾಗಿರುವ ಅವರು ರಹೀಮನನ್ನೂ ಕಾಣರು, ಇಸ್ಲಾಮದ ತತ್ತ್ವಗಳನ್ನೂ ಕಾಣರು ಅವರ ಕಣ್ಣಲ್ಲಿ ಕುಣಿಯುವುದು ಭಾರತವನ್ನು ಸದೆಬಡಿಯಲು ಸಾವಿರವರ್ಷ ಹೋರಾಡುವ ಕೃತಕ ದೃಶ್ಯಮಾತ್ರ. ಆದರೆ ಇದರಿಂದ ಅವರು ಪಾಕಿಸ್ತಾನವನ್ನು ಉನ್ನತ ಪಥದತ್ತ ಒಯ್ಯಲಾರರು. ಇದು ಭಾರತೀಯರಿಗೆ ಗೊತ್ತು. ಯರಿಗೆ ಗೊತ್ತಾಗ ಬೇಕಿತ್ತೊ ಅವರಿಂದಂದ ಅಪರಿಚಿತರು.

ಂ ಂ ಂ

ಈ ವರ್ಷಾರಂಭದಲ್ಲಿ ಹಲವಾರು ರಾಜ್ಯ ನುತ್ತು ಕೇಂದ್ರಾಧೀನ ಪ್ರದೇಶಗಳ ವಿಧಾನ ಸಭೆಗಳಿಗೆ ಚುನಾವಣೆ ನಡೆಯುವುದು. ವಿಧಾನ ಸಭೆಗಳ ಅಧಿಕಾರಾವಧಿ ಮುಗಿಯುವುದರಿಂದ ಇದು ನ್ಯಾಯವೇ. ಆದರೆ, ಚುನಾವಣೆ ನಡೆಯುವುದು ಅಗತ್ಯವಿಲ್ಲದ ಒಂದೆರಡು ರಾಜ್ಯಗಳನ್ನೂ ಈ ಸಾಲಿನಲ್ಲಿ ಸೇರಿಸುವ ಪ್ರಯತ್ನ ಮಾಡುವುದು ಏಕೆಂದು ಅರ್ಥವಾಗುತ್ತಿಲ್ಲ. ಸದ್ಯ ಬಿಹಾರದಲ್ಲಿ ಮುಖ್ಯಮಂತ್ರಿ ಭೋಲಾಪಸ್ವಾನ್ ಶಾಸ್ತ್ರಿಯವರು ರಾಜೀನಾಮೆ ನೀಡಿದರು; ರಾಜ್ಯಪಾಲರು ವಿಧಾನ ಸಭೆಯನ್ನು ವಿಸರ್ಜಿಸಿದರು; ಇಲ್ಲಿ ಮಾರ್ಚ ತಿಂಗಳಲ್ಲಿ ಚುನಾವಣೆ ನಡೆಯುವುದು ಸ್ಪಷ್ಟವಾಗಿದೆ.

ಬಿಹಾರದ ರಾಜ್ಯಕೀಯವು ಅತ್ಯಂತ ಅಸ್ಥಿರವೆಂಬುದು ಎಲ್ಲರಿಗೂ ಗೊತ್ತು. ಇಲ್ಲವಾದರೆ ಗರ್ನರ ಮಧ್ಯಾವಧಿ ಚುನಾವಣೆಗಳ ನಂತರ ಅಲ್ಲಿ ಒಂಬತ್ತು ಸರಕಾರಗಳು ಅಗಿಹೋಗಬೇಕಾಗಿರಲ್ಲಿಲ್ಲ. ಯಾವುದೇ ವಕ್ಷಕ್ಕೆ ಬಹುಮತವಿಂದೆಡೆಯಲ್ಲಿ ಶ್ರೀ ಶಾಸ್ತ್ರಿಯವರೇ ಹತ್ತು ಸಮಗಾರರನ್ನು ನೇರಿಸಿ ಸರಕಾರನೆಂಬ ಯಂತ್ರದ ಸ್ಟೇರಿಂಗ್ ಹಿಡಿದರಷ್ಟೆ. ಅವರು ಅದೇಕೆ ರಾಜೀನಾಮೆ ನೀಡಲು ನಿರ್ಧರಿಸಿದರೆಂಬುದು ಅಸ್ಪಷ್ಟ. ಪ್ರಾಯಃ ಪಾಕಿಸ್ತಾನದ ಮೇಲೆ ಭಾರತ ಗಳಿಸಿದ ವಿಜಯದ ಬಲದಿಂದ ಚುನಾವಣೆಗಳಲ್ಲಿ ಅದ್ವಿತೀಯ ಗೆಲುವನ್ನು ಸಂಪಾದಿಕೊಳ್ಳುವ ಪ್ರಯತ್ನ ನಡೆದಿದೆಯೆಂದು ಊಹಿಕೇಟ್ ನಾಯಕರ ದೂರಿನಲ್ಲಿ ಯಥಾರ್ಥತೆಯಿದ್ದರೂ ಇರಬಹುದು.

ಇದೇ ಮೂದರಿಯ ಇನ್ನೊಂದು ರಾಜ್ಯ ಉತ್ತರ ಪ್ರದೇಶ. ಇಲ್ಲಿನ ದೆಸೆ ವಿಪರೀತ. ಇಂಡಿಕೇಟ್ ಅಧ್ಯರ್ಯುಗಳು ಮಧ್ಯಾವಧಿ ಚುನಾವಣೆಗೆ ಮನದಂದರೆ ಮುಖ್ಯಮಂತ್ರಿ ಕಮಲಾಪತಿ ತ್ರಿಪಾಠಿಯರು ಅದನ್ನು ವಿರೋಧಿಸುತ್ತಾರೆ. ಒಂದೊಮ್ಮೆ ಮಧ್ಯಾವಧಿ ಚುನಾವಣೆಗಳು ನಡೆದರೆ, ತನ್ನ ಸ್ಥಾನಕ್ಕೆ ಧಕ್ಕೆ ಬಂದೀತೆನ್ನುವ ಶ್ರೀ ತ್ರಿಪಾಠಿಯವರ ಭೀತಿ ಸಹಜವೇ. ಶ್ರಧಾನಿಗಾಂಧಿಯವರ ವರದಹಸ್ತ ತ್ರಿಪಾಠಿಯವರ ತಲೆಯ ನೇರಿರುವವರೆಗೆ ಅಲ್ಲಿ ಚುನಾವಣೆಗಳು ನಡೆಯಲಾರವು. ಗರ್ನರ ನಂತ ಆ ವರದಿ ತನ್ನ ನೇಲೆ ಪ್ರಸನ್ನವಾಗುವುದಿಲ್ಲವೆಂಬುದು ಶ್ರೀ ತ್ರಿಪಾಠಿಯವರಿಗೆ ಗೊತ್ತಿದೆ. ಆದುದರಿಂದಲೇ ಬಹುಕಷ್ಟದಿಂದ ಸಂಪಾದಿಸಿಕೊಂಡ ಗದ್ದಿಯಲ್ಲಿ ಗರ್ನರ ವರೆಗಾದರೂ ವಿರಾಜಮಾನರಾಗುವ ಆಶೆ ಹೊಂದಿದ್ದಾರೆ.

ಂ ಂ ಂ

ರಾಜ್ಯಪಾಲ ಶ್ರೀ ಧವನೀರರು ಉಡುಪಿ ಶಹರಕ್ಕೆ ಆಗಮಿಸಿ ರಾಷ್ಟ್ರೀಯ ರಕ್ಷಣಾನಿಧಿಗೆ ದೇಣಿಗೆ ಸ್ವೀಕರಿಸಿದರು. ಇಲ್ಲಿ ಒಟ್ಟಾದ ಮೊತ್ತ ಸುಮಾರು ಆರುವತ್ತು ಸಾವಿರ ರೂಪಾಯಿಗಳೆಂದು ವರದಿಯಾಗಿದೆ. ಉಳಿದೆಡೆಯಲ್ಲಿ ಸಂಗ್ರಹವಾದ ಮೊತ್ತದೊಡನೆ ಹೋಲಿಸುವಾಗ ಇದು ಬಹಳ ಕಡಮೆಯೆಂದು ತೋರುತ್ತದೆ. ಇದನ್ನು ಸ್ವೀಕರಿಸಲು ರಾಜ್ಯಪಾಲರೇ ಬರಬೇಕಿತ್ತೇ ಎಂದೂ ಅನಿಸುತ್ತದೆ. ಪ್ರಾಯಃ ರಾಜ್ಯಪಾಲರ ಕಾರ್ಯಕ್ರಮವು ಕೂನೆಗಳಿಗಯಲ್ಲಿ ನಿರ್ಧಾರವಾದುದರಿಂದ ಜನನಾಯಕರಿಗೆ ಇಂತಿಗೆ ಸಂಗ್ರಹಿಸಲು ಸಮಯೂವಕಾಶ ದೊರೆಯಲಿಲ್ಲವೆಂದು ತೋರುತ್ತದೆ. ತಮಗೆ ಲಭ್ಯವಾದ ಅಲ್ಪಾವಧಿಯಲ್ಲಿ ಅವರು ಸಂಗ್ರಹಿಸಿದ ಕಾಣಿಕೆಯನ್ನು ಮಂಗಳೂರಿನವರೆಗೆ ರಾಷ್ಟ್ರಪತಿಯವರೊಡನೆ ಬಂದಿದ್ದ ರಾಜ್ಯಪಾಲರು ಮೂವತ್ತಾರು ಮೈಲಿ ದೂರದ ಪ್ರವಾಸ ಮುಂದುವರಿಸಿ ಸ್ವೀಕರಿಸಿದರೆಂದು ಸಂತೋಷ ಪಡಬಹುದು.

ರಾಷ್ಟ್ರೀಯ ರಕ್ಷಣೆಗೆಂದು ನಿಧಿ ಕೂಡಿಸುವ ಕಾರ್ಯ ಇಲ್ಲಿಗೇ ನಿಲ್ಲಬಾರದು. ಪ್ರತಿಯೊಬ್ಬ ಪ್ರಜೆಗೂ ದೇಶದ ವಸ್ತು ಸ್ಥಿತಿಯ ಅರಿವಾಗಬೇಕಾದರೆ ಅತನ ಕಾಣಿಕೆ ರಕ್ಷಣಾ ನಿಧಿಗೆ ಸೇರಬೇಕಾಗುತ್ತದೆ. ಬರಿಯ ಮೂನಾಶನದಂತೆ ವೇತನ ಪಡೆಯುವವರಿಂದ ತಮ್ಮ ವೇತನದಲ್ಲಿ ಒಂದು ಪಾಲನ್ನು ಪ್ರತಿ ತಿಂಗಳೂ ಕೂಡಿಸಿದ ಮೊತ್ತಕ್ಕೆ ನಾಯಕರ ಕರ್ತವ್ಯ ಮುಗಿಯಲಿಲ್ಲ. ಎಲ್ಲರಿಂದಲೂ ವಂತಿಗೆ ಪಡೆದು ಅದನ್ನು ಕಾಲ ಕಾಲಕ್ಕೆ ರಕ್ಷಣಾ ನಿಧಿಗೆ ಕಳಿಸುವ ನಿಯತಕಾಲಿಕ ಯೋಜನೆ ಅಗತ್ಯ. ಇವನ್ನು ಮಾಡಲಿಲ್ಲವೆಂದಾದರೆ, ನುನೆ ಬಾಗಿಲಿಗೆ ತೆರೆ ಬಂದಾಗ ಸಮುದ್ರಸ್ನಾನ ಮಾಡಿದ ಪುಣ್ಯಕ್ಕೆ ಮಾತ್ರವಾಗುತ್ತದೆ ಸಮುದ್ರಸ್ನಾನದ ಪುಣ್ಯ ದೊರೆಯುವುದಿಲ್ಲ

●●

ಬಲ್ಲಿದನು ಬೇಕಾದಾಗ ಉಂಬ. ಬಡವ ಸಿಕ್ಕಿದಾಗ ಎಂಬ. ಇದೇ ಬಡವ ಬಲ್ಲಿದರ ಭೇದ.

ಂ ಂ ಂ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಭಾರತ ಉಪಖಂಡ ವೀಕ್ಷಣೆಗೆ

ನಿಕ್ಸನ್ನರಿಗೆ ಕೀಸಿಂಗರ್ ಕನ್ನಡಕ

ಭಾರತ—ಪಾಕ್ ಸಮರದ ವಿಚಾರದಲ್ಲಿ ಅಮೆರಿಕೆಯು ತಳೆದ ನೀತಿಯಿಂದಾಗಿ ಭಾರತ—ಅಮೆರಿಕೆಗಳ ಸಂಬಂಧ ಕೆಟ್ಟು ಹೋಯ್ತು. ಸತ್ಯವನ್ನು ಸತ್ಯವೆಂದು ಒಪ್ಪಿಕೊಳ್ಳಲು, ನ್ಯಾಯವನ್ನು ನ್ಯಾಯವೆಂದು ಹೇಳಲು ಅದು ಕೊನೆಯವರೆಗೂ ಸಿದ್ಧವಾಗಲಿಲ್ಲ. ಇದು ಅಮೆರಿಕೆಯ ಹೊಸ ನೀತಿಯೇನಲ್ಲ. (ಭಾರತೀಯ ಉಪಖಂಡದಿಂದ ಬಹಳಷ್ಟು ದೂರದಲ್ಲಿರುವುದರಿಂದ ಲೋ ಏನೋ, ಇಲ್ಲಿನ ವಿಚಾರಗಳು ಅವರಿಗೆ ತಡವಾಗಿ ಮುಂದಟ್ಟಾಗುತ್ತದೆ. ಯಾರು ಯಾರೋ ಹೇಳಿದ ಗಾಳಿ ಸುದ್ದಿಯನ್ನು ದೃಢವಾಗಿ ನಂಬುವುದು ಮತ್ತು ಕ್ರಮೇಣ ಸತ್ಯವನ್ನು ಮನಗಾಣುವುದು ಅದರ ಜಾಯಮಾನ. ಇದರಲ್ಲಯೇ ಅದಕ್ಕೆ ವಿಲಕ್ಷಣ ಸಂತೋಷವಾಗುತ್ತಿದೆಯೋ ಏನೋ!

ಭಾರತೀಯ ಉಪಖಂಡ ಸ್ವತಂತ್ರವಾದಂದಿನಿಂದಲೂ ಅಮೆರಿಕೆಯು ಸಂಪೂರ್ಣ ಭಾರತ ಪರವಾದ ಸಮಯವೆಂಬುದೇ ಇಲ್ಲ. ಪೇಶಾವರದಲ್ಲಿ ತನ್ನ ಶಸ್ತ್ರಾಗಾರ ನೆಲೆನಿಲ್ಲಿಸಲು ಪಾಕಿಸ್ತಾನ ಅನುಮತಿ ಕೊಟ್ಟದ್ದರಿಂದ ಆದರೊಲವು ಪಾಕ್ ಪರ ಹರಿದುದು ಸ್ವಾಭಾವಿಕವೇ. ಕಮ್ಯುನಿಜಂ ವಿರೋಧಿ ತಾನೆಂದು ಪೇಳಿಕೊಳ್ಳುತಿದ್ದ ಅಮೆರಿಕೆಗೆ ಭಾರತವೆನ್ನೋನಿಯತ್ತು—ಕೆಂಪು ಚೀನಾಗಳೊಡನೆ ಕೈಮಿಲಾಯಿಸುತಿದ್ದುದು ಮನಸ್ಸಿಗೆ ಬಂದಿರಲಾರದು. ಅದು ದುದರಿಂದಲೇ ಕಮ್ಯುನಿಸ್ಟ್ ರಾಷ್ಟ್ರಗಳ ಆಕ್ರಮಣದ ವಿರುದ್ಧ ಆತ್ಮರಕ್ಷಣೆಗೆಂದು ಪಾಕಿಸ್ತಾನಕ್ಕೆ ಬೃಹತ್ ಪ್ರಮಾಣದ ಸೈನಿಕ ನೆರವು ನೀಡಿತು.

ಕಾಶ್ಮೀರ ನೀತಿಯಲ್ಲಿ ಅಮೆರಿಕೆ ಎಂದೂ ಭಾರತ ಪರವಾಗಿ ಚಕಾರ ಶಬ್ದವೆತ್ತಲಿಲ್ಲ. ಭದ್ರತಾ ಸಮಿತಿಯಲ್ಲಿ ಮತ್ತದರ ಹೊರಗಡೆಯೂ ಅಮೆರಿಕೆಯ ಕಾಶ್ಮೀರ ನೀತಿ ಸಫಲವಾಗದೆ ಇರುವುದಾದರೆ ಅದಕ್ಕೆ ನೋವಿಯತ್ ರಶ್ಯನೇ ಕಾರಣ. ಕಾಶ್ಮೀರ ಸಂಬಂಧವಾಗಿಯೂ ರಶ್ಯ ಹಲವು ಬಾರಿ ಭಾರತದ ಹಿಂದೆ ನಿಂತು ಪ್ರತಿಷೇಧ ಮತ ಚಲಾಯಿಸಿದ್ದುಂಟು. ಕಾಶ್ಮೀರದ ಒಂದಂಶವನ್ನೂ ಆಕ್ರಮಣದಲ್ಲಿರುವುದಕ್ಕೆ ಅಮೆರಿಕೆಯ ಪಾಕ್ ಪರ ನಿಲುಮೆಯೇ ಕಾರಣ. ಇಂದಿಗಾದರೂ ಕಾಶ್ಮೀರದ ಪ್ರಶ್ನೆಯನ್ನು ಮುಗಿದ ಅಧ್ಯಾಯವೆಂದೊಪ್ಪಲು ಅದು ಸಿದ್ಧವಿಲ್ಲ.

ಅಮೆರಿಕೆಯಲ್ಲಿ ಜಾನ್ ಕೆನ್ನೆಡಿ ಅಧ್ಯಕ್ಷರಾದರು. ಆಗ, ಇಲ್ಲಿ ಪೋರ್ಚುಗೀಸರ ದೌರ್ಜನ್ಯ ಮಿತಿಮೀರಿದ್ದರಿಂದ ಗೋವೆಯನ್ನು ಸಾಮ್ರಾಜ್ಯವಾದಿಗಳ ಕಪಿಮುಷ್ಟಿಯಿಂದ ವಿಮೋಚನೆಗೊಳಿಸುವುದು ಅನಿವಾರ್ಯವಾಯ್ತು. ಸಾಲಝಾರ ದೊರೆ ಗೋವೆಯನ್ನು ಭಾರತಕ್ಕೆ ಬಿಟ್ಟುಕೊಡಲು ಒಪ್ಪಲಿಲ್ಲ; ಭಾರತದ ವಿಮೋಚನಾ ಕಾರ್ಯವನ್ನು ಪೋರ್ಚುಗೀಸ್ ಸಾಮ್ರಾಜ್ಯದ ಮೇಲಿನ ಆಕ್ರಮಣವೆಂದು ಕರೆದರು. ವಿಶ್ವಸಂಸ್ಥೆಯಲ್ಲಿಯೂ ಅವರ ದೂರು ಹೋಯ್ತು. ಆಗ ಅಮೆರಿಕನ್ ರಾಯಭಾರಿ ಶ್ರೀ ಅಡ್ಲೈ ಸ್ಟಿವನ್ಸನ್ನರೂ ಉಗ್ರವಾಗಿ ಭಾರತವನ್ನು ಖಂಡಿಸಿದ್ದುಂಟು; ಅವರ ಧ್ವನಿ ಅತ್ಯಂತ ಕಠೋರವಾದದ್ದುಂಟು. ಆದರೆ, ಮುಂದೆಲ್ಲವೂ ತಿಳಿಯಾಯ್ತು; ಅಮೆರಿಕೆಯು ಭಾರತದ ನೀತಿಯನ್ನು, ನಿಲುಮೆಯನ್ನು ಒಪ್ಪಿಕೊಂಡಿತು.

ಕೆಂಪು ಚೀನಾವು ಭಾರತದ ಮೇಲೆ ಆಕ್ರಮಣ ಮಾಡಿದಾಗ ಭಾರತದ ಮೇಲೆ ಅನುಕಂಪ ತೋರಿದ ಅಮೆರಿಕೆಯನ್ನು ನುರೆಯಬಾಗದು. ಪಾಕ್-ಭಾರತ ಸಮರದ ವೇಳೆಯೂ ಈಗಿನಂತೆ ಭಾರತ ವಿರೋಧಿ ನೀತಿಯನ್ನು ಅದು ತಾಳಲಿಲ್ಲ. ಆದರೆ, ಸುಮಾರು ಹತ್ತು ತಿಂಗಳುಗಳಿಂದ ಹುಟ್ಟಿಕೊಂಡು ಈಗ ಇಲ್ಲವಾಗುತ್ತಿರುವ ಬಂಗ್ಲಾ ಸಮಸ್ಯೆಯನ್ನು ಅಧ್ಯಕ್ಷ ನಿಕ್ಸನ್ನರಾಗಲಿ ಅವರ ರಾಜ್ಯಕೀಯ ಸಲಹೆಗಾರ ಕೀಸಿಂಗರ್ ಆಗಲೀ ಆರ್ಥಮಾಡಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಮೂರ್ತನಲ್ಲ, ಸಮಸ್ಯೆಯ ವಸ್ತು ಸ್ಥಿತಿಯನ್ನು ಬದಲಿಸಿ ಅದಕ್ಕೆ ಹೊಸ ರೂಪವನ್ನು ಕೊಡುವ ಪ್ರಯತ್ನ ಮಾಡಿದರು.

ಅವರೇನು ಮಾಡಿದರೂ ಅವರ ನಿರೀಕ್ಷೆಯಿಂದು ಸುಳ್ಳಾಗಿದೆ. ಬಂಗ್ಲಾದೇಶ ಪಾಕಿಸ್ತಾನದ ಕಪಿಮುಷ್ಟಿಯಿಂದ ಸ್ವತಂತ್ರವಾಗಿ ಸಾರ್ವಭೌಮ ದೇಶವಾಗಿದೆ. ಅದನ್ನು ಮತ್ತೆ ಪಾಕಿಸ್ತಾನಕ್ಕೆ ತಂದುಕೊಳ್ಳಲು ತಿದರ ಅಧ್ಯಕ್ಷ ಭುಟ್ಟೋ ಮಹಾಶಯರಾಗಲೀ, ಅಮೆರಿಕನ್ ರಾಜ್ಯಕೀಯ ದೂತ ಕೀಸಿಂಗರ್‌ಗಾಗಲೀ, ಸ್ವಯಂ ಅಧ್ಯಕ್ಷ ನಿಕ್ಸನ್ನರಿಗಾಗಲೀ ಸಾಧ್ಯವಿಲ್ಲ. ಬರಿಯ ಶಸ್ತ್ರಾಸ್ತ್ರಗಳ ಬಲದಿಂದ ಜನಾಂಗವೊಂದನ್ನು ವಶದಲ್ಲಡಗುವುದು ಅಸಾಧ್ಯವೆಂಬುದನ್ನು ಯೂಹ್ಯಾಬಿಖಾನರೇ ಲೋಕಕ್ಕೆ ಜಾಹೀರು ಮಾಡಿ ತೋರಿಸಿದ್ದಾರೆ. ಒಂದೊಮ್ಮೆ ಅದು ಸಾಧ್ಯವಿರುತ್ತಿದ್ದರೆ ಅವರೊಡನೆ ಅಮೆರಿಕೆ ಚೀನಾಗಳು ಉದಾರವಾಗಿ ನೀಡಿದ ಶಸ್ತ್ರಾಸ್ತ್ರಗಳು ಧಾರಾಳವಾಗಿದ್ದುವು. ಅವರು ಅದನ್ನು ವ್ಯರ್ಥ ಕಳೆದುಕೊಳ್ಳಬೇಕಾಗಿ ಬರುತ್ತಿರಲಿಲ್ಲ.

ಬಂಗ್ಲಾದೇಶ ರಚನೆಗೊಂಡದ್ದು ಸೂರ್ಯನುದಯಿಸಿದಷ್ಟೇ ವಾಸ್ತವಿಕ. ಇದನ್ನು ನಿಕ್ಸನ್ ಇನ್ನು ಒಪ್ಪದಿರುವುದಾದರೆ, ಅದನ್ನು ಪಾಕಿಗೆ ತಂದು ಕೊಡುವ ಕನಸು ಕಾಣುತ್ತಿರುವುದಾದರೆ, ಅವರ ಬಗೆಗೆ ಕರುಣೆಪಡಬೇಕಾಗುತ್ತದೆ. ಅವರು ಸಾಲಝಾರ ದೊರೆಯನ್ನೂ ಅಜ್ಞಾನದಲ್ಲಿ ಮೆಟ್ಟಿ ನಿಂತವರೆನ್ನಬೇಕಾಗುತ್ತದೆ. ಅವರ ದೇಶದಲ್ಲೇ ಆ ನೀತಿಯನ್ನು ಒಪ್ಪದ ಬುದ್ಧಿ ಜೀವಿಗಳಿದ್ದಾರೆ, ರಾಜ್ಯ ನೀತಿ ವಿಶಾರದರಿದ್ದಾರೆ; ಪ್ರತಿಕಾರ್ಕರೂ ಇದ್ದಾರೆ. ಅವರು ಭಾರತದಲ್ಲಿ ನೇಮಿಸಿರುವ ರಾಯಭಾರಿಯೇ ಅವರ ನೀತಿಯನ್ನು ಸ್ಪಷ್ಟವಾಗಿ ಖಂಡಿಸುತ್ತಾರೆ! ಆದರೆ, ವಸ್ತುಸ್ಥಿತಿಯನ್ನು ಅರಿಯುವಲ್ಲಿ ಆಧ್ಯಕ್ಷ ನಿಕ್ಸನ್ ಪರಾಧೀನರಾದಂತೆ ನಿಸುತ್ತದೆ.ಇದಕ್ಕಾಗಿ ಮರುಕ ಪಡಬೇಕೆನಿಸುತ್ತದೆ. ಕೀಸಿಂಗರ್ ಅಮೆರಿಕೆ-ಚೀನಾಗಳನ್ನು ಒಂದುಗೂಡಿಸುವ ಆಶಯದಲ್ಲಿ ಭಾರತವನ್ನು ಅಮೆರಿಕೆಯಿಂದ ಸಂಪೂರ್ಣ ದೇವ್ರಡಿಸುವ ಕಾರ್ಯವನ್ನು ಸಾಧಿಸಿದರು; ಅವರ ಚೀನಾ ನಿಲುವಿನ ಆಕೆಯೂ ದೇರುವುದೇನು?

ಈಯೆಲ್ಲ ವಿಪರೀತ ನೀತಿ-ನಿಲುಮೆಗಳಿಗೆ 'ಶಕ್ತಿ ಸಮತೋಲನ'ವೆಂಬ ಹೆಸರು ರಾಜ್ಯಕೀಯದಲ್ಲಿ ಕೇಳಿಬರುತ್ತದೆ. ವಿಶಯದ ಮೇಲೆ ರಶ್ಯದ ಪ್ರಭಾವ ಹೆಚ್ಚುತ್ತ ಬಂದಾಗ, ತನ್ನ ಸ್ವಬಲ ವಿರೋಧಿಯು ವಿರೋಧಿ ದೇಶ ಚೀನಾವನ್ನು ಹತ್ತಿರ ಕರೆದು ತನ್ನ ಪ್ರಭಾವವನ್ನು ಉಳಿಸಿಕೊಳ್ಳುವ ಅಮೆರಿಕನ್ ತಂತ್ರ ಜಗಜ್ಜನಿತ ಆದರೆ, ಸ್ವತಂತ್ರ ವಿಚಾರಧಾರೆಯುಳ್ಳ ಜನಾಂಗವೊಂದು ಈ ಸಮತೋಲನವನ್ನು ಸವಕಲು ನಾಣ್ಯವೆಂದು ತಿಳಿಯುತ್ತಿದೆ ಶಕ್ತಿಯು ಜನ ಶಕ್ತಿಯಲ್ಲೇ ನಿಹಿತವಾಗಿದೆ ನಿಕ್ಸನ್ ತಾನು ಸರಿದಾರಿಯಲ್ಲೇ ನಡೆಯುತ್ತಿದ್ದೇನೆಂಬ ಕನಸು ಕಾಣುತ್ತಿರಬಹುದು ಅವರು ಜಾಗ್ರತವಾಗುವುದರೊಳಗೆ ಅವರ ರಾಜ್ಯನೀತಿ ದಿವಾಳಿ ತೆಗೆದುಬಿಡುತ್ತದೆ.

ಅದೇನೋ ಕಾರಣದಿಂದ ನಿಕ್ಸನ್ನರ ಕೈಗೆ ಅಧಿಕಾರ ಬಂತು. ಅಮೆರಿಕೆಯ ನೆನೇಪಿನಲ್ಲಿ ಬಸುಮತ ಅವರ ಪಕ್ಷಕ್ಕೆ ಇಲ್ಲ. ತನ್ನ ವಕ್ಷವನ್ನೂ ತನ್ನನ್ನೂ ಎತ್ತರಿಸಿದ್ದೇನೆಂದವರು ತಿಳಿದಿರುವುದು ತಪ್ಪು. ಮುಂದಿನ ಚಾರಿಯೂ ತಮ್ಮ ಸೀಟನ್ನು ಉಳಿಸಲು ಬಯಸಿದ್ದ ಅವರಿಗೆ ನಿರಾಶೆ ಕಾದಿದೆ. ಹಾಗಾಗಿ ನಿಕ್ಸನ್ ಅಮೆರಿಕೆಯ ಘನತೆಯನ್ನು ಉಳಿಸಲು ಬಯಸುವುದಾದರೆ, ವಸ್ತುಸ್ಥಿತಿಯನ್ನು ನಿರ್ವಿಕಾರ ದೃಷ್ಟಿಯಿಂದ ನೋಡುವುದನ್ನು ಕಲಿಯಬೇಕು; ಕೀಸಿಂಗರ್ ಕನ್ನಡಕದಿಂದ ನೋಡಿದರೆ ಕಸಿವಿಸಿಗೆ ಕಾರಣವಾಗುತ್ತದೆ.

●●

ಭಾರತದ ವೀರ ವೈಮಾನಿಕರು

ಕಾರ್ಪೋರಲ್ ಡೋಗ್ರಾ ಕೇವಲ 26 ವಯಸ್ಸಿನ ಯುವಕ. ಆದರೆ ಅವನಿಗೆ ಅನುಭವ ಸೈನಿಕನಲ್ಲಿರುವ ಆತ್ಮವಿಶ್ವಾಸ, ಸ್ಥೈರ್ಯವಿದೆ. ಪಶ್ಚಿಮ ವಲಯದ ದೂರದ ವಾಯುಪಡೆ ಕೇಂದ್ರದಲ್ಲಿ ಮುಖ್ಯವಾದ ಸಂರಕ್ಷಣ ಸ್ಥಾವರಗಳನ್ನು ರಕ್ಷಿಸುತ್ತಿರುವ ಡೋಗ್ರಾಗೆ ತನ್ನ ಕರ್ತವ್ಯದ ಅಪಾರ ಅರಿವಿದೆ. ತಾನಿರುವ ಪ್ರದೇಶದ ವಾಯುಪ್ರದೇಶದಲ್ಲಿ ಶತ್ರುವಿಮಾನ ಬಂದರೆ ಅದನ್ನು ನಾಶಮಾಡುವುದು ತನ್ನ ಪವಿತ್ರ ಕರ್ತವ್ಯವೆಂದು ಡೋಗ್ರಾ ತಿಳಿದಿದ್ದಾನೆ.

ಡೋಗ್ರಾ ವಿಮಾನ ವಿರೋಧಿ ಫಿರಂಗಿಯ ಹಿಂದಿರುವ ಕಂದಕದಲ್ಲಿ ಜೀವಿಸುತ್ತಾನೆ. ಈ ಕಂದಕವನ್ನು ಅವನೇ ಶ್ರದ್ಧೆಯಿಂದ ನಿರ್ಮಿಸಿದ. ಕಂದಕವಲ್ಲಿರುವ ಡೋಗ್ರಾ ನಿರಂತರ ಎಚ್ಚರದಿಂದ ಆಕಾಶವನ್ನು ಸರಿಶೀಲಿಸುತ್ತಿರುತ್ತಾನೆ. ಶತ್ರು ವಿಮಾನ ಬಂದರೆ ನಾಶಮಾಡಲು ಸಿದ್ಧನಾಗಿದ್ದಾನೆ.

ಡೋಗ್ರಾ ಫಿರಂಗಿ ಹಾರಿಸುವುದರಲ್ಲಿ ತರಬೇತಿ ಪಡೆಯಲಿಲ್ಲ.ಅವನು ಏರೋ ಎಂಜಿನುಗಳ 'ಫಿಟ್ಟರ್' ವಿದ್ಯೆಯಲ್ಲಿ ತರಬೇತಿಪಡೆದಿದ್ದಾನೆ. ಆಗಾಗ್ಗೆ ಬರುವ ವಿಮಾನಗಳ ಭಾಗಗಳನ್ನು ತನಿಖೆ ಮಾಡುತ್ತಾನೆ. ಆದರೆ, ಅವನಿಗೆ ಮಿತವ್ಯಯದ ಅರಿವಿದೆ. ಡೋಗ್ರಾ ಸಂದರ್ಭ ಬಂದಾಗ ಅತ್ಯುತ್ತಮ ಫಿರಂಗಿತಜ್ಞನಾಗಿ ಮೆಡಿಯುತ್ತಾನೆ.

ಡೋಗ್ರಾ ಬಳಿಯಿರುವ ಫಿರಂಗಿಯನ್ನು ತವನ ಮಿತ್ರರು ಸ್ವಇಚ್ಛೆಯಿಂದಾಗಿ ಸಿದ್ಧಪಡಿಸಿದರು. ಈ ಫಿರಂಗಿ ಸಾಂಪ್ರದಾಯಿಕ ಬಂದೂಕಕ್ಕಿಂತಲೂ ವೇಗವಾಗಿ ಪ್ರಾಣಾಂತಿಕವಾದ ಹೆಲ್‌ಗಳನ್ನು ಕಾರುತ್ತದೆ. ಡೋಗ್ರಾ, ವೈಮಾನಿಕರು ಮತ್ತು ವಿಮಾನ ಯಂತ್ರಗಳ ಬಗ್ಗೆ ಬಹುಕಾಲದಿಂದ ಸಂವರ್ಕ ಹೊಂದಿದ್ದಾನೆ ಇವನು ಕ್ಷಣಮಾತ್ರದಲ್ಲಿ ವಿಮಾನವನ್ನು ಪತ್ತೆಹಚ್ಚುತ್ತಾನೆ.

ಕಾರ್ಪೋರಲ್ ಡೋಗ್ರಾ ಭಾರತದ ಸಾವಿರಾರು ವೈಮಾನಿಕರಲ್ಲಿ ಒಬ್ಬನಾಗಿದ್ದಾನೆ. ತವರೆಲ್ಲರೂ ಉತ್ಸಾಹ, ಎಚ್ಚರ, ನಿರ್ಭೀತಿ ಹಾಗೂ ಆತ್ಮವಿಶ್ವಾಸದಿಂದ ಕರ್ತವ್ಯನಿರತರಾಗಿದ್ದಾರೆ. ಶತ್ರುಧಾಳಿ ಮಾಡಿದರೆ ಆಕ್ರಮಣ ಮಾಡಿ ನಾಶಮಾಡುವುದೇ ಉದ್ಯೋಗವೆಂಬುವನ್ನು ಅವರು ಅರಿತ್ತಿದ್ದಾರೆ.

ಚಂದಾ ಹಣಕ್ಕೆ ಪತ್ರಿಕೆಯನ್ನು ವಿ. ಪಿ. ದ್ವಾರೆ ಕಳಿಸಿದರೆ ರೂ. 1-50ರಷ್ಟು ಹೆಚ್ಚಿಗೆ ಬೀಳುವುದರಿಂದ ಬಾಕಿ ಚಂದಾವನ್ನು ಮನಿಯಾರ್ಡರು ಮೂಹುವಂತೆ ವಿನಂತಿ.

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಜಾಗರೂ ವಜ್ರಗಳಿಗೆ ಅಧುನಿಕ ಫೇಶನ್ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಯಕ್ಷಗಾನ ಕಲೆಗೆ ರಾಷ್ಟ್ರೀಯ ಮನ್ನಣೆ ಮತ್ತು ಸೌತ್ ಕೆನರಾ ಕ್ಲಬ್

—ಶ್ರೀ ಎಚ್. ಎನ್ ರಂಗರಾವ್, ಹೊಸದಿಲ್ಲಿ

ಸದ್ದಿಲ್ಲ ಗದ್ದಲವಿಲ್ಲ, ಪಬ್ಲಿಸಿಟಿಯಂತೂ ಇಲ್ಲವೇ ಇಲ್ಲ. ಆದರೂ ಕಾರ್ಯಕ್ರಮವು ಬಂದು ನೋಡಿದಾಗ ಅದು ಆಕ್ಟೋಬರ್ ೨೫ರಿಂದ ನವೆಂಬರ್ ೧ರ ತನಕ ಕೊಡಮುತ್ತಿದ್ದ ಕಾರ್ಯಕರ್ತರನ್ನು ಕಾಣಬೇಕೆಂದರೆ ಆಯೋ ಕಾರ್ಯಕ್ರಮಗಳಲ್ಲಿ ಪ್ರಕಟಿಸುವ ಸ್ಥಳ ಸಂಚಿಕೆಯಲ್ಲಿ ನೋಡಿ ಸ್ಥಳಕ್ಕೆ ಇಲ್ಲಿ ಇಷ್ಟಕ್ಕೆ ಮುಖ್ಯವಲ್ಲ ಸಂಸ್ಥೆ ಮುಖ್ಯ ಕಾರ್ಯಕರ್ತರ ಒಗ್ಗಟ್ಟು ಈ ಸಂಸ್ಥೆಗೆ ಇನ್ನು ಕಳಸ ಕೋಟಿ ಅಷ್ಟುಕಟ್ಟುವನದ ಸಾಧ್ಯವಿ ಇಲ್ಲಿಯ ಸೌತ್ ಕೆನರಾ ಕ್ಲಬ್‌ನ ವಿಶೇಷಗುಣ. ಈ ತತ್ವ ಇದರ ಸಮೃ ಸಂಸ್ಥಾಯಿ ಕೆನಲ ಒಂದು ವರ್ಷದ ಆಡಳಿತದಲ್ಲಿ ಉಳು ಹರವಾಗಿ ಬೇರನ ಈ ಸಂಸ್ಥೆ ಉಳಿವ ಕನ್ನಡ ಸಂಸ್ಥೆಗಳೊಂದಿಗೆ ಸರಿಗಟ್ಟಿನಂತಿಯವುದು ಕ್ರಗತಿ ಸೂಚಕವ ಜೀವಂತ ನಿರ್ದರನ

ಒಂದು ಸಾಂಸ್ಕೃತಿಕ ಸಂಸ್ಥೆಗಳ ಪುರೋಭ ವೃದ್ಧಿಗೆ ಆರ್ಥಿಕ ಬಲವೊಂದಿದ್ದರೆ ಸಾಕು ಎಂದೆನ್ನುತ್ತಾರೆ ಕೆಲವರು. ಟ್ಟುಹೊಡಿ ಯೋಜಿತ ವಾದ ಗತಿಯಲ್ಲಿ ಕೆಲಸ ನಡೆದರೆ ಇಮ ಮುಖ್ಯ ನಂತರದ ವರ್ಷದ ಸಮಸ್ಯೆ ಎಬ್ಬಿಸಲ್ಪಮ್ಮ? ಆಸ್ಟ್ರೇಲಿಯಾಸ್ಟೈಗೆ ಕೆಲಸಕೆಯಿಲ್ಲ. ಅಂತಿಪ ಕ್ಷಿತಿಕರ್ತರ ಕ್ಷಿ. ಇನ್ನೆನ್ನ ಸಂ ಅದರೆ ಪಟ್ಟಿಣ ಸ್ಥಾನ ಇಲ್ಲಿಯನ್ನು ದಿಲ್ಲಿಗೆ ಪರಿಚಯ ಮಾಡಿಕೊಟ್ಟಿದ್ದು ಸಂಜ್ಞಾನವ್ಯಕ್ತಿ ಸೌತ್ ಕೆನರಾ ಕ್ಲಬ್ ಪ್ರಾರಂಭದ ಸಂಸ್ಥೆಗೆ ಕಾರ್ಯಕರ್ತರೇ ಇಲ್ಲವೆಂದಲ್ಲ ಕಾರ್ಯಕರ್ತರ ಕೊರತೆಯಿಂದಾಗಿ ಕೆಲಸಗಳು ಕುಂಠಿತವಾಗುತ್ತಿದ್ದವು ಎನ್ನುವ ಕಾರಣವಿಲ್ಲ. ಕ್ಲಬ್‌ನ ಕಾರ್ಯದರ್ಶಿ ಶ್ರೀ ಕೃಷ್ಣಾಚಾರ್ ಬೆಸ್ಸಗೆ ಮಿಲಿಟರಿ ಸಂಸ್ಥೆಯಲ್ಲಿ ಇದ್ದು ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದ ಅನುಭವವೂ ಕಾರ್ಯಕರ್ತರ ಕೊರತೆಯನ್ನು ಸೂಕ್ಷ್ಮವಾಗಿ ಗಮನಿಸಿದ್ದರು. ಆದರೆ ಕಾರ್ಯಕರ್ತರ ಕೊರತೆಯನ್ನು ಸಂಸ್ಥೆಯ ಪ್ರಗತಿಗೆ ಅಡ್ಡಿಯಾಗಲು ಅವರು ಬಿಡಲಿಲ್ಲ. ಸಂಸ್ಥೆಯ ಕಾರ್ಯಕರ್ತರ ಸಂಖ್ಯೆ ಹೆಚ್ಚಿಸಲು ಅವರು ಕೈಗೊಂಡ ಕ್ರಮಗಳು ಫಲಕಾರಿಯಾದವು. ಸಂಸ್ಥೆಯ ಸದಸ್ಯ

ಆರೋಗ್ಯ ಸುಧಾರಣೆಗಾಗಿ

ಓಟ ಅತ್ಯುತ್ತಮ ವ್ಯಾಯಾಮ

— ಸ್ಟೀವ್ ಜೆಂಕ್‌ಮನ್ —

ಹಗಲಿನ ಕಠಿನ ಶ್ರಮದ ಕೆಲಸದ ತರುವಾಯ, ಬಳಲಿದ ಮೂಳೆಖಂಡಗಳಿಗೆ ವಿಶ್ರಾಂತಿಯನ್ನು ನೀಡುವ ಮಾರ್ಗವು, ನಿಮ್ಮ ರೂಢಿಯಂತೆ, ಕೈಯಲ್ಲಿ ವಾರ್ತಾಪತ್ರಿಕೆಯನ್ನು ಹಿಡಿದು ಬಾನುಲಿ ಕೇಳುತ್ತ ವಿಶ್ರಾಂತಿ ಕುರ್ಚಿಯಲ್ಲಿ ಕುಳಿತಿರುವುದೇ ಆಗಿರಬಹುದಾದರೂ, ಅದು ಸರಿಯೂದುದಲ್ಲ. ಹಾಗಾದರೆ ಅತ್ಯುತ್ತಮ ಮಾರ್ಗ ಯಾವುದೆಂಬುದರ ಕುರಿತು ನೀವು ನಿಮ್ಮ ವಿರಾಮಸನದಿಂದಲೇ ಆಲೋಚಿಸಿರಿ. ಆ ಮೇಲೆ ನಿಮ್ಮ ಅತ್ಯಂತ ಸರಳವಾದ ಹಗುರ ಉಡುಪುಗಳನ್ನು (ಚಿಲ್ಲಣ, ಬನೀನು) ಧರಿಸಿ ನಿಮ್ಮ ವಸತಿಯ ಕಟ್ಟಡಗಳ ಸುತ್ತಲೂ ಓಡಿರಿ!

ಮುಗುಳ್ನಗುತ್ತೀರಾ ಈ ಮಾತಿಗೆ? ಇದು ನನ್ನ ಸ್ವಂತ ಅಭಿಪ್ರಾಯವೇನೂ ಅಲ್ಲ. ವೈಜ್ಞಾನಿಕ ಪರಿಶೀಲನೆಯಿಂದ ನಿರ್ಧರಿಸಲಾಗಿರುವ ವಿಚಾರ

ಉಕ್ರೇನಿನ ಸೈದ್ಧಾಂತಿಕ ಭೌತ ವಿಜ್ಞಾನ ಸಂಸ್ಥೆಯಲ್ಲಿ ಶ್ರಮ ಮತ್ತು ವಿಶ್ರಾಂತಿ ಸಮಯದ ವ್ಯಾಯಾಮದ ಕುರಿತು ನಡೆದ ಏಳು ರಾಷ್ಟ್ರಗಳ ಸಮ್ಮೇಲನದಲ್ಲಿ ಈ ಸಮಸ್ಯೆಗೆ ಉತ್ತರಗಳನ್ನು ರೂಪಿಸಲಾಯಿತು. 40ಕ್ಕಿಂತಲೂ ಹೆಚ್ಚು ಮಂದಿ ಪ್ರಾಧ್ಯಾಪಕರೂ, 100ಕ್ಕೂ ಹೆಚ್ಚು ಮಂದಿ ವಿಶೇಷಜ್ಞರೂ ಈ ನಿರ್ಧಾರಗಳನ್ನು ಕೈಗೊಂಡರು.

ಕೆಲಸ ಮಾಡುತ್ತಿರುವಾಗಲೂ ಆರೋಗ್ಯ ಸಾಧನೆಗಾಗಿ ಲಘು ವ್ಯಾಯಾಮುಗಳನ್ನು ಆಗಾಗ್ಗೆ ನಡೆಸುತ್ತಿರುವುದು ಒಳ್ಳೆಯದೆಂದು ಕೂಡ ಅವರು ಅಭಿಪ್ರಾಯ ಪಟ್ಟಿದ್ದಾರೆ.

ನಕ್ಸೆ ಮಾಣಿಯ ಚಿಳಿಯಲ್ಲಿ ನಿಂತುಕೊಂಡೇ ಇಡೀ ದಿನ ಮಾಡಿದ ಕಠಿನ ಶ್ರಮದ ತರುವಾಯ, ನಕ್ಷಾಕಾರರೊಬ್ಬರು ಸಂಜೆ ಕುಳಿತಿರುವಾಗ ಸ್ವತಃ ತಾವು ವಿಶ್ರಾಂತಿ ಪಡೆಯುತ್ತಿರುವಂತೆ ಭಾವಿಸಿಕೊಳ್ಳಬಹುದಾದರೂ, ಅವರು ವಸ್ತುತಃ ಶ್ರಮ ಸಂಗ್ರಹಕ್ಕೆ ಗುರಿಯಾಗಿರುತ್ತಾರೆ. ವಿಶ್ರಾಂತಿಯ ಅವಶ್ಯಕತೆಯಿಲ್ಲದ ವ್ಯವಸ್ಥೆಗಳೂ ಸಹ ಆಗ ನಿಶ್ಚೇಷ್ಟಿತವಾಗಿರುತ್ತವೆ. ಮೂಳೆಖಂಡಗಳು, ಹೃದಯ ಮತ್ತು ಶ್ವಾಸಕೋಶಗಳಿಗೆ ಅವಶ್ಯಕವಾದ ಚಲನೆಯ ಚಟುವಟಿಕೆಗಳನ್ನು ಆಗ ನಿಲ್ಲಿಸಿದಂತಾಗುತ್ತದೆ. ಅದೂ ಅಲ್ಲದೆ ಇಂದಲೇ ವಿಶ್ರಾಂತಿಯೂ ಸಹ ಸಕ್ರಿಯವಾಗಿರಬೇಕಾಗುತ್ತದೆ ಎಂತಹ ವಿಶ್ರಾಂತಿಯು ಕಾರ್ಯಭಾರದ ಮತ್ತು ಭಾರ—ವಿರೋಧದ ಉದ್ರಿಕ್ತತೆಗಳನ್ನು ನಿವಾರಿಸುತ್ತದೆ.

ಕ್ರೀಡೆ ಮತ್ತು ವ್ಯಾಯಾಮ— ಇವು ಸೃಕ್ರಿಯ ವಿಶ್ರಾಂತಿಯ ಸಾನೂನ್ಯ ರೂಪಗಳು. ಓಟವು ಎಲ್ಲಕ್ಕಿಂತಲೂ ಸರಿಯಾದುದಾಗಿರುವ ಭಾರ-ವಿರೋಧಕ ವಿಶ್ರಾಂತಿ ಸಾಧಿಸಿರುತ್ತದೆ.

ದಾರ್ಢ್ಯ—ನಿರ್ಮಾಣದ ವ್ಯಾಯಾಮಗಳು ಅತ್ಯಂತ ಉಪಯುಕ್ತವಾಗಿರುತ್ತವೆಯೆಂದೂ, ಅವುಗಳಲ್ಲಿ ಓಟವು ಅತ್ಯಂತ ಸುಲಭವಾದುದೆಂದೂ ಸಮ್ಮೇಲನದಲ್ಲಿ ತಜ್ಞರು ದೃಢವಾಗಿ ಪ್ರತಿಪಾದಿಸಿದರು.

ಜಾಗರೂಕತೆಯಿಂದ ಕ್ರಮಬದ್ಧ ಆಳತೆಯ ಪ್ರಕಾರ ನಡೆಯುವ ಓಟವು ಹೃದಯಕ್ಕೂ ಮತ್ತು ಪರಿಜಲನೆಯ ವ್ಯವಸ್ಥೆಗಳಿಗೂ ವಿಶೇಷ ಪ್ರಯೋಜನಕರವಾದುದು.

ನಿಧಾನವಾದ ದೀರ್ಘ ಸಮಯದ ಓಟವು ಎಲ್ಲ ಆರೋಗ್ಯವಂತರಿಗೂ ಒಳ್ಳೆಯದೇ. ರೋಗ ಪೀಡಿತರಾದವರು ಮಾತ್ರ ವೈದ್ಯಕೀಯ ಮೇಲ್ವಿಚಾರಣೆಯಂತೆಯೆ ಓಡಬೇಕಾಗುತ್ತದೆ. ಹೃದ್ರೋಗಗಳಿಂದ ಪೀಡಿತರಾಗಿದ್ದವರ ಚಿಕಿತ್ಸೆಗಾಗಿ, ಮೂಸ್ಕೋದ ಸ್ಪೊ. ಬೇಲಯ ಅವರು ಓಟವನ್ನು ಬಳಸಿ ಯಶಸ್ವಿಯಾಗಿದ್ದಾರೆ ರಕ್ತದ ಒತ್ತಡ ಸ್ಥೂಲಕಾಯ, ಉಬ್ಬಸ ಮತ್ತು ಸಂಧಿವಾತ ರೋಗಗಳಿಗೂ ಚಿಕಿತ್ಸಕರು ಓಟದ ವ್ಯಾಯಾಮವನ್ನೇ ಶಿಫಾರಸು ಮಾಡುತ್ತಾರೆ. ಓಟದ ಜತೆಗೆ ಇತರ ಕ್ರೀಡೆಗಳೂ —ವ್ಯಾಯಾಮ, ಈಜಾಟ, ನಡಿಗೆ, ಬೇರೆ ಆಟಗಳು, ಇದ್ದರೆ ಒಳ್ಳೆಯದೆಂದು ತಜ್ಞರು ಸೂಚಿಸುತ್ತಾರೆ.

ಅಲ್ತಾಯ್ ಪರ್ವತ ಪ್ರದೇಶದಲ್ಲಿ ಬೆಳೆ ಗೂಬಲಿನ ವಯೋನೃದ್ಧರು—ಯುವಕ ಡಾಕ್ಟರೊಬ್ಬರ ಸಲಹೆಯಿಂದ ಸ್ಫೂರ್ತಿ ಪಡೆದು—ಉಣ್ಣೆಯ 'ಫೆಲ್ಟ್' ವಾದರಲ್ಲೆಗಳನ್ನೂ ತುಪ್ಪಳದ ಟೋಪಿಗಳನ್ನೂ ಧರಿಸಿ ಕಡು ಚಳಿಯಲ್ಲಿಯೂ ಸಹ ಹೃದ್ರೋಗದಿಂದ ದೂರವಿರಲು ಬಿರುಸಾಗಿ ಓಡಾಡುತ್ತಿರುವುದನ್ನು ತೋರಿಸುವ ಚಲಚ್ಚಿತ್ರವನ್ನು ಈ ಸಮ್ಮೇಲನದ ಪ್ರತಿನಿಧಿಗಳಿಗೆ ಪ್ರದರ್ಶಿಸಲಾಯಿತು. ಪ್ರಧಾನತಃ ಶರೀರ ವ್ಯಾಯಾಮದ ಮತ್ತು ಹಗುರವಾದ ಕೆಲಸದ ಚಿಕಿತ್ಸೆಯನ್ನು ಬಕೂ ಆರೋಗ್ಯ ಕೇಂದ್ರದಲ್ಲಿ ನೀಡುತ್ತಿರುವುದನ್ನು ಮತ್ತೊಂದು ಚಲಚ್ಚಿತ್ರದಲ್ಲಿ ತೋರಿಸಲಾಗಿತ್ತು.

●●

ಸುಸಂಸ್ಕೃತ ಲೇಬಲ್ವಾದಿಗಳು

(ನಾಲ್ಕನೇ ಪುಟದಿಂದ)

'ವಿಶೇಷವೇನೂ ಇಲ್ಲ. ಆ ರಾಜ್ಯವೆಲ್ಲ ತುಂಡು ತುಂಡಾಗಿ ಹೋಯ್ತು. ಅಲ್ಲೀಗ ಅಸ್ಸಾಮು, ಮೇಘಾಲಯ, ತ್ರಿಪುರ ಮಣಿಪುರ, ನಾಗಾಲ್ಯಾಂಡ್ ಎಂಬ ಐದು ರಾಜ್ಯಗಳಾದುವು. ಇವುಗಳಲ್ಲಿ ಪೂರ್ಣ ಮುಟ್ಟದ ರಾಜ್ಯಗಳಿದ್ದರೂ ಎಲ್ಲಸಕ್ಕೂ ಒಬ್ಬನೇ ರಾಜ್ಯಪಾಲನಿರುತ್ತಾನೆ....'

'ಅದಲ್ಲರಿ, ಅದೆಂತದೋ ಸಚಿವ ಸಂಪುಟ ರಾಜೀನಾಮೆ ಕೊಡುತ್ತದಂತೆ....'

'ಓ, ಆದು....ಹ್ಞೂಂ. ಶ್ರೀ ಚಾಲಿಹಾರು ರಾಜಿನಾಮೆ ನೀಡಿದ ಬಳಿಕ ಮೊಹಿಂದರ್ ಮೋಹನ ಚೌಧುರಿ ಮುಖ್ಯಮಂತ್ರಿಯಾದರು.'

'ಹಾದು ...'

'ನಾತದ್ದು ನೂರ್ಜಿಯಲ್ಲಿ ಚುನಾವಣೆ ನಡಿಯಬೇಕಪ್ಪೆ. ಚೌಧುರಿಗಾಗದವರು ಹೈಕಮಾಂಡಿಗೆ ದೂರಿ ಇಂಡಿಕೇಟಿನ ಪ್ರಾದೇಶಿಕ ಸಮಿತಿಯನ್ನು ವಿಸರ್ಜಿಸಿ ಹೈಪ್ ಹಾಕ್ ಸಮಿತಿ ನೇಮಿಸಲು ಕೇಳಿಕೊಂಡಿದ್ದಾರಂತೆ....'

'ಹ್ಞೂಂ....'

'ಹೈ ಕಮಾಂಡು ಮೂರಿಗೆ ಕೆನಿಗೊಟ್ಟಂತಿದೆ. ಅವು ಹೈಪ್ ಹಾಕ್ ಸಮಿತಿ ನೇಮಿಸಲು ಪರವಾಗಿದೆ....'

'ಆಪಕ್ಕೆ?'

'ಚೌಧುರಿಯವರು ವಿರೋಧ. ಒಂದು ವೇಳೆ ಹಾಗೆ ಮಾಡಿದರೆ, ಆವರ ಗುಂಪು ಬಂಡಾಯವೇಳುವ ಬೆದರಿಕೆ ಹಾಕಿದೆ....'

'ಓ ಅಸ್ಸಾಮದ ಇಂಡಿಕೇಟಿನಲ್ಲೂ ಗುಂಪುಗಾರಿಕೆಯಿದೆ...'.

'ಆಲ್ಲೀಂತೇನು? ಅಧಿಕಾರವಿರುವಲ್ಲೆಲ್ಲ ಆದೇ ರೀತಿಯ ಛಿದ್ರ ಕಂಡೇ ಕಾಣುತ್ತಿದೆ..."

'ಹ್ಞೂಂ....ಆದೂ ಹೌದು....'

'ಏನು?'

'ಆಸ್ತಿವಂತರ ಮಕ್ಕಳು ಮಾತ್ರವೇ ಹೊಡೆದಾಡುವುದು ಏನೂ ಇಲ್ಲದವರು ಸರಿಯಾಗೇ ಇರುತ್ತಾರೆ....'

'ಹ್ಞೂಂ....'

'ಹೌಜೆ?'

'ಹೌದು ಹೌದು....'

—ಗೋರಾ

●●

ಬಂಟರ ಯಾನೆ ನಾಡವರ ಸಂಘದ ವಿಶೇಷ ಮಹಾಸಭೆ

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ವಿಶೇಷ ಮಹಾಸಭೆಯು ಇತ್ತೀಚೆಗೆ ಮಂಗಳೂರಿನ ರಾಮಕೃಷ್ಣ ವಿದ್ಯಾರ್ಥಿ ಭವನದ ವೆಂಕಪ್ಪ ಪೂಜಾರಿ ಸಭಾ ಭವನದಲ್ಲಿ ಸಂಘದ ಅಧ್ಯಕ್ಷ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು.

ಅಧ್ಯಕ್ಷರು ಪ್ರಾಸ್ತಾವಿಕ ಭಾಷಣ ಮಾಡುತ್ತಾ, ಪ್ರತಿನಿಧಿಗಳ ಸಾರ್ವತ್ರಿಕ ಅಭಿಪ್ರಾಯದಂತೆ ಸಂಸದ ನಿಯಮಾವಳಿಗಳ ತಿದ್ದುಪಡಿಗಾಗಿ ಈ ಸಭೆಯನ್ನು ಕರೆಯಲಾಗಿದೆ ಎಂದರು. ಬಂಗ್ಲಾ ವೇಶಕ್ಕೆ ಸ್ವಾಗತ ಬಯಸಿ ಹಾಕ್ ಕದನದಲ್ಲಿ ಪ್ರಾಣಾರ್ಪಣೆ ಗೈದ ಯೋಧರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ಅಲ್ಲದೆ ಸಂಘದ ಸದಸ್ಯರಾಗಿದ್ದ ಪುರವೂರು ಬೀಡು ಚಿಕ್ಕಯ್ಯ ನಾಯ್ಕ್, ನಿವೃತ್ತ ಜಿಲ್ಲಾ ನ್ಯಾಯಾಧೀಶ ಶ್ರೀ ಬಿ. ಎಲ್. ಎಸ್. ರೈ ಮತ್ತು ಶ್ರೀಮತಿ ನಟ್ಟಿಲೈಲ ಲಕ್ಷ್ಮೀ ವಿ. ಶೆಟ್ಟಿ ಇವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ನಿಯಮಾವಳಿಯ ತಿದ್ದುಪಡಿಯ ಕುರಿತಾದ ಚರ್ಚೆಯಲ್ಲಿ ಶ್ರೀಗಳಾದ ಎಸ್. ಮೋಹನದಾಸ ಆಡ್ಯಂತಾಯ, ಜೆ. ಕುಶಲ ಹೆಗ್ಡೆ, ಬಿ ಶಿವಾಜಿ ಶೆಟ್ಟಿ, ಎಸ್. ಆರ್. ಹೆಗ್ಡೆ, ಕೆ. ರಘುನಾಥ ಶೆಟ್ಟಿ, ಬಿ. ನೀಕಾರಾಮ ಶೆಟ್ಟಿ, ಕೇಸ್ವನ್ ಆನಂದ ರಾಮ ಶೆಟ್ಟಿ, ಡಾ। ಬಾಬು ಶೆಟ್ಟಿ, ಡಾ। ಸುಜೀವ ಮಲ್ಲಿ, ಕೆ. ಸಿ. ಶೆಟ್ಟಿ, ಎನ್. ಆರ್. ಎಚ್. ಪೂಂಜ, ಕೆ. ನಾರಾಯಣ ಶೆಟ್ಟಿ, ಎ. ಆನಂದ ಶೆಟ್ಟಿ, ಶ್ರೀಮತಿ ಕಲ್ಯಾಣಿ ದಿ ಶೆಟ್ಟಿ ಮೊದಲಾದವರು ಭಾಗವಹಿಸಿದ್ದರು. ಅಂತ್ಯದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಬಿ. ಮಿತ್ರದಾಸ ಹೆಗ್ಡೆಯವರು ವಂದನಾರ್ಪಣೆಗೈದರು

ಮಿಲಾಗ್ರಿಸ್ ಕಾಲೇಜಿನ ಹಳೆ ವಿದ್ಯಾರ್ಥಿಗಳ ದಿನಾಚರಣೆ

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ। ಎಂ ಪಿ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜಿನ ಪ್ರಿನ್ಸಿಪಾಲ್ ಡಾ। ಪಿ. ಗುರುರಾಜ ಭಟ್ಟರು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಟಿ. ಮೋಹನ್ ರಾಜ್ ಆವರು ವರದಿಗಳನ್ನೋದಿದರು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಹಳೆ ವಿದ್ಯಾರ್ಥಿಗಳಿಗೆ ಬಹುಮಾನ ಕೊಡಲಾಯಿತು.

ಕಳೆದ ಎಪ್ರಿಲ್ ತಿಂಗಳಲ್ಲಿ ನಡೆದ ಫೈನಲ್ ಬಿ. ಕಾಂ. ಪರೀಕ್ಷೆಯಲ್ಲಿ 6ನೇ ರ್ಯಾಂಕುಗಳಿಸಿದ ಶ್ರೀ ರಾಮು ರಾವ್ ಮತ್ತು ಕುಮಾರಿ ಯು. ಚಿತ್ರಲೇಖಾ ರಾವ್ ಆವರಿಗೆ ಬಹುಮಾನ ವೀಯಲಾಯಿತು. ಅಧ್ಯಕ್ಷರು ಮಾತನಾಡಿ ಕಾಲೇಜಿನ ಪ್ರಗತಿಗಾಗಿ ಸಂತೋಷ ಸ್ಯಕ್ತಪಡಿಸಿ ಆವರ ಅಡಳಿತವರ್ಗದವರನ್ನು ಶ್ಲಾಘಿಸಿದರು ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ರಾಮುರಾವ್‌ರು ಧನ್ಯವಾದ ಅರ್ಪಿಸಿದರು. ಹಳೆ ವಿದ್ಯಾರ್ಥಿ ಹಾಗೂ ಕಾಲೇಜಿನ ವಿದ್ಯಾರ್ಥಿಗಳಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳೊಂದಿಗೆ ಸಸೂರಂಭವು ಮುಕ್ತಾಯಗೊಂಡಿತು.



ಧರ್ಮಸ್ಥಳದಲ್ಲಿ ರಾಷ್ಟ್ರಪತಿ ದಂಪತಿಗಳು

ಕಳೆದ ತಾ. 27ರಂದು ರಾಷ್ಟ್ರಪತಿ ಶ್ರೀ ವಿ. ವಿ. ಗಿರಿ ದಂಪತಿಗಳು ತಮ್ಮ ಪರಿವಾರದವರೊಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಸಂದರ್ಶಿಸಿದರು. ಸಂಭ್ರಮದ ಸ್ವಾಗತವೊಂದಿಗೆ ಅವರನ್ನು ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರ ಇನಾವಣಿಕೆ ಕರೆದೊಯ್ಯಲಾಯಿತು. ಸ್ವಲ್ಪ ಹೊತ್ತು ವಿಶ್ರಮಿಸಿ ಅವರುಗಳು ಸೂಜಿ ವೀಕ್ಷಿಸಲು ದೇವಾಲಯಕ್ಕೆ ಹೋದರು ವಿಧಿವತ್ತಾಗಿ ಸೂತಿಗಳು ಮುಗಿದ ಬಳಿಕ ಶ್ರೀ ಹೆಗ್ಗಡೆಯವರು ರಾಷ್ಟ್ರಪತಿಗಳಿಗೆ ಸ್ವಾಗತ ಸಾವಪತ್ರ ನೀಡಿದರು. ನಂತರ ದೇವಾಲಯದಲ್ಲಿಯೇ ರಾಷ್ಟ್ರಪತಿಯನ್ನು ಸನ್ಮಾನಿಸುವ ಸಭೆಯೊಂದು ಜರಗಿ ಇದೇ ಸಂದರ್ಭದಲ್ಲಿ ಶ್ರೀಯುತ ಗಿರಿಯವರು ತುವು ರಚಿಸಿರುವ ಶಿವಸ್ತೋತ್ರ ರತ್ನಾಕರದಿಂದ ಎರಡು ಗೀತಗಳನ್ನು ಹಾಡಿದರು.

ಗಿರಿದಂಪತಿಗಳು ತಮ್ಮ ವಿವಾಹವಾಗಿ 55 ವರುಷಗಳು ತುಂಬಿ 56 ವರುಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಶ್ರೀ ಮಂಜುನಾಥನ ಸೇವೆ ಸಲ್ಲಿಸಲು ಬಂದಿದ್ದಲ್ಲದೆ ವಿವಾಹ ವರ್ಧಂತಿ ನಿಮಿತ್ತ ಶ್ರೀ ಕ್ಷೇತ್ರದಲ್ಲಿ ನಾನ್ನೂರು ಬಡ ಜನರಿಗೆ ಅನ್ನದಾನ ಏರ್ಪಡಿಸಿದ್ದರು. ಭೋಜನ-ವಿಶ್ರಾಂತಿ ಮುಗಿಸಿದ ಬಳಿಕ ವಿ. ವಿ. ಗಿರಿ ದಂಪತಿಗಳು ಮಂಗಳೂರಿಗೆ ತೆರಳಿದರು.

ಮೂರನೇ ಪುಟದಿಂದ

ತಮ್ಮೊರಿಸಬಲ್ಲುನು' ಎಂದು ಆತ್ಮವಿಶ್ವಾಸದಿಂದಹೇಳಿದ ಡಾ|ವಿಕ್ರಮ್ ಸಾರಾಭಾಯಿ ಶಾಂತಿಯುತ ಕಾರ್ಯಕ್ರಮಗಳಿಗೇ ಅಣುಶಕ್ತಿಯನ್ನು ಪರಿಸೀಮಿತವಾಗಿಡುವ ಭಾರತ ಸರಕಾರದ ನೀತಿಯನ್ನು ತ್ರಿಕರಣ ಪೂರ್ವಕ ಸಾಧಿಸಿಬಂದವರು. ಭಾರತನ ನೊಬೆಲ್ ಪ್ರಶಸ್ತಿ ವಿಜೇತ ಪರಮ ವಿಜ್ಞಾನಿ ಡಾ| ಸಿ. ವಿ. ರಾಮನ್ಸರಲ್ಲಿ ಹಲವು ವರ್ಷ ಅನ್ಯೋನ್ಯತೆಯನ್ನ ಮೂಡಿದ ಡಾ| ಸಾರಾಭಾಯಿ 'ಸ್ವದೇಶ ನಿರ್ಮಿತ ಪ್ರತಿಭಾವಂತ ವಿಜ್ಞಾನಿ'ಯೊಂದರೊ ತಪ್ಪಾಗದು ನಿರಂತರ ಚಟುವಟಿಕೆಗೆ ವೇದಂತ. ಅತಲ ನಿಸ್ಪೃಹತ್ವ ಮತ್ತು ಅಗಾಧ ಪ್ರಜ್ಞೆಗೆ ಭಾಜನರಾದ ಡಾ| ಸಾರಾಭಾಯಿಗೆ ಹಲವಾರು ಅಂತರಾಷ್ಟ್ರೀಯ ಹೆಗ್ಗಳಿಕೆಗಳೂ ದೊರಕಿವೆ. ಭಾರತದ ಪ್ರಮುಖ ಪಂಚವಾರ್ಷಿಕ ಯೋಜನೆಯೊಂದರ ಪರಿಣಾಮ ಶಕ್ತಿಯಿಂದ ಕ್ರಾಂತಿ ಸಾಧಿಸಿ ತೋರಿಸಬಹುದೆಂಬ ಅವರ ಉತ್ಕಟೇಚ್ಛೆ ಮತ್ತು ಆ ಬಗ್ಗೆ ಅವರ ಮಹತ್ತರ ಪ್ರಯತ್ನಗಳು ಪ್ರಗತಿಪರವೆನ್ನುವಲ್ಲಿ ಅವರಿಗಿರುವ ಕಾಳಜಿಯನ್ನು ತೋರಿಸುತ್ತವೆ. ಐವತ್ತರ ಗಡಿಯನ್ನು ದಾಟಿದಸ್ಟರಲ್ಲೇ ವಿಜ್ಞಾನ ಲೋಕದ ಗಂಭೀರವನ್ನು ಕ್ರೂರ ವಿಧಾತನು ತೆಕ್ಕೆಗೆಳೆದುಕೊಂಡನು. ಆಗಲೂ ಶ್ರೀಮಂತರಾಗಿ ಬಂಗಾರದ ಬಟ್ಟಲಲ್ಲಿ ಉಂಡು ವಿಲಾಸಮಯ ಜೀವನದಲ್ಲಿ ಬದುಕಬಹುದಾಗಿದ್ದ ಡಾ| ಸಾರಾಭಾಯಿಯವರು ಕಾಯಕವೇ ಕೈಲಾಸ, ದೇಶ ಸೇವೆಯೇ ಈಶಸೇವೆಯೆಂದು ಬಗೆದು ಅದಕ್ಕಾಗಿ ತನ್ನ ಬಾಳುವೆಯನ್ನು ಮುಡುಪಿಟ್ಟರು. ಈ ತರುಣ ವಿಜ್ಞಾನಿಯ ಸೇವೆಯ ಪರಿಚಯ ಬಹಳಷ್ಟು ಮೊದಲೇ ಭಾರತೀಯ ಜನಕೋಟಿಗಿತ್ತು. ಆದುದರಿಂದಲೇ ಅದು ೧೯೬೬ರಲ್ಲಿಯೇ ಅವರಿಗೆ 'ಪದ್ಮ ವಿಭೂಷಣ' ಪ್ರಶಸ್ತಿ ನೀಡಿ ಗೌರವಿಸಿತ್ತು. ದಿವಂಗತರ ಆತ್ಮವು ಚಿರಶಾಂತಿಯನ್ನನುಭವಿಸಲಿ, ಅವರ ಸ್ಥಾನ ತುಂಬಲು ಮತ್ತಷ್ಟು ಮೇಧಾವಿ ವಿಜ್ಞಾನಿಗಳನ್ನು ಭಾರತಾಂಬೆ ಪ್ರಸವಿಸಲಿ.

●●

ನುಂಗಳೂರಿನ ಐಸ್ ಪ್ಲಾಂಟಿಗೆ ರಾಜ್ಯಪಾಲರ ಭೇಟಿ

ರಾಜ್ಯಪಾಲ ಶ್ರೀ ಧರ್ಮವೀರರು ನುಂಗಳೂರಿನ ಸರ್ಕಾರಿ ಐಸ್ ಪ್ಲಾಂಟಿಗೆ ಭೇಟಿ ನೀಡಿ, ನೈಸೂರು ಸಮುದ್ರ ಆಹಾರ ಸಮುಗಳು ತಯಾರಕ ಹಾಗೂ ರಫ್ತುದಾರರ ಸಂಘದಿಂದ ರಕ್ಷಣಾ ನಿಧಿಗಾಗಿ 5000 ರೂ.ಗಳನ್ನು ಹಸ್ತಪರು.

ಸಂಘದ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ನುನವಿ ಒಪ್ಪಿಸಿನ ಬಳಿಕ ಶ್ರೀ ಪಿ.ವಿ. ಏತಾಳ್ರು ಮಾತಾಡಿದರು. ಕಾರ್ಯದರ್ಶಿ ಶ್ರೀ ಎಂ. ಜಯರಾಜ್ರವರು ರಾಜ್ಯಪಾಲರಿಗೆ ಸಸ್ಪ್ಲಾಂಟ್ ಹಾಗೂ ಶೈತ್ಯಾಗಾರಗಳನ್ನು ತೋರಿಸಿದರು ಆಂತ್ಯದಲ್ಲಿ ಶ್ರೀ ಎಸ್. ಕೆ. ಆನಿಯರು ವಂದಿಸಿದರು.

ರಕ್ಷಣಾ ನಿಧಿಗೆ ದ. ಕ. ಜಿಲ್ಲೆಯಲ್ಲಿ 1.2 ಲಕ್ಷ ರೂ. ಕೊಡುಗೆ

ರಾಜ್ಯಪಾಲ ಶ್ರೀ ಧರ್ಮವೀರರು ದಕ ಜಿಲ್ಲೆಯ ಉಡುಪಿ, ಕಾರ್ಕಳ, ಮತ್ತು ಮಂಗಳೂರಿಗೆ ಸಂದರ್ಶಿಸಿ ರಾಷ್ಟ್ರೀಯ ರಕ್ಷಣಾ ನಿಧಿಗೆ 1,20,000 ರೂ. ಗಳನ್ನು ಸ್ವೀಕರಿಸಿದರು. ಇದರಲ್ಲಿ ಉಡುಸಿಯ ನಾಗರಿಕರು ನೀಡಿದ 65,000, ಕಾರ್ಕಳದ ಭುವನೇಂದ್ರ ಕಾಲೇಜಿನ ನೀಡಿದ 5,000, ಕಾರ್ಕಳದ ಭಾರತ ಬೀಡಿ ವರ್ಕ್ಸ್‌ನ 10,000 ರೂ, ಮಂಗಳೂರಿನ ಗುಜರಾತ್ ಮಹಾಜನ್ ಸಂಸ್ಥೆಯ 27,000 ರೂ, ಸಿ.ವಿ.ಎಸ್ ಬೀಡಿ ವರ್ಕ್ಸ್‌ನ 10,000 ರೂ. ಮತ್ತು ಬಂಟ್ವಾಳ ತಾಲೂಕಿನ 2,000 ರೂ. ಗಳೂ ಸೇರಿವೆ. ಅಲ್ಲದೆ ನಿರಾಶ್ರಿತರಿಗಾಗಿ ಅವರು ಕಾರ್ಕಳದ ಭಾರತ್ ಬೀಡಿವರ್ಕ್ಸ್ ನೀಡಿದ 10ಲಕ್ಷ ಹಾಗೂ ಮಂಗಳೂರಿನ ಪಿ.ವಿ ಎಸ್. ಬೀಡೀ ಸ್ಟಾನನರತ್ತ 25 ಲಕ್ಷ ಬೀಡಿಗಳನ್ನೂ ಸ್ವೀಕರಿಸಿದರು.

ಕಿರಿಷ್ಣಿ ಮಹೋತ್ಸವ ಧರ್ಮ ಸಮ್ಮೇಳನ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಕಿರಿಷ್ಣಿ ಸುಹೋತ್ಸವದ ಅಂಗವಾಗಿ ತಾ. 28ರಂದು ಜರಗಿದ ಧರ್ಮ ಸಮ್ಮೇಳನದಲ್ಲಿ ಶ್ರೀ ಪೆರ್ಲ ಕೃಷ್ಣ ಭಟ್ಟರವರು 'ಚಾರಿತ್ರ ಮತ್ತ, ದರ್ಶನ ಹಾಗೂ ದೇವರ ಅಸ್ತಿತ್ವ'ದ ಕುರಿತು ಮಾತಾಡಿದರು. ಶ್ರೀ ಸುಬ್ರಹ್ಮಣ್ಯ ಮಠದ ಹಿರಿಯ ಶ್ರೀ ಶ್ರೀಗಳವರು ಅನುಗ್ರಹ ಭಾಷಣ ಮಾಡಿದರು

ದೇವಳದ ಅಸಿಸ್ಟೆಂಟ್ ಮೆನೇಜರ್ ಶ್ರೀ ಎ ಎಸ್. ಚಿದಾನಂದರವರು ಎರಡಿದಿನವನ್ನೂ ಸಮಾರಂಭಕ್ಕೆ ಬಂದ ಸಂದೇರಗಳನ್ನೂ ಓದಿದರು.

ಶ್ರೀ ಸ್ವಾಮಿ ಪರಿಪೂರ್ಣಾನಂದ ಭಾರತೀ ಶೇಷಾಚಾರ್ಯರು ತಮ್ಮ ಭಾಷಣದಲ್ಲಿ ಇಂದು ಎಲ್ಲರೂ ತಮ್ಮ ಶಕ್ತ್ಯಾನುಸಾರ ತ್ರಿಕರಣ ಶುದ್ಧಿಯಿಂದ ಧರ್ಮದಿಂದ ನಡೆಯುವುದಗತ್ಯವೆಂದು ತಿಳಿಸಿದರು.

ಆಂತ್ಯದಲ್ಲಿ ಆಡಳಿತ ಸಮಿತಿ ಸದಸ್ಯ ಶ್ರೀ ಜಿ. ಪುಟ್ಟು ಸ್ವಾಮಿಯವರು ಧನ್ಯವಾದ ಅರ್ಪಿಸಿದರು.

ಕುಷ್ಠರೋಗ ಚಿಕಿತ್ಸಾ ಕೇಂದ್ರಕ್ಕೆ ರಾಜ್ಯಪಾಲರ ಭೇಟಿ

ಹಿಂದ್ ಕುಷ್ಠರೋಗ ನಿವಾರಣಾ ಸಂಘವು ಮಂಗಳೂರಿಂದ 45 ಕಿ. ಮೀ. ದೂರದಲ್ಲಿ ಮುಪುಗಂಡಿಯಲ್ಲಿ ನಡೆಸುತ್ತಿರುವ ಕುಷ್ಠರೋಗ ಚಿಕಿತ್ಸೆ ಹಾಗೂ ಪುನರ್ವಸತಿ ಕೇಂದ್ರಕ್ಕೆ ರಾಜ್ಯಪಾಲ ಶ್ರೀ ಧರ್ಮವೀರರು ಸಂದರ್ಶನವಿತ್ತು ಕೇಂದ್ರಕ್ಕೆ ಸಹಾಯದ ಭರವಸೆಯಿತ್ತರು. ಈ ಸಂದರ್ಭದಲ್ಲಿ ಮಂಗಳೂರಿನ ಬಿಷಪರು ನೀಡಿದ 1000 ರೂ. ಚೆಕ್ಕನ್ನೂ ಸಂಘಕ್ಕೆ ಕೊಟ್ಟರು.

ರಾಜ್ಯಪಾಲರು ದೋಣಿಗಳಲ್ಲಿ ಸಹಿ ಇತ್ತುದಲ್ಲದೆ ಬಾವಿತೋಡಲು ಭೂಪೂಜೆ ಗೈದರು. ಕೋಳಿ ಸಾಕಣೆ ಕೇಂದ್ರದ ಸ್ಕಾರಂಭ ಮಾಡಿ ಕೇಂದ್ರವು ನಡೆಸುತ್ತಿರುವ ನ್ಯಸಾಯ ಕ್ಷೇತ್ರಕ್ಕೆ ಭೇಟಿ ಇತ್ತಿದ್ದರು.

ರಕ್ಷಣಾನಿಧಿಗೆ ಮಧ್ವರಾಜರ ಕೊಡುಗೆ

ಮೈಸೂರು ಕ್ಯಾನರ್ಸ್ ಫ್ರೀಜರ್ಸ್ ಮತ್ತು ಎಕ್ಸ್‌ಪೋರ್ಟರ್ಸ್ ಅಸೋಸಿಯೇಶನ್ ಪರವಾಗಿ ಆದರ ಅಧ್ಯಕ್ಷ ಶ್ರೀ ಎಂ ಮಧ್ವರಾಜರು ರಾಷ್ಟ್ರ ರಕ್ಷಣಾನಿಧಿಗೆ ತಾ. 28-12-71ರಂದು ರಾಜ್ಯಪಾಲ ಶ್ರೀ ಧರ್ಮವೀರರಿಗೆ 5001 ರೂಪಾಯಿ ಗಳನ್ನು ಸಮರ್ಪಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಮಧ್ವರಾಜರು ತನ್ನ ಕೊರೇನೆಟ್ ಕ್ಯಾನಿಂಗ್ ಕಂಪೆನಿಯಿಂದ, ಜವಾನರಿಗೆ 10,000 ರೂ. ಮೌಲ್ಯದ ಡಬ್ಬಿ ಮಾನನ್ನು ಕೊಡುವುದಾಗಿಯೂ ಸಾರಿದರು.

ತಾಳೆ ಮದ್ದಳೆಯ ಹೊಸ ಆವಿಷ್ಕಾರಕ್ಕೆ ಕಾರಣದ ಕಲಾಚಾರ್ಯನಿಗೆ ನಮನ

ನುಂಗಳೂರು ಕನ್ನಡ ಸಂಘದವರು ತಾ. 26ರಂದು ನಗರದ ಕೆ. ಎಂ ಸಿ. ಸಭಾ ಭವನದಲ್ಲಿ ವಿಶ್ರದ್ಧಿಸಿದ್ದ ತಾಳ ಮದ್ದಳೆಯ ಹೊಸ ಆವಿಷ್ಕಾರಕ್ಕೆ ಕಾರಣರಾದ ದಿ ಆರ್ಯಳ ಸುಬ್ರಾಯರಾಚಾರ್ಯ ಸಂಸ್ಮರಣ ಕಾರ್ಯಕ್ರಮದಲ್ಲಿ, ಅವರ ಭಾವಚಿತ್ರವನ್ನು ಯಕ್ಷಗಾನ ಕಲಾವಿದ ಶ್ರೀ ಕೆ. ಬಾಲಕೃಷ್ಣರಾಯರು ಅನಾವರಣಗೊಳಿಸಿದರು. ಅವರು ತನ್ನ ಮತ್ತು ಆಚಾರ್ಯರ ಬಾಂಧವ್ಯ ಸಾಪಚಕ್ಕಗಳನ್ನು ಸ್ಮರಿಸಿ ಯಕ್ಷಗಾನದ ಇಂದಿನ ಸ್ಥಿತಿಯನ್ನು ವಿವೇಚಿಸಿ ತೆಂಕು ಬಡಗೆಂಬ ವಾದ ಸರಿಯಲ್ಲವೆಂದೂ, ವಿಶ್ವವಿದ್ಯಾನಿಲಯದ ಮಟ್ಟಕ್ಕೆ ಯಕ್ಷಗಾನವನ್ನು ವಿಸ್ತರಿಲು ಪ್ರಯತ್ನಿಸ ಬೇಕೆಂದೂ ಕರೆಯಿತ್ತರು.

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿಶೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಶ್ರೀ ತೆಳ್ಳಂಜ ಗೋಪಾಲಕೃಷ್ಣ ಭಟ್ಟರು ಸಂಸ್ಮರಣ ಭಾಷಣ ಮಾಡಿದರು. ಕನ್ನಡ ಸಂಘದವರು ಕೊಡುಗೆಯೊಂಗಿತ್ತ ಶ್ರೀ ಆಚಾರ್ಯರ ಭಾವಚಿತ್ರವನ್ನು ನುಂಗಳಗಂಗೋತ್ರಿಯ' ನಿರ್ದೇಶಕ ಪ್ರೊ| ಎಸ್. ವಿ ಪರಮೇಶ್ವರ ಭಟ್ಟರು ಸ್ವೀಕರಿಸಿದರು.

ಆಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಎ ಬಾಲಕೃಷ್ಣ ಶೆಟ್ಟಿ ಪೊಳಲಿಯವರು ಧನ್ಯವಾದ ಅರ್ಪಿಸಿ 1971ನೇ ವರ್ಷದ ತಮ್ಮ ಕಾರ್ಯಕ್ರಮಗಳಿಗೆ ನೆರವಿತ್ತವರಿಗೆ ಕೃತಜ್ಞತೆ ಸಲ್ಲಿಸಿದರು.

ಗ್ರ್ಯಾಂಡ್ ಸ್ಯಾನ್ ಟೈಲರ್ಸ್ ಉದ್ಘಾಟನೆ

ಮಂಗಳೂರಿನ ಗಣಪತಿ ಟೆಂಪಲ್ ಸ್ಟ್ರೀಟ್‌ನಲ್ಲಿ ಹೊಸದಾಗಿ ತೆರೆದ ಹವಾನಿಯಂತ್ರಿತ 'ಗ್ರ್ಯಾಂಡ್ ವ್ಯಾರ್ ಟೈಲರ್ಸ್'ನ್ನು ಸಿಂಡಿಕೇಟ್ ಬೇಂಕಿನ ಕೈಗಾರಿಕಾ ಸಲಹೆಗಾರ ಶ್ರೀ ಬಿ. ಬಿ. ಶೆಟ್ಟಿಯವರು ಕಳೆದ ತಾ. 26ರಂದು ಉದ್ಘಾಟಿಸಿದರು.

ಪ್ರಾರಂಭದಲ್ಲಿ ಶ್ರೀ ಟಿ. ಸಿ. ಸುವರ್ಣರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿಸಿದರು. ಶ್ರೀ ಬಿ. ಬಿ. ಶೆಟ್ಟರು ಉದ್ಘಾಟನಾ ಭಾಷಣ ಮಾಡಿದ ಬಳಿಕ ಸಭಿಕರಲ್ಲಿ ಎಡ್ವಕೇಟ್ ಶ್ರೀ ಜೆ ರಾಮಚಂದ್ರ ಭಟ್ ಮತ್ತು ನಗರಸಭಾ ಸದಸ್ಯ ಶ್ರೀ ಎ ಶ್ರೀಧರ್‌ರವರು ಮಾತಾಡಿ ಸಂಸ್ಥೆಗೆ ಶುಭ ಕೋರಿದರು.

ವರ್ಷಾರಂಭದ ಸನ್ಮಾನ ಸಮಾರಂಭ

ವಾಡಿಕೆಯಂತೆ ಜನವರಿ ಒಂದರಂದು ಉಡುಪಿ ರೋಟರಿ ಕ್ಲಬ್ ಮತ್ತು ಸುಬಾಲ ಎಕೆಡಾಮಿ ಹಿಶ್ರ್ ಜನರಲ್ ಎಜ್ಯುಕೇಶನ್ ಇವರ ಜಂಟೀ ಆಶ್ರಯದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಜಿಲ್ಲೆಯ ನಾಲ್ವರು ಸನೂಜ ಸೇವಕರಾದ ಸುಂಬಯಿಯ ಡಾ| ಎ. ಪಿ ಪೈ, ಶಿವಮೊಗ್ಗ ಜಿಲ್ಲಾ ರಿ .ಮೊಸ್ಸಿಂಜೋರ್ ಎಜ್. ಗೊನ್ಸಾಲ್ವೀಸ್, ಮಂಗಳೂರಿನ ಶ್ರೀ ಎಜ್. ಕೆ. ತಿಂಗಳಾಯ, ಆಳಿಕೆಯ ಸುಡಿಯಾಲ ನಾರಾಯಣ ಭಟ್ ಇವರನ್ನು ಡಾ| ಟಿ ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಉಡುಪಿ ಕಲ್ಪನಾ ಥಿಯೇಟರಿನಲ್ಲಿ ಸನ್ಮಾನಿಸಲಾಯಿತು.

ಶ್ರೀ ಟಿ ರಮೇಶ ಪೈಗಳು ಸ್ವಾಗತ ಭಾಷಣ ಮಾಡಿ ಸೇನೆಯನ್ನು ಮಾನಸುನ ಕ್ರಮವನ್ನು ಬೆಳೆಸಿಕೊಳ್ಳಬೇಕೆಂದರು. ಅನಂತರ ಡಾ| ಎ. ಪಿ. ಪೈಯವರ ಪರಿಚಯ ಮಾಡಿ ಅವರ ಸೇವಾ ಸಿಸ್ಥೆ ಬಿಡಾರ್ಯವನ್ನು ಹೇಳಿದರು.

ಶ್ರೀ ಎ. ಜಿ ಆಶ್ರೆಯವರು ಶ್ರೀ ಗೊನ್ಸಾಲ್ವಿಸರ ಪರಿಚಯಮಾಡಿ ಅವರು ಶಿಕ್ಷಣ ರಂಗದಲ್ಲಿ ಸಲ್ಲಿಸಿದ ಸೇವೆಯನ್ನು ತಿಳಿಸಿದರು.

ಶ್ರೀ ಕೆ. ಕೆ. ಪೈಗಳು ಶ್ರೀ ಎಜ್. ಕೆ. ತಿಂಗಳಾಯರ ಪರಿಚಯ ಮಾಡುತ್ತ ಅವರು ರಾಜಕೀಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ವಿವರಿಸಿದರು.

ಶ್ರೀ ಪಿ. ಶ್ರೀಪತಿ ಆಚಾರ್ಯರು ಶ್ರೀ ಸುಡಿಯೂಲ ನಾರಾಯಣ ಭಟ್ಟರ ಪರಿಚಯ ಮಾಡುತ್ತ ಅವರು ಲೋಕ ಸೇವಾ ಸಂಬದ ಮೂಲಕ ಮಾಡುತ್ತಿರುವ ವಿವಿಧ ಕಾರ್ಯಗಳನ್ನು ತಿಳಿಸಿದರು. ಸನ್ಮಾನಿತರು ಉತ್ತರಿಸಿ ತಮ್ಮ ಅನುಭವಗಳನ್ನು ತಿಳಿಸಿದರು. ಅಧ್ಯಕ್ಷ ಡಾ| ಟಿ. ಎಂ. ಎ. ಪೈಗಳು ಗಂಧದ ಪೆಟ್ಟಿಗೆಯಲ್ಲಿ ಪ್ರಶಸ್ತಿ ಪತ್ರವನ್ನಿತ್ತು ಅತಿಥಿಗಳನ್ನು ಗೌರವಿಸಿ ಭಾಷಣ ಮಾಡುತ್ತ 1913ರಿಂದ ಆರಂಭಿಸಿದ ಈ ಉಪಕ್ರಮದ ಉದ್ದೇಶವನ್ನು ವಿವರಿಸಿ ಇಂದು ಸನ್ಮಾನಿತರಾದ ಜನಪ್ರಿಯ ವ್ಯಕ್ತಿಗಳ ಸೇವಾ ಕಾರ್ಯಗಳು ಇತರರಿಗೆ ಸ್ಪೂರ್ತಿದಾಯಕವೆಂದರು.

ಕೊನೆಯಲ್ಲಿ ರೋಟರಿ ಕ್ಲಬ್ ಅಧ್ಯಕ್ಷ ಡಾ| ಕೆ. ಮೋಹನದಾಸ ಪೈಗಳು ಕೃತಜ್ಞತೆ ಸಲ್ಲಿಸಿದರು

ಷಷ್ಟಿಪೂರ್ತಿ ಶಾಂತಿ ಸಮಾರಂಭ

ಮದರಾಸಿನ ಸುಪ್ರಸಿದ್ಧ ಹೋಟೆಲ್ 'ಸುಖ ನಿವಾಸ'ದ ಮೂಲಕ ಶ್ರೀ ಪಿ. ಮುಕ್ಕಣ್ಣಾಯರ ಷಷ್ಟಿಪೂರ್ತಿ ಶಾಂತಿ ಸಮಾರಂಭವು ತಾ. 10-12-1971ರಂದು ವಿಧಿಯುಕ್ತವಾಗಿಯೂ ವೈಭವಯುಕ್ತವಾಗಿಯೂ ಮದ್ರಾಸ್ ಮೈಲಾಪುರದ ಬೃಂದಾವನಂ ಸ್ಟೀಟನಲ್ಲಿರುವ ಆವರ ಸ್ವಗೃಹವಾದ 'ಕಮಲಾಲಯ'ದಲ್ಲಿ ಮೂರು ದಿನಗಳ ಕಾರ್ಯಕ್ರಮಗಳೊಂದಿಗೆ ಸಾಂಗವಾಗಿ ನೆರವೇರಿತು.

●

ಗೋಪಾಲನ ಬಾಲಲೀಲೆ

(ಎರಡನೇ ಪುಟದಿಂದ)

ಓಡಿ ಬಾ' ಶಬ್ದ ಅವಳ ಕಿವಿಗೆ ಬಿತ್ತು. ಹೊರಗೆ ಜಗಲಿಯಲ್ಲಿ ನಿಂತು ಏನು ಶಬ್ದ ವೆಂದು ಆಕೆ ದೃಷ್ಟಿಹಾಯಿಸಿದಳು.

ಅವರವರ ಜಗಲಿಯಲ್ಲಿ ನಿಂತುಕೊಂಡು ಗೋಪುವಿನ ಓರಗೆಯವರು ಆ ರೀತಿ ಜೋ ಬೈ ಹಾಕುತ್ತಿದ್ದರು. ಗೋಪು ವೇಗವಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಧಾ ವಿಸುತ್ತಿದ್ದನು. ಅವನನ್ನು ಹದಿಮೂರು ವರ್ಷ ವಯಸ್ಸಿನ ಹುಡುಗಿಯೊಬ್ಬಳು ಬೆನ್ನ ಟ್ಟುತ್ತಿದ್ದಳು.

"ಏನಾಯ್ತು?" ವ್ಯಥಾಪೂರ್ಣ ಸ್ವರ ದಿಂದ ತಾಯಿ ಕೇಳಿದಳು.

'ಮೂಮಿ, ಆ ಅವಿಚಾರಿ ಹುಡುಗಿ ತ ನ್ನ ಉದ್ದನೆಯ ಜಡೆಯ ಜಂಭ ಪ್ರದರ್ಶಿ ಸುತ್ತಿದ್ದಳು. ನಿಮ್ಮ ಹುಡುಗ ಅದನ್ನು ಹಿ ಡಿದೆಳೆದು ಓಡಿ ಬಿಟ್ಟ...ನೋಡಿ..ನೋಡಿ... ಹೇಗೆ ಓಡುತ್ತಿದ್ದಾನೆ! ಅವನನ್ನು ಹಿಡಿಯ ವದು ಅವಳ ಹಣೆಯಲ್ಲಿ ಬರೆದಿಲ್ಲ, 'ಗೋ ಪುವಿನಾಟವನ್ನು ಮೆಚ್ಚಿದ್ದ ಹುಡುಗನೊ ಬ್ಬನು ತಾಯಿಗೆ ತಿಳಿಯಪಡಿಸಿದನು.

ಅವನನ್ನು ಬೆನ್ನಟ್ಟಿಕೊಂಡು ಹೋಗ ಲು ಹುಡುಗಿಗೆ ಸಾಧ್ಯವಾಗಲಿಲ್ಲ. ಅವಳು ಅಳುತ್ತಾ ತನ್ನ ಮನೆಗೆ ಹೋದಳು.

ಗೆದ್ದ ಗೋಪುವಿಗೆ ಗೆಳೆಯರೆಲ್ಲರೂ ಜ ಯಕಾರ ಹಾಕಿದರು. ಅದರಿಂದ ಅವನು ಬ ಹಳ ಉಬ್ಬಿ ಹೋಗಿದ್ದ. ಇದರಿಂದಾಗಿ ಅವ ನು ಹಿಂತಿರುಗಿದಾಗ ತಾಯಿ ಕೊಟ್ಟ ಪೆಟ್ಟು ಕೂಡಾ ಅಷ್ಟೇನೂ ಮನಸ್ಸಿಗೆ ಹಿಂಸೆಕೊಡಲಿಲ್ಲ.

ಇನ್ನೊಂದು ದಿನ ಸಾಯಂಕಾಲ, ಗೋ ಪು ಅವಸರದಿಂದ ಮೆಟ್ಟಲುಗಳನ್ನೇರುತ್ತ ತಾಯಿಯಿದ್ದಲ್ಲಿಗೆ ಧಾವಿಸುತ್ತ ಬಂದನು ಮತ್ತು ನಡುಗುವ ಸ್ವರದಿಂದ, 'ಬಾಗಿಲು ಹಾಕಮ್ಮಾ, ಬೇಗ' ಎಂದು ಹೇಳಿದನು.

"ಯಾಕೆ?" ತಾಯಿ ಕೇಳಿದಳು.

ಗೋಪು ಉತ್ತರಿಸಲಿಲ್ಲ. ಅವನೇ ಬಾಗಿ ಲು ಹಾಕಿ, ಚಿಳಕ ಹಾಕುತ್ತಿದ್ದ. ಅಷ್ಟರಲ್ಲಿ ಅದು ದೊಡ್ಡಪ್ಪಟಿತು. ಬಾಗಿಲು ತೆರೆದು ಆರಡಿ ಎತ್ತರದ, ಹದಿನೆಂಟು ವರ್ಷ ವಯ ಸ್ಸಿನ ಕಾಲೇಜು ವಿದ್ಯಾರ್ಥಿಯು ಕೋಪ ದಿಂದ ಒಳಗೆ ಬಂದನು. ಚಾಣಾಕ್ಷತನದಿಂ ದ ಗೋಪು ತನ್ನ ತಾಯಿಯ ಹಿಂದುಗಡೆ ಅವಿತುಕೊಡನು,

"ನೋಡಿ, ಮೂಮಿ, ಇದೀಗ ನಿಮ್ಮ ಹು ಡುಗ ನನ್ನ ಸೈಕಲಿನ ಚಕ್ರದ ಗಾಳಿ ತೆಗೆದು ಬಿಟ್ಟಿದ್ದಾನೆ. ಅವನು ನನ್ನ ಸೈಕಲಿಗೆ ಗಾಳಿ ತುಂಬಿಸಿಕೊಡಬೇಕು. ಇಲ್ಲದಿದ್ದಲ್ಲಿ ನನ್ನ ಎದುರೇ ಅವನಿಗೆ ನೀವು ಪೆಟ್ಟುಕೊಡ ಬೇಕು."

ವಿದ್ಯಾರ್ಥಿ ಹೇಳಿದ ಮೊದಲ ಕೆಲಸ ಮಾಡಿಸಲು ಅವಳಿಂದ ಸಾಧ್ಯವಾಗಲಿಲ್ಲ; ಎರಡನೆಯ ಕೆಲಸವನ್ನು ಆಕೆ ಮಾಡಿದಳು.

ಹೀಗೆ ಗೋಪುವಿನ ಬಾಲಲೀಲೆ ಮುಂದ ರಿಯುತ್ತಿತ್ತು. ಒಂದೇ ಒಂದು ದಿನವಾದ ರೂ ಗೋಪು ಕೆಂಡುಬರಲಿಲ್ಲವಾದಲ್ಲಿ ಬಡಾ ವಣೆಯ ಹೆಂಗಸರು ಗೋಪುವಿನ ಮನೆಗೆ ಬಂದು ಅವನ ಅಮ್ಮನ ಹತ್ತಿರ, "ನಿಮ್ಮ ಚಿಕ್ಕಪ್ಪೋರನಿಗೆ ಮೈಚೆನ್ನಾಗಿಲ್ಲವೇನೆಂ"ದು ಕೇಳುತ್ತಿದ್ದರು ಅವನ ಓರಗೆಯವರಂತೂ ಅವನು ಹೊರಗೆ ಕಂಡುಬರದಿದ್ದಲ್ಲಿ ಹುಡು ಕಿಕೊಂಡು ಬರುತ್ತಿದ್ದರು. ಅವನನ್ನು ತ ಮ್ಮ ಸೈಕಲಿನಲ್ಲಿ ಕೂತುಕೊಳ್ಳಿಸಿ ಕರೆದು ಕೊಂಡು ಹೋಗುತ್ತಿದ್ದರು. ಹಿಂದಕ್ಕೆ ಬರು ವಾಗ ಅವನ ಜೀಲದಲ್ಲಿ ತುಂಬಾ ಮಿತಾ ಯಿ-ಚಾಕ್ಲೇಟುಗಳಿರುತ್ತಿದ್ದುವು. ಕೃಷ್ಣ ಅವನ ತಾಯಿಯ ಬಳಿ ಬರುವ ದೂರು ಗಳು ನಿಂತುವು. ಅಂದರೆ ಅವನು ಸುಧಾರ ಣೆಗೊಳಗಾದನೆಂದಲ್ಲ. ಆಪೆಲ್ಲವೂ ಆ ಬಡಾ ವಣೆಗೆ ಪರಿಚಿತವಾದುವು. ಹೊಸದೇನನ್ನು ಅವನು ಕಂಡುಹಿಡಿದಿಲ್ಲವೆಂಬುದೇ ಅವರ ಕೊರಗು.

ಂ ಂ ಂ

ಅವರು ನಿವೇಶನಕ್ಕೆ ಬಂದ ಎರಡು ವ ರ್ಷಗಳಲ್ಲೇ ಗೋಪುವಿನ ತಂದೆಗೆ ವರ್ಗ ವಾಯಿತು. "ನಾವು ಹೋಗುವದರಿಂದ ಬ ಡಾವಣೆಯವರಿಗೆ ಪೋರನ ಕಾಟ ತಪ್ಪಿ ತೆಂದು ತಾಯಿ ತಿಳಿದುಕೊಂಡಳು. ತಾವು ಹೋಗುವ ವಿಷಯ ಎಲ್ಲರಿಗೂ ತಿಳಿಸಿ ಬರೋಣವೆಂದು ಅವಳು ಹೊರಟಳು.

"ನಿಮ್ಮ ಮಗನ ಬಾಲಲೀಲೆ ಇನ್ನು ಮೇಲೆ ನಮಗಿಲ್ಲವೆಂದು ಒಬ್ಬಳು ತನ್ನ ಕಷ್ಟವನ್ನು ತಿಳಿಸಿದಳು.

"ನೋಡಿ, ಮೇಜಿನ ಮೇಲಿರುವ ಕೆಂಪು ಲೋಟ, ದಿನಾಲೂ ಸಂಜೆ ಪೋರ ಇಲ್ಲಿಗೆ ಬಂದು ಅದರಲ್ಲೇ ನೀರು ಕೊಡಬೇಕೆಂದು ಹಟಹಿಡಿಯುತ್ತಿದ್ದ. ಅದಕ್ಕೆಂದೇ ಆ ಲೋ ಟಕ್ಕೆ ಪೋರನ ಲೋಟವೆಂದು ಹೆಸರಿಟ್ಟಿ ದ್ದೇನೆ." ಇನ್ನೊಬಾಕೆ ಹೇಳಿದಳು.

"ಪೂಜೆಯ ಸಮಯದಲ್ಲಿ ಇನ್ನು ಅವನು ನಮ್ಮೊಟ್ಟಿಗಿರುವದಲ್ಲ. ಅವನು ಹೇಗೆ ಹಾ ಡುತ್ತಾನೆ ಗೊತ್ತೇನಮ್ಮ? ನೊನ್ನೆ ನಮ್ಮ ಹುಡುಗಿಗೆ ಒಂದು ಹಾಡು ಹೇಳಿ ಕೊಡು ತ್ತಿದ್ದೆ. ರಾಗ ಅವಳಿಗೆ ಸರಿಯಾಗಿ ಬರುತ್ತಿ ರಲಿಲ್ಲ. ಮೂರಾಯ ಅವಿಲ್ಲಿದ್ದನೋ, ಏನೋ? ಓಡಿಬಂದು ಸರಾಗವಾಗಿ ಹಾಡಿ ಓಡಿ ಹೋಗಿಬಿಟ್ಟಾಂದ್ರೆ....

ಇದು ನಮ್ಮ ಭಾರತ

ಒಂದು ಏಟಿಗೆ ಬೆಲೆಯೇನು?

ಗುರುಪೂರ್ಣಿಮೆಯ ದಿನ. ನಾನೊ ಬ್ಬ ಮಿತ್ರನೊಡಗೂಡಿ ಕಾಲೇಜ ಪ್ರಿನ್ಸಿ ಪಾಲರ ಮನೆಗೆ ಹೋಗಿದ್ದೆ. ಅವರು ದೇವ ರ ಪೂಜೆಯಲ್ಲಿ ನಿರತರಾಗಿದ್ದರು. ಮೂಲೆ ಯೊಂದನ್ನು ಪೂರ್ತಿಯ ಕುತ್ತಿಗೆಗೆ ಹಾ ಕಿ ಅಲಂಕರಿಸಿದರು. ಇನ್ನೊಂದನ್ನು ಗೋ ಡೆಯ ಬಳಿಯದ್ದ ಮಸುಕು ಭಾವಚಿತ್ರ ಕ್ಕೆ ಹಾಕಿದರು. ಆ ಚಿತ್ರದ ವ್ಯಕ್ತಿಯ ಕೈ ಯಲ್ಲಿ ಊರುಗೋಲಿತ್ತು. ಕಣ್ಣುಗಳು ಕಳಿ ಯಿಂದ ತುಂಬಿದ್ದವು, ಮೊಸೆದ್ದು ತೋ ರುತಿತ್ತು. ಪ್ರಿನ್ಸಿಪಾಲರು ಆ ಚಿತ್ರವನ್ನೇ ಧ್ಯಾನದಿಂದ ನೋಡಿದರು, ಅದನ್ನು ಶ್ರದ್ಧಾ ಪೂರ್ವಕ ನಮಸ್ಕರಿಸಿದರು. ಪೂಜೆಯ ಬ ಳಿಕ ಪ್ರಿನ್ಸಿಪಾಲರು ಉಡುಗೆ ಬದಲಾಯಿ ಸಿ ನಮ್ಮನ್ನು ಕೂಡಿಕೊಂಡರು. ನಾನು ಆ ಚಿತ್ರದ ಬಗ್ಗೆ ಪ್ರಶ್ನಿಸಿದಾಗ ಅವರಂದ ರು- ಅದು ನನ್ನ ಗುರುಗಳ ಭಾವಚಿತ್ರ. ಪ್ರತಿದಿನವೂ ನಾನದಕ್ಕೆ ಮೂಲೆಯೇರಿಸಿ, ನಮಸ್ಕರಿಸುವ ಪರಿಪಾಠವಿಟ್ಟುಕೊಂಡಿ ದ್ದೇನೆ. ಅವರನ್ನು ನಾನು ಮರೆಯುವುದೇ ಸಾಧ್ಯವಿಲ್ಲ.

ನಾನು ಅಂತಹ ಅವಿಸ್ಮರಣೀಯ ಪ್ರಾ ತಃಸ್ಮರಣೀಯ ಗುರುವಿನ ಬಗ್ಗೆ ಮರಳಿ ಪ್ರಶ್ನಿಸಿದೆ. ಆಗ ಪ್ರಿನ್ಸಿಪಾಲರು ಹೇಳಿದರು.

ನಾನು ತಾಯ್ತಂದೆಗಳ ಮೋಹದ ಮ ಗ. ಅವರು ಶ್ರೀಮಂತರಾದುದರಿಂದ ಅದ ರೆಲ್ಲ ಪ್ರಭಾವ ನನ್ನ ಮೇಲೆ ಅಚ್ಚಳಿಯದೆ ಬಿದ್ದಿತ್ತು. ದುಷ್ಟ ಜನರ ಸಹವಾಸವಾ ಯ್ತು. ಓದು ಬರಹಗಳಲ್ಲಿ ಅನಾಸಕ್ತಿ- ದ್ವೇಷ ಮೂಡಿತು. ತಂದೆಗೂ ಕಲಿಕೆಯಲ್ಲಿ ಶ್ರದ್ಧೆಯಿರಲಿಲ್ಲ. ಆದರೆ, ತಾಯಿ ಮಾತ್ರ ಓದಿ ಬುದ್ಧಿವಂತನಾಗಬೇಕೆಂದು ಪದೇ ಪದೇ ಹೇಳುತಿದ್ದಳು. ನಾನು ಅವಳ ಮಾ ತುಗಳನ್ನು ಕಿವಿಗೆ ಹಾಕಿಕೊಳ್ಳುತ್ತಲೇ ಇರ ಲಿಲ್ಲ. ಶಾಲೆಯಲ್ಲಿ ಗುಲ್ಲೆಬ್ಬಿಸತೊಡಗಿದೆ. ಉಪಾಧ್ಯಾಯರನ್ನು ಗೇಲಿ ಮಾಡತೊಡಗಿ ದೆ; ತರಗತಿಯಲ್ಲಿ ಅವರನ್ನು ಪೀಡಿಸಿದೆ ಮನೆತನಕ ದೂರುಗಳು ಬರತೊಡಗಿ ದುವು.

ನಿರುಪಾಯರಾದ ತಂದೆ ಮನೆಯ ಲ್ಲೇ ಕಲಿಸಲು ಗುರುಗಳನ್ನು ಗೊತ್ತು ಮಾಡಿದರು. ನಾನು ಮನೆಗೆ ಬಂದು ಗುರುಗಳನ್ನು ಬೈದು ಭಂಗಿಸಿ ಓಡಿ ಸತೊಡಗಿದೆ. ಇದು ತಂದೆಗೂ ತಿಳಿ ಯಿತು. ನಾನು ಅವರ ಅಂಕೆಗೆ ಮೀರಿ ಬೆಳೆದಿದ್ದೆ. ಅವರಿಗೆ ಬಹಳ ಚಿಂತೆಗಿ ಟ್ಟುಕೊಂಡಿತು ಮನಶ್ಶಾಸ್ತ್ರ ಬಲ್ಲವರು; ಉ ತ್ತಮ ಗುರುಗಳ ನೇರವನ್ನವರು ಪಡೆದರು; ಆದರೆ ಪರಿಣಾಮ ಎಳ್ಳಷ್ಟೂ ಆಗಲಿಲ್ಲ. ಪ್ರ ಶ್ನೆ ಒತ್ತಟ್ಟು-ಉತ್ತರ ಒತ್ತಟ್ಟು ಆಗಿ ಹೋಗುತ್ತಿತ್ತು. ಎಲ್ಲರೂ ನನ್ನಿಂದ ಸೋತ ರು; ಜಿಧನಾ ಎಲ್ಲರನ್ನೂ ನಾನು ಉದ್ದೇಶ ಪೂರ್ವಕವಾಗಿಯೇ ಸೋಲಿಸಿದೆ. ಕೊನೆ ಗೂ ಒಬ್ಬ ಗುರು ಬಂದರು. ಅವರನ್ನು ಗೇ ಲಿ ಮಾಡುತ್ತಾ ನಾನೆಂದೆ-'ಮೇಸ್ಟ್ರೇ, ನೀ ವು ನನಗೆ ಪಾಠ ಹೇಳಲು ಬಂದಿರಾ?'

ಅವರು ಮೂತಾಡಲಿಲ್ಲ. ಆಗ ನಾನು ಮತ್ತಷ್ಟು ವಿನೋದವಾಗಿ ಹೇಳಿದೆ-'ಮೇ ಸ್ಟ್ರೇ, ಬಂದ ಹಾಗೆ ಹಿಂದೆ ಹೋಗಿ. ನನಗೆ ನೀವೇನು ಪಾಠ ಹೆಳುತ್ತೀರಿ. ನಿಮ್ಮ್ಯಂಥ ವರು ನೂರು ಜನ ಬಂದ್ಮುಹೋಗಿದ್ದಾರೆ.' ನಾನು ಘೊಳ್ಳನೆ ನಕ್ಕು ಬಿಟ್ಟೆ. ಗುರು ಗಳು ಏನೂ ಹೇಳಲಿಲ್ಲ. ನನ್ನನ್ನೇ ನೋ ಡುತ್ತ ನಿಂತು ಬಿಟ್ಟರು. ನನಗೆ ಮತ್ತ ಷ್ಟು ಕನಸಿನೆಳೆಯಿನಿಸಿತು. 'ಏನು ನೀವು ನನಗೆ ಪಾಠ ಹೇಳಿಯೇ ಬಿಡುತ್ತೀರಾ? ಸರಿ ನೋಡೋಣ ಹೇಗಿವೇಂತ ಶು. ರು ಮಾಡಿಬಿಡಿ" ನಾನು ಉಬ್ಬಿಪಾಠ ಮಾಡುತ್ತಲೇ ಹೇಳಿದೆ. ಇನ್ನೂ ನಾನೇ ನೋ ಹೇಳಲು ಬಾಯ್ತೆರೆದಿದ್ದೆ ಮಾ ತ್ರ. ಗುರುಗಳ ಕೈ ನನ್ನ ಕೆನ್ನೆಯ ಮೇ ಲೆ ರಪ್ಪೆಂದಿತು. ಅವರ ಕೆಂಗಣ್ಣು ನನ್ನಿಂ ದ ನೂರಾರಾಯ್ತು. ಜೀವನದಲ್ಲಿ ಮೊದಲ ಬಾರಿಗೆ ಏಟು ತಿಂದ ನಾನು ಹಿಂಗು ತಿಂದ ಮಂಗನಾದೆ. ಆದರೊಡನೆ ನನ್ನ ಕಿವಿದೆರೆಗೆ ಕಠೋರ ಧ್ವನಿ ಕೇಳಿತು -ಸರಿಯೂವ ರೀತಿಯಿಂದ ಕಲಿಯುತ್ತೀ ಯೂ, ಜೀವನವಿಡಿ ಬಿಕ್ಕೆ ಬೇಡುತ್ತೀಯೂ?

ಕೆನ್ನೆಗೆ ಹೊಡೆದ ಗುದ್ದುಗಳಿಗೆ ನನ್ನ ಭ ವಿಷ್ಯದ ಚಿಂತೆಯಿತ್ತು. ನನ್ನ ಜೀವನ ಬದ ಲಾಯ್ತು. ಆ ನನ್ನ ಗುರುಗಳ ನೆನಪು ನನ ಗಿಂದೂ ಬರುತ್ತಿದೆ. ನಿಸ್ವಾರ್ಥರಾಗಿ, ತಾ ಯ್ತಂದೆಯರ ನೋವನ್ನು ಕಡೆಗಣಿಸಿ, ನನ್ನ ಬದುಕು ಸುಧಾರಿಸಲು ನನಗೆ ಏಟು ನೀಡಿದ ಆ ಪುಣ್ಯ ಗುರುಗಳು ದೊರೆಯದೆ ಇರುತಿದ್ದರೆ, ನನಗೆ ಇಂದು ಕವಡೆಯ ಬೆ ಲೆಯೂ ಇರುತ್ತಿರಲಿಲ್ಲ. ಆ ಏಟಿನ ಬೆಲೆ ಯಿಂದಲೇ ನಾನು ಇಷ್ಟೊಂದು ಬೆಲೆಬಾ ಳುವ ಮನುಷ್ಯನಾಗಿದ್ದೇನೆ. ಆ ಏಟಿನ ಬೆ ಲೆಯನ್ನು ನಾನೆಂತು ಮರೆಯಲಿ?

(ಕೃಪೆ. ಕಲ್ಯಾಣ)

"ನಾನು ಯಾವಾಗಲೂ ಒಂದು ಬರ್ಸಿ ತುಂಡನ್ನು ಅವನಿಗಾಗಿ ತೆಗೆದಿಡುತ್ತಿದ್ದೆ.

"ಏನೇ ಅನ್ನಿ ಗೋಪಿ ಇಲ್ಲದ ಈ ಕಾ ಲೋನಿ ಇನ್ನು ಮೇಲೆ ನಿರ್ಜೀವ."

(ಮೂಲ: ರುಕ್ಮಿಣಿ ಪಾರ್ಥಸಾರಥಿ
ಕನ್ನಡಕ್ಕೆ: ಶಿವಶಂಕರ.)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸಜಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ. ಸಕಲ ವಿಧದ ತಿಂಡಿತಿನಸು ಪಾಕೀಯಗಳ ಉಪಾಹಾರಕ್ಕೆ ಆಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

NAVAYUGA 6-1-1972

Registered with the Registrar of News Papers for India under No. R. N. 3546/'57

REGD. No B. G. 176
LICENCE No. 33
Licensed to Post without Prepayment

ಶ್ರೀ ಸಾಮಾನ್ಯನ ಸಂಸತ್ತಿನಲ್ಲಿ

ಭುಟ್ಟೋನಿಗೆ ಒಂದು ಪತ್ರ

ಎಲೈ ಪೆದ್ದಂ ಭುಟ್ಟೋ, ನಾನು ಬಡ ಭಾರತದ ಶ್ರೀಸಾಮಾನ್ಯ ನಿನಗೆ ತಿಳಿಸುವುದೇನೆಂದರೆ.

ಕಾಲವು ಸದಾ ನಿನಗೇ ಅನುಕೂಲವಾಗಿದೆಯೆಂದು ಭಾವಿಸದೆ ಇರು. ಈ ವಂಗೆ ಪಾಕಿಸ್ತಾನದ ಬಿಟ್ಟಿ ಕೂಳಿಗಾಗಿ ಅಲೆವಾಡುತ್ತಿದ್ದ ಜುಲ್ಫಿಕರಾಲಿ ಭುಟ್ಟೋನಾದ ನೀನಿಂದು ಇಸ್ಲಮಾಬಾದಿನ ಸರ್ವಾಧಿಕಾರಿಯಾಗಿದ್ದೀಯೆ? ನಿನ್ನನು ಪೀಸಲ್ಸ್ ಪವ್ವ ವಲ್ಲವೆ? ಪಾಕಿಸ್ತಾನದಲ್ಲಿ ಉದಿದಿರುವ ಐದು ಕೋಟಿ ಜನರ ಪ್ರಜಾ ಪ್ರಭುತ್ವವನ್ನು ಸ್ಥಾಪಿಸುವ ಹವಣಿಕೆ ನಿನ್ನದಿರಬಹುದು. ಆದರೆ ಜೋಕೆ. ನೀನೆಂದಿಗೂ ನಮ್ಮತ್ತ ಕಣ್ಣೆತ್ತಿ ನೋಡಬೇಡ!

ಎಲ್ಲಾ ತಂತ್ರವೂ ನಿನ್ನ ರಕ್ಷಣಿಗಾಟವೆಂದು ನಾನು ಬಲ್ಲೆ. ಈ ಹಿಂದೆ ನಮ್ಮ ಭಾರತದ ಮೇಲೆ ದಂಡೆತ್ತಿ ಬರಲು ಆಯೂಬ್‌ಖಾನನಿಗೆ ನೀನೇ ಪ್ರೇರಕನಲ್ಲವೆ! ತುಂಬಿದ ಕೆಧೆಯಲ್ಲಿ ಭಾರತವ ನಾಮಜಗಳಿಂಮೊ ನೀನು ಫಿಕ್ಕಾಸಿಸಿದ್ದೆ. ಮೊನ್ನೆ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಈ ವಿಚಾರವ ಕುರಿತು ಬಿಚ್ಚು ಮನಸ್ಸಿನಿಂದ ನಿನ್ನೊಮೆ ಹೇಳಿಬಾಗಲು ಅತ್ತಿವಸಲು ನಿನಗೆ ನಾಲಗೆಯಿತ್ತೆನು! ಮೊಗವನ ನಾಮು ನೀನು, ಕಚ್ಚುವ ನಾಮು ಬಾರತದ್ದೆಂದು ನಿನಗನಿವಾದ್ದು ಮಾತ್ರವಲ್ಲ, ಭಾರತದ ನಾಮಗಳಿಂದ ಕಣ್ಣಿಸಿಕೊಂಡೇ ಬಿಟ್ಟಿಯಲ್ಲ!

ಕಾಶ್ಮೀರಕ್ಕಾಗಿ, ಸುಂದರ ಶ್ರೀನಗರಕ್ಕಾಗಿ 1965ರಲ್ಲಿ ನಮ್ಮ ದೇಶದ ಮೇಲೆ ಆಕ್ರಮಣ ಮಾಡಿ ಭಾರತೀಯ ವೀರರೋಧರಿಂದ ಬೆಟ್ಟುತಿಂದು ನಾಕಾಯಿತೆನು? ನಿಷ್ಪಾಪಿಗಳ ರಕ್ತದಲ್ಲಿ ಸಚೇಲ ಸ್ನಾನ ಮಾಡಿಯೂ ನಿನಗೆ ತೃಪ್ತಿಯಾಗಲಿಲ್ಲವೆ? ಆತಿ ಆಸೆ ಗತಿನಾಶವೆಂಬುದನ್ನು ಕೇಳಿ ಬಲ್ಲೆಯಪ್ಪೇ? ನಿನ್ನ ದುರ್ವ್ಯಾಪಾರಕ್ಕೆ ಆ ವಿಶಾಲ ಇಸ್ಲಾಮಾಬಾದ್ ಸಾಕಾಗದೆ ಮಾತೃಮೂರ್ತಿ ಭಾರತವನ್ನೇ ಕಬಳಿಸಲು ಬಂದೆಯಾ ಛಡವಾ! ಈ ತಾಯಿ ಜೋಕೇನು. ಜಂಧ! ನಿನಗೆಂದಾದರೂ ಇವರಲ್ಲಿ ಗೆಲುವು ಸಿಕ್ಕಿತೇನು!

ಶೇ. 98 ಜಿಲ್ಲೆಲಿ ಮತ ಪಡೆದ ಮುಜಿಬುರ್ ರೆಹಮೋನ್‌ರು ಸುವ್ಯವಸ್ಥಿತ ಸರಕಾರ ಸ್ಥಾಪಿಸದಂತೆ ನೀನೇ ಬೆಂಬಲ ಕೊಟ್ಟರುವೆ! ನೀನು ಮತ್ತು ಯೂಕ್ಯಾಬಾನ್ ಎಷ್ಟು ಕೊಳಗ ರಕ್ತ ಕುಡಿದಿರಿ? ಅಲ್ಲಿ ಬಿದ್ದ ಹೆಣಗಳು ನಿಮಗೆ ನೂರು ವರ್ಷ ತಿನ್ನಲು ಸಾಕೇನು? ಆಂ? ನೀವು ಹೆಣ ತಿನ್ನುವುದಿಲ್ಲವೆ? ಮತ್ತೇಕೆ ಅಷ್ಟು ಮಕ್ಕಳನ್ನು, ಹೆಂಗಸರನ್ನು, ವೃದ್ಧರನ್ನು ಕಡಿದುಕೊಂದಿರಿ? ಮನೆಗಳಿಗೇಕೆ ಬೆಂಕಿ ಹಚ್ಚಿದಿರಿ? ಭುಟ್ಟೋ, ನಿನಗೆ ತಂಗಿ, ಹೆಂಡತಿ-ಯಾರೂ ಇಲ್ಲವೇ? ಆ ನಿಷ್ಪಾಪಿ ಮಾನಿನಿಯರನ್ನು ಸಾಕಿನ ಯೋಧರು ಹಾಳುಗೆಡವುವಾಗ ದೊಡಾ ಬೃದಿಂದ, 'ನನ್ನ ಹೆಂಡತಿ-ತಂಗಿಯರೊಂದಿಗೂ ಅತ್ಯಾಚಾರ ಮಾಡಿ' ಎಂದು ಯೋಧರನ್ನು ಆಹ್ವಾನಿಸುತ್ತಿದ್ದರೆ ಛಲಾ! ಅಂದು ಬಿಡುತ್ತಿದೆ ಭುಟ್ಟೋ, ನಿನ್ನನ್ನು.

ಪಾಲಿಯೂದ ಗೋದಾಮುಗಳಲ್ಲಿ ಪ್ರಜರ ಹೆಣಗಳನ್ನೇ ತುಂಬಿಸಿಡು ಅವರ ಮೂಳೆಗಳಿಂದ ಬಂಗಲೆ ಕಟ್ಟಿಸು. ತಲೆಯೇಡೆಗಳಲ್ಲಿ ಹೆಂಡ ಕುಡಿ. ಆ ಸ್ವಾತಂತ್ರ್ಯಯೋಧರನ್ನು ನರಯಜ್ಞ ಮಾಡಿಮದಕ್ಕಾಗಿ ಇತಿಹಾಸದಲ್ಲಿ ನೀನೊಬ್ಬ ಚೆಂಗೀಸ್‌ಖಾನನೇ ಆದೆಯೆನ್ನು. ಆಂ? ಇದರಲ್ಲಿ ನಿನ್ನಕೈವಾಡ ವಿಲ್ಲವೆನ್ನುತ್ತೀಯೇನು? ಹಾಗಾದರೆ ಯೂಹ್ಯಾನನ್ನು ತಡೆಯಬಾರದಿತ್ತೇನು! ಇದೆಲ್ಲವೂ ನಿನ್ನದೇ ಗೊಂಬೆಯಾಟವಯ್ಯ!

ಭಾರತದ ಮೇಲೆ ಮರಳಿ ಯುದ್ಧ ಹೂಡಲು ನಿನ್ನ ಆಟವೆಂದು ನಾ ಬಲ್ಲೆ. ಸಾವಿರ ನತ್ನವಾದರೂ ಯುದ್ಧ ಮಾಡುವೆನೆಂದುಹೇಳಿದ ಯೂಹ್ಯಾನಿಗೆ ಹದಿನೂರೇ ದಿನದಲ್ಲಿ ಸಾಕಾಯಿತೇ? ಹೌದೇ ಮಹರಾಯ, ಆ ಮೇಂಠಕ ಅಷ್ಟೂ ನಿನ್ನ ಬೆಂಬಲದಲ್ಲಿತ್ತಲ್ಲ, ಬಾಂಗ್ಲಾದೇಶದ ಅಸಂಖ್ಯಾತ ಜನರ ರಕ್ತ ಪಾತಕ್ಕೆ ಶಸ್ತ್ರಾಸ್ತ್ರ ಕೊಟ್ಟಿತು, ಭಾರತ ವಿರುದ್ಧ ಯುದ್ಧಕ್ಕೆ ಹರಿದುಂಬಿಸಿತು, ಆದರೇನು. ನಮ್ಮ ಯೋಧರಲ್ಲಿ ಪೆಟ್ಟು ತಿಂದು, ಸೋತು, ನಿನ್ನ ತುಪಾಕಿಗಳು ಶರಣಾಗತವಾದರು. ನೀವು ಹೇಡಿಗಳು. "ಜೋರೆ ಬನ್ನಿಟ್ಟ್- ಓಡಿ ಓಡಿ" ಎಂಬ ಗಾದೆ ನಿಮ್ಮ ಪಾ. ನಾವಾವರೋ ಸಾಯುವ ವರೆಗೂ ಮಾತೃಭೂಮಿಗಾಗಿ ಹೋರಾಡುವವರೇ.

ಭುಟ್ಟೋ,ಕನಸು ಕಾಣುವುದರಲ್ಲಿ ನೀನು ನಿಸ್ಸೀಮ. ಆಹಾಹಾ! ಪುನಃ ಹೋರಾಡುತ್ತೀಯಂತೆ, ಬಂಗ್ಲಾ ದೇಶವನ್ನೂ ಮುರಿಯುತ್ತೀಯಂತೆ! ನಿಜವೇ?

ಇಕೋ ನಿನಗೆ ಬೇಡ, ಒತ್ತಡದ ಕಾವಿನಿಂದ ನನ್ನ ರಕ್ತ ಕುದಿಯುತ್ತಿದೆ. ಅದು ನಿನ್ನ ಮೈಗೆ ತಗುಲಿದರೆ ಸುಟ್ಟುಹೋದಿಯೀ! ನಮ್ಮ ಬಸಿಯುಸಿರೇ ನಿನಗೆ ಮೆಗಟನ್ ಬಾಂಬೆನಿಸಿ ಛಿದ್ರ ಛಿದ್ರವಾಗಿ ಮಾಡೀತು. ನೀನು ನಿರಾಶ್ರಿತರನ್ನಾಗಿ ಮಾಡಿದ ಬಂಗ್ಲಾದೇಶದ ಜನರಿಗಾಗಿ ಭಾರತೀಯರಿಲ್ಲರೂ ರಕ್ತವನ್ನು ಧಾರೆಯೆರೆದು ಪೋಷಿಸಿದ್ದೇವೆ. ಎಷ್ಟೋ ಸ್ತ್ರೀಯರ ಮಾಂಗಲ್ಯಗಳನ್ನು ಮುಗುತಿಗಳನ್ನು ಕೂಡ ಅರ್ಪಿಸಿದ್ದೇವೆ. ನಮ್ಮೊಂದು ಹಿಡಿ ಶಾಪನೇ ನಿನ್ನನ್ನು ಭಸ್ಮೀಭೂತಗೊಳಿಸಲು ಸಾಕು.

ಹಿಂಗತ್ತಿಯಿಂದ ಎಂದಿಗೂ ಇರಿಯಬೇಡ, ಭುಟ್ಟೋ! ದ್ರೋಹಿಯೂಗಬೇಡ. ಮಾತೃಭೂಮಿಯಲ್ಲಿ ನಮಗಿರುವ ನಿಷ್ಠೆಯೇ ನಮ್ಮ ತೋಳ್ಬಲವೆಂದು ತಿಳಿ. ಸ್ನೇಹ ಸೌಹಾರ್ದಗಳಿಂದಿದ್ದರೆ ನಿನಗಿದೋ ಸ್ನೇಹ ಹಸ್ತ. ನೀನು ಕೇವಲ ಆರು ಕೋಟಿಯಿದ್ದೀಯೊ! ನಾವು ಹಾಗಲ್ಲ ಐವತ್ತಾರು ಕೋಟಿಯಿದ್ದೇವೆ ಇಂದಿನ ಮಗು ಕೂಡ ಏಕ್ಯಮತ್ಯದಿಂದ ಕಾದಾಡಿ ನಿನ್ನನ್ನು ಸದೆ ಬಡಿಯುತ್ತದೆ. ಯುದ್ಧಕ್ಕೆಂದಿಗೂ ಬರಬೇಡ.

ಮಗುವೇ, ಯುದ್ಧವೆಂದರೆ ಮಕ್ಕಳಾಟವಲ್ಲ! ನಿನ್ನಲ್ಲಿ ಶಾಂತಿ ಸುಭದ್ರತೆ ಒಕ್ಕಟ್ಟಲ್ಲ ಬರೀ ಟ್ಯಾಂಕು ವಿಮಾನಗಳಿಂದೇನು ಬಂತು? ನಮ್ಮಲ್ಲಿದೆ ನಿಷ್ಠೆ ರಾಷ್ಟ್ರ ಪ್ರಜ್ಞೆ, ಧೀರ ವ್ಯಕ್ತಿತ್ವ, ರಾಷ್ಟ್ರ ಮಾತೆಗಾಗಿ ಜೋರಾಡುವ, ಬಲಿದಾನವಾಗುವ ಹುತಾತ್ಮತೆ ನಾವೆಂದಿಗೂ ಭಾರತವನ್ನು ನಿನ್ನ ಕೈಗೊಪ್ಪಿಸಲಾರೆವು. ಇಂದು ನೇಗಿಲ ಕುಳ ಕೈಯ್ಯಲ್ಲಿ ಹಿಡಿದ ರೈತ ನಾನು. ಆ ನೇಗಿಲ ಕುಳವೇ ನಿನ್ನ ತಲೆ ಬಡಿಯಲು ನಾಳೆಗೆ ಒಂದು ಶಸ್ತ್ರವಾದೀತು.

ತಿರುಗಿ ಬೀಳಬೇಡ, ಯುದ್ಧ ನೂಡ ಬೇಡ. ಅಮೆರಿಕವೆಂಬ ಎಲುಬನ್ನಗಿಯುತ್ತ ಮೂಲೆಯಲ್ಲಿ ಮುದುಡಿ ಬಿದ್ದಿರು. ನಿನ್ನಂಥ ಕತ್ತೆಗಳಿಗೆ ರಾಜಗದ್ದಿಗೆ ಬಂದರೆ ಇದೇ ಆಗುವುದು! ಹಾಳು ನಾಯಿಗೆ ಚಂದ್ರ ಲೋಕ ಸಿಕ್ಕಿದಂತೆ, ನಿನಗೆ ಭಾರತ ಸಿಕ್ಕೀತೆ?

ಇಂತು ಶ್ರೀ ಸಾಮಾನ್ಯ

—ಪ ರಾಮಕೃಷ್ಣ ಶಾಸ್ತ್ರಿ

ಶಕ್ತಿವಾಹಿನಿ!

ಲೇಖಕರು:

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್.

ಮುಕ್ತಿವಾಹಿನಿಯ ಸಂಘಟನೆ ಮತ್ತು ಶ್ರದ್ಧೆಯಿಂದಾಗಿ ಒಂದು ದೇಶವೇ ರಾಕ್ಷಸೀ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಲು ಸಹಾಯಕವಾಯಿತು. ನಮ್ಮಲ್ಲಿ ಸಂಘಟನೆ ಮತ್ತು ಶ್ರದ್ಧೆ ಇದ್ದರೆ, ನಾವು ಏನನ್ನೂ ಸಾಧಿಸಬಹುದು ಎಂತಹ ಆಸಾಧ್ಯವನ್ನೂ ಸಾಧ್ಯವನ್ನಾಗಿ ಮಾರ್ಪಡಿಸಬಹುದು. ದೇಶದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಸಂಘಟನೆಯಿಂದೊಡಗೂಡಿದ ಶಕ್ತಿವಾಹಿನಿಯು ಪ್ರತಿಯೊಂದು ಗ್ರಾಮದಲ್ಲಿಯೂ ಪ್ರವಹಿಸುತ್ತಿರಬೇಕು!

ಇಂತಹ ಶಕ್ತಿವಾಹಿನಿಯ ಸಂಘಟನೆಯಿಂದ ಗ್ರಾಮೀಣ ಅಭಿವೃದ್ಧಿಯ ಎಂತಹ ಮಹತ್ತರವಾದ ಕೆಲಸವನ್ನೂ ಸುಲಭವಾಗಿ ಪೂರ್ಣಗೊಳಿಸಬಹುದೆಂಬುದಕ್ಕೆ ನಿದರ್ಶನವಾಗಿ, ಇಂತಹ ಒಂದು ಅಪೂರ್ವ ಸಂಘಟನೆಯನ್ನು ನಾನು ಕಂಡೆ! ಇಂತಹ ಗ್ರಾಮೀಣ ಶಕ್ತಿಯ ಸಂಘಟನೆಯನ್ನು ಶಕ್ತಿವಾಹಿನಿ, ಎಂದರೆ ಸೂತ್ರ ಅದು ಅನ್ವರ್ಥನಾಗಬಹುದು.

ದಿನಾಂಕ 18—12—71ರಂದು ನಾನು ಬಾಳಿಲ, ವಿದ್ಯಾಬೋಧಿನಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರ ಕರೆಗೆ ಓಗೊಟ್ಟು ಆ ದಿನ ಸಂಜೆಗೆ ಅಲ್ಲಿಗೆ ತಲುಪಿದೆ. ಅವರು ನನ್ನನ್ನು ಶಾಲಾ ವಾರ್ಷಿಕೋತ್ಸವದ ಮನರಂಜನೆಯ ಸಾಹಿತ್ಯಕ ಸಹಕಾರಕ್ಕಾಗಿ ಕರೆಸಿಕೊಂಡಿದ್ದರು. ಆದರೆ ನಾನು ಆ ದಿನ ರಾತ್ರಿ ಅಲ್ಲೊಂದು ಅಪೂರ್ವವಾದ ಸಂಘಟನೆಯ ಶಕ್ತಿವಾಹಿನಿಯನ್ನು ಕಂಡು ಆನಂದಗೊಳ್ಳುವಂತಾಯಿತು.

ಅಲ್ಲಿಯ ಗ್ರಾಮಸ್ಥರು ಮತ್ತು ಶಾಲಾ ಆಡಳಿತೆಯವರು ಆ ಹೈಸ್ಕೂಲಿನ ವಿಚಾರದಲ್ಲಿ ವಹಿಸಿರುವ ಆಸಕ್ತಿ, ಮುಖ್ಯೋಪಾಧ್ಯಾಯರು, ಅಧ್ಯಾಪಕ ವರ್ಗ ಹಾಗೂ ಇತರ ನೌಕರರು ಶ್ರದ್ಧೆ ಮತ್ತು ಸಂಘಟನೆಯಿಂದ ಮುಂದುವರಿಯುತ್ತ ಆ ತಾಲೆಯ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುತ್ತಿರುವ ರೀತಿ, ಇದೆಲ್ಲವೂ ನೋಡಿಯೇ ತಿಳಿಯತಕ್ಕದ್ದಾಗಿದೆ. ಅಂದು ರಾತ್ರಿ ಅಲ್ಲಿ ಒಂದು ಗುಡ್ಡೆಯನ್ನು ಅಗೆದು ಬಹು ವಿಶಾಲವಾದ ಆಟದ ಬಯಲನ್ನು ನಿರ್ಮಾಣ ಮಾಡುವ ಕಾರ್ಯ ಗ್ರಾಮಸ್ಥರ ಶ್ರಮದಾನದ ಮೂಲಕ ಸಾಗಿತ್ತು. ಸುಮಾರು ಎಂಟು ಹತ್ತು ಸಾವಿರ ದಷ್ಟು ಖರ್ಚು ಮಟ್ಟಬಹುದಾದ ಈ ಅಗಾಧವಾದ ಕೆಲಸವನ್ನು ಶ್ರಮದಾನದ ಮೂಲಕವೇ ಆ ಗ್ರಾಮದ ಪ್ರತಿಯೊಂದು ಪಕ್ಷ ಪಂಗಡವನ್ನೂ ಹಂತ ಹಂತವಾಗಿ ಸಾಗಿಸುತ್ತಿದ್ದಾರೆ! ಮಾಗದ ಕೆಲಸ ನೂಡುವ ಹಾಮರು ಕೆಲಸ ಮಾಡುವವರೂ ಸಹ ತಂತಮ್ಮ ಮೇಸ್ತ್ರಿಗಳೊಡನೆ ರಾತ್ರಿ ಬಂದು ಇಲ್ಲಿ ಶ್ರಮದಾನ ನೂಡುತ್ತಿರುವ ಈ ಆದರ್ಶ ತುಂಬ ಅನುಕರಣೀಯವಾಗಿದೆ. ಪ್ರತಿಯೊಂದು ಗ್ರಾಮದವರೂ ಸಹ ಬಾಳಿಲ ಗ್ರಾಮದವರಂತೆಯೇ ಸಂಘಟನೆಯಿಂದ ಮುಂದುವರಿದರೆ ಗ್ರಾಮೂಭಿವೃದ್ಧಿಯ ಯಾವ ಕಾರ್ಯವೂ ಸಹ ಬಾಕಿ ಉಳಿಯದು ಸ್ವತಂತ್ರ ಭಾರತದ ಜನರು ತಮ್ಮ ಶಕ್ತಿ ಶ್ರದ್ಧೆಗಳನ್ನು ಈ ಪರಿಯ ಶಕ್ತಿವಾಹಿನಿಯಾಗಿ ಉಪಯೋಗಿಸಿದರೆ ಆಗ ಸೂತ್ರ ನಮ್ಮ ಗ್ರಾಮಾಂತರ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಯೂಗಬಹುದು.

ಅಂದು ರಾತ್ರಿ ಆ ಗುಡ್ಡದ ಮಣ್ಣು ಅಗೆದು ಹೊತ್ತು ಆ ಮೈದಾನಿನ ಕೆಲಸ ನರ್ವಹಿಸಲು ಸುಮಾರು ಆರುನೂತ್ತು ಮಂದಿ, ಬಾಲಕ ಬಾಲಕಿಯರಿಂದ ಹಿಡಿದು ಮುದುಕರವರೆಗೂ ಅಲ್ಲಿ ಸೇರಿದ್ದರು. ಗ್ರಾಮೀಣ ಕೆಲಸಗಾರರೊಡನೆ ಅಲ್ಲಿಯ ವಿದ್ಯಾರ್ಥಿಮಿಗಳಾದ, ಪದವೀಧರ ಯುವಕರೂ ಪದವೀಧರೆಯರಾದ ಯುವತಿಯರೂ, ಸಹ ಎಲ್ಲರಂತೆ ಮಣ್ಣು ಅಗೆದು ಹೊರುವ ಆ ದೃಶ್ಯ ಅಪೂರ್ವನಾಗಿತ್ತು! ರಾತ್ರಿ 8 ಗಂಟೆಯಿಂದ ಸುಮಾರು ಒಂದು ಗಂಟೆ ರಾತ್ರಿಯ ತನಕ ಈ ಅಪೂರ್ವವಾದ ಶ್ರಮದಾನದ ವೈಭವ ನಡೆಯಿತು ಅದರೆಡೆಯಲ್ಲೇ ಬೆರ್ಜರಿಯೂದ ಟೀಪಾರ್ಟಿ ಇತ್ತು ಮತ್ತೆ ಊಟವೂ ಸೊಗಸಾಗಿತ್ತು. ಇಲ್ಲಿಯ ಶ್ರಮದಾನದಲ್ಲಿ ಭಾಗವಹಿಸಿದವರಲ್ಲಿ ದೊಡ್ಡ ದೊಡ್ಡ ಶ್ರೀಮಂತರೂ ಸಹ ಕೂಡಿಕೊಂಡು ಎಷ್ಟೂರಂತೆ ಕೆಲಸಮಾಡುತ್ತಿದ್ದರು! ನನ್ನಂತೆಯೇ ಬೇರೆ ಕಾರ್ಯಾರ್ಥವಾಗಿ ಅಲ್ಲಿಗೆ ಹೋಗಿದ್ದ ವರೂ ಸಹ ಆ ಸಂಘಟನೆಯ ಶಕ್ತಿವಾಹಿನಿಯ ಸ್ಫೂರ್ತಿಯನ್ನುಕಂಡು ತಮ್ಮನ್ನು ತಾವೇ ಮರೆತು ಆ ಶ್ರಮದಾನದ ಯಜ್ಞದಲ್ಲಿ ಭಾಗವಹಿಸಿದ್ದರು. ಪ್ರತಿಯೊಂದು ಗ್ರಾಮದಲ್ಲಿಯೂ ಇಂತಹ ಅದರ್ಶ ದೊಸಗೊಳ್ಳಲಿ! ನಮ್ಮ ಗ್ರಾಮಗಳು ಸ್ವಾವಲಂಬನೆಯ ಶಕ್ತಿಯ ಕೇಂದ್ರಗಳಾಗಲಿ! ವಿದ್ಯೆ ಬೆಳಗಲಿ!

●●

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಕೊಲಿಟಿಯಲ್ಲಿ, ಸ್ಯಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂರಾ ಕೆರೆಟ್ ತೂಕವಲ್ಲಿ
ಮುಂದಾಗಿ ನಮ್ಮಿಂದ ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಸಂಪುಟ ೫೧
ಸಂಚಿಕೆ ೧೯

Vol. 51
No. 19

ಉಡುಪಿ, 13—1—1972

ಚಾರುಚಯನ

ಕಪ್ಪುಗೆರೆಯೆಳೆದ ಮಹಾ ವ್ಯಕ್ತಿಗಳು

ಬಂಗ್ಲಾ ವಿಮೋಚನೆಯಿಂದ ಪ್ರಧಾನಿ ಶ್ರೀಮತಿ ಗಾಂಧಿಯವರ ಕೀರ್ತಿಕ್ಕೆ ಸವಿಲುಗರಿಯೇರಿದ್ದು ನಿಜ. ಆದರೆ, ಅದರ ಜತೆಯಲ್ಲೇ ದೇಶದ ಗೌರವವು ಬೆಳೆದದ್ದೂ ನಿಜ. ಏನೋ ಮಾಡ ಹೋಗಿ : ಮತ್ತೇನೋ ತಂದುಕೊಂಡರು ಎಂಬ ಮಾತು ಆಕೆಗಾಗಲೀ ಆಕೆಯು ಪ್ರಧಾನಿಯಾಗಿರುವ ನಮ್ಮ ದೇಶಕ್ಕಾಗಲೀ ತಗುಲಲಿಲ್ಲ. ಪಾಕಿಸ್ತಾನಕ್ಕೇ ಈ ಮಾತು ಹೆಚ್ಚಾಗಿ ಅನ್ವಯಿಸಿತು. ಬಂಗ್ಲಾವನ್ನು ಸಪೆಬಡೆಯುತ್ತೀವೆ; ಭಾರತನನ್ನು ಸುಟ್ಟು ಬೂದಿ ಮಾಡುತ್ತೀವೆ, ಸಾವಿರ ವರ್ಷ ಬೇಕಾದರೂ ಸಮರ ಮುಂದುವರಿಸುತ್ತೀವೆಯೆಂದು ಜೆಹಾದ್‌ಹಾಡು ತಿದ್ದ ಯಾಹ್ಯಾಖಾನರು ಪತನಗೊಂಡರು; ಭುಟ್ಟೊ ಕೈಕಾಲು ಬಿಡತೊಡಗಿದ್ದಾರೆ.

ಸಮರ ವಿರಾಮವೇನೋ ಆಯ್ತು; ಮುಂದಿನ ಮಾತುಕತೆಗಳಿಗೆ ನಾಂದಿಯೂಗ ಬೇಕಷ್ಟೇ. ಈ ಸಂಬಂಧದಲ್ಲಿ ಯಾವ ಪ್ರಗತಿಯೂ ಸಾಧಿತವಾಗಲಿಲ್ಲ. ಸದ್ಯ ಆಗುವಂತಹ ಲಕ್ಷಣಗಳೂ ಅಗೋಚರವೇ. ಹೊಸ ತಾಗಿ ನಾಗರಿಕ ಸರ್ವಾಧಿಕಾರಿಯೂಗಿರುವ ಭುಟ್ಟೊರಿಗೆ ತನ್ನ ದೇಶದ ಜನರನ್ನು ಮೆಚ್ಚಿಸಿಕೊಳ್ಳುವುದೇ ಪೇಚಿಗೆ ತಂದುಕೊಂಡಿದೆ. ಪಾಕ್‌ಜನತೆ ಬಂಗ್ಲಾವನ್ನು ಕಳೆದುಕೊಂಡು ಗಾಯಗೊಂಡ ಸಿಂಹವಾಗಿದ್ದಾರೆ; ಅವರು ಭುಟ್ಟೋರನ್ನೂ ಹಂದು ತಿನ್ನ ಬಯಸುತ್ತಾರೆ. ಆದುದರಿಂದ ಸಂಧಾನದ ಮಾತುಕತೆಗಳಿಗೆ ಬರಲು ಅವರಿಗೆ ಬಿಡುವಿಲ್ಲ. ಜಾತಿ-ಮತಗಳ ಕಂದಾಚಾರಗಳನ್ನೂ ಪ್ರಗತಿಯ ವಿಧಾನಗಳನ್ನೂ ಜ್ಯಾರಿಗೊಳಿಸಿ ಭುಟ್ಟೊ ತನ್ನ ವಿಶ್ವಾಸವನ್ನು ಮರುಸ್ಥಾಪಿಸಲು ಪ್ರಯತ್ನಿಸುತಿದ್ದಾರೆ.

ಭದ್ರತಾ ಸಮಿತಿಯು ಕಟ್ಟುನಿಟ್ಟಿನ ಸಮರ ವಿರಾಮ ಮತ್ತು ಕಾಶ್ಮೀರದಲ್ಲಿರುವ 'ಸಮರ ವಿರಾಮ ರೇಖೆ' (ಹಳೆಯ ೪೨ ಯನ್ನು ಮನ್ನಿಸುವ ಕರೆ ನೀಡಿದೆ. ಅಂದರೆ ಆಜಾದ ಕಾಶ್ಮೀರದಲ್ಲಿ ತಾನು ವಶಪಡಿಸಿಕೊಂಡಿರುವ ನೆಲವನ್ನು ಭಾರತ ಬಿಟ್ಟು ಕೊಡಬೇಕಾಗುತ್ತದೆ. ೧೯೪೮ರಷ್ಟು ಹಿಂದೆಯೇ ಪಾಕಿಸ್ತಾನವು ತಾನು ಮಾಡಿರುವ ಆಕ್ರಮಣವನ್ನು ಇನ್ನೂ ತೆರವುಮಾಡಿಲ್ಲದಿರುವಾಗ, ಭಾರತವು ಈಗ ಭದ್ರತಾ ಸಮಿತಿಯ ಗೊತ್ತುವಳಿಯನ್ನು ಮನ್ನಿಸಬೇಕೆ? ಇದನ್ನೇ ಪ್ರಧಾನಿಯವರು ಹೇಳಿದ್ದಾರೆ—ಕದನ ವಿರಾಮ ರೇಖೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಅಗತ್ಯವಾದೀತು. ಸಮರೋತ್ತರ ಮಾತುಕತೆಗಳಿಗೆ ಭಾರತವು ಸದಾ ಸಿದ್ಧ; ಆದರೆ, ಇದರಲ್ಲಿ ಅನ್ಯರಾಷ್ಟ್ರಗಳ ಪ್ರವೇಶ ಸಲ್ಲದು. ಭಾರತಕ್ಕೆ ತಾತ್ಕಾಲಿಕ ಸಮರ ವಿರಾಮವಾಗಲೀ ಶಾಂತಿಯೂಗಲೀ ಅಗತ್ಯವಿಲ್ಲ. ನಾವು ಬಯಸುವುದು ಶಾಶ್ವತ ಶಾಂತಿಯನ್ನು. ಈಗ ಸ್ಥಾಪಿತವಾದ ಶಾಂತಿಯು ಮುಂದಿನ ಯುದ್ಧಕ್ಕೆ ತಯಾರಿಯ ಕಾಲವೆನಿಸುವುದಾದರೆ ಅದರಿಂದೇನು ಲಾಭ?

ಭಾರತಕ್ಕೆ ತನ್ನದಲ್ಲದ ಒಂದಂಗುಲ ನೆಲದ ಮೇಲೆಯೂ ಲೋಭವಿಲ್ಲ. ಜಮ್ಮು ಮತ್ತು ಕಾಶ್ಮೀರವು ಭಾರತದ ಒಂದು ಅವಿಭಾಜ್ಯ ಅಂಗ, ಬಂಗ್ಲಾದೇಶವು ಸ್ವತಂತ್ರ ಸಾರ್ವಭೌಮ ರಾಷ್ಟ್ರ. ಇದಕ್ಕೆ ಇತಿಹಾಸವೇ ಸಾಕ್ಷಿ. ಇದನ್ನು ಪಾಕಿಸ್ತಾನವು ಮೊದಲು ಒಪ್ಪಬೇಕು. ಇತಿಹಾಸವನ್ನು ಅಲಕ್ಷಿಸಿ ಸಂಧಾನದ ಮಾತಾಡಿದರೆ, ಅದು ನಿಷ್ಪ್ರಯೋಜಕ. ಪಾಕ್ ರಾಷ್ಟ್ರಪತಿ, ಜುಲ್‌ಫಿಕರ್ ಅಲಿ ಭುಟ್ಟೊ ತಾಷ್ಕೆಂಟನ್ನು ಸದತಲದಲ್ಲಿ ಮೆಟ್ಟಿ ಬಿಟ್ಟಂತೆ ದಿಟ್ಟತನದಿಂದ ವರ್ತಿಸಿದರೆ, ಆದರಿಂದ ಮಾತುಕತೆ ಸಫಲವಾಗುವುದಿಲ್ಲ.

ಂ ಂ ಂ

'ಎಲ್ಲವನ್ನೂ ಸರಿ ಮಾಡ-ತ್ತೇನೆ; ನನಗೆ ತುಸು ಸಮಯಾವಕಾಶ ನೀಡಿ' ಎಂದು ಅಧಿಕಾರ ಗ್ರಹಣದ ಮರುಕ್ಷಣದಲ್ಲೇ ಪಾಕ್ ಜನತೆಯನ್ನು ಅಂಗಲಾಚಿದ ಭುಟ್ಟೊ ಮಹಾಶಯರು ಪಾಕ್ ಉದ್ಧಾರದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗುತ್ತದೆ. ಅವರೀದೆಸೆಯಲ್ಲಿ ಮುಂದಡಿಯಿಟ್ಟರೂ ಹೌದು. ದೇಶದ ಆರ್ಥ ವ್ಯವಸ್ಥೆಯನ್ನು ನಿಯಂತ್ರಿಸುವ ಅಧಿಕೃತ ಜಾಲದಂತಿದ್ದ ಮಿನೆತನಗಳಿಗೆ ಬಹಿಷ್ಕಾರ ಹಾಕಿದರು; ಸವಾಬರಿಗೆ ಸಲ್ಲುತ್ತಿದ್ದ ಆಶನಾರ್ಥಕ್ಕೆ ಮುಟ್ಟುಗೋಲು ಹಾಕಿದರು; ಇಪ್ಪತ್ತು ಉನ್ನಮಗಳನ್ನು ರಾಷ್ಟ್ರೀಕರಿಸಿದರು. ಇನ್ನೂ ಹತ್ತಾರು ಕ್ರಾಂತಿಕಾರಿ ಯೋಜನೆಗಳನ್ನವರು ಯೋಚಿಸುತ್ತಿರ ಬಹುದು. ಇದು ಅವರ ಒಂದು ಮುಖ, ದೇಶ ಕಟ್ಟುವ ಸಾಹಸದ ರಕ್ಕೆ. ಆದರೆ, ಅವರ ಜತೆಯಲ್ಲೇ ಅವರ ಇನ್ನೊಂದು ದುಸ್ಸಾಹಸ ಪ್ರದರ್ಶನವು ಮುಖವೂ ವೈಗ್ಗೋಚರವಾಗುತ್ತಿದೆ. ಬಂಗ್ಲಾದೇಶವನ್ನು ಇನ್ನೊಮ್ಮೆ ಪಾಕ್ ಸಾಮ್ರಾಜ್ಯದಲ್ಲಿ ಸೇರಿಸಿಕೊಳ್ಳುವ ಇರಾದೆ ಅಗ್ಗದ ಜನಪ್ರಿಯತೆಯನ್ನು ಮೂತ್ರ ಅವರಿಗೆ ಗಳಿಸಿಕೊಟ್ಟೀತು; ಉಭಯ ಗೌರವಯುತವಾದ ಒಡಂಬಡಿಕೆಯನ್ನು ಸಾಧಿಸಲು ಸವದೆ ಹಲಿಗೂ ಬರಲು ತಾವು ಸಿದ್ಧರೆಂದು ಹೇಳುವ ಅವರು ತಾಷ್ಕೆಂಟ್ ಒಡಂಬಡಿಕೆಯು ತನ್ನ ದೇಶಕ್ಕೆ ಹಾನಿ ತಂದೊಡ್ಡಿದೆಯೆಂಬುದನ್ನು ಅವರು ಮತೆಯ ಬಾರದು ಪಾಕ್ ಜನತೆಯನ್ನು ಅಜ್ಞಾನದ ಕಂದಾಚಾರದ ಕಗ್ಗತ್ತಲೆಯಲ್ಲಿ ಅದುಮಿ ಹಿಡಿಯುವುದನ್ನು ಬಿಟ್ಟು ಜ್ಞಾನದ ಪ್ರಗತಿಯ ಬೆಳಕಿನಲ್ಲಿ ಉಸಿರಾಡುವಂತೆ ಮಾಡಿದರೆ ಮಾತ್ರ ಪಾಕಿಗೆ ಭವಿಷ್ಯವಿದೆ.

ಂ ಂ ಂ

ಬಂಗಾಳಕೊಲ್ಲಿಯಲ್ಲಿ ಯೂಕಾಗಿಯೋ ಪ್ರವೇಶಿಸಿ ಇಲ್ಲದ ಸಲ್ಲದ ಊಹಾಪೋಹಗಳಿಗೆ ಕಾರಣವಾದ ಅಮೆರಿಕೆಯ ಏಳನೆಯ ನೌಕಾ ಪಡೆ ಮತ್ತೆ ವಿಯತನಾಮಕ್ಕೆ ಹೊರಟು ಹೋಯ್ತು. ಕ್ರಿಸ್‌ಮಸ್ ಸಂಬಂಧದ ಸಮರ ವಿರಾಮವನ್ನು ಉಲ್ಲಂಘಿಸಿದ ಅಮೆರಿಕನ್ ಸೇನೆಗಳು ಅಲ್ಲಿ ಉತ್ತರ ವಿಯತನಾಮಿನಿಂದ ಪ್ರಬಲ ಪೆಟ್ಟು ತಿಂದವು. ಇದರಿಂದ ಚೇತರಿಸಿಕೊಳ್ಳಲು ಅಧ್ಯಕ್ಷ ನಿಕ್ಸನ್ನರಿಗೆ ಎಂಟಿರಪ್ಪೈಸೇ ಬೇಕಾಯಿತೇನೋ! ಬಂಗ್ಲಾವನ್ನೂ ಮತ್ತೊಂದು ವಿಯತನಾಮವನ್ನಾಗಿಯೋ ಲಾವೋಸ್ ನ್ನಾಗಿಯೋ ಮಾಡಿ ಬಿಡುವ ಅವರ ಆಶ್ರಯ ಚಿಗುರುವುದಕ್ಕೆ ಕೊಡಲೇ ಮುರುಟಿ ಹೋಯಿತು.

ಇದೇ ಫೆಬ್ರವರಿಯಲ್ಲಿ ಅಧ್ಯಕ್ಷ ನಿಕ್ಸನ್ನರು ಛೀಕಿಂಗಿಗೆ ಭೇಟಿ ನೀಡಲಿದ್ದಾರೆ. ಈ ಸಂಬಂಧದಲ್ಲಿ ಅಮೆರಿಕನ್ ಪ್ರತಿನಿಧಿ ಮಂಡಲಿಯೊಂದು ಇಷ್ಟರಲೇ ಪೀಕಿಂಗ್ ಮುಟ್ಟಿದೆ. ಇದು ಅಧ್ಯಕ್ಷ ಭೇಟಿಯ ಕಾರ್ಯಕ್ರಮವನ್ನು ರೂಪಿಸುತ್ತದೆ. ಪೀಕಿಂಗ್ ಸರಕಾರವನ್ನು, ಅಮೆರಿಕೆಯನ್ನೂ ಮೊನ್ನೆ ಮೊಡಿರುವುದಿಲ್ಲ. ಜಗತ್ತಿನ ನಾಲ್ಕರಲ್ಲಿ ಒಂದು ವರ್ಷದೊದನೆ ಸಂಪರ್ಕ ಕಡಿದುಕೊಳ್ಳಲು ಒಪ್ಪದ ನಿಕ್ಸನ್ ಆ ಜನತೆಯ ಸರಕಾರಕ್ಕೆ ಮನ್ನಣೆ ನೀಡಲು ಮುಂದಾಗಲಿಲ್ಲ; ಸದ್ಯ ಅಂತಹ ಆಲೋಚನೆಯೂ ಇಲ್ಲ. ತಾನು ಮನ್ನಣೆ ನೀಡದಿರುವ ಸರಕಾರವೊಂದರ ಅತಿಥಿಯೂಗಿ ಅಮೆರಿಕನ್ ಅಧ್ಯಕ್ಷರು ಹೋಗುವುದು ತುಂಬ ಸ್ವಾರಸ್ಯವಾದದ್ದು. ಈ ಸಂಗತಿಯನ್ನು ನಿಕ್ಸನ್ ಬಹಿರಂಗವಾಗಿಯೇ ಹೇಳಿದ್ದಾರೆ. 'ಪೀಕಿಂಗ್‌ನೊಡನೆ ಸ್ನೇಹ ಮಾತ್ರ ನಮ್ಮ ಉದ್ದೇಶ್ಯ. ಆ ಸರಕಾರಕ್ಕೆ ಅಧಿಕೃತ ಮನ್ನಣೆ ನೀಡುವ ಪ್ರಶ್ನೆ ನಮ್ಮ ಮುಂದಿಲ್ಲ.'

ಅಮೆರಿಕೆ ಚಿಗತ್ತಿನ ಬೃಹತ್ ಸುಸಂಪನ್ನ ದೇಶ. ಅದರ ವರ್ತನೆ ವಿಚಿತ್ರ ತೋರಬಹುದು. ವಿಶ್ವ ಸಂಸ್ಥೆಯಲ್ಲಿಯೂ ಅದು ಕೆಂಪು ಚೀನಾಕ್ಕೆ ಪ್ರವೇಶ ದೊರೆಯಲು ಈ ಬಾರಿ ತನ್ನ ಸಮ್ಮತಿ ಸೂಚಿಸಿತು—ಆದೇ ಚೀನಾ ಸರಕಾರಕ್ಕೆ ತಾನು ಮನ್ನಣೆ ನೀಡಲಿಲ್ಲ. ಆದರೆ, ಅಮೆರಿಕೆ ಮನ್ನಣೆ ಕೊಡಲಿಲ್ಲವೆಂದ ಮಾತ್ರಕ್ಕೆ ಕೆಂಪು ಚೀನಾದ ಸರಕಾರದ ಅಸ್ತಿತ್ವವನ್ನಾದು ತಿರಸ್ಕರಿಸಲಿಲ್ಲ. ಇದು ಭುಟ್ಟೊ ಮಹಾಶಯರಿಗೂ ನಿಕ್ಸನ್ನರಿಗೂ ಒಟ್ಟಾಗಿಯೇ ಅನ್ವಯಿ

(ಹನ್ನೆರಡನೇ ಪುಟ ನೋಡಿ)

ಅಜ್ಜಿ ಹೇಳಿದ ಕತೆ

ನನಗೆ ಕಾಡು ಸುತ್ತಿ ಸುತ್ತಿ ನಾತಾಗಿತ್ತು. ಹೆಗಲ ಮೇಲಿನ ಕೋವಿಯೂ ಭಾರವಾಗ ತೊಡಗಿತ್ತು. ಹಸಿವೆ ಆಯಾಸಗಳಿಂದ ಭಾದಿತನಾದ ನನ್ನ ಕಾಲುಗಳು ಇನ್ನೊಂದು ಹೆಜ್ಜೆಯನ್ನೂ ಮುಂದಿಡಲಾರೆವೆಂದು ಪತಾಳ ಹೂಡುತ್ತಿದ್ದುವು. ಸುತ್ತಲೂ ಕಾಡು ಹಣ್ಣುಗಳು ಕೂಡ ಇರಲಿಲ್ಲ. ಬೇಟೆಯಾಡಲಾದರೂ ಉತ್ಸಾಹವು ಳಿದಿತ್ತೆ? ಉಹುಂ, ಬೆಳಗ್ಗೆ ಪೆರಿ ಭಟ್ಟರಲ್ಲಿಂದ ಕಂರಸೂರ್ತಿ ಕಾಫಿ ನೋಸೆ ಹೊಡೆದು ಕಾಡಿಗೆ ಬಂದನ. ಗಂಟೆ ನಾಲ್ಕಾದರೂ ಒಂದು ಬೇಟೆ ಆಗಷೇಕಲ್ಲ! ಕಾಡುಕೋಳಿಯೊಂದಾದರೂ ನರ್ತಿಸುತ್ತ ಕೋವಿಯ ಅಳತಿಗೆ ಬಂದುದೂ ಳಿರ್ರನೆ ಪಾರಿಹೋಗ ಬೇಕೆ!

ಬೇಟೆಯಾಗದ ನಿರಾಸೆ, ಆಯಾಸ, ಆಪರಿಚಿತ ಸ್ಥಳವೆಂಬ ಸೀಡೆಗೆ ಬಲಿಯಾಗಿ ನಾನು ಕೋವಿಯನ್ನು ನೆಲದ ಮೇಲಿಟ್ಟು ಮರವೊಂದಕ್ಕೆ ಒರಗಿ ವಿಶ್ರಾಂತಿಗಾಗಿ ಕುಳಿತೆ. ನಾಲ್ಕಾರು ನಿಮಿಷಗಳಾ ನೈಷ್ಟಿ ಹರಿಸಿದೆ. ಗುಡ್ಡದ ಕೆಳಗೆ ಎಂಟೆತ್ತು ಎಕರೆ ನಿರಾಲವಾಗಿ ಹಾಡಿದ ಪಡಭೂಮಿ, ಜಲಧರಿತವಾದ ಕ್ಲಾಂಕ್ರೀಟು ಕಟ್ಟೆಯು ಕೆರೆಯಾಗೂ ಬಳಸಲಪಡಕೇತವಾಗಿ ಮಧ್ಯ ವಾಜಿಮೊತ್ತಾ ನಿಂತಿತ್ತು. ಸನಿಹದಲ್ಲೇ ಕುಸಿದು ಬಿದ್ದ ಮನೆಯ ಮಾಲೀಕರಿಗಾಗಿ ಕಂಡವು. ಇಲ್ಲವೋ ಮಾಲೀಕರ ಮನೆಯಾಗಿದ್ದಿತೆಂದು ನಾನು ಭಾವಿಸಿದೆ. ಮೊದಲು ಇಲ್ಲಿರೋ ಶ್ರೀಮಂತರಿದ್ದರು. ಈಗ ಅವರೆಲ್ಲೋ ಏನಾಗಿ ಹೋ ಹೋದರೆಂದು ಳಾಯಿಸಿದೆ. ಈಗಿನ ಮಾಲು ಕೊಂಡೆ. ನಾ ಳುತಿರುವ ಸ್ಥಳೀಯ ಹಿಮ್ಮೆ ಪಕ್ಕೆ ಬಹಿರ್ಮುಖ ತಾಣವಾಗಿದೆ– ಎಂದೆನ್ನ ಮೊಣಕಾಲು ನಿಮ್ಮ ಆ ಮನೆಯ ನೈಭವದ ಕಾಲವನ್ನು ನಿರ್ಮಿಸುತ್ತಿದ್ದೆ ಆಗ—

"ನರೋಣಾ. ರಜಿ ಇನ್ನೂ ಇಲ್ಲೇ ಇದ್ದೀರಾ? ಹುಳಿ ಬಂತಿತ್ತೆ. ಒಳಗೆ ಓಡಿ. ನೋಪಿ ಮತ್ತೆ. ಸಾಳಿ ಬಂದೀತು. ಎಚ್ಚರೆ...." ಏನನ್ನೂತ್ತ ಕೋಲೂರಿಕೊಂಡು ಭೂಮಿ ಸಿಗದ ಬಂಗಾರಿ ವೃದ್ಧೆಯೊಬ್ಬಳು ಅಲ್ಲಿ ಪ್ರತ್ಯಕ್ಷಳಾದಳು. ಕವಳವನ್ನು ನೋಡಿದೆ. ಹಣೆ ಸುಕ್ಕುಗಟ್ಟಿತ್ತು. ಮಾಯಿಯಲ್ಲಿ ಚಿಂತೆಯೇ ಮಾನಸ್ತಿಮಿತಾಗಿ ನಿಂತಿತ್ತು. ಬುಟ್ಟುದು ಹಳೆಯದೊಂದಾರುಪ್ಯಾಕ್ಕೆ ಅಂಚಿನ ಸೀರೆ. ಕೈಯು ಕೋಲಿನಿಂದ ಆ ಮುದುಕಿ ಆಗಾಗ್ಗೆ ನೆಲವನ್ನು ಬಡಿದು, ಹುಟ್ಟ ಹಸುಳೆಯಂತೆ ಪ್ರೀತಿಯಿಂದ "ಅಪ್ಪಾ, ಜವ್ಮಾ" ಎಂದು ಕೂಗಿ, ಆ ಕರೆಗೆ ಉತ್ತರ ಬಂತೊ ಎಂಬ ರೀತಿಯಲ್ಲಿ ಹಸನ್ಮುಖಳಾಗುತ್ತಿದ್ದಳು.

ಆ ವೃದ್ಧೆಯ ಈ ವಿಚಿತ್ರ ನರ್ತನೆಯನ್ನು ಕಂಡು ನಾನು ಸ್ತಾಯಃ ಆಕೆ ಹುಚ್ಚಳಾಗಿರಬೇಕೆಂದು ಊಹಿಸಿದೆ. ಹುಚ್ಚರ ಹತ್ತಿರ ಮಾತನಾಡುವುದೆಂದರೆ ನನಗೆ ಬಹು ಇಷ್ಟು, ಅದರಿಂದಾಗಿ ತುಸು ಧೈರ್ಯವನಿ ಏರಿಸಿ, "ಓ ಅಜ್ಜಿ ಇದೊ, ಇಲ್ಲಿ ಬಾ" ಎಂದು ಕರೆದೆ. ಮೊದಲಿನ ಕರೆಗೆ ಆವಳೇನೂ ಅಷ್ಟು ಲಕ್ಷ್ಯ ಕೊಡಲಿಲ್ಲ. ಎರಡನೆಯ ಕರೆ ಕೇಳಿಸೊಡನೆಯೇ ನೆಟ್ಟಗಾಗಿ ನಿಂತು, ಸುತ್ತಲೂ ನೋಡಿ, ಧ್ವನಿ ಬಂದ ದಿಕ್ಕನ್ನು ಗುರುತಿಸಿ, "ಓ ಮಗಾ, ನೀನು ಅಲ್ಲಿದ್ದೀಯೊ? ನಿನಗಾಗಿ ನಾನಾಸ್ಟು ಹುಡುಕುತ್ತಿದ್ದೇನೆ ಬಲ್ಲೆಯೊ? ಪಾಪ, ಗುಡ್ಡದ ಮೇಲೇ ಕುಳಿತಿದ್ದಿ ಅಲ್ಲವೆ?" ಎನ್ನುತ್ತ ಲಗುಬಗೆಯಿಂದ ನನ್ನ ಬಳಿಗೆ ಬಂದು, ನಸ್ಸನ್ನೊಮ್ಮೆ ಕಣ್ಣಾರೆಸಿ ನೋಡಿ ನಿರಾಸೆಯ ನಿಟ್ಟುಸಿರು ಬಿಟ್ಟಳು.

ವೃದ್ಧೆಯ ರೀತಿಯನ್ನು ಮೂತನ್ನು ಕೇಳಿ, ಈ ಹುಚ್ಚಿಯನ್ನು ಹೀಗೆಲ್ಲ ತಿರುಗಾಡಲು ಯಾಕಪ್ಪ ಬಿಟ್ಟಿದ್ದಾರೆ, ಪಾಪ ಯಾರು ಇಲ್ಲವೇನೊ! ಅನಾಥೆಯೇನೋ!' ಎಂದು ಮನನಲ್ಲೆ ಲೆಕ್ಕ ಹಾಕಿಕೊಂಡು, "ಇಲ್ಲಿ ಕುಳಿತುಕೋ ಅಜ್ಜಿ, ನಿನಗೆ ತೀರ ಆಯಾಸ ನೇನೋ" ಎಂತ ಹೇಳಿದೆ.

"ನಮಗೆಲ್ಲ ಎಂಥ ಆಯಾಸ ಮೂಗೂ, ಮಣ್ಣೂ ಇಲ್ಲ. ಪಾಪ, ನೀನೀಗ ಒಂದಿಸ್ಟು ನೀರಿಲ್ಲದೆ ಇಲ್ಲಿ ಕುಳಿತ್ತಿದ್ದೀಯಲ್ಲ, ಅದೇ ವ್ಯಥೆ ನನಗೆ. ಎಷ್ಟೋ ವರ್ಷದ ಹಿಂದೆ ಇದೇ ನೀನು ಕುಳಿತ ಜಾಗದಲ್ಲಿ ದೊಡ್ಡ ದೊಂದು ನಾಲ್ಕು ಸುತ್ತಿನ ಮನೆಯಿತ್ತು, ಅದು ಧರ್ಮಛತ್ರವಂತೆ ನಡೆಯುತ್ತಿದೆಯೆಂಬುದನ್ನು ಹೇಳದರೆ ನಂಬಲು ಸಾಧ್ಯವಾದೀತೆ? ನನ್ನನ್ನು ಹುಚ್ಚಿಯೆನ್ನಲಾರರೇ?" ಎಂದು ಮುದುಕಿ ನನ್ನ ಮೊಗವನ್ನು ನೋಡಿ ಪಶ್ಚಾತ್ತಾಪದ ನಗೆ ನಕ್ಕಳು.

'ಇಲ್ಲ ಎನ್ನಲು ಹೇಗೆ ಸಾಧ್ಯ ಅಜ್ಜೀ. ಇದ್ದಿರಬಹುದು' ಎಂದೆ ನಾನು.

'ಇದ್ದಿರಲೂ ಬಹುದಲ್ಲ. ಇತ್ತು. ದೊಡ್ಡ ಮನೆ, ಮನೆ ತುಂಬ ಮಕ್ಕಳು ಮರಿಗಳು, ಪಟ್ಟ ತುಂಬ ದನಕರುಗಳು, ಎಮ್ಮೆ ಕೋಣಗಳು. ಹಟ್ಟಿಯೇ ಬಹು ಉದ್ದವಿತ್ತು. ಹಾಲು ಮೊಸರೆಂದರೆ ಸಂದಗೋಕುಲವಾಗಿತ್ತು. ಬೆಳಗ್ಗೆ ಅವುಗಳ ಕೊರಳಗಂಟೆಯ ಟಂಟಣಿ ನಂದನನ್ನು ಕೇಳಬೇಕು ಮಗಾ, ಆ ಜಾನುವಾರುಗಳ ಹಿಂಡನ್ನು ಕಾಣುವಾಗ ಸುಬ್ರಹ್ಮಣ್ಯದ ನೆನಪು ತಾನೇ ತಾನಾಗಿ ಉಕ್ಕಿ ಬರುತ್ತಿತ್ತು. ನೋಡು, ಈ ಬಂಜರು ಬಿದ್ದ ಭೂಮಿ; ಪೊದಲು ತೆಂಗು ಕಂಗುಗಳಿಂದ ನಳನಳಿಸುತ್ತಾ ತುಂಬಿದ ನಂದನವನವನ್ನು ನಾಚಿಸುತ್ತಿತ್ತು. ಆದರೆ ಒಬ್ಬಳು, ನತದೃಷ್ಟೆ ಈ ಮನೆಯಲ್ಲಿ ಹುಟ್ಟ ಎಲ್ಲವನ್ನೂ ಪ್ರಕೃತಿಯ ವಿಕೋಪಕ್ಕೆ ಬಲಿ ಕೊಟ್ಟಳು. ಹುಂ ಎಂದು ಹೇಳ ಹೇಳುತ್ತ ಅಜ್ಜಿ ನನ್ನೆದುರು ಆಯಾಸಗೊಂಡವಳಂತೆ ತೂಕಿತು, 'ನಸ್ಯ ಇದೆಯೇನು ಮಗಾ, ಮೂಗು ಕಟ್ಟುತ್ತಿದೆ' ಎಂದಳು.

ನಾನು ಅಜ್ಜಿಯ ಮೂತನ್ನೇ ಕೇಳುತ್ತ ಏನನ್ನೋ ಕಲ್ಪಿಸುತ್ತಿದ್ದೆ. ಆಕೆ ನಸ್ಯದ ನೆನೆಪು ಮೂಡುತ್ತಲೇ ಎಚ್ಚರಗೊಂಡು "ನನಗೆ ನಸ್ಯ ಸೇದುವ ಪದ್ಧತಿ ಇಲ್ಲ ಅಜ್ಜಿ. ಎಲೆ ಅಡಿಕೆ ಬೇಕಾದರೆ ಕೊಡಬಲ್ಲೆ" ಎಂದೆ. "ಹ್ಞೂಂ, ಆದಾದರೆ ಅದು ನನಗೆ ಯಾವುದೂ ಆಗುತ್ತದೆ" ಎಂದು ಅಜ್ಜಿ ತಾಂಬೂಲಕ್ಕಾಗಿ ಕೈ ನೀಡಿದಾಗ ಆಕೆಗೆ ತಾಂಬೂಲವನ್ನಿತ್ತೆ. ಅವಳು ಹೇಳುವ, ಸುಳ್ಳಾಗಲೀ ಪಳ್ಳಾಗಲೀ—ಕತೆ ಮಾತ್ರ ಸ್ವಾರಸ್ಯವಾಗಿ ಕಂಡಿದ್ದರಿಂದ ಕೇಳಿದೆ, "ಮತ್ತೇನಾಯಿತಜ್ಜಿ?"

ತಾಂಬೂಲ ತಿನ್ನುವುದರಲ್ಲೆ ಮಗ್ನಳಾದ ಅಜ್ಜಿ ನನ್ನ ಪ್ರಶ್ನೆ ಕೇಳಿ "ಮತ್ತೆ ಆಗುವುದೇನು, ಆಗಬಾರದುದು ಆಯಿತು. ಐವತ್ತು ವರುಷಗಳ ಹಿಂದೆ ಭಾರೀ ಮಳೆ ಬಂದುದು ನಿನಗೆ ಗೊತ್ತೇನು? ಮನೆಗಳೆಲ್ಲ ಕೊಚ್ಚಿಕೊಂಡು ಹೋಗಿ, ಮನುಷ್ಯರೆಲ್ಲ ಅನಾಥರಾದುದು ನೆನಪಿದೆಯೇನು? ರೋಷ ಭೀಷಣಳಾದ ಪ್ರಕೃತಿವಾತೆ ಲೋಕವನ್ನೇ ನುಂಗಿ ನೊಣೆಯಲು ಸಿದ್ಧವಾಗಿದ್ದ ದಿನವನ್ನು ಮರೆತಿದ್ದಿಯೇನು? ಯಾರೂ ಮರೆಯಲಾರರು. ಪ್ರಕೃತಿಯು ಆ ವಿಕಟಾಟ್ಟಹಾಸದ ನೆನಪು ಯಾರಿಗೂ ಎಂದಿಗೂ ಮರೆತುಹೋಗದು ಪ್ರತಿಯೊಬ್ಬರಿಗೂ ಪ್ರಕೃತಿ ಅಂದರೆ ಹೀಗೆ ಎಂಬ ಪಾಠ ಹೇಳಿ ಕೊಟ್ಟು ಹೋಗಿದೆ. ಅದೇ ಮಳೆಗಾಲ. ಏಳುದಿನಸ ಸತತ ರಾತ್ರಿ ಹಗಲೆನ್ನದೆ ಸುರಿದ ಮಳೆ ಯಾರೂ ಹೊರಗೆ ಹೊರೆಡುವಂತಿಲ್ಲ. ಪಸುಗಳೆಲ್ಲ ಹಟ್ಟಿಯಲ್ಲಿ. ಮುದುಕರೆಲ್ಲ ಅಗ್ಗಿಷ್ಟಿಕೆಯ ಬುಡದಲ್ಲಿ, ಮಕ್ಕಳೆಲ್ಲ ಮುದುಕರ ಸುತ್ತ ಪರಟೆಯಲ್ಲಿ. ಯಾರಿಗೂ ಧೈರ್ಯವಿಲ್ಲ ಈ ಮಳೆಯಿಂದ ಏನು ಆವಾಂತರ ಘಟಿಸುವುದೊ ಎನ್ನುವಂತಿಲ್ಲ. ಕೆಲವರಂತೂ ಪ್ರಳಯಕಾಲವೇ ಬಂತೆಂದು ದೃಢಮಾಡಿ ರಾಮನಾಮವನ್ನು ಪಠಿಸಲು ಆರಂಭಿಸಿದ್ದರು...."ಎಂದು ಹೇಳಿ ಹೇಳುತ್ತ ಅಜ್ಜಿ ತಾಂಬೂಲ ರಸವನ್ನಗುಳಿ ಮುನಃ ಹೇಳ ತೊಡಗಿದಳು.

"ಆಗ ಈ ಮನೆಯಲ್ಲಿ 10 ಜನರಿದ್ದರು. ತಂದೆ, ತಾಯಿ, ಎಂಟು ಜನ ಮಕ್ಕಳು. ಆದರಲ್ಲಿ ಏಳೂ ಗಂಡೇ, ಕೊನೆಯವಳು ಆ ನತದೃಷ್ಟ ಹುಡುಗಿ ಶಂಕರಿ. ಈ ಮನೆಯಲ್ಲಿ ಮೂಕಾಸುರನಂತೆ ಹುಟ್ಟಿದಳು. ಸುಂದರವಾದ ಪುಷ್ಪಕ್ಕೆ ಕೆಟ್ಟು ಬಿದ್ದಂತೆ...." ಎಂದು ಹೇಳಿ ಅಜ್ಜಿ ಹಲ್ಲು ಕಡಿದುಕೊಂಡಳು. ಮರಳಿ ಯಾರ ಒತ್ತಾಯವೂ ಇಲ್ಲದೆ ಮುಂದುವರಿಸಿದಳು. "ಏಳು ದಿವಸಗಳಿಂದ ಒಂದೇ ಸವನೆ ಮುಸಲಧಾರೆಯಂತೆ ಮಳೆ ಸುರಿಯುತ್ತಿದೆ. ಹಳ್ಳ ಹೊಳೆಗಳೆಲ್ಲ ತುಂಬಿ ಸೊಕ್ಕೆ ಹರಿಯುತ್ತಿವೆ. ನೀರು ಕುಡಿದು ಭೂಮಿ ಪಣ್ಣು ಪಣ್ಣಾಗಿದೆ. ದೊಡ್ಡ ದೊಡ್ಡ ಮರಗಳೆಲ್ಲ ಬುಡವೇ ಉರುಳಿ ಬೀಳುತ್ತಿವೆ. ಅಂಥ ಏಳನೇ ರಾತ್ರಿ ಈ ಮಳೆಯಲ್ಲಿ ಎಲ್ಲರೂ ಮೂಳಿಗೆಯಲ್ಲಿ ಮಲಗಿದಾಗ ಆ ಹುಡುಗಿ ಮಾತ್ರ, 'ನಾನು ಇಂದು ಮೂಳಿಗೆಯಲ್ಲಿ ಮಲಗಲಾರೆ. ಕೆಳಗಿನ ಕೋಣೆಯಲ್ಲಿ ಮಲಗುತ್ತೇನೆ' ಎಂದೇ ಹಟ ಹಿಡಿದಳು. ತಾಯಿ, 'ನೀನೊಬ್ಬಳೇ ಅಲ್ಲಿ ಮಲಗಬೇಡ– ನಿನಗೆ ಭಯವಾದೀತು' ಎಂದು ರಮಿಸಿ ನುಡಿದರೂ, ಹೆದರಿಸಿ ಹೇಳಿದರೂ ತಂದೆ ಅಣ್ಣ ಎಲ್ಲರೂ ತಿಳಿಸಿದರೂ ಆ ಹಟನೂರಿ

(ಹನ್ನೊಂದನೇ ಪುಟ ನೋಡಿರಿ)

ಅಮೃತಾಂಜನ

● ತಲೆ ಸಿಡಿತ ● ನೈ ನೋವ
● ಉಳುಕು ● ಕಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಆರ್ಯವೈದ್ಯಾಂಜನ ಲಿಮಿಟೆಡ್,
ಮುದ್ರಾಸು-4

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದೆ ದಶಾಲಾ (ಪೆವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಯಾಹ್ಯಾಖಾನ-ಭುಟ್ಟೊ ಮಾಡಿದ ಒಂದೇ ಒಂದು ಒಳ್ಳೆಯ ಕೆಲಸ

ಇಸ್ಪೂರುಎಂಬತ್ತೊಂಬತ್ತು ದಿನಗಳ ಕಾಲ ಕತ್ತಲೆಯ ಕೋಣೆಯಲ್ಲಿ ನಿರ್ಬಂಧಿತರಾಗಿ ಉಳಿದ ವಂಗ ಬಂಧು ಶೇಕ್ ಮುಜಿಬುರ್ ರೆಹಮೂನರನ್ನು ಬಂಧ ಮುಕ್ತಗೊಳಿಸಿ ಪಾಕ್ ರಾಷ್ಟ್ರಪತಿ ಜುಲ್ಫಿಕರ್ ಅಲಿ ಭುಟ್ಟೊ ತನ್ನ ಜೀವನದಲ್ಲಿ ಪೊದಲನೆಯ ಭಾರಿಗೆ ಪವಿತ್ರ ಕೆಲಸ ಮಾಡಿದರು. ಮುಜಿಬ್ ರವರ ಬಿಡುಗಡೆ ಮಾಡುವುದಾಗಿ ಅವರು ಒಂದು ವಾರದಿಂದ ಹೇಳುತಿದ್ದರಾದರೂ ಆ ಬಗ್ಗೆ ಸ್ಪಷ್ಟವಾದ ಸೂಚನೆಯನ್ನವರು ಕೊನೆಯವರೆಗೂ ನೀಡಲಿಲ್ಲ ಅವರನ್ನು ಬಿಡುಗಡೆಮಾಡಲಾಗಿದೆ ಪಾಕಿಸ್ತಾನ ವಿಮೂನ ಸಂಸ್ಥೆಯೊಂದರ ವಿಮೂನವು ಹೊತ್ತುಕೊಂಡು ಹೊರಟಿದೆ ಎಂದು ಪಾಕ್ ರೇಡಿಯೊ ಹೇಳಿದರೂ ಅವರನ್ನು ಎಲ್ಲಿಗೊಯ್ಯಲಾಯಿತೆಂದು ಅದು ತಿಳಿಸದೆ ಇದ್ದುದರಿಂದ ನಾಗರಿಕ ವಿಶ್ವಕ್ಕೆ ಕಳವಳವೂ ಆಯಿತು ಆದರೆ, ಶೇಕರನ್ನು ಲಂಡನ್ ನಗರದಲ್ಲಿ ತಂದು ಬಿಡಲಾಯಿತೆಂದು ತಿಳಿದೊಡನೆಯೇ ಅವರ ಆವಿತೋತ್ಸಾಹ ಹೇಳತೀರದು ನಾಗರಿಕ ಜಗತ್ತಿನಿಂದ ಪ್ರತ್ಯೇಕಿತರಾಗಿದ್ದ ಶೇಕ ಮುಜಿಬುರ್‌ರವರಿಗೆ ಬಂಗ್ಲಾ ವಿಮೋಚನೆಯ ಸಂಗತಿಯನ್ನು ಮೊತ್ತ ಮೊದಲಿಗೆ ಭುಟ್ಟೋವೇ ತಿಳಿಸಿದರೆಂದೂ ಬಂಗ್ಲಾ ನಡುವೆ ಸಂಬಂಧವಿರಿಸಿಕೊಳ್ಳ ಬೇಕೆಂದವರು ಕೇಳಿಕೊಂಡರೆಂದೂ ಮುಜಿಬ್ ಹೇಳಿದ್ದಾರೆ. ಆದರೆ, ಬಂಗ್ಲಾ ದೇಶದ ಜನತೆಯನ್ನು ಕೇಳಿದೆ ಯಾವ ಮೂತನ್ನೂ ಆಡಲಾರೆನೆಂದವರು ವಂಗ ಜನತೆಯ ಗೌರವಕ್ಕೆ ಪಾತ್ರರಾಗಿದ್ದಾರೆ

ಮುಜಿಬುರ್ ರೆಹಮೂನ-ು ವಸ್ತುಸ್ಥಿತಿಯನ್ನು ಇನ್ನೂ ಸಂಪೂರ್ಣವಾಗಿ ಅರಿತುಕೊಂಡಿರುವುದಿಲ್ಲ ಬಂಗ್ಲಾ ವಿಮೋಚನೆಯ ಪವಿತ್ರ ಕಾರ್ಯದಲ್ಲಿ ಭಾರತ ನೆರವಾದುದೇನೋ ಗೊತ್ತಿರಬಹುದು ಆದರೆ, ಈ ಕಾರ್ಯದಲ್ಲಿ ಯಾವ ಯಾವ ದೇಶಗಳು ಯಾವ ಯಾವ ನಿಲುಮೆ ವಹಿಸಿದ್ದವೆಂಬುದನ್ನು ಅವರಿನ್ನೂ ಅಧ್ಯಯನ ಮಾಡಬೇಕಷ್ಟೇ. ಈಗ ಅವರ ತಿಳುವಳಿಕೆಗೆ ಬಂದಿರುವ ಸಂಗತಿಯೆಂದರೆ ಪಾಕಿಸ್ತಾನದ ಕಪಿಮುಷ್ಟಿಯಿಂದ ಬಂಗ್ಲಾದೇಶ ವಿಮೋಚನೆಗೊಂಡಿದೆ, ಅದು ಸ್ವತಂತ್ರ ಸಾರ್ವಭೌಮ ದೇಶವಾಗಿದೆ ಭಾರತ ಸರಕಾರವು ಒಮ್ಮುಖ ಸಹಕಾರ ನೀಡಿದೆ—ಎಂಬುದು ಮಾತ್ರ ಅದುದರಿಂದ ತವರ ಮೊದಲ ಪತ್ರಿಕಾ ಗೋಷ್ಠಿಯಲ್ಲಿ ಅವರು ಕೇಳಿಕೊಂಡದ್ದು ಒಂದೇ— ಬಂಗ್ಲಾದೇಶಕ್ಕೆ ಮನ್ನಣೆ ನೀಡಿ; ವಿಶ್ವಸಂಸ್ಥೆಗೆ ಪ್ರವೇಶ ನೀಡಿ.' ಇದಕ್ಕಿಂತ ಹೆಚ್ಚಿನ ಅಭಿಪ್ರಾಯಗಳನ್ನು ಹೇಳ ಬೇಕಾದರೆ. ಅವರು ವಸ್ತುಸ್ಥಿತಿಗಳ ಕೂಲಂಕಷ ಅಧ್ಯಯನ ಮಾಡಬೇಕು; ತನ್ನ ಜನತೆಯನ್ನು ಕಾಣಬೇಕು, ಅವರ ಭಾವನೆಗಳಿಗೆ ಮನ್ನಣೆಕೊಡಬೇಕು. ತನ್ನ ನಾಮ ಬಲವೊಂದರ ಮೇಲೆಯೇ ಭದ್ರವಾಗಿ ಒಂದಾಗಿ ಪಾಕ್ ವಸಾಹತುವಾದಿಗಳ ವಿರುದ್ಧ ಶಸ್ತ್ರವೆತ್ತಿ ವಿಜಯಿಗಳಾದ ಜನತೆಯನ್ನು ಕಾಣಲು ಅವಗೆ ತಹತಹವಿದೆ ತುಮ್ಬಮೋಕ್ಷ ಪ್ರೇರಕನ ದರ್ಶನ ಪಡೆಯಲು ಬಂಗ್ಲಾ ಜನತೆ ಅದಕ್ಕಿಂತ ಹೆಚ್ಚು ಉತ್ಸಾಹದಲ್ಲಿದೆ ಲಂಡನ್ನಿನಲ್ಲಿ ಬ್ರಿಟಿಷ್ ಪ್ರಧಾನಿ ಎಡ್ವರ್ಡ್ ಹೀತ್‌ರೊಡನೆ ಮಾತುಕತೆಯಾಡಿ ಅವರು ಇಪ್ಪರಲ್ಲೇ ಭಾರತ ಮಾರ್ಗವಾಗಿ ಸ್ವದೇಶ ಗಮನ ಮಾಡಿದ್ದಾರೆ

ಶೇಕ ಮುಜಿಬುರ್‌ರವರ ಬಿಡುಗಡೆಯೊಂದು ಮಹತ್ವದ ಅಂಶ ಶೇಕರು ಜೀವಂತವಿದ್ದಾರೆನ್ನುವುದನ್ನು ನಂಬುವುದಕ್ಕೇ ಅಸಾಧ್ಯವಾದಂತಹ ವರ್ತನೆಯನ್ನು ಪಾಕ್ ಸರಕಾರ ತೋರಿಸಿತ್ತು. ಶೇಕರಾದರೂ ಪ್ರಾಣಾರ್ಪಣೆಗೆ ಮೂನಸಿಕವಾಗಿ ಸಿದ್ಧರಾಗಿದ್ದರು ಅವರನ್ನು ಜೀವಂತವುಳಿಸಿದ ಯೂಹ್ಯಾಖಾನರೂ ಬಿಡುಗಡೆ ಮಾಡಿದ ಭುಟ್ಟೋರೂ ಅಭಿನಂಗನಾರ್ಹರು. ವಂಗಬಂಧು ತನ್ನ ಜನತೆಯನಡುವಿದ್ದು ದೇಶಕಟ್ಟುವ ಕಾರ್ಯಕ್ಕೆ ಇನ್ನು ನಾಂದಿಯೊಗಬೇಕು. ರಾಷ್ಟ್ರಪತಿ ಭುಟ್ಟೊ ಬಂಗ್ಲಾ ದೇಶ ಕೈಬಿಟ್ಟತೆಂದೂ ಅದನ್ನು ಯೂವುದೇ ರೀತಿಯಲ್ಲಿ ಪಾಕಿಸ್ತಾನಕ್ಕೆ ಮರಳಿ ತಂದುಕೊಳ್ಳುವುದು ಸಾಧ್ಯವಿಲ್ಲವೆಂದೂ ತಿಳಿದಿದ್ದಾರೆ ಆದರೆ, ಬಂಗ್ಲಾದೇಶವನ್ನು ತಮ್ಮ ಕೈಗಳಿಗೆ ಎಂತಾದರೂ ಎಳೆದುಕೊಳ್ಳಬೇಕೆಂದು ಹೇಳುವವರೂ ಇದ್ದಾರೆ ಇದಕ್ಕಾಗಿಯೇ ಪಾಕ್ ಸರಕಾರದ ಸೂತ್ರವನ್ನು ಶೇಕರ ಕೈಗಳಿಗೆ ಒಪ್ಪಿಸಬೇಕೆಂದು ಅವರು ಅಭಿಸ್ರಾಯ ಪಡುತ್ತಾರೆ ೧೯೭೦ರ ಚುನಾವಣೆಗಳಲ್ಲಿ ಆಗಿನ ಪೂರ್ವ-ಪಶ್ಚಿಮ ಪಾಕಿಸ್ತಾನಗಳಲ್ಲಿ ನಿಚ್ಚಳ ಬಹುಮತ ಪಡೆದದ್ದು ತವರೆಂದು ಇವರು ಹೇಳುತ್ತಾರೆ ತದೇನಿದ್ದರೂ ಚುನಾಯಿತ ಪ್ರತಿನಿಧಿಗಳ ಕೈಗೆ ಅಧಿಕಾರ ವರ್ಗಾಯಿಸಲು ಪಾಕ್ ಅಧ್ಯಕ್ಷರು ನಿರಾಕರಿಸಿದ್ದು, ಬಂಗ್ಲಾದೇಶ ಸ್ವಾತಂತ್ರ್ಯ ಘೋಷಣೆ ಮಾಡಿದ್ದು ಮತ್ತೀಗ ಅದು ಸ್ವತಂತ್ರ ಸಾರ್ವಭೌಮ ದೇಶವಾಗಿ ರೂಪುಗೊಂಡದ್ದು ಇತಿಹಾಸ ಸಾರುವ ಸತ್ಯ. ವಾಸ್ತವಿಕತೆಯನ್ನು ಮರೆಮಾಚುವ ಪ್ರಯತ್ನ ಸೂರ್ಯನನ್ನು ನೋಡಲಾರೆನೆಂದು ಕಣ್ಣುಗಳಿಗೆ ಕೈ ಹಿಡಿದು ಮುಚ್ಚಿಕೊಳ್ಳುವ ಪ್ರಯತ್ನ ಮಾತ್ರ ಆದುದರಿಂದ ಪಾಕಿಸ್ತಾನಿಗಳು, ಉಪರಾಷ್ಟ್ರಪತಿ ನೂರಲ್ ಅಮಿನರೂ ಸೇರಿ, ಇಂತಹ ಕನಸು ಕಾಣುವುದನ್ನು ಬಿಟ್ಟು ಬಂಗ್ಲಾನನ್ನು ಅದರ ಪಾಡಿಗೆ ಇರಗೊಟ್ಟು ತಮ್ಮ ಕೈಯ್ಯಲ್ಲಿ ಉಳಿದಿರುವ ಭಾಗವನ್ನಾದರೂ ಸಮೃದ್ಧಗೊಳಿಸಲು ಪ್ರಯತ್ನಿಸಬೇಕು ಭಾರತ ಮತ್ತು ಬಂಗ್ಲಾಗಳೊಡನೆ ಅದಕ್ಕೆ ಸಂಬಂಧ ಬೇಕೆಂದಿದ್ದರೆ ಸಮೋದರತೆಯನ್ನು ಪ್ರದರ್ಶಿಸಬೇಕು ರೊಟ್ಟಿ ತೋರಿಸಿ ಕತ್ತಿ ಹಿರಿಯುವ ಚಟವನ್ನಾದು ಬಿಟ್ಟು ಕೊಡಬೇಕು. ಅದು ದೇಶ ಕಟ್ಟುವ ವಿಧಾನವಲ್ಲವೆಂದು ಕಾಲು ಶತಮಾನದ ನಂತರವಾದರೂ ಮನವರಿಕೆ ಮಾಡಿಕೊಳ್ಳ ಬೇಕು. ಶೇಕ ಮುಜಿಬುರರ ಬಿಡುಗಡೆ ಇದಕ್ಕೆ ನಾಂದಿ ಹಾಡೀತೆ?

ಪರ್ಯಾಯ ಪೀಠಾರೋಹಣ

ಶ್ರೀ ವಿಬುಧೇಶತೀರ್ಥ ಶ್ರೀಪಾದರು

ಉಡುಪಿ ಪರ್ಯಾಯ

ಇದೇ ತಾ. ೧೫ರಂದು ಉಡುಪಿಯ ಶ್ರೀಕೃಷ್ಣ ಮಠದ ಪೂಜಾಧಿಕಾರವನ್ನು ಶ್ರೀ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀಪಾದರು ವಹಿಸಲಿದ್ದಾರೆ ಕಳೆದೆರಡು ವರ್ಷಗಳಿಂದ ಫಲಿಮಾರು ಸುರದ ಶ್ರೀ ರಘುವೂನ್ಯತೀರ್ಥ ಶ್ರೀ ವಾದರ ಪರ್ಯಾಯವಧಿ. ತನ್ನ ಪರ್ಯಾಯ ಪೀಠಾರೋಹಣ ಮಾಡುವಾಗ ಪಲವಾರು ರೀತಿಯ ಪ್ರತಿಕೂಲ ವಾತಾವರಣಗಳಿದ್ದರೂ ಸರಂಪರಾ ಪ್ರಾಪ್ತವೆನಿಸಿದ ಶ್ರೀಕೃಷ್ಣ ಪೂಜೆ-ಆರಾಧನೆ-ವಿದ್ವಜ್ಜನ ಗೌರವ, ಕಲೆ-ಸಂಸ್ಕೃತಿಗಳಿಗೆ ಪ್ರೋತ್ಸಾಹ, ಧಾರ್ಮಿಕೋನ್ನತಿ ಮೊದಲಾದುವುಗಳನ್ನು ನಿರಾತಂಕವಾಗಿ ನಿರ್ವಹಿಸಿ ಕೊಂಡು ಬಂದ ಶ್ರೀಮದ್ವಾಮನ್ಯ ತೀರ್ಥ ಶ್ರೀಪಾದರು ನಿಜಕ್ಕೂ ಅತಿಭಿನಂದನಾರ್ಹರು ಶ್ರೀ ವಿಬುಧೇಶ ತೀರ್ಥ ಶ್ರೀಪಾದರದು ಇದೀಗ ಎರಡನೆಯ ಪರ್ಯಾಯ ಮೊದಲ ಪರ್ಯಾಯವನ್ನು ಅತ್ಯಂತ ಸಮುಚಿತವಾಗಿ, ಉದಾರವಾಗಿ ಪೂರೈಸಿದ ಖ್ಯಾತಿವೆತ್ತವರು. ತವರ ಪರ್ಯಾಯವು ವಧಿಯು ಕಲೆ-ಸಂಸ್ಕೃತಿ-ದಾನ-ಧರ್ಮಗಳ ನೆರೆಬೀಡೆನಿಸಿತ್ತು. ಈ ಬಾರಿಯೂ ಶ್ರೀಪಾದರು ತನ್ನ ಉದಾರಾಂತಃಕರಣದ ಮೂಲಕ ಉಡುಪಿಯ ಕೀರ್ತಿಲತೆ ಮತ್ತಷ್ಟು ಬೆಳೆದು ಹರಡುವಂತೆ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸುತ್ತಾರೆಂದು ನಂಬುತ್ತೇವೆ ತನ್ನ ಪಲವಾರು ಸಾಮಾಜಿಕ-ಧಾರ್ಮಿಕ-ಸಾಂಸ್ಕೃತಿಕ- ಶೈಕ್ಷಣಿಕ ಕಾರ್ಯಕಲಾಪಗಳಿಂದ ಕೀರ್ತಿಭಾಜನರೆನಿಸಿದ ಶ್ರೀ ವಿಬುಧೇಶತೀರ್ಥ ಶ್ರೀಪಾದರ ಎರಡನೆಯ ಪರ್ಯಾಯವು ಸುಭಿಕ್ಷಯನ್ನು ಲೋಕಕ್ಕೆತಗಲೆಂದು ಹಾರೈಸುತ್ತೇವೆ ●

ನಿರೀಕ್ಷಿಸಿರಿ!

ಪ್ರಜಾರಾಜ್ಯ ವಿಶೇಷಾಂಕ

ಪ್ರಸಿದ್ಧ ಲೇಖಕರನೇಕರ ವೈಶಿಷ್ಟ್ಯ ಪೂರ್ಣ ಲೇಖನಗಳಿಂದೊಡಗೂಡಿ

೨೨—1—72ರಂದು ಪ್ರಕಟವಾಗುವುದು

ನವಯುಗ ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿಶೇಷ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ

ನವಯುಗದ ನವೀಕರಣಕ್ಕಾಗಿ ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಗೇಹರಾಜ್ಯದಲ್ಲಿ

ತ್ಯಾಗಶೂರರು ನಾವು

"ನೋಡಿದಿಯೇನೆ?"

'ಏನು?'

'ಈಗ್ಗೆ ಮೂರು ವರ್ಷಗಳಿಂದ ನಿರಂತರವಾಗಿ ನಡೆದು ಬಂದ ಕಾಂಗ್ರೆಸ್ಸಿನೊಳಗಣ ಹೋರಾಟ, ಆ ನಂತರದ ಪಕ್ಷಾಂತರಗಳ ಜೋಡಾಟಗಳು....'

"ಹೌದು...."

'ಯಾಕಾಯ್ತೂಂತ?'

'ಯಾಕೆ ಅಂದರೇನು? ಬರಿಯ ಸ್ವಾರ್ಥಕ್ಕೆ ಒನ್ನೋದು ಅದೆಂದೋ ಸುವ್ಯಕ್ತವಾಗಿದೆಯಲ್ಲಾ....'

'ಅಲ್ಲವೇ ಮತ್ತೆ?'

'ಅಲ್ಲಾರಿ, ಅಂದ್ರೆ ರಾಜ್ಯಕಾರಣಿಗಳಲ್ಲಿ ಸಂಭಾವಿತಗಿರಿಗೆ ಅವಕಾಶವೇ ಇಲ್ಲವೇನೆ?'

'ಇರಬಹುದು. ಆದರೆ, ಸಂಭಾವಿತರು ಪುಕ್ಕ ಮುರಿದ ಹಕ್ಕಿಗಳಾಗುತ್ತಾರೆ. ಅವರನ್ನು ಯಾರೊಬ್ಬರೂ ಕೇರ್ ಮಾಡೋದಿಲ್ಲ....'

"ನಮ್ಮ ವೀರೇಂದ್ರ ವಾಟ್ಸಲರ ಹಾಗೆ. ಅಲ್ರಿ, ಸಿಂಡಿಕೇಟನ್ನು ರಾಜ್ಯ ಮಟ್ಟದ ಪಕ್ಷವಾಗಿ ಕಟ್ಟುವ ಐಡಿಯಾಜನೆಯಿತ್ತಲ್ಲಾ, ಏನಾಯ್ತೂಂತ?"

"ಅಗೋದೇನು? ಅದರ ಕೇಂದ್ರಾಧಿಕಾರ ಈ ಸಲದೆಯನ್ನು ತಳ್ಳಿ ಪಾಕಿಸ್ತೆ.ತಾನು ಅಖಿಲಭಾರತ ಪಕ್ಷವಾಗಿಯೇ ಉಳಿಯುವುದಾಗಿ ಘೋಷಿಸಿಕೊಂಡಿದೆ....'

'ಇರಬಹುದು; ಆದರೆ, ರಾಜ್ಯ ನಾಯಕರು ಬೇರೆಯೇ ಕಟ್ಟಿಕೊಂಡರೆ?"'

'ಆಮ ಹೊಸತೊಂದು ಪಕ್ಷವಾಗುವುದಷ್ಟೆ. ಆಗ, ತನಕ್ಕೆ ಈಗಿರುವ ಬಲವೂ ಇಲ್ಲದಂತಾಗಬಹುದು.'

'ನೋಡಿ, ನಿಜಲಿಂಗಪ್ಪ, ಮುರಾರ್ಜಿ, ಎಸ್ಕೆ ಪಾಟೀಲ್ ಮತ್ತು ಅತುಲ್ಯ ಘೋಷರು ಸಿಂಡಿಕೇಟಿನಿಂದ ಹೊರ ನಡೆಯುವಂತೆ ಅವರ ಪಕ್ಷಕೇಳಕೊಂಡಿದೆಯಂತಲ್ಲಾ?'

'ಯಾವುದೋ ಒಂದೂರವರು, ಹಾಸನವರಿರಬೇಕು. ಹಾಗೆ ಸಲಹೆ ನೀಡಿದ್ದಾರಂತೆ....'

'ಏಕೆ?'

'ಸಿಂಡಿಕೇಟನಲ್ಲಿ ಅವರಿರುವ ತನಕ ಆ ದಕ್ಕೆ ಒಳ್ಳೆ ಹೆಸರು ತಂದುಕೊಳ್ಳುವುದು ಸಾಧ್ಯವಿಲ್ಲವೆಂದು.'

'ಅದ್ಯಾಕೆ ಸಾಧ್ಯವಿಲ್ಲ?'

'ಅವೆಲ್ಲಾ ಕೇಳಬಾರದು. ಅದೇನೋ ರಾಜ್ಯಕಾರಣ ನಡೆದು ಈ ನಾಲ್ಕು ತಿಂಗಳಾಡಂಗಿ ಮುಖಗಳಾಗಿರಬಹುದು.'

'ನೋಡಿ, ಈಗ ಭಾರತ–ಅಮೆರಿಕೆ ಸಂಬಂಧವಿರುವಂತೆ .. '

'ಹ್ಞೂಂ, ಸತ್ಯವನ್ನು ಸತ್ಯವೆಂದು ಹೇಳಲು ಹಿಂಜೇಟು ಹಾಕುತ್ತಿರುವ ಅಮೆರಿಕೆ ಭಾರತಕ್ಕೆ ದ್ರೋಹ ಬಗೆಯಿತಲ್ಲ?'

'ಹಾಗೆ ನಾವನ್ನುತ್ತೇನೆ ...'

'ಸರೀನ್ನು. ನಮ್ಮ ನೀತಿಯೊಂದು, ಅವರ ನೀತಿಯೊಂದು....'

'ನಮ್ಮದು ಹಗಲು, ಅವರದ್ದು ರಾತ್ರಿ.. ಅಲ್ರಿ, ನಮ್ಮ ರಾಜಾಜಿ ಅಂದಿದ್ದಾರಂತೆ– ಅಧ್ಯಕ್ಷ ನಿಕ್ಸನ್ನರು ಸದ್ಯದಲ್ಲೇ ಪದಚ್ಯುತರಾಗುತ್ತಾರೆಂದು....'

'ಆಗಲೂ ಬಹುದು. ಆದರೆ ಮುಂದಿನ ಅಧ್ಯಕ್ಷೀಯ ಚುನಾವಣೆಯಲ್ಲಿ ಅವರು ಗೆಲ್ಲುವುದಿಲ್ಲವೆಂಬುದು ಮಾತ್ರ ಸತ್ಯ....'

ಅಲ್ಲದೆ ಈಗಲೇ ಹೇಗೆ ಹೇಳುವುದು?'

'ನಿಕ್ಸನ್ನರಿಗೆ ಅಮೆರಿಕೆಯಲ್ಲೇ ಪ್ರಬಲ ವಿರೋಧವಿದ್ದೇ ಇದೆ..'

'ಹ್ಞೂಂ, ಅಮೆರಿಕದಲ್ಲಿ ನಿಕ್ಸನ್ ಇನ್ನಾರೇನು. ಬಿಟ್ಟಾರೇನು? ನಮ್ಮ ದೇಶ ಪುನಾರಚನೆಯಲ್ಲಿ ಅದು ಹೇಗೆ ಸಹಾಯ ಮಾಡುತ್ತಿದೆಯೆಂಬುದು ಮುಖ್ಯ.'

'ಅದೇ ನೋಡು, ಪ್ರಧಾನಿ ಗಾಂಧಿ ಹೇಳುತ್ತಾರೆ–ಆರ್ಥಿಕ ಸಮರದಲ್ಲಿ ನಾವು ವಿಜಯಗಳಿಸಬೇಕು'.

'ಆಲ್ಲವೇ ಮತ್ತೆ? ವಿದೇಶೀ ನೆರವನ್ನು ನಂಬಿ ನಾವು ಮುಂಪುವರಿಯುವುದು ತಪ್ಪು ...'

'ಇದನ್ನು ಎಂದೋ ಕೆಲವು ಮುತ್ಸದ್ದಿಗಳು ಅಂದಿದ್ದರು. ಆದರೆ, ಸರಕಾರದ ನಾಯಕರು ಆಗ ಅದಕ್ಕೆ ಕಿವಿಗೊಡಲಿಲ್ಲ.'

"ಅದೂ ಸರಿಯೇ ಅನ್ನಿ. ಕೊಡುವವರು ಇರುವವರೆಗೆ ತೆಗೆದುಕೊಳ್ಳುವುದು; ಕೊಡುವವರಿಲ್ಲದಾಗ ಸುಮ್ಮನಿರುವುದು...."

'ನೋಡು, ಕೇಂದ್ರ ಸರಕಾರದ ಮೇಲೆ ವಿಪರೀತವಾದ ಆರ್ಥಿಕ ಭಾರ ಬಿದ್ದಿದೆ ಭಾರತ–ಪಾಕ್ ಯುದ್ಧ ನಡೆದುದು ಬರಿಯ ಎರಡೇ ವಾರಪಾದರೂ ಆದರಿಂದ ಜೇತರಿಸಲು ಬಹು ಸಮಯಬೇಕು. ಬಂಗ್ಲಾ ದೇಶಕ್ಕೆ ನೆರವು ನೀಡುವ ಹೊಸ ನೈತಿಕ ಹೊಣೆಗಾರಿಕೆ ನಮ್ಮ ಪಾಲಿಗೆ ಬಂತು. ಜತೆಗೆ ಸಮರ ಭೀತಿ ಮುಗಿದಿಲ್ಲವಾದ್ದರಿಂದ ಸಂರಕ್ಷಣೆಯತ್ತಲೂ ವಿಶೇಷ ಗಮನ ಹರಿಸಬೇಕು....'

"ಅದು ಸೀನ್ನಿ. ಭಾರತೀಯರು ಅರೆ ಹೊಟ್ಟೆ ತಿನ್ನ ಬಲ್ಲರು; ಆದರೆ ತನ್ನ ಕರ್ತವ್ಯದಿಂದ ಚ್ಯುತರಾಗಲಾರರು ..."

'ಅದಕ್ಕೆಂದೇ ನೋಡು, ರಾಜ್ಯಗಳಿಗೆ ಕೇಂದ್ರವು ತನ್ನ ನೆರವಿನ ಪ್ರಮಾಣವನ್ನು ಕಡಿಮೆ ಮಾಡಿದೆ. ಆದುದರಿಂದ, ತಮ್ಮ ಯೋಜನೆಗಳನ್ನು ಇದ್ದಕ್ಕಿದ್ದಂತೆ ಕಾರ್ಯರೂಪಕ್ಕೆ ತರಲು ರಾಜ್ಯ ಸರಕಾರಗಳು ಅಶಕ್ತವಾಗುತ್ತವೆ. ಕೆಲವೊಂದು ಯೋಜನೆಗಳನ್ನು ಅನಿವಾರ್ಯವಾಗಿ ಕೈ ಬಿಟ್ಟರೂ ಬಿಡಬಹುದು ..."

'ಅದೇ ನೋಡಿ, ಕುಂದಾಪುರ ತಾಲೂಕಿನಲ್ಲಿ ಬಂಟ್ವಾಡಿಯಲ್ಲೋ ಮತ್ತೆಲ್ಲೋ ಒಂದು ಸೇತುವೆಯ ಯೋಜನೆಗೆ ಹಲವು ಬಾರಿ ವಿಘ್ನ ಬಂತು; ಈ ಬಾರಿಯೂದರೂ ಆಗಬಹುದೆಂದು ನಂಬಿದ್ದರೆ, ಮತ್ತೆ ಸಮರವಾರಂಭವಾಯ್ತೂಂತ ಆ ಊರಿನ ಜನ ನಿರಾಸೆ ಹೊಂದಿದರೆಂದು ವರದಿಯಾಗಿತ್ತಲ್ಲಾ....."

'ಹ್ಞೂಂ....'

'ಅಲ್ರಿ, ವಿಶ್ವಸಂಸ್ಥೆಯ ವಿಶೇಷ ಪ್ರತಿನಿಧಿಯೊಬ್ಬ .. '

'ಹೌದು, ವಿಟ್ಟೊರಿಯೋ ...'

'ಇವ್ರಿಗೆ ಇಸ್ಲಾಮ್‌ಬಾದಕ್ಕೆ ಹೋಗಿ ದ್ದಾರಲ್ಲಾ?'

"ಅವ್ರು ಬಂದಮ್ಮೇ ಆದಕ್ಕೆ. ಭಾರತ–ಬಾಂಗ್ಲಾದೇಶ ಸರಕಾರದ ಪ್ರತಿನಿಧಿಗಳೊಡನೆ ಮಾತನಾಡಿ ಹೋಗಿದ್ದಾರೆ...."

"ಅವರಿಗೆ ಮುಜಿಬುರರ ಭೇಟಿಯೂಗ ಬಹುದೆ?"

"ಇದು ಯಕ್ಷಪ್ರಶ್ನೆ. ಬಂಧ ಮುಕ್ತಿಯ ವಿಷಯದಲ್ಲೇ ತದಿಗಿಣ ಹಾಕುವಾಗ...."

'ಹೋಗಲಿ ಬಿಡಿ, ಗುಜರಾತದಲ್ಲಿ....'

"ಕರ್ನಾಟಕದ ನಾಟಕ ಪುನಃ ಪ್ರಸಾರವಾಗ ಹತ್ತಿದೆ ..."

'ಅಲ್ರಿ, ಇಲ್ಲಿ ಯುವಕರೆಂದು ಕರೆದುಕೊಳ್ಳುವವರು ನಾಯಕರ ವಿರುದ್ಧ ಬಂಡಾಯವೆದ್ದರೆ, ಅಲ್ಲಿ.. .'

'ಅಲ್ಲೆ, ಅವ್ರಲ್ಲಿ ವಿಶೇಷವೇನೂಂತ?'

'ಏನೂ ಇಲ್ಲವೆ?'

'ನೋಡು ಕಾಂಗ್ರೆಸ್ ವಿಘಟನೆಯೂಪಾಗ, ಅಧಿಕಾರ ಸಹಿತರು—ಅಧಿಕಾರ ರಹಿತರು ಎಂಬ ಎರಡು ಪಂಗಡವಿತ್ತು. ಅಧಿಕಾರ ಸಹಿತರು ಇಂಡಿಕೇಟಿಗೆ ದುಮುಕಿದಲ್ಲಿ ಅಧಿಕಾರ ರಹಿತರು ಅಧಿಕಾರದಾಸೆ ಹೊತ್ತು ಸಿಂಡಿಕೇಟಿನಲ್ಲಿ ತೂರಿಕೊಂಡರು. ಅಧಿಕಾರ ಸಹಿತರು, ಸಿಂಡಿಕೇಟಿನತ್ತ ವಾಲಿ

(ಐಂಭತ್ತನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 75/1970.

ಪಾದಿ— ಶ್ರೀಗೇರಿ ದಾಸ ಪೈ

ಪ್ರತಿವಾದಿರು—ಕೆ. ಮರ್ತಪ್ಪ ಯಾನೆ ಸದಾನಂದ ಕಾಮತ ಕೂಡಾ.

ಉಡುಪಿ ತಾಲ್ಲೂ-ಕಚ್ಚೂರು ಗ್ರಾಮದ ಬಾಕೂರಪ್ಪರಿರುವ ಮರ್ತಪ್ಪ ಯಾನೆ ಸದಾನಂದ ಕಾಮತರ ವಿಧವೆ ಯಮುನಾ ಯಾನೆ ಸರಸ್ವತಿ ಕಾಮತ್‌ರ ಮರ್ತಪ್ಪ ಯಾನೆ ಸದಾನಂದ ಕಾಮತರ ಮಗ ಶ್ರೀನಿವಾಸ ಕಾಮತ್‌ರ ಬೋಳಾ ವಿಟ್ಟಲ ಕಾಮತರ ಮೊಮ್ಮಕ್ಕಳಾದ ಸರೋಜಿನಿ ಯಾನೆ ವಿಕ್ಕಾ ಕಾಮತ್, ಶ್ರೀಗೇರಿ ವಾಸುದೇವ ಪೈಗಳ ಮೊಮ್ಮಕ್ಕಳಾದ ಮೋಹಿನಿ ಯಾನೆ ಸುಶೀಲಾ ಪೈ, ಕಮೇಶ್ವರ ಭಟ್ಟರ ಮೊಮ್ಮಕ್ಕಳಾದ ಶಾಲಿನಿ ಯಾನೆ ನಿರ್ಮಲ ಪೈ, ಮರ್ತಪ್ಪ ಯಾನೆ ಸದಾನಂದ ಕಾಮತರ ಮಕ್ಕಳು ನಾಗವೇಣಿ ಕಾಮತ್, ಮುಕ್ತಾ ಕಾಮತ್, ಪ್ರೇಮಲತಾ ಕಾಮತ್, K. ಸಚು ಕಾಮತ್ ಕೂಡಾ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಪಾದಿಗೆ ಪ್ರತಿವಾದಿರಿಂದ ಬರತಕ್ಕ ಬಹಳ ಲೆಕ್ಕಾಚಾರದ ಹಣ ಬರಸೂಡಿಕೊಳ್ಳುವಲ್ಲಿ ಪಾದಿಯು ಪ್ರತಿವಾದಿರ ಮೇಲೆ ದಾಖ್ಲು ಮಾಡಿದ ಮೇಲಿನ ದಾನೆಯು ತಾ. 21–1–1972ಕ್ಕೆ ತಪ್ಪಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ನುಂದೆ ಹಾಜ್ರಾಗಿ ಜ್ಞಾಪಿಸಿರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿಯದೆ.

N. S. Parameshwaraiah.
Advocate for Plff.

Coondapur, Date 23—12—1971.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
141 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಜೆಯರ್‌ಮೆನ್.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 76/1970.

ಪಾದಿ —S. ವಾಸುದೇವ ಪೈ.

ಪ್ರತಿವಾದಿರು—ಮರ್ತಪ್ಪ ಯಾನೆ ಸದಾನಂದ ಕಾಮತ್ ಕೂಡಾ.

ಉಡುಪಿತಾಲ್ಲೂ ಕಚ್ಚೂರು ಗ್ರಾಮದ ಬಾಕೂರ್‌ವರ್ತಿಯರುವ ಮರ್ತಪ್ಪ ಯಾನೆ ಸದಾನಂದ ಕಾಮತರ ವಿಧವೆ ಯಮುನಾ ಯಾನೆ ಸರಸ್ವತಿ ಕಾಮತ್‌ರ ಮರ್ತಪ್ಪ ಯಾನೆ ಸದಾನಂದ ಕಾಮತರ ಮಗ ಶ್ರೀನಿವಾಸ ಕಾಮತ್‌ರ ಬೋಳಾ ವಿಟ್ಟಲ ಕಾಮತರ ಹೆಂಡ್ತಿ ಸರೋಜಿನಿ ಯಾನೆ ರುಕ್ಮಾ ಕಾಮತ್‌ರ ಶ್ರೀಗೇರಿ ವಾಸುದೇವ ಪೈಗಳ ಹೆಂಡ್ತಿ ಮೋಹಿನಿ ಯಾನೆ ಸುಶೀಲಾ ಪೈ, ರಮೇಶ ಭಟ್ಟರ ಹೆಂಡ್ತಿ ಶಾಲಿನಿ ಯಾನೆ ನಿರ್ಮಲ ಪೈ, ಮರ್ತಪ್ಪ ಯಾನೆ ಸದಾನಂದ ಕಾಮತರ ಮಕ್ಕಳು ನಾಗವೇಣಿ ಕಾಮತ್, ಮುಕ್ತಾ ಕಾಮತ್, ಪ್ರೇಮಲತಾ ಕಾಮತ್, K. ಸಚು ಕಾಮತ್, ಕೂಡಾ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಪಾದಿಗೆ ಪ್ರತಿವಾದಿರಿಂದ ಬರಬೇಕಾದ ಬಹಳ ಲೆಕ್ಕಾಚಾರದ ಹಣ ಬರಸೂಡಿಕೊಳ್ಳುವಲ್ಲಿ ಪಾದಿಯು ಪ್ರತಿವಾದಿರ ಮೇಲೆ ದಾಖ್ಲು ಮಾಡಿದ ಮೇಲಿನ ದಾನೆಯು ತಾ. 21—1—1972ಕ್ಕೆ ತಪ್ಪಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ನುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಞಾಪಿಸಿರು ಮಾಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿಯದೆ.

N. S. Parameswaraiah
Advocate for Plff.

Coondapur., Date 23—12—71.

ಮಾರ್ಕ್ಸ್‌ವಾದಿಗಳು ಅಂದರೆ ಮಾರಕವಾದಿಗಳು

ಆಕ್ರಮಣಕಾರೀ ಮನೋಭಾವನೆಯುಳ್ಳ ದೇಶವು ಹಲವಾರು ತಂತ್ರಗಳನ್ನು ಆಡುತ್ತದೆ. ತಾನು ಆಕ್ರಮಿಸಬೇಕೆಂದಿರುವ ದೇಶದೊಳಗೆ ತನ್ನತ್ತ ಆ ದೇಶದ ಜನರ ಗಮನವನ್ನು ಆಕರ್ಷಿಸಿಕೊಳ್ಳುವದಾಗಿ ತನಗೆ ಜಯಕಾರ ಹಾಕುವ ತಂಡವನ್ನುಂಟು ಮಾಡಲು ಅನುಭವಿಗಳನ್ನು ಕಳುಹಿಸುತ್ತದೆ. ತನ್ನ ಬಂಧು ಹಾಗೂ ಆ ದೇಶದ ಗೆಳೆಯನಂತಿರುವ ದೇಶದ ಸಹಾಯದಿಂದ ಆ ದೇಶವು ಮೈಮರೆತಿರುವಂತೆ, ಯುದ್ಧ ಕ್ಕೆ ಸಿದ್ಧವಾಗಿರುವಂತಹ ಪರಿಸ್ಥಿತಿಯನ್ನುಂಟುಮಾಡಲು ಪ್ರಯತ್ನಿಸುತ್ತದೆ; ಆ ದೇಶದ ಆಸುಪಾಸಿನ ದೇಶಗಳನ್ನು ಆದ ಕ್ಕೆದುರಾಗಿ ಕಾಲು ಕೆದರಿ ಜಗಳಕ್ಕೆಳೆಯುವಂತೆ ಪ್ರೇರೇಪಿಸುತ್ತದೆ. ಇವೆಲ್ಲವನ್ನೂ ನಾವು ಕಣ್ಣಾರೆ ಕಂಡಿರುವೆವು.

ಕಮ್ಯೂನಿಸ್ಟ್ ದೇಶಗಳು ಭಾರತವನ್ನು ಕೆಂಪಾಗಿಸಬೇಕೆಂದು ಪ್ರಯತ್ನಿಸುತ್ತಿವೆ. ಈ ವಿಷಯದಲ್ಲಿ ಆ ದೇಶಗಳೊಳಗೆ ರಂದ್ಯಾಟ-ಸ್ಪರ್ಧೆ ಸಾಗುತ್ತಿದೆ. ಚೈನಾವು ಕಮ್ಯೂನಿಸ್ಟ್ ದೇಶವಾದ ಮೇಲೆ ಅದು ನಮ್ಮನ್ನು ನುಂಗಲು ನಾಲಗೆ ಚಾಚಿದೆ. ಆದರ ಬಾಲಬಡುಕ ಕಮ್ಯೂನಿಸ್ಟರಂತೂ ಮೂವನಿಗೆ ಜಯಕಾರ ಹಾಕುತ್ತ, ನಮ್ಮ ನೇತಾರಗಳನ್ನು ನಿಂದಿಸುತ್ತ ದೇಶವನ್ನು ಛಿದ್ರ ವಿಛಿದ್ರಗೊಳಿಸಲು ಮುಂದಾಗಿದ್ದಾರೆ. ಸೋವಿಯತ್ ಭಾರತ ಒಪ್ಪಂದದಿಂದಾಗಿ ಪಾಕಿಸ್ತಾನೀ ಆಕ್ರಮಣದ ಕಾರ್ಮೋಡ ಸದ್ಯಕ್ಕೆ ದೂರ ಸರಿಯಿತೆಂದು ಕೆಲವು ಮುಂದಾಳುಗಳು ಸಾರಿದರು. ಹೊಸ ಕಾಂಗ್ರೆಸ್ಸಿನ ಅಧ್ಯಕ್ಷ ಸಂಜೀವಯ್ಯನವರಂತೂ ಸಂತಸದಿಂದ ಕೈಲಾಸ ನಗರದಲ್ಲಿ ಸಾರಿಬಿಟ್ಟರು ಪಾಕಿಸ್ತಾನ ನಮ್ಮ ಮೇಲೆ ವಿಷ ಕಾರುತ್ತಿದ್ದು ಕೆರುಕುಳ ಕೊಡುತ್ತ ಬಂದಿದೆ. ಅದನ್ನು ಪ್ರಜೋದಿಸಿ, ಶಸ್ತ್ರಾಸ್ತ್ರಗಳನ್ನಿತ್ತು, ತರಬೇತಿ ಕೊಟ್ಟು ಆಕ್ರಸಿನುವಂತೆ ಚೈನಾ ಚಕ್ಕಂದದಾಟವನ್ನಾಡಿತ್ತು.

ಪಾಕಿಸ್ತಾನ ನಮ್ಮ ಮೇಲೆ ಯುದ್ಧ ಸಾರಿತು. ಅದರ ಕೆರುಕುಳಗಳೆಲ್ಲವನ್ನೂ ಶಾಂತವಾಗಿ ಸಹನೆಯಿಂದ ಸಹಿಸಿಕೊಂಡು ಬಂದಿದ್ದ ಇಂದಿರಾಜಿಯವರು ಇನ್ನು ಧೀರ ತನದಿಂದ ವರ್ತಿಸಬೇಕೆಂದು ಜಗ್ಗನೆದ್ದು ನಿಂತರು. ರಾಜಕೀಯ ಪಕ್ಷಗಳನೇಕವು ತಮ್ಮನ್ನು ವಜ್ರಾಯುಧವನ್ನಾಗಿ ಮಾರ್ಪಡಿಸಿಕೊಂಡು ಪ್ರಧಾನಿಯವರಿಗೆ ಸಮರ್ಪಿಸಿಕೊಂಡವು. ಇಂದಿರಾಜಿಯವರು ಅದರ ಪೂರ್ಣ ಲಾಭ ಪಡೆದುಕೊಂಡರು. ಇದನ್ನು ಕಮ್ಯೂನಿಸ್ಟ್ ಪಾರ್ಟಿಗಳು ಮುಸ್ಲಿಂ ಲೀಗು, ದ್ರಾವಿಡ ಮುನ್ನೇಟ್ರ ಕಳ್ಳಗಮಿನಂತಹ ಪ್ರತ್ಯೇಕತಾ ಮನೋಭಾವನೆಯುಳ್ಳ ಪಕ್ಷಗಳು ಸಹಜವಾಗಿ ಸಹಿಸಬೆ ಎದುರಿಸುವಂತೆ ಇತ್ತು. ಆರಂಭದಲ್ಲಿ ಪೂರ್ವ ಬಂಗಾಲದ ವಿಷಯದಲ್ಲಿ ಮುಸ್ಲಿಂ ಲೀಗು ತಳೆದಿದ್ದ ಧೋರಣೆ ಆ ರೀತಿಯಲ್ಲಿತ್ತು. ಪಾಕಿಸ್ತಾನಕ್ಕಾಗಿ ಮತದಾನ ಮಾಡಿದ್ದ ಪಕ್ಷವಲ್ಲವೇ ಅದು? ಹಾಗಿರುವಾಗ ಪಾಕಿಸ್ತಾನ ಒಡೆದು ಹೋಗುವುದನ್ನು ಆದೆಂತು ಸಹಿಸಿಕೊಂಡೀತು? ದ್ರಾವಿಡ ಮುನ್ನೇಟ್ರ ಕಳ್ಳಗಮಿನತಹಂಹ ಪ್ರತ್ಯೇಕತಾವಾದಿ ಪಕ್ಷಗಳಿಗೆ ಇದೊಂದು ಸ್ವಲಾಭಕ್ಕಾಗಿ ಭವಿಷ್ಯ (1)ರಲ್ಲಿ ಉಪಯೋಗಿಸಿಕೊಳ್ಳಬಹುದಾದಂತಹ ಸಂಭವ ಇರುವುದರಿಂದ ಅವರು ಮುಸ್ಲಿಂ ಲೀಗಿನ ಸಂಪರ್ಕ ಪಾಕಿಸ್ತಾನದ ಮೇಲಿನ ಪ್ರೇಮವನ್ನು ಪರದೆಯೊಳಗೆ ತಳ್ಳಿ ಬಯಲಿನಲ್ಲಿ ಇಂದಿರಾಜೀಯವರ ಹಿಂದೆ ನಿಂತವು ಇನ್ನುಳಿದದ್ದು ಕಮ್ಯೂನಿಸ್ಟ್ ಪಾರ್ಟಿ. ಅದು ಇಲ್ಲಿ ತನ್ನ ದ್ವಂದ್ವವನ್ನಾಡಿತು. ಒಂದು ಗುಂಪು ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯೊ ಇಂದಿರಾಜಿಯವರೊಟ್ಟಿಗೆ ನಿಂತಲ್ಲಿ, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯೊ ಮಾರ್ಕ್ಸ್‌ವಾದಿಯು ಹಾಗೆ-ಹೀಗೆ ಆಡಲಾರಂಭಿಸಿತು ಉಳಿದ ನಾಶಕಾರಕ ಕಮ್ಯೂನಿಸ್ಟ್ ದುಃಶಕ್ತಿಗಳು ನಾಶಕಾರಕ ಕರಿಕೃತ್ಯಗಳಲ್ಲೇ ಮಗ್ನವಾಗಿದ್ದುವು

ದೇಶದೊಳಗಿದ್ದು ಕಾಲ ಬುಡದಲ್ಲಿ ಹೊಂಡ ಅಗೆಯುವ ನಾಶಕಾರಕ ದುಃಶಕ್ತಿಗಳ ಅರಿವಿದ್ದುದರಿಂದ ಇಂದಿರಾಜೀಯವರು ತುರ್ತು ಪರಿಸ್ಥಿತಿ, ಭಾರತ ರಕ್ಷಣಾ ಕಾನೂನು ಮುಂತಾದ ಅಧಿಕಾರದ ಅಸ್ತ್ರಗಳನ್ನು ಆಂಗೈಯಲ್ಲಿ ತೆಗೆದುಕೊಂಡರು. ಮುಸ್ಲಿಂಲೀಗು ಮತ್ತು ದ್ರಾ ಮು. ಕ. ಇಂದಿರಾಜೀಯವರಿಗೆ ಜಯಕಾರ ಹಾಕಿದುವು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಇದಕ್ಕೆ ಜಗ್ಗಲಿಲ್ಲ. ಡಿಲ್ಲಿಯಲ್ಲಿದ್ದ ಆದರ ನಾಯಕರು ಅಪಾಯದಿಂದ ದೂರ ಕ್ಯುಳಿಯುವ ಸಲುವಾಗಿ ಇಂದಿರಾಜೀಯವರ ಎಲ್ಲರೂ ಸಹಾಯ—ಸಹಕಾರ ಸಲ್ಲಿಸಬೇಕೆಂದು ರಾಗ ತೆಗೆಯುತ್ತಿದ್ದರೂ ಅವರ ರಾಜಕೀಯ ಸೂತ್ರಧಾರರು, ಅದರಲ್ಲೂ ಮುಖ್ಯವಾಗಿ, ನಂಬೂದರಿ ಪಾದರಂತೂ ಬಹಿರಂಗವಾಗಿ ಭಾರತ ಸರಕಾರದ ಮೇಲೆ ಆರೋಪದ ಹೊರೆಯನ್ನು ಹೊರಿಸುತ್ತ ಬಂದಿರುವರು ಪಾಕಿಸ್ತಾನ ಕಾಲು ಕೆದರುತ್ತಿದ್ದಾಗ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಪ್ರತ್ಯೇಕತೆಯ ಉಪಸ್ಥರವನ್ನೆತ್ತಿತು. ಹಾಗೆಯೇ ಮುಂದರಿದು, ಭಾರತ ಸರಕಾರವನ್ನು ಬೆವರಿಸುವಲ್ಲಿಗೂ ನಾಗಿತು.

ಕೇರಳ ವಿಧಾನ ಸಭೆಯು ಪ್ರಧಾನಿಯವರಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ಸೂಚಿಸಲಿಕ್ಕಾಗಿಂದು ಸೇರಿದಾಗ ನಂಬೂದ್ರಿಪಾದರು ಮಾತಿನ ಸಿಡಿಗುಂಡನ್ನೆಸೆದರು. ಕೇರಳ ವಿಧಾನ ಸಭೆಯಲ್ಲಿ ನಂಬೂದ್ರಿಪಾದರು ಮಾರ್ಕ್ಸಿಸ್ಟ್ ಪಾರ್ಟಿಯ ಪ್ರಮುಖರಿದ್ದಾರೆ ತನ್ನ ಭಾಷಣದಲ್ಲಿ, ತನ್ನ ಅಭಿಪ್ರಾಯವೆಂಬುದನ್ನೆಳೆಯರು ತಿಳಿಸದೆ, ತನ್ನ ಪಕ್ಷದ ಅಭಿಪ್ರಾಯವೆಂದಿರುವದೂ ಗನುಸೀಯವಿದೆ. ವಿಧಾನಸಭೆ ಸ್ವೀಕರಿಸಿದ ಗೊತ್ತುವಳಿಗೆ ತಮ್ಮ ಒಂದು ರೀತಿಯ ವಿರೋಧವನ್ನು ಅವರು ಸ್ಪಷ್ಟವಾಗಿ ವ್ಯಕ್ತಪಡಿಸಿದರು. ತನ್ನ ಕರ್ತವ್ಯಗಳಿಗೆ ಭಾರತ ಸರಕಾರ ಸಮ್ಮತಿ ಸೂಚಿಸದಿದ್ದಲ್ಲಿ ಯುದ್ಧ ಪ್ರಯತ್ನಗಳಲ್ಲಿಪ್ಪೂ ಹೊಳೆಯಲ್ಲಿ ಹುಣಿಸೆ ಪಣ್ಣು ಹಾಕಿದೆಂತೆಂದರು ಎಂತಹ ಮಾತು!

ಇತರ ಕೆಲವು ರಾಜಕೀಯ ಪಕ್ಷಗಳಿರುವಂತೆ ಮಾರ್ಕ್ಸಿಸ್ಟರಿಗೆ ಮಾತು ಮಾತ್ರ ಬಂಡವಾಳ ಇರುವುದಿಲ್ಲ ಅವರು ಕೃತಿಗೂ ಕೈ ಕೊಡುವದನ್ನು ಕಾಣಬಹುದು. ಯುದ್ಧ ಪ್ರಯತ್ನಗಳನ್ನು ಹಾಳುಗೆಡವಲು ಅವರು ಮುಂದಾದರು. ಕೇಂದ್ರ ಸರಕಾರದ ಉದ್ಯೋಗಸ್ಥರಿಗೆ ತುಟ್ಟಿಭತ್ತೆ ಕೊಡಲು ಕೇಂದ್ರಸರಕಾರ ಮಿನಮೇಷ ಎಣಿಸುತ್ತಿದ್ದಾಗ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯು, ತುಟ್ಟಿಭತ್ತೆಕೊಡದಿದ್ದಲ್ಲಿ ದೇಶವಾದ್ಯಂತ ಆಂತರಿಕ ಜಗಳ ಉಂಟಾಗುತ್ತದೆಂದು ಮಾತಿನ ಸಿಡಿಗುಂಡು ಹಾರಿಸಿತು. ಕೇಂದ್ರ ಸರಕಾರದ ಉದ್ಯೋಗಸ್ಥರು ಅವರ ಬಗಲಿನೊಳಗೆಬೀಳದಿದ್ದಾಗ ಅವರು ಇತರ ಕಾರ್ಮಿಕರತ್ತ ಕಣ್ಣು ಹಾಯಿಸಿದರು ಅವಸರ ಪರಿಸ್ಥಿತಿ ಜಾರಿಗೆ ಬರುವ ಹಿಂದೆ ಎಲ್ಲೆಲ್ಲಿ ಸಂಪು ನಡೆಯುತ್ತಿತ್ತೋ ಅದು ಹಾಗೆಯೇ ಉಳಿಯುವಂತೆ ಇರಲು ಅವರು ಶ್ರಮಿಸಿದರು. ಇದರಿಂದ ಉತ್ಪಾದನೆ ಕಮ್ಮಿಯಾದುದಕ್ಕಿಂತಲೂ ಕಾರ್ಮಿಕರ ಮನೋಭಾವನೆ ದೇಶಹಿತಕ್ಕೆ ವಿರುದ್ಧವಾಗಿ ಹೋಗುವಂತಾದದ್ದೇ ಮುಖ್ಯವಿದೆ. ಸಂಪು ಕೊನೆಗಾಗುವಂತೆ ಅವರು ಕಣ್ಣಿಗೆ ಎಣ್ಣೆಹಾಕಿಕೊಂಡು ಎಚ್ಚರಿಕೆ ವಹಿಸಿದರು.

ಅಮೇರಿಕವನ್ನು ಖಂಡಿಸುವ ನೆವನದಲ್ಲಿ ಚಿಕ್ಕ ಪುಟ್ಟ ಬಾಲಕರೂ, ಕಾರ್ಮಿಕರೂ ಗಲಾಟೆ ಮಾಡುವಂತೆ ಪ್ರಯತ್ನಿಸಿದರು. ಕಾಳಸಂತೆಕೋರರನ್ನು ಖಂಡಿಸುವ ನೆವನದಲ್ಲಿ ವ್ಯಾಪಾರೀ ವರ್ಗವನ್ನು ಕೊಳ್ಳಿ ಹೊಡೆಯುವಂತೆ ಪ್ರಚೋದಿಸಲಾಯಿತು. ಇವೆಲ್ಲವೂ ತುರ್ತುಪರಿಸ್ಥಿತಿ, ರಕ್ಷಣಾ ಕಾನೂನು ಇತ್ಯಾದಿ ಬಳಕೆಯಲ್ಲಿದ್ದು ಪಾಕಿಸ್ಥಾನ ಆಕ್ರಮಣ ನಡೆಸಿದ್ದ ವೇಳೆಯಲ್ಲಿ! ಹಾಗಾಗಿ ಈ ಕಾನೂನುಗಳ ಕಲೆಯ ಮೇಲೆಯೆ ಆಲ್ಲಲ್ಲಿ ಗಲಭೆ ಆಮಲಿಗೆ ಬರಬೇಕಾಯಿತು!

ಇದರಿಂದ ಮಾರ್ಕ್ಸ್‌ವಾದಿಗಳೆಂದರೆ ಮಾರಕವಾದಿಗಳೆನ್ನುವದು ಸ್ಪಷ್ಟವಾಗಿರುತ್ತದೆ. ಕೇವಲ ಅಧಿಕಾರದತ್ತ ಕಣ್ಣಿಟ್ಟುಕೊಂಡಿರುವವರು ಇದನ್ನು ಗಮನದಲ್ಲಿಟ್ಟು ದೇಶ ಹಿತ ದೃಷ್ಟಿಯಿಂದ ವರ್ತಿಸುತ್ತಾರೆನ್ನುವದು ಸಂದೇಹಾಸ್ಪದವೇ ಸರಿ. ಆ ಧೈರ್ಯದ ಮೇಲೆಯೇ ಮಾರಕವಾದಿಗಳು ಹಿಂಜರಿಯದೆ ಮಾರಕ ಕುಕೃತ್ಯಗಳನ್ನು ನಡೆಸುತ್ತ ಬರುತ್ತಿದ್ದಾರೆ.

—ಶ್ರೀ ಶಿವಕಿಂಕರ

●●

ಖಂಡನ ಸುಲಭ; ಮಂಡನ ಕಷ್ಟದಾಯಕ.

○ ○ ○

ಎಂ. ಜಿ. ಎಂ. ಸಮಾಜ ಸೇವಾ ಶಿಬಿರ ಸಮಾರೋಪ

ಆದನೂರು ಹೈಸ್ಕೂಲಿನಲ್ಲಿ ಜರಗಿದ ಉಡುಪಿ ಎಂ ಜಿ. ಎಂ. ಕಾಲೇಜಿನ ಸಮಾಜ ಸೇವಾ ಶಿಬಿರದ ಸಮಾರೋಪ ಸಮಾರಂಭವು ಉಡುಪಿ ತಾಲೂಕು ಅಭಿನೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿತು.

ಧರ್ಮಸ್ಥಳದ ಶ್ರೀ ವಿ ವೀರೇಂದ್ರ ಹೆಗ್ಗಡೆಯವರು ಸಮಾರೋಪ ಭಾಷಣ ಮಾಡುತ್ತಾ ವಿದ್ಯಾರ್ಥಿಗಳು ನೈಪಿಕವಾಗಿಯೂ ಮಾನಸಿಕವಾಗಿಯೂ ಬೆಳೆಯಬೆ ಇರುವುದಕ್ಕೆ ಶಿಬಿರವು ಅವರಿಗೆ ಬೇಕಾದ ಸವಲತ್ತುಗಳನ್ನೊದಗಿಸುವುದೇ ಕಾರಣ ಎಂದರು

ಎಸ್. ಸಿ. ಸಿ. ಅಧಿಕಾರಿ ಶ್ರೀ ಎಸ್. ನಜ್ರು-ಹೊರವರು ಶಿಬಿರದ ಬಗ್ಗೆ ಮಾತಾಡಿ, ಶಿಬಿರದ ಆಂಗವಾಗಿ ನಡೆದಾಲದ ಡಾ! ರಾಧಾ ಅವಮೂರು ಮತ್ತು ಸದುಪಯೋಗದಲ್ಲಿ ದಂತ ಚಿಕಿತ್ಸಾ ಶಿಬಿರ ತೆರೆದು ಸುಮಾರು 800 ಜನರಿಗೆ ಚಿಕಿತ್ಸೆ ನೀಡಿದರೆಂದು, ಮುಂಜಾನೆ 5 ಗಂಟೆ ಶ್ರಮದಾನ, ಸಂಜೆ ವಿಚಾರ ಗೋಷ್ಠಿಗಳು ನಡೆದು ಇದರಲ್ಲಿ ಗ್ರಾಮೀಣ ಜನರು ಭಾಗವಹಿಸಿದರೆಂದೂ ತಿಳಿಸಿದರು. ಎಸ್.ಸಿ.ಸಿ. ಕಾರ್ಯದರ್ಶಿ ಶ್ರೀ ಆರ್. ಗಣಪತಿ ಮಾತಾಡಿದ ಬಳಿಕ, ಶ್ರೀ ಬಿ. ಕೃಷ್ಣ ಪೈಯವರು ವಿಚಾರಗೋಷ್ಠಿ ಕುರಿತು ವಿವರಗಳನ್ನು ನೀಡಿದರು. ಶ್ರೀ ಶಾಂತಿರಾಜ ಆರ್ಸು ಸೂರಮ್ಮ, ಹೆಗ್ಗಡೆ, ಆದನೂರು ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎ. ಶ್ರೀನಿವಾಸ ಭಟ್ ಮತ್ತು ಶ್ರೀ ಕೆ. ವಿಶ್ವನಾಥ ರಾವ್ ಇವರುಗಳು ಶಿಬಿರದ ಬಗ್ಗೆ ಮಾತಾಡಿದರು.

ವಿದ್ಯಾರ್ಥಿ ಕಲ್ಯಾಣಾಧಿನೃದ್ಧಿ ಪಾತೆಯ ಅಸಿಸ್ಟಾಂಟ್ ಡೀನ್ ಶ್ರೀ ಬಿ. ಕೆ. ಶಿವಣ್ಣನವರು ಮೈಸೂರು ವಿಶ್ವವಿದ್ಯಾನಿಲಯದ ಪರವಾಗಿ ಮಾತಾಡಿ ವಿದ್ಯಾನಿಲಯದ ಸಮಾಜಸೇವಾ ಯೋಜನೆ ಸಫಲವಾಯಿತೆಂದರು.

ಶ್ರೀ ಎಂ. ಮಧ್ವರಾಜರು ಅಧ್ಯಕ್ಷ ಭಾಷಣ ಮಾಡುತ್ತಾ, ವಿದ್ಯಾರ್ಥಿ ಜೀವನದಲ್ಲಿ ಆತ್ಮ ವಿಶ್ವಾಸ ಬೆಳೆಸಿಕೊಳ್ಳಬೇಕು. ಸೇವಾ ರೂಪದ ಇಂಥ ಕಾರ್ಯಗಳು ವಿದ್ಯಾರ್ಥಿಗಳಲ್ಲಿ ಅಂತಃಶಕ್ತಿ, ಸಾಮರ್ಥ್ಯಗಳನ್ನೂ ನೀಡುತ್ತವೆ ಎಂದರು.

ಶ್ರೀ ಮಾರ್ಪಳ್ಳಿ ಸಂಜೀವ ಶೆಟ್ಟಿರು ಶಾಲಾ ರಂಗಮಂಟಪಕ್ಕಾಗಿ ರೂ 1001 ನೀಡಿದ್ದು, ಶ್ರೀ ವೀರೇಂದ್ರ ಹೆಗ್ಗಡೆಯವರು ಆದನ್ನು ಶಾಲಾ ಮುಖ್ಯೋಪಾಧ್ಯಾಯರಿಗೆ ಹಸ್ತಾಂತರಿಸಿದರು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27

Phone No.— 1 72303 2 72704 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಉಡುಪಿ ಇತಿಹಾಸದ ಸಹಜತೆಗಳು

ಪ್ರಿನ್ಸಿಪಾಲ್ ಡಾ। ಪಿ. ಗುರುರಾಜ ಭಟ್

ಉಡುಪಿಯ ಇತಿಹಾಸಕ್ಕೆ ಸಂಬಂಧಿಸಿದ ಹಲವಾರು ಪ್ರಶ್ನೆಗಳಿಗೆ ನೂರಾರು ಬಗೆಯ ಉತ್ತರಗಳು ಪ್ರಚಲಿತವಾಗಿವೆ ಡಾ। ಭಟ್ಟರು ಪ್ರಮಾಣ ಪುರಸ್ಸರವಾದ ಉತ್ತರಗಳನ್ನು ನೀಡಿದ್ದಾರೆ ಗತಾನುಗತಿಕ ಉತ್ತರಗಳು ಆವೈಜ್ಞಾನಿಕ ಮತ್ತು ಸುಳ್ಳುಕಂತೆಗಳೆಂಬುದು ಪರಿಶೀಲನೆಯಿಂದ ತಿಳಿಯುತ್ತದೆ

ಉಡುಪಿ ಎಂಬ ಹೆಸರು ಹೇಗೆ ಬಂದಿರಬಹುದು?

ನಕ್ಷತ್ರ (ಉಡು)ಗಳ ಒಡೆಯನಾಗಿ(ಪ) ಚಂದ್ರನಿಗೆ ಈಶ್ವರನು ಪ್ರತ್ಯಕ್ಷನಾದ ಸ್ಥಳ ವೆಂಬ ಅರ್ಥದಲ್ಲಿ ಉಡುಪಿ ಎಂಬೀ ಹೆಸರು ಬಂದಿದೆ ಎಂಬುದಾಗಿ ಸ್ಥಳ ಪುರಾಣ ತಿಳಿಯ ಪಡಿಸುತ್ತದೆ ಆನಂತರ ಇನ್ನಲ್ಲಿ ಹೆಚ್ಚಿನ ಔಚಿತ್ಯವಿದ್ದಂತೆ ತಿಳಿದುಬರುವುದಿಲ್ಲ. 'ಉಡುಪ' ಎಂಬ ಪದಕ್ಕೆ 'ನಾಗ' (ಶೇಷ) ನೆಂಬ ಅರ್ಥವೂ ಇದೆ (ಕಿಟ್ಟೆಲ್) ಆದುದರಿಂದ ಸ್ಕಂದಾರಾಧನೆಗೆ, ನಾಗೋಪಸೇನೆಗೆ ಪ್ರಾತಿನಿಧ್ಯ ಸ್ಥಳವೆಂಬ ಅರ್ಥವಲ್ಲಿ 'ಉಡುಪು' (ಉಡುಪಿ) ಎಂದು ವ್ಯವಹಾರದಲ್ಲಿ ಬಂದಿರಬಹುದು 'ಒಪ್ಪು' ಎಂಬುದು ತಪ್ಪಲ್ಲ ಭಾಷೆ ಎಂದು ಶ್ರೀ ನಾರಾಯಣ ಪಂಡಿತಾರ್ಯರು ಅಭಿಪ್ರಾಯಪಟ್ಟ ಕಾರಣ 'ಉಡುಪು' ಇದರ ವ್ಯುತ್ಪತ್ತಿ ಸಂಸ್ಕೃತ ಶಬ್ದದಿಂದ ಆಗಿರಲಿಕ್ಕಿಲ್ಲ 1913ರಲ್ಲಿಯೇ ನಕ್ಷತ್ರಗಳ ಒಡೆಯ ಚಂದ್ರನಿಂದ ಬಂದಿರಬಹುದಾದ ಹೆಸರು ಉಡುಪಿ ಎಂಬ ಅಭಿವ್ಯಾಖ್ಯೆಗೆ ವಿಘ್ನನಾದ ಬಾದ ವ್ಯಕ್ತವಾಗಿತ್ತು

4 ಶಿವಳ್ಳಿ ಎಂದರೇನು? ಇದರ ಉಲ್ಲೇಖ ಎಷ್ಟು ಪ್ರಾಚೀನ?

ಶಿವನ ವೂರು ಶಿವಳ್ಳಿ (ಶಿವಹಳ್ಳಿ) ಈ ಹೆಸರು ಇಡೀ ಗ್ರಾಮಕ್ಕೆ ತನ್ಮಯಿಸಿತ್ತು ಉಡುಪಿ ಶ್ರೀ ಅನಂತೇಶ್ವರ ದೇವಾಲಯ ದ ಅಸ್ತಿತ್ವದಿಂದ ಶಿವಳ್ಳಿ ಎಂಬೀ ಹೆಸರು ಬಂದಿರಬೇಕು ಕ್ರಿ ಶ 8—9ನೇ ಶತಮಾನದ ಉತ್ಖನನದಲ್ಲಿ ದೊರಕಿದ ಶಾಸನಗಳಲ್ಲಿ ಶಿವಳ್ಳಿಗ ಉಲ್ಲೇಖವಿದೆ ಶಿವಳ್ಳಿಯ ಬ್ರಹ್ಮಪುರದ ಪ್ರಮುಖತೆಯನ್ನು ಬನವಾಸಿ ಮತ್ತು ನಾರಣಾಪುರಿಗೆ ಹೋಲಿಸಿದ್ದಾರೆ

5 ಶಿವರೊಪ್ಯ, ಶಿವಬೆಳ್ಳಿ ಎಂಬೀ ರೂಪಗಳು ಎಂದು ಪ್ರಚಾರಕ್ಕೆ ಬಂದುವು?

ಪ್ರಾಯಶಃ ಈ ರೂಪಗಳು ಕ್ರಿ ಶ 14ನೇ ಶತಮಾನದಿಂದ ಈಚೆಗೆ ಬಳಕೆಗೆ ಬಂದುವು

7 ಅನಂತೇಶ್ವರ ದೇವಾಲಯದ ದೇವತಾ ಸ್ವರೂಪ ಯಾವುದು?

ಅನಂತೇಶ್ವರ ದೇವಾಲಯದ ಮೂಲ ಸ್ಥಾನ ದೇವತೆ ಶಿವ—ಈಶ್ವರ—ಸದಾಶಿವ

8 'ಅನಂತೇಶ್ವರ'ವೆಂದರೆ ಯಾರು?

'ಅನಂತ' ಎಂದರೆ ಶೇಷ ಅಥವಾ ನಾಗ ಅಥವಾ ಸ್ಕಂದ ಈಶ್ವರವೆಂದರೆ ಸದಾಶಿವ ಅನಂತೇಶ್ವರವೆಂದರೆ ಶಿವ—ಸ್ಕಂದ ಸುಬ್ರಹ್ಮಣ್ಯ ಮತ್ತು ಸದಾಶಿವ ಈ ದೇವತೆಗೆ ಕ್ರಿ ಶ 1614ರಲ್ಲಿ ಮುರುಗೇಶ್ವರವೆಂಬ ಅಭಿದಾನವಿದೆ ಮೂದ್ದರು ಈ ದೇವತೆಯನ್ನು ಅನಂತಪದ್ಮನಾಭವೆಂದು ಕರೆಯುವುದು ಅವರ ತತ್ವಕ್ಕನುಸಾರವಾಗಿದೆ ಈಶ್ವರನಾದರೂ ಅವನ ಅಂತರ್ಯಾಮಿ ಶ್ರೀ ಮಹಾವಿಷ್ಣು

9 ಉಡುಪಿಯಲ್ಲಿ ವೈಷ್ಣವ ಪಂಥ ಎಂದು ಪ್ರಚಾರಕ್ಕೆ ಬಂತು?

ಶ್ರೀ ಶಂಕರಾಚಾರ್ಯರ ಶಿಷ್ಯರಾದ ಶ್ರೀ ಪದ್ಮನಾಭತೀರ್ಥರು ರಜತಪೀಠಪುರಕ್ಕೆ ಆಗಮಿಸಿ ಶ್ರೀಕೃಷ್ಣ ಪ್ರತಿಮೆಯನ್ನು ಸ್ಥಾಪಿಸಿದರು ಇದು ಆನಂದಗಿರಿ ವಿರಚಿತ ಶಂಕರ ವಿಜಯದಿಂದ ತಿಳಿದು ಬರುತ್ತದೆ ಅಂದಿನಿಂದ ವೈಷ್ಣವ ಪಂಥ ಪ್ರಾರಂಭವಾಯಿತೆನ್ನಬಹುದು

11 ಶ್ರೀ ಮಧ್ವಾಚಾರ್ಯರು ಸಾರಸ್ವತರೇ?

ಐತಿಹಾಸಿಕ ವಿಷಯಗಳನ್ನು ಸರಿಯಾಗಿ ತಿಳಿಯದೆ ಶ್ರೀ ಮಧ್ವಾಚಾರ್ಯರು ಸಾರ



ಅನಂತೇಶ್ವರ ದೇವಸ್ಥಾನದ ಮುಂಗಡೆಯಿರುವ ಸುಮಾರು ೫೧ ಅಡಿ ಎತ್ತರದ ಅಷ್ಟಭುಜಾಕೃತಿಯ ಶಿಲಾಸ್ತಂಭ

ಅನಂತೇಶ್ವರ ದೇವಸ್ಥಾನ

2 ಉಡುಪಿ ಈ ಹೆಸರು ಎಷ್ಟು ಪ್ರಾಚೀನ?

ನವಗಿಸ್ಸರ ತನಕ ದೊರಕಿದ ದಾಖಲೆ ಪ್ರಕಾರ ಕ್ರಿ ಶ 1366ರ ದಾಖಲೆಯು (ಕಲ್ಬರಹ) ಉಡುಪಿಗೆ ಉಲ್ಲೇಖ ಮಾಡುವ ಆತಿ ಪ್ರಾಚೀನ ದಾಖಲೆ ಇದಕ್ಕಿಂತ ಒಂದು ಶತಮಾನದಷ್ಟಾದರೂ ಪ್ರಾಚೀನ ಈ ಹೆಸರಿರಬಹುದು ನೋದಲು ಈ ಸ್ಥಳ ಒಂದು ಸೀಮಿತ ಜಾಗಕ್ಕೆ ತನ್ಮಯಿಸಿತ್ತು

3 ರಜತಪೀಠಪುರವೆಂಬ ಹೆಸರು ಎಷ್ಟು ಪ್ರಾಚೀನ?

ಈಗ ಉಡುಪಿ ಎಂದು ಕರೆಯಲ್ಪಡುವ ಸ್ಥಳಕ್ಕೆ ರಜತಪೀಠಪುರವೆಂಬ ಹೆಸರಿದೆ ಶ್ರೀ ಶಂಕರ ವಿಜಯದಲ್ಲಿ ಇದಕ್ಕೆ ಉಲ್ಲೇಖವಿದೆ ಈ ಗ್ರಂಥದ ಕಾಲ ಸು ಕ್ರಿ ಶ 10ನೇ ಶತಮಾನ. ರಜತಪೀಠಪುರಕ್ಕೆ ಶಾಸನಗಳಲ್ಲಿ ಉಲ್ಲೇಖವಿಲ್ಲ ಶಿವಳ್ಳಿಗೆ ಉಲ್ಲೇಖವಿದೆ

ಶ್ರೀ ಸುಮಧ್ವ ವಿಜಯದಲ್ಲಿ 'ಶಿವರೊಪ್ಯ ನಾಮ'ವೆಂದಿದೆ ಎಂದರೆ ಶಿವ ಬೆಳ್ಳಿ ಎಂದರ್ಥ ಶಿವಳ್ಳಿಯೇ ಶಿವಬೆಳ್ಳಿಯೂಯಿತು ದೊರತು ಶಿವಬೆಳ್ಳಿಯಿಂದ ಶಿವಳ್ಳಿ ಹೊರಟ ಪದವಲ್ಲ

6. ಉಡುಪಿಯ ಅತಿ ಪ್ರಾಚೀನ ಚಾರಿತ್ರಿಕ ಅವಶೇಷ ಯಾವುದು?

ಗಜಪೃಷ್ಠಾಕಾರದಲ್ಲಿರುವ, ಅದ್ಭುತನಾದ ರೀತಿಯಲ್ಲಿ ಇಟ್ಟಿಗೆಗಳಿಂದ ರಚಿತವಾದ ಪೂಡುಳ್ಳ ಬೃಹದಾಕಾರದ 12 ಕಂಬಗಳಿಂದ ಕೂಡಿದ ನವರಂಗವುಳ್ಳ, ಸ್ಥಾಪನೆಗೆ ಲಕ್ಷಣಗಳನ್ನೊಳಗೊಂಡ 10ಾಂಚು ಎತ್ತರದ ಪ್ರಧಾನ ಬಾಲಪೀಠವಿರುವ ಪ್ರಾಚೀನ ಶಾಸ್ತಾರ ಮೂರ್ತಿಯನ್ನೊಳಗೊಂಡ ಶ್ರೀ ಅನಂತೇಶ್ವರ ದೇವಾಲಯವು ಕ್ರಿ ಶ 9ನೇ ಶತಮಾನದ್ದಿದ್ದು ಉಡುಪಿಯ ಅತಿ ಪ್ರಾಚೀನ ಅವಶೇಷವಾಗಿದೆ.



ಚಂದ್ರೇಶ್ವರ ದೇವಸ್ಥಾನ

10 ಶ್ರೀ ಮಧ್ವಾಚಾರ್ಯರಿಗೆ ವಾಸುದೇವನೆಂಬ ಹೆಸರನ್ನೇಕೆ ಇರಿಸಿದರು?

ರಜತಪೀಠಪುರಾಧಿವಾಸಿಯೂದ ಶ್ರೀ ವಾಸುದೇವನನ್ನು (ಶ್ರೀ ಕೃಷ್ಣ), ಭುಜಂಗ ಶಯನನನ್ನು ಹನ್ನೆರಡು ವರ್ಷಗಳ ತನಕ ಪೂಜಿಸಿ ಶ್ರೀ ಆಚಾರ್ಯರ್ಯರು ಜನಿಸಿದ್ದರಿಂದ ಅವರಿಗೆ ವಾಸುದೇವನೆಂಬ ಹೆಸರಿನ್ನಿತ್ತರು.

12 ಶ್ರೀ ಮಧ್ವಾಚಾರ್ಯರ ಕೊಡುಗೆ ಏನು?

ಶ್ರೀ ವೈಷ್ಣವ ಸಿದ್ಧಾಂತವನ್ನು ಪುನಃ ಪ್ರತಿಷ್ಠಾಪಿಸಿ ಎಲ್ಲ ಜೈತನ್ಯಗಳೂ ಜಡವಸ್ತುಗಳೂ ಚರಾಚರ ವಸ್ತುಗಳೂ ವಿಷ್ಣುವಿನ ವಿಭೂತಿಸವೆಂಬ ಏಕೈಕ ವಾದವನ್ನು ಸ್ಥಾಪಿಸಿದರು ದ್ವೈತಸಿದ್ಧಾಂತವೆಂಬ ಪದಪ್ರಯೋಗ ಅರ್ವಾಚೀನ ಪ್ರಪಂಚದ ಸಹಜತೆಯನ್ನೂ ಅದು ಪರಮಾತ್ಮ ಅಧೀನವೆಂಬುದನ್ನೂ ಸ್ಥಿರಪಡಿಸಿದರು.



ಬ್ರಹ್ಮರಥೋತ್ಸವ

13. ಉಡುಪಿಗೆ ಸಂಬಂಧಿಸಿದ ಕನಕದಾಸರ ಕತೆ ನಿಜವೇ?

ಕನಕದಾಸರು ಉಡುಪಿಗೆ ಬಂದುದು ನಿಜ. ಅವರು ಶ್ರೀ ಕೃಷ್ಣನ ಭಕ್ತರೂ ನಿಜ. ಅವರ ಭಕ್ತಿಯ ಪ್ರತೀಕವಾಗಿ, ಅವರು ಶ್ರೀ ಕೃಷ್ಣನ ಭಜನೆಯನ್ನೋ, ಆರಾಧನೆಯನ್ನೋ ಮಾಡಿದಲ್ಲಿ ಒಂದು ಗುಡಿ ಎಂದೋ ನಿರ್ಮಾಣ ಆಗಿದ್ದಿರಬೇಕು. ಆದರೆ ಅವರ ಭಕ್ತಿಗೆ ಮೆಚ್ಚಿ ಶ್ರೀಕೃಷ್ಣ ವಿಗ್ರಹ ಪೂರ್ವದಿಂದ ಪಶ್ಚಿಮಕ್ಕೆ ತಿರುಗಿದುದೆಂಬುದು ನಿಜವಲ್ಲ–ಆಸ್ವಾಭಾವಿಕ. ನಾವದನ್ನು ನಂಬಬೇಕಾಗಿಯೂ ಇಲ್ಲ. ಉಡುಪಿಯಲ್ಲಿ ದೊರಕಿದ ಒಂದು ಶಿಲಾಶಾಸನವು ಕ್ರಿ.ಶ. 1387ರದ್ದಿದ್ದು ಶ್ರೀಕೃಷ್ಣ ದೇವರ ಎದುರಿರುವ ಮಂಟಪವೂ ತುಳಸಿವೃಂದಾವನವೂ ಕ್ರಿ. ಶ. 1387ರಲ್ಲಿ ರಚಿತವಾದುವೆಂದೂ ದೇವರ ಉತ್ತರಕ್ಕೆ ಬಲಭಾಗದಲ್ಲಿ ಬಾರಕೂರಿನ ರಾಜ್ಯಪಾಲರಾದ ಮಲ್ಲಪ್ಪ ಒಡೆಯರೆಂಬವರು ಭೂದಾನ ಕೊಟ್ಟರುವ ರೆಂದೂ ತಿಳಿದು ಬರುತ್ತದೆ. ಆದುದರಿಂದ ಈ ಕಟ್ಟುಕತೆಯಲ್ಲಿಯೂ ತಥ್ಯಾಂಶವಿಲ್ಲ.

14. ಒಡಭಾಂಡೇಶ್ವರದಲ್ಲಿ ಶ್ರೀ ಬಲರಾಮ ವಿಗ್ರಹವಿರುವುದು ನಿಜವೆ?

ಒಡಭಾಂಡೇಶ್ವರದಲ್ಲಿ ದೇವಾಲಯದಲ್ಲಿರುವುದು ಶ್ರೀ ಸುಬ್ರಹ್ಮಣ್ಯ ವಿಗ್ರಹ. ಇದು ದ್ವಿಬಾಹು ಸುಬ್ರಹ್ಮಣ್ಯನದು. ಬಲ ಕೈಯ್ಯಲ್ಲಿ ಪದ್ಮವೂ ಎಡಕೈಯು ಕಟ್ಟುವ ಲಂಬಿತವಾಗಿಯೂ ಇದೆ. ಬಲಿದೇವತಾ ಬಿಂಬವು ಷಣ್ಮುಖ. ದೇವರ ಧ್ಯಾನ ಸುಬ್ರಹ್ಮಣ್ಯನದು. ಬಲರಾಮ ಮೂರ್ತಿಯು ಅಲ್ಲಿಲ್ಲ. ಈಗಿರುವ ವಿಗ್ರಹವು ಸುಮಾರು ಕ್ರಿ. ಶ. 13–14ನೇ ಶತಮಾನದ್ದೆನ್ನಬಹುದು. ಅದಕ್ಕಿಂತ ಪ್ರಾಚೀನ ವಿಗ್ರಹವು ಭಿನ್ನವಾಗಿದ್ದು ಕೆರೆಯಲ್ಲಿದೆ. ಈ ವಿಗ್ರಹವೂ ಸುಬ್ರಹ್ಮಣ್ಯನದ್ದೇ ಆಗಿದೆ.

15. ಗೋಪೀ ಚಂದನದ ಉಂಡೆಯಲ್ಲಿ ಶ್ರೀಕೃಷ್ಣ ಬಿಂಬ ಬಂದುದೆಂಬುದು ನಿಜವೇ?

ಈ ಕತೆಯಲ್ಲಿಯೂ ಏನೂ ಆಧಾರ ಕಂಡು ಬರುವುದಿಲ್ಲ. ಶ್ರೀ ಸುಧ್ವ ವಿಜಯದಲ್ಲಿ ಇದಕ್ಕೇ ಉಲ್ಲೇಖವಿಲ್ಲ. ಬೇರಾವ ದಾಖಲೆಗಳೂ ನಮಗಿಷ್ಟರತನಕ ದೊರಕಿದ್ದಿಲ್ಲ. ಈ ಬಿಂಬವು ಸಾಮಾನ್ಯವಾಗಿ ದಕ್ಷಿಣ ಪ್ರದೇಶಗಳಲ್ಲಿ ಕಂಡು ಬರುವ ಶ್ರೀಕೃಷ್ಣ ಬಿಂಬಗಳಂತಿಲ್ಲ. ವೇಣು ಗೋಪಾಲ ಬಿಂಬವಲ್ಲ. ಬಾಲಗೋಪಾಲ ಮೂರ್ತಿ. ಎಡಕೈಯಲ್ಲಿ ಕರ್ಣೂರ, ಹಿಕ್ಕಾ ಸೂತ್ರವೂ ಬಲಕೈಯ್ಯಲ್ಲಿ ದಂಡವೂ ಇವೆ. ಕುಡುಗೋಲು ಇದೆ ಎಂಬ ಕಲ್ಪನೆ ಸು. ಕ್ರಿ. ಶ. 16ನೇ ಶತಕದ ಅನಂತರ ಬಂದಿರಬೇಕು. ಶ್ರೀ ಆಚಾರ್ಯರು ತಮ್ಮ ಪಯಣದ ಸಮಯದಲ್ಲಿ ಈ ಬಿಂಬವನ್ನು ಪಡೆದು ಕ್ರಿ. ಶ. 13ನೇ ಶತಕದಲ್ಲಿ ಉಡುಪಿಯಲ್ಲಿ ಪ್ರತಿಷ್ಠಿಸಿದರು.

16 ಉಡುಪಿಯ ದೇವಾಲಯದ ಪರಿಸರ ಎಂದು ಬದಲಾವಣೆಯಾಯಿತು?

ಉಡುಪಿ ಅನಂತೇಶ್ವರವು ಕೇಂದ್ರವಾಗಿದ್ದ ಸ್ಥಳವು ಕೋಟೆಯೊಳಗಿತ್ತು. ಇದರಲ್ಲಿ ಏಳು ಕೋಟೆಗಳಿದ್ದುವೆಂದು ತಿಳಿಯಲಾಗಿದೆ. ಶ್ರೀ ಸೋದೆ ವಾದಿರಾಜ ಯತಿವರರು ಈ ಕೋಟೆಯನ್ನು ತೆಗೆದು ಅಷ್ಟ ಮಠಗಳನ್ನು ನಿರ್ಮಿಸಿ, ಶ್ರೀ ಕೃಷ್ಣನಿಗೆ ಎರಡೆರಡು ಪರ್ಯಾಯದ ಪೂಜೆಯನ್ನು ಬಳಕೆಗೆ ತಂದರು. ಉಡುಪಿ ಸಾನ್ನಿಧ್ಯದ ಪ್ರಾತಿಯನ್ನು ಹೆಚ್ಚಿಸಿದವರೇ ಶ್ರೀ ಸೋದೆ ವಾದಿರಾಜರು.

ಪರ್ಯಾಯದ ಮೆರವಣಿಗೆಯಲ್ಲಿ ಶೃಂಗರಿಸಿದ ಆನೆಗಳು



ಶ್ರೀಕೃಷ್ಣ ದೇವಸ್ಥಾನ, ಮಧ್ವಸರೋವರ, ಭಾಗೀರಥಿ ಗುಡಿ ಮತ್ತು ಭೋಜನ ಶಾಲೆ

17. ರಜತಪೀಠಪುರದ ಅತೀ ಪ್ರಾಚೀನ ಪಂಥನಾವುದು?

ರಜತಪೀಠಪುರವೆಂಬುದು ತುಳುನಾಡಿನ ಸಪ್ತ ಕ್ಷೇತ್ರಗಳಲ್ಲಿ ಒಂದಾಗಿದೆ. ಉಳಿದುವುಗಳಾವುವೆಂದರೆ- ಗೋಕರ್ಣ, ಕೊಲ್ಲೂರು, ಶಂಕರನಾರಾಯಣ, ಕೋಟೇಶ್ವರ, ಕುಂಭಾಶಿ ಮತ್ತು ಸುಬ್ರಹ್ಮಣ್ಯ. ಇವೆಲ್ಲವೂ ಶೈವ ಸಂಬಂಧಿಯೂದ ಸ್ಥಳಗಳು. ಅಂತೆಯೇ ಉತುಪಿಯೂಗಿದೆ ಶೈವ ಸಂಬಂಧಿಯೂದುವರಿಂದಲೇ ಶಿವಳ್ಳಿ ಎಂಬ ಹೆಸರು ಬಂತು. ಕಾಲಕ್ರಮೇಣ ವೈಷ್ಣವ ಸಿದ್ಧಾಂತ ಬಳಕೆಗೆ ಬಂತು.

18. ಉಡುಪಿಯಲ್ಲಿ ಬ್ರಾಹ್ಮಣ್ಯ ಎಂದಿನಿಂದ ಬೇರೂರಿರಬಹುದು?

ಕ್ರಿ.ಶ. 8ನೇ ಶತಕವಿಂದ ಖಚಿತವಾಗಿಯೂ ಅಸ್ತಿತ್ವದಲ್ಲಿತ್ತು. ಕ್ರಿ.ಶ. 8–9ನೇ ಶತಕದ ಉದ್ಯಾವರದಲ್ಲಿ ದೊರಕಿದ ದಾಖಲೆಗಳು ಶಿವಳ್ಳಿಯ ಬ್ರಹ್ಮಪುರದ ಉಲ್ಲೇಖ ಮಾಡುತ್ತವೆ. ಶ್ರೀ ಮಧ್ವಾಚಾರ್ಯರ ಕಾಲಕ್ಕಿಂತ ಮುಂಚೆ ನೆಡಂಬೂರು, ಚಟ್ಟುಪಾಡಿ ಬೀಡುಗಳು ಬ್ರಾಹ್ಮಣ ಮನೆತನಗಳಿಂಪಲೇ ಅಧಿಕಾರ ಹೊಂದಿದ್ದುವು.

19 ಶ್ರೀಕೃಷ್ಣ ವಿಗ್ರಹದ ಬಗೆಗೆ ಬೇರೆ ಬೇರೆ ವಿವರಗಳಿರುವುದೇಕೆ?

ಈ ವಿಗ್ರಹವು (ಎಂದರೆ ಅಷ್ಟಮಠಾಧೀಶರಿಂದ ಅರ್ಚಿಸಲ್ಪಡುವ ಮೂರ್ತಿ) ಪೌರಾಣಿಕ ಶಿಲ್ಪಶೈಲಿಯನುಸಾರವಾಗಿ ಕೊರೆಯಲ್ಪಟ್ಟ ಬಿಂಬ, ಇದು ಬಾಲಗೋಪಾಲ ಮೂರ್ತಿ. ದ್ವಿಬಾಹು ಸ್ವರೂಪದ ಮೂರ್ತಿಗೆ ಕೆಲವು ಲಕ್ಷಣಗಳಲ್ಲಿ ಹೋಲುವುದರಿಂದ ಇದನ್ನು ಸ್ವರೂಪವೆಂದು ಕರೆದವರೂ ಇದ್ದಾರೆ. ಪ್ರತಿಮೋವಿಜ್ಞಾನದ ಸರಿಯಾದ ಕಲ್ಪನೆ ಇಲ್ಲದಿರುವುದೇ ಈ ತೆರನಾದ ತಪ್ಪು ತಿಳುವಳಿಕೆಗೆ ಕಾರಣ. ಬಲಕೈಯಲ್ಲಿ ಕುಡುಗೋಲು ಇಲ್ಲವೆಂಬುದನ್ನೂ ತಿಳಿಯಬೇಕು. ಅದು ಬರೇ ದಂಡ.

20 ಶ್ರೀ ಅನಂತೇಶ್ವರ ದೇವಾಲಯದ ಶಿಲ್ಪ ಜೈನ ಶಿಲ್ಪವೇ?

ಇದರ ಶಿಲ್ಪ ಜೈನ ಶಿಲ್ಪವೆಂದು ಸಾಮಾನ್ಯ ಜನರಿಂದ ತಿಳಿಯಲ್ಪಟ್ಟಿದೆ. ಆದರೆ ಇದರಲ್ಲಿ ಯಾವ ಅರ್ಥವೂ ಇಲ್ಲ. ಈ ದೇಗುಲವೆ ಗಜಪೃಷ್ಠಾಕಾರವಾಗಿರುವ ಪ್ರಾಚೀನ ಶೈವಾಲಯ. ಜೈನ ಮಂದಿರಗಳು ಆಯತಾಕಾರವೋ ಚತುರಸ್ರವೋ ಪಕ್ಷತ್ರಾಕಾರವೋ ಇರುವುವು. ಜೈನ ವಾಸ್ತುಶಿಲ್ಪವೆಂಬ ಕಲ್ಪನೆಯನ್ನು 1923ರಲ್ಲಿ ಶ್ರೀಗಣಪತಿರಾವ್ ಐಗಳವರು ಮೊದಲಬಾರಿಗೆ ತಿಳಿಸಿದರು.



ಉಡುಪಿ ಮಧ್ವಸರೋವರ, ಅದರ ನಡುನೆ ಇರುವ ಸುಂದರ ಗುಡಿ ಮತ್ತು ಸರೋವರದ ಈಶಾನ್ಯಕ್ಕಿರುವ ಮನೋಹರ ಕಟ್ಟಿಗೆರಥ

ಕವಲು ದಾರಿ ಕೆಂಪು ದೀಪ

ಮೂರು ವೇದಿಕೆಗಳ ಮೇಲಿನ ಪಾಮೂಲಿ ನಾಟಕ

"ಶೇಕ ಮುಜಿಬುರ್ ರೆಹಮೂನ್' ಪಾಕಿಸ್ತಾನದಲ್ಲೇ ಅತ್ಯಂತ ಅಪ್ರಿಯ ವ್ಯಕ್ತಿ.."

"ಮುಜಿಬುರ್ ರೆಹಮೂನರನ್ನು ನಾನು ಮುಖತಃ ಭೆಟ್ಟಿಯಾಗಿ ಮಾತಾಡುತ್ತೇನೆ...."

'ಮುಜಿಬುರ್‌ರವರನ್ನು ಬಂಧನದಿಂದ ಮುಕ್ತಗೊಳಿಸಲು ನಾನು ಸಿದ್ಧ....ಆದರೆ, ಪಾಕ್ ಜನತೆಯ ಅಭಿಪ್ರಾಯವನ್ನು ಕೇಳಬೇಕು...."

"ಶೇಕ ಮುಜಿಬುರರನ್ನು ಬೇಷರತ್ತಾಗಿ ಬಿಡುಬೇಕೆಂದು ನನ್ನ ಆಶಯ. ನೀವಿದನ್ನು ಒಪ್ಪುತ್ತೀರಾ?'

'ಇನ್ನೊಂದು ಸುತ್ತಿನ 'ಮಾತುಕತೆಯಾದ ನಂತರ ಮುಜಿಬುರ್ ಬಿಡುಗಡೆ....'

'ಈ ವಾರಾಂತ್ಯದೊಳಗೆ ಮುಜಿಬ್ ಬಂಧ ಮುಕ್ತರು....'

—ಇವೆಲ್ಲ ಪಾಕ್ ರಾಷ್ಟ್ರಪತಿ ಜುಲ್ಫಿಗರ್ ಅಲಿ ಭುಟ್ಟೋರವರ ಬಾಯಿಂದ ಅಧಿವಾ ಆಕಾಶವಾಣಿಯಿಂದ ಹೊರಟ ಆಣಿಮುತ್ತುಗಳು.

'ಮುಜಿಬುರರನ್ನು ಬಂಧ ಮುಕ್ತಗೊಳಿಸದೆ ಇದ್ದರೆ ಅಂತಾರಾಷ್ಟ್ರೀಯ ವಲಯವು ತುಂಬ ಕೆಸಿನಿಸಿಗೊಳ್ಳುವೆದೆಂದು ಸೂಕ್ಷ್ಮ ರಾಜ್ಯಕಾರಣಿ ಭುಟ್ಟೊ ತಿಳಿಯದವರಲ್ಲ.'

ಬಂಗ್ಲಾದೇಶಕ್ಕೆ ಮನ್ನಣೆ ನೀಡಿದ ದೇಶಗಳು ಧಾರಿಕ ಮತ್ತು ಭೂತಾನಗಳು ಮಾತ್ರ. ಅವಸಿ. ಇನ್ನೂ ಹಲವಾರು ದೇಶಗಳು ಮನ್ನಣೆ ನೀಡಲು ತುದಿಗಾಲಲ್ಲಿ ನಿಂತಿವೆ

ಬಂಗ್ಲಾದೇಶಕ್ಕೆ ಮೊದ್ಯತೆ ನೀಡುವುದರ ವಿರುದ್ಧ ಭುಟ್ಟೊ ವಿಶ್ವರಾಷ್ಟ್ರ ಸಮುದಾಯಕ್ಕೆ ಎಚ್ಚರಿಕೆ ನೀಡಿರುವುದು ನಿಜವಾದರೂ ತಮ ಮೂಲ ಪ್ರಭಾವ ಬೀರುವುದಕ್ಕೆ ಸಾಧ್ಯವಿಲ್ಲ.

ಶೇಕ ಮುಜಿಬುರರನ್ನು ಇನ್ನೂ ಬಂಧ ಸಲ್ಪಡಿಸಲು ಭುಟ್ಟೊ ಆಶಿಸುವುದು ಒಂದೇ ಕಾರಣಕ್ಕಾಗಿ.

ಬಂಗ್ಲಾ ದೇಶವು ಪಾಕಿಸ್ತಾನದ ಕೈತಪ್ಪಿ ಹೋಗಿದೆ; ಅದನ್ನು ಯಾವ ಕಾಲಕ್ಕೂ ಮತ್ತೆ ಪಾಕಿಸ್ತಾನದ ಆಡಳಿತೆಯೊಳಗೆ ಯಾವುದೇ ರೀತಿಯಲ್ಲಿ ತಂದು ಕೊಳ್ಳುವುದು ಸಾಧ್ಯವಿಲ್ಲವೆಂದವರು ತಿಳಿದಿದ್ದಾರೆ.

ಆದರೆ, ಸತ್ಯವನ್ನು ಪ್ರಜೆಗಳಿಗೆ ತಿಳಿಸಿ ಹೇಳುವ ಅಭ್ಯಾಸ ಪಾಕ್ ರಾಜ್ಯ ಕಾರಣಿಗಳಿಗೆ ಇದುವರೆಗೂ ಬಂದಿದಿಲ್ಲ. ವಾಸ್ತವಾಂಶಗಳಿಗೆ ಮನ್ನಣೆಕೊಡಲು ಹಿಂಜೇಟು ಹಾಕುವುದು—ಜನತೆಯನ್ನು ಮತಾಚಾರಗಳ ಅಜ್ಞಾನದ ಅಂಧಕಾರದಲ್ಲೇ ಕೂಪ ಮಂಡೂಕಗಳಂತೆ ಬೆಳೆಸುವುದು ಅವರ ಕೂಟನೀತಿ.

ಬಂಗ್ಲಾ ತಮ್ಮ ಕೈ ಬಿಟ್ಟತೆಂದು ಭುಟ್ಟೊ ಒಪ್ಪಿಕೊಂಡರೆ, ಅವರ ತಲೆ ಹಾರಿರೂ ಹಾರಬಹುದು. ಅದಕ್ಕೆಂದೇ ಅವರು ಬಂಗ್ಲಾದೇಶವನ್ನು ಮತ್ತೆ ಪಾಕಿನೊಳಗೆ ಸೇರಿಸುವ ಮಾತಾಡಿ ತನ್ನನ್ನೂ ಪಾಕ್ ಪ್ರಜೆಗಳನ್ನೂ ವಂಚಿಸುತ್ತಿದ್ದಾರೆ.

ಮುಜಿಬುರ್ ರೆಹಮೂನರನ್ನು ಬಂಧ ಮುಕ್ತಗೊಳಿಸುವುದಕ್ಕೆ ಮೊದಲು ತಾನು ಸಂಧಾನದ ಮಾತಾಡಿದೆನೆಂದು ಭುಟ್ಟೋ ಲೋಕಕ್ಕೆ—ಮುಖ್ಯವಾಗಿ ಪಾಕಿಸ್ತಾನಗಳಿಗೆ ಸಮಾಧಾನ ಪಡಿಸುತ್ತಾರೆ. 'ಬೇಷರತ್' ಎಂದು ಹೇಳಿ ತನ್ನ ಔಪಾರ್ಯವನ್ನು ಅಂತಾರಾಷ್ಟ್ರೀಯ ವಲಯದಲ್ಲಿ ಪ್ರದರ್ಶಿಸ ಹೊರಟಿದ್ದಾರೆ.

ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ವಲಯಕ್ಕೆ ಮುಜಿಬ್ ಭೇಟಿಯ ಅವಕಾಶವನ್ನು ತಿರಸ್ಕರಿಸಿದ ಭುಟ್ಟೋರ ಇರಾದೆಯೇನು?

ಹಾವು ಸಾಯಬಾರದು, ಕೋಲು ಮುರಿಯಬಾರದು ಎಂಬುದು ಅವರ ಇಂದಿನ ನೀತಿಯಿರಬೇಕು.

ಯಾಹ್ಯಾಖಾನರು ಯಾರನ್ನು ಗುಟ್ಟಿನಲ್ಲಿ ಬಂಧಿಸಿದರೋ, ಯಾರಿಗೆ ಚಿತ್ರಹಿಂಸೆ ನೀಡಿದರೋ, ಯಾರ ಮೇಲೆ ಏಕ ಪಾಕಿಸ್ತಾನದ ಆಸ್ತಿತ್ವವನ್ನು ಒಪ್ಪಿಕೊಳ್ಳಲು ಬಲಾತ್ಕಾರ ಹೇರಿದರೋ, ಯಾರ ಮೇಲೆ ದೇಶದ್ರೋಹದ ಆಪಾದನೆ ಹೊರಿಸಿ ರಹಸ್ಯ ವಿಚಾರಣೆ ನಡೆಸಿದರೋ, ಯಾರೊಡನೆ ಬಂಗ್ಲಾ ಸಮಸ್ಯೆಯ ಬಗ್ಗೆ ಚರ್ಚಿಸಲು ತನ್ನ ಅಧಿಕಾರದ ಕೊನೆಯ್ಗಳಿಗೆಯವರೆಗೂ ನಿರಾಕರಿಸಿ ತನ್ನ ಹಕ ಸಾಧಿಸಿಕೊಂಡರೋ, ಅಂತಹ ಮುಜಿಬುರರನ್ನು ಬಂಧಮುಕ್ತಗೊಳಿಸದ— ಬೇಷರತ್ತಾಗಿ—ಕೀರ್ತಿಪತಾಕೆ ಭುಟ್ಟೋ ಹಸ್ತಗಳಿಗೆ ಶೋಭೆ ನೀಡಬೇಕು.

ಶೇಕ್ ಮುಜಿಬುರರ ಮೇಲೆ ತೀವ್ರಾತಿತೀವ್ರ ಕ್ರಮ ಕೈಕೊಳ್ಳಲು ಯಾಹ್ಯಾಖಾನರು ಮುಂದುವರಿದುದರಲ್ಲಿ ತನ್ನ ಕೈವಾಡವೇನೂ ಇಲ್ಲವೆಂದು ಭುಟ್ಟೊ ಲೋಕಕ್ಕೆ ತೋರಿಸಿಕೊಡಬೇಕು.

ಬಂಗ್ಲಾದೇಶ ಪಾಕಿಸ್ತಾನದ ಕೈಬಿಡುವುದಕ್ಕೆ ಮೂಜಿ ಅಧ್ಯಕ್ಷ ಯಾಹ್ಯಾಖಾನರೇ ಕಾರಣಪುರುಷರೆಂದು ಕಲಂಕವೆಲ್ಲವನ್ನೂ ಆವರ ಮುಖಕ್ಕೇ ಬಳೆಯಬೇಕು. ಸಮರ ಹೂಡಿದ, ಅದರಲ್ಲಿ ಮರ್ಯಾದೆಗೇಡಿಗೆ ಕಾರಣವಾದ ಅಪಜಯದ ಕುಣಿಕಲನ್ನು ಯಾಹ್ಯಾಖಾನರ ತಲೆಯ ಮೇಲೆ ಹೊರಿಸ ಬೇಕು.

ಹೀಗೆ ಮಾಡಿದರೆ ಭುಟ್ಟೊ ಕೆಲವು ಕಾಲವಾದರೂ ಅಧಿಕಾರದಲ್ಲಿ ಉಳಿಯ ಬಹುದು. ಇಲ್ಲವಾದರೆ, ಯಾಹ್ಯಾಖಾನರಿಗೊದಗಿದ ಗತಿಯೇ ಅವರಿಗೂ ಕಾದಿರ ಬಹುದು.

ಆದುದರಿಂದಲೇ ಭುಟ್ಟೋ ಹಿಂದು—ಮುಂದು ಇಲ್ಲದೆ ಹೇಳಿಕೆಗಳನ್ನು ಕೊಡುತ್ತಾರೆ. ಪಾಕ್ ಜನತೆಯು ಸಮಾಧಾನ ಹೊಂದಲು, ತನ್ನ ಮೇಲೆ ಉರಿಯು ಬೀಳುವುದನ್ನು ತಡೆಯಲು ಸಹಾಯಕವಾಗುವ ಕ್ರಮಗಳನ್ನು ಕೈ ಕೊಳ್ಳುತ್ತಾರೆ. ಅಧಿಕಾರ ಉಳಿಸಲು ಇದೊಂದೇ ತಾರಕ.

ಶೇಕ ಮುಜಿಬುರ ರೆಹಮೂನರನ್ನು ಅಪ್ರಿಯ ವ್ಯಕ್ತಿಯೆಂದು ಉದ್ಘರಿಸಿದವರೇ ಅವರ ಬಿಡುಗಡೆಗೆ ಸಿದ್ಧರಾದುದು ಪಾಕ್ ರಾಜ್ಯಕೀಯದ ಬೆಳವಣಿಗೆಯೆಂದು ಒಪ್ಪ ಬಾರದೇಕೆ?

ಶೇಕ ಮುಜಬುರರನ್ನು ಕಾಡಿ ಬೇಡಿದರೂ ಯಾಹ್ಯಾಖಾನರು ತನಗೆ ಬೇಕಾದ ಮಾತನ್ನು ಹೊರಡಿಸಲು ಅಸಕ್ತರಾದರು.

ಈಗ ಬಂಗ್ಲಾ ವಿಮೋಚನೆಯೊಗಿ ಸಾರ್ವಭೌಮ ರಾಷ್ಟ್ರವಾಗಿ ಅದು ಪರಿವರ್ತನೆಗೊಂಡ ಬಳಿಕ ಮುಜಿಬ್‌ರನ್ನು ತನ್ನ ಗಾಳಕ್ಕೆ ಸಿಲುಕಿಸಲು ಸಾಧ್ಯವಿಲ್ಲವೆಂಬುದು ಭುಟ್ಟೊಗೆ ಗೊತ್ತು.

ಆದರೂ ಇಸ್ಲಾಮೊಬಾದದ ಸಿಂಹಾಸನದಲ್ಲಿ ಕೂತ ಮೇಲೆ ನಾಟಕವಾಡಲೇ ಬೇಕು.

ಪಾಕ್ ರಾಜ್ಯಕೀಯ ಆರಂಭದಿಂದಲೂ ಬೃಹತ್ ಜ್ಞಾಪಕ ಕಾಲ ಕಾಲಕ್ಕೆ ಅಧಿಕಾರ ಗದ್ದುಗೆಯೇರಿದವರ ಹೃದಯದಾಶಯವೊಂದು–

ಅಂತಾರಾಷ್ಟ್ರೀಯ ವಲಯದಲ್ಲಿ ಪ್ರಚುರಪಡಿಸುವ ನೀತಿಯಿನ್ನೊಂದು

ದೇಶದ ಪ್ರಜೆಗಳನ್ನು ಬೆಳೆಸುವ ನೀತಿ ಮತ್ತೊಂದು.

ಮೂರು ವೇದಿಕೆಗಳಲ್ಲಿ ಏಕಕಾಲದಲ್ಲಿ ನಾಟಕವಾಡುವ ಕಲೆ ಕರಗತ ಮಾಡಿಕೊಂಡವರನ್ನೇ ಪಾಕ್ ಗದ್ದಿಯಲ್ಲಿ ಕೂರಬಲ್ಲರು.

ಆದರೆ, ದುರ್ದೈವವಷ ಸಂಗತಿಯೆಂದರೆ ತಮ್ಮ ಪ್ರೊಬೇಷನ್ ಪೀರಿಯಡ್ಡನ್ನು ಮುಂದುವರಿಸಿ ಕೊಳ್ಳಬಲ್ಲವರು ಅಲ್ಲಿದ್ದರು ಅಷ್ಟೆ.

೨೪ ವರ್ಷಗಳಲ್ಲಿ ಚುನಾವಣೆ ನಡೆದದ್ದು ಒಂದು ಬಾರಿ—ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ಹಸ್ತಾಂತರದ ಮಾತು ದೂರಭಾರಿ

ಭುಟ್ಟೊ ಪ್ರೊಬೇಷನ್ ಪೀರಿಯಡ್ಡಿನಲ್ಲೇ ದರ್ಪ ತೋರಿಸಿದರೂ ಸರಿಯೇ. ಜಾತೀಯ ವಿಷ ಬೀಜದಿಂದ ಉತ್ಪನ್ನವಾದ ಪಾಕಿಸ್ತಾನ ಆದರಿಂದಲೇ ಛಿದ್ರ ಛಿದ್ರವಾದರೂ ಸರಿಯೇ. ಯಾಹ್ಯಾಖಾನರು ಇದನ್ನು ಸಾಧಿಸಿದ್ದಾರೆ. ಭುಟ್ಟೋ ಏನು ಮಾಡುತ್ತಾರೆ? ●

Gram : VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging.

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

'ರಂಗಭೂಮಿ' ಆರ್ಕೆಸ್ಟ್ರಾ ವಾರ್ಷಿಕೋತ್ಸವ

ಉಡುಪಿಯ ರಂಗಭೂಮಿ ಆರ್ಕೆಸ್ಟ್ರಾ ವಾರ್ಷಿಕೋತ್ಸವವು ತಾ ೭ರಂದು ಉಡುಪಿ ತಾಲೂಕು ಅಭಿವೃದ್ಧಿ ಸಂಘದಲ್ಲಿ ಅಧ್ಯಕ್ಷ ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ನೆರವೇರಿತು.

ರಂಗಭೂಮಿ ಆರ್ಕೆಸ್ಟ್ರಾದ ನಿರ್ದೇಶಕ ಶ್ರೀ ಕೆ. ರಾಘವೇಂದ್ರ ಭಟ್ಟರು ಅತಿಥಿಗಳಿಗೆ ಹೂಹಾರ ಅರ್ಪಿಸಿದ ಬಳಿಕ ಕಾರ್ಯದರ್ಶಿ ಶ್ರೀ ಕೆ. ಆನಂದ ಗಾಣಿಗರು ಸ್ವಾಗತಿಸಿದರು.

ಉಡುಪಿ ಶ್ರೀ ಕಾಣಿಯೂರು ಮಠಾಧೀಶ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀ ಪಾದಂಗಳವರು ನಾಟಕ ರಂಗಭೂಮಿಯಲ್ಲಿ ಸುಪ್ರಸಿದ್ಧ ಹಾಸ್ಯ ನಟರಾಗಿದ್ದ ದಿ। ಶ್ರೀ ಯಂ. ದಾಸ ಭಟ್ಟರ ಭಾವಚಿತ್ರ ಅನಾವರಣ ಗೊಳಿಸಿದರು. ಶ್ರೀ ಎಸ್. ಎಲ್. ನಾರಾಯಣ ಭಟ್ಟರು ದಿವಂಗತರ ಕುರಿತು ಮಾತಾಡಿದರು. ರಂಗಭೂಮಿಯ ಪರವಾಗಿ ಅವರ ಅಧ್ಯಕ್ಷ ಡಾ। ಬಿ. ಬಿ. ಶೆಟ್ಟರು ದಿ। ಭಟ್ಟರ ಭಾವಚಿತ್ರವನ್ನು ಸ್ವೀಕರಿಸಿದರು.

ಶ್ರೀ ಎಂ ಮಧ್ವರಾಜರು ಮಾತಾಡುತ್ತಾ ರಂಗಭೂಮಿ ಆರ್ಕೆಸ್ಟ್ರಾವರು ಸಂಗೀತದಲ್ಲಿ ಅಭಿರುಚಿಯಿರುವ ಅನೇಕ ತರುಣ ತರುಣಿಯರ ಪ್ರತಿಭೆಯನ್ನು ವ್ಯಕ್ತಪಡಿಸಲು ಅವಕಾಶ ನೀಡಿರುವುದು ನಮ್ಮ ಊರಿಗ ಹೆಮ್ಮೆ ತರುವಂಥ ವಿಷಯ. ಇಂತಹ ಸಂಸ್ಥೆಗೆ ಪ್ರೋತ್ಸಾಪ ನೀಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಕಾರ್ಯಕ್ರಮದ ಅಂಗವಾಗಿ ಸುಮಾರು ಎರಡೂವರೆ ತಾಸು ಲಘು ಸಂಗೀತ, ವಾದ್ಯ ಸಂಗೀತ ಕಾರ್ಯಕ್ರಮ ನಡೆಯಿತು.

ಮಹಿಳಾ ಸಮಾಜದ ಸಭೆ

ಉಡುಪಿ ಮಹಿಳಾ ಸಮಾಜದ ಸಭೆಯೊಂದು ತಾ. ೨ರಂದು ಸಮಾಜದ ಅಧ್ಯಕ್ಷೆ ಶ್ರೀಮತಿ ಮನೋರಮ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಇತ್ತೀಚೆಗೆ ಉಡುಪಿಯಲ್ಲಿ ಜರಗಿದ ವೇರೆ ವೇರೆ ಕಾರ್ಯಕ್ರಮಗಳ ಕುರಿತು ಸಮಾಲೋಚನೆ ನಡೆಸಿತು. ಸಮಾಜದ ಕಾರ್ಯದರ್ಶಿನಿ ಶ್ರೀಮತಿ ಅನಸೂಯ ಬಿ ಶೆಟ್ಟರು ವರದಿಯನ್ನೊಪ್ಪಿಸಿದರು.

ಶ್ರೀಮತಿ ಆಚಾರ್ಯರು ಮಾತಾಡಿ ಈ ವಿವಿಧ ಕಾರ್ಯಕ್ರಮಗಳು ಯಶಸ್ವಿಯಾಗಿದುದಕ್ಕೆ ಉಡುಪಿ ಸ್ವೀಟ್ಸ್ & ಎಂಡ್ ಕಲ್ಚರಲ್ ಎಸೋಸಿಯೇಶನವರ ಸಹಕಾರ ಕಾರಣವೆಂದೂ ಉಡುಪಿಯ ಮಹಿಳೆಯರು ಇದರಲ್ಲಿ ತೋರಿಸಿದ ಆಸಕ್ತಿಯನ್ನು ನುಂದುವರಿಸಿಕೊಂಡು ಹೋಗ ಬೇಕಾಗಿದೆ ಎಂದೂ ತಿಳಿಸಿದರು. ಅಲ್ಲದೆ ಮಹಿಳಾ ಸಮಾಜ ಈ ರೀತಿಯ ಚಟುವಟಿಕೆಗಳನ್ನು ಯಾವಾಗಲೂ ನಡೆಸಿ ಮಹಿಳೆಯರು ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ವ್ಯಕ್ತಪಡಿಸಲು ಅವಕಾಶ ಒದಗಿಸಬೇಕೆಂದು ಹೇಳಿದರು.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರೀತಿದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ತ್ಯಾಗಶೂರರು ನಾವು

(ನಾಲ್ಕನೇ ಪುಟದಿಂದ)

ದಲ್ಲಿ ಅಧಿಕಾರ ರಹಿತರು ಅಧಿಕಾರಕ್ಕಾಗಿ ಯೇ ಇಂಡಿಕೇಟು ಸೇರಿದರು....'

'ಆಮ್ತು....'

'ಕರ್ನಾಟಕದಲ್ಲಿ ನಡೆದದ್ದೂ ಅದೇ, ಆ ಸಾಮದಲ್ಲೂ ಅದೇ, ಉತ್ತರ ಪ್ರದೇಶದಲ್ಲೂ ಅದೇ, ಮತ್ತೀಗ ಗುಜರಾತದಲ್ಲೂ ಆಸ್ಟೇ....'

'ಅದಕ್ಕೆ?'

'ನೋಡು, ಗುಜರಾತ್‌ನಾಯಕರು ಈ ನಾಟಕದ ಉದ್ದೇಶವನ್ನು ಸ್ಪಷ್ಟವಾಗಿ ಬಹಿರಂಗ ಪಡಿಸಿದ್ದಾರೆ—ಸಿಂಡಿಕೇಟಿನಿಂದ ಇಂದಿಕೇಟಿಗೆ ಪಕ್ಷಾಂತರ ಹೊಂದಿದವುದೂ, ಅವರಿಗೆ ಸ್ಥಾನ ಕೀಡುವುದೂ ಮುಂಬರುವ ಚುನಾವಣೆಗಳಲ್ಲಿ ಅವರೇ ಗೆದ್ದು ಬರುವಂತೆ ಮಾಡುವುದೂ, ಅಧಿಕಾರವನ್ನವರೆ ಹಿಡಿದಿರುವಂತೆ ನೋಡಿಕೊಳ್ಳುವುದು.'

'ಅಂದರೆ, ಮನುಷ್ಯ ಅದೇ, ಪಕ್ಷ ಬೇರೆ....'

'ಮತ್ತಿನ್ನೆಂಥದು?'

'ಅಂದರೆ ಈಗ ಇಂಡಿಕೇಟು ಗೆಲ್ಲುವ ಲಕ್ಷಣ ಭಾರಿಯಿರುವುದರಿಂದ ಅವರಿಗೆ ಇಂಡಿಕೇಟು ಬೇಕು....'

'ಅವರಿಗಾಗಿಯಲ್ಲ ಕಣೇ....'

ಮತ್ತೆ?'

'ಜನತೆಗಾಗಿ....'

'ಅಂದರೆ, ಜನತೆಗೆ ಇಂಡಿಕೇಟೇ ಬೇಕಾದರೆ ತಾನೇ ಇಂಡಿಕೇಟು....ಛಲೆ.... ಇದಕ್ಕಿಂತ ದೊಡ್ಡ ತ್ಯಾಗ ಮತ್ತಾವುದಿದೆ!'

'ನಿಷ್ಠೆ ಬದಲಿಸುವುದು, ಪಕ್ಷತ್ಯಾಗ ಮಾಡುವುದು, ಅಂದರೆ, ಹೊಸ ಮನುಷ್ಯ ಜನ್ಮಿಸಿದಂತೆ....'

'ಹ್ಞೂಂ, ಅಲ್ರಿ, ಹಳೆ ಅಂಗಿ ಕಿತ್ತೆಸೆದರೇನು, ಬೊಜ್ಜು ಇಳಿಯುವುದೆಂಟಿ?'

'ಅಂತಹ ಬೊಜ್ಜಿಗೆ ಜನತೆ ವೈದ್ಯ ಮಾಡಬೇಕು....'

'ಅವರವರ ವೈದ್ಯಕ್ಕೇ ಅವರು ಪರಾಶ್ರಯಿಗಳಾಗಿರುವಾಗ, ಊರವರ ವೈದ್ಯಕ್ಕವರಿಗೆಲ್ಲಿ ಬಿಡುವು?' ಆದಿರ್ಲಿ, ಅಲ್ರಿ, ಸಾಕಿ ಸ್ಥಾನದ ವಿಮಾನವೊಂದನ್ನು ಯೂರೋ ಒಬ್ಬ ಅಪಹರಿಸಿಕೊಂಡು ಭಾರತಕ್ಕೆ ತಂದ ನಂತಲ್ಲಾ?'

'ಹ್ಞೂಂ....ಚಂಡಿಗಡದಲ್ಲಿ ಅದನ್ನು ಇಳಿಸಲಾಯಿತಂತೆ....'

'ವಿಮಾನ ಜೋರ ಯೂರು?'

'ಅವನು ಬಂಗ್ಲಾದೇಶದ ಹೆಸರು ಹೇಳುತ್ತಾನೆ. ಪಶ್ಚಿಮ ಪಾಕಿಸ್ತಾನ ತನ್ನನ್ನು ಆ ಮಾನುಷವಾಗಿ ಕಾಣುತ್ತಿರುವುದರಿಂದ ವಿಮಾನ ಜಾಲಕನನ್ನು ಕೊಂದು ತಾನೇ ವಿಮಾನ ತಂದುದಾಗಿ ಹೇಳುತ್ತಾನೆ.'

'ಈಗ ಪಾಕಿಸ್ತಾನ ಆ ವಿಮಾನವನ್ನೂ ಅದರ ಮಡಿದ ಜಾಲಕನನ್ನೂ ವಿಮಾನ ಜೋರನನ್ನೂ ತನಗೆ ಕಳಿಸಿ ಕೊಡಬೇಕೆಂದು ಕೇಳಿಕೊಳ್ಳಬಹುದು....'

'ಹ್ಞೂಂ, ವಿಮಾನ ಜಾಲಕನ ಹೆಣವನ್ನು ಕೇಳಿಯೂಗಿದೆ ಜೋರನನ್ನೂ ಕೇಳುತ್ತಿದೆ. ವಿಮಾನವನ್ನೂ ಕೇಳಿಬಹುದು....'

'ಈಗ ಭಾರತವೇನು ಮಾಡುತ್ತದೆ?'

'ಬಂಗ್ಲಾ ದೇಶದ ಹೆಸರಿಗೆ ಇದು ಸಂಬಂಧಿಸಿದ್ದರಿಂದ ತುಸು ಮುತ್ಸದ್ದಿತನ ತೋರಿಸ ಬೇಕಾದೀತು. ಆಲ್ವೆ, ಅದಕ್ಕೆಲ್ಲಾ ನಾ ವ್ಯಾಕೆ ತಲೆಕೆರೆದು ಕೊಳ್ಳಬೇಕು?'

'ಹ್ಞೂಂ.... ಸರೀನ್ನಿ....'

'ಏನು?'

"ನಡೆದುದೆಲ್ಲಾ ಸರಿಯೇ ನಡೆಯುತ್ತಿರುವುದೂ ಸರಿಯೇ....'

'ಮುಂದೆ ನಡೆಯುವುದ?'

'ಅದೂ ಸರಿಯೇ ಅನ್ನಿ....'

'ಅಷ್ಟಾದರೆ ಸರಿ....'

'ಹ್ಞೂಂ....'

— ಗೋರಾ

● ●

ಅದಮಾರು ಶ್ರೀಗಳವರ ಪುರಪ್ರವೇಶ

ಪರ್ಯಾಯ ಪೀಠಸ್ಥೀರಲಿರುವ ಶ್ರೀ ಅದಮಾರು ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರು ತಾ. 7ರಂದು ಸಂಜೆ ಉಡುಪಿ ಕಾರರ ಸಂಭ್ರಮದ ಸ್ವಾಗತದೊಂದಿಗೆ ಅಜ್ಜರಕಾಡಿನ ಜೋಡುಕಟ್ಟೆಯಿಂದ ಪಟ್ಟದ ದೇವರೊಂದಿಗೆ ಅತ್ಯಂತ ವಿಜೃಂಭಣೆಯಿಂದ ಪುರ ಪ್ರವೇಶ ಮಾಡಿದರು.

ಸ್ವಾಮಿಗಳವರ ಅಸನ ಹಾಗೂ ಅವರ ಪಟ್ಟದ ದೇವರ ಶಾಲಕಿಯನ್ನು ವಿದ್ಯುದ್ದೀಪಗಳಿಂದ ಅಲಂಕರಿಸಿದ್ದು ರಥಬೀದಿಯವರೆಗೂ ರಸ್ತೆಯ ಇಕ್ಕೆಡೆಗಳಲ್ಲಿ ಜನ ಕಿಕ್ಕಿರಿದು ನಿಂತು ಶ್ರೀಪಾದರಿಗೆ ಭವ್ಯ ಸ್ವಾಗತ ಕೋರಿದರು. ರಥಬೀದಿಗೆ ಶ್ರೀಗಳವರು ಬಂದ ತರುವಾಯ ಶ್ರೀಕೃಷ್ಣನ ಸಂದರ್ಶನ ಮಾಡಿ ತಮ್ಮ ಅದಮಾರು ಮಠಕ್ಕೆ ಆಗಮಿಸಿದರು.

ಪರ್ಯಾಯ ಪಲಿಮಾರು ಮಠದ ಶ್ರೀ ವಿದ್ಯಾಮಾನ್ಯ ತೀರ್ಥರಿಗೆ ಹಿರಿಯನದಲ್ಲಿ ಸುರಜಸರ ಸನ್ಮಾನ ಸಭೆಯೊಂದು ಜರಗಿತು.ಸಭೆಯಲ್ಲಿ ಪೇಜಾವರ ಶ್ರೀಗಳವರು ಉಪಸ್ಥಿತರಿದ್ದರು.

ಪರ್ಯಾಯ ಸಮಿತಿಯ ಅಧ್ಯಕ್ಷ ಶ್ರೀ ಕೆ. ಕೆ. ಹೆ ಅವರು ಸ್ವಾಗತಿಸಿದರು. ಉಡುಪಿ ನಗರ ಸಭೆ ಕೈಕ್ಷಣಿಕ ಸಾಂಸ್ಕೃತಿಕ ಧಾರ್ಮಿಕ ಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ಹೂ ಹಾರಾರ್ಪಣ ನಡೆಯಿತು.

ನಗರ ಸಭಾಧ್ಯಕ್ಷ ಡಾ! ನಿ. ಎಸ್. ಆಚಾರ್ಯ, ಆದಮಾರು ಎಜ್ಯುಕೇಶನ್ ಕಾನ್ಸಿಲಿನ ಪರವಾಗಿ ಶ್ರೀ ಎಸ್. ಬಿ. ಪರಮುರಾಯ ನಾಯಕ, ದ. ಕ. ಬ್ರಾಹ್ಮಣ ಬ್ರಾಹ್ಮಣರ ಕೈಕ್ಷಣಿಕ ಸಂಘದ ಪರವಾಗಿ ಶ್ರೀ ಸುಬ್ರಹ್ಮಣ್ಯ ಉಪಾಧ್ಯ ಅದಮಾರು ಶ್ರೀಗಳವರಿಗೆ ಮೂಸ ಪತ್ರವನ್ನರ್ಪಿಸಿದ ಬಳಿಕ ಶ್ರೀ ಬುರ್ಲಿ ಬಂದು ಮಾಧವರು ತನ್ನ ಮೂಸಪತ್ರವನ್ನೂ ಶ್ರೀ ಕೆ. ಎಸ್. ಪದ್ಮನಾಭ ಆಚಾರ್ಯರು ಆಭಿನಂದನಾ ಗಾನವನ್ನು ಓದಿದರು.

ಶ್ರೀ ಪೇಜಾವರ ಶ್ರೀಗಳವರು ಅದಮಾರು ಶ್ರೀಗಳವರಿಗೆ ಶುಭಕೋರಿ ಮಾತಾಡಿದರು. ಪರ್ಯಾಯ ಪೀಠಸ್ಥೀರಲಿರುವ ಶ್ರೀ ಅದಮಾರು ಶ್ರೀಗಳವರು ಸಮಾಜ—ಸರ್ವಾಂಗೀಣ ಚೈತನ್ಯವನ್ನು ಹೊಂದ ಬೇಕಾಗಿದ್ದರೆ ಸಮಾಜದ ಹೃದಯ ಸ್ಥಾನದಲ್ಲಿ ಶ್ರೀ ಮಧ್ವಾಚಾರ್ಯರ ವೈದಿಕ ಧರ್ಮಪೀಠ ಸಂಸ್ಥಾಪನವಾಗಿ ಬೆಳೆಯಬೇಕೆಂದು ಹೇಳಿ ಜನತೆ ತಮ್ಮ ಮೇಲೆ ತೋರಿದ ವಿಶ್ವಾಸ ಗೌರವಾದಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಶ್ರೀ ಪಲಿಮಾರು ಶ್ರೀಗಳವರು ಅಧ್ಯಕ್ಷ ಭಾಷಣ ಮಾಡುತ್ತಾ, ಇಂದು ಪೀಠಾರೋಹಣಗೈದು ಗೌರವಿಸಿರುವುದು ಆಧ್ಯಾತ್ಮಿಕ ಸೂರ್ಗ. ಈ ದೃಷ್ಟಿ ಆಭಿವೃದ್ಧಿಯಾಗಬೇಕು ಅದಮಾರು ಶ್ರೀಗಳವರ ಮುಂದಿನ ಪರ್ಯಾಯ ಎಲ್ಲ ರೀತಿಯಲ್ಲೂ ಯಶಸ್ವಿಯಾಗುವಂತೆ ಶ್ರೀಕೃಷ್ಣ ಪರಮಾತ್ಮನು ಆಶೀರ್ವದಿಸಲಿ ಎಂದು ಹೇಳಿದರು.

ಆಂತ್ಯದಲ್ಲಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಧನ್ಯವಾದ ಆರ್ಪಿಸಿದರು.

ಉಡುಪಿಯಲ್ಲಿ ಅ ಭಾರತ ಸಂಸ್ಕೃತ ಕವಿ ಸಮ್ಮೇಳನ

ಉಡುಪಿಯ ಭಾನೀ ಪರ್ಯಾಯ ಪೀಠಾರೋಹಣ ಮಹೋತ್ಸವದ ಅಪರೂರು ಮಠದ ಶ್ರೀ ವಿಬುಧೇಶ ತೀರ್ಥರ ಶ್ರೀ ಪಾದರು ಉಡುಪಿಯಲ್ಲಿ ತಮ್ಮ ಪರ್ಯಾಯದ ಆವಧಿಯಲ್ಲಿ ಅಖಿಲ ಭಾರತ ಮಟ್ಟದ ಸಂಸ್ಕೃತ ಕವಿ ಸಮ್ಮೇಳನ ಜರಗಿಸಲು ಉದ್ದೇಶಿಸಿದ್ದಾರೆ. ಅಲ್ಲಜೆ ಈ ಆವಧಿಯಲ್ಲಿ ವೇದ ಜ್ಞಾನ ಸಂರಕ್ಷಣೆ ಮತ್ತು ಧರ್ಮ ಕರ್ಮಗಳನ್ನು ಜೋಗ್ಯರೀತಿ ಮಾಡಿಸುವ ಆರ್ಷ ಪರಂಪರೆಯ ನಿಷ್ಣಾತರ ಸಮ್ಮೇಳನ ಕಣಿಪುಣ ವಿದ್ವತ್ ಪರಿಷತ್ ಸಹ ಏರ್ಪಡಲಿದೆ.

ಶ್ರೀ ಪಾದರ ಪರ್ಯಾಯದ ಇಡೀ ತಾ. 18-1-1972ರಂದು ಪ್ರಾರಂಭವಾಗಿ ಮುಂದಿನ ಎರಡು ವರ್ಷಗಳ ಕಾಲ ಇರುವ ಪರ್ಯಾಯ ಪೀಠಸ್ಥರಾಗಿರುತ್ತಾರೆ. ಪಲಿಮಾರು ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರ ಪರ್ಯಾಯದ ಆವಧಿಯು ತಾ.17-1-1972ಕ್ಕೆ ಕೊನೆಗೊಳ್ಳಲಿದೆ.

ತನ್ನ ಹಿಂದಿನ ಪರ್ಯಾಯದ ಆವಧಿಯಲ್ಲಿ ಪಟ್ಟಿಗೇರಿ ನೇಮಾಧ್ಯಯನ ಸೌಕರ್ಯಗೇರಿಸಿದ್ದು ಆಗ ಕಲಿತಿರುವ ಈ ಪರ್ಯಾಯ ಪೀಠಾರೋಹಣದ ನಾಲ್ಕನೆಯ ಸುಯೋಗವಿದು ಬರಬೇಕೆಂದು ಶ್ರೀ ಪಾದರು ಆಶಿಸಿದ್ದಾರೆ

ನಾನಿಬ್ಬರು
ನಮಗಿಬ್ಬರೇ ಮಕ್ಕಳು
ಚಿಕ್ಕ ಸಂಸಾರ
ಸುಖಕ್ಕೆ ಆಧಾರ

ಎರಡು ಅಥವಾ ಮೂರು ಮಕ್ಕಳ ನಂತರ ಮುಂದೆ ಮಕ್ಕಳಾಗದ ಹಾಗೆ ಚಿಕಿತ್ಸೆ ಪಡೆಯುವುದು ಅತ್ಯುತ್ತಮ.

ಹೆಂಗಸರಿಗೆ— ಸಂತಾನ ನಿರೋಧ ಶಸ್ತ್ರಚಿಕಿತ್ಸೆ
ಗಂಡಸರಿಗೆ— ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ

ಸುರಿತ ವೈದ್ಯರುಗಳಿಂದ ಶಸ್ತ್ರ ಚಿಕಿತ್ಸೆ ಪಡೆಯುವ ಅವಕಾಶವಿದೆ. ಹೆಂಗಸರಿಗಿಂತ ಗಂಡಸರು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವುದು ಉತ್ತಮ ಏಕೆಂದರೆ

1. ತುಂಬಾ ಸುಲಭ
2. 30 ನಿಮಿಷಗಳಲ್ಲಿ ಚಿಕಿತ್ಸೆ ಮುಗಿದು, ಮನೆಗೇ ಹೋಗಬಹುದು. ಹೆಂಗಸರಾದರೆ 7 ದಿನ ಆಸ್ಪತ್ರೆಯಲ್ಲಿರಬೇಕು.

ಗಂಡಸರೇ — ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಯ ಅವಕಾಶವನ್ನು ಉಪಯೋಗಿಸಿಕೊಳ್ಳಿ.

ನಿಮ್ಮ ತಾತ್ಪೂರ್ತಿಕ ಏರ್ಪಿಗಾಗಿ ಹಣ ಕೊಡುವ ವ್ಯವಸ್ಥೆಯೂ ಇದೆ.

ನೆನಪಿಡಿ — ಕುಟುಂಬ ಯೋಜನೆ ಕೇಂದ್ರವು ಚಿನ್ನೆ —

ಕೆಂಪು ತ್ರಿಕೋಣ

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 171/71.

ವಾದಿ— S. ಕೃಷ್ಣಪ್ಪ ಹೆಗ್ಡೆ. ಸ್ವತಿವಾದಿ—ಮೋಳು ಯೂನೆ ಗೋಪಿಂದ ಕೆಟ್ಟಿ, ಆರ್ಕೂಲಿ ಸೂರನ್ನು ಕೆಟ್ಟಿರೆ ಮಗ, ಕುಂದಾಪುರ ತಾಲೂಕು ಯಡಾಡಿ-ಮತ್ಯಾಡಿ ಗ್ರಾಮದ ಹಾಲ್ಯಾನಿಯಲ್ಲಿರುವನ.

ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ:—

ನೋಂದಣಿ ವಾಸೆಯ ವಾದಿಯು, ಅತನಿಗೆ ಪ್ರತಿವಾದಿಯು 15.9.62ರಲ್ಲಿ ರೂ. 115/— ಕ್ಕೆ ಬರೆಕೊಟ್ಟ ನೋಟಿನ ಸಾಲದ ಕುರಿತು ಬಾಕಿ ಬರೇನು ರೂ. 156 - 50ಕ್ಕೆ ಮಾಡಿದ ಮೇಲಿನ ವಾದ ತಾ 28.1.72ಕ್ಕೆ ನೋಟಿಸಿಗೆ ಇದೆ. ಸದ್ರಿ ದಿನ ಹಗಲು 11 ಗಂಟೆಗೆ ಮೇಲಿನ ಕೋರ್ಟಿಗೆ ಹಾಜರಾಗದೇ ಇದ್ದಲ್ಲಿ ಏಕಪಕ್ಷೀಯವಾಗಿ ವಾದ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಮೇರೆಗೆ)

ಜೆ. ಕುಶಲ ಹೆಗ್ಡೆ
ವಾದಿ ಕಡೆ ನಕೀಲರು

ಕುಂದಾಪುರ, ತಾ. 7-1-72.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 407/71.

ಶಾಂತಿರಾಜ ನಾಯ್ಕ್ — ಅರ್ಜಿದಾರ.
ಮತ್ತು
ವೈ. ಜಿನರಾಜ — ಎದ್ರಿ.

ಮೇಲಿನ ಅಮಲ್ದಾರಿಯ ಎದ್ರಿ, ಮಲನಂತಿಗೆ ಗ್ರಾಮದ ಎಳನೀರಿನ ದೊಡ್ಡಮನೆ ಎಂಬಲ್ಲಿ ವಾಸವಾಗಿರುವ ನೇಮಿರಾಜ ಶೆಟ್ಟಿಯವರ ಮಗ ವೈ. ಜಿನರಾಜರವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ:—

ನಿಮ್ಮಿಂದ ಅರ್ಜಿದಾರರಿಗೆ ಸಲ್ಲಬೇಕಾದಂತಹ ಡಿಕ್ರಿ ಹಣದ ವಸೂಲಿ ಬಗ್ಗೆ ಅರ್ಜಿದಾರರು ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದರೂ ಅಕ್ಷೇಪವಿದ್ದಲ್ಲಿ ನೀವು ತಾರೀಕು 2-2-1972ರಂದು ಹಗಲು ಘಂಟೆ 11ಕ್ಕೆ ಸ್ವತಹಾ ಯಾ ನಕೀಲರ ಮುಖಾಂತರವಾಗಲೇ ಕೋರ್ಟು ಮುಂದೆ ಹಾಜರಾಗಿ ಉದಪರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ಹೊರಡಿಸಲಾದೀತು ತಿಳಿದಿರಲಿ.

ಬಿ.ಕೆ. ಸೂರ್ಯನಾರಾಯಣ ರಾವ್
ವಾದಿ ಕಡೆ ಎಡ್ವೋಕೇಟ್,
ಬೆಳ್ತಂಗಡಿ, 6-1-1972.

ಕರ್ಯಾಯ ಪೀಠವೇರುವ

ಶ್ರೀ ವಿಬುಧೇಶತೀರ್ಥ ಶ್ರೀಪಾದರು

ಇಂದಿನ ಉಡುಪಿ ಹಿಂದಿನ ರೂಪ್ಯಪೀಠ. ರೂಪ್ಯಪೀಠ ಪರಶುರಾಮ ಕ್ಷೇತ್ರದ ಪುಣ್ಯ ಕ್ಷೇತ್ರ. ಪಾಜಕ ಕ್ಷೇತ್ರದಿಲ್ಲಿಂದ ಎಳು ಮೈಲಿ ದೂರ—ದಕ್ಷಿಣಕ್ಕೆ ಆಚಾರ್ಯ ಮಧ್ವರು ಇಲ್ಲಿ ಬಂದರು ಅವತಾರಕ್ಕೆ. ತಂದೆ ಮಧ್ಯಗೇಹ ಭಟ್ಟ. ತಾಯಿ ವೇದಾವತಿ. ಉಡುಪಿಯ ಅನಂತೇಶ್ವರನ ಹರಿಮೂರು ವರ್ಷ ಸಂತತ ಉಪಾಸನೆಯ ಫಲ—ಪುತ್ರ ರತ್ನ ವಾಸುದೇವ—ಲೋಕ ಗುರು ಮುಖ್ಯಪ್ರಾಣನ ಅವತಾರ.

ಕಿರಿಯಸ್ಸಿನಲ್ಲೇ ಜ್ಞಾನವಾಹಿ. ಉಡುಪಿಗೆ ಆಗಮನ. ಅಚ್ಯುತ ಪ್ರೇಕ್ಷಾಚಾರ್ಯರ ಶಿಷ್ಯತನ. ಭಕ್ತಿ ಜ್ಞಾನ ವೈರಾಗ್ಯಗಳ ಭಂಡಾರ-ಗುರುಗಳಿಗೆ ಮೆಚ್ಚುಗೆಯೂ ಅಪಾರ. ಸನ್ಯಾಸ ದೀಕ್ಷೆ—ಪೂರ್ಣಪ್ರಜ್ಞ ಆನಂದತೀರ್ಥರೆಂದು ಪ್ರಖ್ಯಾತಿ. ಗುರುಮಿನ ಅದ್ವೈತ ತತ್ವದಿಂದ ಶಿಷ್ಯನಿಗೆ ಅಸಮಾಧಾನ. ಅದು ತರ್ಕಬದ್ಧವಲ್ಲವೆಂಬ ಅನು

ಮಾನ ವೇದ-ಉಪನಿಷತ್ತು ಗೀತೆ-ಬ್ರಹ್ಮ ಮೀಮಾಂಸೆಗಳಿಗೆ ಹೊಸ ವ್ಯಾಖ್ಯಾನ—ದ್ವೈತ ಸಿದ್ಧಾಂತದ ಪ್ರತಿಷ್ಠಾನ—ವೈದಿಕ ಧರ್ಮದ ಪುನರುತ್ಥಾನ.

ಆಸೇತು ಹಿಮಾಚಲ ಸಂಚಾರ-ದೇಶದ ಲ್ಲಿ ಹೊಸ ರಕ್ತ ಸಂಚಾರ. ದ್ವೈತಸಿದ್ಧಾಂತದ ನಿರ್ಮಿಕಾರ ಪ್ರಚಾರ-ಅಜ್ಞಾನದ ಸಂಹಾರ. ಅದ್ವೈತದ ಮೇಲೆ ದ್ವೈತದ ಮಹಾ ದಿಗ್ವಿಜಯ-ಶ್ರೀಮಧ್ವ ವಿಜಯ.

ದ್ವಾರಕೆಯಿಂದ ವ್ಯಾಪಾರಿ ಹಡಗ ದಕ್ಷಿಣಕ್ಕೆ ನಿರ್ಗಮನ. ಅದರಲ್ಲಿರಡು ಹೆಂಟೆ ಗೋಪೀ ಚಂದನ. ಒಂದರಲ್ಲಿ ಶ್ರೀಕೃಷ್ಣ ಮೂರ್ತಿ-ರುಕ್ಮಿಣೀ ಕರಾರ್ಚಿತವೆಂದು ಪ್ರತೀತಿ. ಮಲ್ಪೆಯ ಬಳಿಗೆ ಆಗಮನ-ಭರದಿಂದ ಬಂದಿತು ಪ್ರಭಂಜನ.

ದಿಗ್ವಿಜಯೋಪರಾಂತ ಉಡುಪಿಯಲ್ಲಿ ಮದ್ವೇರ ವಿಶ್ರಾಂತಿ-ಧ್ಯಾನ ಹಡಗದ ವಿಪತ್ತಿನ ಜ್ಞಾನ. ಶಿಷ್ಯ ಸಹಿತ ಮಲ್ಪೆಗೆ ಪ್ರಯಾಣ-ಶ್ರೀಕೃಷ್ಣ ವಿಗ್ರಹದೊಂದಿಗೆ ಮರು ಪ್ರಯಾಣ. ಮೂರ್ತಿ ಬಾಲಕೃಷ್ಣ ಕಡೆಗೋಲು-ನೇಣಿಲೆ ಹಿಡಿದಿರುವ ಮುದ್ದು ಕೃಷ್ಣ.

ಮಕರ ಸಂಕ್ರಮಣ. ಶ್ರೀ ಮಧ್ವಾಚಾರ್ಯರಿಂದ ಶ್ರೀಕೃಷ್ಣ ಮೂರ್ತಿ ಪ್ರತಿಷ್ಠಾಪನೆ. ಶ್ರೀ ಮದಾಚಾರ್ಯರಿಂದಲೇ ಬಹುಕಾಲ ಅರ್ಚನೆ-ಪೂಜನೆ-ಉಪಾಸನೆ ಅಷ್ಟ ಶಿಷ್ಯ ಸ್ವೀಕರಣ-ದ್ವೈತ ಸಿದ್ಧಾಂತ ಪ್ರಚಾರ-ಶ್ರೀಕೃಷ್ಣ ಪೂಜಾಧಿಕಾರ ಹಸ್ತಾಂತರ. ಅದೈಶ್ಯ ರೂಪದಲ್ಲಿ ಬದಿಂಗೆ ಮಹಾಪ್ರಸ್ಥಾನ-ಪರ್ಯಾಯ ಮಹೋತ್ಸವ.

ಅಷ್ಟಮಠದ ಯತಿಗಳಿಂದ ಶ್ರೀಕೃಷ್ಣ ಪೂಜೆ-ದ್ವೈತ ಮತ ಪ್ರಚಾರ. ವಾದಿರಾಜ ಯತಿವರ್ಯರಿಂದ ಎರಡು ವರ್ಷಗಳ ಪರ್ಯಾಯ ವ್ಯವಸ್ಥೆ. ಶ್ರೀಕೃಷ್ಣನ ಪೂಜಾಧಿಕಾರವನ್ನು ಒಂದು ಮಠದ ಯತಿವರ್ಯರು ನುತ್ತೊಂದು ಮಠದ ಯತಿಗಳಿಗೆ ನೀಡುವ ದಿನ—ಪರ್ಯಾಯ ಮಹೋತ್ಸವ.

ಭಕ್ತ ಕನಕನ ಭಕ್ತಿಯಿಂದ ಪ್ರಸನ್ನ ಭಕ್ತವತ್ಸಲನಿಂದ ಭಕ್ತನಿಗೆ ದರ್ಶನ. ಕನಕ ಪನಾಡ ಪುರುಷ—ಶ್ರೀಕೃಷ್ಣ ಭಕ್ತ ಜನ ಸಂರಕ್ಷಕ.

ಜನವರಿ ೧೮ ಈ ವರ್ಷದ ಪರ್ಯಾಯ ಪೀಠಾರೋಹಣ ದಿನ ಫಲಿಮಾರು ಮಠದ ಶ್ರೀ ವಿದ್ಯಾಮನ್ಯತೀರ್ಥರ ಪರ್ಯಾಯಾವಧಿ ಮುಗಿದು ಅದಮಾರು ಮಠದ ಶ್ರೀ ವಿಬುಧೇಶ ತೀರ್ಥರು ಶ್ರೀಕೃಷ್ಣ ಪೂಜಾಧಿಕಾರ ಪಡೆವ ಸುದಿನ.

ಅದಮಾರು ಮಠದ ಮೂಲ ಯತಿ ಶ್ರೀ ನರಸಿಂಹತೀರ್ಥರು. ಶ್ರೀ ವಿಬುಧೇಶತೀರ್ಥರು ಆ ಪರಂಪರೆಯಲ್ಲಿ ಶ್ರೀ ಮಧ್ವಾಚಾರ್ಯರೂ ಸೇರಿದಂತೆ ಮೂವತ್ತೆರಡನೆಯರು.

೧೯೪೫ರಲ್ಲಿ ಸನ್ಯಾಸ ದೀಕ್ಷೆ. ೧೯೫೬—೫೮ರ ಅವಧಿಯಲ್ಲಿ ಮೊದಲನೆಯ ಪರ್ಯಾಯ. ಇದೀಗ ಎರಡನೆಯದು. ಕಲಾವಿದರು, ಸಾಹಿತ್ಯಿಕರು, ವಿದ್ವಾಂಸರು, ಧಾರ್ಮಿಕರಿಗೆ ಸಂತೃಪ್ತಿ. ಅವರ ಬಗ್ಗೆ ಶ್ರೀಪಾದರಿಗು ಉದಾರ ನೀತಿ — ಅಪಾರ ಗೌರವ.

ಶ್ರೀ ಪಾದರಿಗೆ ಶಿಕ್ಷಣದಲ್ಲಿ ಆಸಕ್ತಿ. ಉಡುಪಿಯ ಸಂಸ್ಕೃತ ಮಹಾ ಪಾಠಶಾಲೆಯ ಭವನ ತನ್ನ ಸಂಪೂರ್ಣತೆ ಕಂಡದ್ದು ಶ್ರೀ ಪಾದರ ಅಮೃತ ಹಸ್ತಗಳಿಂದ. ಅದೆ ಮಠಿನ ಉನ್ನತ ಪ್ರೌಢಶಾಲೆ, ಪಡುಬಿದ್ರಿಯ ಗಣಪತಿ ಪ್ರೌಢ ಶಾಲೆ, ಉಡುಪಿಯ ಶ್ರೀ ಪೂರ್ಣಪ್ರಜ್ಞ ಕಾಲೇಜು. ಶ್ರೀ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜುಗಳು ಶ್ರೀ ಅದಮಾರು ಮಠದ ಶಿಕ್ಷಣ ಮಂಡಳಿಯ ಸಾಧನೆ ಈ ಮಂಡಳಿಯ ಕೇಂದ್ರಬಿಂದು ಶ್ರೀ ಸ್ವಾಮಿಜಿಯವರು.

ಲೌಕಿಕ ವಿದ್ಯೆಯೊಡನೆ ವೈದಿಕ ವಿದ್ಯೆಗೂ ಶ್ರೀಪಾದರಿಂದ ಉತ್ತೇಜನ ಹಿಂದಿನ ಪರ್ಯಾಯೂವಧಿಯಲ್ಲಿ ತ್ರಿವೇದಗಳ ಅಭ್ಯಾಸದಲ್ಲಿ ವ್ಯವಸ್ಥೆಯ ನಿರ್ವಹಣ ಶತಾಯುಷಿ ಶ್ರೀ ಸುಧೀಂದ್ರತೀರ್ಥರ ಸ್ಮಾರಕವಾಗಿ ೬ಜತ ರಥದ ನಿರ್ಮಾಣ-ಶ್ರೀಕೃಷ್ಣನಿಗೆ ಸಮರ್ಪಣ. ೧೯೫೯ರಲ್ಲಿ ಅಖಿಲ ಮೈಸೂರು ಸರ್ವ ಧಾರ್ಮಿಕ ಸಂಸ್ಥೆಗಳ ಮಹಾ ಸಮ್ಮೇಳನ. ಯಾತ್ರಾರ್ಥಿಗಳ ಉಪಯೋಗಕ್ಕೆ ಅದಮಾರು ಮಠದ ಛತ್ರದ ನಿರ್ಮಾಣ ವಿಶ್ವಹಿಂದೂ ಪರಿಷತ್ತಿನ ಕಾರ್ಯಕ್ರಮಗಳಿಗೆ ಹೃತ್ಪೂರ್ವಕ ಸಹಕಾರ. ಮಧ್ವ ಮಹಾಮಂಡಳದ ಯೋಜನೆಗಳಿಗೆ ಪುರಸ್ಕಾರ.

ಶ್ರೀ ಮಠದ ಪಟ್ಟದೇವತೆ ಚತುರ್ಭುಜ ಕಾಳಿಂಗನ ಹೆಡೆಯ ಮೇಲೆ ಬಲಗಾಲಲ್ಲಿ ನಟರಾಜನ ನಾಟ್ಯ ಭಂಗಿ. ಒಂದು ಕೈ ನಾಟ್ಯ ಮುದ್ರೆಯಲ್ಲಿ, ಇನ್ನೊಂದು ಹಾವಿನ ಬಾಲದಲ್ಲಿ. ಮಗುದೊಂದರಲ್ಲಿ ಶಂಖ, ಉಳಿದೊಂದರಲ್ಲಿ ಚಕ್ರ.

ದುಷ್ಟಜನ ದಮನ, ಶಿಷ್ಟ ಜನ ಪ್ರಹಸನ, ಜೀವನ ನಾಟಕ ಸೂತ್ರಧಾರತನ, ಧರ್ಮ ಚಕ್ರ ಪ್ರವರ್ತನ - ನ್ಯಾಯ ನೀತಿ ಘೋಷಣಗಳ ಪ್ರತೀಕ ಈ ಕಾಲೀಯ ಮರ್ದನ.

ಶ್ರೀ ವಿಬುಧೇಶತೀರ್ಥ ಪರ್ಯಾಯ ಕಾಲ ಸುಖ—ಹರ್ಷವರ್ಷಣವಾಗಲಿ; ಲೌಕಿಕ-ವೈದಿಕ ಉದ್ಧಾರಣವಾಗಲಿ, ಧರ್ಮ-ನೀತಿ ಅಭ್ಯುದಯವಾಗಲಿ, ದಾರಿದ್ರ್ಯದ ಮೇಲೆ ವಿಜಯ ಸಾಧನೆಯಾಗಲಿ.

●●

ದ. ಕ. ಜಿಲ್ಲಾ ಕ್ಷೇತ್ರಗಳಿಗೆ ಆಡಳಿತ ಕಾಂಗ್ರೆಸ್ ಅಭ್ಯರ್ಥಿಗಳ ಹೆಸರು ಸೂಚನೆ

ದ. ಕ. ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ ಆಡಳಿತ ಕಾಂಗ್ರೆಸ್ ಅಭ್ಯರ್ಥಿಗಳು ಹೆಸರನ್ನು ಸೂಚಿಸುವ ಕಾರ್ಯ ಪೂರ್ಣಗೊಂಡಿದೆ. ಜಿಲ್ಲೆಯ ವಿವಿಧ ಕ್ಷೇತ್ರಗಳಿಂದ ಸ್ಪರ್ಧಿಸಬಯಸಿ 110 ಜನ ಅರ್ಜಿ ಹಾಕಿದ್ದು ಅದರಲ್ಲಿ 37 ಜನರ ಹೆಸರನ್ನು ಜಿಲ್ಲೆಯ 14 ಕ್ಷೇತ್ರಗಳಿಗೆ ಸೂಚಿಸಲಾಗಿದೆ.

ಕ್ಷೇತ್ರವಾರು ಹೆಸರು ಸೂಚನೆ ಹೀಗಿದೆ:
ಮಂಗಳೂರು 1ನೇ ಕ್ಷೇತ್ರ: ಜೆ. ರಾಮಚಂದ್ರ ಭಟ್ಟ, ಶ್ರೀಮತಿ ಆಡ್ಡಿ ಸಲ್ದಾನ ಮತ್ತು ಬಿ. ನಾರಾಯಣ ನಾಯಕ್.

ಮಂಗಳೂರು 2ನೇ ಕ್ಷೇತ್ರ: ಗುಲಾಮುದ್ದೀನ್ ಕಮ್ಮಲ್, ಯು. ಟಿ. ಫರೀದ್ ಮತ್ತು ಡಾ॥ ಅಬೂಬೇಕರ್.

ಸುರತ್ಕಲ್: ಬಿ. ಸುಬ್ಬಯ್ಯ ಶೆಟ್ಟಿ ಮತ್ತು ಇಬ್ರಾಹಿಂ.

ಮೂಡಬಿದ್ರಿ: ಡಾ॥ ದಾಮೋದರ್, ಎ. ಶ್ರೀಧರ್ ಮತ್ತು ಕಟ್ಟೀಮೂರ್ ಭಾಸ್ಕರ ಶೆಟ್ಟಿ.

ಉಡುಪಿ: ಶ್ರೀಮತಿ ಮನೋರಮಾ ಮಧ್ವರಾಜ್, ದೇಜು ಕಾಂಚನ್, ಮತ್ತು ಪ್ರಭಾಕರ ಪೆಜ್ಜೆ.

ಕಾಪು. ಬಿ. ಭಾಸ್ಕರ ಶೆಟ್ಟಿ, ಮುದ್ದು ಸುವರ್ಣ

ಬ್ರಹ್ಮಾವರ. ಜಯಪ್ರಕಾಶ ಶೆಟ್ಟಿ, ಆನಂದ ಕುಂದ ಸೇನ್ಹಿ ಮತ್ತು ಶ್ರೀನಿವಾಸ ಶೆಟ್ಟಿ.

ಕುಂದಾಪುರ: ಶ್ರೀಮತಿ ವಿನ್ಸಿಫ್ರೆಡ್ ಪೆರ್ನಾಂಡಿಸ್ ಮತ್ತು ಬಿ ಎಸ್. ಜಗನ್ನಾಥ ಶೆಟ್ಟಿ.

ಬೈಂದೂರು ಎ ಜಿ. ಕೊಡ್ಗಿ ಮತ್ತು ಎಚ್. ವಿಶ್ವೇಶ್ವರಯ್ಯ.

ಬಂಟ್ವಾಳ: ಕೆ ಎನ್. ಮಹಾಬಲ ಶೆಟ್ಟಿ, ಕೆ. ಎಸ್. ಮಹಾಬಲ ಶೆಟ್ಟಿ ಮತ್ತು ಶಿವರಾಮ ಶೆಟ್ಟಿ.

ಪುತ್ತೂರು: ಎ ರಂಕರ ಆಳ್ವ ಮತ್ತು ಬಿ. ಈಶ್ವರ ಭಟ್ಟ.

ಸುಳ್ಯ: ಬಾಲಕೃಷ್ಣ ನಾಯಕ್. ರಾಮಣ್ಣ ನಾಯಕ್ ಮತ್ತು ಪಿ. ಡಿ ಬಂಗೇರ್.

ಚೆಳ್ತಂಗಡಿ: ವಿ. ಶ್ರೀಧರ, ಸುಬ್ರಹ್ಮಣ್ಯ ಗೌಡ ಮತ್ತು ಎ. ಆರಾಸ.

ಕಾರ್ಕಳ. ವೀರಪ್ಪ ಮೊಯಿಲಿ, ಶಚೀಂದ್ರ ನಾಥ್.

ಶ್ರೀ ಬಿ. ಕೆ. ಹೆಗ್ಡೆಯವರ ನಿರ್ಗಮನ

ದಿಲ್ಲಿಯಲ್ಲಿ ಭಾರತ ಸರಕಾರದ ಎಜ್ಯುಕೇಶನ್ ಮಿನಿಸ್ಟ್ರಿಯ ಡೆವಲಪ್‌ಮೆಂಟ್ ಎಂಡ್ ವಿಶುವಲ್ ಪಬ್ಲಿಸಿಟಿ ಯೂನಿಟ್‌ನಲ್ಲಿ ಸುಮಾರು ಹತ್ತು ವರುಷಗಳಿಂದ ಸೇವೆ ಸಲ್ಲಿಸುತ್ತಿದ್ದ ದಕ್ಷಿಣ ಕನ್ನಡಿಗರಾದ ಶ್ರೀ ಬಿ. ಕೃಷ್ಣಾನಂದ ಹೆಗ್ಡೆಯವರು ಬೆಂಗಳೂರಿನ ಪ್ರೆಸ್ ಇನ್‌ಫರ್ಮೇಶನ್ ಬ್ಯೂರೋದಲ್ಲಿ ಅಸಿಸ್ಟಾಂಟ್ ಇನ್‌ಫರ್ಮೇಶನ್ ಆಫೀಸರರಾಗಿ ನಿಗರ್ಕಿಯಿಸಲ್ಪಟ್ಟಿರುವರು. ಇವರು ಹೊಸ ದಿಲ್ಲಿಯ ದಕ್ಷಿಣ ಕನ್ನಡಿಗರ ಕ್ಲಬ್ಬಿನ ಉತ್ಸಾಹೀ ಕಾರ್ಯಕ್ರಮ ನಿರ್ದೇಶಕ ಕಾರ್ಯದರ್ಶಿಗಳಾಗಿದ್ದು ಜನಪ್ರಿಯರಾಗಿದ್ದರು.

ಶ್ರೀಕೃಷ್ಣ ಉಚಿತ ಚಿಕಿತ್ಸಾಲಯದ ಹೊಸ ಕಟ್ಟಡದ ಉದ್ಘಾಟನೆ

ಉಡುಪಿಯ ಶ್ರೀ ಕೃಷ್ಣ ಮಠದ ಮುಂಭಾಗದಲ್ಲಿ ನಿರ್ಮಿಸಲಾದ ಶ್ರೀ ಕೃಷ್ಣ ಉಚಿತ ಚಿಕಿತ್ಸಾಲಯದ ನೂತನ ಕಟ್ಟಡವನ್ನು ತಾ 9ರಂದು ಪರ್ಯಾಯ ಶ್ರೀ ಫಲಿಮಾರು ಮಠದ ಶ್ರೀ ವಿದ್ಯಾಮೌನ್ಯ ತೀರ್ಥ ಶ್ರೀ ಪಾದಂಗಳವರ ಆಶೃಕ್ಷತೆಯಲ್ಲಿ ಪರ್ಯಾಯ ಪೀಠಾರೋಹಣ ಶ್ರೀ ವಿಬುಧೇಶ ತೀರ್ಥ ಶ್ರೀಗಳವರು ಉದ್ಘಾಟಿಸಿದರು.

ಅದಮಾರು ಶ್ರೀಗಳವರು ಈ ಚಿಕಿತ್ಸಾಲಯದ ಉದ್ದೇಶವನ್ನು ವಿವರಿಸಿ ಇಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಡಾಕ್ಟರುಗಳ ಕುರಿತು ಪ್ರಸ್ತಾಪಿಸಿ ಜನತಾ ಸೇವೆಯೇ ಜನಾರ್ದನನ ಸೇವೆ ಎಂದರು.

ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ಅನುಗ್ರಹ ಪ್ರವಚನ ಮಾಡಿದ ಬಳಿಕ ಅಧ್ಯಕ್ಷ ಸ್ಥಾನದಿಂದ ಪರ್ಯಾಯ ಫಲಿಮಾರು ಮಠದ ಶ್ರೀಗಳವರು. ಮಾತಾಡುತ್ತ ಗುಣಕ್ಕೆ ಪ್ರಾಶಸ್ತ್ಯ ನೀಡಿಗಬೇಕೆಂದು ಹೇಳಿ ಚಿಕಿತ್ಸಾಲಯಕ್ಕೆ ಶುಭ ಕೋರಿದರು

ಆರಂಭದಲ್ಲಿ ಶ್ರೀ ಕೃಷ್ಣ ಉಚಿತ ಚಿಕಿತ್ಸಾಲಯ ಕಟ್ಟಡ ನಿರ್ಮಾಣ ಸಮಿತಿಯ ಅಧ್ಯಕ್ಷ ಡಾ॥ ವಿ ಎಸ್. ಆಚಾರ್ಯರು ಸ್ವಾಗತಿಸಿದರು. ಪರ್ಯಾಯ ಶ್ರೀ ಫಲಿಮಾರು ಶ್ರೀಗಳವರು ಉಚಿತ ಸೇವೆ ಸಲ್ಲಿಸಿದ ಡಾಕ್ಟರುಗಳಿಗೆ ಸಂತಾಪ್ತತೆಯಿತ್ತು ಹರಸಿದರು. ಕಟ್ಟಡವನ್ನು ರಚಿಸಿಕೊಟ್ಟ ಶ್ರೀ ಕಂಬ್ಯಾಕ್ಟರ ಶ್ರೀ ದಾಮೋದರಸ್‌ರಿಗೆ ಶ್ರೀ ಕೃಷ್ಣನ ಪ್ರತಿಮೆಯುಳ್ಳ ಮಂಟಪವನ್ನು ನೀಡಿದರು.

ಅಂತ್ಯದಲ್ಲಿ ಡಾ॥ ದೇವದಾಸ ಹೆಗ್ಡೆಯವರು ಧನ್ಯವಾದ ಅರ್ಪಿಸಿದರು.

○ ○ ○

ಗೆದ್ದವರು ಗೆದ್ದಂತಲ್ಲ; ಸೋತವರು ಸೋತೆಂತಲ್ಲ.

○ ○ ●

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 345/71.

ಕನುಲಕಿರಿ ಶ್ರೀ ಬ್ರಹ್ಮಮಾರ್ಗಪರಮೇಶ್ವರಿ ಅಮ್ಮನವರ ಬಂಡಾರ —ಪಾದಿ.
ಬಾಯಿರಾಯ ಜೋಗಿ ಸೆಂಕಟಕೃಷ್ಣ ಹೆಗ್ಡೆ ಸಕ್ಕಾ —ಪ್ರತಿವಾದಿಯ.

ಸಕ್ರಿ ವಾದಿ ಕರೆಯುಂದ ಈ ಮೂಲ್ಕ ಜಾಹೀರ ಸೂಚಿಕೊಳ್ಳುವನೆಸೇನೆಂದ್ರೆ:—

ಕುಂದಾಪುರ ತಾಲೂಕು ಕಂಗಮ್ಮ-ಜಿಳಲಿ ಮಹಾವೇಗ್ರ ಹೆಸ್ತಿ ಮಕ್ಕಳು.

ಶಂಕರ ನಾರಾಯಣ ಗ್ರಾಮದ ಸಂಸಿಗೆ ಅಡಿಮಕ್ಕತ್ತಿರುವನು.

ಪಾದಿ ಬಂಡಾರದ ಆಡಳ್ತೆ ಕೊಕ್ಕೆಸರ್ ಪಾಪ್ತು ಕೃಷ್ಣಯ್ಯ ಹೆಗ್ಡೆ ಯಿಜಿಸೊಳಗೆ ತಾ 23.3.1911ರಲ್ಲಾದ ರಿಜಿಸ್ಟ್ರಿ ಮೂಲ ಗೇಣ ಎದ್ದು ಸುದಿ ಪ್ರಕಾರ ಪಾವಾ ಆಸ್ತಿ ಜವಾಬ್ದಾರಿಯುದೆ ಪಾದಿ ಬಂಡಾರಕ್ಕೆ ಪ್ರತಿವಾದಿಯಿಂದ ಬರಕ್ಕ ಕರೆವ ಶುಬಕ್ಕತ್ತು ಸಂವತ್ಸರದ ಲಾಗಾಯ್ತು ಸಾಲಾಗಿ ಸುವತ್ಸರದ ಆಂತ್ಯದ ವರೆಗಿನ ಗೇಣ ಬಿತ್ತಿ ಕೂಡಾ ರೂಪ್ಯಾ 2910ಂ0 ಬರ ಪೂರಿ ಕೊಳ್ಳುವರೆ ಪಾಪಿಯು ನೂರಿದ ಮೇಲ್ಕಾಣ ಪಾರೆಯು 19.2.72ಕ್ಕೆ ತನ್ನಾಗೆ ಯಿಟ್ಟುಕೊತ್ತಾರೆ. ಕುರಿತು ನಮ್ಮುದೇವ್ರಾ ಉದಾಹರಿಸಿ ಮುನ್ಸೀಫ್ ಸಕ್ರಿ ದಿನ್ಸ ಪಸ್ಸು 11 ಗಂಟೆಗೆ ಸ್ವತಕ್ಷಾ ವಾ ವಕೀಲರ ಪ್ಲಾರಾ ಹಾಜರ್ರಾಗಿ ಜಾಹೀರಿ ಮಾಶಿಕೊಳ್ಳಿ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಿ ಹಾಜರಿನಲ್ಲಿ ಏಕಕ್ಷವಾಗಿ ತೀರ್ಮಾನಿಸಲ್ಪಡುವ ಪಬೆಂಬ ಸೂಚ್ನಿ ಸಾದಿಕಸಿದೆಯಿಂದ ಈ ಮೂಲ್ಕ ತಿಳಿಯಪಡ್ಸಿಯದೆ.

M. M. Hebbar
Advocate for Plff.

Kundapur, Date 7—1—72

ನಿರೀಕ್ಷಿಸಿರಿ!

ಧಾರವಾಹಿಯಾಗಿ ಪ್ರಕಟವಾಗಲಿದೆ—

ನಿಮ್ಮ ಅಚ್ಚುಮೆಚ್ಚಿನ ಬರಹಗಾರ

ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರ

? ? ?

ಸ್ವತಂತ್ರ ಐತಿಹಾಸಿಕ ಕಾದಂಬರಿ

ಯೊಂದು.

ಅಜ್ಜಿ ಹೇಳಿದ ಕತೆ

(ಎರಡನೇ ಪುಟದಿಂದ)

ಕೇಳದೆ ಕೆಳಗಿನ ಕೋಣೆಯಲ್ಲೆ ಮಲಗಿ ದಳು."

"ಇದೇ ಗುಡ್ಡ ಇನ್ನೂ ಹಿಂದೆ ಇತ್ತು. ಮಧ್ಯರಾತ್ರೆಗೆ ಆಕಸ್ಮಿಕವಾಗಿ ಸಿಡಿದು ಉರುಳಿ ಮನೆಯ ಮೇಲೆಯೇ ಮಗುಚಿಕೊಂಡಿತು. ಹಿಂದೆ ಮನೆಯಿದ್ದ ಸ್ಥಳ ಈಗ ಮಣ್ಣರಾಶಿಯಾಗಿ ಮಾರ್ಪಟ್ಟಿತು ಊರವರೆಲ್ಲ ಬಂದರು. ಈ ಧುರ್ಘಟನೆಯನ್ನು ನೋಡಿದರು. ಎಲ್ಲೆಲ್ಲಿ ಹೇಗೆ ಹೇಗೆ ಮಣ್ಣು ಬಗೆದು ತೆಗೆಯ ಬಹುದೋ ಅಲ್ಲೆಲ್ಲ ಆಗೆದರು. ಹಾಗೆ ಅಗೆದಾಗ ಜೀವಚ್ಛವವಾಗಿದ್ದ ಆ ಹುಡುಗಿಯ ದೇಹ ಸಿಕ್ಕಿತು. ಕುಸಿದ ಕಿಟಕಿಗಳೆರಡು ಒಂದಕ್ಕೊಂದು ಆಧಾರವಾಗಿ ನಿಂತು ಗೂಡಿನಂತೆ ಮೂಡಿ ಯಾಕಾಗಿಯೋ ಆ ಹುಡುಗಿಯನ್ನು ಬದುಕಿಸಿದ್ದವು. ಅತಿ ಕಷ್ಟದಿಂದ ಅವಳನ್ನು ಹೊರಗೆ ತೆಗೆದು ಆರೈಕೆ ಮಾಡಿದರು. ಅವಳು ಉಳಿದುಕೊಂಡಳು. ಬೇರೆ ಒಂಭತ್ತು ಜನರ ಶವ ಕೂಡ ಏನೇನು ಪ್ರಯತ್ನ ಪಟ್ಟರೂ ಸಿಗಲಿಲ್ಲ. ಎಲ್ಲರೂ ಮಣ್ಣಿನೊಳಗೆ ಮಕ್ಕಾಗಿ ಹೋದರು....' ಮುದುಕಿ ತುಸು ಹೊತ್ತು ತಲೆಗೆ ಕೈಯಿಟ್ಟು ಕುಳಿತು ಏನನ್ನೋ ಯೋಚಿಸತೊಡಗಿದಳು.

"ಅಜ್ಜಿ ಅಳುತ್ತೀಯೊ, ಮುಂದೇನಾಯಿತುಹೇಳು"ಎಂದೆ. "ನಾನೇಕೆ ಅಳಬೇಕು? ಅಳುತ್ತಿಲ್ಲ ಮಗು ನಗುತ್ತೇನೆ.ಅಳಲೇನು ಸಾನು ಮರಣದ ಸುದ್ದಿಯನ್ನು ಹೇಳುತ್ತಿದ್ದೇನೆಯೇ?" ಎಂದು ನನ್ನನ್ನು ವ್ಯಂಗ್ಯವಾಗಿ ನೋಡಿದಳು ಅಜ್ಜಿ. ಆ ದೃಷ್ಟಿ ತೀವ್ರತರವಾಗಿತ್ತು. ಅದೇ ನನ್ನನ್ನೂ ಭಸ್ಮ ಮಾಡುವುದೊ ಅಂತನಿಸಿ ಕೊಂಚ ನಡುಗಿದೆ. ಏಷ್ಟಾದರೂ ಹುಚ್ಚರ ಸಹವಾಸ ಮುಂದೇನು ಮಾತನಾಡಬೇಕೆಂದು ಅರಿಯದೆ ಮೌನವಾದೆ.

ಮುದುಕಿಯೇ ಪ್ರಾರಂಭಿಸಿದಳು. "ಆ ಹುಡುಗಿ ಶಂಕರಿಯನ್ನು ಅವಳ ಚಿಕ್ಕಪ್ಪ ನೊಬ್ಬ ಸಾಕಿ ಸಲಹಿದರು. ಆಡಕೆ ಹುಟ್ಟುವಳಿ ಬೇಕಾದಷ್ಟಿತ್ತು. ಅದನ್ನೆಲ್ಲ ಜಮೆ ಮಾಡಿ ಆ ಹುಡುಗಿಯ ಹೆಸರಿನಲ್ಲೆ ಇಟ್ಟರು. ಕೆಳಗೆ ನೋಡು, ಅಲ್ಲಿ ಒಂದು ಭವ್ಯ ಮನೆಯನ್ನೂ ಕಟ್ಟಿಸಿದರು. ಅಂತೂ ಹುಡುಗಿ ಸ್ವಾಯಕ್ಕೆ ಬಂದಳು ಅವಳಿಗೊಂದು ಮದುವೆಯಾಗಬೇಕಲ್ಲ? ಆ ನತದೃಷ್ಟೆಯನ್ನು ವರಿಸುವವರಾದರೂ ಯಾರು? ಆಕೆ ಕೇವಲ ಹೆಣ್ಣೇ ಆಗುತ್ತಿದ್ದರೆ, ಅವಳ ಬಳಿ ಏನೂ ಇಲ್ಲವಾಗುತ್ತಿದ್ದರೆ ಆಕೆಗೆ ಮದುವೆಯೇ ಆಗುತ್ತಿರಲಿಲ್ಲನೇನೋ! ಆದರೆ ಅವಳು ಲಕ್ಷ್ಮೀ ಪುತ್ರಿಯಾಗಿದ್ದಳು. ಊರವರೆಲ್ಲ ಅವಳನ್ನು ಹಲವು ವಿಧದಲ್ಲಿ ಹಂಗಿಸಿದರೂ ಈ ಭೂಮಿಗಾಗಿ ಒಬ್ಬ ಪುಣ್ಯಾತ್ಮ ಆ ಹುಡುಗಿಯನ್ನು ವಿವಾಹವಾದರು."

"ಎಷ್ಟು ಚಂದವಿತ್ತು ಆ ಸಂಸಾರ. ಗಂಡ ಹೆಂಡಿರಿಬ್ಬರೂ ಜಕ್ಕವಕ್ಕಿಗಳಂತೆ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು. ಗಂಡ ಎಷ್ಟು ದಾನಿಯೋ ಹೆಂಡತಿಯೂ ಅಷ್ಟೇ ಧರ್ಮಿಷ್ಠಳು. ಆದರೆ ಆ ಹೆಂಡತಿಯಲ್ಲೊಂದು ದೌರ್ಬಲ್ಯ ಇತ್ತು. ಮಳೆ ನೋಡಿ ಕಂಡೊಡನೆ ಭೀತಿಯಿಂದ ಹುಚ್ಚರಂತೆ ಏನೇನೋ ಪೂತನಾಡಿ, ಯಾರು ಯಾರನ್ನೊ ಏನೇನೊ ಪ್ರಶ್ನೆ ಕೇಳಿ ಹಿಂಸಿಸುವುದು. ಇದು ದಿನ ಕಳೆದಂತೆ ಹೆಚ್ಚಾಗುತ್ತಲೇ ನಡೆಯುತ್ತಿತ್ತು. ಗಂಡ ಈ ಪ್ರಶ್ನೆಗಳಿಂದ ಜಿಗುಪ್ಸೆಗೊಂಡು ಕೊನೆ ಕೊನೆಗೆ ಕಿವುಡನಂತೆ ವರ್ತಿಸುತ್ತಿದ್ದ."

"ವರ್ಷಗಳು ಸಂದುವು ಹುಡುಗಿ ದೊಡ್ಡವಳಾದಳು. ಹೆಂಗಸಾದಳು. ಮೂರು ಮಕ್ಕಳ ತಾಯಿಯೂದಳು. ಕೊನೆಗೆ ಮುದುಕಿಯೂಗುತ್ತ ನಡೆದಳು. ಗಂಡನ ತಲೆಯಲ್ಲಿ ನರೆಗೂದಲು ಕಾಣುವಾಗ ಮಡದಿಯ ಬಾಯಿ ಹಲ್ಲುಗಳೂ ಒಂದೊಂದಾಗಿ ಕಳಚ ಹತ್ತಿದುವು "

"ಹೀಗೆ ಸುಂದರವಾಗಿ ನಡೆಯುತ್ತಿದ್ದಾಗ ಮಳೆಗಾಲವೊಂದು ಬಂತು. ಅದೇ ಆ ಹಿಂದಿನ ಮಳೆಗಾಲವಿರಬೇಕದು. ಶಂಕರಿಗೆ ಆ ಮಳೆಯನ್ನು ಕಂಡು, ಬಾನಲ್ಲಿ ಕಾರ್ಮೋಡ ಹೊಂಚುವುದನ್ನು ನೋಡಿ ಎದೆಯೊಳಗೇ ಎಂಥದೊ ಗೊಂದಲ ಆರಂಭವಾಗ ತೊಡಗಿತ್ತು. ಆಕೆ ಎಂದಿನಂತೆಯೇ ತನ್ನ ಮನಸ್ಸಿಗೆ ಕಾಣುವ ವಿಕಲ್ಪಗಳನ್ನು ಗಂಡನೊಂದಿಗೆ ಹೇಳ ತೊಡಗಿದಳು. ಆತ ಆಕೆಯ ಹುಚ್ಚು ಮಾತಿಗೆ ಒಂದಿಷ್ಟೂ ಲಕ್ಷ್ಯ ಕೊಡಲಿಲ್ಲ. ಆದರಿಂದ ಶಂಕರಿ ಇನ್ನಷ್ಟು ದಿಗಿಲುಗೊಂಡಳು. ನಿರೀಕ್ಷಿಸುತ್ತಿದ್ದ ದುರಂತದ ದಿನ ಬಂದೇ ಬಂತು. ಅಂದು ಹಗಲು ಅವಳಂತೂ ಸಂಪೂರ್ಣ ದಿಗಿಲುಗೊಂಡು ಸೆಮ್ಮದಿಯನ್ನು ಕಳಕೊಂಡಿದ್ದಳು. ಒಂದೇ ಸವನೆ ಪತಿಯನ್ನು, 'ನಾವು ಇದೊಂದು ದಿನವಾದರೂ ಚಿಕ್ಕಪ್ಪನ ಮನೆಯಲ್ಲಿ ಹೋಗಿರೋಣ ನನಗಂತೂ ಇಂದು ಇದ್ದ ಧೈರ್ಯವೂ ಕುಸಿದಿದೆ' ಎಂದು ದುಂಬಾಲು ಬಿದ್ದಳು. ಆಗ ಅವಳ ಗಂಡ, 'ನನಗೆ ಹುಚ್ಚೀ ಶಂಕರಿ. ಚಿಕ್ಕಪ್ಪನ ಮನೆಯಿಂದ ಈ ಮನೆ ಎಷ್ಟೋ ಗಟ್ಟಿ ಇದರದು ಕಲ್ಲಿನ ಗೋಡೆ, ಹಂಚಿನ ಸೂರು. ಚಿಕ್ಕಪ್ಪನ ಮನೆಗೆ ಮಣ್ಣಿನ ಗೋಡೆ; ಸೋಗೆ ಸೂರು. ನೀನು ಬೇಡದ ಕಲ್ಪನೆ ಮೂಡಿ ನೇಹವನ್ನು ಬಳಲಿಸಿಕೊಳ್ಳುತ್ತಿ?' ಎಂತ ಕೇಳಿದ."

"ಶಂಕರಿ ಮಾತನಾಡಲಿಲ್ಲ. ಆದರೆ ಮನದ ಉಮ್ಮಳ ಒಂದಿಷ್ಟೂ ಕಡಮೆಯಾಗಲಿಲ್ಲ. ಅಂದು ಸಂಜೆ ನಾಲ್ಕು ಗಂಟೆಗೇ ಆಕಾಶ ಕಪ್ಪಾಗಿ ರಾತ್ರಿಯಾದಂತೆನಿಸಿತು. ಗಾಳಿ ಭೋರನೆ ಬೀಸತೊಡಗಿತು. ತಿಪ್ಪರ ವರೆಗೆ ಶಾಂತವಾಗಿದ್ದ ಪ್ರಕೃತಿ ಒಮ್ಮಿಂದೊಮ್ಮೆಗೇ ಭುಸುಗುಟ್ಟ ಹೆಡೆಯೆತ್ತಿ ಅಪ್ಪಳಿಸಿ ಮುಸಲಧಾರೆಯಂಧ ಮಳೆ ಮರ ಮರಗಳನ್ನೂ ತಾಕಲಾಡಿಸಿ ಉರುಳಿಸುವಂತ ಭೀಕರ ಗಾಳಿ. ಶಂಕರಿ ನೆಮ್ಮದಿ ಕಳಕೊಂಡು ಮನೆಯ ಸುತ್ತೂ ಓಡಾಡಿದಳು. ಅವಳ ಕಣ್ಣಿಗೆ ಯಾವುದೊ ಮೃತ್ಯು ತಾಂಡವವೊಂದು ಜರಗುತ್ತಿದೆ ಎಂಬ ಭೀತಿ ಕ್ಷಣಕ್ಷಣ ಕಾಣಿಸುತ್ತಿತ್ತು. ಇವಳ ಬಾಯಲ್ಲಿ ದೇವರನಾಮ ಸತತವಾಗಿ ಹರಿಯತೊಡಗಿತು."

"ಮಧ್ಯರಾತ್ರಿಯೂಗುವಾಗ ಪ್ರಕೃತಿ ಇನ್ನಷ್ಟು ಕ್ಷೋಭೆಗೊಂಡಿತು ಗಾಳಿ ಪ್ರಚಂಡವಾಗಿ ಬೀಸ ತೊಡಗಿತು. ತೋಟದಲ್ಲಿರುವ ಅಡಿಕೆ ಮರಗಳು. ತೆಂಗುಗಳು ಭಟ್ಟ ಭಟ ಮುರಿಯುವ ಭೀಷಣ ಸದ್ದು ಕೇಳ ತೊಡಗಿತು. ಗಾಳಿಯೊಂದು ಭೂ ಭೂಕಾರದಿಂದ ಬೀಸಿ ಮನೆಯ ಮೂಡನ್ನೇ ಎತ್ತಿ ಕೆಳಗೆ ಬೀಳಿಸಿ ತಿಪ್ಪರಲಾಗ ಹಾಕಿತು. ಆಗ ಗಾಬರಿಯಿಂದ ಮನೆಯವರೆಲ್ಲ ನಡುಗ ತೊಡಗಿದರು. ಶಂಕರಿಗಂತೂ ಜೀವನೇ ಇಲ್ಲ. ಏನು ಮಾಡಬೇಕೆಂದು ತಿಳಿಯದೆ ಎತ್ತ ಹೊಗಬೇಕೆಂದೂ ಅರಿಯದೆ ಭೀತಿಯಿಂದ ಮರಗಟ್ಟಿದಂತಾಗಿ ಒಂದು ಕಡೆ ನಿಂತುಬಿಟ್ಟಳು. ಆಗ ಗಾಳಿ ಗರ ಗರ ಸುತ್ತಿತ್ತು. ಲೋಕವನ್ನೇ ನುಂಗುವ ಹಾಗೆ ಭೋರಿಟ್ಟಿತು. ಆರ್ಭಟಿಸಿತು. ತನ್ನೆಲ್ಲ ಶಕ್ತಿಯನ್ನು ಪಯೋಗಿಸಿ ಕಟ್ಟಿಯನ್ನುರುಳಿಸಿತು. ಮನೆಯ ಗೋಡೆಯನ್ನು ಬೀಳಿಸಿತು. ಆ ಗಾಳಿಯ ಹೊಡೆತಕ್ಕೆ ಸೀರು ಸೋಕಿದ ಉಪ್ಪಿನ ಗೊಂಬೆಯಂತೆ ಗೋಡೆಗಳೆಲ್ಲ ಪಟ ಪಟನೆಬೀರುಳಿ ನೀರಾದುವು...' ಮಾತು ನಿಲ್ಲಿಸಿ ಅಜ್ಜಿ ಶೂನ್ಯವಾಗಿ ನಾಲ್ಕು ದಿಕ್ಕನ್ನೂ ನೋಡುತ್ತ ತನ್ನ ಬೊಚ್ಚು ಬಾಯನ್ನು ಆಡಿಸಿದಳು ಕೂತೂಹಲ ತಾಳಲಾರದೆ ನಾನು, "ಮುಂದೆ ಏನಾಯಿತು ಅಜ್ಜಿ? ಆ ಮನೆಯವರೆಲ್ಲ ಏನಾದರು?" ಎಂದು ಕೇಳಿದೆ.

"ಇಷ್ಟೆಲ್ಲ ಕೋಲಾಹಲಗೈದ ಪ್ರಕೃತಿ ಮರುದಿನ ಶಾಂತವಾಗಿತ್ತು. ಈ ಎಂಟು ಎಕರೆಯಲ್ಲಿರುವ ತೋಟ ಮರಗಳನ್ನೆಲ್ಲ ಕಳಕೊಂಡು ವಿಕಾರವಾಗಿ ನಿಂತಿತ್ತು. ಮನೆಯವರ ಹೆಣಗಳೆಲ್ಲ ಕಲ್ಲಿನ ಕೆಳಗೆ ಸಿಕ್ಕು ನಜ್ಜುಗುಜ್ಜಾಗಿದ್ದವು. ಅಂಥ ದುರಂತ ಚಿತ್ರವನ್ನು ನೋಡಲು ಸಾಧ್ಯವಿಲ್ಲ ಮಗಾ. ಮನುಷ್ಯರಾದವರು, ಶತ್ರುಗಳಾದವರು ಕೂಡಾ ಇಂತಹ ಹೃದಯವಿದ್ರಾವಕ ನೋಟವನ್ನು ನೋಡಲಾರರು...." ಎಂದು ಉನ್ಮಾದಿನಿಯಂತೆ ನಕ್ಕಳು ಅಜ್ಜಿ.

"ಆ ದಿಗೆ ಗುಡ್ಡ ಬೆಟ್ಟಗಳಿಗೆ ಬಡಿದು ಪ್ರತಿಧ್ವನಿಸಿತು. ಆದರೆ ವಿಕಾರ ಧ್ವನಿಯನ್ನು ಕೇಳಿ, ಸಿಾಜ ಕೇಕೆಯೆಂದೇ ನಾನೂ ಭ್ರಮಿಸಿದೆ. ಕಂಪಿಸಿದೆ." "ಹಾಗಾದರೆ ಅಜ್ಜಿ, ಆ ಮನೆಯಲ್ಲಿ ಒಂದು ನರಪಿಳ್ಳೆಯೂ ಉಳಿಯಲಿಲ್ಲವೇ? ಎಲ್ಲರೂ ಹೋದರೇ....?" ಎಂದು ಧೈರ್ಯವಹಿಸಿ ಕೇಳಿದೆ. ಅಜ್ಜಿ ಹುಚ್ಚು ಆತಿರೇಕವಾದಂತೆ ಕೆಲಕಲ ನಕ್ಕಳು. ಬಳಿಕ ನುಡಿದಳು. "ಎಲ್ಲರೂ.... ಊಹೂಂ, ಎಲ್ಲರೂಸಾಯಲಿಲ್ಲ. ಆ ನತವೃಷ್ಟೆ ಶಂಕರಿ ಹೇಗೋ ಈ ಸಲವೂ ಬದುಕಿ ಉಳಿದಳು. ಅವಳ ಜೀವ ಯಮನಿಗೆ ಕೂಡ ಬೇಡಾಗಿತ್ತು. ಅಂಥ ಪಾಪಿ, ಅಲ್ಲವೇ ಮಗಾ. ಅವಳ ಕೆಟ್ಟ ಮುಸುಡಿಗೆ ಉಗಿದು ಬಿಡು ಮಗಾ"

'ಅವಳೆಲ್ಲಿದ್ದಾಳೆ ಅಜ್ಜಿ ಈಗ?' ಎಂದು ಕೇಳಿದೆ.

'ಹಹ್ಹಹ್ಹ! ಇನ್ನೂ ಗುರುತಿಸಲಿಲ್ಲವೆ ಮಗಾ! ಆ ದುರದೃಷ್ಟೆ ನಾನೇ' ಎಂದಳು ಅಜ್ಜಿ.

ಶಂಕರಮ್ಮನ ದಾರುಣ ಕತೆಯನ್ನು ಆ ಮಳೆ ಬಾಯಿಯಿಂದಲೇ ಕೇಳಿ ಮರುದಿನೆ ನಾನು ಪ್ರಕೃತಿಯ ಈ ವಿಕಟಾಟ್ಟಹಾಸ ಕೇಳಿ ಬೆದರಿದೆ ಅದೇ ಮನೆಯ ಮೇಲೆ ನಿಸರ್ಗ ಎರಡೆರಡು ಸಾರಿ ಭೀಷಣ ರೋಷ ತಾಳಲು ಕಾರಣವೇನೋ ನನಗಂತೂ ತಿಳಿಯಲಿಲ್ಲ. ಹೀಗೆ ಯೋಚಿಸುತ್ತ ಚಡಾಲ ಕಳೆದು ಅಜ್ಜಿಯ ಕಡೆಗೆ ತಿರುಗಿದೆ. ಆದರೆ ಆಕೆ ಕೋಲೂರುತ್ತ ತಪ್ಪು ದೊರವಲ್ಲಿ ನಡೆಯುತ್ತಿದ್ದಳು. ಆಕಾಶವನ್ನು ನೋಡುತ್ತ 'ಸರೋಜಾ, ರವಿ, ಈಗ ಮಳೆ ಬರುತ್ತದೆ ಒಳಗೆ ಓಡಿ' ಎಂದು ಆರ್ಭಟಿಸಿ, ತಾನೂ ಲುಟು ಲುಟು ಓಡಹತ್ತಿದಳು.

ನಾನು ಆ ಮುದುಕಿಯನ್ನೆ ನೋಡುತ್ತ ನಿಡಿದಾದ ಉಸಿರು ಬಿಟ್ಟು ನನ್ನ ಕೋವಿಯನ್ನು ಹೆಗಲಿಗೆರಿಸಿ ಭಟ್ಟರ ಮನೆಯತ್ತ ಹೊರಟೆ. ಸಂಜೆಯ ಚೆಂಡು ರವಿ ತಪ್ತಕಾಂಚನದಂತೆ ರಂಜಿಸುತ್ತಿದ್ದ.

[ದ. ಕ. ಜಿಲ್ಲೆಯಲ್ಲಿ ನಡೆದ ಸತ್ಯ ಕತೆಯೊಂದರ ಹಿನ್ನೆಲೆಯಲ್ಲಿ ಹೆಣೆದ ಕಲ್ಪಿತ ಕತೆ]

—ಪ ರಾಮಕೃಷ್ಣ ಶಾಸ್ತ್ರಿ

ಚಂದಾ ಹಣ ಬಾಕಿ ಇರುವವರು ದಯವಾಗಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೆರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ರುಚಿ-ರುಚಿಯಾದ ಭೋಜನ. ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

NAVAYUGA 13-1-1972

Registered with the Registrar of News Papers for India under No. R. N. 3546/'67

REGD. No B. G. 176
LICENCE No. 33
Licensed to Post without Prepayment

ಪಾಕಿಸ್ತಾನಕ್ಕೆ

ಅಮೆರಿಕ-ಚೀನೀ ಬೆಂಬಲದ ಹಿಂದೇನಿದೆ?

ಸಂ. ರಾ ಅಮೆರಿಕವು ವಿಶ್ವದಲ್ಲಿ ಒಂದು ಬಹುದೊಡ್ಡ ರಾಜಕೀಯ ಆಟದಲ್ಲಿ ತೊಡಗಿದೆಯೆಂಬುದನ್ನೂ ಮತ್ತು ಅದು ಪಾಕಿಸ್ತಾನವನ್ನು ಈ ಆಟದಲ್ಲಿ ಕೇವಲ ಒಂದು ದಾಳವಾಗಿ ಕಾಣುತ್ತಿದೆಯೆಂಬುದನ್ನೂ ಹೇಳಬೇಕಾಗಿಲ್ಲ. ಪಾಕಿಸ್ತಾನವು ಹೊಂದಿರುವ ಮಹತ್ವಪೂರ್ಣವಾದ ಆಯಕಟ್ಟಿನ ಸ್ಥಾನವನ್ನೂ ಅದು ಅಮೆರಿಕದಿಂದ ಪಡೆದ ಸಹಾಯದ ಪ್ರಮಾಣವನ್ನೂ ಗಣನೆಗೆ ತೆಗೆದುಕೊಳ್ಳುವುದೂ ಅಗತ್ಯವಾಗಿದೆ. ಆದರೆ ಇನ್ನೂ ಬೇರೆ ಕೆಲವು ಪರಿಗಣನೆಗಳಿರುವಂತೆಯೂ ನಮಗೆ ಕಾಣುತ್ತಿದೆ.

ಭಾರತ—ಪಾಕಿಸ್ತಾನ ಘರ್ಷಣೆ ಬಗ್ಗೆ ಅಮೆರಿಕವು ಕಳೆದಿನದ ನಿಲುವಿಗೂ ಮತ್ತು ಅಮೆರಿಕನ್—ಚೀನೀ ಸಂಬಂಧಗಳ ಬೆಳವಣಿಗೆ ಪ್ರತೀಕ್ಷೆಗಳಿಗೂ ಪೀಕಿಂಗಿಗೆ ನಿಕ್ಸನರ ಭೇಟಿಗೂ ಪಶ್ಚಿಮವಲ್ಲಿಯ ಪತ್ರಿಕೆಗಳು ಸಂಬಂಧ ಕಲ್ಪಿಸುತ್ತಿದ್ದವೆ. ಅದೇನು ಆಕಸ್ಮಿಕವಾಗಿಲ್ಲ. ಅಮೆರಿಕವು ಪಾಕಿಸ್ತಾನವ ಪರವಾಗಿ ಮತ್ತು ಭಾರತವ ವಿರುದ್ಧವಾಗಿ ಖಚಿತವಾದ ನಿಲುವನ್ನು ತಾಳಿರುವಲ್ಲಿ ನಿಕ್ಸನರ ಯೋಜಿತ ಪೀಕಿಂಗ್ ಭೇಟಿಯು ಒಂದು ಹುನ್ನಾರ ಕಾರ್ಯಮಾತ್ರವಾಗಿತ್ತೆಯೆಂದು ಪ್ಯಾರಿಸ್ ಎಕೋ ಪತ್ರಿಕೆಯು ಬರೆಯುತ್ತಿದೆ. ಅಮೆರಿಕಾದ ಕ್ರೈಸ್ತಮತ ಸೈನ್ಸ್ ಮಾನಿಟರ್ ಹಾಗೂ ಬೇರೆ ಪ್ರಮುಖ ಪತ್ರಿಕೆಗಳೂ ಇಂಥವೇ ತೀರ್ಮಾನಕ್ಕೆ ಬಂದಿವೆ. ಅಮೆರಿಕವ ನಿಜ್ಞ ರಾಜಕಾರಣಿಗಳೂ ಇಂಥವೇ ಅಭಿಪ್ರಾಯವನ್ನು ವ್ಯಕ್ತಪಡಿಸಿವ್ವಾರೆ. ಉದಾಹರಣೆಗೆ ಸೆನೇಟರ್ ಕೆನಡಿಯವರು ಬೇರೆಯವರಂತೆಯೆ, ನಿಕ್ಸನ್ ಆಡಳಿತವು ಪೀಕಿಂಗಿನೊಡನೆ ಸಲುಗೆಯ ಅಪೇಕ್ಷೆಯಿಂದಲೇ ಭಾರತ—ಪಾಕಿಸ್ತಾನ ಘರ್ಷಣೆಯಲ್ಲಿ ಇಂಥ, ನಿಲುವನ್ನು ಕೈಕೊಂಡಿದೆಯೆಂದು ಸಂಬಂಧ ಕಲ್ಪಿಸುತ್ತಾರೆ.

ಭಾರತ ಉದಯಾಚಲದಲ್ಲಿಯ ಇಂದಿನ ರುದ್ರ ಘಟನೆಗಳಿಗೂ ಪೀಕಿಂಗಿಗೂ ನೇರವಾದ ಸಂಬಂಧವಿಲ್ಲವೆಂಬುದು ನಮಗೆಲ್ಲ ತಿಳಿದಿದೆ. ಯಹೆಂದರೆ ಒಂದಕ್ಕೆ ಇದು ಪೂರ್ವ ಪಾಕಿಸ್ತಾನದಲ್ಲಿ ಒಳನುಸುಳಲು ಬಯಸಿದ್ದು ಪ್ರಯತ್ನಿಸಿದೆ, ತನ್ನ ನಿಜಂಟರನ್ನು ಕಳಿಸಿಕೊಟ್ಟಿದೆ, ಸ್ವಾತಂತ್ರ್ಯ ಹೋರಾಟಕ್ಕೆ "ಜನತಾ ಯುದ್ಧ"ದ ಕಲ್ಪನೆಗಳನ್ನು ಪ್ರಚುರಗೊಳಿಸಿದೆ ಮತ್ತು ಅದೇ ಕಾಲಕ್ಕೆ, ನಿಶ್ಯಯವಲ್ಲಿ ತನ್ನ ಮಹಾನ್ ರಾಜ್ಯಶಕ್ತಿ ಪ್ರಯುಕ್ತತಾನಾದದ ಅನ್ಯಾಕ್ರಮಣಶೀಲ ಸ್ವದೇಶಾಭಿಮಾನ ಗುರಿಗಳ ಈಡೇರಿಕೆಗೆ ಪಾಕಿಸ್ತಾನವು ಒಂದು "ಸಹಜ ಬಂಧು"ವಾಗಿದೆಯೆಂಬು ಭಾವಿಸಿಕೊಂಡು ಇಷ್ಟಾಮಾಬಾದಿಗೆ ಬೆಂಬಲವನ್ನೂ ನೀಡುತ್ತ ಬಂದಿದೆ.

ಸಂ. ರಾ. ಅಮೆರಿಕದಂತೆಯೆ ಚೀನವು ಕೂಡ, ಪಾಕಿಸ್ತಾನದ ಸೈನಿಕ ಬಲವನ್ನು ಕಟ್ಟಿಕೊಟ್ಟಿದೆ. ಆಫ್ರೋ ಭಾರತವ ವಿರುದ್ಧ ಯುದ್ಧವನ್ನು ನಡೆಸುವಂತೆ ಅದನ್ನು ಹುರಿದುಂಬಿಸಿದೆ. ಪೂರ್ವ ಪಾಕಿಸ್ತಾನದಲ್ಲಿ ರಾಜಕೀಯ ಬಿಕ್ಕಟ್ಟುಗಳು ಉದ್ಭವಿಸಿದಾಗ, ಪೀಕಿಂಗ್ ನಾಯಕರು ತಮ್ಮ ಸ್ನೇಹಿತ "ಕ್ರಾಂತಿಕಾರಿ ಘೋಷಣೆಗಳ"ನ್ನು ಸುರಿದು ಮುಹಾನ್ ರಾಜ್ಯಶಕ್ತಿ ಪ್ರಯುಕ್ತತಾವಾದದ "ಪರಮ" ಗುರಿಗಳ ಸಾಧನೆಗಾಗಿ ಪೂರ್ವ ಪಾಕಿಸ್ತಾನದ ಜನರಿಗೂ ದ್ರೋಹ ಬಗೆದರು

ಕ್ರೈಸ್ತಿಯನ್ ಸೈನ್ಸ್ ಮಾನಿಟರ್ ಪತ್ರಿಕೆಯು ಪೀಕಿಂಗ್ ನಾಯಕರಿಗೆ ರಾಜಕೀಯ ಅಧಿಕಾರಗಳನ್ನು ಕಲಿಸಿಕೊಡುವುದು ನಿಜವಾಗಿಯೂ ಒಂದು ವಿಕಟವಿನೋದವೆ ಸರಿ. ಪಾಕಿಸ್ತಾನದ ಕೇಂದ್ರ ಸರ್ಕಾರದ ವಿರುದ್ಧ ಪೂರ್ವ ಪಾಕಿಸ್ತಾನೀಯರು ಎದ್ದಿರುವ ಬಂಡಾಯದಲ್ಲಿ, ಚೀನವ ವೈಚಾರಿಕ ಪ್ರಚಾರದ ಕೇಂದ್ರಸ್ಥಾನದಲ್ಲಿರುವ ಜನಪ್ರಿಯ ವಿಮೋಚನಾ ಬಳವಳದ ಪ್ರಮುಖ ಲಕ್ಷಣಗಳೆಲ್ಲವೂ ಇವೆಯೆಂದು ಬರೆಯುತ್ತಿದೆ.

ಹೀಗಿದ್ದಾಗಲೂ ಪೀಕಿಂಗು ಈ ಬಳವಳವನ್ನು ತಿರಸ್ಕರಿಸುವುದಷ್ಟೇ ಅಲ್ಲದೆ, ಈ ಬಳವಳವನ್ನು ದಮನ ನೂಡುತ್ತಿರ್ದ ಅಂದಿನ ಪಾಕಿಸ್ತಾನೀ ಅಧ್ಯಕ್ಷ ಯಹ್ಯಾಖಾನರ ಬಲಪಂಥೀಯ ಅಧಿಕಾರಶಾಹೀ ನಾಯಕತ್ವದೊಂದಿಗೆ ಐಕ್ಯ ಮತ್ಯವನ್ನು ಪ್ರದರ್ಶಿಸಿತು.

"ತಮ್ಮ ಸ್ವಾತಂತ್ರ್ಯವನ್ನು ತಾವೆ ಪಡೆದು ಕೊಳ್ಳಲು ಹೋರಾಡುತ್ತಿರುವ ಜನರ ರಕ್ಷಕ ನೆಂದುಕೊಳ್ಳುವ ಚೀನವು, ಪೂರ್ವ ಪಾಕಿಸ್ತಾನದಲ್ಲಿಯ ದಂಗೆಯ ಬಗ್ಗೆ ಒಂದಿಷ್ಟಾದರೂ ಸಹಾನುಭೂತಿಯನ್ನು ತೋರಿಸಬಾರದೆ?" ಎಂದು 'ಪ್ಯಾರಿಸ್ ಲೆ ಮೊಂಡ್' ಪತ್ರಿಕೆಯು ಕೇಳುತ್ತದೆ.

ಚೀನದ ನಾಯಕತ್ವವು ವಿಶ್ವದ ಜನತೆಗಳ ಪಾಡಿನ ಬಗ್ಗೆ ಅದರಲ್ಲೂ ಪೂರ್ವ ಪಾಕಿಸ್ತಾನದ ಜನರ ಪಾಡಿನ ಬಗ್ಗೆ ಸಂಪೂರ್ಣ ಉಸ್ತೇಕ್ಷೆಯಿಂದಿದೆ—ಮತ್ತು ವಾಷಿಂಗ್ಟನ್ನಿನಲ್ಲಿ ನೋಡುವಂತೆಯೆ ಪೀಕಿಂಗಿನಲ್ಲಿ ಕೂಡ ಪಾಕಿಸ್ತಾನವನ್ನು ಪ್ರಧಾನ ರಾಜಕೀಯ ಆಟದಲ್ಲಿ ಒಂದು ದಾಳವನ್ನಾಗಿ ನೋಡಲಾಗುತ್ತಿದೆಯೆಂಬುದೇ ಸತ್ಯಸಂಗತಿಯಾಗಿದೆ.

ಸಂ. ರಾ. ಅಮೆರಿಕ ಮತ್ತು ಚೀನಾಗಳೆರಡೂ ತಮ್ಮದೇ ಆದ ಆಟದಲ್ಲಿ ತೊಡಗಿವೆ. ಆದರೆ ಅಮೆರಿಕದ ಹಿತಗಳೂ ಚೀನೀಯ ಮಹಾನ್ ರಾಜ್ಯಶಕ್ತಿ ಪ್ರಯುಕ್ತತಾವಾದದ ಅನ್ಯಾಕ್ರಮಣಶೀಲ ಸ್ವದೇಶಾಭಿಮಾನ ಗುರಿಗಳೂ ಇಲ್ಲಿಯೆ ಒಂದಕ್ಕೊಂದು ಹೆಣೆದುಕೊಳ್ಳುತ್ತವೆಯೆಂಬುದನ್ನು ನಾವು ಗಮನಿಸಬೇಕಾಗಿದೆ. ಈ ಹೆಣೆಕೆಯು ಈಗ ಎಷ್ಟೊಂದು ಕುಲಕುಗೊಂಡಿದೆಯೆಂದರೆ ಜಾಗತಿಕ ರಂಗದಲ್ಲಿ ಯಾರಿಗೆ ಯಾರು – ಅಮೆರಿಕದ ಸಾಮ್ರಾಜ್ಯವಾದಿಗಳು ಪೀಕಿಂಗ್ ನಾಯಕರಿಗೊ ಆಥವಾ ಪೀಕಿಂಗ್ ನಾಯಕರು ಅಮೆರಿಕದ ಸಾಮ್ರಾಜ್ಯವಾದಿಗಳಿಗೊ—ಸಹಾಯ ಮಾಡುತ್ತಿದ್ದಾರೆಂಬುದನ್ನು ಕಾಣುವುದು ಕೂಡ ಕಷ್ಟವಾಗಿದೆ ವಿಶ್ವದಲ್ಲೆಲ್ಲಯ ಮತ್ತು ಜಗತ್ತಿನಲ್ಲಿಯ ಶಾಂತಿಯ ಹಿತಗಳಿಗೆ ವಿರುದ್ಧವಾಗಿ ಮತ್ತು ಬೇರೆ ಜನಗಳ ಬೆನ್ನು ಹಿಂದೆ ಚೀನೀ—ಅಮೆರಿಕ ಮರುವಿಶ್ವಾಸವು ಬೆಳೆಯುತ್ತಿದೆ. ●

ಕಪ್ಪುಗೆರೆಯೆಳೆದ ಮಹಾವ್ಯಕ್ತಿಗಳು ।

(ಒಂದನೇ ಪುಟದಿಂದ)

ಸುತ್ತದೆ. ಅವರು ಒಪ್ಪಿಗೆ ಕೊಡಲಿಲ್ಲವೆಂದ ಮಾತ್ರಕ್ಕೆ ಬಂಗ್ಲಾ ಸ್ವತಂತ್ರ ದೇಶವಾಗದೆ ಉಳಿದಿಲ್ಲ; ಇನ್ನು ಮುಂದೆ ಅವರು ಮನ್ನಣೆ ನೀಡಲಿಲ್ಲವೆಂದ ಮಾತ್ರಕ್ಕೆ ಅಲ್ಲಿ ಸಾರ್ವಭೌಮ ಸರಕಾರವಿರುವುದು ಸುಳ್ಳಾಗುವುದಿಲ್ಲ. ಇತಿಹಾಸದಲ್ಲಿ ಮಹಾ ವ್ಯಕ್ತಿಗಳು ಕರೇಖೆಯೆಳೆಯುವುದು ಹೇಗೆಂಬುದನ್ನು ಅಧ್ಯಕ್ಷ ನಿಕ್ಸನ್ ಸಶ್ಯಮಾಡಿ ತೋರಿಸಿದ್ದಾರೆ. ಇದನ್ನು ನಿಕ್ಸನ್ನರ ಪ್ರಜೆಗಳು ಅರಿತಿದ್ದಾರೆ, ಹೇಳುತ್ತಾರೆ; ಆದರೆ ನಿಕ್ಸನ್ನರ ಕೇಸಿಂಗರ್ ನಿಯಂತ್ರಿತ ಇಂದ್ರಿಯಗಳಿಗೆ ಇದು ಗಮ್ಯವಾಗುವುದಿಲ್ಲ.

ಭಾರತದೊಡನೆ ಅಮೆರಿಕದ ಸಂಬಂಧ ಬಿಗಡಾಯಿಸಿದೆ; ಇದಕ್ಕೆ ನಿಕ್ಸನ್ ಸರಕಾರದ ನೀತಿಯೇ ಹೊಣೆ-ವಾಸ್ತವಿಕಾಂಶಗಳಿಗೆ ಮನ್ನಣೆ ನೀಡಲು ಅಮೆರಿಕೆಯೆ ದುವರೆಗೂ ಪ್ರಯತ್ನಿಸಲಿಲ್ಲ. ಅವರಿಗೆ ಆಫ್ರೇಸ್ಯಾಗಳಲ್ಲಿ ರುಚಿಯೇನು? ತನ್ನ ಉತ್ಪಾದನೆಗಳಿಗೆ ಮೊದ್ದ ಮೂರುಕಟ್ಟಿಯೆಂದು ಮಾತ್ರ! ನಿಕ್ಸನ್ನರು ಪೀಕಿಂಗಿನೊಡನೆಯೇ ವಾಣಿಜ್ಯ ಒಡಂಬಡಿಕೆಗೆ ಮುಂದಾಗಿದ್ದಾರೆಂದ ಮೇಲೆ, ಅವರು ಪಾಕಿಸ್ತಾನದ ಹಿಂದೆ ನಿಂತುದೇಕೆಂದು ಬೇರೆ ಹೇಳಬೇಕೆ? ●

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 94/71

ಆನಂದ ಪೆಜ್ಜೆ —ವಾದಿ.
ಸೀನಪ್ಪ ಶೆಟ್ಟಿ —ಪ್ರತಿವಾದಿ.

ಸದ್ರಿ ವಾದಿಯಿಂದ ಈ ಮೂಲ್ಕ ಜಾಹೀರ್ ಮಾಡಿಕೊಳ್ಳುವದೇನೆಂದ್ರೆ

ಪ್ರತಿವಾದಿ ಸೀನಪ್ಪ ಶೆಟ್ಟಿ—ಕೂರಾಡಿ ಮೆಟಿಕಲ್ ಮನೆ ಸುಬ್ಬಪ್ಪ ಶೆಟ್ಟಿ ಮಗ. ಕುಂದಾಪುರ ತಾಲ್ಲೂ ಹೆಂಗವಳ್ಳಿ ಗ್ರಾಮದ ಕೊಂಬತ್ತಿನಲ್ಲಿ ರುವವ.

ಪ್ರತಿವಾದಿಯ ಕುಟುಂಬದ ಪರವಾಗಿ ವಾದಿಗೆ ಪ್ರತಿವಾದಿಯು ತಾ. 25-5-1968ರಲ್ಲು ಬರೆಕೊಟ್ಟ ಡಿಪೋಡ ನೋಟಿನ ಆಸ್ಲು ಬಡ್ಡಿ ಕೂಡಾ ರೂ. 337-85 ಬರಮಾಡಿಕೊಳ್ಳುವರೆಗೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾ. 3-2-72ಕ್ಕೆ ಆಪೈರೆ ತಪ್ಪಿಗೆ ಯಿತೋಣಾಗಿಯದೆ ಆ ಕುರಿತು ನಿಮ್ಮವೇನಾದ್ರು ಉದಾಹರಣೆಯಿದ್ರೆ ಸದ್ರಿ ದಿವ್ಸ ಹೆಗ್ಗು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರ್ ಮಾಡಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕ ನಿಕ್ಷ್ಪವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿಕಡೆಯಿಂದ ಈ ಮೂಲ್ಕ ತಿಳಿಯಪಡ್ಸಿಯದೆ.

U. Vittal Shetty,
B. A. LL. B.,
Advocate for Plaintiff.

Kundapur, Date 3-1-72.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

I. A. in O. S. 23/1965.

ವಾದಿರು— ಸಾದಮ್ಮ ಸೆಡ್ತಿ ಕೂಡಾ.
ಪ್ರ. ರು.—ಸೂರ ಸೆಟ್ಟಿ ಕೂಡಾ 80 ಜನರು.

ಕುಂದಾಪುರ ತಾಲ್ಲು ಪಡುವರಿ ಗ್ರಾಮದ ಜೋಗೂರಲ್ಲಿರುವ ಚಂದಮ್ಮ ಸೆಡ್ತಿರ ಮಕ್ಕಳು 2ನೇ ಪ್ರತಿವಾದಿ ಮೂಕಮ್ಮ ಸೆಡ್ತಿ।, 4ನೇ ಪ್ರತಿವಾದಿ ಹಿರಿಯಣ್ಣ ಸೆಟ್ಟಿ।, ಮೂಕಮ್ಮ ಸೆಡ್ತಿಳ ಮಗ 6ನೇ ಪ್ರತಿವಾದಿ ವೀರಣ್ಣ ಸೆಟ್ಟಿ।, ಶೇಶಿ ಸೆಡ್ತಿರ ಮಗಳು 13ನೇ ಪ್ರತಿವಾದಿಳು ಮೂಕಮ್ಮ ಸೆಡ್ತಿರೀಗೆ ಸ್ವತಹಾ ಮತ್ತು ಮೈನರ್ 20ನೇ ಪ್ರತಿವಾದಿ ರವಿ।, 21ನೇ ಮೈನರ್ ಹಿರಿಯಣ್ಣ।, 22ನೇ ಪ್ರತಿವಾದಿ ಮೈನರ್ರವಿ ನಾಯಕ್ ಕೂಡಾ 3ನೆರ ಗಾರ್ಡಿಯನ್ನ್ ಆಗಿ ಸಹಾ ಯಿವರೀಗೆ ಮತ್ತು ಮೂಕಮ್ಮ ಸೆಡ್ತಿ ಮಕ್ಕಳು 15ನೇ ಪ್ರತಿವಾದಿ ಸಂಜೀವ ಸೆಟ್ಟಿ।, 16ನೇ ಪ್ರತಿವಾದಿ ಗಿರಿಜಮ್ಮ ಸೆಡ್ತಿರೀಗೆ ಸ್ವತಹಾ ಮತ್ತು ಮೈನರ್ 23ನೇ ಪ್ರತಿವಾದಿ ಮೂಲತಿ।, 24ನೇ ಪ್ರತಿವಾದಿ ಮೈನರ್ ಸುರೇಶ।, 25ನೇ ಪ್ರತಿವಾದಿ ಮೈನರ್ ಬಾಲಕೃಷ್ಣ। ಕೂಡಾ 3 ಜನರ ಗಾರ್ಡಿಯನ್ ಆಗಿ ಸಹಾ ಯಿವರೀಗೆ ಮತ್ತು ಮೂಕಮ್ಮ ಸೆಡ್ತಿ ಮಗ 17ನೇ ಪ್ರತಿವಾದಿ ಕೃಷ್ಣಪ್ಪ ಸೆಟ್ಟಿ।, ಮೂಕಮ್ಮ ಸೆಡ್ತಿ ಮಗಳು 18ನೇ ಪ್ರತಿವಾದಿಳು ಸಾದಮ್ಮ ಸೆಡ್ತಿ ಸ್ವತಹಾ ಮತ್ತು ಮೈನರ್ 26ನೇ ಪ್ರತಿವಾದಿ ಬೇಬಿ। ಯಿವರ ಗಾರ್ಡಿಯನ್ ಆಗಿ ಸಹಾ ಯಿವರೀಗೆ, ಮೂಕಮ್ಮ ಸೆಡ್ತಿ ಮಗ 19ನೇ ಪ್ರತಿವಾದಿ ಭುಜಂಗ ಸೆಟ್ಟಿ। ಮತ್ತು ಕನಕಮ್ಮ ಸೆಡ್ತಿ ಮಕ್ಕಳು 27ನೇ ಪ್ರತಿವಾದಿ ಕೃಷ್ಣಪ್ಪ ಸೆಟ್ಟಿ।, 28ನೇ ಪ್ರತಿವಾದಿಳು ಶ್ರೀಮತಿ ಸೆಡ್ತಿಳು ಸ್ವತಹಾ ಮತ್ತು ಮೈನರ್ 29ನೇ ಪ್ರತಿವಾದಿ ಮೈನರ್ ಅನಿಲ ಕುಮಾರ್।, 30ನೇ ಪ್ರತಿವಾದಿ ಅತುಲ ಕುಮಾರ್। ಯಿವರಿಬ್ಬರ ಗಾರ್ಡಿಯನ್ ಆಗಿ ಸಹಾ ಯಿವರೀಗೆ ಮತು ಕುಂದಾಪುರ ತಾಲ್ಲು ನಂಬ್ರು 1ನೇ ಶಿರೂರು ಗ್ರಾಮದಲ್ಲಿರುವ ಸೂರಮ್ಮ ಸೆಡ್ತಿರ ಮಗ 35ನೇ ಪ್ರತಿವಾದಿ ನಾರಾಯಣ ಸೆಟ್ಟಿ।, ಮೂಕಮ್ಮ ಸೆಡ್ತಿ ಮಕ್ಕಳು 36ನೇ ಪ್ರತಿವಾದಿ ಶೀನಪ್ಪ ಸೆಟ್ಟಿಗೆ ಸ್ವತಹಾ ಮತ್ತು ಮೈನರ್ 38ನೇ ಪ್ರತಿವಾದಿ ಜಗನ್ನಾತನ ಗಾರ್ಡಿಯನ್ ಆಗಿ ಸಹಾ ಯಿವರೀಗೆ 37ನೇ ಪ್ರತಿವಾದಿಳು ಸದ್ರಿ ಮೂಕಮ್ಮ ಸೆಡ್ತಿ ಮಗಳು 37ನೇ ಪ್ರತಿವಾದಿಳು ಅಕ್ಕಯ್ಯ ಸೆಡ್ತಿ।, ಸುಬ್ಬಕ್ಕ ಸೆಡ್ತಿರ ಮಕ್ಕಳು 77ನೇ ಪ್ರತಿವಾದಿ ನಾರಾಯಣ ಸೆಟ್ಟಿ।, 78ನೇ ಪ್ರತಿವಾದಿ ಸುಬ್ಬಣ್ಣ ಸೆಟ್ಟಿ।, 79ನೇ ಪ್ರತಿವಾದಿ ವೀರಣ್ಣ ಸೆಟ್ಟಿ, ಮಂಜಯ್ಯ ಸೆಟ್ಟಿ ಮಗಳು 80ನೇ ಪ್ರತಿವಾದಿಳು ಸೂರಮ್ಮ ಸೆಡ್ತಿ। ಕೂಡಾ ಯಿವರೀಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ:

ಮೇಲಿನ ದಾವೆಯಲ್ಲಿ ಕಾಣುವ ದಾವಾ ಆಸ್ತಿಗಳನ್ನು ಸ್ವಾಧೀನತೆಯಿಂದ, ಅವರ ಬಾಬ್ತು ಹಿಂದಿನ ವ ಮುಂದಿನ ಹುಟ್ಟಳ್ಳಿ ವಗೈರೆಯನ್ನು ವಸೂಲುಮಾಡಿ ಕೋರ್ಟು ಡಿಪೋಜಿಟುಮಾಡುವ ಬಗ್ಗೆ ಒಬ್ಬ ಕೋರ್ಟುರಿಸೀವರನ್ನು ನೇಮಿಸ ಬೇಕೆಂತ ಪೆಗ್ಗೆರೆಕಾಣ್ಣೆ ಮೇಲಿನ ದಾವೆಯಲ್ಲಿ ದಾಕ್ಲಾದ ರಿಸೀವರ್ ಅರ್ಜಿ ತಾರೀಖು 21.1.1972 ನೇ ದಿನ ಬೆಳಿಗ್ಗೆ 10ಗಂಟೆಗೆ ಮೇಲ್ಕಾಣುವ ಕೋರ್ಟಿನಲ್ಲಿ ತಪ್ಪಿಗೆ ಯಿಬ್ಬೆವೆ ಎಂಬ ಸಂಗ್ತಿ ಈ ಮೂಲ್ಕ ನಿಮಗೂ, ನಿಮ್ಮ ಕುಟುಂಬದ ಮಿಕ್ಕ ಮೆಂಬರಿರೀಗೂ ತಿಳಿಸೋಣಾಗಿಯದೆ.

B. S. Shetty, B. A., B. L.,
Vakil for Plaintiffs, Petitioners.

Coondapur, 5-1-1972.

ಸಂಡಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಶೈಲಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೆಟ್ಟಿ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

READ & ADVERTISE IN NAVAYUGA Weekly

Edited, Printed & Published by K. H. Shetty at the Navayuga Press, Udipi. S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಸಂಪುಟ ೫೧
ಸಂಚಿಕೆ ೨೦

Vol. 51
No. 20

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, 20—1—1972

ಚಾರುಚಲನ

ಪೂರ್ವದಲ್ಲಿ ನವ ಸೂರ್ಯೋದಯ

ವಂಗ ಬಂಧು, ವಂಗಪಿತಾಮಹ ಶೇಕ ಮುಜಿಬುರ್ ರೆಹಮಾನರ ಬಂಧ ವಿಮೋಚನೆ–

ದೂರದ ಲಂಡನ್ ನಗರಕ್ಕೆ ಒಯ್ದು ಅಲ್ಲಿ ಮುಜಿಬುರ್‌ರ ಬಿಡುಗಡೆ.

ಯಾರಿಗೂ ಗೊತ್ತಿಲ್ಲದಂತೆ ಕಳ್ಳತನದಿಂದ ನಡೆದ ಈ ಕೆಲಸ ಭುಟ್ಟೊ ಮಾಡಿದ ಒಳ್ಳೆಯ ಕೆಲಸ.

ಕಾಮನ್‌ವೆಲ್ತಿನ ರಾಣಿ ಬ್ರಿಟನ್ನು ಭಾರತ—ಪಾಕ್ ಸಮರದ ವೇಳೆ ತಟಸ್ಥ. ಗ್ರಿಟ್ಸ್‌ರಲ್ಲಿನಂತೆ ಈ ಬಾರಿ ಪಾಕ್ ಪರ ಹೇಳಿಕೆ ನೀಡಲಿಲ್ಲ. ಅದರ ರಾಜಧಾನಿಗೆ ಒಯ್ದು ಮುಜಿಬುರರನ್ನು ಬಿಟ್ಟದ್ದು ಸಮರ್ಥನೀಯವಲ್ಲವಾದರೂ ಅಸಮರ್ಥನೀಯವಾಗದು.

ಶ್ರೀ ಭುಟ್ಟೊ ಅವರನ್ನು ನವದೆಹಲಿಗೆ ಕಳಿಸಿಕೊಡುವುದು ಸಾಧ್ಯವಿರಲಿಲ್ಲ. ಡಾಕ್ಕಕ್ಕೆ ಎಂದಿಗೂ ಅಸಾಧ್ಯ. ಆದ್ದರಿಂದ ಬಹಳ ಯೋಜಿಸಿದ ಭುಟ್ಟೊ ಲಂಡನ್ನಿಗೆ ಒಯ್ದರು.

ಲಂಡನ್ನಿಗೆ ತಾನಾಗಿ ಬರಲಿಲ್ಲ; ತನ್ನನ್ನು ಕರೆತರಲಾಯ್ತು ಎಂದು ಮುಜಿಬ್ ಹೇಳಿದರೆ, ಅವರನ್ನು ಅವರಿಚ್ಛೆಯಂತೆಯೇ ಲಂಡನ್ನಿಗೆ ಒಯ್ಯಲಾಯ್ತೆಂದು ಪಾಕ್ ಮೂಲಗಳು ಉದ್ಗರಿಸಿದುವು.

ಅದೇನಿದ್ದರೂ, ಮುಜಿಬ್ ಸ್ವದೇಶಕ್ಕಾಗಮಿಸಿದರು; ತನ್ನ ಬಾಂಗ್ಲಾ ಜನತೆಯ ನಡುವೆ ಇರುವಂತಾದರು; ಅವರನ್ನು ಸರಿದಾರಿಯಲ್ಲಿ ಒಯ್ದು, ಸಮೃದ್ಧಿಯ ದೇಶ ಕಟ್ಟಲು ತೊಡಗುವಂತಾದರು.

ಶೇಕ್ ಮುಜಿಬರನ್ನು ಅಂದೆಂದೋ ಮೃತ್ಯು ದಂಡಕ್ಕೆ ಗುರಿಪಡಿಸಲು ನಿರ್ಧರಿಸಲಾಯ್ತೆಂದು ವರದಿ; ಮೂಗು ಮುರಿದ ಅಧ್ಯಕ್ಷ ಯಾಹ್ಯಾಖಾನರ ಆಜ್ಞೆಯನ್ನು ಕಡೆಗಣಿಸಿ ಜೇಲರನೊಬ್ಬ ಅವರನ್ನು ತನ್ನ ಮನೆಯಲ್ಲಿ ರಕ್ಷಿಸಿಕೊಂಡನೆಂದು ಸುದ್ದಿ.

ಯಾಹ್ಯಾಖಾನರು ಮುಜಿಬುರರನ್ನು ಗತಕಾಲದ ಮನುಷ್ಯನನ್ನಾಗಿಸಲು ನಿರ್ಧರಿಸಿದ್ದರೆಂಬುದು ನಂಬತಕ್ಕ ಮಾತೇ. ತನ್ನ ಅಧಿಕಾರ ಚ್ಯುತಿ ನಿರ್ಧಾರಾತ್ಮಕವಾಗುವಾಗ ಎಂತಹ ಪಾಪ ಮಾಡುವುದಕ್ಕೂ ಅವರ ಮನಸ್ಸು ಹೇಸದು.

ಭಾರತ–ಪಾಕ್ ಸಮರದಲ್ಲಿ ತಮ್ಮ ಪತನ ನಿಶ್ಚಯವಾಗುತ್ತ ಬಂದಂತೆ ಭಾವಿ ಅಧಿಕಾರಿ ಭುಟ್ಟೋರಿಗೆ ಚಿಂತೆ ಹಿಡಿಯತೊಡಗಿತು–ನೀವು ಮುಜಿಬರನ್ನು ಬಲಿತೆತ್ತರೆ, ಬಾಂಗ್ಲಾದೇಶದಲ್ಲಿರುವ ನಮ್ಮ ಲಕ್ಷ ಲಕ್ಷ ಯೋಧರ ಗತಿಯೇನು?

ಪ್ರತೀಕಾರ ಭಾವದಿಂದ ಬಾಂಗ್ಲಾಗಳು ರಾಕ್ಷಸರಾಗಿ ಪಾಕ್ ಯೋಧರ ನರನಾಡಿಗಳನ್ನು ಹರಿದು ಹಂಚಿಕೊಂಡಾರೆಂದು ಭೀತಿ.

ಆದುದೆಂದಲೇ ಮುಜಿಬುರ್‌ರವರಿಗೆ ಜೀವದಾನ!

ಮುಜಿಬ್‌ರನ್ನು ಉಳಿಸಿದ ಜೇಲರನಿಗೆ ಭುಟ್ಟೋ ಪ್ರೇರಣೆ ನೀಡಿದರೆ? ಇಲ್ಲವಾದರೆ, ಆ ಜೇಲರನಿಂದು ಜೀವದಲ್ಲಿರುವುದು ಸಾಧ್ಯವಿತ್ತೆ?

ಬಂಗ್ಲಾ ಹುಲಿ ಮುಜಿಬುರ್ ರೆಹಮಾನರು ಢಾಕ್ಕಾಕ್ಕೆ ತೆರಳುವ ದಾರಿಯಲ್ಲಿ ನವದೆಹಲಿಯಲ್ಲೂ ಇಳಿದರು. ಲಂಡನ್ ನಗರದಲ್ಲಿ ಬ್ರಿಟಿಷ್ ಪ್ರಧಾನಿ ಶ್ರೀ ಹೀತ ರೊಡನೆ ಕೊಂಚಕಾಲ ಮಾತಾಡಿದರು.

ಬಂಗ್ಲಾ ಸಮಸ್ಯೆಯನ್ನು ಯಾಹ್ಯಾಖಾನ ಪ್ರಭೃತಿಗಳು ಸೃಷ್ಟಿಸಿದೊಡನೆಯೇ ಭಾರತದ ಸಹಾನುಭೂತಿ ಬಾಂಗ್ಲಾದ ಕಡೆಗೆ. ಭಾರತದಿಂದ ತನ್ನ ವಿಚಿನ ಪಾಲನೆ, ಬಾಂಗ್ಲಾ ವಿಮೋಚನೆ, ಮುಜಿಬ್ ಬಿಡುಗಡೆ. ತನ್ನ ಕಷ್ಟಕಾರ್ಪಣ್ಯಗಳನ್ನು ಬದಿಗಿಟ್ಟಾ ಧರೂ ಬಾಂಗ್ಲಾ ಪುನರಾರಚನೆಯಲ್ಲಿ ನೆರವಾಗುವ ಭಾರತದ ಧೋರಣೆ.

ಭಾರತದ ಉಪಕಾರವನ್ನು ಬಂಗ್ಲಾದೇಶ ದಿಗೂ ಮರೆಯಲಾರದೆಂದು ಮುಜಿಬ್ ವಾಗ್ದಾನ. ತನ್ನ ದೇಶದ ಏಳೂವರೆ ಕೋಟಿ ಜನತೆಯ ಕೃತಜ್ಞತೆ ಸಮರ್ಪಣೆ.

ಢಾಕ್ಕಾದಲ್ಲಿ ಬಾಂಗ್ಲಾ ಜನತೆ ತಮ್ಮ ನಾಯಕನನ್ನು, ತಮ್ಮನ್ನು ಮೃತ್ಯುವಿನ ದವಡೆಯಿಂದ ತಪ್ಪಿಸಿ ನವ ಜೀವನ ತಂದು ಕೊಟ್ಟವನನ್ನು ನೈಭವೋತ್ಸಾಹದಿಂದ ಸ್ವಾಗತಿಸಿತು

ಮುಜಿಬ್ ತನ್ನ ದೇಶಜರ ನಡುವೆ ಪಾಕ್ ರಾಷ್ಟ್ರಪತಿ ಭುಟ್ಟೋ ಮತ್ತವರ ಸಮರ್ಥರಿಗೆ ಸಮರ್ಪಕವಾದ ಉತ್ತರ ಹೇಳಿದರು.

"ನಮಗೆ ವಾಕಿಸ್ತಾನದೊಡನೆ ಎಂದೆಂದಿಗೂ ಸಂಬಂಧ ಬೇಡವೇ ಬೇಡ. ನಮ್ಮದು ಒಂದು ಸ್ವತಂತ್ರ ರಾಷ್ಟ್ರ. ಜಾತ್ಯಾತೀತ ಸಾರ್ವಭೌಮ ಸ್ವತಂತ್ರ ದೇಶ. ಇದು ಹೀಗೆಯೇ ಮುಂದುವರಿಯಲಿ.

"ನೀವು ನನ್ನ ರಾಷ್ಟ್ರದ ಲಕ್ಷಾಂತರ ಪ್ರಜೆಗಳನ್ನು ಕೊಂದು ಹಾಕಿದಿರಿ. ನಮ್ಮ ತಾಯಂದಿರ, ಅಕ್ಕಂದಿರ, ತಂಗಿಯಂದಿರ ಮಾನ ಭಂಗ ಮಾಡಿದಿರಿ. ನಮ್ಮವರ ಮನೆಗಳನ್ನು ಸುಟ್ಟು ಹಾಕಿದಿರಿ. ಒಂದು ಕೋಟಿ ಪ್ರಜೆಗಳನ್ನು ದೇಶಾಂತರಕ್ಕಟ್ಟಿದಿರಿ.

"ಆದರೂ ನಿಮ್ಮ ಮೇಲೆ ನಮಗೆ ದ್ವೇಶವಿಲ್ಲ. ನಿಮಗೆ ನಿಮ್ಮ ಸ್ವಾತಂತ್ರ್ಯವಿದೆ. ನಮಗೂ ನಮ್ಮ ಸ್ವಾತಂತ್ರ್ಯ ಚಿರಾಯುವಾಗಿ ಇರಲಿ."

—ಇದು ಶೇಕ ಮುಜಿಬುರ್ ರೆಹಮಾನರ ಹೃದಯಾಂತರಾಳದ ಸಂದೇಶ.

ಬಾಂಗ್ಲಾ ದೇಶವನ್ನು ಎಂತಾದರೂ ಪಾಕಿಸ್ತಾನದಲ್ಲಿ ತಂದು ಕೊಳ್ಳಬೇಕೆಂದು ಇದ್ದವರ ಕೊನೆಯ ಆಸೆಗೂ ತಿಲಾಂಜಲಿಯೊಯ್ತು.

ಶೇಕ್ ಮುಜಿಬುರ್‌ರವರು ಬಾಂಗ್ಲಾ ದೇಶದ ಸರಕಾರಕ್ಕೆ ಮೂಸ್ಯತೆ ಬೇಡಿದ್ದಾರೆ.

ಸೂರ್ವ ಜರ್ಮನಿ ಮತ್ತು ಬಲ್ಗೇರಿಯಾ ಸರಕಾರಗಳು ಬಾಂಗ್ಲಾ ದೇಶದ ಸರಕಾರವನ್ನು ಮನ್ನಿಸಿದುವು ಭಾರತ ಮತ್ತು ಭೂತಾನಗಳು ಈ ಮೊದಲೇ ಮನ್ನಣೆ ನೀಡಿವೆ

ಶೇಕ ಮುಜಿಬುರ್‌ರವರ ಸರಕಾರವು ದೇಶದ ನೇಲೆ ಎಷ್ಟರ ಮಟ್ಟಿಗೆ ಹತೋಟಿಯಿಟ್ಟುಕೊಂಡಿವೆಯೆಂದು ಕೆಲವು ದೇಶಗಳು ಪರಿಶೀಲಿಸುತ್ತಿವೆ. ಬಂಗ್ಲಾದೇಶದ ಸರಕಾರದ ಹತೋಟಿ ಸಮಾಧಾನಕರವೆಂದು ಮನವರಿಕೆಯಾದಾಗ, ಅವು ಮನ್ನಣೆ ನೀಡುತ್ತವೆ.

ಭಾರತೀಯ ಸೇನೆಗಳು ಢಾಕ್ಕಾದಲ್ಲಿರುವವರೆಗೆ ಬಾಂಗ್ಲಾದೇಶದ ಸರಕಾರ ದೇಶದ ನೇಲೆ ಸಂಪೂರ್ಣ ಪ್ರಭುತ್ವ ಹೊಂದಿದೆಯೆಂದು ನಂಬಲು ಕೆನಡಾಕ್ಕೆ ಸಾಧ್ಯವಾಗದಂತೆ ಇದೇ ಮಾತನ್ನು ಇನ್ನೂ ಕೆಲವು ನೇತರಗಳು ಪುನರುಚ್ಚರಿಸಿಯಾವು.

ಭುಟ್ಟೋರ ಎಚ್ಚರಿಕೆಯ ಮಾತನ್ನು ಕಡೆಗಣಿಸಿ ಪೂರ್ವ ಜರ್ಮನಿ ಮತ್ತು ಬಲ್ಗೇರಿಯಾಗಳು ಬಾಂಗ್ಲಾದೇಶವನ್ನು ಮನ್ನಿಸಿದುವು. ಇನ್ನೂ ಕೆಲವು ದೇಶಗಳ ಮನ್ನಣೆ ಇನ್ನೂ ರಲ್ಲೇ ಕಾದಿದೆ.

ಕ್ಯಾರೊದಲ್ಲಿ ನೇರಿದ ಆಫ್ರೇಷ್ಯಾ ಸಮ್ಮೇಳನದಲ್ಲಿ ಬಾಂಗ್ಲಾ ದೇಶಕ್ಕೆ ಪ್ರಾತಿನಿಧ್ಯ ದೊರೆತದ್ದು ಬಾಂಗ್ಲಾದ ಮತ್ತೊಂದು ವಿ

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
141 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ 7½ % ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.
ಎಮ್. ಸುಂದರ್‌ರಾಮ್ ಶೆಟ್ಟಿ,
ಚೇಯರ್‌ಮೆನ್.

ಯುವಕರನ್ನು ಆಕರ್ಷಿಸುವ

ಚಿದಂಬರ ರಹಸ್ಯ-ಆನಂದಮಾರ್ಗ

೧೯೭೧ ನೇ ಮೇ ತಿಂಗಳಲ್ಲಿ ರಾಂಚಿಯಲ್ಲಿ ಗಲಭೆಯೊಂದು ಎದ್ದಿತು. ಇದು ನಡೆದದ್ದು ಅಲ್ಲಿಯ ತಾಂತ್ರಿಕ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ಆನಂದಮಾರ್ಗಿಗಳ ನಡುವೆ. ಹೊಡೆದಾಟದಲ್ಲಿ ಸುಮಾರು ೫೫ ಜನರು ಗಾಯ ಗೊಂಡರು. ಕೆಲವರಿಗೆ ತೀವ್ರ ಜಖಂ ಆಯಿತು. ಕೆಲವು ಹುಡುಗರು ತಮ್ಮ ಹೆಂಗಸರ ಗುಂಪನ್ನು ಗೇಲಿ ಮಾಡಿದ್ದರಿಂದ ಈ ಗದ್ದಲ ಉಂಟಾಯಿತೆಂದು ಆನಂದ ಮಾರ್ಗಿಗಳು ಹೇಳಿದರು. ತಮ್ಮನ್ನು ಮಾರ್ಗದ ಪ್ರಧಾನ ಕಚೇರಿಯ ಆದೇಶಕ್ಕೆ ಎಳೆದೊಯ್ದು ನಿರ್ದಯವಾಗಿ ಹೊಡೆಯಲಾಯಿತೆಂದು ಪಟ್ಟಣದ ಮುಕ್ಕಳು ದೂರಿದರು.

ಆನಂದಮಾರ್ಗವು ೧೯೫೫ರಲ್ಲಿ ಸ್ಥಾಪನೆಯಾಯಿತು. ಯೋಗವನ್ನು ಕಲಿಸುವುದರ ಮಟ್ಟಿಗೆ ಇದರ ಉದ್ದೇಶವು ಸೀಮಿತವಾಗಿತ್ತು. ಆದರೆ ೧೯೬೭ರಲ್ಲಿ ಇದು ತನ್ನ ಚಟುವಟಿಕೆಗಳನ್ನು ಸಮಾಜ ಸೇವೆಗೂ ವಿಸ್ತರಿಸಿತು. ಇಂದು ಆನಂದಮಾರ್ಗವು ಸುಮಾರು ೪೦೦ ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುತ್ತಿದೆ. ಇವುಗಳಲ್ಲಿ ಕಿಂಡರ್ ಗಾರ್ಟನ್, ಹೈಸ್ಕೂಲ್, ಕಾಲೇಜು ಮತ್ತು ಇಂಜನಿಯರಿಂಗ್ ಸಂಸ್ಥೆಗಳು ಸೇರಿವೆ.

ಮಾರ್ಗದಲ್ಲಿ ಅನೇಕ ವಿಭಾಗಗಳಿವೆ. ಇವುಗಳಲ್ಲಿ ಶಿಕ್ಷಣ, ಸಹಾಯ ಮತ್ತು ಸಮೃದ್ಧಿ ವಿಭಾಗವೂ ಇದ್ದು, ಇದು ಶಾಲೆ ಮತ್ತು ಕಾಲೇಜುಗಳಿಗೆ ಹೋಗಿ ಬರಿಸುವವರಿಗೆ ಸಹಾಯವನ್ನು ನೀಡುವುದು. ಅಮೃತ್ ಎಂಬ ಇನ್ನೊಂದು ವಿಭಾಗವು ಬಾಂಗ್ಲಾ ದೇಶದ ನಿರಾಶ್ರಿತರಿಗೆ ಬಹಳಷ್ಟು ಸಹಾಯವನ್ನು ಮಾಡಿದೆ.

ಹಾಗಿದ್ದರೂ ಆನಂದಮಾರ್ಗದ ಬಗ್ಗೆ ಸಂಪೂರ್ಣ ಪರಿಚಯವು ಲಭ್ಯವಾಗಿದೆ. ಎಲ್ಲಾ ಸರಕಾರಿನೌಕರರಿಗೆ ಇದು ಚಿದಂಬರ ರಹಸ್ಯವೆನಿಸಿದೆ. ಹಲವಾರು ಜನರಿಗೆ ಆದರ ಚಟುವಟಿಕೆಗಳು ಸಂದೇಹಾಸ್ಪದವೆನಿಸಿದೆ. ವಸ್ತುನಿಷ್ಠ ಜಗತ್ತಿನಲ್ಲಿ ಆಧ್ಯಾತ್ಮಿಕತೆಯನ್ನು ಪ್ರತಿಷ್ಠಾಪಿಸುವುದಾಗಿ ಆನಂದ ಮಾರ್ಗದ ಸಂಚಾಲಕರು ಹೇಳುತ್ತಾರೆ. ಆವರು ಹೇಳುವಂತೆ ಆನಂದ ಮಾರ್ಗವೂ ಒಂದು ಸಾಮಾಜಿಕ ಆಧ್ಯಾತ್ಮಿಕ ಸಂಸ್ಥೆ. ಅದಕ್ಕೆ ತನ್ನ ಸ್ವತಂತ್ರ ಸಾಮಾಜಿಕ, ಆರ್ಥಿಕ ಸಿದ್ಧಾಂತವಿದೆ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾನವ ಸೇವೆಯೇ ಅದರ ಗುರಿ. ೧೯೭೨ರಲ್ಲಿ ಬಂಗಾಳ-ಬಿಹಾರ ಗಡಿಯ ಪುರುಲಿಯಾ ಎಂಬಲ್ಲಿ ಸಂತಾಲರಿಗೂ ಆನಂದಮಾರ್ಗಿಗಳಿಗೂ ಹೊಡೆದಾಟ ನಡೆಯಿತು. ಇದರಲ್ಲಿ ಆದರ ಐವರು ಅನುಯಾಯಿಗಳು ಮರಣವನ್ನಪ್ಪಿದರು. ನ್ಯಾಯಾಲಯದ ವಿಚಾರಣೆಯ ವೇಳೆಗೆ ಆನಂದ ಮಾರ್ಗಿಗಳು ವೇಗವಾಗಿ ಓಡುವ ಮೋಟಾರು ಬೈಕುಗಳನ್ನು ಉಪಯೋಗಿಸುತ್ತಿದ್ದರೆಂದೂ, ತೋಪು ಮತ್ತಿತರ ಆಯುಧಗಳನ್ನು ಒಯ್ದು ತಂದರೆಂದೂ ಬೆಳಕಿಗೆ ಬಂತು

ಆಡಳಿತೆಯನ್ನು ಶುದ್ಧೀಕರಣ ಗೊಳಿಸುವುದು ಆನಂದಮಾರ್ಗಿಗಳ ಗುರಿ. ಪ್ರಗತಿಶೀಲ ಪ್ರಾಯೋಗಿಕ ಸಿದ್ಧಾಂತವು ಇದರ ಬುನಾದಿ. ಆವರ ಘೋಷಣೆಗಳು ಆಗಾಗ ಭಿತ್ತಿಪತ್ರಗಳಲ್ಲಿ ಪ್ರಕಟವಾಗುವುದುಂಟು. ಆವರೆನ್ನುವಂತೆ ಭಾರತವು ಸದ್ವಿಪ್ರರ ಆಡಳಿತೆಗೆ ಬರಬೇಕು. ಸರಕಾರವು ಇದನ್ನು ಕಾರ್ಯರೂಪಕ್ಕೆ ತಾರದಿದ್ದರೆ ಒಂದು ರಕ್ತಕ್ರಾಂತಿಯು ಭುಗಿಲೆನ್ನುವುದು. ಮತ್ತು ಆ ಮೂಲಕ ಅಧಿಕಾರವು ಸದ್ವಿಪ್ರರ ಕೈಸೇರುವುದು. ವಸ್ತು ಸ್ಥಿತಿಯನ್ನು ಬದಲಾಯಿಸುವ ಶಕ್ತಿಪ್ರಯೋಗಕ್ಕೆ ಆನಂದ ಮಾರ್ಗವು ಬೆಂಬಲಕೊಡುತ್ತಿದೆ.

ಶ್ರೀ ಆನಂದಮೂರ್ತಿ ಎಂಬವರು ಆನಂದಮಾರ್ಗದ ನಾಯಕರು. ಇವರು ಮೊದಲು ಜಮಾಲ್‌ಪುರದ ರೈಲ್ವೇ ವರ್ಕ್‌ಶೋಪಿನಲ್ಲಿ ನೌಕರರಾಗಿದ್ದರು. ಆಗ ಇವರ ಹೆಸರು ಪಿ.ಆರ್. ಸರ್ಕಾರ್ ಎಂದು. ಭಾರತದ ಸಮಸ್ಯೆಗಳಿಗೆಲ್ಲಾ ಸರ್ವಾಧಿಕಾರವೇ ರಾಮಬಾಣ ಎಂಬುದು ಇವರ ದೃಢ ವಿಶ್ವಾಸ. ಪ್ರಜಾಪ್ರಭುತ್ವವೆನ್ನುವುದು ಹುಚ್ಚರ ರಾಜ್ಯ ಎಂದು ಇವರು ನಂಬುತ್ತಾರೆ.

ಹಲವಾರು ಯುವಕ ಯುವತಿಯರು ಆನಂದಮಾರ್ಗದ ಜೀವನ ವಿಧಾನದಿಂದ ಆಕರ್ಷಿತರಾಗಿದ್ದಾರೆ. ಹಲವಾರು ಕಾರಣಗಳಿಂದ ಆವರು ಆನಂದಮಾರ್ಗವನ್ನು ಸೇರುತ್ತಾರೆ. ಮುಖ್ಯವಾಗಿ ಆತಿ ಪ್ರಸರಣ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಕಂಡುಬರುವ ಅಸಾಮಂಜಸ್ಯ ದುಡಿಯುವ ವರ್ಗದ ಯುವಜನರನ್ನು ಆನಂದಮೂರ್ತಿಗಳು ತಮ್ಮ ಮಾರ್ಗಕ್ಕೆ ಸೇರಿಸಿಕೊಳ್ಳುತ್ತಾರೆ. ಆನಂದಮೂರ್ತಿಗಳು ಸಾಹಸಶೀಲರು ಎಂಬ ಗೌರವದಿಂದ ಯುವಕರು ಹೆಚ್ಚು ಹೆಚ್ಚಾಗಿ ಆದರಿಂದ ಸೆಳೆಯಲ್ಪಡುತ್ತಿದ್ದಾರೆ.

ಹಿಂಸೆ ಎನ್ನುವುದು ಆನಂದ ಮಾರ್ಗದ ಕೀಲಿಯ ಕೈ ಎಂದು ಸಮೂಹಾರ ಪತ್ರಿಕೆಯೊಂದು ಹೇಳುತ್ತದೆ. ಮಾರ್ಗದ ಚರ್ಚಾಗೋಷ್ಠಿಯೊಂದರಲ್ಲಿ ಆನಂದಮೂರ್ತಿಯವರು ಹಿಂಸೆಯು ಜೀವನದ ಸಾರ. ಅದಿಲ್ಲವಿದ್ದರೆ ಮಾನವ ಸತ್ತತೆ ಎಂದು ಘೋಷಿಸಿದ್ದಾರೆಂದು ವದಂತಿ ಇದೆ. ಧರ್ಮಿಕ ರಾಜ್ಯ ಸ್ಥಾಪಿಸಲು ಹಿಂಸೆಯೊಂದು ಪ್ರಭಾವಶಾಲಿಯಾದ ಅಸ್ತ್ರ ಎಂದು ಇವರು ನಂಬುತ್ತಾರೆ.

೧೯೭೧ರ ಜೂನ್ ತಿಂಗಳಲ್ಲಿ ಆನಂದ ಮಾರ್ಗದ ಪ್ರಧಾನ ಕಛೇರಿಯ ಮೇಲೆ ಪೋಲೀಸರು ದಾಳಿ ನಡೆಸಿದರು. ಆವರು ಪಿಸ್ತೂಲು ಸಹಿತ ಸಾಧುವೊಬ್ಬನನ್ನು ದಸ್ತಗಿರಿ ಮಾಡಿದರು. ಬಂದೂಕುಗಳು, ಕಡತಗಳು, ಬಾಂಬುಗಳು ಮತ್ತು ಬಾಂಬು ತಯಾರಿಸುವ ಒಡವೆ—ವಸ್ತುಗಳನ್ನೂ ಹಲವಾರು ಮೋಟಾರಿಲಿನ್‌ನನ್ನೂ ಆವರು ವಶಪಡಿಸಿಕೊಂಡರು. ಇಷ್ಟು ಮಾತ್ರವಲ್ಲದೆ ಆರು ಮಾನವ ತಲೆ ಬುರುಡೆಗಳೂ ರಕ್ತರಂಜಿತ ಹಾರ-ಪಿಕ್ಕಾಸುಗಳೂ ಕೆಲವು ಹಸ್ತಗತವಾದುವು.

ಈ ಶೋಧನೆಗಳನ್ನು ಸರಳವಾಗಿ ವಿವರಿಸಬಹುದು. ಆನಂದಮಾರ್ಗವು ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನೂ, ಸಿಡಿಮದ್ದುಗಳನ್ನೂ ಸಂಗ್ರಹಿಸುತ್ತದೆ. ನರಕಪಾಲಗಳನ್ನು ಕೆಲವರು ಸಾಧುಗಳು ಉಪಯೋಗಿಸುತ್ತಾರೆ. ಆಚಾರ್ಯನೊಬ್ಬನು ಅವಧೂತನಾಗಬೇಕಾದರೆ, ತಾಂತ್ರಿಕ ಸಾಧನೆ ಅತ್ಯವಶ್ಯ. ಅವಧೂತನು ಎರಡು ನರಕಪಾಲಗಳನ್ನು ತನ್ನೊಡನೆ ಇಟ್ಟುಕೊಳ್ಳುತ್ತಾನೆ. ಇವನ್ನು ಸಂಪಾದಿಸಬೇಕಾದರೆ, ನರಹತ್ಯೆ ಮಾಡಬೇಕಾಗಿಲ್ಲ. ವೈದ್ಯಕೀಯ ವಿದ್ಯಾರ್ಥಿಗಳು ನರಕವಾಲವನ್ನು ಎಲ್ಲಿಂದ ಪಡೆಯುತ್ತಾರೆ? ಎಂದೊಬ್ಬ ಸಾಧು ಪ್ರಶ್ನಿಸುತ್ತಾರೆ.

ಪ್ರಪಂಚದ ೫೨ ದೇಶಗಳಲ್ಲಿ ಮಾರ್ಗದ ಶಾಖೆಗಳಿವೆಯೆಂದೂ ಸುಮಾರು ೩೦ ಲಕ್ಷ ಅನುಯಾಯಿಗಳು ಭಾರತದಲ್ಲೇ ಇರುವರೆಂದೂ ಸುಮಾರು ೬೦ ಸಾವಿರ ವಿದೇಶಿ ಅನುಯಾಯಿಗಳು ಅಮೆರಿಕೆ, ಕೆನಡಾ, ಪಶ್ಚಿಮ ಜರ್ಮನಿ, ಬ್ರಿಟನ್ನು, ಫಿಲಿಪ್ಪಾಯಿನ್ ದ್ವೀಪಗಳು, ಹಾಂಗ್‌ಕಾಂಗ್ ಸ್ವಿಜರ್ ಲ್ಯಾಂಡ್, ಕೆನಿಯಾ, ನೇಪಾಲ ಮತ್ತಿತರ ದೇಶಗಳಲ್ಲಿ ಇದ್ದಾರೆಂದೂ ಹೇಳಲಾಗುತ್ತದೆ

ಆನಂದಮೂರ್ತಿಯವರ ಐವತ್ತನೆಯ ಜನ್ಮದಿನೋತ್ಸವದಲ್ಲಿ ಮಾರ್ಗದ ಹಲವಾರು ವಿದೇಶೀ ಅನುಯಾಯಿಗಳೂ ಭಾರತದ ಸುಮಾರು ೫೦ ಸಾವಿರ ಅನುಯಾಯಿಗಳೂ ಭಾಗವಹಿಸಿದ್ದರು. ಹೃದಯ ಸ್ಪರ್ಶಿಯಾದ ಮೆರವಣಿಗೆಯು ಈ ಉತ್ಸವದ ಪ್ರಮುಖ ಆಕರ್ಷಣೆಯಾಗಿತ್ತು. ಇದರಲ್ಲಿ ಅವಧೂತರು ಘೋಷಣೆಗಳನ್ನು ಕೂಗುತ್ತಿದ್ದರು ಉಳಿದ ಸಾವಿರಾರು ಜನರು ಇದನ್ನು ಪುನರುಚ್ಚರಿಸುತ್ತಿದ್ದರು.

ಆನಂದ ಮಾರ್ಗದ ಅನುಯಾಯಿಗಳು ತಮ್ಮ ನಾಯಕರು ಭಗವಾನ್ ರಾ

(ಉಳಿದ ಭಾಗ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದರ್ನ್ ಡ್ರಗ್ ಫ್ಯಾಕ್ಟರಿ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ

● ತಲೆ ನೋವು ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳಿಗೆ ರಾಮಬಾಣ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-೫

ಪುತ್ತೂರು IInd Addl. ಮುನ್ಸಿಫ್ ಕೋರ್ಟಿನಲ್ಲಿ

Ex C. 717/71. (O. S. 336/69.

ಕೃಷ್ಣ ಬಾಳ್ತಿಲ್ಲಾಯ —ಆರ್ಜಿದಾರ
A. S. ನಾರಾಯಣ ರಾವ್ ಸಹಾ —ಎದ್ರಿರು.

ಎದ್ರಿ— A. S. ವಸಂತ ರಾವ್, ಆನಾರ ಸುಬ್ರಾಯರ ಸುಗ, ಆನಾರ—ಪಟ್ರಮೆ ಗ್ರಾಮ.

ಸದ್ರಿ ಎದ್ರಿಗೆ ಕೋರ್ಟ್ ಜ್ಯೂಂ ಪ್ರಕಾರ ಈ ಮೂಲಕ ತೀರ್ಮಾನಪಡಿಸಿವುದೇನೆಂದರೆ:-

ಪಟ್ರಮೆ ಗಾಮದ ಆಸ್ತಿ ಜಪ್ತಿ ಪಡ್ಡಿದ ಬಾಬ್ತು ನಿಮ್ಮ ಪ್ರೋಹಿಬಿಟರಿ ಒರ್ಡರ ನೋಟಿಸಿಗೆ ತಾ. 14-2-72ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂಬೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ನೂಡಿಯುಕ್ತಕಾಡಂತೆ ತೀರ್ಮಾನಿಸಲಾಗಿದೆ.

Sd/- M. Rammohan Rao
Advocate for Petr.

ತಾ. 12-1-72.

ಮಾರ್ಕ್ಸ್‌ವಾದಿಗಳು ದೇಶದ್ರೋಹಿಗಳು

ಪಾಕಿಸ್ಥಾನ ಆಕ್ರಮಣ ನಡೆಸಿದಾಗ ಕಮ್ಯೂನಿಷ್ಟಪಕ್ಷಗಳು ಒಂದೇ ಪಕ್ಷವೆಂಬಂತೆ ಇಂದಿರಾಜೀಯವರ ಹಿಂದೆ ನಿಂತಾಗ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ತನ್ನ ನಿಜ ಬಣ್ಣವನ್ನು ಪ್ರಕಟಿಸಿತು. ಅದು ಭಾರತವೇ ಆಕ್ರಮಣಕಾರಿ ರಾಷ್ಟ್ರವೆನ್ನುವ ರೀತಿಯಲ್ಲಿ ಮಿಥ್ಯಾಪಚಾರ ನಡೆಸಿತು. ಕೇರಳ ವಿಧಾನ ಸಭೆಯು ಇಂದಿರಾಜೀಯವರಿಗೆ ಬೆಂಬಲ ಸೂಚಿಸುತ್ತಿದ್ದ ಸಮಯದಲ್ಲಿ ಮಾರ್ಕ್ಸ್‌ವಾದಿಗಳ ಮುಂದಾಳು ನಂಬೂದ್ರಿಪಾದರು ಆದನ್ನೆದುರಿಸುತ್ತ, ಬಂಗ್ಲಾದೇಶದ ಬಿಡುಗಡೆಯ ನಂತರ ಪಾಕಿಸ್ತಾನದ ಭೂಪ್ರದೇಶದಲ್ಲಿ ಒಂದು ಮಿಲಿಮೀಟರ್ ಸ್ಥಳದಲ್ಲೂ ಕಾಲಿಡುವದಿಲ್ಲವೆಂದು ಸ್ಪಷ್ಟವಾಗಿ ಆಶ್ವಾಸನೆಯಿತ್ತು ಯುದ್ಧದ ಲಕ್ಷ್ಯವೇನೆಂಬುದನ್ನು ಸ್ಪಷ್ಟಪಡಿಸಬೇಕೆಂದು ಹೇಳಿದರು. ದೇಶ ಭಕ್ತನ ಬಾಯಿಯಿಂದ ಬರತಕ್ಕಂತಹ ಮಾತುಗಳೇನಿವು!

ಮಾರ್ಕ್ಸ್‌ವಾದಿಗಳು ಬಂಗ್ಲಾದೇಶ-ಬಂಗ್ಲಾದೇಶವೆಂದು ಬಂಬಡಿಸುತ್ತಿರುವದರಿಂದ ಅವರ ಇತರ ಮಾತು—ಕೃತಿಗಳತ್ತ ಕೆಲವರು ಅಲಕ್ಷ್ಯ ಭಾವನೆಯಿಂದ ಇರಲು ಸಾಧ್ಯವಿದೆ. ಬಂಗ್ಲಾದೇಶವನ್ನವರು ತಮ್ಮ ಭಾವೀ ಹೆಂಚಿಕೆಗಾಗಿ ಹಾಡುತ್ತ ಬಂದಿರುವರು. ಪಶ್ಚಿಮಬಂಗಾಲದಲ್ಲ ಗಲಭೆ ಎಬ್ಬಿಸಿ ಅವಶ್ಯಕತೆಬಿದ್ದಲ್ಲಿ ಚೀನದ ಸಹಾಯದಿಂದ, ಸಿಡಿದು ಬಂಗ್ಲಾದೇಶದೊಂದಿಗೆ ಒಂದಾಗಲಿಕ್ಕಾಗಿಯೇ ಅವರು ಈ ಆಟ ಆಡುತ್ತಿದ್ದಾರೆ.ಏನೇ ಇರಲಿ, ಬಂಗ್ಲಾದೇಶದ ಬಿಡುಗಡೆ ಆಗಿರುತ್ತದೆ.

ಪಾಕಿಸ್ತಾನವು ಯುದ್ಧ ಸಾರುವ ಹಿಂದೆ ನಮ್ಮ ವಿದೇಶಾಂಗ ಸಚಿವರು, ರಕ್ಷಣಾ ಮಂತ್ರಿಯವರು, ಪ್ರಧಾನಿಯವರು ಅಲ್ಲದೆ ರಾಷ್ಟ್ರಾಧ್ಯಕ್ಷರೂ ವೀರಾವೇಶದಿಂದ ಮಾತಾಡುತ್ತಿದ್ದರು. ಪಾಕಿಸ್ತಾನ ಸಮರಾಗ್ನಿಯಲ್ಲಿ ಸುಟ್ಟು ಹೋಗಲಿಕ್ಕಿದೆಯೆಂಬ ಭಾವನೆ ಭಾರತೀಯರಲ್ಲಿ ಬಂದಿತ್ತು. ಆದಕ್ಕಾಗಿ ಅದ್ಯಾವ ತ್ಯಾಗಕ್ಕೂ ಜವರು ಸಿದ್ಧರಿದ್ದರು. ನಿಧಿ—ರಕ್ತಗಳನ್ನೇ ಕೊಟ್ಟಿರುವುದೇ ಅಲ್ಲ, ಸೇನೆಗೆ ಸಹಾಯ ಮಾಡಲು ಗಡಿ ಪ್ರದೇಶಕ್ಕೂ ಹೋದರು. ದೇಶಭಕ್ತರು, ಮಾತೃ ಮಂದಿರದ ಪೂಜಾರಿಗಳು ಈ ಪವಿತ್ರ ಕಾರ್ಯದಲ್ಲಿ ಲೀನರಾಗಿದ್ದಾಗ ಕಮ್ಯೂನಿಷ್ಟ್ (ಮಾ) ಕರಡಿಯು ಡ್ರೇಗನ್ ತನ್ನ ಬಾಯನ್ನು ತೆರೆದು ಸ್ವಾಹಾಕ್ಕೆ ಸಿದ್ಧತೆ ನಡೆಸುತ್ತಿತ್ತು. ಯುದ್ಧ ನಮ್ಮ ನೆಲದಲ್ಲಿ ಆಲ್ಲ, ಪಾಕಿಸ್ತಾನದ ನೆಲದಲ್ಲಿ; ನಾವು ಹಿಡಿದ ಭೂ ಪ್ರದೇಶ ಸೊತ್ತುಗಳನ್ನು ಬಿಟ್ಟು ಕೊಡುವುದಿಲ್ಲವೆಂದು ಸಚಿವರುಗಳು ಸಾರುತ್ತಿದ್ದುದರಿಂದ ಮಾ| ಕಮ್ಯೂನಿಷ್ಟರು ಪಾಕಿಸ್ತಾನದ ನೆಲದಲ್ಲಿ ಕಾಲಿಡಕೂಡದೆಂದು ಎಚ್ಚರಿಕೆಯನ್ನಿತ್ತಿದ್ದರು!ಭಾರತದ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತುಕೊಂಡಿರುವವರು ಈ ಕಮ್ಯೂನಿಷ್ಟರಿಗೆ ಆ ಶಾಸನೆ ಕೊಡಬೇಕು! ಎಂತಹ ಶರ್ತ!

ಈ ಕೂಗಿಗೆ ಕಿವಿಗೊಡದೆ ನಾಯಕರು ಸೇನೆಗೆ ಆದೇಶವನ್ನಿತ್ತರು. ಬಂಗ್ಲಾ ದೇಶ ಬಿಡುಗಡೆ ಹೊಂದಿತು. ಪಾಕಿಸ್ತಾನವು ಪಶ್ಚಿಮ ದಿಕ್ಕಿನಲ್ಲೂ ಆಕ್ರಮಣ ನಡೆಸಿತು. ಅವರನ್ನಟ್ಟಿಕೊಂಡು ನಮ್ಮ ಶೂರ ಸೇನಾನಿಗಳು ಮುಂದರಿದರು ಆಗ.....

ಯುದ್ಧದ ಕಾರ್ಮೋಡ ಕಂಡು ಬರುತ್ತಿದ್ದಾಗ ಭಾರತದ ದಕ್ಷಿಣ ತುದಿಯಿಂದ ದೇಶ ಹಿತಕ್ಕೆ ವಿರುದ್ಧವಾಗಿ ವರ್ತಿಸಿದ್ದ ಮಾ. ಕಮ್ಯೂನಿಷ್ಟರು, ಯುದ್ಧ ನಿಲ್ಲಿಸಲ್ಪಟ್ಟ ನಂತರ ಕಲ್ಕತ್ತದಿಂದ ಪುನಃ ಸ್ವರವೆತ್ತಿದ್ದಾರೆ. ಆವರು ಈಗ ಕೇಂದ್ರ ಸರಕಾರಕ್ಕೆ 'ಆಜ್ಞೆ'ಕೊಡುತ್ತಿದ್ದಾರೆ.ಯುದ್ಧದ ಸಮಯದಲ್ಲಿ ಭಾರತೀಯ ಸೇನೆಯು ಪಶ ಪಡಿಸಿ ಕೊಂಡಿರುವ ಪ್ರದೇಶದಿಂದ ಹಿಂದಕ್ಕೆ ಬರಬೇಕು!—ಇಲ್ಲದಿದ್ದಲ್ಲಿ ಬಂಗ್ಲಾದೇಶದಲ್ಲಿ ಮತೀಯತೆ ತಲೆಯೆತ್ತಿ ಬಂಗ್ಲಾದೇಶ-ಭಾರತ ನಡುವಣ ಸೌಹಾರ್ದತೆಗೆ ಕುತ್ತಾರಪ್ರಾಯವಾಗುತ್ತದೆ; ಆ ಲ್ಲದೆ, ಭಾರತ ಮತ್ತು ಪಾಕಿಸ್ತಾನ ಜನರ ನಡುವೆ ಶಾಶ್ವತ ಹಗೆತನವೇರ್ಪಟ್ಟು, ಈ ಉಪಖಂಡದ ವ್ಯವಹಾರದಲ್ಲಿ ಬಂಡವಾಳ ಶಾಹಿಗಳು ತಲೆಹಾಕುವಂತೆ ಸಹಾಯವಾಗುತ್ತದೆ.

ಮೂತಿನ ಈ ಎರಡು ಭೂತಗಳಿಗೆ ಭಾರತ ಸರಕಾರ ಬೆದರುತ್ತದೆಂಬುದು ಕಮ್ಯೂನಿಸ್ಟರಿಗೆ ಚೆನ್ನಾಗಿ ಗೊತ್ತು. ಮತೀಯ ಮೂರಾಮೂರಿಯಲ್ಲಿ ಕಮ್ಯೂನಿಸ್ಟರ ಕೈವಾಡವೇನೆಂಬುದು ನಿಷ್ಪಕ್ಷಪಾತಿ ಜನತೆಗೆ ಗೊತ್ತು. ಒಣ ಹುಲ್ಲಿನ ರಾಶಿಗೆ ಉರಿಯುವ ಬೀಡಿ ತುಂಡು ಬಿಸಾಡಿದಂತೆ ಕಮ್ಯೂನಿಸ್ಟರು ವರ್ತಿಸುತ್ತಾರೆ. ಕಮ್ಯೂನಿಸ್ಟರೂ ಕಮ್ಯೂನಿಸ್ಟರ ಸಹಚರರೂ ಸಹಸ್ರಬಾರಿ ಮತೀಯತೆಯೆಂದೊಡನೆ ಭ್ರಾಂತಿಯಿಂದ ದೇಶಭಕ್ತರ ಮೇಲೆ ಇಂದಿರಾಜೀ ಹಿಂಬಾಲಕರು ಹಿಂಸಾಚಾರಣೆಗೆ ನುಂದಾಗುವದುಂಟು ದೇಶಭಕ್ತರು ಸೈನಿಕರಿಗೆ ಬೆನ್ನೆಲುಬಾಗಿ, ರಕ್ತವಾಗಿ ಮುಂವಕ್ಕೆ ಬಂದಿರುವದು ಕಮ್ಯೂನಿಸ್ಟರಿಗೆ ತಲೆನೋವಾಗಿದೆ. ಇಂದಿರಾ ಕಾಂಗ್ರೆಸ್ಸಂತೂ ಮತೀಯತೆಯೆಂಬೊಡನೆ ಮೈಲು ದೂರ ಓಡುತ್ತದೆ. ಅದನ್ನು ಧೈರ್ಯದಿಂದ ಎದುರಿಸುವ ಆತ್ಮಶಕ್ತಿ, ದೇಶೀಯ ಮನೋಭಾವನೆ ಅವರಲ್ಲಿರುವದಿಲ್ಲ. ಅವರು ಗೊಂದಲ—ಗುಂಪಲು ಮತೀಯ ಹೊಂದಾಣಿಕೆಯಲ್ಲೇ ಹಣ್ಣಾಗಿ ಬಿಡುತ್ತಾರೆ.ಇದರ ದುರ್ಲಾಭಪಡೆಯಲು ಕಮ್ಯೂನಿಸ್ಟರು ಹವಣಿಸುತ್ತಿದ್ದಾರೆ. ಅದೇ ರೀತಿ ಅಂತರ್ರಾಷ್ಟ್ರೀಯತೆಯೆಂದರೆ ಅಲುಗಾಡುತ್ತಾರೆ. ಆದಕ್ಕಾಗಿಯೇ ಕಮ್ಯೂನಿಸ್ಟರು ಕಾಂಗ್ರೆಸ್ಸಿಗರಿಗೆ ಈ ಭೂಮಂತ್ರ ಹಾಕುತ್ತ ಬಂದಿದ್ದಾರೆ.

ತಮಗೆ ನೆಲವಾಹ ಇಲ್ಲವೆಂದು ನೇತಾರಗಳು ನುಡಿಯುತ್ತ ಬಂದಿದ್ದಾರೆ. (ಜಂತರ ಮಂತರಕ್ಕೂ ಇದಕ್ಕೂ ಅಂತರ ಬಹಳ.) ಪಾಕಿಸ್ಥಾನದ ನೆಲ ನಮಗೇತಕ್ಕೆ? ಸರಿ.

ಇದರೆಲ್ಲರೂ ಬಿಟ್ಟು ಕೊಡುವ ವಿಷಯವನ್ನೇ ಬೋಧಿಸುತ್ತಿದ್ದಾರೆಯೇ ವಿನಃ ರಕ್ಷಿಸಿಕೊಳ್ಳುವ ವಿಷಯವನ್ನೇ ಹೇಳುವುದಿಲ್ಲ. ಈ ಹಿಂದೆ ಪಾಕಿಸ್ತಾನವೂ ಜೈನಾವೂ ನಮ್ಮ ನೆಲವನ್ನು ಹಿಡಿದುಕೊಂಡಿವೆ. ಆದರ ಬಿಡುಗಡೆಯ ಕುರಿತು ಇವರ್ಯಾರೂ ಹೇಳುವದಿಲ್ಲ. ಅದು ಹಳೆಯ ಕಥೆ, ಅಜ್ಜ ನೆಟ್ಟ ಗೋಳಿ ಮರವಾಗುತ್ತ ಬರುತ್ತಿದೆ. ಈಗ ಈ ಸಲ, ಪಾಕಿಸ್ತಾನವು ಚಾಂಬ್ ಪ್ರದೇಶದಲ್ಲಿ ನಮ್ಮ ನೆಲವನ್ನು ಹಿಡಿದಿರುತ್ತದೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದನ್ನಾದರೂ ಬಿಡಿಸಿಕೊಳ್ಳಬೇಕೆಂದು ಸರಕಾರವನ್ನು ಹೆದರಿಸುತ್ತಿರುವ ಕಮ್ಯೂನಿಷ್ಟರು ಬಾಯಿ ಬಿಟ್ಟರುವುದಿಲ್ಲ. ಆ ಪ್ರದೇಶವನ್ನು ಬಿಟ್ಟು ಕೊಡಬೇಕೆಂದು ಹೇಳಿದರೆ ಪಾಕಿಸ್ತಾನಕ್ಕೆ ಕೋಪ ಬಂದೀತು, ಅಲ್ಲಿಯ ಜನತೆ ರೊಚ್ಚಿಗೆದ್ದೀತು, ಇಲ್ಲಿ ಮತೀಯ ಮೂರಾಮೂರಿ ತಲೆಯೆದ್ದೀತೆಂದು ಕಮ್ಯೂನಿಷ್ಟರು ತಲೆ ಬುಡ ಇಲ್ಲದೆ ಮಾತುಗಳನ್ನಾಡಬಹುದು.

ನಮ್ಮ ದೇಶದ ಭೂಭಾಗವನ್ನು ಬಿಟ್ಟು ಕೊಡಬೇಕು. ನಮ್ಮ ಮೇಲೆ ಆಕ್ರಮಣ ನಡೆಸಿದಾಗಲೂ ಗಮ್ಮನೆ ಇರಬೇಕು, ಕಮ್ಯೂನಿಷ್ಟ್ ಅಥವಾ ಇತರ ರಾಷ್ಟ್ರಗಳು ಹೇಳಿದಂತೆ ಕುಣಿಯಬೇಕೆನ್ನುವದು ದೇಶದ್ರೋಹಿಗಳ ಲಕ್ಷಣವಿದೆ. ಜವರಿಗೆ ಭಾಂಬ್ ಹೋದರೇನು, ದಿಲ್ಲಿ ಹೋದರೇನು? ಇವರು ದೇಶವನ್ನು ಮಾತೃಭೂಮಿಯೆಂದು, ಪುಣ್ಯ ಭೂಮಿಯೆಂದು ಪ್ರೀತಿಸುವುದಿಲ್ಲ. ಹಾಗಿರುವದರಿಂದಲೇ ದೇಶದ್ರೋಹಿಗಳಾಗುತ್ತಿದ್ದಾರೆ. ಇದು ಕೇವಲ ಸೊತ್ತಿನ ಪ್ರಶ್ನೆ ಇರುವುದಿಲ್ಲ. ಸ್ವಾಭಿಮಾನದ ವಿಷಯ ಇದೆ. ನಮ್ಮ ದೇಶದ ಮೇಲೆ ಆಕ್ರಮಣ ನಡೆಸಿದಲ್ಲಿ ನಾವು ಸಹಿಸಿಕೊಳ್ಳಲಾರೆವು; ದೇಶದ ಸ್ವಾತಂತ್ರ್ಯ ಸ್ವಾಭಿಮಾನವನ್ನುಳಿಸಿ ಕೊಳ್ಳಲು ಅದೆಂತಹ ತ್ಯಾಗಕ್ಕೂ ಸಿದ್ಧರು. ಇದಕ್ಕೆ ಭಿನ್ನವಾದ ಮಾರ್ಕ್ಸ್‌ವಾದಿಗಳೆಂತವರು ದೇಶದ್ರೋಹಿಗಳೇ ಸರಿ.

—ಶ್ರೀ ಶಿವಶಂಕರ

ಚಂದಾ ಹಣ ಬಾಕಿ ಇರುವವರು ದಯವಾಡಿ ಅವಮ್ಮ ತೈರ್ಯಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

Gram : VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE - 2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.



ಗೇಹರಾಜ್ಯದಲ್ಲಿ

ದೇವರು, ಪೂಜಾರಿಗಳು ಮತ್ತು ಭಕ್ತಸಮುದಾಯ

'ಕೇಳಿದ್ಯಾ?'

'ಏನು?'

'ಅಲ್ರಿ, ಶೇಕ ಮುಜಿಬುರ್ ರೆಹಮಾನರು ಬಂಗ್ಲಾ ದೇಶದ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ರಂತೆ .'

'ಹ್ಞೂಂ ...ಸಾರ್ವತ್ರಿಕ ಚುನಾವಣೆಯಲ್ಲಿ ಪೂರ್ಣ ಬಹುಮತ ಪಡೆದ ಪಕ್ಷದ ನಾಯಕರಾಗಿ ಅವರು ಸರಕಾರ ರಚಿಸಿದ್ದಾರೆ. ಅವರ ಪಕ್ಷ ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದಿದ್ದರಿಂದ ಅವರಿಗೆ ಸರಕಾರ ರಚಿಸುವ ಅವಕಾಶ ಸಿಕ್ಕಿತು. ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದರಲ್ಲಿ ವಿಶೇಷವೇನಿದೆ?'

'ಅಂದ್ರೆ ಬಂಗ್ಲಾ ದೇಶ ಪಾಕಿಸ್ತಾನದಿಂದ ದೂರ ದೂರ ಬಹಳ ದೂರ ಓಡುತ್ತಿದೆ ...'

'ಅಲ್ವೆ, ಇನ್ನು ಓಡೋದೇನು ಬಂತು? ಸಂಪೂರ್ಣವಾಗಿ ಪಾಕಿಸ್ತಾನ ಅದೆಂದೋ ಸೋತಾಗಿದೆ.....'

'ಅದು ಹೌದೂನ್ನಿ. .'

'ಮತ್ತಾವುದಲ್ಲ?'

'ಪಾಕ ರಾಷ್ಟ್ರಪತಿ ಭುಟ್ಟೊ ಮಹಾಶಯರು ಸೋನಾರ್ ಬಾಂಗ್ಲಾದ ಕನಸನ್ನು ಇನ್ನೂ ಬಿಟ್ಟಿಲ್ಲ....'

'ಅವರು ಕನಸು ಕಂಡರೇನಂತೆ? ಕನ್ನಡಿಯೊಳಗಣ ಗಂಟು ತಾನೆ?'

'ಅವರಿನ್ನೂ ಸಕಾಲದಲ್ಲಿ ಮುಜಿಬ್ ಜೊತೆ ಮಾತುಕತೆಗೆ ಸಿದ್ಧರಿದ್ದಾರಂತೆ....'

'ಹೌದು. ಆದರೆ ಒಂದು ಶರ್ತ ಬಾಂಗ್ಲಾದೇಶದಲ್ಲಿ ಭಾರತೀಯ ಪಡೆಗಳಿರುವವರೆಗೆ ಆ ಮಾತುಕತೆ ಸಾಧ್ಯವಿಲ್ಲ....'

'ಅಂದ್ರೆ, ಡಾಕ್ಕಾದಿಂದ ಡಿಲ್ಲಿ ಸೇನೆಗಳು ವಾಪಸಾತಿಬೇಕು; ಭುಟ್ಟೊ ಮಾತುಕತೆಗಳಿಗೆ ತೊಡಗಬೇಕು....'

'ಹ್ಞೂಂ ...'

'ಅಲ್ರಿ. ಪಾಕಿಸ್ತಾನದೊಂದಿಗೆ ತಮಗೆ ಯಾವ ಕಾಲಕ್ಕೂ ಯಾವುದೇ ರೀತಿಯ ಸಂಬಂಧ ಬೇಡನೇ ಬೇಡ ಎಂದು ಸಾರಿದ ಮುಜಿಬುರ್‌ರಿಗೆ ಭುಟ್ಟೊ ಜತೆ ಮಾತುಕತೆ ಬೇಕಾದರೂ ಏಕೆ?'

'ಮುಜಿಬುರ್‌ಗೆ ಬೇಡವಾದರೇನಂತೆ? ಭುಟ್ಟೊರಿಗೆ ಬೇಕಂತಲ್ಲಾ?'

"ಬೇಕಾದರೆ ಬೇಷರತ್ತಾಗಿ ಮಾತುಕತೆಗೆ ಸಿದ್ಧವೆಂದು ಘೋಷಿಸಬೇಕು...."

'ಅಂದ್ರೆ ಭುಟ್ಟೊರೂ ತನ್ನ ಮೂಗು ಮುರಿದು ಕನ್ನಡಿ ನೋಡಿಕೊಳ್ಳಬೇಕೇನು?'

"ಹಾಗಾದರೆ?"

'ಹಾಗಾದರೂ ಇಲ್ಲ; ಹೀಗಾದರೂ ಇಲ್ಲ. ಭುಟ್ಟೊ. ತನ್ನ ಪ್ರಜೆಗಳೆದುರು ನಾಟಕವಾಡುತ್ತಿದ್ದಾರೆ....'

'ಒಂದ್ರೀತಿಯಿಂದ ಹೌದೂನ್ನಿ. ಅಮೆರಿಕೆ ಪಾಕಿಸ್ತಾನದ ಜತೆ ನಾಟಕವಾಡಿ ಅದನ್ನು ರಸಾತಳಕ್ಕೆ ದೂಡಲಿಲ್ಲವೆ?'

'ಹ್ಞೂಂ ...ಅದು ಸಾಮಾನ್ಯ ನಾಟಕವಲ್ಲ. ನಗಾರಿ ಬಾರಿಸುವುದರಿಂದಲೇ ಭಾರತ ಬೆದರಬೇಕು; ಪಾಕ್ ನಂಬಬೇಕು.... ಪಾಪ್ಪಜಮೆರಿಕೆ ತನಗೆ ಕೈಕೊಟ್ಟತೆಂದು ದೂರುವುದಕ್ಕೂ ಭುಟ್ಟೋಗೆ ಈಗ ದಮ್ಮಿಲ್ಲ.'

'ಅಲ್ರಿ, ಮತ್ಯಾರನ್ನದು ತನ್ನ ಮಿತ್ರನೆಂದು ಕರೆಯಬೇಕು?'

'ಇನ್ನು ತುಸು ಕಾಲ ಹೋಯ್ತೂಂದ್ರೆ ಪ್ರಾಯಃ ಪಾಕಿಸ್ತಾನ ಜಗತ್ತಿನಲ್ಲೇ ಏಕೈಕ ದೇಶವಾಗುವುದೋ ಏನೋ....'

'ಯಾಕೆ ಹಾಗಂತೀರಿ?'

'ಅಲ್ವೆ, ಬಾಂಗ್ಲಾದೇಶಕ್ಕೆ ಮಂಗೋಲಿಯಾ, ಪೋಲೆಂಡ್, ಬ್ರಹ್ಮ, ಬಲ್ಗೇರಿಯಾ ನೊದಲಾದ ದೇಶಗಳು ಮಾನ್ಯತೆ ಕೊಟ್ಟಿವೆ. ಇನ್ನೂ ಕೆಲವು ದೇಶಗಳು ಇಷ್ಟರಲ್ಲೇ ಕೊಡುತ್ತಿವೆ.'

'ಕೊಡಲಿ ..ಅದರಿಂದೇನು?'

'ಬಾಂಗ್ಲಾಕ್ಕೆ ಮನ್ನಣೆ ನೀಡಿದವರೊಡನೆ ಪಾಕಿಸ್ತಾನ ತನ್ನ ರಾಜ್ಯತಾಂತ್ರಿಕ ಸಂಬಂಧವನ್ನು ಕಡಿದುಕೊಳ್ಳತೊಡಗಿದೆ....'

'ಇದೊಳ್ಳೆ ಭೇಷಾಯ್ತು....'

'ಯಾಕೆ?'

'ಅಲ್ರಿ, ಬಾಂಗ್ಲಾದೇಶ ಉದಯವಾದದ್ದು ಸತ್ಯವಾಗಿರುವಾಗ, ಅದನ್ನು ಒಪ್ಪಿಕೊಂಡವರನ್ನು ತಮ್ಮ ಶತ್ರುಗಳೆಂದು ತಿಳಿಯುವುದರಿಂದ ಯಾರಿಗೆ ಲಾಭ?'

'ಪಾಕಿಸ್ತಾನದೊಂದಿಗೆ ಯಾರಿಗೆ ಯಾಕಾಗಿಯಾದರೂ ಸಂಬಂಧ ಬೇಕು?'

"ಅಮೆರಿಕೆಗೆ....ಚೀನಾಕ್ಕೆ...."

"ಆದೂ ನಂಬಲಾಗದು ಅನೆರಿಕೆಯಲ್ಲೇ ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡಬೇಕೆಂದು ಅಧ್ಯಕ್ಷ ನಿಕ್ಸನ್ನರ ಮೇಲೆ ಒತ್ತಾಯ ಹೇರಲಾಗುತ್ತಿದೆ.'

'ಅದೂ ಹೌದೂನ್ನಿ. ಆದ್ರ ಮೇಲೆ ಭುಟ್ಟೊ ಶರ್ತ ಹೇರಿದಂತೆ ಬಾಂಗ್ಲಾವೂ ರಾಜ್ಯತಾಂತ್ರಿಕ ಸಂಬಂಧಕ್ಕೆ ಶರತ್ತು ಹೇಳಿದಂತೆ....'

'ಹ್ಞೂಂ....ನಮ್ಮ ನೂತನ ರಾಷ್ಟ್ರಕ್ಕೆ ಮಾನ್ಯತೆ ನೀಡಿದರೆ ಮಾತ್ರ ನಾವು ಪಾಕಿಸ್ತಾನದೊಡನೆ ರಾಯಭಾರಿ ಸಂಬಂಧವಿರಿಸಿಕೊಳ್ಳುತ್ತೇನೆ ಅಂದಿದ್ದಾರೆ....'

'ಅಲ್ರಿ, ಸಾಕ್ ವಾಯು ಪಡೆಯ ಮಾಜಿ ಪ್ರಧಾನ ದಂಡ ನಾಯಕ ಅಸ್ಗರ್ ಖಾನರು ಬಾಂಗ್ಲಾಕ್ಕೆ ಮಾನ್ಯತೆ ನೀಡಬೇಕೆಂದು ಹೇಳಿದ್ದಾರಂತಲ್ಲಾ....'

'ಹ್ಞೂಂ ...ಹೌದು. ಭುಟ್ಟೋರಿಗೆ ರಾಷ್ಟ್ರಪತಿ ಪದವಿ ದೊರೆತ ಗಳಿಕೆ ಭಾರಿ ಕೆಟ್ಟದ್ದು. ಪಾಕಿನ ಉಳಿದ ಕೆಲವು ರಾಜ್ಯಗಳಲ್ಲೂ ಸ್ವಾಯತ್ತತೆಯ ಬೇಡಿಕೆ ಹೊರಟಿದೆಯಂತೆ....'

'ಅಲ್ರಿ, ಆಫಘಾನಿಸ್ತಾನಕ್ಕೆ ಭುಟ್ಟೊ ಆನಿರೀಕ್ಷಿತವಾಗಿ ಹೋಗಿ ಬಂದ್ರಂತಲ್ಲಾ..'

'ಹ್ಞೂಂ....ತನ್ನ ದೇಶದ ಸಮಸ್ಯೆಗಳಿಗೆ ಅಲ್ಲೇನಾದರೂ ರಾಮ ಬಾಣವಿದೆಯೋ ಎಂದು ನೋಡ ಹೋದದ್ದಿರಬೇಕು....'

'ಅದು ಹೋಗಲಿ....'

'ಹೋಗಲಿ, ಯಾರು ಬೇಡಾಂತಾರೆ?'

'ಅಲ್ರಿ ಗುಜರಾತದಲ್ಲಿ ಸಿಂಡಿಕೇಟಿನ ಪ್ರಮುಖರು ರಾಜೆ ಕೊಟ್ಟಂತೆ. ಆಂಧ್ರಪ್ರದೇಶದಲ್ಲಿ ಇತಿಶ್ರೀ ಆಯ್ತಂತೆ....'

'ಅಗಲಿ ಬಿಡು. ಸದ್ಯ ಕರ್ನಾಟಕದ ಸಿಂಡಿಕೇಟು ಪ್ರತ್ಯೇಕ ರಾಜ್ಯ ಪಕ್ಷವಾಗುವುದಿಲ್ಲಾಂತ ಗೊತ್ತುಮಾಡಿತಂತಲ್ಲಾ....'

'ಆಯ್ತೂನ್ನಿ ನೋಡಿ, ದೇವರಾಜ ಅರಸರು ತನ್ನ ಪಕ್ಷವನ್ನು ದೇವಾಲಯವೆಂದು ವರ್ಣಿಸಿದರಂತೆ....'

'ಹ್ಞೂಂ....ಶ್ರೀಮತಿ ಇಂದಿರಾ ಗಾಂಧಿ ದೇವರು, ದೇವರಾಜ ಅರಸು ಮೊದಲಾದವರು ಪೂಜಾರಿಗಳು. ಉಳಿದವರೆಲ್ಲರೂ ಅವರ ಭಕ್ತರು....'

'ಯಾರಾದರೂ ಬರಬಹುದು; ಅವರವರ ಭಕ್ತಿಗೆ ಸರಿಯಾಗಿ ಫಲದೊರೆಯುವುದು ಎಂದು ಅಂದರಂತೆ....'

"ಅಲ್ವೆ, ದೇವಾಲಯಗಳಲ್ಲಿ ಫಲದೊರೆಯುವ ಕ್ರಮ ನಮಗೆ ಗೊತ್ತಿಲ್ಲವೆ? ಯಾರು ಪೂಜಾರಿಗೆ .ಹೆಚ್ಚು ದಕ್ಷಿಣೆ ಕೊಡುತ್ತಾರೆ, ಅವರಿಗೆ ಎತ್ತರದ ಮಣೆಹಾಕಿ ಕೂರಿಸುತ್ತಾರೆ; ದೇವ್ರು ತೃಪ್ತನಾಗಿದ್ದಾನೆಂದು ಆಶೀರ್ವದಿಸುತ್ತಾರೆ...."

'ಅಲ್ರಿ, ಅದು ಕಲ್ಲು ದೇವರ ಗುಡಿಯ ಕಥೆಯಾಯ್ತು. ಇಲ್ಲಿ ಜೀವಂತ ದೇವಿಯಿಗುವಾಗ?'

'ದೇವಿ ಕಲ್ಲಿನದ್ದಾದರೇನು, ಜೀವಂತವಾದರೇನು? ಪೂಜಾರಿಗಳನ್ನು ಕೈಬಿಟ್ಟು ದೇವಿ ಬದುಕುವುದುಂಟೆ?'

"ಅದು ಇಲ್ಲಾನ್ನಿ. ಆದ್ರೂ ಪೂಜಾರಿಗಳ ಸಂಖ್ಯೆಯೂ ಹೆಚ್ಚಿದೆ."

'ಒಬ್ಬೊಬ್ಬ ಪೂಜಾರಿ ಒಂದೊಂದು ಗುಂಪಿನ ಮೇಲೆ ದೇವಿಯ ಅನುಗ್ರಹಕ್ಕೆ ಪ್ರಯತ್ನಿಸುತ್ತಾನೆ....'

'ಅದರ ಮೂದಲಿ ಈಗಾಗಲೇ ವ್ಯಕ್ತವಾಗಿದೇನ್ನಿ... ನೋಡಿ, ಸಿಂಡಿಕೇಟು ಕರ್ನಾಟಕ, ಗುಜರಾತ ಮತ್ತು ಬಿಹಾರಗಳಲ್ಲಿ ಹೆಚ್ಚಿನ ಸ್ಥಾನಗಳಿಗೆ ಸ್ಪರ್ಧಿಸುವುದಂತೆ...'

."ಸ್ಪರ್ಧಿಸಲಿ ಬಿಡು ನಮಗೇನಂತೆ? ಆದರೂ ಈ ಬಾರಿಯ ಚುನಾವಣಾಕಾಶ ಬಹಳ ಕಪ್ಪಾಗಿದೆ. ತೇಜಸ್ವೀಲ ಸೂರ್ಯ ಮಾತ್ರ ಗೋಚರವಾಗಬಲ್ಲ...."

'ನಮ್ಮ ಧರ್ಮವೀರರು ತಮ್ಮ ಪದವಿಯಿಂದ ನಿವೃತ್ತರಾಗುತ್ತಾರಂತಲ್ಲಾ....'

'ನೀನೆಲ್ಲಿದ್ದೀಯೆ? ಬೆಂಗಳೂರಿಗೆ ಹೊರಡಲು ಶ್ರೀ ನೋಹನಲಾಲ ಸುಖಾಡಿಯ ಬ್ಯಾಗು ಬೆಡ್ಡಿಂಗ್ ಕಟ್ಟಿಯಾಯ್ತು....'

'ಅಲ್ರಿ, ಚುನಾವಣೆ ಮುಗಿದ ನಂತರ ಹೊಸ ಜನತಾ ಸರಕಾರ ಸ್ಥಾಪನೆಯಾದ ಬಳಿಕ ಅವರು ನಿವೃತ್ತರಾಗುತ್ತಾರೆಂದು ಹೇಳಲಾಗಿತ್ತು ...'

'ಏನು ಹೇಳ್ತೀಯೂ ನೀನು? ಅವರ ಮೇಲೆ ಎಲ್ಲ ರಾಜ್ಯಕೀಯ ಪಕ್ಷಗಳೂ ಮುನಿಸುಗೊಂಡದ್ದು ಇಂಡಿಕೇಟು ಇಂದಿರಮ್ಮನಲ್ಲಿ ಗೋಗರೆದದ್ದು ಎಲ್ಲ ಮರೆತು ಹೋಯ್ತೇನು?'

'ಆದರೂ ಚುನಾವಣೆಗೆ ಒಂದು ತಿಂಗಳಿರುವಾಗ... '

'ಅದ್ರ ಕತೆ ಬೇರೆಯೇ ನೋಡು.' .

'ಏನು?'

'ರಾಜಸ್ಥಾನದಲ್ಲಿ ಸುಖಾಡಿಯೂ ಉಳಿದರೆ ಬರ್ಖಾತುಲ್ಲಾ ಖಾನರಿಗೆ ಬರಕತ್ತಿಲ್ಲ; ಅಲ್ಲಿಯೂ ಚುನಾವಣೆಗಳು ನಡೆಯಬೇಕಾಗಿರುವುದರಿಂದ ಸುಖಾಡಿಯೂರನ್ನು ರಾಜ್ಯಾಂತರ ಮಾಡದೆ ನಿವೃತ್ತಿಯಿಲ್ಲವಂತೆ. ಆದ್ದರಿಂದ ರಾಜ್ಯಪಾಲ ಪದವಿ ಅನುಗ್ರಹಿಸಿ ಅವರನ್ನು ಇಲ್ಲಿ ಸುಖಾಸೀನರಾಗಿ ಮಾಡಲಾಯ್ತು....'

'ಹ್ಞೂಂ .. ಅದೇ ನಾನೂ ಅಂದದ್ದು'

'ಏನ್ನೆ?'

'ಅಲ್ಲ, ಇಷ್ಟು ಗಡಿಬಿಡಿ ಯಾಕೇಂತ....'

'ಯಾಕೆ ಅಂದ್ರೆ ಅದಕ್ಕೇ....'

'ಯಾವುದಕ್ಕೆ?'

'ತಮ್ಮ ರೊಟ್ಟಿ ತುಪ್ಪಕ್ಕೆ ಬೀಳ ಬೇಕಾದ್ರೆ ಕೆಲವೊಮ್ಮೆ ಅವಸರ ಪಡಬೇಕಾಗುತ್ತೆ....'

'ಹ್ಞೂಂ, ಆಯ್ತು....'

'ಏನಾಯ್ತು ?'

'ಅಗೋದೆಲ್ಲಾ ಆಗಿ ಹೋಯ್ತು....'

'ಅಗಲಿ ಬಿಡು ...'

'ಮತ್ತೆ ಮೂಡೋದಾದ್ರೂ ಏನು?'

'ಏನೂ ಇಲ್ವೆ?'

'ಇದೆ....ಇದೆ....'

'ಏನು?'

....ಇ....ದು....'

—ಗೋರಾ

●●

ಮೂನವ ಕುಲದ ಅವಸಾನವು ಕಾಲಾಂತರದಲ್ಲಿ ನಾಗರಿಕತೆಯೆಂಬ ರೋಗದಿಂದಲೇ ಆಗುವುದು.

o o o

ನವಯುಗ

ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 20

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦-೩½

ಚಿಕ್ಕ ಜಾಹೀರಾತು ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಯಾಹ್ಯಾ ಖಾನರ ಮೂಗು ಹರಿಯಿತು ನಿಕ್ಸನ್ನರ ದವಡೆ ಬೀಗಿತು

ಅಭಿವೃದ್ಧಿ ಹೊಂದುತ್ತಿರುವ ದೇಶಗಳು ವಿದೇಶಗಳಿಂದ ಹತ್ತು ಹೇವು ಬಗೆಯಲ್ಲಿ ನೆರವು ಪಡೆಯುವುದು ಸ್ವಾಭಾವಿಕ. ವಿಶ್ವ ದ ಸಂಪನ್ನ ದೇಶಗಳು ನಾನಾ ರೂಪದಲ್ಲಿ ಅಂತಹ ಸಹಾಯ ನೀಡಲು ಮುಂದು ಬರುವುದೂ ಸಜೆಜ. ಭಾರತವು ಸ್ವತಂತ್ರವಾದ ಬಳಿಕ, ಆರ್ಥಿಕ ಸ್ವಾವಲಂಬನೆಯ ಸಾಧನೆಗಾಗಿ ಪಂಚವಾರ್ಷಿಕ ಯೋಜನೆಗಳು ರೂಪುಗೊಂಡುವು ದೇಶ ಪುನಾರಚನೆಯ ಕಾರ್ಯದಲ್ಲಿ ಈ ಯೋಜನೆಗಳು ಮಹತ್ವ ಪೂರ್ಣ ಪಾತ್ರ ವಹಿಸಿದುವು; ದೇಶದ ಸ್ವರೂಪವನ್ನು ಬದಲಾಯಿಸಲು ಇವು ಕಾರಣೀಭೂತವಾದುವು. ಬೇಸರತ್ತಾಗಿ ಬರಬಹುದಾದ ಯಾವುದೇ ಸಹಾಯವನ್ನು ಸ್ವೀಕರಿಸುವ ದೇಶದ ನೀತಿಯಿಂದ ಸಾವಿರಾರು ಕೋಟಿ ರೂಪಾಯಿಗಳ ವಿದೇಶೀ ನೆರವು ನಮಗೆ ಲಭಿಸಿತು. ಕೊಂಡ ಸಾಲವನ್ನು ಕ್ರಮ ಪ್ರಕಾರ ಮರಳಿಸುವುದರಲ್ಲಿ ಪ್ರಾಮಾಣಿಕ ರಾಷ್ಟ್ರವೆಂಬ ಪೆಸರನ್ನೂ ನಾವು ಉಳಿಸಿಕೊಂಡಿದ್ದು ವಿದೇಶೀಯರಲ್ಲಿ ನಮ್ಮ ಬಗ್ಗೆ ವಿಶ್ವಾಸವನ್ನು ಹೆಚ್ಚಿಸಿತು.

ಭಾರತ ಉಪಖಂಡದಲ್ಲಿ ಶಾಂತಿ-ಸಮತೋಲನ ಮುಂತಾದ ದೊಡ್ಡ ದೊಡ್ಡ ಹೆಸರುಗಳಿಂದ ಅಮೆರಿಕೆಯೇ ಮೊದಲಾದ ಶ್ರೀಮಂತ ದೇಶಗಳು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳ ವಿಪರೀತ ನೆರವು ನೀಡಿದ್ದು ವಿಲಕ್ಷಣವೇ. ಉಪ ಖಂಡದಲ್ಲಿನ ಇನ್ನೊಂದು ದೇಶ ಭಾರತದ ಸೈನಿಕ ಶಕ್ತಿಗೆ ಸರಿದೂಗುವ ಶಕ್ತಿ ಸಂಚಯ ಪಾಕಿಸಲ್ಲಾಗಬೇಕು; ಭಾರತ—ಪಾಕ್‌ಗಳು ಹೋರಾಡಬೇಕು ಎಂಬ ಅವುಗಳ ರಾಕ್ಷಸೀ ತೃಪೆಯನ್ನು ಪಾಕಿಸ್ತಾನವು ಗಟ್ಟಾಗಲ್ಲಿ ಭಾರತದ ಮೇಲೆ ಆಕ್ರಮಣ ನಡಿ, ಸೋತು ಪರಿತಪಿಸಲಾಗಲಿಲ್ಲ. ಇದೀಗ ೧೯೭೦ ರಲ್ಲಿಯೂ ಪಾಕಿಸ್ತಾನವು ತಾನು ಅಜೇಯ ನೆಂದು ನಂಬಿ ಬಂದ ಸೈನಿಕ ಶಕ್ತಿಯೆಲ್ಲವನ್ನೂ ಕಳೆದುಕೊಂಡು, ಮಿನ್ನ ವದನವಾಗಿ ಕುಳಿತಿರುವಾಗ, ಅದರ ಬಗೆಗೆ ಪಕ್ಷಪಾತ ನೀತಿ ತಳೆದ ಅಮೆರಿಕಾದಿಗಳು ಭಾರತವನ್ನು ಟೀಕಿಸ ಹೊರಟುವು ಮಾತ್ರವಲ್ಲ, ಆ ದರೊಡನೆ ಡೊಂಬರಾಟಕ್ಕೆ ಆರಂಭ ಮಾಡಿದುವು ೧೯೭೧ರಲ್ಲಿ ಭಾರತ-ಪಾಕ್ ನಡುರಾತ್ರಿಯಾರಂಭವಾಗಿ, ಭಾರತದಲ್ಲಿ ಆಹಾರದ ಅಭಾವ ಮಿತಿಮೀರಿದಾಗ, ಗೋದಿಯ ಚೀಲಗಳನ್ನು ಕೈಯಲ್ಲಿ ತೋರಿಸಿ ಭಾರತವನ್ನು ಮಂಗನಾಡಿಸಿದ್ದ ಅಮೆರಿಕೆ ಅಂದಿನಿಂ ಇಂ ತನ್ನ ಆ ಬುದ್ಧಿಯನ್ನು ಬಿಡಲಿಲ್ಲ ಲಿಂಡನ್ ಬಿ ಜಾನ್ಸನ್ನರು ಆರಂಭ ಮಾಡಿದ ಆ ಡೊಂಬರಾಟವನ್ನು ಈಗ ನಿಕ್ಸನ್ ಮತ್ತೊಂದು ವೈಖರಿಯಿಂದ ಮುಂದುವರಿಸುತ್ತಿದ್ದಾರೆ. ಪಾಕ್—ಭಾರತ ಸಮರದ ನೇಳೆ ಅವರು ತಳೆದ ನೀತಿಯು ಅಮೆರಿಕೆಯ ಶ್ರೀಮಂತಿಕೆಗೆ ಗೌರವ ತರುವಂತಹದಲ್ಲವೆಂದು ಬುದ್ಧಿಜೀವಿಗಳೆಲ್ಲರೂ ಬಹಿರಂಗವಾಗಿ ಘೋಷಿಸಿದ್ದಾರೆ. ಭಾರತ ಮುಂದೆ ಬೆರ್ಜಪ್ಪನನ್ನು ತೋರಿಸಿ ಅದನ್ನು ಬೆದರಿಸುವ ಗುಮ್ಮನಾಟಕ್ಕೆ ಭಾರತ ಸೊಪ್ಪು ಹಾಕದ್ದರಿಂದ ನಿಕ್ಸನ್ನರ ದವಡೆ ಊದಿಕೊಂಡಂತಾಗಿದೆ. ಆದುದರಿಂದಲೇ ತವರು ಭಾರತಕ್ಕೆ ಯಾವುದೇ ರೀತಿಯ ಸಹಾಯ ಮಾಡದಿರಲು, ಮುಂದುನರಿಸದಿರಲು, ಈಗಾಗಲೇ ಮಂಜೂರಾದ ಸಹಾಯವನ್ನೂ ಬಿಡುಗಡೆ ಮಾಡದಿರಲು ನಿಶ್ಚಯಿಸಿದ್ದಾರೆ. ತನ್ನ ವಿದೇಶೀ ನೀತಿಯನ್ನು, ಮುಖ್ಯವಾಗಿ ವಿಯತನಾಮಿ ನೀತಿಯನ್ನು, ಖಂಡಿಸುತ್ತ ಬಂದಿರುವ ಭಾರತದ ಬಗ್ಗೆ ಅಮೆರಿಕೆಗೆ ನಕ್ಕಧೃಷ್ಟಿಯಿದ್ದದ್ದು ನಿಜ; ಇದೀಗ ತನ್ನ ಬಾಂಗ್ಲಾ ನೀತಿಯನ್ನು ತಿಪ್ಪೆಗೆಸೆದ ಭಾರತದ ನಡೆವಳಿಕೆಯನ್ನಾದು ಸಹಿಸುವುದೆಂತು?

ಭಾರತದೊಳಗಡೆ ವಿದೇಶೀ ನೆರವನ್ನು ಪಡೆಯುವ ಬಗ್ಗೆ ಭಿನ್ನ ಮತವಿದ್ದದ್ದುಂಟು. 'ಬೇಸರತ್ತು' ಎಂಬ ವಿಶೇಷಣದಿಂದ ತೃಪ್ತಿ ಪಟ್ಟು ಕೊಂಡದ್ದುಂಟು. ಇದೀಗ ಅಮೆರಿಕೆಯು ತಾನಾಗಿಯೇ ನೆರವು ನಿಲ್ಲಿಸಿದ್ದರಿಂದ ಭಾರತಕ್ಕೆ ಯಾವ ದಿಗಿಲೂ ಉಂಟಾಗಿಲ್ಲ: ಏಕೆಂದರೆ, ಅನ್ನದ ಚೀಲದೊಡನೆ ಚಿನ್ನಾಟವಾಡುವುದು ಅಮೆರಿಕೆಯು ಜಾಯಮಾನವೆಂಬುದು ನಮಗೆ ಹಿಂದೆಯೇ ಮನವರಿಕೆಯಾಗಿದೆ. ಆದ್ದರಿಂದ, ಅಮೆರಿಕಾದಿ ವಿದೇಶಿ ನೆರವು ನಿಂತು ಹೋದರೂ ದೇಶದ ಅರ್ಥ ವ್ಯವಸ್ಥೆ ಮುಗ್ಗರಿಸುವುದಿಲ್ಲವೆಂದೂ ಅಂತಹ ಬಿದರಿಕೆಗಳಿಗೆ ತಾವು ಅಂಜುವುದಿಲ್ಲವೆಂದೂ ಪ್ರಧಾನ ಮಂತ್ರಿಯವರ ಕೆಚ್ಚೆದೆಯ ಘೋಷಣೆ ಆತ್ಮವಿಶ್ವಾಸದಿಂದ ಕೂಡಿದ್ದು. ಇದು ತೋರಿಕೆಗೆ ಮಿತಿಮೀರಿದ್ದೆಂದನಿಸಿದರೂ ಜನಜೀವನಕ್ಕೆ ಕಾರಣಪಲ್ಲಿಂದು ನಂಬಬಹುದು. ಕೋಟಿ ಸಂಖ್ಯೆಯ ಬಾಂಗ್ಲಾ ನಿರಾಶ್ರಿತರ ಸಹಾಯಕ್ಕೆಂದು, ಇದೀಕ ರಕ್ಷಣಾ ನಿಧಿಗೆಂದು ಉದಾರ ತ್ಯಾಗ ಮಾಡುತ್ತಿರುವ ಭಾರತೀಯರು ದೇಶ ಕಟ್ಟುವುದಕ್ಕಾಗಿ ಅಂತಹ ತ್ಯಾಗಕ್ಕೆ ಹಿಂಜರಿಯುತ್ತಾರೆಂದು ಅಮೆರಿಕೆ ನಂಬಿದ್ದರೆ, ಅದು ಹುಚ್ಚುತನದ ಮಾತಾದೀತು. ಹಣದಿಂದಲೇ ಎಲ್ಲರನ್ನೂ ಮರುಳುಗೊಳಿಸ ಬಹುದೆಂದು ಶ್ರೀಮಂತರು ನಂಬಬಹುದು; ಆದರೆ, ಭಾರತೀಯ ಸಂಸ್ಕೃತಿಯು ಹಣಕ್ಕೆ ಮಹತ್ವವನ್ನೇ ಕೊಟ್ಟಿಲ್ಲ; ಗುಣಕ್ಕೆ ಪರಮೋಚ್ಚಿ ಸ್ಥಾನವನ್ನು ನೀಡಿ ಗೌರವಿಸಿದೆ. ಬಡತನದಲ್ಲಾದರೂ ತಮ್ಮತನವನ್ನು ಸಾವಿರಾರು ವರ್ಷಗಳಿಂದ ಉಳಿಸಿಕೊಂಡು ಬಂದಿರುವ ಭಾರತೀಯರಿಗೆ ಗುಣಕ್ಕಿಂತ ಮಿಗಿಲಾದದ್ದಿಲ್ಲ. ವಿದೇಶೀ ಸಹಾಯವು ವರವೆಂದು ಭಾರತೀಯರು ಎಂದೂ ತಿಳಿದಿಲ್ಲ; ಆದೊಂದು ಶಾಪವೆಂಬುದನ್ನು ಈಗ ಸ್ಪಷ್ಟವಾಗಿ ಮನಗಂಡಿದ್ದಾರೆ. ಆದುದರಿಂದ, ಅಮೆರಿಕೆ ತನ್ನ ಹಣದ ಚೀಲ ಹಿಡಿದು ಭಾರತವನ್ನು ಮಣಿಸಬಹುದೆಂದೂ ತನ್ಮೂಲಕ ಇತಿಹಾಸವನ್ನು ತಿದ್ದಿ ಬರೆಯಬಹುದೆಂದೂ ನಂಬಿದ್ದರೆ, ಅದು ಪ್ರತಿಗಾಮಿ ನೀತಿಯೆಂಗು ತ್ತದೆ.

ಬಾಂಗ್ಲಾ ದೇಶಕ್ಕೆ ವಿಶ್ವದ ರಾಷ್ಟ್ರಗಳು ಒಂದೊಂದಾಗಿ ಮನ್ನಣೆ ನೀಡುತ್ತ ಹೋದಂತೆ, ಅವುಗಳೊಡನೆ ಪಾಕಿಸ್ತಾನವು ತನ್ನ ಸಂಬಂಧವನ್ನು ಕಡಿದು ಕೊಳ್ಳುತ್ತ ಬಂದಂತೆ, ಅಮೆರಿಕೆಯು ಪಾಕಿಸ್ತಾನದ ಬೆನ್ನು ಚಪ್ಪರಿಸುತ್ತ ಬಂದರೆ, ಪಾಕು ಅಮೆರಿಕೆಯ ಬಾಲವಾಗಿ, ಅದೊಂಕೆ ಪಾಕಿನ ಮುಖವಾಗಿ ಉಳಿಯಬಹುದು. ಇದು ವಿಶ್ವ ಶಾಂತಿಗಾಗಲೀ ವಾಸ್ತವಿಕತೆಯನ್ನು ಮನ್ನಣೆ ನೂಡುವುದಕ್ಕಾಗಲೀ ಪರಿಪೋಷಕವಾಗುವುದಿಲ್ಲ. ಆದರೆ, ನಿಕ್ಸನ್ನರ ನೀತಿ ಈ ವರ್ಷಾಂತ್ಯದೊಳಗೆ ಬದಲಾಗ ಬಹುದೆಂಬ ಸದಾಶಯದಿಂದ ನವ್ಯ ಸನೂಧಾನದಿಂದಿರಬಹುದೋ ಏನೋ!

ಹೊಸ ತಿರುವು ಕಂಡೀತೆ?

ಬಾಂಗ್ಲಾ ದೇಶದ ಪ್ರಧಾನಿ ವಂಗಬಂಧು ಶೇಕ ಮುಜಿಬುರ್ ರೆಹಮಾನರು ಬಾಂಗ್ಲಾ ಮತ್ತು ಪಾಕಿಸ್ತಾನಗಳ ನಡುವೆ ಯಾವುದೇ ಸಂಬಂಧವಿಲ್ಲವೆಂದೂ ತಮ್ಮ ದೇಶಕ್ಕೆ ಅಧಿಕೃತ ಮನ್ನಣೆ ನೀಡಿದ ನಂತರವೇ ಭೇಟಿ ಸಾಧ್ಯವೆಂದೂ ಹಲವಾರು ಬಾರಿ ಸ್ಪಷ್ಟ ಪಡಿಸಿದ್ದಾರೆ. ಆದರೆ, ಪಾಕ್ ರಾಷ್ಟ್ರಪತಿ ಭುಟ್ಟೋ ಮಹಾಶಯರಿಗೆ ಅವರ ಈ ಘೋಷಣೆ ಅರ್ಥವಾಗುತ್ತಿಲ್ಲ. ಶೇಖರು ಇನ್ನೂ ಕೊನೆಯ ಮಾತು ಹೇಳಿಲ್ಲ" ಎಂದು ಅವರು ನಂಬುವುದಾದರೆ, ಆ ನಂಬಿಕೆ ಪಾಕಿಸ್ತಾನಿಗಳನ್ನು ಮರುಳು ಭೋನಿಸೊಳಗಿರಿಸುವುದಕ್ಕೆ ಮಾತ್ರ ಲಾಭಕಾರಿಯೆನಿಸೀತು. ಪಾಕಿಸ್ತಾನದ ಬಲೂಚಿಸ್ತಾನ-ವಾಯುವ್ಯ ಗಡಿಯ ರಾಜ್ಯಗಳಲ್ಲಿ ಜನತೆಯ ಅಸಂತೋಷ ಭುಗಿಲೆದ್ದಿದೆ. ಮಿಲಿಟರಿ ಆಡಳಿತ ಕೊನೆಗೊಂಡು ನಾಗರಿಕ ಸರಕಾರದ ರಚನೆಯಾಗಬೇಕೆಂಬ ಆಕ್ಷಿನ ಪ್ರಜೆಗಳ ಅಭಿಲಾಷೆ ಗವರ್ನರರ ನೇಮಕದಿಂದ ಹೆಗ್ಗೆಯೊಡೆದಿದೆ. ರಾಷ್ಟ್ರಪತಿ ಭುಟ್ಟೋರು ಮಿಲಿಟರಿ ಶಾಸನವನ್ನು ಕೊನೆಗೊಳಿಸುವ ಬಗ್ಗೆ ಯಾವುದೇ ಸೂಚನೆಯನ್ನು ನೀಡುವುದಿಲ್ಲ. ತನ್ನ ಕಾನೂನು ಸಚಿವರಿಗೆ ಸಂವಿಧಾನವೊಂದನ್ನು ರೂಪಿಸಲು ಅವರು ಕೇಳಿಕೊಂಡಿದ್ದಾರೆಂದು ವರದಿಗಳು. ಆದರೆ, ಈ ಕಾಲು ಶತಮಾನದಲ್ಲಿ ಇಂತಹ ಹಲವು ಭರವಸೆಗಳನ್ನು ಸಡೆದು ನಿರಾಕೆ ಹೊಂದಿದ ಪಾಕ್ ಪ್ರಜೆಗಳು ಭಂವನೆ ಮಾತ್ರದಿಂದಲೇ ತೃಪ್ತರಾಗುವ ಗಟ್ಟವನ್ನು ವಿೂರಿ ನಡೆದಿದ್ದಾರೆ. ಬಾಂಗ್ಲಾದ ಸಾಮಯಕರನ್ನು ವಂಚಿಸಿ, ಏಕ ಪಕ್ಷೀಯ ಸ್ವಾತಂತ್ರ್ಯ ಘೋಷಣೆಗೆ ಪ್ರೇರಣೆ ನೀಡಿದ್ದ ಈ ಮಹಾಶಯ ಭುಟ್ಟೋ ವಾಸ್ತವಿಕತೆಯನ್ನು ಕಡೆಗಣಿಸಿದರೆ, ಪಶ್ಚಿಮದಲ್ಲೂ ದಂಗೆ ಎದ್ದೀತು. ಈ ಭಯದಿಂದಲೇ ಅವರು ಅಫಘಾನಿಸ್ತಾನದ ಸರಕಾರದ ಸಹಕಾರ ಬಯಸಿ ಕಾಬೂಲಿಗೆ ಪರತ್ತಾನೆ ಹೋದದಿಂದೂ ಜಲ್ಲಿಂದ ನಿರಾಶರಾಗಿ ಮರಳಿದ ರಿಂದೂ ಹೇಳಲಾಗುತ್ತಿದೆ. ಹಣದ ಥೈಲಿಯಿಂದ ಲೋಕವನ್ನು ಮುಷ್ಟಿಯೊಳಗಿಡುವುದು ಸಾಧ್ಯವಿಲ್ಲವೆಂಬ ಅಮೆರಿಕೆಗೂ ದಂಡನೀತಿಯಿಂದ ಜನತೆಯನ್ನು ಆಳುವುದ ಸಾಧ್ಯವೆಂದು ಪಾಕ್ ಪ್ರಭೃತಿಗಳಿಗೂ ಮನವರಿಕೆಯೊದ ದಿನ ವಿಶ್ವ ಮತ್ತೊಂದು ತಿರುವು ಕಾಣುತ್ತದೆ.

●●

ಪರಶುರಾಮ ಆರಾಧಿಸಿದ

ಕದ್ರಿ ಕ್ಷೇತ್ರ

ಪ್ರಕೃತಿ ಸುಂದರವಾದ ತುಳುನಾಡಿನ ಪುಣ್ಯಕ್ಷೇತ್ರಗಳಲ್ಲಿ ಒಂದಾದ ಕದ್ರಿಯ ಶ್ರೀ ಮಂಜುನಾಥೇಶ್ವರ ದೇವಾಲಯ ಮಂಗಳೂರಿನಲ್ಲಿದೆ ಈ ರಮ್ಯತಾಣಕ್ಕೆ ಅಸಂಖ್ಯಾತ ಭಕ್ತರು ಬರುತ್ತಲೇ ಇರುತ್ತಾರೆ. ಇಲ್ಲಿ ಅನೇಕ ನಾಥ ಪಂಥದ ಸನ್ಯಾಸಿಗಳ ಯೋಗಿ ಮರನಿದ್ದು, ಅದರಲ್ಲಿ ಅನೇಕ ವಿಗ್ರಹಗಳಿವೆ ಮಂಜುನಾಥೇಶ್ವರ ದೇವಾಲಯದ ಪೂರ್ವ ದಿಕ್ಕಿನಲ್ಲಿರುವ ಬೆಟ್ಟದ ನೆತ್ತಿಯಲ್ಲಿ ಪ್ರಾಚೀನವಾದ ಗುಹೆಗಳು, ಗುಡಿ ಗೋಪುರಗಳು ಪೇರಳವಾಗಿವೆ

ವಿಶಿಷ್ಟವಾದ ಪ್ರಾಚೀನ ಗ್ರಂಥ. ಭಾರದ್ವಾಜ ಸಂಹಿತೆಯಲ್ಲಿ ಈ ದೇವಾಲಯದ ಮಹಿಮೆ ಉಲ್ಲೇಖಿಸಲ್ಪಟ್ಟಿದ್ದು, ಈಗ ದೇವಾಲಯವಿರುವ ಜಾಗ ಹಿಂದೆ ಕದಳೀ ವನವೆಂದು ಹೆಸರಾಗಿ, ಸಕಲ ದುರಿತ ಪರಿಹಾರಕವಾಗಿ, ಸರ್ವ ಸಿದ್ಧಿ, ಸೌಭಾಗ್ಯದಾತ ಪುಣ್ಯಕ್ಷೇತ್ರವಾಗಿತ್ತಂತೆ

ದೇವಾಲಯದ ಉತ್ತರ ಭಾಗದೆತ್ತರಕ್ಕೆ ಒಂದು ದೊಡ್ಡ ಕೆರೆಯೂ, ಏಳು ಪವಿತ್ರ ತೀರ್ಥಗಳೂ ಇವೆ ಆ ಕೆರೆಯಲ್ಲಿ ಹಿಂದೊಂದು ಶಿವಲಿಂಗ ಉದ್ಭವಿಸಿತ್ತಂತೆ. ಅದೇನಾಯಿತೋ ಗೊತ್ತಿಲ್ಲವಾದರೂ ಕಾಶಿಯಿಂದ ತಂದು ಗೋರಖನಾಥ ಈ ಕೆರೆಗೆ ಶಿವಲಿಂಗವೊಂದನ್ನು ಅಣ್ಣಿಪ್ಪ ದೈವ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೊಯ್ದಿತೆಂಬ ಪ್ರತೀತಿಯಿದೆ ಈಗಲೂ ಆ ಕೆರೆಯ ಆಳದಲ್ಲಿ ಉದ್ಭವ ಲಿಂಗವೊಂದಿದೆ ಈ ಸಪ್ತ ತೀರ್ಥಗಳ ಬಳಿಯಲ್ಲೇ ಒಂದು ಸಣ್ಣ ಗುಡಿ; ಆ ಗುಡಿಯೊಳಗೆ ಸದಾ ಕಾಲವೂ ಬಾಯಿಂದ ಜಲಧಾರೆ ಸುರಿಸುತ್ತಿರುವ ಶಿಲೆಯ ಗೋಮುಖವಿದೆ ಈ ಜಲಧಾರೆ ಕಾಶಿಯಿಂದ ಬರುವ ಗಂಗಾಜಲನೆಂದೇ ಭಕ್ತರು ನಂಬಿದ್ದಾರೆ. ಹಿಂದಿನ ಕಾಲದಲ್ಲಿ ವರ್ಷಾವಧಿ ಜಾತ್ರೆಯ ವೇಳೆಗೆ ಮಂಗಳಕರವಾದ ಹಲವು ವಸ್ತುಗಳೂ ಈ ತೀರ್ಥಧಾರೆಯಲ್ಲಿ ಕಂಡು ಬರುತ್ತಿದ್ದುವಂತೆ

ಪುರಾಣ ಕಾಲದಲ್ಲಿ ತನ್ನ ಸಕಲವನ್ನೂ ಪರಶುರಾಮ ಬ್ರಾಹ್ಮಣರಿಗೆ ದಾನ ವಿತ್ತನಷ್ಟೇ ತರುವಾಯ ಆತ ಶಿವನನ್ನೊಲಿಸಿಕೊಳ್ಳಲು ಕರಿಣ ತಪಶ್ಚರ್ಯಗಾರಂಭಿಸಿದ ಅವನ ಆಸಕ್ತ ಭಕ್ತಿಗೆ ಆ ಜಟಾಜೂಟಧಾರಿ ಸಂಪ್ರೀತನಾಗಿ ಅಶರೀರವಾಣಿಯ ಮೂಲಕ "ಭಾರ್ಗವರಾಮ, ನಾನು ಸುವರ್ಣ ಕದಳೀವನದ ರಸಕೂಟದಲ್ಲಿ ಆವಿರ್ಭವಿಸಿರುವೆ. ಅಲ್ಲಿಗೆ ತೆರಳಿ ನನ್ನನ್ನು ಪೂಜಿಸು" ಎಂದು ಅಶುಹಿದ ಸುವರ್ಣ ಕದಳೀ ವನವು ಸಮುದ್ರದ ನಡುನೆನಲ್ಲಿತ್ತು ಪರಶುರಾಮನು ಸಮುದ್ರರಾಜನನ್ನುಒಲಿಸಿ, ಅವನನ್ನು ಅಲ್ಲಿಂದ ಕಳುಹಿಸಿ ಆಜಾಗವನ್ನು ತಾನು ಪಡೆದುಕೊಂಡು ಬಹು ಕಾಲ ಅಲ್ಲಿ ಶಿವನನ್ನು ಅರ್ಚಿಸುತ್ತಿದ್ದನು ಕೊನೆಗೆ ಬ್ರಹ್ಮ, ವಿಷ್ಣು, ಮಹೇಶ್ವರಾದಿಗಳು ದಿವ್ಯ ಶಕ್ತಿಯಿಂದ ಒಂದಾಗಿ, ಶ್ರೀ ಮಂಜುನಾಥೇಶ್ವರನೆಂಬ ಹೆಸರಿನಿಂದ ಪರಶುರಾಮನಿಗೆ ದರ್ಶನವಿತ್ತು ಅಲ್ಲಿಯೇ ನೆಲೆಯೂರಿದರು. ಆಗ ಏಳುಕೋಟಿ ಮಹಾಮಂತ್ರಗಳೆಂದು ವಿಖ್ಯಾತವಾದ ಕೀರ್ತನೆಗಳು ತಾವಾಗಿಯೇ ಸಪ್ತ ತೀರ್ಥಗಳಾಗಿ ಹರಿದುವು. ಅಲ್ಲದೆ ಅಲ್ಲಿ ಭಾಗೀರಥಿ ತೀರ್ಥದೊಂದಿಗೆ ಪರಮೇಶ್ವರನ ಪುಸ್ಕರಣಿಯೂ ಆವಿರ್ಭವಿಸಿದುವು.

ಕದ್ರಿ ಕ್ಷೇತ್ರದ ಸ್ಥಳ ಪುರಾಣ ಇಷ್ಟೇ ಅಲ್ಲ. ನಾಥ ಪಂಥದ ಯೋಗಿಗಳಾದ ಮತ್ಸ್ಯೇಂದ್ರನಾಥ, ಗೋರಕ್ಷನಾಥ, ಚೌರಂಗಿನಾಥ (ಜೈ ಅಲಕ್ ನಿರಂಜನ್) ಮುಂತಾದವರು ಹುಟ್ಟಿ, ಇಲ್ಲಿಯೇ ಸಾಹಸಕೃತ್ಯ ಗೈದಿದ್ದಾರೆ ಮತ್ಸ್ಯೇಂದ್ರನಾಥಾವತಾರಿ ಶಿವ, ನೆಟ್ಟಿನ ರಾಣಿ ಮಂಗಲಾ ಮತ್ತು ಸ್ತ್ರಿಯಶಿಷ್ಯ ಗೋರಕನಾಥರೊಡನೆ ಸತೀರಾಜ್ಯದಿಂದ ವಾಪಸಾಗುತ್ತಿದ್ದಾಗ ಸುವರ್ಣ ಕದಳೀವನಕ್ಕೆ ಬಂದಿದ್ದರು ಇತರ ಶಿಷ್ಯರು ಅವರನ್ನು ಸ್ವಾಗತಿಸಿದರು. ಮತ್ಸ್ಯೇಂದ್ರನಾಥನು ಇಲ್ಲೊಂದು ಶಿವಲಿಂಗ ಸ್ಥಾಪಿಸಲು ನಿಶ್ಚಯಿಸಿ, ಕಾಶಿಯಿಂದ ಒಂದು ಶಿವಲಿಂಗ ತರಲು ಗೋರಕನಾಥನನ್ನು ಕಳುಹಿಸಿದ ಆದರೆ ಆತ ನಿರ್ದಿಷ್ಟ ಮುಹೂರ್ತಕ್ಕೆ ಬಾರದುದರಿಂದ ಮತ್ಸ್ಯೇಂದ್ರನಾಥ ಶಿವನ ಕುರಿತು ಉಗ್ರ ತಪಶ್ಚರ್ಯಗೊಳಗಾದಾಗ ಆ ನೆಲದಲ್ಲಿ ಈಶ್ವರ ಲಿಂಗ ರೂಪದಿಂದ ವೈದೋರಿದ ಆಗ ಕಾಶಿಯಿಂದ ಗೋರಕನಾಥನೂ ತಂದ ಶಿವಲಿಂಗವನ್ನು ನಿರುವಾಯವಾಗಿ ಮಂಜಿನ ಕರೆಗೆ ಹಾಕಿದರು. ಅಲ್ಲಿ ಗುಳಿಗ ದೈವ ಅದನ್ನು ಕಾಪಾಡುತ್ತಿತ್ತು. ಇದೇ ಲಿಂಗವನ್ನು ಅಣ್ಣಿಪ್ಪ ದೈವ ಧರ್ಮಸ್ಥಳಕ್ಕೊಯ್ದು, ಉಡುಪಿಯ ವಾದಿರಾಜ ಯತಿಗಳಿಂದ ಪ್ರತಿಷ್ಠಾಪಿಸಲ್ಪಟ್ಟಿದೆ

ಶಿವನುದ್ಭವಿಸಿದ ಪವಿತ್ರ ಕದ್ರಿ ಕ್ಷೇತ್ರದಲ್ಲಿ ಕೆಲವು ವರ್ಷಗಳಿಗೊಮ್ಮೆ ವೈಭವೋಪೇತ ಲಕ್ಷದೀಪೋತ್ಸವವಿದೆಯಲ್ಲದೆ ಶಿವರಾತ್ರಿಯಲ್ಲಿ ವಿಶೇಷ ಪೂಜೆಯಿದೆ ಕದ್ರಿಯಲ್ಲಿ ಪರಶುರಾಮ ತಪಸ್ಸಿಗೆ ಕುಳಿತ ಸ್ಥಳ ಹಾಗೂ ಪ್ರಾಚೀನ ಕಾಲದ ಆಯುಧಗಳನ್ನು ನೆಡಲಾದ ಯಜ್ಞಕುಂಡವಿದೆ ಇಲ್ಲಿರುವ ಪ್ರೇಕ್ಷಣೀಯ ಸ್ಥಳಗಳಲ್ಲಿ ದೇಗುಲದ ಪೂರ್ವ ಭಾಗಕ್ಕೆರುವ ಕುಂಡವೂ ಒಂದು ಈ ಕುಂಡದ ಭಸ್ಮದಲ್ಲಿ ಹೂತಿರುವ ೨೦ ವಿಗ್ರಹಗಳನ್ನು 12 ವರ್ಷಗಳಿಗೊಂದಾವರ್ತಿ ನಡೆಯುವ ಶಿವರಾತ್ರಿ ಪೂಜೆಯಲ್ಲಿ ವಿಸರ್ಜಿಸಲ್ಪಟ್ಟು ಬೇರೆ ವಿಗ್ರಹ ಸ್ಥಾಪನೆಯೊಗುವುದು ದೇವಾಲಯದ ಪ್ರಾಂಗಣದ ನಡುವೆ ಕಾಳಭೈರವ ಗುಡಿಯಿದೆ ಮತ್ತೆ ಸೀತಾಬಾವಿಯೆಂಬ ಚಿಕ್ಕ ಬಾವಿ ಮತ್ತು ಒಂದು ಗುಹೆಯಿದೆ

ದೇವಾಲಯದ ಪೂರ್ವದಲ್ಲಿ ಗೋರಕನಾಥ.ಮಂಜ್ಯೇಂದ್ರನಾಥ ಮೊದಲಾದವರ ಗುಡಿಗಳಿತ್ತ ಸಾಗಲು ಮೆಟ್ಟಿಲುಗಳಿವೆ. ಮತ್ತು 'ಪುರುಷ'ರೆಂಬ ಸಂನ್ಯಾಸ್ತಿ ಜನಾಂಗದವರ ಯೋಗೀಶ್ವರ ಮಠವಿದೆ. ಈ ಗುಡಿಗಳೊಂದಿಗೆ ನಾಗರ ಪಂಚಮಿಯಲ್ಲಿ ಜರುಗುವ ಬೋಳಾರನಾಥರಷಟ್ಕಾಭಿಷೇಕ ಹಾಗೂ ಜೀವ ಸಮಾಧಿಯನ್ನು ಕಾಣಲು, ಕಾಶಿ, ಶ್ರೀನಗರಗಳಿಂದ ಕೂಡ ಅಸಂಖ್ಯಾತ ಯಾತ್ರಿಕರು ಕಾಲ್ನಡಿಗೆಯಲ್ಲೇ ಬರುತ್ತಾರೆ.

ಟಿಕೇಟು ನೀಡಿಕೆಯ ಬಗ್ಗೆ

ವಡಬಾಗ್ನಿ ಭುಗಿಲೆಂದಿತು

ಹಲವು ರಾಜ್ಯಗಳಲ್ಲಿ ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ವಿಧಾನ ಸಭೆಗಳಿಗೆ ಚುನಾವಣೆಗಳು ನಡೆಯುವುದು ಸುನಿಶ್ಚಿತ.

ಇಂಡಿಕೇಟಿತರ ಪಕ್ಷಗಳು ಹತಪ್ರಭವಾದದ್ದು ಆಷ್ಟೇ ಖಂಡನಾತೀತ. ಆದುದರಿಂದ ಇಲ್ಲಿಗೇ ಬನ್ನಿರೆಂದು ಇಂಡಿಕೇಟಿಗರು ಕರೆಯುವುದೂ ರಾಜ್ಯಕೀಯ ಪುಡಾರಿಗಳು ಅಲ್ಲಿಯೇ ಆಶ್ರಯ ಪಡೆಯಲಿಳಸುವುದೂ ಸಮಂಜಸ

ಪಕ್ಷ ಬೆಳೆಯುವುದು ಅಧಿಕಾರವುಳಿಸಿಕೊಳ್ಳುವುದು-ಹೀಗೆ ಇಕ್ಕಡೆಯ ಪ್ರಧಾನೋದ್ದೇಶಗಳು ಇದರಿಂದ ಈಡೇರುವ ಸಲ್ಲಕ್ಷಣಗಳು ಸುಗೋಚರ.

ಮೊತ್ತಮೊದಲಿಗೆ ಅಭ್ಯರ್ಥಿಗಳನ್ನು ಸಿಫಾರಸು ಮಾಡಿದ ಕೀರ್ತಿ ಇಂಡಿಕೇಟಿನ ಜಿಲ್ಲಾ ಸಮಿತಿಗಳಿಗೆ. ಆದರೆ, ಈ ಸಿಫಾರಸುಗಳ ಹಿಂದೆಯೇ ವಿರೋಧ ಅಭಿಪ್ರಾಯಗಳೂ ಮೂಡಿದುವು ಹಾಸವ, ಬೆಳಗಾಂವಿ, ದಕ್ಷಿಣ ಕನ್ನಡ-ಮೊದಲಾದೆಡೆ ತೀವ್ರ ವಿರೋಧ

ಒಟ್ಟನಲ್ಲಿ ರಾಜ್ಯದ ಇಂಡಿಕೇಟ್ ಸಮೂಹವಾದಿ ವೇದಿಕೆಗೆ ತೀರ ನಿರಾಸೆ 'ಅದು ತತ್ವ ನಿಷ್ಠೆ ಬಿಟ್ಟ ಸಿಫಾರಸುಗಳು' ಎಂದು ಕಡುತರದ ಆರೋಪ. ಕೇಂದ್ರ ಸಂಸ್ಥೆ ಸೂಚಿಸಿದ್ದ ಕನಿಷ್ಠ ಅರ್ಹತೆಗಳನ್ನು ಜಿಲ್ಲಾ ಸಮಿತಿಗಳು ಗಾಳಿಗೆ ತೂರಿವೆಯೆಂದು ಕಡುಗೋಸ.

ಜಿಲ್ಲಾ ಸಮಿತಿಯು ಸಿಫಾರಸು ಮಾಡಿದ ಹೆಸರುಗಳಿಂದಲೇ ರಾಜ್ಯ ಸಮಿತಿಯು ಆಯ್ಕೆ ನಡೆಸಬೇಕು; ರಾಜ್ಯ ಸಮಿತಿ ಕಳಿಸಿದ ಹೆಸರುಗಳನ್ನೇ ಕೇಂದ್ರ ಸಮಿತಿ ಒಪ್ಪಿಕೊಳ್ಳಬೇಕು

ಇಲ್ಲವಾದರೆ, ಪಕ್ಷದಲ್ಲಿ ಛಿದ್ರ ಖಂಡಿತ ೧೯೬೭ರಲ್ಲಿ ಕಾಂಗ್ರೆಸ್ಸಿನ ಅವಸಾನಕ್ಕೆ ಕಾಲ ಪರಿಪಕ್ವವಾಗುವುದಕ್ಕೆ ಈ ಸಂಪ್ರದಾಯನವನ್ನು ಮಿರಿದ್ದೂ ಒಂದು ಕಾರಣ.

ಆದುದರಿಂದ ಜಿಲ್ಲಾ ಸಮಿತಿಗಳ ಸಿಫಾರಸುಗಳನ್ನು ರಾಜ್ಯ ಸಮಿತಿಯು ತಳ್ಳಿಹಾಕ ಬೇಕೆಂಬ ಸಮಂಜಸವಾದಿ ವೇದಿಕೆಯ ಬೇಡಿಕೆ ನೂನ್ಯವಾದಿತೆ? ಕೆಲವೆಡೆಯೊದರೂ ಆಗ ಬಹುದು ದೇವರಾಜ ಅರಸರು ಹಾಗನ್ನುತ್ತಾರೆ ಆದರೆ, ಹೆಚ್ಚಿನೆಡೆ ಅಸಾಧ್ಯ.

ವೇದಿಕೆಯು ಇವರಿಗೆ ಟಿಕೇಟು ಬೇಡವೆಂದು ಎಚ್ಚರಿಸಿದೆ—೧೯೭೧ರ ಲೋಕ ಸಭಾ ಚುನಾವಣಾನಂತರ ಇಂಡಿಕೇಟಿಗೆ ಬಂದವರು, ಸ್ವಾರ್ಥಕ್ಕೆಂದು ಪದವಿ ಉಪಯೋಗಿಸಿದ ಇತಿಹಾಸವುಳ್ಳವರು, ರಾಜ್ಯ ಕೀಯರಂಗಕ್ಕೆ ಹೊಸತಾಗಿ ಧುಮುಕಿ ಬಂದವರು, ಪಕ್ಷದ ನೀತಿ ಕಾರ್ಯಗತಗೊಳಿಸಲು ಅಶಕ್ತರಾದವರು, ಆಸ್ತಿವಂತರು ಜಾತಿವಂತರೊಡನೆ ಸಂಪರ್ಕವಿಟ್ಟುಕೊಂಡವರು, ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಮೌಲ್ಯದ ಆಸ್ತಿ ಹೊಂದಿರುವವರು.

ಈ ಪಂಚಶೀಲಗಳಲ್ಲಿ ಒಂದೊಂದರಿಂದ ಅಷ್ಟಷ್ಟು ಗಾಳಿಸಿ ತೆಗೆದರೆ, ಜಿಲ್ಲಾ ಸಮಿತಿಯ ಸಿಫಾರಸುಗಳೆಲ್ಲವೂ ಗಾಳಿಯಲ್ಲಿ ತೂರಿ ಹೋಗುತ್ತವೆ.

ಆಗ ರಾಜ್ಯ ಸಮಿತಿಯು ಬೇರೆಯೇ ಪಟ್ಟಿಯೊಂದನ್ನು ತಯೂರಿಸ ಬೇಕಾಗುತ್ತದೆ.

ಆಗ ಹಳ್ಳಿ—ಡಿಳ್ಳಿಗಳು ಒಂದಾಗ ಬಹುದು, ರಾಜ್ಯ ಸಮಿತಿಯು ಸಿಫಾರಸುಗಳು ಪೊಳ್ಳಾಗ ಬಹುದು.

ಮಹಾರಾಷ್ಟ್ರದ ಭಾವಿ ಮುಖ್ಯಮಂತ್ರಿಯೂರೆಂದು ನಿರ್ಣಯಿಸುವ ಅಧಿಕಾರವನ್ನು, ಪ್ರಧಾನಿ ಗಾಂಧಿಗೆ ವೀರ ಮರಾಠಿಗರು ಒಪ್ಪಿಸಿಬಿಟ್ಟಿದ್ದಾರಂತೆ

ಹಾಗೆಯೇ ಯೂರು ಯೂರು ಎಮ್ಮೆಲ್ಯೆ ಎಂದು ಗೊತ್ತುಮಾಡುವ ಅಧಿಕಾರವನ್ನೂ ತಮ್ಮ ಪ್ರಶ್ನಾತೀತ ನಾಯಿಕೆ ಶ್ರೀಮತಿ ಗಾಂಧಿಗೇ ಕೊಟ್ಟು ಬಿಟ್ಟರೆ ಆಗ ಅದು ಪ್ರಶ್ನಾತೀತವಾಗಬಹುದೆ?

ಜಿಲ್ಲೆ—ರಾಜ್ಯಗಳಲ್ಲಿ ಯೂನ ಗೊಂದಲ ಭಿನ್ನಮತಗಳಿಗೂ ಎಡೆಯಿಲ್ಲದಂತಾಗುತ್ತದೆಯೆ?

ದೇಶದಲ್ಲಿ ಸರ್ವಾಧಿಕಾರಕ್ಕೆ ವಿರೋಧವಿದ್ದರೂ ಪಕ್ಷದೊಳಗೆ ಶಿಸ್ತಿನ ಒಂದೂಕಿನಿಂದ ಸರ್ವಾಧಿಕಾರವನ್ನು ರೂಢಿಸುವುದು ಅನಿವಾರ್ಯವೆಂದು ಶ್ರೀಮತಿ ಗಾಂಧಿ ಈಗಾಗಲೇ ಕಂಡುಕೊಂಡಿದ್ದಾರೆ

●●

'ಸರ್ವ ಸಿದ್ಧಿ ಮಹಾಸ್ಥಾನಂ| ಸರ್ವ ಸೌಭಾಗ್ಯದಾಯತು| ಎಂದು ಪ್ರಸಿದ್ಧವಾದ ಕದಿರಿಗೆ ಮಂಗಳೂರಿನಿಂದ ಒಂದು ವೈಲು ದೂರ, ಸನಿಹದಲ್ಲೇ ಸಮುದ್ರದ ದಡ, ಹಲವಾರು ಮರಗಳಿಂದಾವೃತವಾಗಿ ಪ್ರಶಾಂತ ಗಾಳಿ ಬೀರುತ್ತಿರುವ ಗುಡ್ಡ—ಇವುಗಳ ರಮಣೀಯತೆಯಲ್ಲಿ ಇದು ಮೆರೆಯುತ್ತಿದೆ

—ಶೀ ಹ. ರಾಮಕೃಷ್ಣ ಶಾಸ್ತ್ರಿ

●●

ರಾಜ್ಯ ಪ್ರಶಸ್ತಿ

ಮಲ್ಪೆಯ ಕೊರೊನೇಟ್ ಕ್ಯಾಸಿಂಗ್ ಕಂಪೆನಿಯ 1970—1971ರ ಅವಧಿಯ ಉನ್ನತ ನಿರ್ಯಾತಕ್ಕಾಗಿ ರಾಜ್ಯಪ್ರಶಸ್ತಿಗಳಿಸಿದೆ. ಈ ರೀತಿ ಪ್ರಶಸ್ತಿಗಳಿಸುತ್ತಿರುವುದು ಇದು ನಾಲ್ಕನೆಯ ಬಾರಿಯಾಗಿದೆ. ಕಂಪೆನಿಯ ಮೂಲಕ ಶ್ರೀ ಎಂ ಮಧ್ವರಾಜರು ತಾ. 19ರಂದು ಉಪರಾಷ್ಟ್ರಪತಿ ವಿ ವಿ ಎಸ್ ಜಾರ್ಕರವರಿಂದ ನಿರ್ಯಾತ ಫಲಕವನ್ನು ಸ್ವೀಕರಿಸಿದರು ರಾಜ್ಯಪಾಲ ಶ್ರೀ ಧರ್ಮವೀರರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ನಿರೀಕ್ಷಿಸಿರಿ!

ಪ್ರಜಾರಾಜ್ಯ ವಿಶೇಷಾಂಕ

ಪ್ರಸಿದ್ಧ ಲೇಖಕರನೇಕರ ವೈಶಿಷ್ಟ್ಯ ಪೂರ್ಣ ಲೇಖನಗಳಿಂದೊಡಗೂಡಿ

26—1—72ರಂದು ಪ್ರಕಟವಾಗುವುದು

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ

ನವಯುಗ ಪ್ರೆಸ್, ಉಡುಪಿ.

ಮೂರುಕಟ್ಟಿಯ ಕಾಲು ಮುರಿಯಬೇಡಿ

ಮೂರುಕಟ್ಟಿಯಲ್ಲಿ ಬೆಲೆಯೇರಿಕೆ ಮಿತಿ ಮೀರುತ್ತಿದೆ. ಆವಶ್ಯಕ–ಅನಾವಶ್ಯಕ ವಸ್ತುಗಳೆನ್ನದೆ ಎಲ್ಲವುಗಳ ಧಾರಣೆಯೂ ಏರಿದೆ; ಏರುತ್ತಲೇ ಇದೆ.

ಭಾರತ—ಪಾಕ್ ಸಮರಾನಂತರ ಈ ಏರಿಕೆಗೆ ರಾಕೆಟ್‌ವೇಗ ಬಂದಿದೆ. ಸರಕಾರವು ಸಕ್ಕರೆಯ ಮೇಲೆ ಭಾಗಶಃ ಬೆಲೆ ನಿಯಂತ್ರಣವನ್ನು ಘೋಷಿಸಿದ ಕ್ಷಣದಿಂದ ಆದರ ವೇಗ ಮನೋವೇಗದೊಡನೆ ಸ್ಪರ್ಧಾತ್ಮಕವಾಗಿದೆ.

ಕೆಲೋ ಎರಡು ರೂಪಾಯಿಗಳ ಅತ್ತಿತ್ತ ಇದ್ದ ಸಕ್ಕರೆಯೊಗ ಮೂರು ರೂಪಾಯಿ ಕೊಟ್ಟರೂ ಸಿಗದು. ರಾಷ್ಟ್ರೀಯ ರಕ್ಷಣಾನಿಧಿಗೆ 'ಹೇಗಳ' ಕಾಣಿಕೆ ನೀಡಿದ ವ್ಯಾಪಾರಿ ವರ್ಗ ಸಕ್ಕರೆಯನ್ನು ಕೂಡಿ ಹಾಕುವಲ್ಲಿ ಮುಗ್ನನಾಗಿದೆ.

ಲಾಭಬಡಕತನದ ಆಸೆಯಿಂದ ತನ್ನ ಬಂಡವಾಳವನ್ನು ಅಧಿಕ ಲಾಭಬರುವ ವಸ್ತುಗಳಲ್ಲಿ ಇವರು ತೊಡಗಿಸಿದ್ದಾರೆ, ಸಕ್ಕರೆಯನ್ನು ಸಂಗ್ರಹಿಸಿಟ್ಟಿದ್ದಾರೆ. ಬಹಿರಂಗ ಮೂರುಕಟ್ಟಿಯಲ್ಲಿ ಸಕ್ಕರೆಯ ಕಾಲು ಕೊಯ್ದಿದ್ದಾರೆ. ಅದು ಅವರ ಗೋದಾಮುಗಳಲ್ಲಿ ಮುಮಡಿ ಬಿದ್ದಿದೆ.

ದೇಶದಲ್ಲಿ ಸುಗ್ಗಿಯ ಕಾಲ. ಸುಗ್ಗಿಯೂ ದರೊ ನಭೂತೋ ನಭವಿಷ್ಯತಿ. ವಿದೇಶಗಳಿಂದ ಆಹಾರ ಧಾನ್ಯಗಳ ಆಯಾತ ಈ ವರ್ಷವಿಲ್ಲ. ನಮಗೆ ಬೇಕಾದಷ್ಟು ನಮ್ಮಲ್ಲೇ ಬೆಳೆದಿದೆ.

ಮತ್ತೇಕಿಷ್ಟು ಬೆಲೆಯೇರಿಕೆ? ಅಭಾವ? ಅಭಾವ ಕೃತಕವಾಪದ್ದು, ಏರಿಕೆ ಲಾಭಬಡಕತನದ್ದು.

ನಗರದ ಆಸ್ತಿಪಾಸ್ತಿಗಳಿಗೊಂದು ಮಿತಿ ಹೇರುವ ವಿಚಾರವಿದೆ ವ್ಯಾಪಾರದಲ್ಲಿ ತೊಡಗಿಸುವ ಬಂಡವಳಕ್ಕೊಂದು ಮಿತಿಹಾಕ ಬೇಕೆ? 'ಸಂಗ್ರಹ'ಕ್ಕೊಂದು ಮಿತಿ ಬೇಕೆ? ಶ್ರೀಮಂತ ವ್ಯಾಪಾರಿಗಳು ತಮ್ಮ ಸಂಪನ್ನ ತೆಯ ಬಲದಿಂದ ಮೂರುಕಟ್ಟಿಯ ಕಾಲು ಮುರಿದು ಹಾಕಿದರೆ, ಶ್ರೀ ಸಾಮಾನ್ಯನ ಪಾಡೇನು?

ಸರಕಾರ ಮತ್ತು ಮಾತಿಗೆ ಶ್ರೀಸಾಮಾನ್ಯನ ಉದ್ಧಾರದ ಮಾತಾಡುತ್ತಿದೆ ಬೆಲೆಯೇರಿಕೆಯನ್ನು ತಡೆಯಲು ಶಕ್ತಿಮೀರಿ ಶ್ರಮಿಸುವ ಮಾತಾಡುತ್ತಿದೆ.

ಆದರೆ, ಈಗ್ಗೆ ಎರಡು ವರ್ಷಗಳಿಂದ ಅಂತಹ ಪ್ರಯತ್ನವೇನೂ ನಡೆಯಲಿಲ್ಲ. ಸುಗ್ಗಿಯು ಹೇರಳವಾದರೂ ಧಾರಣೆಯಿಳಿಯಲಿಲ್ಲ.

ಯುದ್ಧಾನಂತರದ ಮೂರುಕಟ್ಟಿ ಭಾರಿ ತೇಜಿ. ಆಕ್ರಮ ದಾಸ್ತಾನುಗಾರರನ್ನು ಹಿಡಿದ ನಾಟಕವೂ ರಾಜ್ಯದ ಕೆಲವೆಡೆ ನಡೆಯಿತು. ಜನಪ್ರಿಯ ಸರಕಾರ ರಚನೆಯೂದ ಮೇಲೆ ನಿವೃತ್ತರಾಗಲಿದ್ದ ರಾಜ್ಯಪಾಲ ಧರ್ಮವೀರರು ಬೇಗನೇ ನಿವೃತ್ತರಾಗಲಿದ್ದಾರೆಂದು ವದಂತಿ.

ಇವರ ನಿವೃತ್ತಿಗೆ ಇಂಡಿಕೇಟು ಪ್ರಯತ್ನನಡೆಸುತ್ತಿದೆ. ಇಂಡಿಕೇಟಿನ್ನು ಅಕ್ರಮ ವ್ಯಾಪಾರಿ ವರ್ಗ ಒತ್ತಾಯಿಸುತ್ತಿದೆಯೆಂದೂ ಕೆಂ ವದಂತಿ.

ರಾಜ್ಯಪಾಲ ಧರ್ಮವೀರರ ಕ್ರಮಗಳನ್ನು ರಾಜ್ಯದ ಇಂಡಿಕೇಟು ಮನಸಾ ಒಪ್ಪುತ್ತಿಲ್ಲವೆಂಬುದು ಹಳೆಯ ದೂರು. ಮುಂದೆ ರಾಜ್ಯಪಾಲರಾಗಿ ಬರಲಿರುವ ಸುಬ್ಬಾಡಿಯೊರನ್ನು ತಮಗೆ ಬೇಕಾದಂತೆ ಕುಣಿಸ ಬಹುದೆಂದು ಇಂಡಿಕೇಟಿನ ಆಶಯವಿರಬಹುದು.

ದೇಶದ ಅರ್ಥ ನೀತಿಯಲ್ಲಿ ತಪ್ಪಿದೆಯೆಂದೇ ಬೆಲೆಯೇರುತ್ತಿದೆ. ವ್ಯಾಪಾರಿ ವರ್ಗದ ಲಾಭಬಡಕತನವನ್ನು ನಿಯಂತ್ರಿಸದೆ ಹೋದರೆ, ಜನ ನಾಯುತ್ತದೆ. ಕೃತಕ ಅಭಾವ ಪರಿಸ್ಥಿತಿ ನಿರ್ಮಿಸುವುದೆಂದಿಂದ ಕೆಲವೇ ಜನರಲ್ಲಿ ಸಂಪತ್ತು ಕೂಡುತ್ತಾದೆ. ಬಡವರು ದಟ್ಟ ದರಿದ್ರರಾಗುತ್ತಾರೆ.

ಇಂದಿನ ಶ್ರೀಮಂತ ವರ್ಗದ ಮುಂದೆ ಶ್ರೀ ಸಾಮಾನ್ಯ ತಲೆ ಬಾಗುವ ಪರಿಸ್ಥಿತಿ ದೂರವಾಗುತ್ತಿದೆ. ಅಭಾವ ಪರಿಸ್ಥಿತಿಯನ್ನು ನಿರ್ಮಿಸಿದರೆ, ಗೋದಾಮುಗಳನ್ನೇ ಜನರು ಲೂಟಿ ಮಾಡಲೂ ಹಿಂಜರಿಯಲಾರರು.

ಹಿಂದೊಮ್ಮೆ ಆಹಾರ ಧಾನ್ಯಗಳ ಮೂಟೆ-ಮೂಟೆಗಳನ್ನೇ ಲೂಟಿ ಮಾಡಿದ ಘಟನೆಗಳು ಇಲ್ಲಲ್ಲಿ ನಡೆದಿದ್ದುವು. ಕಾನೂನು ನ್ಯಾಯಗಳನ್ನು ಜನತೆ ಕೈಗೆ ತೆಗೆದು ಕೊಂಡರೆ ಅರಾಜಕತೆ ಮೂಡುವುದು.ಆದುದರಿಂದ ಆದಕ್ಕೆ ಮೊದಲೇ ಅಧಿಕಾರಿಗಳೂ ವ್ಯಾಪಾರಿಗಳೂ ಎಚ್ಚರಿಕೆ ವಹಿಸುವುದು ಅಗತ್ಯ.

●●

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ಉಡುಪಿ ಲಾ ಕಾಲೇಜಿನ ವಾರ್ಷಿಕೋತ್ಸವ

ಉಡುಪಿ ಲಾ ಕಾಲೇಜಿನ ವಾರ್ಷಿಕೋತ್ಸವವು ತಾ. 18 ರಂದು ಜಿಲ್ಲಾ ಸೆಶನ್ಸ್ ಜಡ್ಜ್ ಶ್ರೀ ಆರ್. ಜಿ. ದೇಸಾಯಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ವಿಜಯಾ ಬ್ಯಾಂಕಿನ ಚೀಯರ್‌ಮೇಸ್ ಶ್ರೀ ಎಂ. ಸುಂದರರಾಮ ಶೆಟ್ಟರು ಮುಖ್ಯ ಆತಿಥಿಗಳಾಗಿದ್ದರು. ಅರಂಭದಲ್ಲಿ ಕಾಲೇಜ್ ಯೂನಿಯನ್‌ನ ಅಧ್ಯಕ್ಷ ಶ್ರೀ ಕೆ. ಮಂಜುನಾಥ ರೈಯವರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿ ಕೊಟ್ಟರು. ಪ್ರೊ. ಪರಮೇಶ್ವರ ಐತಾಳರು ಸಮಾರಂಭಕ್ಕೆ ಶುಭ ಕೋರಿ ಬಂದ ಸಂದೇಶಗಳನ್ನು ಓದಿದರು. ಪ್ರಿನ್ಸಿಪಾಲ್ ಶ್ರೀ ಡಿ. ಜಿ. ದೇಶಪಾಂಡೆಯವರು ಕಾಲೇಜಿನ ಪ್ರಗತಿಪರ ಪರಿಯೊಪ್ಪಿಸಿದರು.

ಶ್ರೀ ಎಂ ಸುಂದರರಾಮ ಶೆಟ್ಟರು ಬಹು ಮೊನ ವಿತರಣೆ ಗೈದು ಮಾತಾಡುತ್ತಾ, ಕಾನೂನುಗಳ ಕಾಯೋಚಿತ ಪರಿವರ್ತನೆ ಸ್ವಾಗತಾರ್ಹವೆಂದು ತಿಳಿಸಿ ಲಾ ಕಾಲೇಜಿನ ಉದ್ದೇಶ ಕೇವಲ ಲಾ ಪದವೀಧರರನ್ನು ನಿರ್ಮಿಸುವುದೊಂದೇ ಆಗಿರದೆ ಪ್ರಜಾಪ್ರಭುತ್ವದ ಯಶಸ್ಸಿಗೆ ಕಾರಣವಾದ ಕಾಯಿದೆಯ ಜ್ಞಾನ ಎಲ್ಲರಿಗೂ ದೊರಕುವಂತೆ ಮಾಡುವ ಉದ್ದೇಶದಿಂದಲೂ ಕೂಡಿರಬೇಕೆಂದು ಅಭಿಪ್ರಾಯ ಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಆರ್. ಜಿ. ದೇಸಾಯಿಯವರು ಮೂತನಾಡಿ ಕಾಯಿದೆಯನ್ನು ರಚಿಸುವವರು ಮತ್ತು ಅದನ್ನು ಕಾರ್ಯಾಚರಣೆಗೆ ತರುವವರು ತಮ್ಮ ಕೆಲಸದಲ್ಲಿ ತಪ್ಪಿದರೆ ಸ್ವತಂತ್ರವಾಗಿ ಕಾರ್ಯವೆಸಗುವ ನ್ಯಾಯಾಂಗ ಪದ್ಧತಿ ಪ್ರಜೇಶಿಸಬೇಕಾಗಿದೆ. ಸತ್ಯ ಕೋಧನೆಯಲ್ಲಿ ಲಾಯರುಗಳು ನ್ಯಾಯಾಂಗಕ್ಕೆ ನೆರವಾಗಬೇಕಾಗಿದೆ ಎಂದು ಹೇಳಿದರು.

ಅಂತ್ಯದಲ್ಲಿ ಕಾರ್ಯದರ್ಶಿ ಶ್ರಿ ಪಿ. ಪಿ. ಚಂದ್ರಶೇಖರನ್‌ರವರು ಧನ್ಯವಾದ ಅರ್ಪಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ಸಂಗೀತ, ಕನ್ನಡ ಹಾಗೂ ಇಲಯಲಿ ನಾಟಕಗಳು ಮತ್ತು ಯಕ್ಷಗಾನ ಬಯಲಾಟ ಯಶಸ್ವಿಯಾಗಿ ಜರಗಿತು.

ಮಂಗಳೂರು ಮಹಿಳಾ ಸಭೆಯ ವಜ್ರೋತ್ಸವ

ತಾ. 15ರಂದು ಮಂಗಳೂರಿನ ಸುರಭಿವನದಲ್ಲಿ ಸೇರಿದ ಮಹಿಳಾ ಸಭಾದ ವಜ್ರೋತ್ಸವವನ್ನು ಕೇಂದ್ರ ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನಯಾನ ಸ್ಟೇಟ್ ಸಚಿವೆ ಡಾ। ಸರೋಜಿನಿ ಮಹಿಷಿಯವರು ಉದ್ಘಾಟಿಸಿದರು. ಆರಂಭದಲ್ಲಿ ಶ್ರೀಮತಿ ಸರೋಜಾ ಎಂ. ವಿ. ರಾವ್ ಪ್ರಾರ್ಥನೆ ಮಾಡಿದರು. ಸಭಾಧ್ಯಕ್ಷೆ ಶ್ರೀಮತಿ ಮುಕ್ತಾ ಜೆ ಪಂಡಿತ್ ಸ್ವಾಗತಿಸಿದರು. ನಾರಿನ ಕಾರ್ಯದರ್ಶಿನಿ ಶ್ರೀಮತಿ ಭವಾನಿ ಆಡಾಪ ಆವರು ಪುಭಕೋರಿ ಬಂದ ಸಂದೇಶಗಳನ್ನೋದಿದರು. ಶ್ರೀಮತಿ ರತ್ನ ಹೆಗ್ಗಡೆಯವರು ಸಭೆಯ ಕುರಿತು ತನ್ನ ಅನುಭವ ಕಥನ ಮಾಡಿದರು. ಸ್ಮರಣ ಸಂಚಿಕೆಯನ್ನೂ ಶ್ರೀಮತಿ ಯಮುನಾ ಆರ್. ರಾವ್ ಬಿಡುಗಡೆಗೊಳಿಸಿದರು. ಶ್ರೀಮತಿ ಕಮಲಾ ಎಸ್. ಅಳ್ವ ಮತ್ತು ಶ್ರೀಮತಿ ಶಾಂತೇರಿ ಪ್ರಭುರವರು ಭಾವಚಿತ್ರಗಳ ಆನಾವರಣ ಮಾಡಿದರು.

ಡಾ। ಮಹಿಷಿಯವರು ಮಹಿಳಾ ಸಭೆ ವಜ್ರೋತ್ಸವ ಆಚರಿಸುತ್ತಿರುವುದಕ್ಕಾಗಿ ಸಂತೋಷ ವ್ಯಕ್ತಪಡಿಸಿ ಸಭೆಯು 60 ವರ್ಷಗಳಿಂದ ಯಶಸ್ವಿಯಾಗಿ ಮುನ್ನಡೆದುದು ಅಭಿಮಾನಾಸ್ಪದವೆಂದರು. ಇಂದಿನ ಮಹಿಳೆ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ವಿಕಾಸ ಮೊದಿ ಅವಕಾಶ ದೊರೆತರೆ ಸಮರ್ಥವಾಗಿ ನಿರ್ವಹಿಸುವ ಸಾಮರ್ಥ್ಯವಿದೆಯೆಂದು ತೋರಿಸುತ್ತಿರುವುದು ಮಹಿಳೆಯರಿಗೆ ಮಾತ್ರವಲ್ಲ ರಾಷ್ಟ್ರಕ್ಕೇ ಭೂಷಣವೆಂದು ನುಡಿದು ವೇದಕಾಲದಿಂದ ಇಂದಿನವರೆಗಿನ ಭಾರತೀಯ ಮಹಿಳೆಯ ಸ್ಥಾನಮಾನಗಳ ಚಿತ್ರಣವನ್ನು ವೇದೋಪನಿಷತ್ತು, ಸ್ಮೃತಿ ಪುರಾಣ ಬಸವಣ್ಣನವರ ವಚನ ನುತ್ತು ಕವಿ ಕಾಳಿದಾಸ್ತೋಕ್ತಿ ಮೊದಲಾದುವುಗಳ ಉದಾಹರಣೆಯೊದಿಗೆ ವಿವರಿಸಿದರು ಮಹಿಳೆಗೆ ಶಿಕ್ಷಣ ಮತ್ತು ಅಧಿಕಾರದ ಅರಿವು ಆಗಬೇಕಾಗಿದೆ. ಜೀವನದಲ್ಲಿ ವೈಯಕ್ತಿಕ ಸಮಸ್ಯೆಗಳನ್ನೆದುರಿಸಿ ನಂತರ ಇನ್ನೊಬ್ಬರ ಸಮಸ್ಯೆಗಳನ್ನು ಬಗೆಹರಿಸುವ ಶಕ್ತಿ ಹೊಂದಿದಾಗ ಮಾತ್ರ ಸಮಾಜಸೇವೆ ಸಾಧ್ಯ—ಸಾರ್ಥಕ ಎಂದು ಹೇಳಿ ಸಮಾಜ ಸೇವಾಕಾರ್ಯದಲ್ಲಿ ಕಾರ್ನಾರ್ಡ್ ಸದಾಶಿವ ರಾವ್, ಗೋವಿಂದೆ, ರಾಜಾರಾಮ ಮೋಹನರಾಯ್‌ರವರ ಸೇವೆ ಸಾಧನೆಗಳನ್ನ ಸ್ಮರಿಸಿದರು. ಹೆಂಗಸರಿಗೆ ಹೆಚ್ಚಿನ ವಿದ್ಯಾಭ್ಯಾಸ ಯೊಗ ಎಂಬ ಸಮಾಜದ ಸವಾಲನ್ನು ಎದುರಿಸಿ ಶಿಕ್ಷಣದ ಉಪಯೋಗ ಹೊಂದಿ ಮಹಿಳೆಯರು ಸಮಾಜ ಉನ್ನತಿಗಾಗಿ ಶ್ರಮಿಸಲು ಮುಂದಾಗಬೇಕೆಂದು ಮಹಿಳೆಯರಿಗೆ ಕರೆನೀಡಿದರು ಡಾ। ಮಹಿಷಿಯವರು ಸಮಾರಂಭದಲ್ಲಿ ಸ್ವಾಗತಭಾಷಣ, ಸಂದೇಶವಾಚನ, ಅನುಭವ ಕಥನಗಳೆಲ್ಲವೂ ಇಂಗ್ಲಿಷಿನಲ್ಲೇ ನಡೆದಾಗ ಸೋಜಿಗಗೊಂಡು ಮಹಿಳೆಯರಿಗೆ ಇಂಗ್ಲೀಷ್ ಮೋಹ ಯೂಕೆ ಎಂಬ ಸವಾಲನ್ನು ಹಾಕಿ ತಮ್ಮ ಉದ್ಘಾಟನಾಭಾಷಣವನ್ನು ಕನ್ನಡದಲ್ಲಿಯೇ ಮಾಡಿದರು. ಕೊನೆಯಲ್ಲಿ ಆವರು ಮಂಗಳೂರಿನ ಮಹಿಳಾ ಸಭೆ ಮಂಗಳೂರಿಗೆ, ಕನ್ನಡನಾಡಿಗೆ, ಭಾರತಕ್ಕೆ ಕೀರ್ತಿ ತರುವ ಸಂಸ್ಥೆಯಾಗಿ ಬೆಳೆದು ಮುಂದಿನ ಪೀಳಿಗೆಗೆ ದಾರಿದೀಪವಾಗಿರಲೆಂದು ಹಾರೈಸಿದರು.

ಅಂತ್ಯದಲ್ಲಿ ಶ್ರೀಮತಿ ಆನಂದೀ ಸದಾಶಿವ ರಾವ್‌ರವರು ಧನ್ಯವಾದಗಳನ್ನರ್ಪಿಸಿದರು.

ಕೊನೆಯಲ್ಲಿ ಮನರಂಜನಾ ಕಾರ್ಯಕ್ರಮ ನಗಳದ್ದವು.

ಕಾನ್ವೆಂಟ್ ಹೈಸ್ಕೂಲ್ ವಾರ್ಷಿಕೋತ್ಸವ

ಉಡುಪಿಯ ಸೈಂಟ್ ಸಿಸಿಲೀಸ್ ಕಾನ್ವೆಂಟ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. 19ರಂದು ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ। ಪಿ. ಗುರುರಾಜ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ವೀರೆ ವೀರೆ ಸ್ಪರ್ಧೆಗಳಲ್ಲಿ ಜಯಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನವಿತ್ತ ಅಧ್ಯಕ್ಷರು ಶಿಕ್ಷಣದ ವಿವಿಧ ಸಮಸ್ಯೆಗಳನ್ನು ವಿಶ್ಲೇಷಿಸುತ್ತಾ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರ ಪರಸ್ಪರ ಸಹಕಾರ ಸೌಹಾರ್ದಗಳಿದ್ದರೆ ಅದು ಸಫಲವಾಗಲಾರದೆಂದು ತಿಳಿಸಿದರು. ವಾರ್ಷಿಕೋತ್ಸವದ ಅಂಗವಾಗಿ ಇಂಗ್ಲೀಷ್ ನಾಟಕ, ಚಿಕ್ಕ ಮಕ್ಕಳಿಂದ ಶಿಶುಗೀತೆಗಳೂ 'ಹನ್ನೆರಡು ಮಂದಿ ಸಹೋದರರು' ಎಂಬ ಬೈಬಲಿನ ಕಥೆಯೊಂದರ ಹಿನ್ನೆಲೆಯಲ್ಲಿನ ಕನ್ನಡ ನಾಟಕವೂ ಪ್ರದರ್ಶಿಸಲ್ಪಟ್ಟಿತು.

ಉಡುಪಿ ಮಹಿಳಾ ಸಮಾಜ—ವಸ್ತು ಪ್ರದರ್ಶನ

ಉಡುಪಿ ಮಹಿಳಾ ಸಮಾಜದವರು ತಾ. 15 ಮತ್ತು 16ರಂದು ಉಡುಪಿಯ ವಿ. ಜೆ ಯ. ಕ್ಲಬ್ಬಿನ ನವಾರದಲ್ಲಿ ವಿವಿಧ ವಸ್ತು ಪ್ರದರ್ಶನ ಮತ್ತು ಆಟೋಟಗಳನ್ನು ಏರ್ಪಡಿಸಿದ್ದರು. ಸುಮಾರು 25 ಸ್ಟಾಲುಗಳಲ್ಲಿ ಹೆಚ್ಚಾಗಿ ಆಕರ್ಷಕವೂ ಕುತೂಹಲಕಾರಿಕವೂ ಆದ ಆವ್ಯಪ್ಪ ಪರೀಕ್ಷೆಯ ಸ್ಟಾಲುಗಳಾಗಿದ್ದವು. ಇವಲ್ಲದೆ ಕ್ಯಾಂಟೀನ್, ಮಹಿಳೆಯರ ಪಂಗಡದಲ್ಲಿ ತಯಾರಿಸಿದ ಉಪ್ಪಿನ ಕ್ಯಾ, ತಿಂಡಿ ತಿನಸುಗಳ ಸ್ಟಾಲು, ಕನೂತಿ ಬಟ್ಟೆಯ ಮಕ್ಕಳ ಉಡುಗೆ ತೊಡುಗೆಗಳ ಆಂಗಡಿ, ಗಂಧದ ಕೆತ್ತನೆಯ ಅಂಗಡಿಗಳೂ ಇದ್ದವು.

ಅಲ್ಲದೆ ಇತರ ಆಶ್ರಯದಲ್ಲಿ ತಾ. 17 ಮತ್ತು 18ರಂದು ಉಡುಪಿ ಗೀತಾಂಜಲಿಯಲ್ಲಿ ಫ್ಯಾಶನ್ ಪೆರೇಡ್ ಕಾರ್ಯಕ್ರಮವೂ ಆಕರ್ಷಕವಾಗಿ ನೆರವೇರಿತು.

ಅಕಾಡೆಮಿ ಸಂಸ್ಥೆಗಳಿಗೆ ಅದಮೂರು ಶ್ರೀಗಳವರ ಸಂದರ್ಶನ

ಮನಿಪಾಲದ ಆಕಾಡೆಮಿ ಸಂಸ್ಥೆಗಳಿಗೆ ಪರ್ಯಾಯ ಪೀಠವನ್ನೇರಲಿರುವ ಅದಮೂರು ಮಠದ ಶ್ರೀಗಳವರು ಸಂದರ್ಶನವಿತ್ತು ಸಂಸ್ಥೆಗಳು ಸಾಧಿಸುವ ಪ್ರಗತಿಯಾಗಿ ಸಂತೋಷ ವ್ಯಕ್ತಪಡಿಸಿದರು. ಡಾ। ಮೂಧವ ಪೈಯವರ ನಿವಾಸದಲ್ಲಿ ಏರ್ಪಡಿಸಿದ್ದ ಸಂಜೆಯ ಭಜನೆಯ ಸಿಬ್ಬಂದಿಯವರ ಪರವಾಗಿ ಡಾ। ಪೈಯವರು ನೂತಾಡಿ ಕರ್ಯಾಯ ನೇಳೆಯಲ್ಲಿ ತಮ್ಮ ಸೇವೆಯ ಭವಿಷ್ಯದ ನಿಡಿದರು ಆ ಮೇಲೆ ಶ್ರೀಗಳವರನ್ನು ಮೆಡಿಕಲ್ ಕಾಲೇಜಿನ ವಿವಿಧ ಭಾಗಗಳಿಗೂ ಇಂಜಿನಿಯರಿಂಗ್ ಕಾಲೇಜಿಗೂ ಕರೆದೊಯ್ಯಲಾಯಿತು. ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರೊ। ಬಿ. ವಿ. ಕೃಷ್ಣಮೂರ್ತಿಯವರು ಶ್ರೀಗಳವರನ್ನು ಫಲ ಪುಷ್ಪಗಳೊಂದಿಗೆ ಸ್ವಾಗತಿಸಿದರು.

ಆನಂತರ ಎಂ. ಜಿ. ಎಂ. ಕಾಲೇಜಿನಲ್ಲಿ ಶ್ರೀಗಳವರನ್ನು ಸನ್ಮಾನಿಸುವ ಸಭೆಯೊಂದು ಜರಗಿತು. ಆರಂಭದಲ್ಲಿ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದರು. ಡಾ। ಪೈಗಳು ಇತ್ತ ಸನ್ಮಾನ ಪತ್ರಕ್ಕೆ ಉತ್ತರ ರೂಪವಾಗಿ ಮಾತಾಡುತ್ತಾ ಶ್ರೀಗಳವರು, ಭಗವಂತನೊಬ್ಬನೇ ಬಿನ್ನೆ ಹಿಂದೆ ಇದುತ್ತಾನೆಂಬ ಅರಿವಿನಿಂದ ಸತ್ಕರ್ಮ ನಿರತರಾಗಿ ಬಾಳುವುದೇ ಸುಧಾಚಾರ್ಯರ ಸಿದ್ಧಾಂತ; ಜಗತ್ತಿನಲ್ಲಿ ಮನುಷ್ಯರು ದ್ವಂದ್ವ ವಿಮುಕ್ತರಾಗಿ ಬದುಕ ಬೇಕಾದರೆ ಈಶ ತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

೧೯೭೧ರಲ್ಲಿ
ಪ್ರಪಂಚ ಆರ್ಥಿಕದ ಎರಡು ಮುಖಗಳು

ಪ್ರಪಂಚದ ಆರ್ಥಿಕದಲ್ಲಿ 1971ನೇ ಸಾಲು ನಿರ್ಣಾಯಕವಾದ ವರ್ಷವಾಗಿತ್ತೆಂದು ಹೇಳಬಹುದು ಏನು ಒಂದು ಸಾಮಾಜಿಕ ವ್ಯವಸ್ಥೆಯ ನಿಷ್ಪ್ರಯೋಜಕತೆಯನ್ನೂ ಇನ್ನೊಂದರ ಉಪಯುಕ್ತತೆಯನ್ನೂ ತೋರಿಸಿಕೊಟ್ಟಿತು ಆರ್ಥಿಕ ಸೈನೋಟಿಯು ಮುಂದುವರಿಯುತ್ತಿದೆ ಮತ್ತು ಇನ್ನೂ ಮುಂದುವರಿಯುತ್ತದೆ ಎಂಬುದು ನಿಜ ಆದರೆ ಫಲಿತಾಂಶಗಳನ್ನು ಅಪೇಕ್ಷಿಸುವವರು ಸ್ಪಷ್ಟವಾಗಿ ಕಾಣಬಹುದಾಗಿದೆ.

ಕಳೆದ ವರ್ಷ ಪಾಶ್ಚಾತ್ಯ ಜಗತ್ತಿನಲ್ಲಿ ಆರ್ಥಿಕ ಬಿಕ್ಕಟ್ಟು ಮತ್ತಷ್ಟುತೀವ್ರಗೊಂಡುದು ಕಂಡುಬಂದಿತು ಸಮಾಜವಾದೀ ಜಗತ್ತಿನಲ್ಲಿ ಸರ್ವವ್ಯಾಪಿಯಾದ ಆರ್ಥಿಕ ಪ್ರಗತಿಯು ಗೋಚರವಾಯ್ತು. ಜೀವನ ವೆಚ್ಚದಲ್ಲಿ ಏರಿಕೆ, ಜೀವನಮಟ್ಟಗಳ ಕುಸಿತ, ಉತ್ಪಾದನೆಯಲ್ಲಿ ಕುಸಿತ, ಅಪೂರ್ಣ ಉದ್ಯೋಗ, ನಿರುದ್ಯೋಗ ಹಣದುಬ್ಬರ, ಶ್ರೀಮಂತರು ಮತ್ತು ಬಡವರ ನಡುವೆ ನಿರಂತರವಾಗಿ ಹೆಚ್ಚುತ್ತಿರುವ ಅಂತರ ಮತ್ತು ಮಿತ್ರ ರಾಷ್ಟ್ರಗಳ ನಡುವೆಯೇ ತೀವ್ರವಾದ ಪೈಪೋಟಿ ಇವು ಪಾಶ್ಚಾತ್ಯ ಜಗತ್ತಿನ ವರಿಸೆಯಾಗಿತ್ತು. ಅದಕ್ಕೆ ಪ್ರತಿಯಾಗಿ, ಸಮಾಜವಾದೀ ಜಗತ್ತಿನ ಚಿತ್ರವು ಪೂರ್ಣ ಉದ್ಯೋಗ, ಪದಾರ್ಥಗಳ ಬೆಲೆಯಲ್ಲಿ ಇಳುವರಿ, ಜೀವನ ಮಟ್ಟಗಳ ಏರಿಕೆ, ಉತ್ತಮವಾದ ಸಾಮಾಜಿಕ ಸೌಲಭ್ಯಗಳು, ಉತ್ಪಾದನೆಯ ಗುರಿಗಳ ಅಧಿಕ ಪೂರೈಕೆ ಮತ್ತು ರಾಷ್ಟ್ರಗಳ ನಡುವೆ ಮತ್ತುಷ್ಟು ಅಭಿವೃದ್ಧಿಗಾಗಿ ಮೈತ್ರಿಯುತ ಸಹಕಾರ ಇವುಗಳಾಗಿವೆ.

1950ರಿಂದ 1970ರ ವರೆಗಿನ ಇಪ್ಪತ್ತು ವರ್ಷಗಳ ಕಾಲದಲ್ಲಿ 'ಸಿ.ಎಂ.ಇ.ಎ.' ದೇಶಗಳ ಒಟ್ಟು ಕೈಗಾರಿಕಾ ಉತ್ಪನ್ನ 6.8 ಪಟ್ಟು ಹೆಚ್ಚಿತು. ಆದರೆ ಅಭಿವೃದ್ಧಿ ಹೊಂದಿರುವ ಪಾಶ್ಚಾತ್ಯ ದೇಶಗಳ ಬೆಳವಣಿಗೆಯ ಪ್ರಮಾಣವು ಅದೇ ಅವಧಿಯಲ್ಲಿ 2 8 ಪಟ್ಟು ಮಾತ್ರವಾಗಿತ್ತು. 1971ರ ಸಾಲಿಗೆ ಇನ್ನೂ ಅಂಕಿ ಅಂಶಗಳು ಪೂರ್ಣವಾಗಿ ದೊರೆತಿಲ್ಲ ಆದರೆ ಈವರೆಗೆ ದೊರೆತಿರುವ ವಿಚಾರಗಳಿಂದ ಪಾಶ್ಚಾತ್ಯ ಜಗತ್ತಿನ ಸ್ಥಿತಿಯು ಜವನತಿಯಲ್ಲಿದೆಯೆಂಬುದು ಮತ್ತು ಸಮಾಜವಾದೀ ಜಗತ್ತಿನ ಸ್ಥಿತಿಯು ಭವ್ಯವಾಗಿದೆಯೆಂಬುದು ಕಂಡುಬರುತ್ತದೆ. ಉದಾಹರಣೆಗೆ, ಸೋವಿಯೆತ್ ಒಕ್ಕೂಟದಲ್ಲಿ 1971ಕ್ಕಾಗಿದ್ದ ಯೋಜನೆಯ ಗುರಿಯು ಕೈಗಾರಿಕಾ ಉತ್ಪನ್ನವನ್ನು ಶೇ. 6.7ರಷ್ಟು ಹೆಚ್ಚಿಸುವುದಾಗಿತ್ತು (1970 ಕ್ಕೆ ಹೋಲಿಸಿದಲ್ಲಿ) ಆದರೆ, ಮೊದಲ ಹನ್ನೊಂದು ತಿಂಗಳಲ್ಲೇ ಅದರ ಹೆಚ್ಚಳವು ಶೇ 7.8 ರಷ್ಟು ಆಗಿದ್ದಿತು.

ಪಾಶ್ಚಾತ್ಯ ಮೂಲಗಳಿಂದ ತಿಳಿದುಬರುವಂತೆ ಉತ್ಪಾದನೆಯಲ್ಲಿ ಕುಸಿತ ಮತ್ತು ನಿರುದ್ಯೋಗದ ಹೆಚ್ಚಳದಿಂದಲೇ ಪಾಶ್ಚಾತ್ಯ ದೇಶಗಳಲ್ಲಿ ಪರಿಸ್ಥಿತಿಯು ಭಿನ್ನವಾಗಿರುವುದು ತಿಳಿದುಬರುತ್ತದೆ. ಇದರಿಂದಾಗಿಯೇ ಅಮೆರಿಕವನ್ನು ಒಳಗೊಂಡು ಇತರ ಪಾಶ್ಚಾತ್ಯ ದೇಶಗಳು ಕೈಗಾರಿಕೆಗಳಿಗೆ ಉತ್ಪಾದನೆಯನ್ನು ಹೆಚ್ಚಿಸಲು ತೆರಿಗೆ ರಿಯಾಯಿತಿಗಳನ್ನು ನೀಡಬೇಕಾಯಿತು. ಆದರೆ ಇದೂ ಹೆಚ್ಚು ಫಲಕಾರಿಯಾಗಿಲ್ಲ.

ಪಾಶ್ಚಾತ್ಯ ಜಗತ್ತಿನಲ್ಲಿ 1971ರಲ್ಲಿ ವಸ್ತುಶಃ ಕೈಗಾರಿಕಾ ಉತ್ಪನ್ನವು ಅರವತ್ತರ ಕಾಲದಲ್ಲಿದ್ದುದಕ್ಕಿಂತ ಎರಡು ಪಟ್ಟು ಕಡಿಮೆಯಾಗಿದೆ. ಉದಾಹರಣೆಗೆ, ದೊರತಿರುವ ಅಂಕಿ—ಅಂಶಗಳ ಪ್ರಕಾರ ಅಮೆರಿಕದಲ್ಲಿ ಕೈಗಾರಿಕಾ ಉತ್ಪಾದನೆಯು 1969ರಲ್ಲಿದ್ದುದಕ್ಕಿಂತಲೂ ಶೇ. 4ರಷ್ಟು ಕಡಿಮೆಯಾಗಿದೆ. "ಬಡತನದ ಮೇಲೆ ಯುದ್ಧ"ದ ಘೋಷಣೆಯಾಗಲಿ ಅಥವಾ ಕೈಗಾರಿಕೆಗಳನ್ನು ಭದ್ರವಾದ ತಳಹದಿಯ ಮೇಲೆ ಇರಿಸಲು ಕೈಗೊಂಡ ವಿಶೇಷ ಕ್ರಮಗಳಾಗಲಿ ಅಮೆರಿಕದ ಮತ್ತು ಬ್ರಿಟನ್‌ಗಳಲ್ಲಿ ನಿರುದ್ಯೋಗದ ಪ್ರಶ್ನೆಯನ್ನು ಬಗೆಹರಿಸಲಾಗಿಲ್ಲ. ಅಮೆರಿಕದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಇನ್ನೂ ಕೂಡ ಸುಮಾರು 5 ಮಿಲಿಯಗಳಾಗಿದೆ. ಬ್ರಿಟನ್‌ನಲ್ಲಿ ಅದು ಸುಮಾರು ಒಂದು ಮಿಲಿಯವಾಗಿದೆ. ಇನ್ನು ಅರೆ ನಿರುದ್ಯೋಗಿಗಳ ಸಂಖ್ಯೆ ಎಷ್ಟೆಂಬುದನ್ನು ಊಹಿಸಿಕೊಳ್ಳಬಹುದಾಗಿದೆ.

ಸಮಾಜವಾದೀ ದೇಶಗಳಲ್ಲಿ ಕೈಗಾರಿಕೆಗಳಲ್ಲಿ ಶ್ರಮ ಉತ್ಪಾದಕತೆಯು ಹೊಸ ಉನ್ನತ ಮಟ್ಟಗಳನ್ನು ತಲಪುತ್ತಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಶ್ರಮ ಉತ್ಪಾದನೆಯ ಹೆಚ್ಚಳದ ಸರಾಸರಿ ವಾರ್ಷಿಕ ಪ್ರಮಾಣವು ಬಲ್ಗೇರಿಯದಲ್ಲಿ ಶೇ. 6.8ನ್ನು ಪೋಲೆಂಡಿನಲ್ಲಿ ಶೇ 6. 9ನ್ನು ಸೋವಿಯೆತ್ ಒಕ್ಕೂಟದಲ್ಲಿ ಶೇ. 6.3ನ್ನು ಮತ್ತು ಜೆಕೊಸ್ಲೊವಾಕಿಯದಲ್ಲಿ ಶೇ. 5. 3ನ್ನು ತಲಪಿದೆ. ಇದನ್ನು ಅಮೆರಿಕದ ಪ್ರಮಾಣಗಳೊಂದಿಗೆ ಹೋಲಿಸುವುದು ಸೂಕ್ತವೆನಿಸುತ್ತದೆ ಅದು ಕೇವಲ ಶೇ 3. 3ರಷ್ಟಾಗಿದೆ. ಬ್ರಿಟನ್ನಿನಲ್ಲಿ ಶೇ 2 6ರಷ್ಟಾಗಿದೆ.

ತಲಾ ಒಂದರಂತೆ ರಾಷ್ಟ್ರೀಯ ವರಮಾನದ ವಿಷಯದಲ್ಲೂ ಪರಿಸ್ಥಿತಿಯು ಭಿನ್ನವಾಗಿಲ್ಲ. "ಸಿ.ಎಂ. ಇ. ಎ.." ದೇಶಗಳಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ತಲಾ ಒಂದರಂತೆ ರಾಷ್ಟ್ರೀಯ ವರಮಾನದ ವಾರ್ಷಿಕ ಹೆಚ್ಚಳದ ಪ್ರಮಾಣವು ಸರಾಸರಿ ಶೇ. 6. 8 ರಷ್ಟಾಗಿದೆ. ಆದರೆ ಪಾಶ್ಚಾತ್ಯ ಜಗತ್ತಿನಲ್ಲಿ ಅದು ಶೇ 3. 2ರಷ್ಟು ಮಾತ್ರವಾಗಿದೆ.

ಡಾಲರ್ ಬಿಕ್ಕಟ್ಟು ಪಾಶ್ಚಾತ್ಯ ದೇಶಗಳಲ್ಲಿ ತಮ್ಮೊಳಗೇ ಇರುವ "ಸಹಕಾರ"ದ ಚಿತ್ರವನ್ನು ಸ್ಪಷ್ಟವಾಗಿ ಹೊರಗೆಡಹಿದೆ. ಪಾಶ್ಚಾತ್ಯ ಜಗತ್ತಿನ ಹಣಕಾಸಿನ ಮೂರು ಕಟ್ಟೆ ಕಳೆದ ವರ್ಷ ಅಸ್ತವ್ಯಸ್ತವಾಗಿತ್ತು. ಆದರಿಂದ, ಈ ರಾಷ್ಟ್ರಗಳ ನಡುವೆ ಸಹಕಾರವನ್ನು ಕುರಿತು ಏನು ಹೇಳುವುದೂ ದುಸ್ತರ ಆದನ್ನು ತೀವ್ರವಾದ ಕಚ್ಚಾಟದ ಪೈಪೋಟಿಯೆಂದು ಹೇಳಬಹುದು ಅಷ್ಟೆ.

ಸಮಾಜವಾದೀ ಜಗತ್ತು, ಆದರಲ್ಲೂ ಮುಖ್ಯವಾಗಿ 'ಸಿ. ಎಂ. ಇ. ಎ.' ದೇಶಗಳು ಈ ವಿಷಯದಲ್ಲಿಯೂ ಭವ್ಯ ಚಿತ್ರವನ್ನು ನೀಡುತ್ತವೆ. ಈ ದೇಶಗಳ ನಡುವೆ ಸಹಕಾರದಿಂದ ಅದ್ಭುತವಾದ ಫಲಿತಾಂಶಗಳು ದೊರೆತಿವೆ. ಕಳೆದ ಐದು ವರ್ಷಗಳಲ್ಲಿಯೇ ಸೋವಿಯೆತ್ ತಾಂತ್ರಿಕ ನೆರವಿನ ಸಹಾಯದಿಂದ ಸಮಾಜವಾದೀ ದೇಶಗಳಲ್ಲಿ 300 ಕೈಗಾರಿಕಾ ಹಾಗೂ ಕೃಷಿ ಪ್ರಾಯೋಗಿಕಗಳನ್ನು ನಿರ್ಮಿಸಲಾಗಿದೆ. ಅಥವಾ ಪುನರ್‌ನಿರ್ಮಿಸಲಾಗಿದೆ ಸೋವಿಯೆತ್ ಒಕ್ಕೂಟವು 'ಸಿ. ಎಂ. ಇ ಎ.' ದೇಶಗಳು ಮತ್ತು ಇತರ ಸಮಾಜವಾದೀ ದೇಶಗಳಾದ ಕ್ಯೂಬ, ಉತ್ತರ ವಿಯೆತ್ನಾಮ್ ಮತ್ತು ಕೊರಿಯ ದೇಶಗಳ ಆಮದು ಅವಶ್ಯಕತೆಗಳಲ್ಲಿ ಶೇ. 70ರಷ್ಟನ್ನು ಪೂರೈಸಿದೆ. ಇದು ಏಕಮುಖನಾದ ವ್ಯವಹಾರವಾಗಿಲ್ಲ. ಸೋವಿಯೆತ್ ಒಕ್ಕೂಟವು ಅದೇ ಅವಧಿಯಲ್ಲಿ 'ಸಿ ಎಂ. ಇ ಎ.' ದೇಶಗಳಿಂದ 54 ರಾಸಾಯನಿಕ ಕಾರ್ಖಾನೆಗಳಿಗೆ ಯಂತ್ರೋಪಕರಣಗಳನ್ನು ಪಡೆದುಕೊಂಡಿದೆ. ಸೋವಿಯೆತ್ ಒಕ್ಕೂಟದ ವ್ಯಾಪಾರೀ ನೌಕೆಗಳ ಅವಶ್ಯಕತೆಯಲ್ಲಿ ಶೇ. 38ರಷ್ಟನ್ನು ಈ ದೇಶಗಳು ಒದಗಿಸಿವೆ ಎಲ್. ಐ. ಬ್ರೆಝ್ನೆವ್ ಅವರು ತಮ್ಮ ವರದಿಯಲ್ಲಿ ಈ ಸಹಕಾರದ ಬಗ್ಗೆ ಹೇಳಿರುವುದು ಇಲ್ಲಿಉಲ್ಲೇಖನಾರ್ಹ. ಅವರು ಸಮಾಜವಾದೀ ದೇಶಗಳ ಆರ್ಥಿಕ ಕ್ಕೋಧ್ರೀಕರಣದಲ್ಲಿ, ನಮ್ಮ ರಾಷ್ಟ್ರ ರಾಷ್ಟ್ರೀಯ ಆರ್ಥಿಕ ಯೋಜನೆಗಳನ್ನು ಹೆಚ್ಚು ನಿಕಟವಾಗಿ ಹೊಂದಿಸುವುದು ಮತ್ತು ಉತ್ಪಾದನೆಯಲ್ಲಿ ವಿಶೀಕರಣವನ್ನು ಗಾಢವಾಗಿಸುವುದು ಅಗತ್ಯ ಎಂದು ಹೇಳಿದಾರೆ

ಪಾಶ್ಚಾತ್ಯ ಜಗತ್ತಿನ ಯೂರೆ ರಾಜಕಾರಣಿಯೂ ಪಾಶ್ಚಾತ್ಯ ದೇಶಗಳ ನಡುವಣ ಸಹಕಾರವನ್ನು ಕುರಿತು ಇಂಥ ಮಾತನ್ನು ಆಡುವ ಕನಸನ್ನು ಕಾಣಲಾರ ಅವರ ಜೊತೆ ತಮ್ಮ ಆರ್ಥಿಕವನ್ನು ಹೇಗಾದರೂ ಮಾಡಿ ಉರ್ಜಿತಗೊಳಿಸಿಕೊಳ್ಳುವುದಾಗಿರುತ್ತದೆ. ಅಷ್ಟೆ. ಇದನ್ನು ಕೂಡ ಅವರು ಸಂಯುಕ್ತವಾಗಿಯೂಗಲೀ ಅಥವಾ ಸಹಕಾರದ ಭಾವನೆಯಿಂದಲಾಗಲೀ ಮಾಡಲಾರದು. ಇತ್ತೀಚೆಗೆ 'ಟೈಮ್' ನಿಯತಕಾಲಿಕೆಗೆ ನೀಡಿದ ತಮ್ಮ ಸಂದರ್ಶನದಲ್ಲಿ ಅಧ್ಯಕ್ಷ ನಿಕ್ಸನ್‌ರವರು ಆಂತರಿಕ ಕ್ಷೇತ್ರದಲ್ಲಿ "ಅತ್ಯಂತ ಜಟಿಲವಾದ" ಪ್ರಶ್ನೆಯು ಆರ್ಥಿಕ ಪ್ರಶ್ನೆಯೂಗಿದೆ ಎಂದು ಹೇಳಿದರು. ಅವರು ಅಮೆರಿಕವು ಪ್ರಪಂಚದಲ್ಲಿ ತನ್ನ ಪೈಪೋಟಿಯ ಸ್ಥಾನವನ್ನು ಉಳಿಸಿಕೊಳ್ಳಬೇಕಾಗಿದ್ದಲ್ಲಿ, ನಾವೂ ಕಹಿಯಾದ ಔಷಧಿಯನ್ನು ಸೇವಿಸಬೇಕು ಮತ್ತು ನಮ್ಮ ಪಾಲುದಾರರಾಗಿರುವವರಿಗೂ ನೀಡಬೇಕು ಎಂದಿದ್ದಾರೆ.

ಅವರೆ ಈ ಹೇಳಿಕೆಯೇ ಪರಿಸ್ಥಿತಿಗೆ ಸಾಕ್ಷಿಯೂಗಿದೆ ಪಾಶ್ಚಾತ್ಯ ಜಗತ್ತಿನ ಸಮಾಜ ಮತ್ತು ಅದರ ಆರ್ಥಿಕ ಸ್ಥಿತಿಯನ್ನು ಬಣ್ಣಿಸಲು ಇದಕ್ಕಿಂತ ಹೆಚ್ಚೇನೂ ಹೇಳಬೇಕಿಲ್ಲ.

●●

ಸ್ಮರಿಸಿರಿ
ಭಾರತ ಸೈನ್ಯದ ಧೈರ್ಯ

ಬಾಂಗ್ಲಾ ದೇಶದಿ ನಡೆಯಿತು ಯುದ್ಧ
ನವಮಾಸವು ಮಂಬರಿಯಿತು ನರಮೇಧ
ಮುಕ್ತಿವಾಹಿನಿಯ ಭಾರತ ಯೋಧರ
ಪರಾಕ್ರಮದಿ ಧೂಳಿಯೂಯಿತು ಸಮರ
ಪಾಕ್ ಆಡಳಿತದ ಇತಿ ಶ್ರೀ ಬಾಂಗ್ಲಾದೇಶದಿ
ಆಯಿತು ದಶಂಬರ ಪದಿನಾರರಲಿ ನೆನ್ಮೆದಿ

ಡಂಬಾಚಾರದಿ ಹುಸಿಧೈರ್ಯದಿ ಮುನ್ನುಗ್ಗಿಸಿ
ಸೈನ್ಯ
ಮುಬಕೆ ನುಸಿಯನು ಬಳಿದುಕೊಂಡನು
ಯೂಹ್ಯಾಖಾನ
ಅಮೆರಿಕದ ಸಹಾಯ ಹಸ್ತವನೇ ನಂಬಿ
ದುರಾಕ್ರಮಣನ ನಡೆಸಿತು ಬಾಂಗ್ಲದಿ ತುಂಬಿ
ಅದರೇನು ದೈವೇಚ್ಛೆಗೆ ವಿರೋಧಿ ಯೂರು?
ನಿಕ್ಸನರ ದುರ್ಬುದ್ಧಿಗೆ ಹೊಣೆ ಯೂರು?

ಸ್ವಂತ ಧೈರ್ಯದಿ ಮುನ್ನುಗ್ಗಿತು ಭಾರತ
ನಡೆಯಿತು ಪಾಕ್ ಸೈನ್ಯವ ತರಿಯುತ
ಮೂಡಿತು ಬಾಂಗ್ಲಾದೇಶವ ಕರಗತ
ಕೊನೆಗೊಳಿಸಿತು ಪಾಕಿನ ನರಮೇಧವ ಸತತ.

ಸ್ಮರಿಸಿರಿ ಭಾರತ ಸೈನ್ಯದ ಧೈರ್ಯ
ಹೊಗಳಿರಿ ವೀರ ಯೋಧರ ಕಾರ್ಯ

ಈಸಬೇಕು ಇದ್ದು ಜೈಸಬೇಕೆಂಬ ನುಡಿಯ
ಎಟವಾಗಿಸಿ ಮುಂದರಿದ ನಮ್ಮ ಪ್ರಧಾನಿಯ
ಧೈರ್ಯ ಕೌರ್ಯಗಳನೆಣಿಸಿ ನೋಡಿರೊಮ್ಮೆ
ಜೈ ಬಾಂಗ್ಲಾ, ಜೈ ಇಂದಿರಾ,
ಜೈ ಜವಾನರೆನ್ನಿರಿನ್ನೊಮ್ಮೆ

ಶ್ರಮಿಸಿರಿ ಭಾರತ ದೇಶದ ಏಳಿಗೆಗೆ
ನಮಿಸಿರಿ ಭೂಮಿ ತಾಯಿಯ ಪದಗಳಿಗೆ
ದುಡಿಯಿರಿ ವೀರ ಜವಾನರ ಒಳ್ಳಿತಿಗೆ
ಪಡೆಯಿರಿ ಭಾರತ ಜನನಿಯ ರಕ್ಷಣೆಗೆ.

ಶ್ರೀ ಯಂ.ಡಿ. ಸಾಲ್ ಜಾಧವ್,
ಮುಂಡೋಡು.

HOTEL SATKAR

Boarding, Lodging & Restaurant

Pehind corporation Office,

9 Mission Road — Bangalore—27

Phone No— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms Roof garden

Quiet, Calm Atmosphere

Personalised Service.

ಪೀಕಿಂಗಿನಲ್ಲಿ ನಡೆಯುತ್ತಿದೆ—

ಭಾರತವನ್ನು ಪ್ರತ್ಯೇಕಿಸುವ ಕುತಂತ್ರ

ಜನತೆಗಳ ನಡುವೆ ನೈಷಮ್ಯವನ್ನು ಬಿತ್ತುವ ಮತ್ತು ಯುದ್ಧಗಳ ಚಿತಾವಣೆಕಾರರಾಗಿ ವರ್ತಿಸುವ ಪೆಕಿಂಗ್ ಧುರೀಣರು ಭಾರತ ಪರ್ಯಾಯ ದ್ವೀಪದಲ್ಲಿನ ಸಂಘರ್ಷಕ್ಕೆ ವಿಶೇಷ ಜವಾಬುದಾರಿಯ ಭಾಗವನ್ನು ವಹಿಸುತ್ತಾರೆ "ಭಾರತದಲ್ಲಿನ ಸಂಘರ್ಷ" ಮತ್ತು ಮೂಪೌ ವೃಂದದ ಚಿತಾವಣೆಯ ಪಾತ್ರ" ಎಂಬ ಶೀರ್ಷಿಕೆಯಲ್ಲಿ ಗ. ಯು ಕೂಮೊವ್ ಅವರು 'ಪ್ರಾವ್ದ' ವಾರ್ತಾಪತ್ರಿಕೆಯಲ್ಲಿ ಪ್ರಕಟಿಸಿರುವ ಲೇಖನದಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ.

ಭಾರತ-ಪಾಕಿಸ್ತಾನ ಸಂಘರ್ಷವು ಪೆಕಿಂಗ್ ನಾಯಕತ್ವದ ವಿದೇಶಾಂಗ ನೀತಿಪಥದ ಚಿತಾವಣೆಯ ಸ್ವರೂಪವನ್ನು ಸ್ಪಷ್ಟವಾಗಿ ನೈಕ್ಷಪಡಿಸಿತು. ಉದ್ರಿಕ್ತತೆಯ ಕಾವುನೆರೆಗಳನ್ನು ನಿರ್ಮಿಸುವುದೂ ಹಬ್ಬಿಸುವುದೂ ಈ ಪಥದ ಲಕ್ಷ್ಯವಾಗಿದೆ. ಫಿರಂಗಿಗಳು ಗರ್ಜಿಸುತ್ತಿದ್ದಾಗ, ಪೆಕಿಂಗ್ ಆಡಳಿತ ವಲಯವು ಭಾರತ ಮತ್ತು ಪಾಕಿಸ್ತಾನ ದೇಶಗಳ ನಡುವಣ ಹಗೆತನವನ್ನು ಕೆರಳಿಸುತ್ತ, ಮೊದಲೇ ಉರಿಯುತ್ತಿದ್ದ ಬೆಂಕಿಗೆ ಇಂಧನವನ್ನು ಸೇರಿಸಿತು. ಅದೇ ವೇಳೆಯಲ್ಲಿ ಪೆಕಿಂಗ್ ಧುರೀಣರೂ ಅವರ ಅಮೆರಿಕನ್ ಸಾಮ್ರಾಜ್ಯವಾದಿ ಸಖಭಾಗಿಗಳೂ, ಹೊತ್ತಿದ್ದ ಬೆಂಕಿಯಲ್ಲಿ ತಮ್ಮ ಕೈಗಳನ್ನು ಕಾಯಿಸಿಗೊಳ್ಳಲು ಪ್ರಯತ್ನಿಸಿದರು, ಮತ್ತ, "ಶಾಂತಿಕರ್ತರಾಗಿ" ಸೋಗು ಹಾಕಿದರು, ಬೂಟಾಟಿಕೆಯಿಂದ ಕದನ ವಿರಾಮದ ಬಗೆಗೆ ಒತ್ತಾಯದ ಬೇಡಿಕೆಯನ್ನು ಮಂಡಿಸಿದರು. ಈಗ ಸಿಡಿಗುಂಡಿನ ಹಾರಿಕೆಯು ನಿಂತಿರುವಾಗ, "ಯುದ್ಧವನ್ನು ವಿಜಯೋತ್ಸವದವರೆಗೆ ಮುಂದಕ್ಕೆ ಕೊಂಡೊಯ್ಯಲು" ಪಾಕಿಸ್ತಾನದ ಧುರೀಣರುಗಳಿಗೆ ಪ್ರೇರಣೆಯನ್ನು ನೀಡುವ ಚಿತಾವಣೆಯ ಕರಪತ್ರಗಳು ಪ್ರತಿನಿತ್ಯವೂ ಪೆಕಿಂಗಿನಿಂದ ಬರುತ್ತಿವೆ.

ಹಿಮೂಲಯದಲ್ಲಿ ಚೀನಾ ಮತ್ತು ಭಾರತ ದೇಶಗಳ ಮಧ್ಯೆ ಸೈನಿಕ ಸಂಘರ್ಷಗಳು ನಡೆದಂದಿನಿಂದಲೂ, ಚೀನೀ ಧುರೀಣರು ಭಾರತದ ವಿರುದ್ಧವಾಗಿ ಹಗೆತನದ ಪಥನವನ್ನು ಬಹಿರಂಗವಾಗಿ ಆನುಸರಿಸುತ್ತ ಬಂದಿದ್ದಾರೆ. ಭಾರತವನ್ನು ವಿಶಿಷ್ಟತಃ ವಿಕಾಸಶೀಲ ದೇಶಗಳ ಜನತೆಗಳ ಮುಂದೆ ಅಪಖ್ಯಾತಿಗೆ ಗುರಿಪಡಿಸಲು ಮತ್ತು ಅದನ್ನು ಪ್ರತ್ಯೇಕಪಡಿಸಲು ಅವರು ಶ್ರಮವಹಿಸಿ ಪ್ರಯತ್ನಿಸುತ್ತಿದ್ದಾರೆ. ಈ ರೀತಿಯಾಗಿ, ತಥಾಕಥಿತ "ತೃತೀಯ ಜಗತ್ತಿನಲ್ಲಿ" ಪ್ರಮುಖ ಸ್ಥಾನವನ್ನು ಪಡೆಯುವುದು ತನಗೆ ಹೆಚ್ಚು ಸುಲಭವಾಗುವಂತೆ ಅವರು ನೂಡಿಕೊಳ್ಳಬಯಸುತ್ತಾರೆ. ಅದೇ ವೇಳೆಯಲ್ಲಿ ಭಾರತ ಪರ್ಯಾಯದ್ವೀಪದಲ್ಲಿ ಪರಿಸ್ಥಿತಿಯನ್ನು ಜಟಿಲಗೊಳಿಸುವುದೂ ಮತ್ತು ಭಾರತವನ್ನು ಬಲಹೀನಗೊಳಿಸುವುದೂ ಪೆಕಿಂಗ್ ವಲಯದ ಇಚ್ಛೆಯಾಗಿದೆ.

ಈ ಕಾರಣಗಳಿಗೋಸ್ಕರವಾಗಿಯೇ, ಪೆಕಿಂಗ್ ಧುರೀಣರು ಭಾರತದೊಡನೆ ಗಡಿ ಸಮಸ್ಯೆಯ ಇತ್ಯರ್ಥವನ್ನು ಸಾಪೇಕ್ಷವಾಗಿಸುತ್ತಿದ್ದಾರೆ ಮತ್ತು ಕಾಲಕಾಲಕ್ಕೆ ಭಾರತದೊಡನೆಯ ಗಡಿಯ ಮೇರೆ ಪರಿಸ್ಥಿತಿಯನ್ನು ಉದ್ರೇಕಗೊಳಿಸುತ್ತಿದ್ದಾರೆ.

ಭಾರತದ ಆಂತರಿಕ ವ್ಯವಹಾರಗಳಲ್ಲಿ ಮೂಗೋಪಾದಿಗಳು ನಿರ್ಲಜ್ಜೆಯಿಂದ ಹಸ್ತಕ್ಷೇಪ ಮಾಡುತ್ತಿದ್ದಾರೆ ಭಾರತದ ಸ್ವತಂತ್ರ ವಿಕಾಸ ಮಾರ್ಗದ ಮೇಲೆ ಕೊಂದರೆಗಳನ್ನು ನಿರ್ಮಿಸಲು ಪ್ರತಿಯೊಂದು ರೀತಿಯಲ್ಲಿಯೂ ಅವರು ಪ್ರಯತ್ನಿಸುತ್ತಿದ್ದಾರೆ. ದುಸ್ಸಾಹಸವಾದಿ, ತೀವ್ರವಾದಿ ಗುಂಪುಗಳಿಗೆ ನೈತಿಕ, ರಾಜಕೀಯ ಬೆಂಬಲವನ್ನು ನೀಡುವುದರ ಸೂಲಕ, ಭಾರತದಲ್ಲಿ ವಾಮ ಪಕ್ಷೀಯ ಸಾಮಾನ್ಯ ಶ್ರೇಣಿಗಳನ್ನೂ ದೃಢತರ ರಾಜಕೀಯ, ಆರ್ಥಿಕ ಸ್ವಾತಂತ್ರ್ಯವನ್ನೂ ಪ್ರಗತಿಶೀಲ ಸಾಮಾಜಿಕ, ಆರ್ಥಿಕ ಸುಧಾರಣೆಗಳನ್ನೂ ಬಹಿರಂಗವಾಗಿ ಸಮರ್ಥಿಸುವ ಜನಾಧಿಪತ್ಯವಾದಿ ಶಕ್ತಿಗಳನ್ನೂ ಅವರು ಪಿಛಜಿಸುತ್ತಾರೆ. ಭಾರತವನ್ನು ಬಲಹೀನಗೊಳಿಸುವುದ ಕ್ಕಾಗಿಯೂ, ಆದರ ಆಂತರಾಷ್ಟ್ರೀಯ ಪ್ರತಿಷ್ಠೆಯನ್ನು ಶಿಥಿಲಗೊಳಿಸುವುದಕ್ಕಾಗಿಯೂ ಇವೆಲ್ಲವನ್ನೂ ಮಾಡಲಾಗುತ್ತಿದೆ.

ವಿಶೇಯದಲ್ಲಿಯೂ ಅಫ್ರಿಕದಲ್ಲಿಯೂ ಭಾರತದ ಬಗೆಗೆ ಅವಿಶ್ವಾಸನವನ್ನು ಮೂಡಿಸುವ ಪ್ರಯತ್ನದಲ್ಲಿ, ಭಾರತದ ವಿದೇಶಾಂಗ ನೀತಿಯನ್ನು ನಿರಂತರವಾಗಿ ಪೆಕಿಂಗ್ ಪ್ರಚಾರವು ಟೀಕಿಸುತ್ತಿರುತ್ತದೆ. ಮೂರು - ನಾಲ್ಕು ವರ್ಷಗಳ ಹಿಂದೆ, ಭಾರತದ ವಿರುದ್ಧವಾದ ಹೋರಾಟದಲ್ಲಿ ಬರ್ಮಾ, ನೇಪಾಲ ಮತ್ತು ಸಿಂಹಳ ದೇಶಗಳನ್ನು ಸೆಳೆದುಕೊಳ್ಳಲು ಪ್ರಯತ್ನಿಸುತ್ತ, ಪೆಕಿಂಗ್ ಆಡಳಿತ ವಲಯವು ಆ ದೇಶಗಳ ಮೇಲೆ ಒತ್ತಡಗಳನ್ನು ತಂದುದನ್ನೂ ಸ್ಮರಿಸಿಕೊಳ್ಳಬೇಕು. ಭಾರತದ ಬಗೆಗೆ ಹಗೆತನದಿಂದಿರುವ ರಾಷ್ಟ್ರಗಳಿಂದ ಪ್ರಯತ್ನಪೂರ್ವಕವಾಗಿ ಭಾರತವನ್ನು ಸುತ್ತುಗಟ್ಟುವುದೂ, ಭಾರತವನ್ನು ಪ್ರತ್ಯೇಕಗೊಳಿಸುವುದೂ, ಸುಸ್ಪಷ್ಟವಾಗಿ ಪೆಕಿಂಗ್ ಆಡಳಿತ ವಲಯದ ಲಕ್ಷ್ಯವಾಗಿದೆ. ●

ಸ್ಕೌಟ್ ಶಿಕ್ಷಕರ ಸಮಾವೇಶ ಸಮಾರಂಭ

ಉಡುಪಿ, ಕುಂದಾಪುರ, ಕಾರ್ಕಳ ಈ ಮೂರು ತಾಲೂಕುಗಳ ಸ್ಕೌಟ್ ಶಿಕ್ಷಕರ ಸಮಾವೇಶವು ಸ್ಥಳೀಯ ಸ್ಕೌಟ್ ಸಂಸ್ಥೆಯ ಅಧ್ಯಕ್ಷ ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಉಡುಪಿಯ ಕ್ರಿಶ್ಚನ್ ಹಾಯರ್ ಸೆಕೆಂಡರಿ ಶಾಲೆಯ 'ಮುದ್ದಣ ಮಂದಿರ'ದಲ್ಲಿ ತಾ. 8ರಂದು ಜರಗಿತು. ಆರಂಭದಲ್ಲಿ ಜಿಲ್ಲಾ ಆರ್ಗನೈಸಿಂಗ್ ಕಮಿಶನರ್ ಶ್ರೀ ಗೋಪಾಲಕೃಷ್ಣರಾಯರು ಸ್ವಾಗತಿಸಿದರು. ಶ್ರೀ ಎಂ. ಮಧ್ವರಾಜರು ಸಮಾವೇಶವನ್ನು ಉದ್ಘಾಟಿಸಿ ಸ್ಕೌಟ್ ತತ್ವಗಳನ್ನು ವಿವರಿಸಿದರು. ಕ್ರಿಶ್ಚನ್ ಹಾಯರ್ ಸೆಕೆಂಡರಿ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಎಲ್. ಏ. ಆನಂತಸಿವರು ಸ್ಕೌಟಿಂಗ್‌ನ ಬಗ್ಗೆ ತಮ್ಮ ಅಭಿಪ್ರಾಯವಿತ್ತರು. ಜಿಲ್ಲೆಯ ಹಿರಿಯ ಸ್ಕೌಟಿಂಗ್ ಹಾಗೂ ಆಸಿಸ್ಟೆಂಟ್ ಡಿಸ್ಟ್ರಿಕ್ಟ್ ಕಮಿಶನರ್ ಆಗಿರುವ ಶ್ರೀ ಪಿ. ವಿಠಲ ಕಾಮತರು ಈ ಸಂದರ್ಭದಲ್ಲಿ ಸೂತಾಡಿದರು. ಅಂತ್ಯದಲ್ಲಿ ಶ್ರೀ ಪಿ. ಶ್ರೀಪತಿರಾಯರು ಧನ್ಯವಾದ ಆರ್ಪಿಸಿದರು.

ತರುವಾಯ ಜರಗಿದ ಬಹಿರಂಗ ಅಧಿವೇಶನದಲ್ಲಿ ಶಾಲೆಗಳಲ್ಲಿ ದಳಗಳನ್ನು ನಡೆಸುವರೆ ಬೇಕಾಗುವ ಹೊರ್ಣ ಸೂಹಿತಿಯನ್ನು ಜಿಲ್ಲಾ ಸಂಘಟನಾ ಕಮಿಶನರ್ ಇತ್ತ ಬಳಿಕ ಪಂಗಡ ಲೀಡರ್‌ಗಳು, ವಿಚಾರ ವಿನಿಮಯಗಳು ನಡೆದುವು

ಎರಡನೆಯ ಬಹಿರಂಗ ಅಧಿವೇಶನದಲ್ಲಿ ಮೊದಲನೆಯ ಬಹಿರಂಗ ಅಧಿವೇಶನದಲ್ಲಿ ಚರ್ಚಿಸಿದ ವಿಷಯಗಳ ಪರಿಶಿ ಒಪ್ಪಿಸಲಾಯಿತು

ಅಪರಾಹ್ನ ಜರಗಿದ ಮೂರನೇ ಬಹಿರಂಗ ಅಧಿವೇಶನದಲ್ಲಿ ಶ್ರೀ ಗೋಪಾಲಕೃಷ್ಣರಾಯರು ಸ್ಕೌಟಿಂಗ್ ನಿಯಮಗಳಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳ ಬಗ್ಗೆ ವಿವೇಚಿಸಿದರು. ಮಣಿಪಾಲದ ಹಾಯರ್ ಸೆಕೆಂಡರಿ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಯು. ಎಲ್. ಎನ್. ಕಿಣ್ಣಿಲ್ಲಾಯರು 'ಸ್ಕೌಟಿಂಗ್ ಮತ್ತು ವ್ಯಸನಿತ ಪೂರ್ವತಯೂರಿ' ಎಂಬ ಬಗ್ಗೆ ಸೂತಾಡಿದರು.

ಸಮ್ಮೇಳನದ ಸಮಾರೋಪ ಸಮಾರಂಭವು ಮಣಿಪಾಲ ಕಾಲೇಜ್ ಆಫ್ ಎಜ್ಯುಕೇಶನ್‌ನ ಪ್ರಿನ್ಸಿಪಾಲ್ ಶ್ರೀ ಕೆ. ಆರ್. ಜೋಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ ಜೆ ಆಸ್ಲೆಯವರು ಮುಖ್ಯ ಅತಿಥಿಗಳಾಗಿದ್ದರು. ಸ್ಕೌಟ್ ಪ್ರಾರ್ಥನಾ ಬಳಿಕ ಶ್ರೀ ಶ್ರೀಪತಿರಾವ್ ಸ್ವಾಗತಿಸಿದರು. ಶ್ರೀ ಗೋಪಾಲಕೃಷ್ಣರಾಯರು ಸಮಾವೇಶದ ಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತ ವರದಿಯಿತ್ತರು. ಶ್ರೀ ಎ. ಜೆ. ಆಸ್ಲೆಯವರು ಮೂತನಾಡಿ ಸಂಘಟಕರುಗಳ ಯೋಜನೆಗೆ ಯಶಸ್ಸನ್ನು ಕೋರಿದವರು. ಶ್ರೀ ಕೆ. ಆರ್. ಜೋಯಿಯವರು ಸ್ಕೌಟಿಂಗ್ ನಿಯಮಗಳ ಬಗ್ಗೆ ಮೂತಾಡಿದರು. ಉದ್ದೇಶಿತ ಸ್ಕೌಟ್ ಸಂಸ್ಥೆಯ ಕಾರ್ಯದರ್ಶಿ ಶ್ರೀ ಪಿ. ದಯಾನಂದ ರೈಯವರು ಧನ್ಯವಾದ ಸಮರ್ಪಿಸಿದರು.

ಈ ಸಮಾವೇಶದಲ್ಲಿ 15 ಸ್ಕೌಟ್ ಶಿಕ್ಷಕರುಗಳು ಹಾಗೂ ಕ್ರಿಶ್ಚನ್ ಹಾಯರ್ ಸೆಕೆಂಡರಿ ಶಾಲೆಯ ಸ್ಕೌಟ್—ಗೈಡುಗಳು ಭಾಗವಹಿಸಿದ್ದರು

ಚಿದಂಬರ ರಹಸ್ಯ— ಆನಂದಮಾರ್ಗ

(ಎರಡನೇ ಪುಟದಿಂದ)

ಮ ಭಗವಾನ್ ಕೃಷ್ಣರಂತೆ ಅವತಾರ ಪುರುಷರೆಂದು ನಂಬುತ್ತಾರೆ. ಗರ್ಭಗುಡಿಯಲ್ಲಿ ನಡೆದ ಚೀನೀ ದಾಳಿಯನ್ನು ತಡೆದು ನಿಲ್ಲಿಸಿದ್ದು ತಮ್ಮ ನಾಯಕರ ದಿವ್ಯ ಶಕ್ತಿಯೆಂದವರು ಖಚಿತವಾಗಿ ಹೇಳುತ್ತಾರೆ. ಅವರಿಗೆ ಅವರ ಬಾಬಾ 'ಪರಮ ಗುರುಪ'. ಮಹಾ ಭಾರತದ ಎಲ್ಲ ಪಾತ್ರಧಾರಿಗಳು ತಮ್ಮಲ್ಲಿ ಸುನರ್ಜನ್ಮ ಗೊಂಡಿದ್ದಾರೆಂದವರು ವಿಶ್ವಾಸ ಪಡುತ್ತಾರೆ. ಗುರುಗೋವಿಂದ ಸಿಂಗ ಮತ್ತು ನೆಪೋಲಿಯನ್ ಬೋನಪಾರ್ಟೆಯವರು ತಮ್ಮಲ್ಲೇ ಅವತರಿಸಿದ್ದಾರೆಂದು ನಂಬುತ್ತಾರೆ. ಸಂಸ್ಕೃತವು ಅವರ ಅಧಿಕೃತ ಭಾಷೆ.

ಹಿಂದೂ ದೇವಾಲಯಗಳ ಉಪಾಸನಾ ಕ್ರಮವನ್ನು ಆನಂದಮಾರ್ಗವು ಖಂಡಿಸುತ್ತದೆ. ಉಪಾಸನೆಯಲ್ಲಿನ ಪೂಜೆಯನ್ನು ವಿರೋಧಿಸುತ್ತದೆ. ಮಾರ್ಗದ ನಂಬುಗೆಗಳು ಮತ್ತು ದರ ಚಟುವಟಿಕೆಗಳು ಹಲವೆಡೆ ಜನತೆಯ ವಿಶ್ವಾಸವನ್ನು ಕಳೆದುಕೊಂಡಿವೆ. ಆನಂದಮಾರ್ಗದ ವಿರುದ್ಧ ಉಗ್ರಕ್ರಮಗಳನ್ನು ಕೈಕೊಳ್ಳದಿರುವುದಕ್ಕೆ ಹಲವರು ಆಕ್ಷೇಪ್ತರು ಸರಕಾರವನ್ನು ದೂರುತ್ತಾರೆ.

(ಸಾಧಾರ)

●●

ನಿರೀಕ್ಷಿಸಿರಿ!

ಧಾರವಾಹಿಯಾಗಿ ಪ್ರಕಟವಾಗಲಿದೆ—

ನಿಮ್ಮ ಆಚ್ಚುಮೆಚ್ಚಿನ ಬರಹಗಾರ

ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರ

'ಸರ್ವಾರ್ಪಣ'

ಸ್ವತಂತ್ರ ಐತಿಹಾಸಿಕ ಕಾದಂಬರಿಯೊಂದು.

ಮನೆಯಿಂದಾಚೆಯಲ್ಲಿ ಇರಲೇಬೇಕಾದ

ಗೃಹ ಪೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ಪುಸ್ತಕ ಜೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯರ್ಡರು ಮಾಡುವುದು. ವಿಶೇಷ ಅಂಚೆಚೆಟ್ಟಿ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್)

ಉಡುಪಿ, ದ. ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ

ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ

ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾರ್ಸೀಯಗಳಿಗೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit

ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 245/1971

ಗುರುರಾಜ ಭಟ್ಟ — ವಾದಿ

ಮತ್ತು

1. ಶಿವರಾಮ ಶಾಸ್ತ್ರಿ
2. ಮಹಾಬಲ ಶಾಸ್ತ್ರಿ
3. ಮೈನರ್ ಶಂಕರ ನಾರಾಯಣ ಶಾಸ್ತ್ರಿ

ಪ್ರತಿವಾದಿರು.

ಒಂದನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಯರು ನಿಮ್ಮ ಮೇಲೆ ಈ ಕೋರ್ಟಿನಲ್ಲಿ ಮೂಡಿದ ಮೇಲ್ಕಂಡ ದಾವೆಯು ತಾ. 21—1—1972ಕ್ಕೆ ಇಡಲ್ಪಟ್ಟಿದೆ. ನೀವು ವಕೀಲರ ದ್ವಾರವಾಗಲೀ ಆಥವಾ ಸ್ವತಃ ಸದ್ರಿ ಕೋರ್ಟಿನಲ್ಲಿ ಸದ್ರಿ ದಿನಸ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ನಿಮ್ಮ ಆಕ್ಷೇಪಣೆಯನ್ನು ತಿಳಿಸತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ನಂಬ್ರವು ತೀರ್ಮಾನಿಸಲ್ಪಡುತ್ತದೆ.

K. S. V. Udpa.

ವಾದಿ ಕಡೆ ಎಡ್ವೋಕೇಟ್

ಕುಂದಾಪುರ, ತಾ. 11—1—1972

NAVAYUGA 20-1-1972

Registered with the Registrar of News Papers for India under No R. N 1746/57

RLGD. No B G 176
LICENCE No 33
Licensed to Post without Prepayment

ಸ್ವಾತಂತ್ರ್ಯವೇ? ಸ್ವೇಚ್ಛಾಚಾರವೆ?

—ಸಾ। ವಾದಿರಾಜ ತಂತ್ರಿ, ಎಂ ಕಾಂ

ಜನರಲ್ಲಿ ಮಾನವೀಯತೆ ಬೆಳೆಯದಿದ್ದಲ್ಲಿ ಲೋಕ ಶಾಂತಿ ಮುಕ್ಕರ ವಿಜ್ಞಾನದ ಪ್ರಗತಿಯಿಂದಾಗಿ ಲೋಕ ಚಿಕ್ಕದಾಗಿದೆ ಸಾರಿಗೆ ಸಂಪರ್ಕಗಳ ಪ್ರಗತಿಯಿಂದಾಗಿ ಲೋಕ ಸಂಪರ್ಕ ನಾಧ್ಯವಾಗಿದೆ ನಾಗರೀಕತೆ ಬೆಳೆಯಲು ಹಿತಾವಹ ತನುಕೂಲವೇರ್ಪಟ್ಟಿದೆ ಮಾನವನು ತನ್ನ ಅಸೆ ಆಕಾಂಕ್ಷೆಗಳನ್ನು ಪೂರೈಸಲು ಭೌತಿಕ ಸುಖ ಸಾಧನಗಳನ್ನು ನಿರಂತರವಾಗಿ ಅವಿಷ್ಕಾರ ಮಾಡುತ್ತಿದ್ದಾನೆ ಪುರಾತನ ಸಮಾಜ ರಚನೆ ಒಡೆದು ನೂತನ ಸಮಾಜ ನಿರ್ಮಾಣವಾಗುತ್ತಲಿದೆ ಹಿಂದಿನ ವಿನಾಶಕಾರಕ ಸಂಪ್ರದಾಯಗಳು ನಾಶಗೊಂಡು ಸ್ವಾತಂತ್ರ್ಯ ಪ್ರವೃತ್ತಿ ಬೆಳೆಯುತ್ತಲಿದೆ ಆದರೆ ಈ ಸ್ವಾತಂತ್ರ್ಯವೇ ಸ್ವೇಚ್ಛಾ ಪ್ರವೃತ್ತಿಯಾಗುವಾಗ ಮಾತ್ರ ಲೋಕಾಪಾಯವಿದೆ

ಸಾಮಾಜಿಕ ಸಂಸ್ಥೆಯಲ್ಲಿ ಗಣನೀಯ ಪ್ರಮಾಣದಲ್ಲಿ ಬದಲಾವಣೆಗಳಾಗಿವೆ ಹೊಸ ಆರ್ಥಿಕ ರಚನೆಯಲ್ಲಿ ನವಸಾಮಾಜಿಕ ನ್ಯಾಯ ಪ್ರಜ್ಞೆಯಲ್ಲಿ ವ್ಯಕ್ತಿಯ ಸರ್ವಾಂಗೀಣ ಪ್ರಗತಿಗೆ ಅನುಕೂಲತೆಯಿದೆ ಇದು ಅನಿರ್ಬಂಧ ಸ್ವಾತಂತ್ರ್ಯದಿಂದಾಗಿ ಬೆಳಕಿಗೆ ಬರುತ್ತದೆ ಆದರೆ ಮಾನವನ ಚಂಚಲ ಪ್ರವೃತ್ತಿಗಳಿಗೂ ಪುಷ್ಟಿದೊರಕುವ ಅನೇಕ ಸನ್ನಿವೇಶಗಳಿವೆ ಒಳ್ಳೆಯದನ್ನು ಪಡೆಯಲು ಬಹುಕಷ್ಟ ಸಡಬೇಕಾಗುತ್ತದೆ ಆದರೆ ಕೆಟ್ಟವನಾಗಲು ಬಹು ಸುಲಭ ಕಟ್ಟಲು ಕಷ್ಟ, ಕೆಡಹಲು ಸುಲಭ ಯುದ್ಧಸಾರಿ ವಿನಾಶವಾಗಲು ಕೆಲವೇ ಕ್ಷಣ ನಾಗರೀಕತೆಯನ್ನು ಬೆಳೆಸಲು ಒನೇಕ ಶತಮಾನ

ಸ್ವಾತಂತ್ರ್ಯದ ಅರ್ಥ ತಿಳಿಯದಿದ್ದಲ್ಲಿ ಬರುವುದು ಸ್ವೇಚ್ಛಾಚಾರ ಅಂಥ ಸ್ವೇಚ್ಛಾಚಾರಗಳು ಅಧಿಕವಾಗಿ ಬೆಳೆಯುವುದು ಸುಖ ಲೋಲುಪ ರಾಷ್ಟ್ರಗಳಲ್ಲಿ ಹೊಟ್ಟೆಗೆ ರೊಟ್ಟಿ, ಉಡಲು ಬಟ್ಟೆ ದೊರಕಿದ ಬಳಿಕ ಮಾನವ ಇನ್ನಿತರ ಐಷಾರಾಮ ಪದಾರ್ಥಗಳನ್ನು ಪಡೆಯಲು ಹವಣಿಸುತ್ತಾನೆ ಭ್ರಾತೃಕತೆ ಹೆಚ್ಚದಂತೆ ನೈತಿಕಮಟ್ಟ ಕೆಳಗಿಳಿಯುತ್ತದೋ ಎಂದು ಸಂದೇಹವಾಗುತ್ತದೆ

ಅಮೇರಿಕಾದಲ್ಲಾಗಲೀ, ಇಂಗ್ಲಾಂಡಿನಲ್ಲಾಗಲೀ, ಫ್ರಾನ್ಸಿನಲ್ಲಾಗಲೀ ಸ್ವಾತಂತ್ರ್ಯ ಸ್ವಾಚ್ಛಂದ್ಯಕ್ಕೆಳೆದಿದೆ ಪ್ರಧಾನವಾಗಿ ಪುರುಷಾರ್ಥಗಳಿಗೆ ಪೋಷಕವಾದ ಕೌಟುಂಬಿಕ ವ್ಯವಸ್ಥೆ ನಿರ್ಮೂಲನವಾಗುತ್ತಿದೆ ನಗ್ನತೆಯ ಆರಾಧಕರು ತಮ್ಮ ವಾದ ಪುಷ್ಟಿಗೋಸ್ಕರ ಮಾನವೀಯತೆಯನ್ನೇ ದೂರುತ್ತಾರೆ ಸ್ತ್ರೀಯರನ್ನು ಶೋಷಣೆ ಮಾಡುವ ಇನ್ನೊಂದು ವಿಧವೇ ನೈಟ್‌ಕ್ಲಬ್‌ಗಳು, ಚಲಚಿತ್ರಗಳು, ಕ್ಯಾಬರೆ ಇತ್ಯಾದಿ ಪೈಶಾಚಿಕ ನೃತ್ಯಗಳು ಬಂಧನ ಮುಕ್ತ ಮಾನವನಿಲ್ಲಿ ಸ್ತ್ರೀ ಪುರುಷ ಭೇದ ಭಾವನೆ ಸ್ವಲ್ಪ ಮಟ್ಟಿಗೆ ವ್ಯಾಕೃತಿಕ ಪ್ರಾಕೃತಿಕ ವಿಷಮತೆ ದೈವದತ್ತ ಸ್ವಲ್ಪ ಮಟ್ಟಿಗೆ ಕೆಲವು ಪ್ರಾಕೃತಿಕ ವಿಷಮತೆಗಳನ್ನು ಸರಿಪಡಿಸಬಹುದಾದರೂ ಪೂರ್ಣ ನಿಯಂತ್ರಣ ಅಸಾಧ್ಯ

ಏಷಾರಾಮ ಪ್ರವೃತ್ತಿಯ ಬೆಂಕಿಗೆ ಆಜ್ಯಾಹುತಿ ಗೈಯುವ ನಿರ್ಲಜ್ಜ ಬೆಲೆವೆಣ್ಣುಗಳಿಗೆ ಕೊರತೆ ಇಲ್ಲ ನೀತಿ ಒಂದು ಇವರಿಗೆ ಬಂಧನ ಸ್ವೇಚ್ಛಾಚಾರವೇ ಸ್ವಾತಂತ್ರ್ಯ ಯಾವ ಒಂದು ಸಮಾಜದಲ್ಲಿಯೂದರೂ ಕೆಲವಾದರೂ ನೈತಿಕ ಮೌಲ್ಯಗಳಿಂಬೇಕಾಗುತ್ತದೆ ಅಂಥ ಕೆಲವು ನೈತಿಕ ಪ್ರಜ್ಞೆಗಳು ಇಂದೂ ಸಹಕಾರಿ ಉದಾ ತಂದೆ ತಾಯಿಗಳು ಗುರುಹಿರಿಯರದುರು ವಿಧೇಯತೆ ಮತ್ತು ನಮ್ರತೆ, ಸಂಸ್ಥೆಗಳಲ್ಲಿ ಕೆಲಸ ಮಾಡುವಾಗ ಸ್ವಾಮಿನಿಷ್ಠತೆ, ಬಡವರನ್ನು ಕಂಡಾಗ ಅನುಕಂಪ, ನಾಲ್ಕು ಜನರೆದುರು ಸಭ್ಯ ವರ್ತನೆ—ಇವುಗಳೆಲ್ಲ ಕೆಲವು ನೈತಿಕ ಮೌಲ್ಯಗಳು ಇದರೆ ಇವುಗಳನ್ನೇ ಬಂಧನವೆನ್ನುವ ಜನರು ಸ್ವೇಚ್ಛಾಚಾರಕ್ಕೆ ಮನಸೋತಿದ್ದಾರೆಂದು ಅರ್ಥ

ಹದಿನೈದು ವರ್ಷದ ಚಲಚ್ಚಿತ್ರ ನಟಿಯೋರ್ವಳು 'ಚುಂಬನ—ನಗ್ನತೆ ಚಲಚ್ಚಿತ್ರಗಳಲ್ಲಿ ತಡೆ—ಬಿಡುವಿಲ್ಲದೆ ನಡೆಯ ಬಹುದು' ಎಂದರೆ ಮರುದಿನ ದಪ್ಪಕ್ಷರಗಳಲ್ಲಿ ವಾರ್ತಾ ಪತ್ರಿಕೆಗಳಲ್ಲಿ ಆ ವಳ ಹೇಳಿಕೆಗಳು ಘೋಷಿಸಲ್ಪಡುತ್ತವೆ ಹದಿನೈದು ವರ್ಷದವಳಿಗೆ ಬುದ್ಧಿ ಬಂದಿದೆಯೋ ಇಲ್ಲವೋ ಎನ್ನುವಷ್ಟು ವಿಚಾರ ಮಾಡಲು ವಿಳಂಬ ಮಾಡುವ ಬುದ್ಧಿ ಬಲಿಯುತ್ತದೆ

ವಾಣಿಜ್ಯ ವ್ಯವಹಾರಗಳಲ್ಲಿ ವಿಚಿತ್ರವಾದ ಜಾಹೀರಾತುಗಳಿಂದ ಜನರನ್ನು ಮರುಳುಗೊಳಿಸುವ ಕಲೆ ಬಲಿತಿದೆ ಅಸಹ್ಯ ಅಶ್ಲೀಲ ಸ್ತ್ರೀ ಪ್ರದರ್ಶನಗಳು ಯುರೋಪಿನಲ್ಲಿ ಬೆಳೆಯುತ್ತಿದೆ. ಹೆಚ್ಚಿನ ಔದ್ಯೋಗಿಕ ಸಂಸ್ಥೆಗಳ ವಸ್ತುಗಳ ಪ್ರದರ್ಶನದಲ್ಲಿ ಅರೆ ಬತ್ತಲೆಯ ಹೆಣ್ಣೋರ್ವಳು ಇದ್ದೇ ಇರುತ್ತಾಳೆ ಕಾಮುಖ ಭಾವನೆಗಳ ಶೋಷಣೆ ಗೈಯುವ ಈ ಪ್ರವೃತ್ತಿ ಈಗಿನ ಸ್ವತಂತ್ರ ಪ್ರವೃತ್ತಿ!! ಚಲಚ್ಚಿತ್ರದಲ್ಲೂ ಆ ಟ್ಟೇ ಬಾಕ್ಸ್ ಆಫೀಸು ಹಿಟ್ ಆಗಬೇಕಾದರೆ ಆಧುನಿಕ 'ರೊಮಾನ್ಸ್' ಇರಬೇಕು, ಸಂಗೀತದಲ್ಲಿ ಕಾಕಕರ್ಕಶ ಕಾಮಪ್ರೇರಿತ ವಿಚಿತ್ರ ಸ್ವರ ಸಮ್ಮೇಳನವಿರಬೇಕು, ಉಡುಪೆಲ್ಲ ಮಿನಿ' ಆಗಿರಬೇಕು 'ಪೈಕ್ರೋ ಮಿನಿ' ಆಗಿದ್ದರೆ ಉತ್ತಮ ಇದೆಲ್ಲ ಆಧುನಿಕವಾದಗಳು ಬಾಯಿ ತೆರೆದರೆ ಸಾಕು, ಹೇಳುತ್ತಾರೆ "ನಾವೇನು ಹೊಡುವುದು? ಜನರ ಅಭಿರುಚಿಗೆ ಸರಿಯಾಗಿ ಸರಕುಗಳ ಉತ್ಪಾದನೆ ಅಂದದ್ದನ್ನೇ ಜನರು ಅಪೇಕ್ಷಿಸುವಾಗ ನಾವು 'ಸಂಥಿದ್ದನ್ನೇ ಕೊಡಬಾರದೇಕೆ? ಆದರಲ್ಲಿ ಮಡಿವಂತಿಕೆ ಏಕೆ?" ಇವೆಲ್ಲ ಆಧುನಿಕ ಸ್ವತಂತ್ರ ಮನೋಪ್ರವೃತ್ತಿಗಳು

ಸಾಮಾಜಿಕ ವ್ಯವಸ್ಥೆಯಲ್ಲಿ ನಾವು ಕಲವು ನಿಯಮಗಳನ್ನು ನಂಬುತ್ತೇವೆ, ಸ್ವಾಸ್ಥ್ಯಕ್ಕೋಸ್ಕರ ಪಾಲಿಸುತ್ತೇವೆ ರೂಢಿ ಮೂಲವಾಗಿ ಬಂದ ಕೆಲವು ನಿಯಮಗಳಿಗೆ ವಿರೋಧವಾಗಿ ಹೋದರೆ ಸಾಮಾಜಿಕ ರಚನೆಯೇ ಒಡಕುಗೊಂಡು ಜೀವನವೇ ಅವ್ಯವಸ್ಥಿತವಾಗಬಹುದು ಹಿಂದಿನವರೆಲ್ಲ ಕೆಟ್ಟವನಾಗಿದ್ದರು ನಾವೇಕೆ ಒಳ್ಳೆಯವರಾಗಬೇಕು ಎಂಬ ಮೂತಿನಲ್ಲಿ ಹುರುಳಿಲ್ಲ ಕಾವ್ಯಗಳಲ್ಲಿ ಸಂಭೋಗ ವಿಚಾರ ಬಂದ ಮಾತ್ರಕ್ಕೆ ಆ ಕಾವ್ಯ ಅಶ್ಲೀಲವಲ್ಲ ಒಂದು ಸಮಗ್ರ ಜೀವನವನ್ನು ತೆಗೆದು ಕೊಂಡರೆ ಅದೂ ಒಂದು ಅಂಶ ಆದರೆ ಕಾಮವನ್ನೇ ಕೆದಕುವ ಉದ್ದೇಶವಿಟ್ಟುಕೊಂಡಿರುವ ಈಗಿನ ಚಲಚ್ಚಿತ್ರಗಳನ್ನಾಗಲೀ ನವ್ಯಕವನಗಳನ್ನಾಗಲೀ ಏನೆಂದು ಹೇಳಬೇಕು? ಚಲಚ್ಚಿತ್ರಗಳನ್ನು ನೋಡುವವರು ಆಬಾಲವೃದ್ಧರು ಬಾಲಕರ ಮತ್ತು ಅಪ್ರಬುದ್ಧರ ಮೇಲೆ ಇವು ಯಾವ ಪರಿಣಾಮ ಬೀರೀತು?

ಪೂರ್ವದಲ್ಲಿ ನವ ಸೂರ್ಯೋದಯ

(ಒಂದನೇ ಪುಟದಿಂದ)

ಜಯ ಆವೇಸ್ಯಾದ ದೇಶಗಳು ಪಾಕ್ ಬಹಿಷ್ಕಾರಕ್ಕೆ ಸೊಪ್ಪುಹಾಕದಿದ್ದದ್ದು ಗಮನೀಯಾಂಶ

ಶೇಕ ಮುಜಿಬುರ್‌ರವರು ಡಾಕ್ಕಾ ತಲುಪುತ್ತಿರುವಾಗಲೇ ಅಮೆರಿಕೆಯ 'ಎಂಟರ್‌ಪ್ರೈಸ್' ಹಿಂದೂ ಮಹಾಸಾಗರ ಪ್ರದೇಶದಿಂದ ಶಾಂತಸಾಗರದತ್ತ ಕಂಬಿ ಕೆತ್ತಿತು

ಆದು ಬಂದದ್ದೇಕೆ, ಹೋದದ್ದೇಕೆ—ಅಮೆರಿಕನ್ ಅಧಿಕಾರಿಗಳಿಗೇ ಗೊತ್ತು

ಭಾರತ-ಪಾಕ್ ಸಮರ ಬಂಗ್ಲಾ ವಿಮೋಚನಾನಂತರ ಭಾರತವೇ ವಿರಾಮವನ್ನು ಏಕಪಕ್ಷೀಯವಾಗಿ ಘೋಷಿಸಿತ್ತೆಂಬುದು ವಾಸ್ತವಿಕ ಸತ್ಯ

ಆದರೆ, ಅಮೆರಿಕೆ ಈ ಕೀರ್ತಿ ತನ್ನದೆಂದು ಹೇಳಿಕೊಳ್ಳ ಹತ್ತಿತು ಅಮೆರಿಕೆಯ ಒತ್ತಾಯದಿಂದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ತುಂಬು ಬಹುಮತದಿಂದ ಸ್ವೀಕರಿಸಿದ ಗೊತ್ತುವಳಿಯನ್ನು ಭಾರತ ಮಾನ್ಯಮಾಡಿಲ್ಲವೆಂಬುದು ಎಮೆರಿಕನ್ ಕುರುಡು ಕಾಂಚಾಣಪ್ರಿಯರಿಗೆ ಮನವರಿಕೆಯಾಗಲಿಲ್ಲ

ಲಕ್ಷಾಂತರ ಪಾಕಿಸ್ತಾನಿ ಯೋಧ್ಧರ ಪ್ರಾಣದಾನೆಯಿಂದ ಭುಟ್ಟೊ ಮುಜಿಬುರನ್ನು ಬಿಡುಗಡೆ ಮಾಡಿದರೆಂದು ಹೇಳಿದರೆ, ಅಮೆರಿಕೆ ನಂಬುವುದಿಲ್ಲ ಅಮೆರಿಕೆಯು ಸಲಹೆಯಂತೆ ಮುಜಿಬ್ ಬಂದ ವಿಮೋಚನೆಯೆಂದರೆ ಪಾಕ್ ಸಾರ್ವಭೌಮತ್ವಕ್ಕೆ ಕುಂದು

ಮಿಂಚು ಹುಳ ತನ್ನಿಂದಲೇ ಲೋಕಕ್ಕೆ ಬೆಳಕೆಂಬು ತಿಳಿಯುತ್ತದೆ ಅದು ರಾತ್ರಿ ಹೊತ್ತು

ಇದೀಗ ಪೂರ್ವದಲ್ಲಿ ಹೊಸ ಸೂರ್ಯ ಉದಯಿಸಿದ್ದಾನೆ, ಮಿಂಚು ಹುಳಗಳ ಪ್ರತಾಪ ಇಳಿಯ ಹತ್ತಿದೆ ಇತಿಹಾಸದ ಯಥಾರ್ಥತೆಯನ್ನು ಅರಿಯಲಾರದವರು ಹೊಸ ಇತಿಹಾಸ ಬರೆಯಲೆಳಸಬಹುದು. ಆದರೆ ಆದು ಅವರ ಹಿಂದೆಯೇ ಅಲಸಿ ಹೋಗುತ್ತದೆ

ಪುತ್ತೂರು IInd ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex C No 983/1971

ಬಸ್ತಿ ರಾಮ ಕೇಶವ ಶ್ಯಾನ್‌ಭೋಗ್ ಮತ್ತು ಕಂಪನಿ ಇದರ ಪಾರ್ಟನರ್ ಜಿ ವಾಮನ ಶೆಣೈ —ಅರ್ಜಿದಾರ

ಮತ್ತು

ಕೆ ನಾರಾಯಣ ಭಟ್ ಕೂಡಾ —ಎದ್ರಿರು

ನಿಮ್ಮ ಎದ್ರಿ ಕೆ ಗೋವಿಂದ ಭಟ್, ನಿಮ್ಮ ಭಾರ್ಯರ ಮೇಲೆ ಸುಳ್ಳ ತಾಲ್ಲೂ ಜಾಲ್ಸೂರು ಗ್ರಾಮದ ಕೆಮ್ಮನಪಳ್ಳಿ ಎಂಬಲ್ಲಿರುವುದು ಪೋಸ್ಟು ಜಾಲ್ಸೂರು ಇವರೀಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ,

ನಾದಿ ಆರ್ಜಿದಾರರು ನಿಮ್ಮ ಮೇರೆ ಮೂದಿದ ಆಮ್ಲ ಜ್ಯಾರಿಯಲ್ಲಿ ನೀವು ದಿಕ್ರಿ ಅಬೇಜನ್ನು ವಸೂಲು ಕೊಡದಿದ್ದಲ್ಲಿ ನಿಮ್ಮನ್ನು ಯಾಕೆ ಸಿವಿಲ್ ಜೈಲಿಗೆ ಕಳುಹಿಸಬಾರದು ಎಂತ ಸಬಬು ತೋರಿಸಲಿಕ್ಕೆ ತಾರೀಕು 9-2-1972 ಹಗಲು ಗಂಟೆ 11ಕ್ಕೆ ಈ ಕೋರ್ಟಿನಲ್ಲಿ ಇಟ್ಟುಕೊಂಡಿದೆ ಆ ದಿವ್ಸ ನೀವು ಹಾಜರಾಗಿ ಉದಹರಿಸಿಕೊಳ್ಳ ತಕ್ಕದ್ದು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು

By Order of Court

M Raghava

Advocate for Petitioner.

ಪುತ್ತೂರು, 12—1—1972.

ಸಂದರ್ಶಿಸಿರಿ — ಸಂತೃಪ್ತರಾಗಿರಿ!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಶೈಶವಸಿಕ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಸೆರ್ವಿಸ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res. 3272

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಪ್ರಜಾರಾಜ್ಯ ವಿಶೇಷಾಂಕ ೧೯೭೨

NAVAYUGA

REPUBLIC DAY SPECIAL 1972

ಐವತ್ತೈದು

ನಿಮ್ಮ ಮನೆ ಹೊಸ್ತಿಲಲ್ಲಿ ನಮ್ಮ ಪ್ರತಿನಿಧಿ

ಆದರ್ಶ ಡಿಪಾಸಿಟ್

ಎಂಬ ನಮ್ಮ ನೂತನ ಯೋಜನೆಯ ಪರಿಚಯವನ್ನು ಮಾಡಿಸುವನು.

ನೀವು ದಿನಂಪ್ರತಿ 25 ಪೈಸೆಗಳಷ್ಟು ಗೌಣ ಮೊತ್ತವನ್ನು ಉಳಿಸಿದರೂ ಸರಿ; ಸಿಂಡಿಕೇಟ್ ಬ್ಯಾಂಕು ನಿಮ್ಮ ಮನೆ ಬಾಗಿಲಿಗೇ ಬಂದು ಆ ಮೊತ್ತವನ್ನು ಸಂಗ್ರಹಿಸಿಕೊಳ್ಳುವುದು. ದೈನಂದಿನ ಉಳಿತಾಯಗಾರರಿಗೆ ಅನನ್ಯವಾದ ಯೋಜನೆ ಇದು. ಸಂಗ್ರಹವಾದ ನೊಬಲಗನ್ನು 5 ವರ್ಷಗಳ ನಂತರ ಸಾಲಿಯಾನ್ 5% ಬಡ್ಡಿಯೊಂದಿಗೆ ಮರಳಿ ಪಡೆಯಬಹುದು. ಎರಡು ವರ್ಷಗಳ ನಂತರವೂ ಭಾಗಶಃ ಬಡ್ಡಿಯೊಂದಿಗೆ ನೊಬಲಗನ್ನು ಪಡಕೊಳ್ಳುವ ಅವಕಾಶವಿದೆ. ಜನವರಿ 1, 1972ರಿಂದ ಈ ಯೋಜನೆಯು ಕೆಳಗಿನ ಸ್ಥಳಗಳಲ್ಲಿರುವ ನಮ್ಮ ಶಾಖೆಗಳಲ್ಲಿ ಕಾರ್ಯಾಚರಣೆಗೆ ಬಂದಿರುವುದು.

○ ಮದರಾಸು ○ ಹೈದರಾಬಾದ್ ○ ಸೆಕುಂದರಾಬಾದ್
○ ಪೂನಾ ○ ಮೈಸೂರು ○ ಬೆಂಗಳೂರು ○ ಮಂಗಳೂರು
○ ಹುಬ್ಬಳ್ಳಿ ○ ಬೆಳಗಾಂವಿ ○ ಉಡುಪಿ ○ ಮಣಿಪಾಲ
○ ಚಾಮರಾಜನಗರ ○ ಹಾಸನ ○ ಕುರ್ಜೋರಂ ○ ಪಂಜಿಂ
○ ಮಾಪುಸಾ ○ ಸೆಂಕ್ವಿಲಮ್ ○ ಬೆಟಮ್ ○ ನವೇಲಿಮ್

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ: ಮಣಿಪಾಲ (ಮೈಸೂರು ರಾಜ್ಯ)

ಶಾಖೆಗಳು :

500 ಕ್ಕೂ ಮಿಕ್ಕಿವೆ.

ಕೆ. ಕೆ. ಪೈ
ಕಸ್ಟೋಡಿಯನ್

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 21

ಸಂಸ್ಥಾಪಕರು :
ದಿ ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೫೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಚಿರಸ್ಮರಣೀಯ ವಿಜಯವರ್ಷ

೧೯೭೨ರ ಗಣರಾಜ್ಯ ದಿನ ಇದುವರೆಗಿನ ಗಣರಾಜ್ಯ ದಿನಗಳಿಗಿಂತ ತೀರ ಭಿನ್ನವಾದದ್ದು. ಕಳೆದ ವರ್ಷ ನಾವೀದಿನವನ್ನು ರಾಷ್ಟ್ರಪತಿಗಳ ನೇತೃತ್ವದಲ್ಲಿ, ಜೋಪಾಸನಾ ಸರಕಾರದ ಮಾರ್ಗದರ್ಶನದಲ್ಲಿ ಆಚರಿಸಿದ್ದೆವೆಂಬುದು ನಿಜವಾದರೂ, ಇಂದಿನ ಪರಿಸ್ಥಿತಿ ಬೇರೆಯೂದದ್ದು. ಕಳೆದ ಮಾರ್ಚಿ ತಿಂಗಳಲ್ಲಿ ಲೋಕ ಸಭೆಗೆ ಮಧ್ಯಾವಧಿ ಚುನಾವಣೆಗಳು ನಡೆದುವು. ಈ ಚುನಾವಣೆಗಳಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಇಂಡಿಕೇಟು ತುಂಬಿ ತುಳುಕಾಡುವ ಬಹುಮತವನ್ನು ಗಳಿಸಿತು. ಅವರ ವಿರುದ್ಧ ಏರ್ಪಡಿಸಿಕೊಂಡಿದ್ದ ಚತುರ್ ಪಕ್ಷಗಳ ಐಕ್ಯರಂಗವು ಧೂಳೀಪಡಸರಿತವಾಗಿ ಹೋಯಿತು. ದ್ರಾವಿಡ ಮುನ್ನೇತ್ರ ಕಳ್ಳಗಂ ಪ್ರಾದೇಶಿಕ ಪಕ್ಷವಾಗಿ ಬದುಕಿಕೊಳ್ಳಬೇಕಾದರೆ, ಇಂಡಿಕೇಟನೊಡನೆ ತೀವ್ರ ಹೊಡೆದಾಟಕ್ಕೇ ನಿಂತು ವಿಧಾನ ಸಭಾ ಸ್ಥಾನಗಳಲ್ಲಿ ಒಂದನ್ನೂ ಅದಕ್ಕೆ ಕೊಡಲು ನಿರಾಕರಿಸಬೇಕಾಯ್ತು. ಉಳಿದೆಲ್ಲ ರಾಜ್ಯಕೀಯ ಪಕ್ಷಗಳು ತಮ್ಮ ರಂಗನ್ನು ಸಂಪೂರ್ಣ ಕಳೆದುಕೊಂಡದ್ದು ಸರ್ವವಿದಿತ. ಪ್ರಜಾಸತ್ತೆಯ ಆರೋಗ್ಯಕ್ಕೆ ಈ ಸೋಲು ನೆನ್ಮುದಿ ತರುವಂತಹುದಲ್ಲವಾದರೂ ಇದನ್ನು ಆಯೂ ಪಕ್ಷಗಳೇ ತಂದುಕೊಂಡದ್ದೆಂಬುದರಿಂದ ಇತರರೇನನ್ನೂ ಹೇಳಲಾರರು; ಹೇಳಿಬಾರದು.

ಹೊಸ ಲೋಕಸಭೆಯು ಸೇರುವುದಕ್ಕೂ ಬಾಂಗ್ಲಾದೇಶದಲ್ಲಿ ಹೊಸ ಇತಿಹಾಸ ಬರೆಯುವುದಕ್ಕೂ ಸರಿ ಹೋಯ್ತು. ವಂಗಬಂಧು ಶೇಕ ಮುಜಿಬುರ್ ರೆಹಮಾನರನ್ನು ತಮ್ಮ ಜಾಲದಲ್ಲಿ ಸಿಕ್ಕಿ ಬೀಳುವಂತೆ ಮಾಡುವಲ್ಲಿ ಆಂದಿನ ಮತ್ತು ಇಂದಿನ ಪಾಕ್ ರಾಷ್ಟ್ರಪತಿಗಳು ಯೂಹ್ಯಾಖಾನರೂ ಜುಲ್ ಫಿಕರ್ ಅಲಿ ಭುಟ್ಟೋ ಆವರೂ ಅಸಮರ್ಥರಾಗಿ ಬಾಂಗ್ಲಾ ಏಕಪಕ್ಷೀಯವಾಗಿ ಸ್ವಾತಂತ್ರ್ಯವನ್ನು ಘೋಷಿಸಿತು. ಯೂಹ್ಯಾಖಾನರ ಸೈನಿಕ ಶಕ್ತಿಗೆದುರಾಗಿ ಬಾಂಗ್ಲಾ ಜನತೆ ಕತ್ತಿ ಹಿರಿಯುವುದು ಅನಿವಾರ್ಯವಾಯ್ತು. ಭಾರತದ ಸಂಸತ್ತು ಬಾಂಗ್ಲಾ ಪ್ರಜೆಗಳಿಗೆ ತನ್ನ ಸಹಾನುಭೂತಿಯನ್ನು ತೋರಿಸಿ ಲೋಕದ ಹಲೆಯ ದಾರಿಯನ್ನು ಬದಲಾಯಿಸಲು ನಾಂದಿ ಹಾಡಿತು. ಮುಂದೆ ಕೋಟಿ ಸಂಖ್ಯೆಯ ನಿರಾಶ್ರಿತರು ಭಾರತಕ್ಕೆ ಓಡಿಬಂದದ್ದು, ಪಾಕ್ ಸೈನಿಕರು ಬಾಂಗ್ಲಾದಲ್ಲಿ ನರಮೇಧ ನಡೆಸಿದ್ದು, ಡಿಸೆಂಬರ್‌ದಲ್ಲಿ ಭಾರತದ ನೆಲವನ್ನು ಆಕ್ರಮಿಸಿದ್ದು, ವಿಮಾನ ದಾಳಿಗೆ ತೊಡಗಿದ್ದು— ಪ್ರತಿಯೊಗಿ ಭಾರತೀಯ ಸೇನೆಗಳು ಬಾಂಗ್ಲಾವನ್ನು ನುಗ್ಗಿ ಅಲ್ಲಿನ ಮುಕ್ತಿವಾಹಿನಿಯೊಡನೆ ಕೂಡಿ ಪಾಕ್ ಪಡೆಗಳನ್ನು ಹಣ್ಣುಗಾಯಿ-ನೀರುಗಾಯಿ ಮಾಡಿ ಬಾಂಗ್ಲಾ ವಿಮೋಚನೆಗೊಳಿಸಿದ್ದು ಲೋಕಕ್ಕೇ ತಿಳಿದ ಸಂಗತಿ. ಸಚ್ಚಿನ ವಲಯದಲ್ಲೂ ಪಾಕ್ ನೆಲದಲ್ಲೇ ಯುದ್ಧ ಮಾಡಿ ಅವರ ಹಲವಾರು ಆಯಕಟ್ಟಿನ ಠಾಣೆಗಳನ್ನು ಹಿಡಿದುಕೊಂಡದ್ದರಿಂದಲೂ ಭಾರತದ ಶಕ್ತಿ—ದೃಢತೆಯ ಪರಿಚಯ ಲೋಕಕ್ಕೆ ಸುಪರಿಚಿತವಾಯ್ತು. ಶ್ರೀಮತಿ ಗಾಂಧಿಯವರ ಹಿರಿತನದಲ್ಲಿ ದೇಶವೊಂದು ಪ್ರಜೆಯೊಗಿ ಈ ವಿಜಯದಲ್ಲಿ ಪಾಲು ಗೊಂಡಿತು. ಇದು ಅತ್ಯಂತ ಗಣನೀಯವಾದ ವಿಜಯ. ಇದರಿಂದಾಗಿ ಅಮೆರಿಕೆ ಯೊಡನಿರುವ ನಮ್ಮ ಸಂಬಂಧ ಮತ್ತೊಮ್ಮೆ ಬಿಗಡಾಯಿಸಿದೆಯೆಂಬುದು ನಿಜ. ಆದರೆ, ನಮ್ಮ ಸಾರ್ವಭೌಮತೆ ಮತ್ತು ಸ್ವತಂತ್ರ ನೀತಿಯ ಅಸ್ತಿತ್ವವನ್ನು ಒಪ್ಪಿಕೊಳ್ಳಲು ಹೃದಯರೊಡನೆ ಮಿತ್ರತ್ವವೂ ಬೇಕಿಲ್ಲವೆಂಬ ದೃಢ ನಿಲುಮೆ ನಾವು ತಳೆದಿದ್ದೇವೆ. 'ನಮ್ಮ ಮೈತ್ರನ'ವನ್ನು ನಾವಿಂದು ಎತ್ತಿತೋರಿಸಿದ್ದೇವೆ. ಪರದೇಶಗಳ ಒಂದಂಗುಲ ನೆಲವೂ ನಮಗೆ ಬೇಡ, ನಮ್ಮ ಒಂದಂಗುಲ ನೆಲವನ್ನೂ ಬಿಟ್ಟುಕೊಡಲಾರೆವು ಎಂಬುದನ್ನು ಆಕ್ರಮಣವನ್ನು ಸಹಿಸಿಕೊಂಡಿರಲಾರೆವೆಂಬುದನ್ನು; ವಿದೇಶೀಯ ದೈತ್ಯ ಶಕ್ತಿಗಳ ಅನ್ಯಾಯವನ್ನು ಒಪ್ಪಿಕೊಳ್ಳೆವೆಂಬುದನ್ನು ಡಣಾಡಂಗುರವಾಗಿ ಸಾರುವಷ್ಟು ಪ್ರಬುದ್ಧಾವಸ್ಥೆಗೆ ನಾವು ಬಂದು ಮುಟ್ಟಿದ್ದೇವೆ— ಇಂದು ಅಭಿಮಾನಾಸ್ಪದ.

ದೇಶವು ಈ ವರ್ಷ ವಿದೇಶೀಯರ ಭವಿಷ್ಯವನ್ನು ಮೊರಿ ಆಹಾರ ವಿಷಯದಲ್ಲಿ ಸ್ವಾವಲಂಬನೆಯ ಗುರಿಮುಟ್ಟಿದೆ. ಉದ್ಯೋಗ—ದಂಥೆಗಳಲ್ಲೂ ನಾವು ತೀವ್ರ ಮುಂದುವರಿದಿದ್ದೇವೆ. ನಮ್ಮ ದೇಶ ನಿರ್ಮಿತ ನ್ಯಾಟ್ ವಿಮಾನೆಗಳ ಶಕ್ತಿ ಪ್ರದರ್ಶನವೀವರ್ಷವಾಯ್ತು. ಸಾಮೂಹಿಕ ಕ್ಯಾಂತಿಗಾಗಿ ಒಂದೊಂದೇ ಕ್ರಮಗಳನ್ನು ನಾವು ಕೈಕೊಳ್ಳುತ್ತಿದ್ದೇವೆ. ರಾಜ—ಮಹಾರಾಜರ ರಾಜಧನ ಮತ್ತಿತರ ಸೌಲಭ್ಯಗಳನ್ನು ರದ್ದು ಮಾಡಿದ್ದಾಯ್ತು. ಸಾಮಾಜಿಕ ಅಭಿವೃದ್ಧಿಯ ದಾರಿಯಲ್ಲಿ ಅಡ್ಡ ಬರದಂತೆ ಸಂವಿಧಾನವನ್ನೇ ತಿದ್ದುಪಡಿ ಮಾಡಿಯೂಯ್ತು. ಬಡ ಜನತೆಯನ್ನು ಸಾಂಪತ್ತಿಕವಾಗಿಯೂ ನೈತಿಕವಾಗಿಯೂ ಉನ್ನತೀಕರಿಸುವ ಕಾರ್ಯಕ್ರಮಗಳಿನ್ನು ಆರಂಭವಾಗಬೇಕು. ಪಾಕ್—ಭಾರತ ಸಮರದಿಂದ ನಮಗಾದ ಹಾನಿಯೆಷ್ಟೆಂದು ಊಹನಾತೀತ. ಬಾಂಗ್ಲಾ ಶರಣಾರ್ಥಿಗಳ ಸ್ವದೇಶಾಭಿಗಮನವಿನ್ನು ಎರಡು–ನೂರು ತಿಂಗಳುಗಳಲ್ಲಿ ಸಂಪೂರ್ಣವಾಗಬಹುದು. ಇದುವರೆಗೆ ಅವರನ್ನು ಸಾಕುವ ಹೊಣೆ ನಮ್ಮ ಮೇಲಿತ್ತು. ಇನ್ನು ಮುಂದೆ ಸಮರದ ನಷ್ಟವನ್ನೂ ತುಂಬಿಕೊಳ್ಳುವುದು ಅಗತ್ಯವಾಗಿದೆ. ಇದಕ್ಕಾಗಿ ದೇಶಕ್ಕೆ ದೇಶವೇ ತ್ಯಾಗಕ್ಕೆ ಸಿದ್ಧವಾಗಬೇಕಾಗಿದೆ. ಆದುದರಿಂದ ಆರ್ಥಿಕ ಸ್ವಾತಂತ್ರ್ಯದತ್ತ ನಮ್ಮ ಹೆಜ್ಜೆ ಬಿರುಸಿನದ್ದಾಗ ಬೇಕಾದರೆ, ನಾವು ತ್ಯಾಗನುಯಿಗಳಾಗಲೇ ಬೇಕಾಗುತ್ತದೆ.

ನಮ್ಮ ನೆರೆಯಲ್ಲಿರುವ ಪಾಕ್ ಸೈನಿಕರನ್ನು ಅವರ ದೇಶಕ್ಕೆ ಕಳಿಸಬೇಕಾಗಿದೆ.—ವಂಗಬಂಧು ಶೇಕ ಮುಜಿಬುರ್ ರೆಹಮಾನರನ್ನು ಬೇಷರತ್ತಾಗಿ ಬಂಧ ಮುಕ್ತಗೊಳಿಸಿದ ಭುಟ್ಟೋಗೆ ಅಭಿನಂದನೆಗಳು–ಭಾರತ ಉಪಖಂಡದಲ್ಲಿ ಶಾಂತಿ ಬೇಕೆನ್ನುವ ಪಾಕ್–ಬಾಂಗ್ಲಾ ಮತ್ತು ಭಾರತಗಳು ಒಂದಾಗಿ ಬದುಕಬೇಕಾಗಿದೆ. ಪಾಕ್ ನಾಯಕರು ಇದಕ್ಕೆ ಸಿದ್ಧರಿದ್ದಾರೆಯೇ ಎಂಬುದೇ ಮುಖ್ಯ ಪ್ರಶ್ನೆ. ಉಪಖಂಡದ ಶಾಂತಿಯು ತನ್ಮೈಕೈಯ್ಯಲ್ಲಿ ತದಿಗಿಣವಾಡುತ್ತಿದೆಯೆಂಬುದನ್ನು ಪಾಕ್ ಮತ್ತದರ ಮಿತ್ರ ರಾಷ್ಟ್ರಗಳು ಮನಗಾಣುವಂತೆ ಮಾಡಬೇಕಾಗಿದೆ. ತಾತ್ಕಾಲಿಕ ಶಾಂತಿಯು ಸಮರ ತಯಾರಿಗೆ ಸಿದ್ಧತಾಕಾಲ ಮಾತ್ರವೆಂಬುದನ್ನು ಪಾಕಿಸ್ತಾನ ತೋರಿಸಿಕೊಟ್ಟಿದೆ.

ಈ ವಿಜಯೋನ್ಮಾದದಲ್ಲಿ ದೇಶದ ಹಲವು ರಾಜ್ಯಗಳಲ್ಲಿ ಮತ್ತು ಕೇಂದ್ರಾಧೀನ ಪ್ರದೇಶಗಳಲ್ಲಿ ವಿಧಾನ ಸಭೆಗಳಿಗೆ ಚುನಾವಣೆಗಳಿಗೆ ಏರ್ಪಡಿಸಲಾಗಿತ್ತು. ಈ ಅವಕಾಶವನ್ನೂ ಕೆಲವು ರಾಜ್ಯಗಳನ್ನು ಸೇರಿಸಲಾಯ್ತು. ಅಂದರೆ, ಶ್ರೀಮತಿ ಗಾಂಧಿಯವರು ನಾಯಕಿಯೊಗಿರುವಾಗ ದೇಶ ಅದ್ಭುತ ವಿಜಯಗಳಿಸಿರುವುದರಿಂದ ತನ್ನ ಪಕ್ಷ ಗೆಲ್ಲಲು ಇದೇ ಪರಿಪಕ್ವ ಕಾಲವೆಂದು ಇಂಡಿಕೇಟಿಗರು ನಂಬಿದ್ದಾರೆ. ೧೯೭೨ರಲ್ಲೂ ಭಾರತವು ಪಾಕಿಸ್ತಾನದ ಮೇಲೆ ವಿಜಯ ಗಳಿಸಿದರೂ ಅಂದಿನ ಕಾಂಗ್ರೆಸ್ಸು ೧೯೭೨ರಲ್ಲಿ ಕರಿಣದಲ್ಲೇ ಅಧಿಕಾರ ಉಳಿಸಿಕೊಳ್ಳಬೇಕಾಯ್ತೆಂಬುದನ್ನು ಗಮನಿಸಿದರೆ, ವಿಜಯೋನ್ಮಾದದಿಂದಲೇ ಜನತೆಯನ್ನು ಮರುಳುಗೊಳಿಸಬಲ್ಲೆವೆಂಬುದು ತಪ್ಪಾಗುತ್ತದೆ. ಶ್ರೀಮತಿ ಗಾಂಧಿಯವರ ಮುತ್ಸದ್ಧಿತನ ಪ್ರಶಂಸನೀಯ; ನಮ್ಮ ಸೇನಾನಿಗಳ ಕಾರ್ಯಾಚರಣೆ ಮತ್ತಷ್ಟು ಶ್ಲಾಘನೀಯ. ಆದೇನಿದ್ದರೂ ಈ ಬಾರಿ ಇಂಡಿಕೇಟು ದಿಗ್ವಿಜಯ ಗಳಿಸಿದೆ ಹೋದರೇನೇ ಆಶ್ಚರ್ಯ—ವಿರೋಧಿ ಪಕ್ಷಗಳು ನಿರ್ಬಲಾತಿ ನಿರ್ಬಲವಾದರೆ, ಪ್ರಜಾಪ್ರಭುತ್ವ ಬಲಗುಂದುತ್ತದೆ. ನಮ್ಮ ವಿರೋಧಿ ಪಕ್ಷಗಳು ಜನತೆಯ ಅವಶ್ಯಕತೆಗಳತ್ತ ದೃಷ್ಟಿಹಾಯಿಸದೆ ಹೋದರೆ, ಅವಕ್ಕೆ ಭವಿಷ್ಯವೇ ಇಲ್ಲ. ಈ ದೃಷ್ಟಿಯಿಂದ ಈ ಬಾರಿಯ ಚುನಾವಣೆಗಳು ರಾಜ್ಯಕೀಯಪಕ್ಷಗಳ ಭವಿಷ್ಯ ಬರೆಯುತ್ತವೆಂದು ಹೇಳಬಹುದು

ಭಾರತದ ಗಣರಾಜ್ಯ ಉನ್ನತವಾಗಲಿ; ಅದರ ಕೀರ್ತಿ ಪತಾಕೆ ದಿಗ್ದಿಗಂತಗಳಲ್ಲಿ ಹಾರಾಡಲಿ ಜಯಘೋಷ ದಿಗ್ಭಿತ್ತಿಗಳಲ್ಲಿ ಮಾರ್ದನಿಸಲಿ, ಸ್ವತಂತ್ರತೆ,ಸಹೋದರತೆ ಮತ್ತು ಸಮಾನತೆಗಳು ಮುಪ್ಪುರಿಗೊಂಡು ವಿಶ್ವ ಮಾನ್ಯವಾಗಲಿ.

ಕೃತಜ್ಞತೆ–ಅಭಿನಂದನೆ

ಗಣರಾಜ್ಯ ದಿನದ ಶುಭ ಮುಹೂರ್ತದಲ್ಲಿ ನಮ್ಮೆಲ್ಲ ಲೇಖಕರಿಗೆ, ಚಂದಾದಾರರಿಗೆ ಜಾಹೀರಾತುದಾರರಿಗೆ ಅಸಂಖ್ಯಾತ ಹಿತಚಿಂತಕರಿಗೆ ನಮ್ಮ ಸುವಿನಯ ಕೃತಜ್ಞತೆಗಳನ್ನೂ ಶುಭಾಶಯಗಳನ್ನೂ ಸಮರ್ಪಿಸುತ್ತೇವೆ. ಈ ವಿಶೇಷ ಸಂಚಿಕೆಯನ್ನು ತಯಾರಿಸುವಲ್ಲಿ ಪ್ರತ್ಯಕ್ಷ ಪರೋಕ್ಷವಾದ ಸಮಸ್ತ ಹಿತೈಷಿಗಳಿಗೆ ಅಭಿನಂದನೆಗಳನ್ನು ಅರ್ಪಣೆ ಮಾಡುತ್ತೇವೆ.

—ಸಂ. ನ.

ಮುಖಚಿತ್ರ

ಶೇಕ ಮುಜಿಬುರ್ ರೆಹಮಾನರು ಏಳೂವರೆ ಕೋಟಿ ಬಾಂಗ್ಲಾ ಜನತೆಯ ಸ್ವಾತಂತ್ರ್ಯ ಘೋಷಿಸಿದ ಪಲಗ ಬಂಧು ಅಧವಾ ವಂಗ ಪಿತ.

ಪಾಕ್ ಸೈನಿಕ ಶಾಸಕರು ಬಾಂಗ್ಲಾದಲ್ಲಿ ಯಜ್ಞಶಾಚೆ ಕಟ್ಟಿ ನರಮೇಧ ಪೂರೈತ್ತಿರುವಾಗ, ಬಾಂಗ್ಲಾ ವಿಮೋಚನೆಯನ್ನು ಸಾಧಿಸಿದ ಬಾಂಗ್ಲಾ ವೀರೆ–ಭಾರತ ರತ್ನ–ಅರುನತ್ತು ಕೋಟಿ ಭಾರತೀಯರ ಅಕ್ಕರೆತ್ತರಗಳ ರತ್ನದೀಪ–

ಶ್ರೀಮತಿ ಇಂದಿರಾ ಗಾಂಧಿ

ಶಾಂತಿ ಸಾಧನೆಗಾಗಿ
ಅಣುಶಕ್ತಿ ಅಭಿವೃದ್ಧಿ

ಭಾರತದ ಭಾಭಾ ಅಣುಶಕ್ತಿ ಕೇಂದ್ರ ದಶವಾರ್ಷಿಕ ಯೋಜನೆಯೊಂದನ್ನು ರೂಪಿಸಿ ತನ್ಮೂಲಕ ಅಣುಶಕ್ತಿಯನ್ನು ಶಾಂತಿಗಾಗಿ ಬಳಸಿ ಮಾನವ ಕಲ್ಯಾಣ ಸಾಧಿಸುವ ದೀಕ್ಷೆ ತೊಟ್ಟು, ಆ ದಾರಿಯಲ್ಲಿ ರಭಸದಿಂದ ಮುಂದಡಿಯಿಡುತ್ತಿದೆ

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಜೀವನ ಕ್ರಮದಲ್ಲಿ ಅಣುಶಕ್ತಿಗೆ ವಿಶಿಷ್ಟ ಸ್ಥಾನವಿದೆ ಪ್ರಸ್ತುತ ಶತಮಾನದ ಅಣುಶಕ್ತಿಗೆ ತಕ್ಕಂತೆ ಅಣುಶಕ್ತಿ ಕೈಗಾರಿಕೆಯೂ ಬೆಳೆದು ಬರಬೇಕು ಇದೇ ರೀತಿ ಈ ಕ್ಷೇತ್ರದ ಉಸ್ತುವಾರಿ ಕ್ರಮಗಳೂ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದಬೇಕು ಈ ಒಂದು ಧ್ಯೇಯವನ್ನು ಲಕ್ಷದಲ್ಲಿಟ್ಟುಕೊಂಡೇ 1957ರ ಆಗಸ್ಟ್ ತಿಂಗಳಲ್ಲಿ ಮುಂಬಯಿಯ ಟ್ರಾಂಬೆ ಎಂಬಲ್ಲಿ, ಭಾಭಾ ಅಣುಶಕ್ತಿ ಕೇಂದ್ರವನ್ನು ಸ್ಥಾಪಿಸಲಾಯಿತು. ಇದು ಶಾಂತಿಯುತ ಉದ್ದೇಶಕ್ಕಾಗಿ ಅಣುಶಕ್ತಿ ಕ್ಷೇತ್ರದಲ್ಲಿ ಸಂಶೋಧನೆ ನಡೆಸುವ ಭಾರತ ಸರ್ಕಾರದ ಒಂದು ರಾಷ್ಟ್ರೀಯ ಕೇಂದ್ರವಾಗಿದೆ ಭಾಭಾ ಅಣುಶಕ್ತಿ ಕೇಂದ್ರದಲ್ಲಿ ಈಗ 9800 ಮಂದಿ ಉದ್ಯೋಗಿಗಳಿದ್ದಾರೆ. ಈ ನೌಕರಿ 2600 ಮಂದಿ ವಿಜ್ಞಾನಿಗಳು ಹಾಗೂ 4200 ಮಂದಿ ತಂತ್ರಜ್ಞರನ್ನಾಗಿ ಇಷ್ಟೊಂದು ಸಿಬ್ಬಂದಿಯಿರುವ ಈ ಕೇಂದ್ರವು ಇಡೀ ದೇಶದಲ್ಲೇ ಅತಿದೊಡ್ಡ ವೈಜ್ಞಾನಿಕ ಸಂಸ್ಥೆಯಾಗಿದೆ ಇದು ವಿಶ್ವವಿದ್ಯಾಲಯಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದೆ. ಈ ಕೇಂದ್ರದ ವಿಜ್ಞಾನಿಗಳ ಮಂಡಲಿಯ ಅನೇಕ ಸದಸ್ಯರು ವಿಶ್ವವಿದ್ಯಾಲಯಗಳ ನಾನಾ ಅಧ್ಯಯನ ವಿಭಾಗಗಳ ಪ್ರಮುಖರಾಗಿದ್ದು ವಿದ್ಯಾರ್ಥಿಗಳ ವಿದ್ಯಾಭ್ಯಾಸ ಕ್ರಮದಲ್ಲಿ ಪರಿವರ್ತನೆಯನ್ನು ತರಲು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

ಭಾಭಾ ಅಣುಶಕ್ತಿ ಕೇಂದ್ರ ಅಣು ಭೌತಶಾಸ್ತ್ರ ಹಾಗೂ ಅಣುಶಕ್ತಿ ವಿಕಿರಣ—ರಸಾಯನಿಕಶಾಸ್ತ್ರ ಇತ್ಯಾದಿ ವಿಷಯಗಳಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ತರಪೇತಿ ವರ್ಗಗಳನ್ನು ನಡೆಸುತ್ತಿದೆ ಈ ಕೇಂದ್ರದ ತರಪೇತಿ ಸಂಸ್ಥೆಯು ಪ್ರತಿ ವರ್ಷವೂ ನಾನಾ ವಿಷಯಗಳಲ್ಲಿ ಸುಮಾರು 150 ಮಂದಿ ವಿಜ್ಞಾನಿಗಳಿಗೆ ಹಾಗೂ ಎಂಜಿನೀಯರರಿಗೆ ತರಪೇತಿ ನೀಡಲು ಸಮರ್ಥವಾಗಿದೆ ತರಪೇತಿಯ ಅವಧಿ ಒಂದು ವರ್ಷ ತರಪೇತಿಪಡೆಯುವವರಿಗೆಮೂಲಭೂತ ವಿಷಯಗಳ ಬಗ್ಗೆ ತಿಳಿವಳಿಕೆ ಮೂಡಿಸುವುದು ಈ ತರಪೇತಿ ವರ್ಗದ ಮುಖ್ಯ ಉದ್ದೇಶ ಅಣುಶಕ್ತಿ ಕಾರ್ಯಕ್ರಮ ಎಲ್ಲಾ ಕ್ಷೇತ್ರಗಳಿಗೂ ಸಂಬಂಧಿಸಿರುವುದರಿಂದ ಸರ್ವತೋಮುಖ ಜ್ಞಾನಾರ್ಜನೆ ಈ ಕಾರ್ಯಕ್ರಮದ ಒಂದು ವೈಶಿಷ್ಟ್ಯ. ವಿಜ್ಞಾನದ ಎಲ್ಲಾ ವಿಷಯಗಳಲ್ಲಿ ಅಭ್ಯರ್ಥಿಗಳಿಗೆ ಈ ಕೇಂದ್ರ ತರಪೇತಿ ನೀಡುತ್ತಿದೆ.

ರೇಡಿಯೋ ಆ್ಯಕ್ಟಿವ್ ಮೂಲಗಳ ಬಗೆ ಸರಿಯಾದ ತಿಳಿವಳಿಕೆ ಮೂಡಿಕೊಡುವ ಉದ್ದೇಶದಿಂದ, ಭಾಭಾ ಅಣುಶಕ್ತಿ ಕೇಂದ್ರ ವಿಶೇಷ ಪ್ರಾಯೋಗಿಕ ತರಪೇತಿ ವ್ಯವಸ್ಥೆಯನ್ನೂ ಜಾರಿಗೆ ತಂದಿದೆ. ಈ ಕೇಂದ್ರದಲ್ಲಿಯಶಸ್ವಿಯಾಗಿ ತರಪೇತಿ ಪೂರೈಸಿದವರನ್ನು ಅಣುಶಕ್ತಿ ಕೇಂದ್ರದ ನಾನಾ ಶಾಖೆಗಳಿಗೆ ಹಾಗೂ ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ, ಅಣುವಿದ್ಯುತ್ ಯೋಜನೆಗಳು, ಅಣುಶಕ್ತಿ ಖನಿಜ ಅಭಿವೃದ್ಧಿ ಶಾಖೆ, ಹಾಗೂ ಬಾಹ್ಯಾಕಾಶ ಸಂಶೋಧನಾ ವಿಭಾಗ ಇತ್ಯಾದಿ ಸಂಸ್ಥೆಗಳಿಗೆ ನೇಮಿಸಲಾಗುತ್ತಿದೆ

ತರಪೇತಿ ಸಂಸ್ಥೆಯ ಮುಖಾಂತರ ತರಪೇತಿಗಾಗಿ ಅಭ್ಯರ್ಥಿಗಳನ್ನು ಆರಿಸುವ ಕ್ರಮ ಅತ್ಯಂತ ತೃಪ್ತಿಕರವಾಗಿದೆ ವಿಶ್ವವಿದ್ಯಾನಿಲಯಗಳಲ್ಲಿ ಹಿರಿಯ ತಜ್ಞರುಗಳ ಅಭಾವಕ್ಕೆ ಎಡೆ ಕೊಡದೇ, ಪ್ರತಿಭಾವಂತರಾದ ಯುವಕರನ್ನು ಆಕರ್ಷಿಸಲಾಗುತ್ತಿದೆ. ಇಂತಹ ಒಂದು ವಿಧಾನದಿಂದ ಅಣುಶಕ್ತಿ ಕಾರ್ಯಕ್ರಮವನ್ನು ವಿಸ್ತರಿಸಲು ಸಾಧ್ಯವಾಗಿದೆ.

1970ರಿಂದ ಆರಂಭವಾದ ಅಣು ಶಕ್ತಿಯ ದಶವಾರ್ಷಿಕ ಅಭಿವೃದ್ಧಿ ಕಾರ್ಯಕ್ರಮಕ್ಕೆ ಬೇಕಾದ ಸಿಬ್ಬಂದಿಯನ್ನು ಹೊಂದುವ ಉದ್ದೇಶದಿಂದ ತರಪೇತಿ ವಿಧಾನಗಳಲ್ಲೂ ಅಗತ್ಯವಾದ ಬದಲಾವಣೆ ಮಾಡಲು ನಿರ್ಧರಿಸಲಾಗಿದೆ

ಇದರಿಂದ ಇಡೀ ದೇಶಾದ್ಯಂತ ಆರಂಭವಾಗಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಈಗಿರುವ ಸೌಲಭ್ಯಗಳ ಪ್ರಯೋಜನ ಪಡೆಯಲು ಸಾಧ್ಯವಾಗುವುದು ಈ ಸಂಸ್ಥೆಗಳ ಸಹಯೋಗದಿಂದ ಮುಂದಿನ ಹತ್ತು ವರ್ಷಗಳಲ್ಲಿ 3000 ಮಂದಿ ವಿಜ್ಞಾನಿಗಳಿಗೆ ಹಾಗೂ ಎಂಜಿನೀಯರುಗಳಿಗೆ ತರಪೇತಿ ಕೊಡಲು ಉದ್ದೇಶಿಸಲಾಗಿದೆ. ತರಪೇತಿ ಸಂಸ್ಥೆಯಲ್ಲಿ ಈಗಿರುವ ಕಾರ್ಯಕ್ರಮಗಳಲ್ಲದೇ, ಕೆಲವೊಂದು ವಿಶೇಷ ತರಪೇತಿ ಕಾರ್ಯಕ್ರಮಗಳನ್ನೂ, ಭಾಭಾ ಅಣುಶಕ್ತಿ ಕೇಂದ್ರವು ಪ್ರಾರಂಭಿಸಿದೆ

ರಿಯಾಕ್ಟರ್ ಕಾರ್ಯನಿರ್ವಹಣಾ ವಿ

(ಮುಂದುವರಿದ ಭಾಗವನ್ನು ಪುಟ ನೋಡಿರಿ)

ಕಮ್ಮಾರನ ಮಗ ಕಮ್ಮಾರನೇ ಆಗಬೇಕಾಗಿಲ್ಲ



ಕಮ್ಮಾರನ ಮಗ ಕಮ್ಮಾರ ವೃತ್ತಿಯನ್ನೇ ಅನುಸರಿಸುವನೆಂಬುದೀಗ ಹಳೆಯಕಾಲದ ಮಾತು. ಇಂದು ಅಂಥ ನಿರ್ಬಂಧಗಳಿಲ್ಲ. ಈಗ ಕಂಡಕ್ಟರನ ಮಗ ಕಲೆಕ್ಟರನಾಗಲೂ ಬಹುದು. ನಾವು ಭೇದಭಾವಗಳಿಲ್ಲದ ಪ್ರಜಾಪ್ರಭುತ್ವದಲ್ಲಿ ಜೀವಿಸುತ್ತಿದ್ದೇವೆ. ಆದರೀ ಅವಕಾಶಗಳನ್ನು ಯೋಗ್ಯರೀತಿಯಲ್ಲಿ ಉಪಯೋಗಿಸಿಕೊಳ್ಳಲು ಮಕ್ಕಳಿಗೆ ವಿದ್ಯೆ ಅವಶ್ಯ.

ಬಡವರಲ್ಲಿ ಬಡವರಿಲ್ಲರೂ ತಮ್ಮ ಮಕ್ಕಳಿಗೆ ಸಾಕಷ್ಟು ವಿದ್ಯೆ ಒದಗಿಸಬಲ್ಲರು. ಹೇಗೆ? ಇದರಲ್ಲಿ ಗುಟ್ಟೇನೂ ಇಲ್ಲ. ಸೂಕ್ತರೀತಿಯ ವಿದ್ಯಾಭ್ಯಾಸದ ವಿಮೆಯೋಜನೆಯ ವಿವರಗಳನ್ನು ನಿಮ್ಮ ಗೆಳೆಯ ಜೀವನ ವಿಮಾ ಏಜಂಟನಿಂದ ತಿಳಿದುಕೊಳ್ಳಿರಿ.

ಜೀವವಿಮೆ
ಗಿಂತ ಶ್ರೇಷ್ಠ
ಉಳಿತಾಯ ಮತ್ತೊಂದಿಲ್ಲ

EP LIC-3/71

ಸಾಧನೆ ಹಿಮಾಲಯ; ಸಿದ್ಧಿ ಗೌರೀಶಂಕರ

ಅದಮಾರು ಮಠದ

ಶ್ರೀ ವಿಬುಧೇಶತೀರ್ಥರು



ಪರ್ಯಾಯ ಪೀಠಾರೋಹಿತ
ಶ್ರೀ ಅದಮಾರು ಮಠದ
ಶ್ರೀ ವಿಬುಧೇಶತೀರ್ಥ ಶ್ರೀಪಾದರು

ಇಳಿಯರ ನಡುವೆ ಅದಮಾರು ಮಠದ ಶ್ರೀ ಪಾದರಾದ ಶ್ರೀ ವಿಬುಧಮಾನ್ಯ ತೀರ್ಥರು ಹರಿಪದವನ್ನೈದಿದರು ತಮ್ಮ ಉತ್ತರಾಧಿಕಾರಿಯನ್ನವರು ಸ್ವೀಕರಿಸದೆ ಇದ್ದುದರಿಂದ, ಆವರನ್ನು ನೇಮಿಸುವ ಹೊಣೆಗಾರಿಕೆ ದ್ವಂದ್ವ ಮಠಾಧೀಶರಾಗಿದ್ದ (ಫಲಿಮಾರು) ಶ್ರೀ ರಘುಮಾನ್ಯತೀರ್ಥರ ಮೇಲೆ ಬಿತ್ತು ಅವರು ಸುಮಾರು ೧೭ ವರ್ಷ ಯಸ್ಸಿನ ವಟುವೊಬ್ಬನನ್ನು ಆರಿಸಿ ಶ್ರೀ ವಿಬುಧೇಶತೀರ್ಥರೆಂದು ನಾಮಕರಣಗೆಯ್ದು ಅದಮಾರು ಮಠದ ಅಧಿಕಾರಿಯಾಗಿ ನಿಯುಕ್ತಗೊಳಿಸಿದರು ಹೀಗೆ ಅದಮಾರು ಮಠದ ಪರಂಪರೆಯಲ್ಲಿ ಮೂವತ್ತೊಂದನೆಯವರಾಗಿ ಶ್ರೀ ವಿಬುಧಮಾನ್ಯತೀರ್ಥರ ಉತ್ತರಾಧಿಕಾರಿಯಾಗಿ ಶ್ರೀ ರಘುಮಾನ್ಯತೀರ್ಥರಿಂದ ಸನ್ಯಾಸ ದೀಕ್ಷಿತರಾದ ಶ್ರೀ ವಿಬುಧೇಶತೀರ್ಥರು ತಸ್ಸ ಆಶ್ರಮದ ೩೬ ವರ್ಷಗಳನ್ನು ಕಳೆದವರು

ಪೂರ್ವಾಶ್ರಮದಲ್ಲಿ ಸಾಕಷ್ಟು ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪಡದುಕೊಂಡಿದ್ದ ಶ್ರೀಪಾದರು ಆಶ್ರಮಾನಂತರ ಶ್ರೀ ಪಡಮನ್ನೂರು ನಾರಾಯಣ ಆಚಾರ್ಯರಿಂದ ನ್ಯಾಯ— ವೇದಾಂತಗಳನ್ನು ಆಳವಾಗಿ ಅಧ್ಯಯನ ಮಾಡಿದರು ಕಾಣೂರು ಮಠಾಧೀಶರಾಗಿದ್ದ ಶ್ರೀ ವಿದ್ಯಾಸಮುದ್ರತೀರ್ಥರಿಂದ ಸರ್ವ ಮೂಲ ಗ್ರಂಥಗಳ ಅಭ್ಯಾಸ ನಡೆಸಿದರು ಉಡುಪಿಯ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಗೌರವ ಪ್ರಾಧ್ಯಾಪಕರಾಗಿ ತನ್ನ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಹೆಂಚಿದ್ದಲ್ಲದೆ ಹಲವಾರು ಶಿಷ್ಯರಿಗೆ ಸುಧಾಪಾಠವನ್ನೂ ಹೇಳಿದರು.

ಈ ಶತಮಾನದ ಉತ್ತರಾರ್ಧದಲ್ಲಿ ದೇಶದ ಸ್ವಾತಂತ್ರ್ಯದೊಡನೆ ಸಾಮಾಜಿಕ-ಧಾರ್ಮಿಕಾದಿ ಎಲ್ಲ ರಂಗಗಳಲ್ಲೂ ಕ್ಷಿಪ್ರ ಕ್ರಾಂತಿಯೂಗ ತೊಡಗಿದೆ ಧರ್ಮ ಪೀಠಗಳು ಹಿಂಬಾಲಕರ ಮತ್ತು ಬಾಲಬಡಕರ ಗೋಷ್ಠಿಯೆಂಬ ಅಪವಾದದಿಂದ ನೈ ತೊಳೆದುಕೊಳ್ಳುವ ಪ್ರಯತ್ನ ನಡೆಸಿವೆ ಅದಮಾರು ಮಠಾಧೀಶರು ಸಂಸ್ಕೃತಿ—ಧರ್ಮ- ಸಮಾಜ—ಹೀಗೆ ಎಲ್ಲ ರಂಗಗಳಲ್ಲಿಯೂ ಆಸಕ್ತರಾಗಿ ಉತ್ಸಾಹದಿಂದ ಕಾರ್ಯಪ್ರವೃತ್ತರಾಗಿದ್ದಾರೆ ಅವರ ಸಾಧನೆ ಹಿಮಾಲಯವಾದರೆ ಸಿದ್ಧಿ ಗೌರೀಶಂಕರ.

ಉಡುಪಿಯ ಸಂಸ್ಕೃತ ಮಹಾ ಪಾಠಶಾಲೆಯು ಅಷ್ಟಮಠಗಳ ಸಹಯೋಗದಿಂದ ಅದಮಾರು ಮಠದ ಶ್ರೀ ವಿಬುಧಪ್ರಿಯ ಶ್ರೀ ಪಾದರ ನೇತೃತ್ವದಲ್ಲಿ ಆರಂಭವಾಗಿತ್ತು ಆದಕ್ಕೆ ಸ್ವತಂತ್ರ ಕಟ್ಟಡವಿಲ್ಲದ್ದನ್ನು ಮನಗಂಡ ಪಲಿಮಾರು ಮಠದ ಶ್ರೀ ರಘುಮಾನ್ಯತೀರ್ಥರು ಅದನ್ನು ನೀಗಿಸಲು ಬದ್ಧಕಂಕಣರಾದರು ಆದರೆ, ಆರಂಭಾವಸ್ಥೆಯಲ್ಲೇ ಅವರು ವೃಂದಾವನಸ್ಥರಾದುದರಿಂದ ಈ ಗುರುತರ ಹೊಣೆಗಾರಿಕೆಯನ್ನು ಇನ್ನೂ ನವಯುವಕರಾದ ಅದಮಾರು ಶ್ರೀಪಾದರು ವಹಿಸಿ ಭವ್ಯ ಭವನದ ನಿರ್ಮಾಣವನ್ನು ಮುಂದುವರಿಸಿ ಅದನ್ನು ಕೊನೆಗೊಳಿಸಿದರು

ಅದಮಾರು ಮಠ ವಿದ್ಯಾ ಸಂಸ್ಥೆಯೊಂದನ್ನು ಬರಿಯ ಶಿಕ್ಷಣ ಪ್ರಸಾರದ ದೃಷ್ಟಿಯಿಂದಲೇ ಸ್ಥಾಪಿಸಿದರು ಈ ಸಂಸ್ಥೆಯೊಗ ಂದಮೂರನೆ ಗ್ರಾಮೀಣ ಪ್ರದೇಶದಲ್ಲಿ ಉನ್ನತ ವ್ರೌಢ ಶಾಲೆ, ಪಡುಬಿದ್ರಿಯಲ್ಲಿ ನ ವ್ರೌಢ ಶಾಲೆ, ಉಡುಪಿಯಲ್ಲಿ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಮತ್ತು ಸಂಧ್ಯಾ ಕಾಲೇಜುಗಳನ್ನು ನಡೆಸಿಕೊಂಡು ಬರುತ್ತಿದೆ ವರಿಣತ ಲೌಕಿಕರೂಸೇರಿರುವ ಕಾರ್ಯಕಾರಿಣಿಯ ದಿಗ್ದರ್ಶನದಲ್ಲಿ ಈ ಶಿಕ್ಷಣಾಲಯಗಳು ಪ್ರಗತಿಪಥದಲ್ಲಿ ಮುಂದುವರಿದಿವೆ. ಅವಮೂರು ಶ್ರೀಪಾದರೇ ಈ ಯೆಲ್ಲ ಸಂಸ್ಥೆಗಳ ಕೇಂದ್ರಬಿಂಮ

ಬೆಂಗಳೂರು—ಮುಂಬಯಿಗಳಲ್ಲಿಯೂ ಶ್ರೀಪಾದರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದ್ದಾರೆ ನ ಣಿಪುರದ ತಮ್ಮ ಮ.ರ ವೆಲ್ಲ ಸಂಸ್ಕೃತ ವಿದ್ಯಾ ಸತ್ರವೊಂದನ್ನು ಸ ಪಿಸಿ ವರಲ್ಲಿ ಯಶಸ್ಸು ಗಳಿಸಿದ್ದಾರೆ

ಪಲಿಮಾರು ಮಠಾಧೀಶ ಶ್ರೀ ರಘುಮಾನ್ಯತೀರ್ಥರು ಶಿಷ್ಯ ಪರಿಗ್ರಹಣ ಮಾಡದೇ ವ್ಯಂಯಾವನಸ್ಥರಾಗುವುದರಿಂದ ಶ್ರೀ ರಘುವಲ್ಲಬತೀರ್ಥರನ್ನು ಆ ಮಠಕ್ಕೆ ನೇಮಿಸಿದರು ೧೯೫೨-೫೪ರ ಪರ್ಯಾಯಾವಧಿಯಲ್ಲಿ ಅವರು ಅತ್ಯಂತ ಕಿರಿಯರಾಗಿದ್ದುದರಿಂದ ಪರ್ಯಾಯವನ್ನು ಅತ್ಯಂತ ಯಶಸ್ವಿಯಾಗಿ ನಡೆಸುವಲ್ಲಿ ಶ್ರೀ ವಿಭುಧೇಶತೀರ್ಥರು ತಮ್ಮ ನುಮನಧನಗಳಿಂದ ನೆರವಾದರು ಆ ಬಳಿಕವೇ (೧೯೫೬—೫೮)ಬಂದು ತನ್ನ ಮೊದಲ ಪರ್ಯಾಯವನ್ನು ಈ ಮೊದಲಲ್ಲವೆಂಬಂತೆ ಅದ್ದೂರಿಯಿಂದ ಮುಕ್ತಾಯಗೊಳಿಸಿ ಕೀರ್ತಿಭಾಜನರಾದರು ಈ ವೇಳೆಯಲ್ಲೇ ಅನರು ಎರಡು ವರ್ಷಗಳ ಕಾಲ ನೂರು ವಟುಗಳಿಗೆ ವೇದ ಪಾಠದ ವ್ಯವಸ್ಥೆ ಮಾಡಿದರು

ಶತಾಯುಷಿ ಶ್ರೀ ಸುಧೀಂದ್ರ (ಪುತ್ತಿಗೆ ಮಠ) ತೀರ್ಥರ ಶತಮಾನೋತ್ಸವ ಮತ್ತು ವರ ಚಿರ ನೆನಪಿಗಾಗಿ ಶ್ರೀ ಕೃಷ್ಣನಿಗೆ ರಜತ ರಥ ಸಮರ್ಪಣೆ—ಈ ಯೆರಡು ಶ್ರೀ ವಿಬುಧೇಶರ್ತೀರ ಅದ್ಭುತ ಸಾಧನೆಗಳು, ಸಾವಿರಾರು ಜನಮಾನಸಗಳ ನೆರವಿನಿಂದ ಇದು ಸಾಧ್ಯವಾಯ್ತು, ಶ್ರೀ ಕೃಷ್ಣನ ಒಲುಗ್ರಹವಿತ್ತು ಎಂದವರು ಅತ್ಯಂತ ನಿಗರ್ವಿತನದಿಂದಲೇ ಹೇಳುತ್ತಾರೆ ೧೯೫೯ರಲ್ಲಿ ಬೆಂಗಳೂರಿನ ಮಹಾ ನಗರದಲ್ಲಿ ಅಖಿಲ ಕರ್ನಾಟಕದ ಸರ್ವ ಧಾರ್ಮಿಕ ಸಂಸ್ಥಗಳ ಮಹಾ ಸಮ್ಮೇಳನವೊಂದನ್ನು ಇವರು ಸಂಘಟಿಸಿದರು

ಉಡುಪಿಗೆ ಬರುವ ಯಾತ್ರಾರ್ಥಿಗಳಿಗೆ ಉಳಿಕೊಳ್ಳಲು ಛತ್ರಗಳ, ಉತ್ತಮ ಹೋಟೆಲ್ಲುಗಳ ತೀವ್ರ ಕೊರತೆಯಿದ್ದಾಗ ಅದವರು ಮಠದ ಛತ್ರವನ್ನು ನಿರ್ಮಿಸಿ ಅವನ್ನು ಹೋಗಲಾಡಿಸಿದ ಕೀರ್ತಿಯೂ ಶ್ರೀ ವಿಬುಧೇಶತೀರ್ಥರಿಗ ಸೇರಬೇಕು ಅತ್ಯಂತ ಕಡಿಮೆ ಬಾಡಿಗೆಯಲ್ಲಿ ಅತ್ಯಂತ ಹಚ್ಚಿನ ಸೌಲಭ್ಯಗಳನ್ನು ಒದಗಿಸುವ ಈ ಛತ್ರದ ಹೆಸರೂ ಎಲ್ಲೆಲ್ಲೂ ಪ್ರಚಲಿತವಿದೆ ಇದಲ್ಲದೆ ಮಣಿಪಾಲದ ಹಲವು ಸೇವಾ ಸಂಸ್ಥೆಗಳೊಡನೆಯೂ ಶ್ರೀಪಾದರ ಸಂಬಂಧವಿದೆ.

ಈಗ ಎರಡು ವರ್ಷಗಳ ಪರ್ಯಾಯ ದೀಕ್ಷೆ ತೊಟ್ಟ ಶ್ರೀಪಾದರು ಕಲೆ, ಸಂಸ್ಕೃತಿ, ಧರ್ಮ ಮತ್ತು ಶಿಕ್ಷಣಗಳಿಗೆ ಹಿಂದಿನಂತೆಯೇ ಪ್ರೋತ್ಸಾಹ ನೀಡುತ್ತಾರೆ ಸಮಾಜದ ಈ ನಾಲ್ಕು ಅಂಗಗಳು ಬೆಳೆದು ಬಂದಾಗಲೇ ಸಾಮಾಜಿಕ ಕ್ರಾಂತಿಯೂ ಯಶಪ್ರದವಾಗುತ್ತವೆ

ಋಗ್, ಯಜುರ್ ಮತ್ತು ಸಾಮವೇದ ಬಲ್ಲವರನ್ನು ಹಿಂದಿನ ಪರ್ಯಾಯದಲ್ಲಿ ಶ್ರೀ ಪಾದರು ತಯಾರಿಸಿದ್ದಾರೆ ಆದರೆ ಉಳಿದ ಲಹರ್ವ ವೇದವನ್ನು ತಿಳಿವವರ ಸಂಖ್ಯೆ ಬಹಳ ಅಲ್ಪ ಇದನ್ನು ಸುಧಾರಿಸುವ ದೃಷ್ಟಿಯಿಂದ ತಿರ್ವ ವೇದಾಧ್ಯಯನ ವ್ಯವಸ್ಥೆಯನ್ನು ತನ್ನ ಈ ಪರ್ಯಾಯ ಕಾಲದಲ್ಲಿ ಶ್ರೀ ಪಾದರು ಮಾಡುವ ಇರಾದೆ ಹೊಂದಿದ್ದಾರೆ ಇದರಿಂದ ಚತುರ್ವೇದ ಬಲ್ಲವರು ಮುಂದಿನ ಒಂದೆರಡು ತಲೆಮಾರು ಉಳಿದು ವೈದಿಕ ಧರ್ಮದ ರಕ್ಷಣೆಯೊಗುವ ನಿರೀಕ್ಷೆಯಿದೆ

ಶ್ರೀ ವಿಬುಧೇಶತೀರ್ಥರ ಹೆಗ್ಗಳಿಕೆಗೂ ರಾರು ಅವರು ತನ್ನ ಪರ್ಯಾಯವನ್ನು ಉಜ್ವಲಗೊಳಿಸುವಲ್ಲಿ ಶಕ್ತರಾಗುವಂತೆ ಉಷಾಸ್ಯ ದೇವತೆ ಅನುಗ್ರಹಿಸ ಬೇಕು, ಉಡುಪಿಯ ಪುಟ್ಟ ಹೆಸರು ದಿಗ್ವಿಗಂತದಲ್ಲಿ ಸದಾ ಪ್ರತಿಧ್ವನಿಸುವಂತಾಗಬೇಕು

ಶ್ರೀ ಕೃಷ್ಣ ದೇವಸ್ಥಾನ, ಮಧ್ವಸರೋವರ, ಭಾಗೀರಥಿ ಗುಡಿ ಮತ್ತು ಭೋಜನಶಾಲೆ

ಶ್ರೀಕೃಷ್ಣನ ಉಡುಪಿಯಲ್ಲಿ

ಅದಮಾರು ಶ್ರೀಪಾದರ
ಪರ್ಯಾಯ ಮಹೋತ್ಸವ

೧೯೫೬—೫೮ರಲ್ಲಿ ತನ್ನ ಮೊದಲ ಪರ್ಯಾಯವನ್ನು ಅನಾದ್ಯಶವಾಗಿ ಸೂರಯ್ತಿದ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದರು ದ್ವಿತೀಯ ಬಾರಿಗೆ ಪರ್ಯಾಯ ಪೀಠಾರೋಹಣವೀಗ ನೂಡಿದ್ದಾರೆ. ಈ ಸಮರಂಭದ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಜನವರಿ ೧೪ ಮಂಗಳವಾರ ಉಡುಪಿ ಕ್ಷೇತ್ರದ ಮಧ್ವ ಸಿಂಹಾಸನದ ಮೇಲೆ ಶ್ರೀ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀಪಾದರ ಆರೋಹಣ ಸಾವಿರಾರು ಭಕ್ತ ಜನರ ಸಮೂಗವಃ 'ನಹಿ ಕಲ್ಯಾಣ ಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ' ಎಂದು ಅರ್ಜುನನಿಗೆ ದಿವ್ಯ ಜ್ಞಾನೋಪದೇಶ ನೀಡಿದ ಭಗವಾನ್ ಶ್ರೀಕೃಷ್ಣನ ಪೂಜಾ ಪರ್ಯಾಯ ದೀಕ್ಷೆ ವಹಿಸಿದ ಆ ನೋಘ್ಘ ದಿನ.

ಅದಕ್ಕೆ ಹಿಂದಿನ ದಿನ ಶ್ರೀಫಲಿಮೂರು ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರು ತನ್ನೈರದು ವರ್ಷಗಳ ಶ್ರೀಕೃಷ್ಣ ಪೂಜಾ ಪಾರ್ಯಾಯವನ್ನು ಯಶಸ್ವಿಯಾಗಿ ನಿರ್ವಹಿಸಿ ಮಂಗಲೋತ್ಸವವೇರ್ಪಡಿಸಿದ್ದರು

ಮಧ್ಯರಾತ್ರಿಗೆ ಮರುದಿನದ ಪರ್ಯಾಯೋತ್ಸವದ ವೈಭವಗಳು ಎದ್ದು ಕಾಣಲಾರಂಭಿಸಿದವು. ಮುಂಜಾನೆಯ ಮೂರು ಗಂಟೆಗೆ ಮೊದಲೇ ಪರ್ಯಾಯ ಮೆರವಣಿಗೆ ನಡೆಯುವ ರಾರಿಯಲ್ಲಿ ಮೂರ್ಗದಿಕ್ಕೆಲಗಳಲ್ಲೂ ದರ್ಶನೇಚ್ಛುಗಳು ನೆರೆದು ನಿರೀಕ್ಷಿಸುತ್ತಿದ್ದರು. ಆ ಕೊರೆಯುವ ಚಳಿಯಲ್ಲೂ ಕುತೂಹಲವು ಅವರ ಹೃದಯವನ್ನು ಬೆಚ್ಚಗಿರಿಸಿತ್ತು.

ಜೋಡುಕಟ್ಟೆಯಲ್ಲಿ ಕಾದು ನಿಂತವರದ್ದು ಸಂಭ್ರಮವೇ ಸಂಭ್ರಮ. ಉಡುಪಿಯಿಂದ ಏಳು ಮೈಲು ದೂರ ದಕ್ಷಿಣದ ದಂಡತೀರ್ಥದಲ್ಲಿ ಸುಣ್ಣ ಸಲಿಲಸ್ನಾತರಾಗಿ ಬರಲಿರುವ ಶ್ರೀ ವಿಬುಧೇಶತೀರ್ಥ ಶ್ರೀಪಾದರನ್ನು ಸ್ವಾಗತಿಸಬೇಕಾದ ಸ್ಥಳ ಜೋಡು ಕಟ್ಟೆ. ಬಂದರು ಬಂದರು ಎನ್ನುವಷ್ಟರಲ್ಲಿ ಶ್ರೀಪಾದರು ಬಂದೇ ಬಿಟ್ಟರು. ತಾಸು ಸುಮಾರು ೪ ಆಗಿರಬಹುದು.

ಜೋಡುಕಟ್ಟೆಗೆ ಶ್ರೀ ವಿಬುಧೇಶತೀರ್ಥರೊಡನೆ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥರೂ ಪುಣ್ಯಸ್ನಾತರಾಗಿ ಬಂದರು. ಅವರನ್ನು ರಾಜ್ಯದ ರಾಜ್ಯಪಾಲ ಶ್ರೀ ಧರ್ಮವೀರ, ಕೇಂದ್ರ ಸಚಿವೆ ಶ್ರೀಮತಿ ಡಾ| ಸರೋಜಿನಿ ಮಹಿಷಿ ಮತ್ತು ನಿವೃತ್ತ ಮಹಾ ದಂಡನಾಯಕ ಜ| ಕಾರಿಯಪ್ಪನವರೂ ಸೇರಿದಂತೆ ಸಹಾಜನಸ್ತೋಮ ಜಯಘೋಷಗಳಿಂದ ಹೃತ್ಪೂರ್ವಕ ಸ್ವಾಗತಿಸಿತು

ಮುಂದೆ ಆರಂಭವಾದದ್ದು ಪರ್ಯಾಯ ಮೆರವಣಿಗೆ. ಶ್ರೀಪಾದರು ಪಾಲಕಿಯಲ್ಲಿ ಕುಳಿತು ಶ್ರೀಕೃಷ್ಣಮಠಕ್ಕೆ ಹೋಗುವ ಮೆರವಣಿಗೆ. ಮೆರವಣಿಗೆಯ ಮುಂದೆ ಅನೆ ಬರುವಾವಳಿಗಳಲ್ಲದೆ ಹತ್ತಕ್ಕೂ ಹೆಚ್ಚಿನ ಟ್ಯಾಬ್ಲೋಗಳಿದ್ದವು. ಹಿಂದೆ—ಮುಂದೆ ಆಚೆ—ಈಚೆ ಜನ ಸಮುದ್ರ. ಈ ಟ್ಯಾಬ್ಲೋಗಳು ಅತ್ಯಂತ ಆಕರ್ಷಕವಾಗಿದ್ದು ಮೆರವಣಿಗೆಯ ಯಶಸ್ಸಿಗೆ ಕಾರಣವಾದುವು.

ಗಿತೋಪದೇಶ, ಕನಕದಾಸನ ಹಾಡುಗಾರಿಕೆ, ಕೃಷಿಕರು, ವನ್ಯಮೃಗಗಳು ಬಡಗು—ತೆಂಕು ತಿಟ್ಟಿನ ಯಕ್ಷಗಾನ ಮೇಳ ಶ್ರೀ ಮಧ್ವಾಚಾರ್ಯರು ಬಿರುಗಾಳಿಗೆ ಸಿಕ್ಕ ನಾವೆಯನ್ನು ರಕ್ಷಿಸುವುದು, ಮಹಿಶಾಸುರ ಮರ್ದಿನಿ, ಮಹಾತ್ಮಾ ಗಾಂಧಿಯ ಪ್ರತಿಮೆಯೋ ಜೀವಂತ ಗಾಂಧಿಯೋ ಎಂಬ ಭ್ರಮೆ ಹುಟ್ಟಿಸುತಿದ್ದ ಗಾಂಧಿ ವೇಷಧಾರಿ—ಮುಂತಾದುವು ಹೃದಯಹಾರಿಕ.

ಮೆರವಣಿಗೆಯು ರಥಬೀದಿಗಿಳಿದ ಬಳಿಕ, ಚಂದ್ರೇಶ್ವರ, ಅನಂತೇಶ್ವರ ದೇವರ ದರ್ಶನ, ಶ್ರೀಕೃಷ್ಣ ಮಠದ ಸಂದರ್ಶನ—ಫಲಿಮಾರು ಶ್ರೀಪಾದರು ಅದಮಾರು ಶ್ರೀಪಾದರನ್ನು ಸರ್ವಜ್ಞ ಸಿಂಹಾಸನದಲ್ಲಿ ಕೂರಿಸಿ ಅಕ್ಷಯ ಪಾತ್ರೆ— ಬೀಗದ ಕೈಗಳನ್ನು ಹಸ್ತಾಂತರ ಮಾಡಿದರು. ಬಡಗು ಮಾಳಿಗೆಗೆ / ತೆರಳಿ ಅರಳ ಸಿಂಹಾಸನದಲ್ಲಿ ಮಂಡಿಸುವ ವಿಧಿ ತೀರಿಸಿ ರಾಜಾಂಗಣದಲ್ಲಿ ಏರ್ಪಡಿಸಿದ್ದ ದರಬಾರಿಗೆ ಆಗಮಿಸಿದರು.

ದರಬಾರಿನ ವೀಕ್ಷಣೆಗೆಂದು ಅದಾಗಲೇ ಸಾವಿರಾರು ಮಂದಿ ನೆರೆದಿದ್ದರು. ಕ್ರೈಸ್ತ ಗುರುಗಳೊಬ್ಬರೂ ವಿಶೇಷ ಅತಿಥಿಗಳಾಗಿ ಬಂದಿದ್ದರು. ತ್ರಿವೇದಗಳ ಗಾನದೊಂದಿಗೆ ದರಬಾರಿಗೆ ಶ್ರೀ ಗಣೇಶವಾಯ್ತು

ಶ್ರೀ ಪಿ. ನಾರಾಯಣ ರಾಯರು ಇಂಗ್ಲಿಷ್ ಭಾಷೆಯಲ್ಲಿ ಸ್ವಾಗತ ಭಾಷಣಮಾಡಿದರು ಲೆಲವೇ ಮಂದಿ ಕನ್ನಡ ಬಾರದವರನ್ನು ಮಾತ್ರ ಸ್ವಾಗತಿಸುವಂತೆ ಆದ ಈ ಭಾಷಣವದೇಕೆ ಕನ್ನಡ ಮಾಧ್ಯಮವಾಗಲಿಲ್ಲವೆಂದು ಪಿಸುಗುಟ್ಟಿದವರೂ ಸಭೆಯಲ್ಲೇ ಉಳಿದರು.

ಶ್ರೀ ವಿಬುಧೇಶತೀರ್ಥರು ವಿದ್ಯಾಸಂಸ್ಥೆಗಳನ್ನು ಶಾಲುಗಳನ್ನಿತ್ತು ಗೌರವಿಸಿದರು. ವಯೋವೃದ್ಧರೂ ಜ್ಞಾನವೃದ್ಧರೂ ಆದ ಶ್ರೀ ಪಡಮನ್ನೂರು ನಾರಾಯಣಾಚಾರ್ಯ, ಶ್ರೀಗಳಾದ ಕಾಪು ಸುಬ್ರಾಯ ಪುರಾಣಿಕ, ಬನ್ನಂಜೆ ಗೋವಿಂದಾಚಾರ್ಯ, ಪಿ. ಲ

(ಮೂವತ್ತೇಳನೇ ಪುಟ ನೋಡಿರಿ)

ಹೆಚ್ಚು ಹಾಲು ಉತ್ಪಾದನೆಗೆ
'ಮಿಲ್ಕ್ ಕ್ಯಾನ್' ಗುರ್ತಿನ
ಆಹಾರ ಸತ್ವ ಹಾಗೂ ಖನಿಜ ವಸ್ತುಗಳಿಂದ ಸಮೃದ್ಧವಾದ
ದನಗಳ ಮೇವನ್ನೂ

ಮತ್ತು

ಮೊಟ್ಟೆಗಳ ಉತ್ಪನ್ನವನ್ನು
ಹೆಚ್ಚಿಸಲು
'ಬ್ಯಾಸ್ಕೆಟ್' ಗುರ್ತಿನ
ಕೋಳಿಗಳ ಮೇವನ್ನೂ
ಉಪಯೋಗಿಸಿರಿ.

ತಯಾರಕರು:

ಮೈಸೂರು ಫೀಡ್ಸ್ ಪ್ರೈವೇಟ್ ಲಿಮಿಟೆಡ್

283-284, ಹಳೇತರಗು ಪೇಟೆ,
ಬೆಂಗಳೂರು — 2 A.

ದಾಸ್ತಾನುದಾರರು:

1) ಮೆ|| ಜೈ ಭಾರತ್ ಮಿಲ್ಸ್
ಉಡುಪಿ.

2) ಮೆ|| ಜಿ. ಜಿ. ಶ್ರೀನಿವಾಸ ಪ್ರಭು
ಬಂದರ್, ಮಂಗಳೂರು-1.

ಸಮಾಜವಾದಿ ಯಾರು?

ಶ್ರೀ ಗೌರೀಶ ಕಾಯ್ಕಿಣಿ

ಎಲ್ಲರೂ ನಳರೇ, ದಮಯಂತಿ ವರಮಾಲೆ ಹಿಡಿಮು ನಿಜವಾದ ನಳನನ್ನು ಆರಿಸುತ್ತಿದ್ದಾಳೆ. ಸಮಾಜವಾದದ ಫಲಾನಂಗಿಯಲ್ಲಿ ಎಲ್ಲಾಶಕ್ತೀಯರೂ ಪ್ರದರ್ಶನಕ್ಕೆ ಸಿದ್ಧರಾದಾಗ, ಸಮಾಜವಾದಿ ನಳನನ್ನು ಜನತಾ ದಮಯಂತಿ ಹೇಗೆ ಗುರುತು ಹಿಡಿಯಬೇಕು?

ದಮಯಂತಿಯು ವರಮಾಲೆಯನ್ನು ಹಿಡಿದುಕೊಂಡು ಸ್ವಯಂವರ ಮಂಟಪದಲ್ಲಿ ಬಂದಾಗ ಅವಳಿಗೆ ತನ್ನ ಪ್ರಿಯತಮ ನಳನನ್ನು ಕಂಡುಕೊಳ್ಳುವುದು ಕಷ್ಟವಾಯಿತು. ಅವಳನ್ನು ವರಿಸುವ ಹೆಬ್ಬಯಕೆಯಿಂದ ಬಂದ ದೇವತೆಗಳೂ ನಳನ ರೂಪದಲ್ಲಿಯೇ ಅವನ ಅಕ್ಕಪಕ್ಕದಲ್ಲಿ ನಿಂತು ಬಿಟ್ಟಿದ್ದರು! ಆಗ ಏಕ ಮನೋಭಾವದಿಂದ ದೇವತೆಗಳನ್ನು ಪ್ರಾರ್ಥಿಸಿಕೊಂಡ ಮೇಲೆ ಅವಳನ್ನು ಅನುಗ್ರಹಿಸಿ ದೇವತೆಗಳು ತಮ್ಮ ನಿಜರೂಪವನ್ನು ಬೇರೆಯಾಗಿ ಕಾಣಿಸಿ ನಳನ ಕೊರಳಿಗೇ ದಮಯಂತಿ ಮಾಲೆ ಹಾಕುವಂತೆ ಅನುಕೂಲಿಸಿಕೊಟ್ಟರು.

ನಾಳೆ ನಮ್ಮ ಜನತೆಯ ಇದುರಿಗೆ ಚುನಾವಣೆಗಳ ಸ್ವಯಂವರ ಸಜ್ಜುಗೊಳ್ಳುತ್ತಲಿದೆ. ಜನತೆ ಮನವಾರೆ ವರಿಸುವ ಹಂಬಲವಿಟ್ಟುಕೊಂಡಿದ್ದು — ಸಮಾಜವಾದಿ ಪಕ್ಷವನ್ನು ಜನತೆಗೆ ತನ್ನ ಶತಮಾನಗಳ ದೈನ್ಯ–ದಾರಿದ್ರ್ಯ–ವಿಷಮತೆಗಳ ವಿಷಮಯ ಆವಸ್ಥೆಯಿಂದ ಪುನರುಜ್ಜೀವನ ಪಡೆಯಬೇಕಾಗಿದೆ. ಅದೂ ಆದಷ್ಟು ಶೀಘ್ರವಾಗಿ ಆದಷ್ಟು ಪೂರ್ತಿಯಾಗಿ. ಅದಕ್ಕಾಗಿ ಈ ಜನ ದಮಯಂತಿಯು ಕಳೆದ ಕೆಲವು ದಶಕಗಳಿಂದಲೂ ಸಮಾಜವಾದವನ್ನು– ಸಮಾಜಪಾದೀ ಸಂಘಟನೆಯನ್ನೂ ಆದು ತರಬಹುದೆಂಬ ಸಮಾಜವಾದೀ ಸ್ವರೂಪದ ಸಮಾಜವನ್ನು ಮನವಾರೆ ಮೆಚ್ಚಿ ಮೋಹಿಸಿ ಅದನ್ನೇ ವರಿಸುವ ಸಂಬಲತೊಟ್ಟು ಆತುರಳಾಗಿ ಅಧೀರಳಾಗಿ ನಿಂತಿದ್ದಾಳೆ. ನಡುಗಾಲ ಚುನಾವಣೆಗಳ ರೋಮಾಂಚಕಾರಿ ಸನ್ನಿವೇಶದಲ್ಲಿಯೇ ಈ ಮನೋವಲ್ಲಭನಾದ ನಳನ ದರ್ಶನ, ಪರಿಚಯ ಮತ್ತು ಸಂಪರ್ಕ ಜನತೆಗೆ ಆಗಿದೆ.

ಆದರೆ ಈಗ ಕಾಣುನದೇನು? ಎಲ್ಲರೂ ನಳರೇ—ಎಲ್ಲರೂ ಸಮಾಜವಾದಿಗಳೇ! ಅಂದು ಕಾಂಗ್ರೆಸಿನಲ್ಲಿ 'ಅಸಲಿ'ಯಾರು 'ನಕಲಿ'ಯಾರು ಎಂಬ ಜೇಚು ಬಿದ್ದಿತ್ತು. ಆದನ್ನು ಈಗ ಸುಪ್ರೀಂ ಕೋರ್ಟು ಬಗೆಹರಿಸಿತು. ಆದರೆ ಇಂದು ಸಮಾಜವಾದಿಗಳಲ್ಲಿ 'ಅಸಲಿ'ಯಾರು 'ನಕಲಿ' ಯಾರು? ಎಂಬ ನಹುಷ ಪ್ರಶ್ನೆ ಹೆಬ್ಬಾವಿನಂತೆ ನಮ್ಮ ಕೊರಳನ್ನು ಸುತ್ತಿಕೊಂಡಿದೆ! ಇದರ ಪರಿಹಾರಕ್ಕೆ ಯಾವ ಕೋರ್ಟು?

ಇದರ ಉತ್ತರವನ್ನು ಜನತೆಯೇ ಕೊಟ್ಟುಕೊಳ್ಳಬೇಕು. ದಮಯಂತಿಯ ಪ್ರಾರ್ಥನೆಗೆ ನಿರ್ಲೋಭಿಗಳಾದ ದೇವತೆಗಳು ನಿಜರೂಪವನ್ನು ಪ್ರಕಟಿಸಿದರೇನೋ ಸರಿ. ಆದರೆ ಇಂದಿನ ಈ ಸ್ವಯಂ ಘೋಷಿತ ಸಮಾಜವಾದಿಗಳು ಹಾಗೆಲ್ಲ ಜನತೆಯ ಪ್ರಾರ್ಥನೆಗೆ ಕರಗುವ ಕೋಟಿಯವರಲ್ಲ. ದೇಶದಲ್ಲಿ ಚುನಾವಣೆಯ ಈ ಸ್ವಯಂವರ ಸೈಪೋಟಿಗೆ ಸಡ್ಡಿ ಹೊಡೆದು ನಿಂತ ಪಕ್ಷೋಪಪಕ್ಷಗಳು! ಅಂವಾಗ, "ಮುಂದೇನೇ ಸಖಿ, ಮುಂದೇನೆ?"

ಇಂದು ಎಲ್ಲರೂ ಸಮಾಜವಾದಿಗಳೇ. ಇಷ್ಟೇ ಕೆಲವರು ಉಳಿದವರಿಗಿಂತ ಹೆಚ್ಚು ಸಮಾಜವಾದಿಗಳೆಂದೆನಿಸಿಕೊಳ್ಳುವರು. ಹಳೆಯ ಕಾಂಗ್ರೆಸು ನೆಹರೂಜಿಯ ಪ್ರಭಾವಕ್ಕೆ ಒಳಗಾದಂದಿನಿಂದಲೂ ಹೆಚ್ಚು ಹೆಚ್ಚು ಸಮಾಜವಾದೀ ವಿಚಾರಸರಣಿಯನ್ನು ಅಳವಡಿಸಿಕೊಳ್ಳುತ್ತ ಬೆಳೆದು ಬಂದಿತು. ಕರಾಚಿ ಕಾಂಗ್ರೆಸಿನಿಂದ ಆವಡೀ ಕಾಂಗ್ರೆಸಿನವರೆಗೂ ಈ ಬೆಳವಣಿಗೆ ಆ ಪಕ್ಷದ ಧ್ಯೇಯ ಧೋರಣೆಗಳಲ್ಲಿ — ಆದನ್ನು ರೂಪಿಸುವ ಗೊತ್ತುವಳಿಗಳಲ್ಲಿ ಸ್ಪಷ್ಟವಾಗುತ್ತ ಬಂದಿತು. ಕಾಂಗ್ರೆಸ್ಸಿನಲ್ಲಿ ಸಮಾಜವಾದದ ಪಕ್ಷಪಾತಿಗಳ ಒಂದು ಗುಂಪು, ಜಯಪ್ರಕಾಶ ನಾರಾಯಣ, ಆಚಾರ್ಯ, ನರೇಂದ್ರ ದೇವ, ಯುಸಫ್ ಮೆಹರು, ಆಶೋಕ ಮೆಹಥಾ, ಕಮಲಾದೇವಿ ಚಟ್ಟೋಪಾಧ್ಯಾಯ, ಅರುಣ ಅಸಫ್ ಆಲಿ—ಪ್ರಭೃತಿಗಳ ಅನುಯಾಯಿಗಳ ಪಂಗಡವು ನೆಹರೂಜಿಯ ಕೈಗೆ ಬಲಗೊಳಿಸಲೆಂದು ಭರದಿಂದ ಬೆಳೆಯಿತು. ಆದರೆ ಡೇರೆಯಲ್ಲಿ ಆಶ್ರಯ ಪಡೆಯಲು ಒಳಹೊಕ್ಕ ಒಂಟೆ ಅರಬನನ್ನು ಹೊರಗೆ ಅಟ್ಟುವ ಬದಲು ಇಡ್ಲಿ ಅರಬನೆ ಒಂಟೆಯನ್ನು ಹೊರಗೆ ಚಳಿಗಾಳಿಯಲ್ಲಿ ತಳ್ಳಿ ಬಿಟ್ಟಂತೆ ಆಯಿತು. ಕಾಂಗ್ರೆಸ್ ಸೋಶಲಿಷ್ಟ್ ಪಕ್ಷವು ಕಾಂಗ್ರೆಸಿನಿಂದ ಹೊರ ಬಿದ್ದು ಪ್ರತ್ಯೇಕ ಪಕ್ಷವಾಗಿ ಸಂಘಟನೆಗೊಳ್ಳುವಂತೆ ಆಯಿತು.

ಮುಂದೆ ಆ ಪಕ್ಷದ ಅನೇಕ ಅವತಾರಗಳಾದುವು. ಕೊನೆಗೂ ಪ್ರಜಾಸಮಾಜವಾದೀ (ಪ್ರಜೆಗಳಿಗಲ್ಲದ ಸಮಾಜವಾದ ಉಂಟೇ?) ಪಕ್ಷ ಕಾಂಗ್ರೆಸಿಗೆ, ಆದರ ಜನತಾ ಭಿಮುಖ ಕಾರ್ಯಕ್ರಮದ ಸಾಧನೆಗೆ ವಿರೋಧೀ ಟೀಕೆ ಒದಗಿಸುವ ಪಕ್ಷವಾಗಿ ಕೆಲವು ಸಾರ್ವತ್ರಿಕ ಚುನಾವಣೆಗಳಲ್ಲಿ ಸೋತು ಗೆದ್ದು ಕೆಲವು ರಾಜ್ಯಗಳಲ್ಲಿ ಕೆಲಮಟ್ಟಿಗೆ ಅಧಿಕಾರದಲ್ಲಿ ಭಾಗವಹಿಸಿ ಎಲ್ಲ ದಶಾಭುಕ್ತಿಗಳನ್ನು ಅನುಭವಿಸಿತು.

ಆದೇ ಸಮಯ ಸಮಾಜವಾದದ ಪಂಥ ತೊಟ್ಟು ಇತರ ಗುಂಪುಗಳೂ ಊರ್ಜಿತವಾಗಿದ್ದುವು. ಅವೆಲ್ಲ ಪ್ರಸವಾಪಕ್ಷದೊಂದಿಗೆ ವಿಲೀನವಾದಾಗ ಒಂದು ಸಂಯುಕ್ತ ಸಮಾಜವಾದೀ ಪಕ್ಷದ ಪ್ರಸವವೂ ಆಯಿತು. ಆದರೆ ಅಲ್ಲಿಯೂ ಡಾ|ಲೋಹಿಯರ ಗುಂಪಿನ ನೇಲುಗೈಯಾಗಿ ಪ್ರಜಾಸಮಾಜವಾದಿಗಳು ಮತ್ತೆ ಹೊರಬಿದ್ದರು. ಸಂಯುಕ್ತ ಸಮಾಜವಾದೀ ಪಕ್ಷ ಒಂದು ಪ್ರತ್ಯೇಕ ಪಕ್ಷವಾಗಿ ಪ್ರ. ಸ. ವಾ. ಪಕ್ಷವನ್ನು ಪ್ರಭಾವಿಯಾಗಿ ಸ್ಪರ್ಧಿಸಿತು. ಆದರೆ ಇದೀಗ ಮತ್ತೆ ಅವೆರಡೂ–ಜೊತೆಗೆ ಇನ್ನೂ ಒಂದೆರಡು ಪಕ್ಷಗಳು—ಸಮಾಜವೇಶಗೊಂಡು ಹೊಸ ಸಮಾಜವಾದೀ ಪಕ್ಷ ಉಂಟಾಗಿದೆ.

ಆದರೆ ಈ ನಡುವೆ ಕಮ್ಯೂನಿಷ್ಟ್ ವಿಚಾರಧಾರೆ ದೇಶದಲ್ಲಿ ತೀವ್ರವಾಗಿ ಹಬ್ಬುಹತ್ತಿತು. ಕಮ್ಯೂನಿಷ್ಟ್ ಪಕ್ಷವೂ ಕವಲೊಡೆದು ಆದರಲ್ಲಿಯೇ ಇನ್ನೂ ಉಗ್ರವಾದ ವೀರ ಕಮ್ಯೂನಿಷ್ಟ್ ಪಂಥವೊಂದು ಹೆಡೆ ಎತ್ತಿ ಪ್ರವರ್ಧಮಾನವಾಗಹತ್ತಿತು. ಇದನ್ನು ಗಮನಿಸಿ ದೇಶದ ಭವಿತವ್ಯದ ಸೂತ್ರಗಳನ್ನು ಹಿಡಿದ ನರಪುಂಗವರು ತಾವೂ ಸಮಾಜವಾದಿಗಳೆಂದು ಮೆರೆದಾಡುತ್ತಿದ್ದಾರೆ! ಹಿಂದೆ ಮಹಾತ್ಮಾಜಿಯ ಕಾಲದಲ್ಲಿ ಇದೇ ಮಾದರಿಯ ಲಾಭ ಬಡಕರೂ, ಡಾಂಭಿಕರೂ, ಸಂಧಿ ಸಾಧಕರೂ, ಬಡಬಗ್ಗರ ರಕ್ತ ರೋಷಕರೂ, ಶುದ್ಧ ಖಾದಿಯ ಅಡಿಗೆ ತನ್ನ ದೊಡ್ಡ ಹೊಟ್ಟೆಯನ್ನೂ ಸಣ್ಣ ಮನಸ್ಸನ್ನೂ ಅಡಗಿಸಿಕೊಂಡು ಗಾಂಧೀವಾದಿಗಳೆಂದು ಮೆರೆದಾಡುತ್ತಿದ್ದರು. ಇವರನ್ನು ಕಂಡಾಗ ಗೋಪಾಲಕೃಷ್ಣ ಅಡಿಗರ "ನನ್ನ ಅವತಾರ" ಕವನ ನೆನಪಾಗುತ್ತದೆ. ಈ ಅವತಾರ 'ಸಂಭವಾಮಿ ಯುಗೇ ಯುಗೇ' ಎಂದು ಮತ್ತೆ ಮತ್ತೆ ಎದ್ದು ಬರುತ್ತದೆ.

ಇವರೆಲ್ಲ ಸಮಾಜವಾದಿಗಳೇ? ಸಮಾಜವಾದಿ ಎಂದರೆ ಯಾರು? ಆಪತಿತ ಕಾಂಗ್ರೆಸಿನ ಘೋಷಣೆಗಳನ್ನು ಟೀಕಿಸುವ ಮಹಾನುಭಾವರು. ಮಂತ್ರಿಗಳು, ಪ್ರಧಾನಿಗಳೆ, ರಾಷ್ಟ್ರಾಧ್ಯಕ್ಷ, ಉಪಾಧ್ಯಕ್ಷರೆ, ರಾಜ್ಯಪಾಲರ ವೈಚ್ಛ–ವೈಭವಗಳನ್ನು ಬೆರಳಟ್ಟು ತೋರಿಸುವರು. ಇಂಥ ಕಣ್ಣು ಕುಕ್ಕುವ ವೈಚ್ಛ ವೈಭವ ಪ್ರದರ್ಶನ ಹೇಯ, ನಿಂದ್ಯ ಬಡವರ ದೇಶಕ್ಕೆ ಅಸಹ್ಯ. ಇದೆಲ್ಲ ನಿಲ್ಲಬೇಕು. ಒಪ್ಪಿಗೆ. ಹಾಗೆಯೇ ಸಮಾಜವಾದವೆಂದರೆ ಬಡತನವನ್ನು ಹಂಚಿಕೊಳ್ಳುವುದಲ್ಲ. ಸಂಪತ್ತನ್ನು ಹಂಚಿಕೊಳ್ಳುವುದು. ಹಂಚಿಕೊಳ್ಳುವ ಮುಂಚೆ ಹಂಚಿಕೊಳ್ಳಲಿಕ್ಕೆ ಸಂಪತ್ತು ಮೊದಲು ಉತ್ಪಾದನೆಯೊಗಬೇಕು. ಸರಿ ಇದೂ ಒಪ್ಪಿಗೆ.

ಆದರೆ, ಇಷ್ಟು ಮಾಡಿದ ಮಾತ್ರಕ್ಕೆ ಸಮಾಜವಾದ ಬಂದಂತೆ ಆಯಿತೇ? ಅತಿ ಮಿತವ್ಯಯದಿಂದ ತೀರ ಸಾದಾ ಸರಳ ಜೀವನ ನಡೆಯಿಸಿದ ಮಾತ್ರಕ್ಕೆ ಆತ ಸಮಾಜವಾದಿಯೂಗುವನೇ? ಗಾಂಧೀಜಿ, ವಿನೋಬಾ, ಯಾವದೇ ಸರ್ವೋದಯ ಕಾರ್ಯಕರ್ತ ಸಮಾಜವಾದಿಯೆ? ಔರಂಗಜೇಬ ಕುರಾನಿನ ಕೈ ಬರಹದ ಪ್ರತಿಗಳನ್ನು ಮಾಡಿ ಮಾರಿ, ಟೊಪ್ಪಿಗೆ ಹೊಲಿನು ಮಾರಿ ಉದರ ನಿರ್ವಾಹ ನಡೆಯಿಸುತ್ತಿದ್ದ. ಅಂದ ಮಾತ್ರಕ್ಕೆ ಆತ ಸೋಶಲಿಸ್ಟನಾಗಿದ್ದನೆನ್ನಬಹುದೇ? ಮೂಲತಃ ತತ್ವತಃ ಮತ್ತು ರೂಢಿಯಿಂದಲೂ ಪ್ರತಿಗಾಮಿ ಅಥವಾ ಸ್ಥಿತಿಪ್ರಿಯನೆಂದು ಪ್ರಸಿದ್ಧವಿದ್ದ ಪಕ್ಷಗಳೂ ತಮ್ಮ ಕಾರ್ಯಕ್ರಮಗಳಲ್ಲಿ ಚುನಾವಣೆಯ ಘೋಷಣಾ ಪತ್ರಿಕೆಗಳಲ್ಲಿ ಸೇರಿಸಿ ಜಾಹೀರು ಮಾಡ ಹತ್ತಿರುತ್ತವೆ!

ಉದಾಹರಣೆಗಾಗಿ ಮೊನ್ನೆ ಸಂಸತ್ತಿನಲ್ಲಿ ಜನಸಂಘದ ಅಧ್ಯಕ್ಷಗನ್ನೂ ಸ್ವತಂತ್ರ ಪಕ್ಷದ ಧುರೀಣರು ಸಮಾಜವಾದಿಯೆಂದು ಜರೆದರು. ಆಡಳಿತ ಕಾಂಗ್ರೆಸ್ ಸೇರಿದಿಂದರು. ಪ್ರಧಾನಿಗಳೂ ಅವರನ್ನು ತಮ್ಮ ಪಕ್ಷಕ್ಕೆ ಸ್ವಾಗತಿಸಿದರು. ಅಂದರೆ, ಜನಸಾಮಾನ್ಯರಲ್ಲಿ ಮಾತ್ರವಲ್ಲ ಪ್ರತಿಪಕ್ಷಗಳ ಧುರೀಣರಲ್ಲಿಯೂ ಬುದ್ಧಿ ಭೇದ, ಬುದ್ಧಿ–ಭ್ರಮೆ ಉಂಟಾಗುವಷ್ಟು ಮಟ್ಟಿಗೆ ಈ ಹೊಸ ಹೊಸ 'ಬಣ್ಣದ ವೇಷಗಳು' ಆಯಾ ಪಕ್ಷದ ಸ್ವಸ್ವರೂಪವನ್ನು (identity) ಮರೆಯಿಸುವಂತೆ ಮಾಡಿದೆ.

ಆಡಳಿತ ಕಾಂಗ್ರೆಸು–ಅಥವಾ ಕರಾಚಿಯಿಂದ ಆವಡಿ ಅಧಿವೇಶನದವರೆಗೂ ಕಾಲಕಾಲಕ್ಕೆ ತಪ್ಪದೆ ಗೊತ್ತುವಳಿಗಳನ್ನು ಮಾಡುತ್ತ ತೆಪ್ಪಗೆ 'ಪೈಲಿ'ಗಿಡುತ್ತ ಬಂದ ನಿಜವಾದ ಕಾಂಗ್ರೆಸ್ ಒಪ್ಪಿಕೊಂಡು ಬಂದ ತತ್ವತ್ರಯಗಳೆಂದರೆ ಪ್ರಜಾಪ್ರಭುತ್ವ, ಸಮಾಜವಾದ ಮತ್ತು ಜಾತ್ಯತೀತ ಸಾರ್ವಜನಿಕ ಜೀವನ. ಇವನ್ನೆ ಆದಷ್ಟು ಬೇಗ ಆಚರಣೆಗೆ ತಂದು ಜನತೆಯ ದುಃಖ ದುರ್ದೆಸೆಗಳನ್ನು ನೀಗಿಸಲು ಇಂದು ಪ್ರಧಾನಿಗಳು ಪಣತೊಟ್ಟಿದ್ದಾರೆ. ಆದರೆ ಸಮಾಜವಾದೀ ಜನಸಂಘ ಮುಂತಾದ ಪಕ್ಷಗಳ ಮಾತಿರಲಿ ಈ ಆಪತಿತ ಕಾಂಗ್ರೆಸಿನೊಳಗೇ ಸಂಸ್ಥಾ ಕಾಂಗ್ರೆಸಿನ ಮುಳುಗುವ ನಾವೆಗಳಿಂದ ಓಡಿ ಬಂದ ಹೆಗ್ಗಣಗಳು ಸೇರಿಕೊಂಡು ಪ್ರಧಾನಿಗಳ ಘೋಷಣೆಯ ವಿಡಂಬನೆಗೆ ನಡೆಯಿಸಿದ್ದಾತಿದೆ. ಮೇಲೆ ಹೇಳಿದ ಮೂರೂ ತತ್ವಗಳ ಮೇಲೆ ಮನಸಾ ನಂಬಿಕೆ ಇಲ್ಲದ ಪ್ರಧಾನಿ ಒಂದು ಧೃಢ ನಿರ್ಧಾರಕ್ಕೆ ಬರಬೇಕಾಯಿತು. ದೇಶದಲ್ಲಿ ಇಂದು ನಿಜವಾದ ವಿರೋಧ 'ಎಡ'–'ಬಲ'ಗಳ ನಡುವೆ ಇಲ್ಲ. ಅದು 'ಎಡ' ಮತ್ತು 'ಇನ್ನೂ ಎಡ' (Left and More Left)ಗಳ ನಡುವೆ ಹೊತ್ತಿದೆ. ಆಡಳಿತವನ್ನು ನಡೆಯಿಸುವ ಪಕ್ಷದ ಕಾರ್ಯ ಧೋರಣೆಗಳೆಲ್ಲ ಹೆಚ್ಚು ಹೆಚ್ಚು ಜನತಾಭಿಮುಖವಾಗದಿದ್ದರೆ ದೇಶದಲ್ಲಿ–ಆಗ್ನೇಯ ಏಶಿಯಾದ ಈ ವಿಶಾಲವಾದ ಉಪಖಂಡದಲ್ಲಿ ಕೆಟ್ಟ ಮಾದರಿಯ ಕಮ್ಯೂನಿಸ್ಟ್ ಬಿರುಗಾಳಿ ಬೀಸುವ ಮುಖಂಡಿತ! ಆದ್ದರಿಂದ ಕಾಂಗ್ರೆಸಿಗೆ ವಿರುದ್ಧವಾದ ಎಡದತ್ತ ಒಂದು ಬಲವಾದ ನೂಕು ಕೊಡಬೇಕು.

ಅದರ ಫಲವಾಗಿ ಕಾಂಗ್ರೆಸು ಕವಲೊಡೆಯಿತು. ಹಿಂದೆಲ್ಲ ಸಮಾಜವಾದಿಗಳೆಂಬ ಪಕ್ಷಗಳು ತೋರುವ ವಿರೋಧ ನಡುಗಾಲ ಚುನಾವಣೆಗಳಲ್ಲಿ ಎಡ ಕಾಂಗ್ರೆಸ್ ಬಲ ಕಾಂಗ್ರೆಸಿಗೆ ತೋರಿತು ಪ್ರಚಂಡ ಜನಬಲದ ಬಹುಮತದಿಂದ ಗೆದ್ದಿತು. ಎತಪಕ್ಷದ ಕಾರ್ಯಕ್ರಮ ಒಂದೇ. 'ಗರೀಬೀ ಹಟಾವೊ' ಎಂಬ ಘೋಷಣೆಯೊಂದೇ–'ಜನತಾ ದರಬಾರಿ'ನಲ್ಲಿ ವಿಪರೀತ ಬೇಡಿಕೆಯಿದ್ದ ಸರಕೆಂದು ಇತರ ಪಕ್ಷಗಳೂ ತಮ್ಮ ಎಲ್ಲ ಶೇವುಗಳ ಬೆಲೆ ತೆತ್ತು ಮನಗಂಡವು!

ಆದ್ದರಿಂದ ಅನಂತರ 'ಬಲ'ಪಕ್ಷಗಳೆಲ್ಲವೂ 'ಎಡ'ದ ಬಣ್ಣ ಬಳಿದುಕೊಂಡು ಸಮಾಜವಾದದ ಮುಖವಾಡ ತೊಡ ತೊಡಗಿರುತ್ತವೆ. ನಿರುದ್ಯೋಗ ನಿವಾರಣೆ' ಬಡವ–ಬಲ್ಲಿದರ ನಡುವಿನ ಕನಿಷ್ಟ–ಗರಿಷ್ಟ ವರಮಾ

(ಮೂವತ್ತಾರನೇ ಪುಟ ನೋಡಿರಿ)

ಶ್ರೀ ಫಕ್ರುದ್ದೀನ್ ಅಲಿ ಅಹ್ಮದ್

ದುರ್ಬಲ ಗ್ರಾಮೀಣ ಜನತೆಯ ಕಲ್ಯಾಣ ಯೋಜನೆ

ಆಹಾರ ಸ್ವಾವಲಂಬನೆಯನ್ನು ಮೊತ್ತಮೊದಲ ಬಾರಿಗೆ ನಾವು ಸಾಧಿಸಿ ಕೊಂಡಿರುವುದು ನಿಜವಾದರೂ ಈ ಭಾಗ್ಯೋನ್ಮಾದದಲ್ಲಿ ಕೃಷಿರಂಗವನ್ನು ಮರೆಯಬಾರದು. ದುರ್ಬಲ ಗ್ರಾಮೀಣ ಜನತೆಯ ಕಲ್ಯಾಣಯೋಜನೆಯಿಂದ ದೇಶದಲ್ಲಿ ಸಾಕಷ್ಟು ಪ್ರಗತಿಯಾಗುವ ನಿರೀಕ್ಷೆಯಿದೆ. ಬೆಳೆಯುತ್ತಿರುವ ಅನಸ್ಯಕತೆಗಳನ್ನು ಪೂರೈಸುವ ಶಕ್ತಿ ನಮಗೆ ಬರಬೇಕು.

ಬೇಸಾಯವೇ ಪ್ರಧಾನವಾಗಿರುವ ಭಾರತದ ಯೋಜನಾ ಕಾರ್ಯಕ್ರಮದಲ್ಲಿ ಸಾಮೂಹಿಕ ನ್ಯಾಯದೊಂದಿಗೆ ಆರ್ಥಿಕ ವಿಕಾಸವಾಗುವಂತೆ ಮಾಡುವುದೇ ಮುಖ್ಯೋದ್ದೇಶವಾಗಿದೆ. ಬೇಸಾಯಗಾರರ ಕಲ್ಯಾಣಕ್ಕಾಗಿ ಗಮನ ಹರಿಸಲಾಗಿದೆ. ಅತ್ಯಲ್ಪ ಮಳೆ ಹಾಗೂ ನೀರಾವರಿ ಸೌಲಭ್ಯವಿಲ್ಲದಿರುವ ಪ್ರದೇಶಗಳಲ್ಲಿರುವ ಸಣ್ಣ ಬೇಸಾಯಗಾರರು ಮತ್ತು ಭೂಹೀನ ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ.

ಈ ದೃಷ್ಟಿಯಿಂದ ಆಯ್ಕೆಮಾಡಿದ ಪ್ರದೇಶಗಳಲ್ಲಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೈಗೊಂಡು ಆ ಮೂಲಕ ದುರ್ಬಲಬೇಸಾಯಗಾರ ವರ್ಗದಲ್ಲಿ ಉದ್ಯೋಗ ಕಲ್ಪಿಸಿ, ಉತ್ಪಾದನಾ ಶಕ್ತಿ ಹೆಚ್ಚುವಂತೆ ಮಾಡಲು ಯೋಚಿಸಲಾಗಿದೆ. ಸಕಾಲದಲ್ಲಿ ಸಾಲಸೌಲಭ್ಯಸಿಗದಿರುವಿಕೆ, ಸೂಕ್ತ ಮಾರ್ಗದರ್ಶನ ಹಾಗೂ ಅತ್ಯಗತ್ಯ ಬಿತ್ತನೆ ಬೀಜಗಳ ಅಭಾವದಿಂದ ಸಣ್ಣ ಬೇಸಾಯಗಾರರು ತಾಂತ್ರಿಕನಿಧಾನಗಳನ್ನು ಅಳವಡಿಸಲು ಸಾಧ್ಯವಾಗಿಲ್ಲ.

ದುರ್ಬಲ ವರ್ಗದ ಬೇಸಾಯಗಾರರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಜಿಲ್ಲಾಮಟ್ಟದಲ್ಲಿ ವ್ಯಾಯೋಗಿಕವಾಗಿ ವಿಶೇಷ ಸಂಸ್ಥೆಗಳನ್ನು ರಚಿಸಲಾಗಿದೆ. ದೇಶದಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಗ್ರಾಮಾಂತರ ಔದ್ಯೋಗಿಕ ಯೋಜನೆಯನ್ನು ತ್ವರಿತವಾಗಿ ಕಾರ್ಯಗತಗೊಳಿಸಲಾಗಿದೆ.

ಕೃಷಿ ಸಾಲ ನೀಡಿಕೆ, ಸಣ್ಣನೀರಾವರಿ, ಪಶುಸಂಗೋಪನ ಕಾರ್ಯಕ್ರಮಗಳನ್ನು ಪುನರ್ವ್ಯವಸ್ಥೆಗೊಳಿಸಿ ಆ ಮೂಲಕ ಕೃಷಿ ಕಾರ್ಮಿಕರಿಗೆ ಸಹಾಯವಾಗುವಂತೆ ಸರ್ಕಾರ ಯೋಜನೆ ರೂಪಿಸಿದೆ ಈ ಕಾರ್ಯಕ್ರಮಕ್ಕೆ ನಾಲ್ಕನೆ ಯೋಜನೆಯಲ್ಲಿ 300 ಕೋಟಿ ರೂಪಾಯಿ ಬಂಡವಾಳ ಹೂಡಬೇಕಾಗಿದೆ.

ಸಣ್ಣ ಬೇಸಾಯಗಾರರು ಮತ್ತು ಕೃಷಿ ಕಾರ್ಮಿಕರಿಗಾಗಿ ದೇಶದಾದ್ಯಂತ 88 ಯೋಜನಾ ಪ್ರದೇಶಗಳಲ್ಲಿ ಸಂಸ್ಥೆಗಳನ್ನು ರಚಿಸಲಾಗಿದೆ. ಈ ಸಂಸ್ಥೆಗಳಿಗೆ ನಾಲ್ಕನೆ ಯೋಜನೆಯಲ್ಲಿ 115ಕೋಟಿ ರೂಪಾಯಿ ಸಹಾಯಧನವನ್ನು ಕೇಂದ್ರವು ನೀಡುತ್ತದೆ. ಈ ಕಾರ್ಯಕ್ರಮದ ಆಶ್ರಯದಲ್ಲಿ ನೂಡುವ ಪ್ರತಿ ಒಂದು ಕೋಟಿ ರೂಪಾಯಿ ನೆಚ್ಚಕ್ಕೂ 25-30 ಸಹಸ್ರ ಕೃಷಿ ಕಾರ್ಮಿಕರಿಗೆ ಉದ್ಯೋಗ ಲಭಿಸುತ್ತದೆ.

ಖುಷ್ಕಿ ವ್ಯವಸಾಯ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಅನೇಕ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿ ರಾಷ್ಟ್ರೀಯ ಮಟ್ಟದಲ್ಲಿ ಸಂಶೋಧನಾ ಕಾರ್ಯ ಸಮನ್ವಯ ಸಾಧಿಸಲು ಯೋಚಿಸಿದೆ. ಈಗಾಗಲೇ 24 ವ್ಯಾಯೋಗಿಕ ತರಬೇತಿ ಕೇಂದ್ರಗಳನ್ನು ಆರಂಭಿಸಲಾಗಿದೆ. ಇಲ್ಲಿಗೆ ಬೇಸಾಯಗಾರರನ್ನು ಆಕರ್ಷಿಸಲು "ಸಹಾಯಧನ" ಯೋಜನೆ ರೂಪಿಸಲಾಗಿದೆ. ಈ ಕಾರ್ಯಕ್ಕಾಗಿ ನಾಲ್ಕನೆ ಯೋಜನೆಯಲ್ಲಿ 20ಕೋಟಿ ರೂಪಾಯಿ ನಿಗದಿ ಮಾಡಲಾಗಿದೆ. 1973—74ನೇ ಸಾಲಿನ ವರೆಗೆ ವರ್ಷಂಪ್ರತಿ 50ಕೋಟಿ ರೂಪಾಯಿಯಂತೆ 150ಕೋಟಿ ರೂಪಾಯಿ ವೆಚ್ಚವಾಗುತ್ತದೆ.

ಸಮೂಜಾಭಿವೃದ್ಧಿ ಕಾರ್ಯಗಳಲ್ಲಿ ಪೂರ್ಣ ಪಾತ್ರವಹಿಸುವಂತೆ ನೂಡಲು-ಬುಡಕಟ್ಟು ಪ್ರದೇಶಗಳ ಜನರ ಕಲ್ಯಾಣಕ್ಕಾಗಿ ಯೋಜನೆಯೊಂದನ್ನು ರೂಪಿಸಲಾಗಿದೆ ಆಂಧ್ರ ಪ್ರದೇಶ, ಬಿಹಾರ್, ಮಧ್ಯಪ್ರದೇಶ ಮತ್ತು ಒರಿಸ್ಸಾದ ಐದು ಜಿಲ್ಲೆಗಳಲ್ಲಿ ವಿಶೇಷ ಅಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಲಾಗುತ್ತದೆ. ಈ ಪ್ರದೇಶಗಳ ಆಡಳಿತ, ಸಂಪರ್ಕ ವ್ಯವಸ್ಥೆ, ಆರ್ಥಿಕಾಭಿವೃದ್ಧಿ ಮತ್ತು ಸಮೂಜ ಸೇವಾ ಕಾರ್ಯಗಳನ್ನು ನಿರ್ವಹಿಸುತ್ತವೆ. ಈ ಕಾರ್ಯಕ್ಕೆ ನಾಲ್ಕನೆ ಯೋಜನೆಯಲ್ಲಿ 15 ಕೋಟಿ ರೂಪಾಯಿ ವೆಚ್ಚ ತಗಲುವ ನಿರೀಕ್ಷೆಯಿದೆ ಗ್ರಾಮಾಂತರ್ಪ್ರದೇಶದ ದುರ್ಬಲ ವರ್ಗದ ಜನತೆಗೆ ಅತ್ಯಗತ್ಯವಾದ ಪೋಷಕ ಆಹಾರ ಕಾರ್ಯಕ್ರಮ ಆರಂಭಿಸುವ ಮತ್ತೊಂದು ಯೋಜನೆಯಿದೆ. ಇಂತಹ ಬೃಹತ್ ಕಾರ್ಯಕ್ರಮದ ಯಶಸ್ಸಿಗೆ ಸಮೂಜದ ಎಲ್ಲಾ ವರ್ಗದ ಜನತೆಯ ಬೆಂಬಲ ಸಹಕಾರ ಅತ್ಯಗತ್ಯವಾಗಿದೆ.

For All Electrical Works And Pumpsets

Please Contact:

U. SADIYA

Licensed Electrical Contractors
Class 'A' No. 428
CAR—STREET,
UDUPI-1.

Once you pay a visit you will never forget

THE CITY'S POPULAR VEGETARIAN RESTAURANT

MADHU NIVAS

BOARDING & LODGING

GANDHI SQUARE, MYSORE.

For Quality Vegetarian Preparations and Comfortable Stay in Our Double and Single Rooms. Try for a while and be satisfied.

Phone : 23363 Res : 22777

ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿ ನವಭುವನಿಗಿಂತಲೂ ಮಧುರವಾದ ತಯಾರಿಕೆ—ಸೇವಾ ಸುಧಾರಿಕೆಗಳಿಂದ
ಅತ್ಯಂತ ಜನಪ್ರಿಯವಾದ ಸೌಲಭ್ಯಪೂರ್ಣ ಪ್ರಮುಖ ಹೊಟೆಲ್

ಮಧು ನಿವಾಸ

ಸಂದರ್ಶಿಸಲೇ ಬೇಕಾದ ವಸತಿ, ಭೋಜನ ಹಾಗೂ ಉಪಾಹಾರ ಮಂದಿರ
ಊಟದಲ್ಲಿ ವೈಶಿಷ್ಟ್ಯ! ಟೂರಿಸ್ಟ್ ಪಾರ್ಟಿಗಳಿಗೆ ವಿಶೇಷ ವ್ಯವಸ್ಥೆ!!
ಗಾಂಧಿ ಚೌಕ—ಮೈಸೂರು

ಮ್ಯಾನೆಜರು : ಬಿ. ರಾಮದಾಸ್ ಭಟ್ ಮತ್ತು ಸಹೋದರರು.

ಪ್ರಜಾಪ್ರಭುತ್ವದಲ್ಲಿ ಪಕ್ಷ ಪ್ರಭುತ್ವವಿರ ಬೇಕಾದದ್ದು ಸ್ವಾಭಾವಿಕ. ಈ ವಿಧಾನವನ್ನು ನಮ್ಮ ಸಂವಿಧಾನ ನಮಗೆ ಒದಗಿಸಿದೆ. ಪಕ್ಷ ಪ್ರಭುತ್ವದ ಮೂಲಕವೇ ನಮ್ಮ ಆಡಳಿತ ಈ ವರೆಗೆ ನಡೆಯುತ್ತ ಬಂದಿದೆ.

ಈ ಆಡಳಿತಕ್ಕಾಗಿಯೇ ಪಕ್ಷಗಳೂ ಹುಲವಾರು ಹುಟ್ಟಿಕೊಂಡಿವೆ. ಅವುಗಳ ಹಿಂಬಲವೂ ಹಲವು. ದೇಶದ ಅಭಿವೃದ್ಧಿಯಲ್ಲಿ ಸಾಧನೆಯಲ್ಲಿ ಅವುಗಳ ಕಾರ್ಯ ಯೋಜನೆಗಳೂ ಹಲವಾರು ಇರುವುದರಿಂದ ಪಕ್ಷಗಳೂ ಹಲವಾರು ಇರುವವು. ಅಥವಾ ಆವಶ್ಯವೆನಿಸಿದಾಗ ಹುಟ್ಟಿಕೊಳ್ಳುವುದೂ, ಆ ಪರೂಪವೇನೂ ಅಲ್ಲ. ಪ್ರಜಾಪ್ರಭುತ್ವದಲ್ಲಿ ಪಕ್ಷಗಳು ಈ ಪ್ರಜಾಪ್ರಭುತ್ವದ ರೀತಿ–ನೀತಿಗಳನ್ನು ಸರಿಯಾಗಿ ಅರಿತು ಆರೋಗ್ಯದಾಯಕವಾಗಿ ಅದನ್ನು ಬೆಳೆಸಬೇಕಾಗುತ್ತದೆ. ಈ ದೃಷ್ಟಿಯಿಂದಲೇ ಪಕ್ಷಗಳು ಸೃಷ್ಟಿಯಾಗುವುದು, ಬೆಳೆಯುವುದು ರಾಜಕೀಯಕ್ಕೆ ಅಪೇಕ್ಷಣೀಯವೆನ್ನಿಸಿದೆ.

ಅಧಿಕಾರ ವಾಹ

ಆದರೆ ಇಂದು ಪಕ್ಷಗಳು ಹುಟ್ಟಿಕೊಳ್ಳುವುದು ಈ ಸೈದ್ಧಾಂತಿಕ ತಳಹದಿಯ ಮೇಲೆ ಆಗುತ್ತಿಲ್ಲ ಹೇಗಾದರೂ ಮೂಡಿ ಆಡಳಿತದ ಅಧಿಕಾರ ಪಡೆಯುವ ಹವ್ಯಾಸವಿರಿಸಿಕೊಂಡು ಬೇರೆ ಬೇರೆ ಆಕರ್ಷಕ ಮುಖವಾಡ ಧರಿಸಿ ಹುಟ್ಟಿ ಸತ್ತು, ಅಥವಾ ಸತ್ತು ಹುಟ್ಟಿ ಅಂತೂ ನಾನಾ ರೀತಿಯಲ್ಲಿ ಈ ರಾಜಕೀಯ ಪಕ್ಷಗಳ ವ್ಯವಹಾರ, ವ್ಯವಸ್ಥೆ ಇರುತ್ತದೆ.

ಶ್ರೀ ತದ್ದಲಸೆ ನಿಶ್ಶೇಶ್ವರ ಶರ್ಮಾ

ಪ್ರಜಾಪ್ರಭುತ್ವದಲ್ಲಿ ಪಕ್ಷಾಂತರ ವೃತ್ತಿ

ಇದರ ಜೊತೆಯಲ್ಲಿ ನಾನಾ ಜನರೂ ಈ ರಾಜಕೀಯ ಪಕ್ಷಗಳ ಸ್ನೇಹ ಸಂಬಂಧಗಳನ್ನು ಹಚ್ಚಿಕೊಂಡು—ಬಿಚ್ಚಿಕೊಂಡು ಸಾಗುವುದನ್ನು ಕಂಡಾಗ ಪಕ್ಷಗಳ ಬಗ್ಗೆ ಇರಿಸಿಕೊಂಡ ವಿಚಾರ ಎಂಥದು ಎಂಬುದು ವ್ಯಕ್ತವಾಗುತ್ತದೆ. ವ್ಯಕ್ತಿಗಳ ಸಾಧನೆ ಆಶೆ, ಆಕಾಂಕ್ಷೆಗಳು ಸಾಧ್ಯವಾಗದಿದ್ದಾಗ ಪಕ್ಷದಿಂದ ಪಕ್ಷಕ್ಕೆ ಸಾಗುವ ಈ ಪಕ್ಷಾಂತರ ವೃತ್ತಿ ಇಂದು ಅನಿರ್ಬಂಧಿತವಾಗಿ ಬೆಳೆದು ಬರುತ್ತಿರುವುದು ದಿನ ನಿತ್ಯದ ಸುದ್ದಿಯಾಗಿ ಬಿಟ್ಟಿದೆ. ಈ ವೃತ್ತಿ—ವ್ಯಕ್ತಿಗಳು ಪ್ರಜಾಪ್ರಭುತ್ವಕ್ಕಾಗಲೀ, ಪಕ್ಷ ಕಾರ್ಯಕ್ಕಾಗಲೀ ಕ್ಷೇಮ ತರಲಾರವೆಂಬುದು ಬಲ್ಲವರ ಮಾತಾಗಿದೆ.

ಹೊಸ ಅಂಗಡಿ ಇದ್ದ ಹಾಗೆ

ಎಲ್ಲಿಯೂದರೂ ಒಂದು ಹೊಸ ಅಂಗಡಿ ಆರಂಭವಾಯಿತೆಂದರೆ ಆಲ್ಲಿ ಉದ್ರೀ ದಕ್ಕಿಸಲು ಕೆಲವು ಗಿರಾಕಿಗಳು ಮುಂದೆ ಬರುತ್ತಾರೆ ಹಿಂದಿನ ಅಂಗಡಿಯಲ್ಲಿಯೇ ಜೀನಸು ಕೊಳ್ಳಲು ಜೋದರೆ ಆಲ್ಲಿ ಹಳೇ ಬಾಕಿಯೇ ತೀರಿಸಲಾಗದಿದ್ದಷ್ಟು ಇದ್ದುಬಿಡುತ್ತದೆ. ಹಾಗಾಗಿ ಹೆಚ್ಚು ಕಾಲ ಕೊಳ್ಳಲು ಸಾಧ್ಯವೇ ಆಗುವುದಿಲ್ಲ.

ಇಂದು ಇದೇ ರೀತಿಯಲ್ಲಿಯೇ ನಮ್ಮ ರಾಜಕೀಯ ಪಕ್ಷಗಳ ಪರಿಸ್ಥಿತಿಯೂ ಆಗತೊಡಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಕೆಲವರು ಈ ಪಕ್ಷಾಂತರ ವೃತ್ತಿ ಬೆಳೆಸಿಕೊಂಡ ವ್ಯಕ್ತಿಗಳು ಪಕ್ಷವನ್ನೂ ಒಂದು ಉದ್ರೀ ಅಂಗಡಿ ಅಥವಾ ಹೊಸ ಅಂಗಡಿಯಂತೆಯೇ ಕಾಣತೊಡಗಿದ್ದಾರೆ. ಎಲ್ಲಿಯೂದರು ಒಂದು ಹೊಸ ಪಕ್ಷ ಹುಟ್ಟಿಕೊಡರೆ ಸಾಕು, ಅಥವಾ ಸಾಯುವ ಸ್ಥಿತಿಯಲ್ಲಿದ್ದರೂ ಸರಿಯೇ, ಅದಕ್ಕೆ ಸೇರಿಕೊಂಡು ಅಲ್ಲಿಯ ಅಧಿಕಾರ ಪಡೆಯುವ ಹೊಂಚು ಹಾಂಚಿಕೆ ನಡೆಸುವುದೊಂದು ಅವರ ಬಯಕೆ. ಹಿಂದಿನ ಪಕ್ಷದಲ್ಲಿ ತಿಂಮ ಸಾಕಾಗಿ ಅಥವಾ ತಿನ್ನಲು ಸಿಗದಿದ್ದಾಗ, ಇಲ್ಲವೇ ತಿಂದದ್ದನ್ನು ತಿರುಗಿ

> ವ್ಯಕ್ತಿಗಿಂತಲೂ ತತ್ವವುಳ್ಳ ಪಕ್ಷ ದೊಡ್ಡದು. ಪಕ್ಷಕ್ಕಿಂತ ದೇಶ ದೊಡ್ಡದು. ಈ ದೇಶದ ಸೇವೆಗಾಗಿಯೇ ಪಕ್ಷ ಹುಟ್ಟಿಕೊಳ್ಳಬೇಕಾಗುತ್ತದೆ; ಪಕ್ಷಕ್ಕಾಗಿ ವ್ಯಕ್ತಿ, ಪಕ್ಷದ, ದೇಶದ ಹಿತಕ್ಕಾಗಿ ನಿಷ್ಠನಾಗಿರಬೇಕಾಗುತ್ತದೆ.

ಕೇಳಿದಾಗ ಈ ಪಕ್ಷಾಂತರ ಪ್ರವೃತ್ತಿ ಹುಟ್ಟಿಕೊಳ್ಳುತ್ತದೆ. ಆಗ ಅವರು ಈ ಅಂಗಡಿ ಬಿಟ್ಟು ಹೊಸ ಅಂಗಡಿ ಎಲ್ಲಿದೆ ಎಂದು ಹುಡುಕಲು ಹೊರಡುತ್ತಾರೆ. ಅದೇ ಹೊತ್ತಿಗೆ ಧರ್ಮ, ಕರ್ಮಯೋಗದಿಂದ ಯಾರಾದರೂ ಹೊಸ ಪಕ್ಷದ ಅಂಗಡಿ ಇಟ್ಟರೆ ಇವರೇ ಅದರ ದೊಡ್ಡ ಗಿರಾಕಿಯಾಗಿ ಸೇರಿಕೊಳ್ಳುತ್ತಾರೆ. ರಾಜಕೀಯ ಪಕ್ಷ ವೆಂಬುದು ಸಾಮಾನು ಕೊಳ್ಳುವ ಅಂಗಡಿ ಹಾಗೆ ಜನ ಕಾಣುತ್ತಾರೆಯೇ ಹೊರತು ಆಲ್ಲಿರುವ ತತ್ವ, ಧೋರಣೆಗಳು ಜನ ಮನಕ್ಕೆ ಜಂಟಿಕೊಳುವುದಿಲ್ಲ.

ಪಕ್ಷಾಂತರಕ್ಕೆ ಪ್ರೇರಕ

ಪಕ್ಷಾಂತರಗೊಳ್ಳುವುದು ಇಂದು ಏನೂ ಮಹತ್ವವಿಲ್ಲದ ಸಂಗತಿಗಳಾಗಿ ಬಿಟ್ಟಿವೆ. ಇದೊಂದು ನಾಳೆ ಮತ್ತೊಂದು, ನಾಡಲು ಇನ್ನೊಂದು ಹೀಗೆಯೇ ಪಕ್ಷಾಂತರಗೊಳ್ಳುತ್ತಿರುವುದನ್ನೂ ಕಾಣುತ್ತಿವೆ. ಅವರಿಗೆ ಈ ರಾಜಕೀಯ ಪಕ್ಷವೆಂಬುದು ಯಾವ ಆದರ್ಶವೂ ಇಲ್ಲದ ವೃತ್ತಿ ವ್ಯವಹಾರಗಳಾಗಿ ಕಂಡಿರಬೇಕು. ರಾಜಕೀಯಕ್ಕೆರುವ ಜಾರಿತ್ಯ, ಪಾವಿತ್ರ್ಯತೆಗಳು ಆಲ್ಲಿ ಕಾಣುತ್ತಿಲ್ಲ.

(ಮೂಲತ್ತಾಲ್ಕನೇ ಪುಟ ನೋಡಿರಿ)

THE
SHANKER TRANSPORT COMPANY
(PRIVATE) LTD.,
KOPPA-KADUR
(MYSORE STATE)

Pioneer in the field of
Passenger Transport in the
Districts of Chikmagalur,
Shimoga and South Kanara.

A. Ramesh Rao
Managing Director

ನಾನು ಮತ್ತು ನಾವು

ಶ್ರೀ ಎಚ್. ಎ. ಪದ್ಮನಾಭ ಭಟ್ಟ, ಶಿರೋಮಣಿ, ವಿದ್ವಾನ್

'ನಾನು' ಮತ್ತು 'ನಾವು'ಗಳ ಪ್ರಯೋಗ ಕ್ಷಣ ಕ್ಷಣವೂ ಮಾಡುವ
ನಾವು ಪಾಂಜಲ ಮನಸ್ಸಿನಿಂದ ಅವುಗಳ ಅರ್ಥವನ್ನು ಮಾಡಿಕೊಂಡಿದ್ದೇವೆಯೆ?
ನಾನೆಂಬ ಕುಠಾರದಿಂದ ನಾವೆಂಬ ವೃಕ್ಷವನ್ನು ಕಡಿಯಹೊರಟರೆ,
ಸಮಾಜ ಬೆಳೆಯುವುದೆಂತು?

ಮಾನವನು ಸಮಾಜ ಜೀವಿ. ಹತ್ತು ಹಲವರೊಡಗೂಡಿ ಒಂದಾಗಿ ಬಾಳಿ ಬದುಕಿಗಳನ್ನನುಭವಿಸಿದಾಗಲೇ ಸಾಮಾಜಿಕತೆಯ ಅರಿವಾಗುವುದು ಸುಖದ ಸುಪ್ಪತ್ತಿಗೆಯಲ್ಲಿ ಒಂಟಿಯಾಗಿ ಬಾಳಿ ಬಯಸುವವನು 'ಸ್ವಾನುಭವ ವಿಜ್ಞಾನವಿಲ್ಲದ ಶಾಸ್ತ್ರಜ್ಞ ಸೂಕರನಂತೆ' ಎಂಬ ಅನುಭವಾಮೃತದಂತೆ 'ಉದರಂಭರ'ನಾಗುವನು. ಅನುಭವವು ಸಂಪನ್ನವಾದಂತೆ ಮಾನವತೆಯ ವಿಶಾಲ ವೈಪುಲ್ಯವು ಅರಿವಿಗೆ ಬಂದು ಸಾಂಘಿಕ ಜೀವನ ಸೊಬಗು ಮೆಚ್ಚಿಗೆಯೂಗುವುದು.

'ನಾನು' ಎಂಬ ಸಂಕೋಚ ಭಾವನೆಯು ವ್ಯಕ್ತಿಯನ್ನು ಮಾನವತೆಯಿಂದ ಪ್ರತ್ಯೇಕಿಸುವ ಕುಠಾರ. ಕೊಡಲಿಯ ಕಾವಿನಂತೆ ಆದು ಮೂಲವನ್ನೇ ನಾಶಮಾಡುವುದು. ಸಾಮಾಜಿಕ ಝಂಝಾವಾತವು ಒಂಟಿ ಮರದಂತಿರುವವನನ್ನು ಹೆಚ್ಚಾಗಿ ಪೀಡಿಸುವುದರಲ್ಲಿ ಆಶ್ಚರ್ಯವಿಲ್ಲ. ತ್ವರಿತನಾಗಿ ಓಡುವಾಗ 'ನಾನು' ಎಂದಿಷ್ಟೆ' ನೆನೆಮಕೊಂಡರೆ ಇದಿರಾಳಿಗೆ ಡಿಕ್ಕಿ ಹೊಡೆದಾಗ ನನ್ನತನವು ಹೇಗೆ ಸೀಮಿತವಾಗಿದೆ ಎಂಬ ಅರಿವಾಗದಿರದು.

'ನಾವು ಎಂಬುದು ವಿಶಾಲಭಾವನೆಯ ತಳಹದಿ ಈ ತಳಹದಿಯ ಮೇಲೆ ಮಾನವತೆಯ ಬಹುಮುಖ ಸ್ಫೋತೋವಹಗಳು ಹರಿದು ಬಂದು ನೆಲೆನಿಲ್ಲಬಹುದು. ಇದರಲ್ಲಿ ಮೊಸಳೆಯಂತಹ ಕ್ರೂರ ಭಾವನೆಗಳೂ ಇರಬಹುದು ಮುತ್ತಿನಂತಹ ಸೌಮ್ಯ ಭಾವನೆಗಳೂ ಇರಬಹುದು. 'ನಾವೆಲ್ಲ ಒಂದಾಗಿ ಸಾಗೋಣ','ಮದುವೆಗೋ. ಮಸಣಕ್ಕೋ,' 'ಹತ್ತರ ಸಾವು, ಮದುವೆಗೆ ಸಮಾನ' ಎಂಬ ಮಾತಿದೆಯಷ್ಟೆ? ನೂರು ರೂಪಾಯಿಯ ನೋಟಿನಲ್ಲಿರುವ ಒಂದು ಪೈಸೆಗೂ ನೂರು ರೂ.ಗಳ ಬೆಲೆ. ಮುಡಿ ಅಕ್ಕಿಯ'ಲ್ಲಿರುವ ಒಂದು ಕಾಳಿಗೂ ಮುಡಿಯಕ್ಕಿಯ ಬೆಲೆ ಆ ಬೆಲೆ ಬಿಡಿ ಕಾಸಿಗಾಗಲೀ, ಕಾಳಿಗಾಗಲೀ ಇದೆಯೇ?

'ನಾನು ಹೋದರೆ ನೋಕ್ಷಕ್ಕೆ ಹೋಗ ಬಹುದು' ಎಂಬ ದಾಸರ ಮಾತು ಇಲ್ಲಿ ಮನನೀಯವಾಗಿದೆ ಕನಕದಾಸರ ಹೆಸರಲ್ಲಿ ಮಾತ್ರ ಕನಕವಿತ್ತು. ಪುರಂದರ ದಾಸರು ಸರ್ವಸ್ವ ತ್ಯಾಗ ಮಾಡಿದ ಮೇಲೆಯೇ ದಾಸರೆನಿಸಿದರು. ವ್ಯಾಸರಾಯರು ರಾಜ್ಯ ವಾಳಿದರೂ ಅದರಲ್ಲಿ ಆಸಕ್ತಿನಹಿಸಿದ್ದರೇ? 'ಪದ್ಮಪತ್ರ ಮಿವಾ-ಭಸಾ'ಎಂಬ ನೀತಿಯನ್ನವಲಂಭಿಸಿದ್ದರು ,ನಾನು ಎಂಬ ಅಹಂ ಭಾವ ಕಳೆದಾಗಲೇ ಮಾನವತೆಯ ನಿಜರೂಪವು ತೋರಿಬರುವುದು.

ಆದರೆ ಈ ನಾನು ಮತ್ತು ನಾವುಗಳ ಅರ್ಥವು ಒಂದು ಪರಿಮಿತಿಯಲ್ಲಿ ಸೀಮಿತವಾಗಿರಬೇಕು. ಇಲ್ಲವಾದರೆ ಬೆಕ್ಕಿಗೆ ಗಂಟೆ ಕಟ್ಟಲು ಹೋದ ಇಲಿಗಳ ಕಥೆಯಂತಾದೀತು. ಮನೆಯ ಯಜಮಾನನು ನಾನೇ ಕೆ ಗೈವೆಮೆಗೆ ಹೆಣಗಬೇಕೆಂದು ಕುಳಿತರೆ ಮನೆಯೇ ತಲೆಕೆಳಗಾಗ ಬಹುದು ಹಾಗೆಂದು ಎತ್ತರದ ಮರದ ಹಣ್ಣನ್ನು ಕೊಯ್ಯಲು ಏಣಿ ಹಿಡಿಯಲು ಎಲ್ಲರನ್ನೂ ಸೇರಿಸಿ ಕೊನೆಗೆ ಕೈಗೆ ಎಟಕಿದ ಹಣ್ಣನ್ನು ತಾನೊಬ್ಬನೇ ಕಿತ್ತು ತಿನ್ನುವ ಮನಃ ಪ್ರವೃತ್ತಿ ಬೆಳೆದರೆ ಆದು ನಾನು ಎಂಬುದನ್ನು ದುರುಪಯೋಗ ಮಾಡಿದಂತೆಯೇ ಸರಿ. ಏಣಿಗೆ ಯಾರು ಹತ್ತುವಿರಿ? ಎಂದಾಗ ನಾವು ಎಂದರೆ ಆದು ನಾವು ಎಂಬುದರ ದುರುಪಯೋಗವಾದಂತೆಯೇ ಸರಿ ಹೀಗೆ ನಾನು ಮತ್ತು ನಾವು ಎಂಬುದನ್ನು ಸಕ್ರಿಯವಾಗಿ ಸಹಕಾರ ಭಾವನೆಯಿಂದ ಬಳಸ ಬೇಕಾದುದು ಮಾನವತೆಯ ಹೆಗ್ಗುರಿ.

ಅವನು ನನ್ನನ್ನು ದ್ವೇಷಿಸುವನು. ನನಗೆ ನನ್ನಲ್ಲಿ ಮತ್ಸರ ಎಂದು ಸಿಟ್ಟಾಗುವುದಕ್ಕಿಂತ, ಅವನನ್ನು ಸ್ನೇಹಿತನನ್ನಾಗಿಯೂ, ನಿನ್ನನ್ನು ಸಹೃದಯನನ್ನಾಗಿಯೂ ಮಾಡಿಕೊಳ್ಳುವ ಸಹನೆಯ ಮನೋಭಾವ ನನ್ನಲ್ಲಿ ಮೂಡಿ ಸಫಲವಾದರೆ ಆಗ ನಾನು ಎಂಬುದರ ಸಮನ್ವಯವಾದಂತೆ ಇಂತಹ 'ನಾನು' ನಾನಾಗಿರದೆ ಆದು ನಾವಾಗಿದೆ. ಅಂದರೆ ನಾವು ಎಂಬುದರಲ್ಲಿ ಅವಸೂ ನೀನೂ ಸಮನ್ವಯವಾದಂತಾಯಿತು. ಈ ಸಮನ್ವಯ ಸೂತ್ರವೇ ಮಾನವತೆಯ ಮೂಲಸೂತ್ರ.

ಇಂದಿನ ಸಮಾಜದಲ್ಲಿ ಈ ನಾನು ಎಂಬುದನ್ನು ನಾವು ಎಂದಿರಿಸಿ ಕೊಂಡವರೆಷ್ಟು ಮಂದಿ? ರಾಜಕೀಯವಂತೂ ನಾನು ಎಂಬುದರ ರಕ್ಷಣೆಗೆ ಪರ್ಯಾಪ್ತವಾದಷ್ಟು ಮಾತ್ರ ನಾವು ಎಂಬುದನ್ನು ಹೊಂದಿಕೊಂಡಿದೆ. ಧರ್ಮ, ನೀತಿಗಳಂತೂ ನಾನು ಎಂಬುದನ್ನೇ ಪರಾಕಾಷ್ಠೆಯೊಗಿ ಹೊಂದಿಕೊಂಡು ವೈಯಕ್ತಿಕವಾಗಿವೆ. ಧಾರಣಾತ್ ಧರ್ಮಃ, ನಯತೀತಿ ನೀತಿಃ, ಎಂಬ ಸಮಾಜವನ್ನೇ ಉದ್ಧರಿಸುವ ತಳಹದಿಯಂತಿರುವ ಧರ್ಮವಾಗಲೀ, ಸಮಾಜವನ್ನು ಸನ್ಮಾರ್ಗದಲ್ಲಿ ಒಯ್ಯಬಲ್ಲ ನೀತಿಯೂಗಲೀ ಕಾಣಿಸಿಗುತ್ತಿಲ್ಲ. ಕೊಲೆ, ದರೋಡೆ, ಸ್ವಾಮಿದ್ರೋಹಗಳೇ ಧರ್ಮಗಳಾಗಿನೆ ಸಮಾಜದ ಅಧಃಪತನಕ್ಕೆ ಕಾರಣವಾದ ಅನೃತ, ಅತಿಕಾಮನೆ, ಸಾಂಕರ್ಯಗಳೇ ನೀತಿಗಳಾ

(ಮೂವತ್ತನೂರನೇ ಪುಟ ನೋಡಿರಿ)

With best compliments
from
SRI MANJUNATH
MOTOR SERVICE
UDIPI, S. K.
Phone: 382

ಭಾರತೀಯ ಇತಿಹಾಸ ದರ್ಶನ

ನೂರ್ಕ್ಸ್‌ವಾದಿ ದೃಷ್ಟಿಕೋನ

ಶ್ರೀ ಸು. ರಾಜೀವ

ಇತಿಹಾಸ ಬರೆಯುವುದರಲ್ಲಿ ಹಲವಾರು ಉದ್ದೇಶ್ಯಗಳಿವೆ. ತಂತಮ್ಮ ಉದ್ದೇಶ್ಯ ಸಾಧನೆಗಾಗಿ ಲೇಖಕರು ಬೇರೆ ಬೇರೆ ದೃಷ್ಟಿಕೋನಗಳಿಂದ ಇತಿಹಾಸವನ್ನು ನೋಡುತ್ತಾರೆ. ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿಯೂ ಭಾರತೀಯ ಇತಿಹಾಸ ದರ್ಶನವನ್ನು ಮಾಡಿಸಿದವರಿದ್ದಾರೆ. ಈ ಲೇಖ ಅದರ ಮೇಲೆ ಬೆಳಕಿನ ಕಿರಣ ಚೆಲ್ಲುವ ಯಶಸ್ವೀ ಪ್ರಯತ್ನವೊಂದು.

ಭಾರತದ ಚರಿತ್ರೆಯನ್ನು ಅನೇಕ ಮಂದಿ ಭಾರತೀಯ ಇತಿಹಾಸಕಾರರೂ ವಿದೇಶೀಯ ವಿದ್ವಾಂಸರೂ ಬರೆದಿದ್ದಾರೆ. ಭಾರತೀಯ ಚರಿತ್ರೆಯು ವಿವಿಧ ದೃಷ್ಟಿಕೋನದಿಂದಲೂ ಬರೆಯಲ್ಪಟ್ಟಿದೆ. ಇಂದು ಚರಿತ್ರೆಯು ಕೇವಲ ನಿರೂಪಣೆ ಮಾತ್ರವಲ್ಲ, ಅದು ಒಂದು ವೈಯುಕ್ತಿಕ ವಿವರಣೆಯೂ ಆಗಿಲ್ಲ. ಅದು ಆಧಾರಗಳ ಹಾಗೂ ವಿವಿಧ ಸಾಕ್ಷ್ಯಗಳ ಸಂಯೋಜನೆಯಿಂದೊಡಗೂಡಿದ ವೈಜ್ಞಾನಿಕ ತಳಹದಿಯ ವಿಶ್ಲೇಷಣೆಯೂ ಆಗಿದೆ, ವಿವರಣೆಯೂ ಆಗಿದೆ.

ಭಾರತೀಯ ಚರಿತ್ರೆಯನ್ನು ಸಾಧ್ಯವಾದಷ್ಟು ಸಾಕ್ಷ್ಯಗಳ ಸಂಯೋಜನೆಯಿಂದ ಬರೆಯುವ ಪ್ರಯತ್ನಗಳನ್ನು ಮಾಡಲಾಗಿದೆ. ಅದಲ್ಲದೆ ಪೂರ್ವಗ್ರಹ ಕಲ್ಪನೆಯ ದೋಷಗಳನ್ನು ನಿವಾರಿಸುವ ಪ್ರಯತ್ನಗಳನ್ನೂ ಮಾಡಲಾಗಿದೆ. ಈ ನ್ಯೂನತೆಗಳನ್ನು ಹೋಗಲಾಡಿಸಿದ ಅನೇಕ ಹೊಸ ಗ್ರಂಥಗಳು ಬರೆಯಲ್ಪಟ್ಟಿವೆ. ಇದು ಸ್ವಾಗತಾರ್ಹ ಸಂಗತಿಯೂಗಿದೆ. ಹಿಂದಿನ ನಮ್ಮ ಅನೇಕ ಚರಿತ್ರೆ ಗ್ರಂಥಗಳು ವಿದೇಶಿ ವಿದ್ವಾಂಸರ ಕೃತಿಗಳಾಗಿದ್ದು ಅವುಗಳು ಪಾಶ್ಚಿಮಾತ್ಯ ಇತಿಹಾಸದ ಅಂಗಗಳಾಗಿಯೇ ಬರೆಯಲ್ಪಟ್ಟಿದ್ದುವು. ಈ ದೋಷದಿಂದಲೂ ನಮ್ಮ ದೇಶದ ಇತಿಹಾಸ ಗ್ರಂಥಗಳು ಇದೀಗ ಬಿಡುಗಡೆ ಹೊಂದಿವೆ.

ಅಲ್ಲಸಲ್ಲದ ಆರೋಪ

ಪ್ರತಿಯೊಂದು ದೇಶದ ಜನರಿಗೂ ಅವರದೇ ಆಗಿರುವ ಇತಿಹಾಸ ಇದೆ, ಐತಿಹ್ಯವಿದೆ. ಇದರಂತೆಯೇ ಭಾರತದ ಜನರೂ ಐದು ಸಾವಿರ ವರ್ಷಗಳ ಇತಿಹಾಸವನ್ನು ಪಡೆದ ಜನಸಾಗರವರು. ಗ್ರೀಸ್, ಚೀನಾ ನಾಗರಿಕತೆಗಳ ಇತಿಹಾಸಗಳಿರುವಂತೆ ಬರೆಯಲ್ಪಟ್ಟ ಇತಿಹಾಸ ಗ್ರಂಥಗಳು ನಮ್ಮಲ್ಲಿಲ್ಲ. ಹೆರೋಡೋಟಸ್, ಮತ್ತು ಸ್ಸುಮಾ ಚೀಯೊನ್‌ರಂತ ಇತಿಹಾಸಕಾರರನ್ನು ಭಾರತವು ಪಡೆದಿಲ್ಲ. ಇತಿಹಾಸವನ್ನು ಬರೆದಿಡುವ ಸಂಪ್ರದಾಯ ಇತ್ತೀಚಿನದು. ಕಲ್ಹಣನ ರಾಜತರಂಗಿಣಿ (ಕ್ರಿ. ಶ. 12ನೇ ಶತಮಾನ) ಮೊತ್ತ ಇಂತಹ ಇತಿಹಾಸ ಗ್ರಂಥವಾಗಿದೆ. ಆದುದರಿಂದಲೇ ಪಾಶ್ಚಿಮಾತ್ಯ ಇತಿಹಾಸಕಾರರು ಭಾರತಕ್ಕೆ ಇತಿಹಾಸ ಪರಂಪರೆಯಿಲ್ಲ ಎಂದೂ ಆರೋಪಿಸಿರುವರು. ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆಯಿಲ್ಲವೆಂದೂ ಪ್ರತಿವಾದಿಸಿರುವರು.

ಆದರೆ ಅಂತಹ ಆರೋಪಗಳಿಗೆ ಸರಿಯಾದ ಸಾಕ್ಷ್ಯಗಳಿಲ್ಲ, ವೈಜ್ಞಾನಿಕವಾದ ಆಧಾರಗಳಿಲ್ಲ. ಇತಿಹಾಸವು ಬರಿಯ ಬರೆಹಗಳಿಂದ ಮಾತ್ರ ವ್ಯಕ್ತವಾಗಬೇಕಾಗಿಲ್ಲ. ಆದಕ್ಕೆ ಇತರ ಅನೇಕ ಆಧಾರಗಳೂ ಇವೆ. ಇತಿಹಾಸ ಪ್ರಜ್ಞೆಯು ಜನರ ಸಂಸ್ಕೃತಿ ಧಾರ್ಮಿಕ ಮನೋವೃತ್ತಿಗೆ ಸಂಬಂಧಿಸಿವೆ. ಈ ಆರೋಪದಲ್ಲಿ ಸತ್ಯಾಂಶವಿದೆಯಾದರೂ ಅದು ಸಂಪೂರ್ಣವಾದ ಸತ್ಯವಲ್ಲ.

ಪಾಶ್ಚಿಮಾತ್ಯ ಬರೆಹಗಾರರ ಹಾಗೂ ಬ್ರಿಟಿಷ್ ಬರೆಹಗಾರರ ಅಲ್ಲಸಲ್ಲದ ತಪ್ಪು ಗ್ರಹಿಕೆಗಳನ್ನು, ಪೂರ್ವಕಲ್ಪಿತ ದೋಷಗಳನ್ನು ಅಲ್ಲಗಳೆಯುವುದರಲ್ಲಿ ಇತ್ತೀಚಿನ ವರೆಗೆ ಅನೇಕ ಮಂದಿ ಭಾರತೀಯ ಇತಿಹಾಸಕಾರರು ತೃಪ್ತರಾಗಿದ್ದರು. ಬ್ರಿಟಿಷ್ ಬರೆಹಗಾರರು ಮತ್ತು ಪಾಶ್ಚಿಮಾತ್ಯ ಇತಿಹಾಸಕಾರರು ಬ್ರಿಟಿಷರು ಬರುವ ಮೊದಲು ಭಾರತೀಯರು ಅನಾಗರಿಕ ಸ್ಥಿತಿಯಲ್ಲಿದ್ದರೆಂದೂ, ಬ್ರಿಟಿಷ್ ಆಡಳಿತೆಯು ಜನರಿಗೆ ಆರ್ಥಿಕ ಸಮೃದ್ಧಿಯನ್ನೂ ಸಾಮಾಜಿಕ ನ್ಯಾಯವನ್ನೂ, ಪಕ್ಷ ಆಡಳಿತೆಯನ್ನೂ ಸಂರಕ್ಷಣೆ ಹಾಗೂ ಶಾಂತಿಯನ್ನೂ ಒದಗಿಸಿತ್ತೆಂಬ ಅಭಿಪ್ರಾಯವನ್ನು ಸಮರ್ಥನೆ ಮಾಡುವ ಕಾರ್ಯದಲ್ಲಿ ನಿರತರಾಗಿದ್ದರು. ಪಾಶ್ಚಿಮಾತ್ಯ ಸಂಪರ್ಕ–ಪೂರ್ವ ಭಾರತದಲ್ಲಿ ಯಾವ ನಾಗರಿಕತೆಯೂಗಲೀ ಸಂಸ್ಕೃತಿಯೂಗಲೀ ಇರಲಿಲ್ಲವೆಂಬ ಕಲ್ಪನೆಯನ್ನು ಈ ವರ್ಗಕ್ಕೆ ಸೇರಿದ ಇತಿಹಾಸ ಕೃತಿಗಳು ಉಂಟು ಮಾಡಿದ್ದುವು.

ಭಾರತೀಯ ಇತಿಹಾಸದ ಬಗ್ಗೆ ಸಮಗ್ರವಾದ ಹಾಗೂ ಸಮ್ಯಕ್ ದೃಷ್ಟಿಯುಂಟಾದುದು ಬಹಳ ಇತ್ತೀಚಿಗೆ. ಭಾರತೀಯ ಜನರು ಅನೇಕ ಸಹಸ್ರ ವರ್ಷಗಳಿಂದ ಏಕಕವಾದ ಭೌಗೋಲಿಕ ನಿಟ್ಟಿನಲ್ಲಿ ನಡೆಸಿರುವ ಜೀವನದ ಕಥೆಯೇ ಅವರ ಇತಿಹಾಸವಾಗಿದೆ. ಅನೇಕ ಪರಿಸ್ಥಿತಿಗಳಿಂದ ಜನ ಪಂಗಡ, ಆರ್ಥಿಕ ಸಾಮಾಜಿಕ ಧಾರ್ಮಿಕ ಹಾಗೂ ಬೌದ್ಧಿಕ ಚಳುವಳಿಗಳಿಂದ ಭಾರತೀಯರ ಇತಿಹಾಸವು ವಿಕಾಸಗೊಂಡಿದೆ. ಇದು ಬರಿಯ ಧಾರ್ಮಿಕ ಸ್ಫೂರ್ತಿಯಿಂದ, ತತ್ವಜ್ಞಾನದ ತಳಹದಿಯಲ್ಲಿ ನಿಂತಿಲ್ಲ ಅಥವಾ ಬೆಳೆದು ಬಂದಿಲ್ಲ. ಅದು ಕೇವಲ ರಾಜ ವಂಶಗಳ ಮೂರ್ಖಾಟಗಳಿಂದ ರೂಪುಗೊಂಡಿಲ್ಲ, ಅದು ಮಹಾನ್ ವ್ಯಕ್ತಿಗಳಿಂದ ಮಾತ್ರ ವ್ಯವಸ್ಥೆಗೊಂಡಿಲ್ಲ. ಇತಿಹಾಸವು ನಾನಾ ಕಾರ್ಯ ಕಾರಣಗಳಿಂದ ಪ್ರಭಾವಿತವಾಗಿದೆ.

ಭಾರತೀಯ ಇತಿಹಾಸವನ್ನು ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಬೆಳವಣಿಗೆಯ ದೃಷ್ಟಿಯಿಂದ ಬರೆದ ಗ್ರಂಥಗಳೂ ಬಹಳ ವಿರಳ. ಹೆಚ್ಚಿನ ಚರಿತ್ರೆಗಳು ರಾಜಕೀಯ ಮೂರ್ಖಾಟುಗಳಿಗೂ ಯುದ್ಧಗಳಿಗೂ, ಯುದ್ಧಗಳ ಕಾರಣ ಮತ್ತು ಪರಿಣಾಮಗಳಿಗೂ ಮಹತ್ವವನ್ನಿತ್ತ ಕೃತಿಗಳಾಗಿರುತ್ತವೆ. ಆದರೆ ಇತ್ತೀಚೆಗೆ ಇದು ಪರಿಪೂರ್ಣತೆಯ ದೃಷ್ಟಿಯಲ್ಲ ಎಂಬ ಅರಿವು ಅನೇಕರಲ್ಲುಂಟಾಗಿದೆ. ಆಮೆದರಿಂದ ಇಂದು ಈ ವರ್ಗದ ಬರೆಹಗಳಿಗೆ ಹೆಚ್ಚಿನ ಸ್ವಾಗತವಿಲ್ಲವಾಗಿದೆ. ಇಂದು ಹೆಚ್ಚೆಚ್ಚು ಆಧಾರ ಒಂಕೆ ಸಂಪೃಗಳನ್ನೊಳಗೊಂಡ ಗ್ರಂಥಗಳು ಪ್ರಕಟವಾಗುತ್ತಿರುವುವು. ಇದೊಂದು ಶುಭ ಸಂಗತಿಯೂಗಿದೆ. ವೈಜ್ಞಾನಿಕ ದೃಷ್ಟಿ ಇತಿಹಾಸ ಬರವಣಿಗೆಯು ದೃಷ್ಟಿಯಿಂದ ಸಾಗತಾರ್ಹ.

ಮಾರ್ಕ್ಸ್‌ನ ಇತಿಹಾಸ ತತ್ವ

ಭಾರತೀಯ ಇತಿಹಾಸದ ಬರೆಹಗಳಲ್ಲಿ ತೋರಿ ಬರುವ ಇನ್ನೊಂದು ಪಂಥವು ಮಾರ್ಕ್ಸ್‌ವಾದಿ ದೃಷ್ಟಿಕೋನದ ಕೃತಿಗಳಾಗಿವೆ. ಕಾರ್ಲ್‌ಮಾರ್ಕ್ಸ್ ಜಗತ್ಪ್ರಸಿದ್ಧ ಸಮಾಜ ಶಾಸ್ತ್ರ ಬರೆಹಗಾರ, ಕಮ್ಯೂನಿಸ್ಟ್ ತತ್ವದ ಪಿತಾಮಹ ಮತ್ತು ಜಗತ್ತಿನ ಇತಿಹಾಸದಲ್ಲಿ –ವಿಚಾರ ಕ್ರಾಂತಿಗೆ ಕಾರಣನಾದ ಪ್ರಸಿದ್ಧ ತತ್ವವೇತ್ತನು. ಆತನು ಭೌತಿಕವಾದಿ ಚಾರಿತ್ರಿಕ ವಿವರಣೆಗೂ ಪ್ರಸಿದ್ಧಿಪಡೆದಿರುವನು. ಭೌತಿಕವಾದಿ ಚಾರಿತ್ರಿಕ ವಿವರಣೆಯ ಪ್ರಕಾರ ಪ್ರಪಂಚದ ಚರಿತ್ರೆಯೆಲ್ಲಾ ವರ್ಗಕಲಹಗಳ ಚರಿತ್ರೆಯೇ ಆಗಿದೆ. ಪೂರ್ವಕಾಲದಲ್ಲಿ ಅದು ಆಸ್ತಿವಂತರಿಗೂ ಆಸ್ತಿಯಿಲ್ಲದವರಿಗೂ ಅವ್ಯಾಹತವಾಗಿ ನಡೆದ ಹೋರಾಟದ ಕಥೆಯೂಗಿದೆ. ಅನಂತರ ಅದು ಭೂ ಮೂಲ್ಕಿಕರಿಗೂ ಬೇಸಾಯಗಾರರಿಗೂ ನಡೆದ ಹೋರಾಟದ ಇತಿಹಾಸವಾಗಿದೆ. ಆಧುನಿಕ ಕಾಲದಲ್ಲಿ ಚರಿತ್ರೆಯೆಂಬುದು ಭಂಡವಾಳಗಾರರಿಗೂ, ಶ್ರಮಜೀವಿಗಳಿಗೂ ನಡೆಯುವ ಹೋರಾಟವಾಗಿದೆ. ಮಾರ್ಕ್ಸ್‌ನ ಮೂಲ ತತ್ವಗಳನ್ನು ಅನೇಕ ಮಂದಿ ಸಮಾಜ ಶಾಸ್ತ್ರಜ್ಞರೂ, ಇತಿಹಾಸಕಾರರೂ ಒಳಪಡಿಸಿಕೊಂಡಿದ್ದಾರೆ. ಭಾರತದಲ್ಲಿಯೂ ಈ ದೃಷ್ಟಿಕೋನದಿಂದ ಕೆಲವೊಂದು ಗ್ರಂಥಗಳು ಪ್ರಕಟವಾಗಿದೆ.

ಕಾರ್ಲ್ ಮಾರ್ಕ್ಸನು ಸ್ವತಃ ಭಾರತದ ಬಗ್ಗೆ ಬರೆದಿರುವನು. ಆತನು ಭಾರತೀಯ ಆರ್ಥಿಕ ನೀತಿಯ ಬಗ್ಗೆಯೂ ಬ್ರಿಟಿಷ್ ಆಡಳಿತೆಯಿಂದಾದ ಹಾನಿಯ ಬಗ್ಗೆಯೂ, ಭಾರತೀಯ ಆರ್ಥಿಕ ವ್ಯವಸ್ಥೆಯು ಮುಂದೆ ಯಾವ ರೂಪುಗೊಳ್ಳಬಹುದೆಂದೂ ಅನೇಕ ಲೇಖನಗಳನ್ನು ಬರೆದಿರುವನು. ಆದರೆ ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತದ ನೆಲೆಯಲ್ಲಿ ನಿರೂಪಿಸಿದ ಭಾರತದ ಇತಿಹಾಸವನ್ನು ಇತ್ತೀಚಿಗಿನವರೆಗೆ ಯಾರೂ ಬರೆಯಲಿಲ್ಲ. ನೆಹರೂರವರ ಐತಿಹಾಸಿಕ ದೃಷ್ಟಿಯು ಮಾರ್ಕ್ಸ್‌ವಾದದಿಂದ ಪ್ರಭಾವಿತವಾಗಿತ್ತು. ಆದುದರಿಂದ ಅವರು ತನ್ನ ಮಗಳಿಗೆ ಬರೆದ ಪತ್ರಗಳ ರೂಪದ ಅವರ ಪ್ರಸಿದ್ಧವಾದ 'ಜಗತ್ಕಥಾ ವಲ್ಲರಿ'ಯ ಬರೆಹಗಳಲ್ಲಿ ಈ ವೈಚಿತ್ರಿಕೋನವನ್ನು ಕಾಣಬಹುದು. ಭಾರತದ ಇತಿಹಾಸವನ್ನು ಆರ್ಥಿಕ ಅರ್ಥವಿವರಣೆಯ ರೂಪದಲ್ಲಿ ಬರೆದವರಲ್ಲಿ ನೆಹರು ಪ್ರಸಿದ್ಧರು.

ಗಾಳಿಯಲ್ಲಿ ಪ್ರಕಟವಾದ ರಜನಿಸಾಮೆ ದತ್ತರವರ 'ಇಂದಿನ ಇಂಡಿಯಾ ಮಾರ್ಕ್ಸ್‌ವಾದದ ನೆಲೆಯಲ್ಲಿ ನಿರೂಪಿಸಲಾದ ಮೊತ್ತ ಮೊದಲನೆಯ ಇತಿಹಾಸಕೃತಿಯೂಗಿದೆ. ಭಾರತದ ಇತಿಹಾಸದ ಆಗುಹೋಗುಗಳು ಮತ್ತು ಸಮಾಜದ ಬೆಳವಣಿಗೆಯ ವಿವರವು ಇಲ್ಲಿ ಮಾರ್ಕ್ಸ್‌ವಾದದ ಆಯಕಟ್ಟಿನಲ್ಲಿ ವಿವರಿಸಲಾಗಿದೆ. ಭಾರತೀಯ ಹೋರಾಟವನ್ನೂ ಅದರ ಮುಂದಾಳುಗಳನ್ನೂ, ಆರ್ಥಿಕ ಬೆಳವಣಿಗೆಯನ್ನೂ ಇಲ್ಲಿ ಮಾರ್ಕ್ಸ್‌ನ ಸಿದ್ಧಾಂತಗಳ ತಳಹದಿಯಲ್ಲಿ ನಿರೂಪಿಸಲಾಗಿದೆ. (India Today—R. P. Dutt) ಎರಡು ವರ್ಷಗಳ ಬಳಿಕ ಈ ಮೂದರಿಯ ಮತ್ತೊಂದು ಗ್ರಂಥವು ಪ್ರಕಟವಾಯಿತು. ಅದು ಶ್ರೀ ಯಸ್. ಎ. ಡಾಂಗೆಯವರ ಗ್ರಂಥವಾಗಿದೆ. ಇದರಲ್ಲಿ ಪ್ರಾಚೀನ ಕಮ್ಯೂನಿಸ್ಟ್ ಪದ್ಧತಿಯಿಂದ ತೊಡಗಿ ಭಾರತವು ಗುಲಾಮಗಿರಿಯನ್ನು ಪಡೆದ ವರೆಗಿನ ಇತಿಹಾಸದ ಮೂಲ ವಿಚಾರಗಳ ಸೂಕ್ಷ್ಮ ವಿಶ್ಲೇಷಣೆಯ ವಿವರವಿದೆ. ಶ್ರೀ ಡಾಂಗೆಯವರು ತನ್ನ ಈ ಅಧ್ಯಯನದಲ್ಲಿ ಭಾರತೀಯ ಇತಿಹಾಸಕಾರರು ಕ್ರಮಬದ್ಧವಾದ ಇತಿಹಾಸವನ್ನು ಬರೆಯುವ ಕಾರ್ಯದಲ್ಲಿ ಕೃತಾರ್ಥರಾಗಿಲ್ಲವೆಂದೂ ನಮ್ಮ ಅನೇಕ ಇತಿಹಾಸಗಳು ಹಲವು ಮುಖ್ಯ ಕೊರತೆಗಳನ್ನೊಳಗೊಂಡಿವೆಯೆಂದೂ ಬರೆದಿರುವರು. ಈ ದಿಸೆಯಲ್ಲಿ ದೇಶದ ಪ್ರಧಾನ ಇತಿಹಾಸಕಾರರಾದ ತಿಲಕ್, ರಾಜವಾಡೆ, ರಾನಡೆ, ಜಯಸ್ವಾಲ್ ಮತ್ತು ಭಂಡಾರ್‌ಕರ್ ಮುಂತಾದವರು ನಮ್ಮ ಇತಿಹಾಸವನ್ನು ಬೆಳಕಿಗೆ ತರುವ ಕಾರ್ಯದಲ್ಲಿ ಮಹತ್ವದ ಸೇವೆಯನ್ನು ಸಲ್ಲಿಸಿರುವರೆಂದೂ ಅವರು ಹೇಳಿರುವರು. ರಾಷ್ಟ್ರೀಯ ಹೋರಾಟದ ಕಾಲದಲ್ಲಿ ನಮ್ಮಲ್ಲಿ ಜಾಗೃತಿಯನ್ನುಂಟು ಮಾಡುವ ಕಾರ್ಯದಲ್ಲಿ ಅನೇಕ ಬರೆಹಗಳು ಬಹಳ ಉಪಯುಕ್ತವಾದ ಸಹಾಯವನ್ನು ಮಾಡಿವೆ. ಆದರೆ ಈ ವರ್ಗದ ಬರೆಹಗಳೆಲ್ಲವೂ ನ್ಯಾಯಪಿತ ಅಧಿಕಾರದವರ ಅಧಿಕಾರ ಆಸ್ತಿಪಾಸಿಗಳನ್ನು ಸ್ಥಿರಗೊಳಿಸುವ ಸಾಧನಗಳಾಗಿಯೇ ಉಳಿದಿವೆಯೆಂದೂ ಶ್ರೀ ಡಾಂಗೆಯವರು ಆರೋಪಿಸಿರುವರು.

ಈ ಕೃತಿಯಲ್ಲಿ ಶ್ರೀ ಡಾಂಗೆಯವರು ಸಂಸ್ಕೃತಿಯ ಇತಿಹಾಸ ಪೂರ್ವ ಘಟ್ಟಗಳ ಕುರಿತಾಗಿಯೂ, ಯಜ್ಞ, ಗಣಗೋತ್ರ, ಅಶ್ವಮೇಧ, ಗಣಸಂಘ ಮುಂತಾದ ಸಾಮಾಜಿಕ ವ್ಯವಸ್ಥೆಗಳ ವಿಶ್ಲೇಷಣೆಯನ್ನು ಮಾಡಿರುವರು. ಅವರ ಅಭಿಪ್ರಾಯದಲ್ಲಿ ಯಜ್ಞವು ಆರ್ಯರ ಸಂಘ ಜೀವನದ ಉತ್ಪಾದನಾ ವಿಧಾನವಾಗಿದೆ. ಮಹಾಭಾರತ ಯುದ್ಧವು ಗುಲಾಮರನ್ನಿಸಿಕೊಂಡವರೊಳಗೂ ಗಣ ಸಮಾಜದವರೊಳಗೂ ನಡೆದಿರುವ ಸಮರವಾಗಿರುತ್ತದೆ. India From Primitive Communism To Slavery—S. A. Dange)

ಶ್ರೀ ಡಾಂಗೆಯವರ ಈ ಕೃತಿಯು ಪ್ರಾಚೀನ ಭಾರತದ ಕೆಲವೊಂದು ಸಾಮಾಜಿಕ ವ್ಯವಸ್ಥೆಗಳ ಬಗ್ಗೆ ವಿವರವನ್ನೊಗಿಸುವುದಾ

(ಮುಂದುವರಿದಿದೆ ಪುಟ ನೋಡಿರಿ)

ಸಯೀದಾ ಸಲರುದ್ದೀನ್

ಕನ್ನಡಕ್ಕೆ ಅನುವಾದ:— ಶ್ರೀ ಶಿವಶಂಕರ

ಹೆಣ್ಣಿನ ಹೃದಯ

ಆಕೆ ಆನಂದನ ಹೆಂಡತಿಯಾಗಿ ಬಂದಳು. ಮನೆಯ ಮುಚ್ಚಿಗೆಯೆಲ್ಲಿನ ತೂತು ಅವರ ಆರು ತಿಂಗಳ ಸರಸ ದಾಂಪತ್ಯಕ್ಕೆ ಹುಳಿ ಹಿಂಡಿತು. ಆನಂದನ ಮೇಲೆ ಹರಿದ ಟ್ಯಾಕ್ಸಿ ಆ ತೂತು ಮುಚ್ಚುವಂತೆ ನೂಡಿತು, ಆದರೆ, ಮತ್ತೆ ನುಳಿಗಾಲ ಬಂದೊಡನೆಯೇ ಮನೆ ಸೋರತೊಡಗಿದಾಗ—? ಹೆಣ್ಣು ಬಿಡಿಸಲಾಗದ ಸಮಸ್ಯೆಯೆ?

ಲೆರಿದು ಆಕಾಶವಿಡೀ ಕಪ್ಪಾಗಿ ಬಿಟ್ಟಿತು. ಆನು ಮಳೆಗಾಲ ಕಣ್ಣುಕೋರೈಸುವ ಮಿಂಚು ಹೊಳೆಯಿತು. ಮಳೆಯ ಮುನ್ಸೂಚಕವಾಗಿ ಇಂದ್ರನು ಅದನ್ನು ಕಳುಹಿಸಿರಬಹುದು ಜೋರಾಗಿ ಮಳೆ ಸುರಿಯಲಾರಂಭವಾಯಿತು.

ಆನಂದನು ಚರ್ಚ್‌ಗೇಟ್ ರೈಲ್ವೇ ಸ್ಟೇಷನಿಗೆ ಧಾವಿಸಿದನು. ಮಳೆಯಿಂಗಿ ಅವನ ಕಾಲುಗಳನ್ನು ತಟ್ಟುತ್ತಿತ್ತು ಒಂದು ಕೈಯ್ಯಲ್ಲಿ ಅವನು ಕೊಡೆ ಹಿಡಿದುಕೊಂಡಿದ್ದನು. ಗಾಳಿಯು ಅವನ್ನು ಅಚೀಚೆ ಅಡಿಸುತ್ತಿತ್ತು ಇನ್ನೊಂದು ಕೈಯ್ಯಲ್ಲಿ ಅವನು ಉಬ್ಬಿನ ಸಂಕ್ಷೇಪ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು

'ರೈಲು ಬಂಡಿ ಓಡಾಟ ಇರಬೇಕು. ಇಲ್ಲದಿದ್ದಲ್ಲಿ ...? ಬಸ್ಸು ನಿಲ್ದಾಣಕ್ಕೆ ಧಾವಿಸಬೇಕು. ಅಲ್ಲಿ ಆ ಉದ್ವಿಗ್ನ ಸಾಲಿನಲ್ಲಿ ಕಾಯಬೇಕು. ಛೀ! ಇಂತಹ ಬಾಳುವೆ ಇದು....' ಮನಸ್ಸು ಉಯ್ಯಾಲೆಯಾಡುತ್ತಿತ್ತು

ಆರು ತಿಂಗಳು ಹಿಂದೆ ಇದೇ ಜೀವನ ಇದೇ ಆನಂದನಿಗೆ ಆನಂದದಾಯಕವಾಗಿತ್ತು ಅಂದು ಅವನು ಸ್ವೇಚ್ಛಾವಿಹಾರಿ ಪಕ್ಷಿಯಾಗಿದ್ದನು.

ಂ ಂ ಂ

ತಾನಾಗಿಯೇ ಅವನ ಸ್ವಾತಂತ್ರ್ಯವನ್ನು ಕಳೆದುಕೊಂಡನು ಉದ್ದೇಶಪೂರ್ವಕವಾಗಿ ಅವನು ಶರಪಂಜರದೊಳಗೆ ಹೋಗಲು ಬಯಸಿದನು. ಪಂಜರದೊಳಗೆ ಹಾಯಾಗಿರಬಹುದೆಂದು ಅವನು ಭಾವಿಸಿಕೊಂಡಿದ್ದನು ಅದು ಕೇವಲ ಭ್ರಮೆ-ಯಾಗಿಬಿಟ್ಟಿತು. ಅದೆಷ್ಟು ಶೀಘ್ರ ಆಕರ್ಷಣೆ ದೂರವಾಗಿಬಿಟ್ಟಿತು!

ರೈಲು ಓಡಾಟ ಇರುವದನ್ನು ಕಂಡು ಅವನೊಂದು ನಿಟ್ಟುಸಿರು ಬಿಟ್ಟನು ಬಂಡಿ ಬಂದೊಡನೆ ಇತರರಂತೆ ಅವನೂ ಬಂಡಿಯೊಳಗೆ ನುಗ್ಗಿದನು.

ಎಂತಹ ಹವೆ! ದಿನದ ದುಡಿತದ ನಂತರ ಇವರೆಲ್ಲರೂ ಮನೆಯತ್ತ ಧಾವಿಸಲು ಅವಸರಪಡುತ್ತಿದ್ದಾರೆ! ಅಲ್ಲಿ ಅವರಿಗಾಗಿ ಬಿಸಿ ಬಿಸಿ ಚಾ ಸಿದ್ಧವಾಗಿರಬಹುದು. ಆದರೊಂದಿಗೆ ಅವರ ಮಡದಿಯರ ಮನಮೆಚ್ಚಿಸುವ ಆಕರ್ಷಣೀಯ ಮುಗುಳ್ನಗೆ! ಅವರ ಸಹವಾಸ! ಇವೆಲ್ಲವೂ ಅವರಿಗಾಗಿ ಕಾದುಕೊಂಡಿರುತ್ತವೆ.

ಆದರೆ ಆನಂದನ ಪಾಲಿಗೆ?— ಚಾ ಸಿದ್ಧವಾಗಿರಬಹುದು. ಆದರೆ.... ಉಳಿದುವು? ಹಗಲು ಹಣದ ರಾಶಿಯ ಹಿಂದೆ ಬೇಂಕಿನಲ್ಲಿ ಕುಳಿತುಕೊಳ್ಳುತ್ತಿದ್ದ. ಮನೆಯಲ್ಲಿ ಹೆಂಡತಿಯ ದೂರಿನ ದಾಳಿ ಅವನಿಗೆ ಆಹ್ವಾನ ವೀಯುತ್ತಿತ್ತು....

ಬಂಡಿ ಹೊರಟಿತು.ಇನ್ನು ಮನೆಗೆ ಹೋಗಬೇಕು. ಮನೆಯತ್ತ ಹೋಗುತ್ತಿದ್ದೇನೆಂಬ ಜ್ಞಾಪಕ ಅವನಿಗಾದದ್ದು ಬಂಡಿ ನಿಲ್ದಾಣ ಬಿಟ್ಟೊಡನೆ.

ಮನವಿದ್ದಲ್ಲಿ ಮನೆಯೆಂದು ಕೆಲವರು ಹೇಳುವದುಂಟು. ತನ್ನ ಮನಸ್ಸು ಮನೆಗೆ ಸೇರಿದ್ದೆಂಬುದು ಆನಂದನಿಗೆ ಗೊತ್ತು ಆದರೆ ಅಲ್ಲಿರುವಾಕೆಯ ಮನಸ್ಸು?

ಂ ಂ ಂ

ಆವರಿಬ್ಬರ ಮನಗಳು ಕೆಲವು ತಿಂಗಳುಗಳ ಹಿಂದೆ ಒಂದಾಗಿ ಮೌನ ಮಧುರ ಗೀತೆಯನ್ನು ಹಾಡುತ್ತಿದ್ದುವು. ಇಂದು ಒಡಕಿನ ಸ್ವರ ಕೇಳಿಬರುತ್ತಿದೆ.

ಪ್ರಣಯ ಬಲವಾದ ಕೋಟೆಯನ್ನು ಕಟ್ಟುತ್ತದೆ. ಅದ್ಯಾವ ಘಿರಂಗಿಯ ದಾಳಿಯನ್ನೂ ಅದು ಎದುರಿಸುತ್ತದೆಂದು ಕವಿಗಳು ಹಾಡುವದುಂಟು. ಆದರೆ ವಾಸ್ತವ್ಯ ಜೀವನದಲ್ಲಿ? ಆದರಲ್ಲೂ ಬಡತನದ ಬೆಸಿ ತಾಗಿದರೆ ಸರಿ; ಮೇಣ ಗೊಂಬೆಯಂತೆ ಪ್ರಣಯವೂ ಕರಗಿ ಹೋಗುತ್ತದೆ. ಬಾಗಿಲಿನ ಮೂಲಕ ಬಡತನ ಒಳಗೆ ಬಂದಲ್ಲಿ ಕಿಟಕಿಯ ಮೂಲಕ ಪ್ರೇಮ ಪರಾರಿಯಾಗುತ್ತದೆಂದು ಅನುಭವಸ್ಥರು ಅನ್ನುವರು.

ಆನಂದನ ಪಾಲಿಗೆ ಪ್ರೇಮ ಭಾವೋತ್ಸಾಹವಾಗಿತ್ತು. ಜನವರಿಯಲ್ಲಿ ಆರಂಭವಾದ ಆ ಉತ್ಸಾಹ ಜೂನಿನಲ್ಲಿ ಕೊನೆಯು ಸಿರೆಳೆಯಲು ಆರಂಭಿಸಿತ್ತು. ಆರು ತಿಂಗಳ ಹಿಂದೆ ಮದುವೆಯಾದ ಸಂಭ್ರಮದಲ್ಲಿ, ತಾವಿಬ್ಬರೂ ಒಂದಾಗಿರುವವರೆಗೆ ರೊಚ್ಚಿಗೆದ್ದ ಅದೃಷ್ಟ ಬಗೆಯ ಬಹುದಾದಂತಹ ಬಾಣಗಳನ್ನೆದುರಿಸಲು ತಾನು ಸಿದ್ಧವೆಂದು ಅವನ ಬಳಿ ಹೇಳಿದ್ದಳು.

ಮೂತು ಮಹಿಳೆಯರ ಮಹಾ ಅಶ್ರವಿದೆ. ಅದರಲ್ಲೂ ಅವರು ಪ್ರೇಮವ ಮೊದಲ ಸಂಭ್ರಮಕ್ಕೊಳಗಾದಾಗ ಮುಗಿಯಿತು. ಮಳೆಗಾಲ, ಬೇಸಿಗೆ ...ಯಾವದೂ ಅವರ ಮೂತಿಗೆ ಮರೆಯೂಗದು; ವಾಕ್ ಪ್ರವಾಹ ಹರಿಯುತ್ತಾ ಇರುತ್ತದೆ.

(ನೂನತ್ತೊಂದನೇ ಪುಟ ನೋಡಿರಿ)

ಮೈಸೂರು ಉಪಕರಣಗಳ ಕಾರ್ಖಾನೆ

ಹಾಸನ

(ಮೈಸೂರು ಸರಕಾರದ ಉದ್ದಿಮೆ)

ಚೆನ್ನಾಗಿ ಕಾವು ಕೊಟ್ಟು ಟೆಂಪರುಗೊಳಿಸಿದ ಶ್ರೇಷ್ಠ ಕಾರ್ಬನ್ ಉಕ್ಕಿನಿಂದ
ತಯಾರಿಸಿದ ಶ್ರೇಷ್ಠ ದರ್ಜೆಯ ಉಪಕರಣಗಳು

ಸಾಮಾನುಗಳನ್ನು ತೆಗೆದುಕೊಳ್ಳುವ ಮೊದಲೇ ಒರೆಗೆ ಹಚ್ಚಬಹುದು
ಈ ಉಪಕರಣಗಳು ಅತ್ಯಂತ ಗಟ್ಟಿಯಾಗಿವೆ
ದೀರ್ಘಕಾಲ ಬಾಳಿಕೆ ಬರುತ್ತವೆ

ಒಂದು ಸುದ್ಯೆವ

ಕಾರಖಾನೆ ಅಥವಾ ಜೋನಲ್ ಏಜೆಂಟರೊಡನೆ ಪತ್ರವ್ಯವಹಾರ ಮಾಡಬಹುದು

ಪ್ರಜಾರಾಜ್ಯಗಳ ಕತೆ

ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

ಇತ್ತೀಚೆಗಿನ ಅತಿ ನೂತನ ಪ್ರಜಾರಾಜ್ಯಗಳಲ್ಲಿ ಮೊದಲನೆಯದು ಸೂಡಾನ್. ಎರಡನೆಯದು ಪಾಕಿಸ್ತಾನ. 1955 ದಶಂಬರದಲ್ಲಿ ಸೂಡಾನ್, 1956 ಮಾರ್ಚ್‌ನಲ್ಲಿ ಪಾಕಿಸ್ತಾನ ಗಣರಾಜ್ಯವಾಯಿತು ಈಗ ಬಂಗ್ಲಾದೇಶ ಇದಕ್ಕಾಗಿ ಅಲ್ಲಿ ಹೆಣಗಾಡುತ್ತಿದೆ.

ಇತಿಹಾಸದಲ್ಲಿ ಅತಿ ಪ್ರಾಚೀನವಾದ ಪ್ರಜಾರಾಜ್ಯವೆಂದರೆ ಇಸ್ರೇಲ್–ಅಂತಲೇ ಇತಿಹಾಸಜ್ಞರ ಅಭಿಮತ ಜೋಸೆಯ ಮತ್ತು ಮೋಸೆಸ್‌ರುನಿರ್ಮಿಸಿದ ಆ ಗಣರಾಜ್ಯದ ನೈಭವ ಆದರ್ಶಗಳೇ ಇಂದಿನ ಇಸ್ರೇಲ್ ಗಣರಾಜ್ಯನಿರ್ಮಾಣ ಮಾಡಲು ಯಹೂದ್ಯರಿಗೆ ಚೇತೋಹಾರಿಯಾಯಿತು. ವಿಶ್ವದ ಇನ್ನೊಂದು ಪುರಾತನ ಪ್ರಜಾರಾಜ್ಯವೇ ರೋಂ ಕ್ರಿ ಪೂ 509ರಲ್ಲಿ ಮೂದರಿ ಪ್ರಜಾರಾಜ್ಯವಾಗಿ ಅದು ಅಸ್ತಿತ್ವಕ್ಕೆ ಬರುವ ಮೊದಲೇ ಅಲ್ಲಿ ಪ್ರಜಾರಾಜ್ಯವಿದ್ದರೂ ಆದನ್ನು ಅನಿಬಂಧಿತ ಚುನಾವಣಾ ಪ್ರಭುತ್ವವೆನ್ನಲು ಬಾರದು ಶ್ರೀಮಂತರಿಗೆ ಮಾತ್ರವೇ ಮತಾಧಿಕಾರ ಅಲ್ಲಿದ್ದು, ಅವರ ಪ್ರತಿನಿಧಿಗಳೇ ಆಡಳಿತದಾರರಾಗಿದ್ದರು ಶ್ರೀ ಸಾಮಾನ್ಯರಿಗೆ ಆಡಳಿತದಲ್ಲಿ ಹಕ್ಕಿರದೆ ವರ್ಗಕಲಹವುಂಟಾಯಿತು.

ದೇಶದ ನಾಗರಿಕರಲ್ಲಿ ಬಹು ಸಂಖ್ಯಾಕರಿಗೆ ಮತಾಧಿಕಾರ ಬಂದರೇನೆ ಆ ರಾಷ್ಟ್ರ ನಿಜವಾಗಿ ಗಣರಾಜ್ಯ ಸಾಧಿಸಿದಂತಾಗುವುದು ಇಂಥ ಆದರ್ಶ ಗಣರಾಜ್ಯ ರಚನೆಗೆ ಪ್ರಥಮ ಪ್ರೋತ್ಸಾಹ ದೊರಕಿದುದು ಗ್ರೀಸಿನಲ್ಲಿ. ಕ್ರಿ ಪೂ. 8 ಹಾಗೂ 7ನೇ ಶತಮಾನಗಳಲ್ಲಿ ಅಲ್ಲಿ ಚಿಕ್ಕ ಚಿಕ್ಕ ನಗರಗಳಲ್ಲಿ ಚಿಕ್ಕ ಸರದಾರರು ಅಥವಾ ಅರಸರು ಅತ್ಯಾಚಾರ ಮತ್ತು ದಬ್ಬಾಳಿಕೆಯ ಸರ್ವಾಧಿಕಾರ ನಡೆಸಿದ್ದರು ಇದರಿಂದ ಪ್ರಜೆಗಳು ಬೇಸರ ಹೊಂದಿ ಗಣರಾಜ್ಯ ಸ್ಥಾಪಿಸಿದರು. ಈ ರಾಜ್ಯ ಅನೂಚಾನವಾಗಿ 550 ವರುಷ ಪ್ರಜಾಡಳಿತ ನಡೆಸಿದರೂ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಲು ಆದರಿಂದಾಗಲಿಲ್ಲ. ಆಡಳಿತಗಾರರೆಲ್ಲ ಭೋಗ ವಿಲಾಸಿಗಳಾದರು. ಆಂತರಿಕ ಕಲಹವೆದ್ದಿತು. ಆದರಿಂದ ಕ್ರಿ ಪೂ 146ರಲ್ಲಿ ಗ್ರೀಕ್ ಪ್ರಜಾರಾಜ್ಯಕ್ಕೆ ಧಕ್ಕೆ ಬಂದಿತು ರೋಮನ್ನರು ಆಕ್ರಮಣ ಮಾಡಿ ಗ್ರೀಕನ್ನು ವಶಪಡಿಸಿಕೊಂಡ ಮೇಲೆ ಬ್ಯಾಝಂಟ್ಯಾನರು ತುರ್ಕರು ಆ ರಾಜ್ಯವನ್ನು ಗೆದ್ದುಕೊಂಡು ನಿರಂಕುಶ ಪ್ರಭುತ್ವ ನಡೆಸಿದರು. ಹಿಂದೆ ಪ್ರಬಲ ಪ್ರಜಾರಾಜ್ಯವಾಗಿದ್ದ ಗ್ರೀಸ್‌ಗೆ ಮರಳಿ ತನ್ನತನವನ್ನು ಗಳಿಸಿ, ಗಣರಾಜ್ಯವಾಗಲು 1976 ವರುಷಗಳು ಬೇಕಾದುವು. ಕ್ರಿ ಶ 1830ರಲ್ಲಿ ಗ್ರೀಸ್ ಸ್ವತಂತ್ರ ರಾಷ್ಟ್ರವಾಯಿತು ಪ್ರಜಾರಾಜ್ಯದ ಹಿರಿಯ ರಾಜ್ಯವನ್ನು ಅರಸೊತ್ತಿಗೆಯೊಗಿ ಬದಲಿಸಿ, ಬವೇರಿಯದ ರಾಜ ಮೊದಲನೆಯ ಓಟೋನಿಗೆ ಗ್ರೀಸಿನ ಫಟನಾತ್ಮಕ ಅರಸನಾಗಿ ಪಟ್ಟಾಭಿಷೇಕವಾಯಿತು ಗ್ರೀಕ್ ಪ್ರಜಾರಾಜ್ಯ ಸ್ಥಾಪನೆಯ ಇನ್ನೂರು ವರುಷಗಳ ಬಳಿಕ ಕ್ರಿಸ್ತ ಪೂರ್ವ 500ರಲ್ಲಿ ಕಾರ್ಥೇಜಿಯನ್ ಗಣರಾಜ್ಯ ಹುಟ್ಟಿತು. ಪ್ರಜೆಗಳು ಚುನಾಯಿಸಿದ ಪ್ರತಿನಿಧಿಗಳೇ ಅದರ ಆಡಳಿತಗಾರರಾಗಿದ್ದರು ಕ್ರಿ ಪೂ 146 ಗ್ರೀಕರು ಇದರ ವಿರುದ್ಧ ಧಾಳಿ ಹೂಡಿದಾಗ ಗ್ರೀಕ್ ಸೇನಾ ಬಲದೆದುರು ಕಾರ್ಥೇಜಿಯನ್ನರ ಆಟ ಸಾಗದೆ ಸೋತು ಹೋದರು.

ಕ್ರಿಸ್ತಶಕ 80ರ ವೇಳೆಗೆ ಕೆಲವು ಸ್ಥಳಗಳಲ್ಲಿ ನಡೆದ ಗಣರಾಜ್ಯದ ಚುನಾವಣೆಗಳಲ್ಲಿ ಅಲ್ಲಲ್ಲಿ ಅಧ್ಯರ್ಯುಗಳೊಳಗೆ ಸಂಘರ್ಷ ನಡೆಯಿತು ಆದರಿಂದ ಗಣರಾಜ್ಯದ ಅಸ್ತಿತ್ವ ಹಾಳಾಗಿ ಅನೇಕ ಸರ್ವಾಧಿಕಾರಿಗಳು ಆಗಿ ಹೋದರು. ರೋಂನಲ್ಲಿ ಸಿಸೆರೋ, ಸೀಜರ್, ಪಾಂಪೆ ಮುಂತಾದವರು ಅಧಿಕಾರವನ್ನು ಕೈವಶ ಮಾಡಿಕೊಂಡು 50 ವರುಷಗಳ ಸರ್ವಾಧಿಕಾರ ನಡೆಸಿದ ಅನಂತರ ಒಕ್ಟೇವಿಯನ್ ಅಗಸ್ಟಸನು ರೋಮಿನ ಸರ್ವಾಧಿಕಾರಿ ಸಾಮ್ರಾಟನೆಂದು ಸಾರಿಕೊಂಡನು.

ಭಾರತ ಮತ್ತು ಇತರ ರಾಜ್ಯಗಳಲ್ಲಿ ಪ್ರತಿನಿಧಿಗಳ ಸಂಘರ್ಷ ಹಾಗೂ ಮತ ಭೇದದಿಂದ ಪ್ರಜಾರಾಜ್ಯದಲ್ಲಿ ದೌರ್ಬಲ್ಯವೊಂದಿಗೆ ಒಡಕುಂಟಾಯಿತು. ಅದರಿಂದ ವಿದೇಶದ ಸದೃಢ ಏಕಸತ್ತಾಧಿಕಾರ ಧಾಳಿ ಮುಂದಾಗ ಅದನ್ನು ಎದುರಿಸುವ ಸ್ಥೈರ್ಯ ಅವರಲ್ಲಿಲ್ಲದೆ ಆಂತರಿಕ ವಿಪ್ಲವವುಂಟಾಯಿತು. ಇದರಿಂದ ರಾಜ ಸತ್ತೆ ಬರಲೇ ಬೇಕು ತಾನೆ! ಬಹಾರದ ಗಣರಾಜ್ಯಗಳು ಗುಪ್ತ ಸಾಮ್ರಾಜ್ಯಕ್ಕೆ ಸೇರಲು ಕಾರಣವೂ ಇದೇ ಆಗಿತ್ತು.

ಮುಧ್ಯಯುಗದಲ್ಲೂ ಪೂರ್ವ ಮತ್ತು ಪಶ್ಚಿಮ ಯುರೋಪುಗಳಲ್ಲಿದ್ದ ಹಲವಾರು

(ಮೂವತ್ತನೇ ಪುಟ ನೋಡಿರಿ)

ಪ್ರಜಾರಾಜ್ಯವೆಂದರೇನು? ಅರಸರ ದಬ್ಬಾಳಿಕೆಯಿಂದ ಜಗುಪ್ಸಿತರಾಗಿ ಪ್ರಜೆಗಳೇ ನಡೆಸುವ ಆಡಳಿತವದು. 1951ನೇ ಇಸವಿ ಜನವರಿ 26ರಂದು ನಮ್ಮ ಭಾರತ ಪ್ರಜಾರಾಜ್ಯವಾಯಿತು. ನಮ್ಮದು ಪ್ರಜಾರಾಜ್ಯವಾದರೂ ಇಲ್ಲಿನ್ನೂ ಒಂದಿಲ್ಲೊಂದು ಸರಕಾರಿ ಪಿಡುಗುಗಳು ಇಲ್ಲವೆನ್ನಲಾಗದು ನಮಗಿಂತ 40 ವರ್ಷ ಮೊದಲು ಅರಸೊತ್ತಿಗೆಯ ಬೇರನ್ನು ಕಿತ್ತು ಪ್ರಜಾರಾಜ್ಯವಾದ ಚೀನವೂ ಪೂರ್ಣ ಪ್ರಜಾಸತ್ತಾತ್ಮಕವಾಗಿರದೆ ಅಲ್ಲಿ ಇನ್ನೂ ನಿರ್ಬಂಧಿತ ಚುನಾವಣೆಯೇ ಜಾರಿಯಲ್ಲಿದೆ. ವಾಕ್ ಸ್ವಾತಂತ್ರ್ಯ, ನೈತ್ಯ ಸ್ವಾತಂತ್ರ್ಯ ಚೀನದಲ್ಲಿಲ್ಲ

ಭಾರತದ ಅನಂತರದ ಅತಿ ಪ್ರಬಲ ಮತ್ತು ಅತಿದೊಡ್ಡ ಪ್ರಜಾರಾಜ್ಯಗಳೆಂದರೆ ಮೊದಲನೆಯದು ರಶಿಯ; ಬಳಿಕ ಅಮೇರಿಕಾ ಸಂಯುಕ್ತಸಂಸ್ಥಾನಗಳು. ರಶಿಯದಲ್ಲಿ ಪೀಡಿಸುತ್ತಿದ್ದ ಶತಮಾನಗಟ್ಟಲೆ ಹಿಂದಿನ ರಾಜಕೀಯದ ಪಿಡುಗನ್ನು ಜಗತ್ತನ್ನೇ ನಡುಗಿಸುವ ಕ್ರಾಂತಿಯೊಂದರ ಮೂಲಕ ಕಿತ್ತೊಗೆದು, ಪ್ರಜೆಗಳ ಸರ್ವಾಧಿಕಾರಿ ರಾಜ್ಯವನ್ನು ಸ್ಥಾಪಿಸಲಾಯಿತು. ಈ ಕ್ರಾಂತಿ ನಡೆದು ಸಮೀರು 55 ವರುಷಗಳಾದುವು. ಅಮೇರಿಕವೂ ಹಾಗೇ, ಬ್ರಿಟನ್ನಿನ ಅಡಿಯಾಳಾಗಿತ್ತು. ಎರಡು ಶತಮಾನಗಳ ಮೊದಲು ತಮಗೆ ಬರುವ ಟೀ ಸರಕಿನ ಮೇಲೆ ಬ್ರಿಟನ್ ಕರ ಹೇರಿತೆಂದು ಅಮೇರಿಕನ್ನರು ಕುಪಿತರಾಗಿ ಬೋಸ್ಟನಿನಲ್ಲಿ ಎರಡು ಹಡಗಿನ ತುಂಬ ಇದ್ದ ಟೀ ಪುಡಿಯನ್ನೆಲ್ಲ ಸಮುದ್ರಕ್ಕೆಸೆದು ಶಸ್ತ್ರ ಕ್ರಾಂತಿ ಆರಂಭಿಸಿ, ಬ್ರಿಟಿಷ್ ಪ್ರಭುತ್ವವನ್ನು ಕಿತ್ತೊಗೆದು ಬಿಟ್ಟರು.

ಭಾರತಕ್ಕೆ ಪ್ರಜಾರಾಜ್ಯ ಹೊಸತೇನಲ್ಲ. ಎರಡೂವರೆ ಸಾವಿರ ವರುಷಗಳ ಹಿಂದೆ ಧರ್ಮದಿಂದ, ನ್ಯಾಯದಿಂದ ಆಳುತ್ತಿದ್ದ ಕೋಸಲ, ಲಿಚ್ಛವಿ, ವಾರಣಸಿ–ಮೊದಲಾದ ಅನೇಕ ಗಣರಾಜ್ಯಗಳು ನಮ್ಮಲ್ಲಿದ್ದುವು. ಆ ರಾಜ್ಯಗಳಿಗೆ ವೇದ ಮಂತ್ರಗಳಲ್ಲಿ ವೈರಾಜ್ಯ ಸಾಮ್ರಾಜ್ಯ ಆರ್ಥಾತ್ ರಾಜನಿಲ್ಲದೆ ಪ್ರಜೆಗಳೇ ನಡೆಸುವ ರಾಜ್ಯಗಳೆಂದು ಹೆಸರಿತ್ತು. ಭಗವಾನ್ ಬುದ್ಧನ ಕಾಲದಲ್ಲೂ ಬಿಹಾರದಲ್ಲಿ ಹಲವು ಗಣರಾಜ್ಯಗಳಿದ್ದುವು. ಅಲೆಗ್ಜಾಂಡರನು ಭಾರತದ ಮೇಲೆ ಧಾಳಿ ಮಾಡಿದ ಕಾಲದಲ್ಲಿ ವಂಧ್ಯ, ಮೂಳವ, ಲಿಚ್ಛವಿ, ಶೂದ್ರಕ ಮುಂತಾದ ರಾಜ್ಯಗಳು ಗಣರಾಜ್ಯವಾದ ಉದಾಹರಣೆಗಳವೆ ಪ್ರಥಮ ವಿಶ್ವ ಯುದ್ಧದ ತರುವಾಯ ವಿಶ್ವದ ಎಲ್ಲೆಡೆಯೂ ರಾಜಸತ್ತೆಗಳು ನಾಮಾವಶೇಷವಾಗಿ, ಕ್ರಿಸ್ತ ಪೂರ್ವ 3000 ವರುಷ ಹಿಂದೆಯೇ ಜಾರಿಯಲ್ಲಿದ್ದಂತೆ ಪ್ರಜೆಗಳು ಅರಸನಿಲ್ಲದ ಅರಸೊತ್ತಿಗೆ ಸ್ಥಾಪಿಸಿ, ತಮಗೊಪ್ಪಿದ ಪ್ರತಿನಿಧಿಯನ್ನು ಚುನಾಯಿಸಿ, ತಮ್ಮನ್ನು ತಾವೇ ಆಳಿಕೊಳ್ಳುವುದಕ್ಕೆ ಆರಂಭಿಸಿದರು. ಹಲವೆಡೆ ಕ್ರಾಂತಿಯನ್ನೂ ಎಬ್ಬಿಸಿದರು.

ಪಪಥುಗೆ

ಪ್ರಜಾರಾಜ್ಯ ದಿನದ ಶುಭಾಶಯಗಳು!

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.



ಊಟ ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು, ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit

ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಪ್ರೊ| ಬಿ. ಎಚ್. ಶ್ರೀಧರ

ಸತ್ಯ - ಸುಳ್ಳುಗಳು

ಜನರು ಮಾನವ ಸಂಸ್ಕೃತಿಯ ಶಾಶ್ವತ ಅಹಿಂಸಾದಿ ಪಂಚ ಮಹಾ ಧರ್ಮೂದ್ದಿ ಗಳಿಗನುಗುಣವಾಗಿರುವ ತರ್ಕದಿಂದ ತಮ್ಮ ಸರ್ವಾಚಾರಗಳನ್ನು ರೂಪಿಸಿಕೊಳ್ಳಲು ಆರ್ಷರು ಪಂಚ ಮಹಾಧರ್ಮಗಳಿಗೆ ವಿರುದ್ಧವಾಗುವ ವೈದಿಕ—ಅವೈದಿಕ ಆಚಾರ ವಿಚಾರಗಳೆಲ್ಲವೂ ಅನೂನವೀಯ, ಅನ್ಯಾಯವೆಂಬ ಅಧುನಿಕ ಆರ್ಯ ಪ್ರಜ್ಞೆಯೊಂ ದೇ ಎಲ್ಲ ಭಾರತೀಯ ಸಮಾಜದ ಸಮಸ್ಯೆಗಳಿಗೂ ಪರಿಹಾರ ಸೂತ್ರಗಳನ್ನು ವಿಜ್ಞಾನ ತರ್ಕ ಬುದ್ಧಿಪೂರ್ವಕವಾಗಿ ಸಾರ್ವಜನಿಕವಾಗಿ ಒದಗಿಸಿಕೊಡಬಲ್ಲುದು

ಸತ್ಯವೊಂದು, ಸುಳ್ಳು ಅಸಂಖ್ಯಾತ ಸತ್ಯದಿಂದ ಸುಳ್ಳು ಹುಟ್ಟುತ್ತದೆ ಸತ್ಯಕ್ಕೂ ಸುಳ್ಳುಗಳಿಗೂ ಜನಕ-ಜನ್ಯ ಸಂಬಂಧ, ಸುಳ್ಳುಗಳಲ್ಲಿ ಪರಸ್ಪರವಾಗಿ ಇರುವುದು ಸಹೋದರ ಸಂಬಂಧ. ಸುಳ್ಳುಗಳನ್ನು ಸತ್ಯವೆಂದು ಕರೆದರೆ ಸತ್ಯವನ್ನು ಸುಳ್ಳೆಂದು ಕರೆಯಬೇಕಾಗುತ್ತದೆ

ಸತ್ಯ ಒಂದೇ ಒಂದಾದುದರಿಂದ ಅದಕ್ಕೆ ಜಾತಿಯಿಲ್ಲ ಆದನ್ನು ಸುಳ್ಳೆಂಬಾಗ ಸುಳ್ಳುಗಳು ಸತ್ಯಗಳಾಗಿ ಬಿಡಬೇಕಾಗುತ್ತದೆ ಆಗ ತಿಳುಗಳಲ್ಲಿ ಯಾವುದೂ ಎಲ್ಲ ಸಂದರ್ಭಗಳಲ್ಲೂ ಅವಲಂಬನೀಯವಾಗದೆ ಹೋಗುವುದರಿಂದ ಆಯಾ ಕಾಲಗಳಲ್ಲಿ ಇಷ್ಟನ್ನು ಸತ್ಯಗಳೆಂದೂ ಇಷ್ಟನ್ನು ಸುಳ್ಳುಗಳೆಂದೂ ವಿಭಾಗ ಮಾಡಲಾಗುತ್ತದೆ

ನಿದ್ರೆಯಲ್ಲಿ ಜಾಗ್ರತ್-ಸ್ವಪ್ನ ಪ್ರಪಂಚಗಳೂ ಜಾಗ್ರತಿನಲ್ಲಿ ನಿದ್ರೆ-ಸ್ವಪ್ನಗಳೂ, ಸ್ವಪ್ನದಲ್ಲಿ ನಿದ್ರೆ-ಜಾಗ್ರತ್ತುಗಳೂ ಸುಳ್ಳು ಜೀವದಿಂದ ಇರುವವರೆಗೆ ಸಾವು ಸುಳ್ಳು, ಸತ್ತ ಮೇಲೆ ಜೀವದಿಂದ ಇದ್ದದ್ದು ಮತ್ತು ಮುಂದೆ ಇರುವುದು ಸುಳ್ಳು ಜಾಗ್ರತ್, ಸ್ವಪ್ನ, ಸುಷುಪ್ತಿಗಳಂತೆಯೇ ಜೀವನದ ಭೂತ, ವರ್ತಮಾನ, ಭವಿಷ್ಯತ್ತುಗಳೂ ಒಂದಿದ್ದಾಗ ಉಳಿದೆರಡಿಲ್ಲ

ವ್ಯಕ್ತಿಯ ಮನಸ್ಸಿನ ಒಳಗೆ ಇಂದ್ರಿಯ ನಿರಪೇಕ್ಷವಾಗಿ ಉಂಟಾಗುವ ಅನುಭವವು ಸತ್ಯವಾದರೆ, ಇಂದ್ರಿಯ ಸಾಪೇಕ್ಷವಾಗಿ ಉಂಟಾಗುವ ಅನುಭವವು ಸುಳ್ಳು, ಜಾಗೇ ತಿದು ಸುಳ್ಳಾದರೆ ಇದು ಸತ್ಯ ವ್ಯಕ್ತಿ ಇರುವುದು ಸತ್ಯವಾದರೆ ವಸ್ತುವಿರುವುದು ಸುಳ್ಳು, ವಸ್ತು (Object) ವಿರುವುದು ಸತ್ಯವಾದರೆ ವ್ಯಕ್ತಿ (Subject) ಇರುವುದು ಸುಳ್ಳು ವಸ್ತುವಿಗೆ ಜಡತೆಯ ದೆಸೆಯಿಂದ ವ್ಯಕ್ತಿಯ ಅರಿವಿರದು.

ಜಗತ್ತಿನ ಸತ್ಯತೆಗೆ ದೇಶ-ಕಾಲಗಳ ಅವಧಿಗಳು ಅವಲಂಬನ ದೇಶ-ಕಾಲಗಳು ಮನಸ್ಸಿನ ಒಳಗೂ ಇವೆ, ಹೊರಗೂ ಇವೆ. ಜಗತ್ತಿನ ಸತ್ಯಗಳಿಗೂ ಅವೇ ಆಧಾರ, ಸುಳ್ಳುಗಳಿಗೂ ಅವೇ ಆಧಾರ ಮೊಲದ ಕೊಂಬು ಮತ್ತು ಎತ್ತಿನ ಕೊಂಬುಗಳ ಸುಳ್ಳುತನ-ಸತ್ಯತನಗಳೆರಡಕ್ಕೂ ಅವೇ ಆಧಾರ. ಹಾಗಾದರೆ ಅವುಗಳನ್ನು ವಿಂಗಡಿಸಿ ತಿಳಿದುಕೊಳ್ಳುವ ವ್ಯವಹಾರ ಹೇಗೆ ನಡೆಯುತ್ತದೆ? ಪದಾರ್ಥಗಳೊಡನೆ ದೇಶ (Space) ಕಾಲ (Time) ಗಳ ಅವಿನಾಭಾವಿತ್ವ (Invariable Concomitance) ಚಿರಕಾಲ ಸ್ವಾಭಾವಿಕವಾಗಿ ಇರುವುದನ್ನು ಸತ್ಯವೆಂದೂ ಹಾಗಿರದುದನ್ನು ಅಸತ್ಯವೆಂದೂ ಮನಸ್ಸಿನ ಹೊರಗಿನ ಎಲ್ಲ ಆವರಣದಲ್ಲಿಯೂ ತಿಳಿಯಲಾಗುತ್ತದೆ ಯಾವ ಮನಸ್ಸೂ ಯಾವಾಗಲೂ ತಿಳಿಯಲಾರದ್ದು ಸತ್ಯವಾಗಿದ್ದರೂ ಅದರ ಸತ್ಯತೆ ಎಂದೂ ನಿಃಸಂದಿಗ್ಧವಲ್ಲ, ಅದಕ್ಕೂ ಸುಳ್ಳಿಗೂ ವ್ಯತ್ಯಾಸವಿಲ್ಲ.

ಪರಮ ಸತ್ಯವನ್ನು ಅರಿಯಬಲ್ಲ (ಇಂದರಿ ಜದರಲ್ಲಿ ಸಂಪೂರ್ಣ ಲಯ ಹೊಂದ ಬಲ್ಲ — Knowledge by identification or dissolution in the Knowledge) ಮನಃಶಕ್ತಿಯು ಆತ್ಮ; ಆ ಶಕ್ತಿ ಬ್ರಹ್ಮನಲ್ಲಿ ಲಯ ಹೊಂದುವುದು ಮುಕ್ತಿ ಅಥವಾ ಸಾಕ್ಷಾತ್ಕಾರ. ಒಂದೇ ಒಂದಾದ ನಿತ್ಯ ಸತ್ಯದ ಹೆಸರು ಬ್ರಹ್ಮ ಲಯಹೊಂದುವುದು ವ್ಯಕ್ತಿಯ ಮನದ ಅಹಂಕಾರ (Ego) ಅಹಂಕಾರ ಲಯಹೊಂದಿದಾಗ ಮನದ ಆತ್ಮ ಶಕ್ತಿ ಪ್ರಕಟವಾಗುವುದು, ಅಲ್ಲಿಯ ವರೆಗೆ ಅದು ಪ್ರಕಟನಾಗದು

ಬುದ್ಧಿಪೂರ್ವಕವಾಗಿ ಅಹಂಕಾರವನ್ನು ಬಿಡುವುದು ಮುಕ್ತಿ, ಬಲತ್ಕಾರದಿಂದ ಬಿಡುವಂತಾಗುವುದು "ಲಯ" ಅಥವಾ "ನಾಶ" (ಅಸುಖ) ಅಹಂಕಾರ ಯುಕ್ತವಾದ ಭೋಗ (Enjoyment) ವೆಲ್ಲವೂ ಪುನಃ ಪುನಃ ಭೋಗೇಚ್ಛೆಗಳನ್ನು ಪ್ರೇರಿಸುವಂಥದು. ನಿರಹಂಕಾರ ಸುದ್ದಿಯೇ ಮುಕ್ತಿ ಅಥವಾ ವ್ಯಕ್ತಿತ್ವದ ಪೂರ್ಣತೆ ಅಹಂಕಾರವು Particularisation Individuation ವ್ಯಕ್ತಿ ನಿರ್ಮೂಪಕ ವ್ಯಕ್ತಿಯೊಂದು ಜಡ ಜೈತ್ಯ ಮಿಶ್ರವಾದ ಅಣುಪಿಂಡ. ಬಲಾತ್ಕಾರತ್ಯಕ್ತವಾದ ಅಹಂಕಾರವು ಪುನರಾಗಮಿಸುತ್ತದೆ ಬಲತ್ಕಾರ ಹೋದಕೂಡಲೇ ಮೊದಲಿನಂತೆಯೇ ತಲೆಯೆತ್ತುತ್ತದೆ. ಅಹಂಕಾರ ಚಿಗುರುವುದು ಜಡದೇಹದಲ್ಲಿ, ಆದುದರಿಂದಲೇ ಅದು ಮತ್ತೆ ಮತ್ತೆ ವ್ಯಕ್ತಿಯಾಗಿ ಜನ್ಮ ತಾಳಲು ಕಾರಣವಾಗುತ್ತದೆ.

ವ್ಯಕ್ತಿ ಜನ್ಮ ಏಕೆ ತ್ಯಾಜ್ಯ? ಜಗಚ್ಚಕ್ತಿಯ ಅದುರು ಇದು ನುಸಿ, ನೊರಜು ಪೂಳುಕಣ ಎನ್ನಿಸಿರುವುದರಿಂದ ವ್ಯಕ್ತಿಯು ಜಗಚ್ಚಕ್ತಿ (ಈಶ್ವರ, ಪ್ರಕೃತಿ ಅಥವಾ ಮಾಯೆ)ಯನ್ನು ಅಳವಡಿಸಿಕೊಳ್ಳುವುದು ಹೇಗೆ? ತನ್ನನ್ನು ಅದರಷ್ಟು ಆಗಲು ಹಿಗ್ಗಿಸಿಕೊಳ್ಳುವುದರಿಂದ ಆತ್ಮಹತ್ಯೆಯು ವ್ಯಕ್ತಿ ಜನ್ಯತ್ಯಾಗವಲ್ಲ; ಅಹಂಕಾರ ತ್ಯಾಗವಲ್ಲ ಆದರಿಂದಲೇ ಜೀವನ್ಮುಕ್ತಿ ಸಿದ್ಧವೆಂದಾಯ್ತು ಅತನೇ ವ್ಯಕ್ತಿತ್ವದ ವಿಸ್ತಾರವನ್ನು ಅಳವಡಿಸಿ ಕೊಂಡವನು (Universaly broad-minded), ಜಗತ್ ಕುಟುಂಬಿ, ಈಶ್ವರೇಚ್ಛೆಯಲ್ಲಿ ಸಾತ್ಮ್ಯಹೊಂದಿದವನು ಅವನೇ ಹಿಂದುಸ್ತಾನದ ದೇವ ಮಾನವ, ಋಷಿ, ಆದರ್ಶ ವಕ್ತಾರ, ನಾಗರಿಕತೆ—ಸಂಸ್ಕೃತಿಗಳ ನೇತಾರ—ಎಂಬುದು ಸಾವಿಲ್ಲದ ಭಾರತೀಯ ನಾಗರಿಕತೆಯ ರಹಸ್ಯ, ಜೀವಾಳ. ದೇಹ ನಿಮ್ನ ಅಹಂಕಾರವಿಲ್ಲದಲ್ಲಿ ಲೌಕಿಕ ವ್ಯಕ್ತಿತ್ವವಿಲ್ಲ, ಬ್ರಾಹ್ಮೀ ವ್ಯಕ್ತಿತ್ವವಿರುತ್ತದೆ ಆದರಲ್ಲಿ ವ್ಯಕ್ತಿ ಭಾವ ಮತ್ತು ವಸ್ತು ಭಾವಗಳ ಭಾವಿಕ ಪ್ರತ್ಯೇಕತೆಯಿಲ್ಲ ಗಾಂಧಿಯವರು ಬದ ಕೆದ್ದು ಇಂತಹ ಭಾವಾದ್ವೈತದಲ್ಲಿ. ಅದರಿಂದಲೇ ಅವರು ರಾಷ್ಟ್ರಪಿತ. ರಾಷ್ಟ್ರಪಿತನ ಭಾರತದರ್ಶನವನ್ನು ರಾಷ್ಟ್ರಪುತ್ರ ನೆಹರುಗಳ ದರ್ಶನ ಮೀರಿಸದು, ಖಂಡಿಸಲಾರದು. ಈ ಅಂಶವನ್ನು ರಾಷ್ಟ್ರೀಯ ಕಾಂಗ್ರೆಸ್ಸು ಈಗ ಮನವರಿಕೆ ಮಾಡಿಕೊಂಡಿಲ್ಲ

ಕಾರ್ಲ್ ಜಿ ಯುಂಗ್ ಹೇಳುವಂತೆ ಮನಸ್ಸಿಗೆ Sensation ಸಂವೇದನೆ, feeling ಭಾವನೆಸುವುದು, thinking ಆಲೋಚಿಸುವುದು, ಮತ್ತು intuition ಪ್ರತಿಭಾನಿಸುವುದು ಎಂಬ ನಾಲ್ಕು ಶಕ್ತಿಗಳವೆ ನಾಲ್ಕನೆಯದು ಪ್ರಯೋಜ್ಯಕ್ಕೆ ಬರುವಷ್ಟು ಪ್ರಧಾನವಾಗಿರುವ ಮನುಷ್ಯರು ವಿರಳ. ಆದರಿಂದಲೇ ಅವರ ದರ್ಶನ ಅವೈಜ್ಞಾನಿಕವೆಂದೂ ಆ ಕಾರಣದಿಂದ ತ್ಯಾಜ್ಯವೆಂದು ಕೇವಲ 'Thinkers ಆಲೋಚನಾ ಪಂಡಿತರೆನ್ನಿಸಿಕೆ ಕೆಲವರು ಆಗ್ರಹಿಸುತ್ತಾರೆ ಅಂಥವರ ಸಂಖ್ಯೆ ಹೆಚ್ಚಾದರೂ ಅವರಲ್ಲಿ ಬಹಳ ಸ್ವಲ್ಪ ಜನರು ದರ್ಶನಗಳನ್ನು ಮೂಸಿಸದವರಾಗಿದ್ದಾರೆ.

ದರ್ಶನಗಳಲ್ಲಿ ನಿಜ, ಆಭ್ಯಾಸಿಕ ಎಂಬ ಭೇದಗಳಿರುವಂತೆ ವೈಜ್ಞಾನಿಕತೆಯಲ್ಲೂ ನಿಜ, ಆಭ್ಯಾಸಿಕ ಎಂಬ ಭೇದಗಳಿವೆ ಇವುಗಳ ಪರೀಕ್ಷೆಯೊಗುವುದು "ಸ್ವಯಂಪ್ರಜ್ಞೆ"ರಿಂದ ಮಾತ್ರ ಸಾಧ್ಯ ಸ್ವಯಂ ಪ್ರಜ್ಞೆ ಬಲ್ಲದವರಿಗೆ ನಿಜವು ಆಭಾಸಿಕವಾಗಿಯೂ ಆಭಾಸಿಕವಾದುದು ನಿಜವೆಂದು ಕಾಣುವುದು ಸ್ವಯಂಪ್ರಜ್ಞರು ಒಂದು ವಿಧದ Idealistic Existentialists ಅನುಭಾವ ಸ್ಪರ್ಶ ಸಂಪನ್ನರು, ಅನುಭವಿಸುತ್ತಿರುವಾಗಲೇ ಸಾಕ್ಷೀಭೂತರಾಗಿ ವಿಮರ್ತಿಸುವ ಶಕ್ತಿ ಅನರಿಗಿರುತ್ತದೆ ಅವರ ಸಂಖ್ಯೆಯೂ ಕೆಲವುಟ್ಟಿಗೆ ವಿರಳವೇ ಆದರೆ ಅವರನ್ನು ಬಿಟ್ಟರೆ ಉಳಿದೆಲ್ಲರೂ ಅಂಧಾನುಯಾಯಿಗಳು ಅಥವಾ ಅಂಧ ವಿರೋಧಿಗಳು. ಈ ಉಳಿದವರು ಸದಾ ಪರಸ್ಪರ ನೀ ಜೋಜ್ಞೆತೆಗಳ ಆರೋಪದಲ್ಲಿರುತ್ತಾರೆ ಇವರೇ "ಆಸ್ತಿಕರು" ಮತ್ತು "ನಾಸ್ತಿಕರು". ನಿಜ ನಾಸ್ತಿಕ—ನಿಜ ಆಸ್ತಿಕರು ಸಾರತಃ ಏಕಾತ್ಮ್ಯ ಉಳ್ಳವರು. ತೋರಿಕೆಗೆ ಮಾತ್ರ ವಿರೋಧಿಗಳು; ಆಭಾಸಿಕರು ಹಾಗಿದ್ದರೂ ಒಂದೇ ಹೀಗಿದ್ದರೂ ಒಂದೇ!

ಮೇಲಿನ ವಿಶ್ಲೇಷಣದಿಂದ ನಿತ್ಯ ಸತ್ಯ, ತಾತ್ಕಾಲಿಕ ಸತ್ಯ ಮತ್ತು ಅಸತ್ಯ ಎಂಬ

(ಇಪ್ಪತ್ತೊಂಭತ್ತನೇ ಪುಟ ನೋಡಿರಿ)

ನಮ್ಮ ಅಸಂಖ್ಯಾತ ಗ್ರಾಹಕರಿಗೂ
ಹಿತೈಷಿಗಳಿಗೂ
ಪ್ರಜಾರಾಜ್ಯ ದಿನದ ಶುಭಾಶಯಗಳು!

ಕಾರವಾರದ ನಿಸರ್ಗ ಸೌಂದರ್ಯ ಸವಿಯಲಾಗಮಿಸುವ
ಪ್ರವಾಸೀ ಅತಿಥಿಗಳ
ಹಾರ್ದಿಕ ಸತ್ಕಾರಕ್ಕೆ ನಾವು ಸಿದ್ಧರು

ಉಡುಪಿ ಶ್ರೀಕೃಷ್ಣ ವಿಲಾಸ
ಮೈನ್ ರೋಡು, ಕಾರವಾರ

'ಐಸ್‌ಕ್ರೀಮ್' ಮುಂತಾದ ತಂಪು ಪಾನೀಯಗಳು ನಮ್ಮ ವೈಶಿಷ್ಟ್ಯ
ಗ್ರಾಹಕರ ತೃಪ್ತಿಯೇ ನಮ್ಮ ಧ್ಯೇಯ

ವ್ಯವಸ್ಥಾಪಕ: ಕೆ. ಸಂಜೀವ ರಾವ್

Please visit & enjoy
UDIPI SHRI KRISHNA VILAS
Main Road, KARWAR, N. K.

ಭಾವಚೌರ್ಯ

ಶ್ರೀ ಮಾಡರಬಿಟ್ಟು ರಂಗರಾವ್

ಚೌರ್ಯ ಬಹುರೂಪಿಣಿ. ಸಾಹಿತ್ಯ ಕ್ಷೇತ್ರದಲ್ಲೂ ಇದರ ವಿಶ್ವರೂಪ ದರ್ಶನವಾಗದುಳಿಯುವುದೆಂತು? ಈ ರೂಪಗಳಲ್ಲಿ ಭಾವಚೌರ್ಯವೂ ಒಂದು. ಹಾಗೆ ನೋಡುವುದಾದರೆ, ನಾವು ನಿಲ್ಲುವುದು, ನಡೆಯುವುದು, ಓಡುವುದು, ತಿನ್ನುವುದು, ಮಲಗುವುದು ಎಲ್ಲವೂ ಚೌರ್ಯವೇ ತಾನೆ? ಸಾಹಿತ್ಯದಲ್ಲಿ ಭಾವವು ಚೌರ್ಯವಾದರೂ ಅದು ಸಂಭಾವಿತ ಚೌರ್ಯ.

ಸ್ಥೂಲದೃಷ್ಟಿಗೆ ಕಾಣಿಸುವಂತಹ ಕಳ್ಳತನಗಳು ಅನೇಕ ಬಗೆಯೂಗಿವೆ ಅವುಗಳಿಗೆಲ್ಲ ತಕ್ಕ ದಂಡನೆಗಳೂ ಇವೆ.

ಸೂಕ್ಷ್ಮ ದೃಷ್ಟಿಗೆ ಅಥವಾ ಅದಕ್ಕಿಂತಲೂ ಸೂಕ್ಷ್ಮವಾದ ಆಲೋಚನೆಯ ದೃಷ್ಟಿಗೆ ಮಾತ್ರ ಗೋಚರವಾಗುವ ಕಳ್ಳತನ ಒಂದಿದೆ. ಅದು ಭಾವ ಚೌರ್ಯ.

"ಭಾವಚೌರ್ಯವೂ ಒಂದು ಕಳ್ಳತನವೇ. ಮನುಷ್ಯನು ಯಾವಾಗಲೂ ಭಾವ ಚೋರನಾಗಿರುತ್ತಾನೆ" ಎಂದು ಮಹಾತ್ಮರೊಬ್ಬರು ಹೇಳಿದ್ದಾರೆ. ಅವರು ಹೇಳಿದ ರೀತಿ, ವಾಕ್ಯ ಬೇರೆಯೂದರೂ ಅವರು ಹೇಳಿದುದರ ಅರ್ಥ ಇದೇ ಎಂಬುದು ನೆನಪಿದೆ.

ಸಾಹಿತಿಗಳು ಎಂದೋ ಯಾರಿಂದಲೋ ಯಾವ ಸಂದರ್ಭದಿಂದಲೋ ಏನೋ ಒಂದು ಭಾವವನ್ನು ಗ್ರಹಿಸಿಕೊಳ್ಳುತ್ತಾರೆ. ಅದನ್ನು ಅರಳಿಸಿ ಕತೆಯೋ ನಾಟಕವೋ ಕಾದಂಬರಿಯೋ ಮತ್ತೇನೋ ಬರೆದು ತನ್ನ ಹೆಸರಿನಿಂದ ಪ್ರಕಟಿಸುತ್ತಾರೆ.

ಆಗ ಅದು ಭಾವಚೋರದ ಸಾಹಿತ್ಯವೇ ಆಯಿತೆಂಬುದನ್ನು ನೆನೆಯುವಾಗ ಶರೀರವು ಜುಂ ಎನ್ನುತ್ತದೆ.

ನಿಜತಾನೆ? ಪ್ರತಿಯೊಬ್ಬ ಮನುಷ್ಯನೂ (ಳೂ) ಇನ್ನೊಬ್ಬನನ್ನು ಅಥವಾ ಇನ್ನೊಂದನ್ನು ನೋಡಿ, ಅನುಸರಿಸಿ, ಅಥವಾ ಬೇರೆ ವಿಧವಾಗಿ ಮೂರ್ಪಡಿಸಿ, ಅದಕ್ಕಿಂತ ಹೆಚ್ಚಿನಿನುವಂತೆಯೋ, ಕಡಮೆಯಿನಿಸುವಂತೆಯೋ ಮಾಡುತ್ತ ಜೀವನನಡೆಸುತ್ತಿದ್ದಾನೆ (ಳೆ). ಮಗುವಿನಿಂದ ಹಿಡಿದು ಮುದುಕರ ವರೆಗೂ ಇದೇ ಕತೆ.

ಮನುಷ್ಯರೆಲ್ಲ ಅನುಕರಣ ಜೀವಿಗಳೇ. ಹಾಗೆ ನೋಡಿದರೆ ಪ್ರಾಣಿಗಳೂ ಸಹ ಅನುಕರಣ ಜೀವಿಗಳೇ. ಆದರೆ ಅವುಗಳ ಅನುಕರಣೆಗೂ ಮನುಷ್ಯರ ಅನುಕರಣೆಗೂ ವ್ಯತ್ಯಾಸವಿದೆ. ನಾಯಿ, ಬೆಕ್ಕು, ಹಕ್ಕಿ,ಹರಣೆ ಮೊದಲಾದ ಜಾತಿಗಳೆಲ್ಲ, ಒಂದೇ ಬಗೆಯ ಅನುಕರಣೆಯಿಂದ, ಒಂದರ ಹಾಗೇ ಇನ್ನೊಂದೂ ಜೀವಿಸಿಕೊಂಡಿರುತ್ತವೆ ಹೊರತು ವೈವಿಧ್ಯತೆಗಳಿರುವುದಿಲ್ಲ. ಅವೆಲ್ಲ ಒಂದೇ ವಿಧವಾಗಿ ಬದುಕಿ ಸಾಯುವಂತಹವು. ಆದುದರಿಂದ ಅವುಗಳಲ್ಲಿ ಚೌರ್ಯವೇನೂ ಇಲ್ಲ.

ಮನುಷ್ಯರು ಹಾಗಿಲ್ಲವಷ್ಟೆ? ಮನುಷ್ಯ ಓದುತ್ತಾನೆ, ಬರೆಯುತ್ತಾನೆ, ಮಾತಾಡುತ್ತಾನೆ. ಪುರಾಣ, ಚರಿತ್ರೆ, ಲೆಕ್ಕ, ಪಕ್ಕ, ಅದು, ಇದು, ಏನೇನೋ ಕಲಿಯುತ್ತಾನೆ. ವ್ಯತ್ಯಾಸ ಪಡಿಸಿ ಬೇರೆ ಬೇರೆ ಕಾರ್ಯರೂಪಗಳಿಗೆ ಇಳಿಸುತ್ತಾನೆ. ಅವನನ್ನು ನೋಡಿ ಇನ್ನೊಬ್ಬ ಮತ್ತೊಂದು ಬಗೆಯ ಕೆಲಸ ಮಾಡುತ್ತಾನೆ. ಅದೆಲ್ಲ ತನ್ನದೇ, ತನ್ನ ಕೆಲಸವೇ, ತಾನು ಮಾಡಿದ್ದೇ ಎನ್ನುತ್ತಾನೆ.ಅಲ್ಲವೆನ್ನಲು ಯಾವ ರುಜುವಾತೂ ಇರುವುದಿಲ್ಲ.

ಅಸಲು ಅವನಲ್ಲೇ ರುಜುವಾತು ಕಾಣಲಾರದು. ಏಕೆಂದರೆ ಅವನು ಗ್ರಹಿಸಿಕೊಂಡದ್ದೆಲ್ಲವೂ ಮೆದುಳಿನಲ್ಲಿ ಜೀರ್ಣವಾಗಿ ಹೋಗಿರುತ್ತದೆ. ತಿಂದ ಆಹಾರವೆಲ್ಲ ಜೀರ್ಣವಾಗಿ ರಕ್ತವಾಗುವಂತೆ. ಅವುಗಳಲ್ಲಿ ಅನ್ನ ತುಪ್ಪ ಮಜ್ಜಿಗೆಗಳಂತೆ, ರಾಮಾಯಣ, ಭಾರತ, ಭಾಗವತ ಭಗವದ್ಗೀತಗಳಂತಹ ಪ್ರಸಿದ್ಧವಾದುವು ಕೆಲವು ಪೂರ್ಣ ನೆನಪಿರುತ್ತವೆಯೇ ಹೊರತು, ಮತ್ತೆ ಕೆಲವು ಅರ್ಧಂಬರ್ಧ ನೆನಪಿರುತ್ತವೆ. ಇನ್ನೂ ಕೆಲವು ಮಸಕು ಮಸಕಾಗಿ ಯಾವುದರಲ್ಲೋ ನೋಡಿದ್ದು, ಎಲ್ಲೋ ತಿಳಿದದ್ದು ಎಂಬುದಷ್ಟೇ ನೆನಪಿದ್ದು, ಭಾವಾರ್ಥ ಮಾತ್ರ ಸ್ಪಷ್ಟವಾಗಿ ನೆನಪುಳಿಯುವಂಥಾದ್ದು.

ದಿನನಿತ್ಯ ಎಷ್ಟೋ ಪತ್ರಿಕೆಗಳನ್ನು ಪುಸ್ತಕಗಳನ್ನ ಓದುತ್ತ, ಭಾಷಣ ಕೇಳುತ್ತ, ಸಿನಿಮಾ ನಾಟಕ ನೋಡುತ್ತ, ನಮಗೆ ಗೊತ್ತಾಗದಂತೆಯೇ ಭಾವ ಚೌರ್ಯಮಾಡುತ್ತಿರುತ್ತೇವೆ. ಅವುಗಳಲ್ಲಿಯ ಕೆಲವೊಂದು ಮನದಲ್ಲಿ ಬೇರೂರಿ ಬಿಡುತ್ತವೆ. ಕೆಲ

(ಇಪ್ಪತ್ತೆಂಟನೇ ಪುಟ ನೋಡಿರಿ)

ARYA VAIDYA SALA

Phone: Office 31
Nursing Home 44
Chief Physician 25
Mg. Trustee Office: 61
Res. 27

During seven decades of progress, the institution modernised mechanised and expanded its equipment for mass production; yet always maintained its tradition for unequalled quality

Branches at Madras (Phone 811275), Kozhicode (2155), Palghat (104), Alwaye, Erode (172), Tirur (31), Ernakulam (33026) and Trivandrum (3924) and over 100 authorised agencies and depots.

Genuine Standard Ayurvedic Medicines and Expert Medical Advice available at the Head Office at Kottakkal and all Branches. Medical advice through-correspondence given by the Chief Physician at Kottakkal. Special Treatments like Pizhichil, Navarakkizhi, etc. conducted under the supervision of the Chief Physician at the Golden Jubilee Nursing Home, Kottakkal Please reserve your rooms before starting.

Vaidyaratnam P. S. Varier's

Arya Vaidya Sala

KOTTAKKAL (Kerala State)

Estd: 1902

ಪ್ರೇಮ,
ವಿವಾಹ,
ದಾಂಪತ್ಯಜೀವನ

ಜಪಾನಿನ ವೈಶಿಷ್ಟ್ಯಗಳು

ಪೂರ್ವದ ಪ್ರಗತಿಸಂಪನ್ನ ದೇಶ ಜಪಾನಿನ ಪ್ರೇಮ, ವಿವಾಹ, ದಾಂಪತ್ಯಜೀವನ ವಿಧಾನಗಳು ತೀರ ವಿಚಿತ್ರವೆನಿಸಿವೆ ಜಪಾನೀಯರ ನಡವಳಿಕೆ ವಿಸ್ಮಯಕಾರಿಯೆನಿಸುತ್ತದೆ

ಶ್ರೀ ಎಚ್ ಎಂ ನಾರಾಯಣ ಭಟ್

ವಿವಾಹ ಪೂರ್ವದಲ್ಲಿ ರಹಸ್ಯವಾಗಿ ಅಥವಾ ಬಹಿರಂಗವಾಗಿ ಅನೇಕ ವೇಳೆ ಸವಾಗಮ, ಸ್ತ್ರೀಮಪತ್ರ, ಸರಸಸಲ್ಲಾಪ, ಫೋನ್, ಪ್ರಣಯಗಳಲ್ಲಿ ತೊಡಗಬಹುದಾದ ಜಪಾನಿ ಯುವತಿಯರ ಸ್ವಾತಂತ್ರ್ಯ ಜೀವನ ಬಹಳ 'ರೋಮಾಂಟಿಕ್' ಎಂದು ಪಾಶ್ಚಾತ್ಯರು ವರ್ಣಿಸಿದ್ದಾರೆ

ವಿವಾಹಾ ನಂತರ ಎಲ್ಲಾ ವನಿತೆಯರು ಹೆಚ್ಚಾಗಿ ಪುರುಷರ ಆಡಿಯೊಳುಗಳು! ಗೃಹಿಣಿಯರು!

ಜಪಾನಿನಲ್ಲಿ ಸ್ತ್ರೀಯ ವಿವಾಹವೆಂದರೆ ಆಕೆಯ ಸರ್ವ ಸ್ವಾತಂತ್ರ್ಯಗಳ ಮೇಲೂ ನಿಯಂತ್ರಣ ವಿವಾಹದ ನಂತರ ಪತಿಯ ಸುಖ ಸೌಕರ್ಯವೇ ಆಕೆಯ ಹೊಣೆಗಾರಿಕೆ ಮತ್ತು ಗುರಿ

"ಕುಟುಂಬ ಯೋಜನೆಗೆ" ಸಂಬಂಧಿಸಿದ ಜಾಗರೂಕತೆಗಳೂ ಇದಕ್ಕೆ ಅಗತ್ಯವುಳ್ಳ ಸಾಮಗ್ರಿ, ಉಪಕರಣ ಸಂಗ್ರಹವೂ ಮಹಿಳೆಯರ ಕರ್ತವ್ಯ

ಚೀನೀ ಆಹಾರ, ಅಮೆರಿಕನ್ ಡಾಲರ್ ಮತ್ತು ಜಪಾನೀ ವಧು ಇವು ಮೂರು ಲಭ್ಯವಾದರೆ ಬೇರೇನು ಬೇಕು! ಆನಂದ ಲಬ್ಧಿಗೆ ಇಷ್ಟೇ ಸಾಕು ಎಂಬರ್ಥದ ಹಳೇಯ ನಾಣ್ಣುಡಿಯೊಂದಿದೆ

ಪತ್ನಿ ಎಂಬ ಶಬ್ದವನ್ನು ಜಪಾನಿ ಲಿಪಿಯಲ್ಲಿ ಬರೆದರೆ "ಮನೆಯ ಹಿಂಭಾಗದಲ್ಲಿರುವ ಸ್ತ್ರೀ" ಎಂಬ ಭಾವನೆ ತಾನಾಗಿ ಮೂಡುವುದು ಆ ದೇಶದಲ್ಲಿ ಪುರುಷರು ಸ್ತ್ರೀಯರಿಗೆ ನೀಡಿದ್ದ ಪ್ರಾಧಾನ್ಯತೆಯೂ ಸ್ಪಷ್ಟವಾಗುವುದು

ತನ್ನ ಪತಿ ಇತರ ವನಿತೆಯರೊಂದಿಗೆ ಸರಸ ಸಲ್ಲಾಪಗಳಲ್ಲಿ ತೊಡಗಿದರೆ ಜಪಾನಿ ಪತ್ನಿಗೆ ಪರಿಭವವಿಲ್ಲ ಪುರುಷರು "ಹೋಸ್ಟೆಸ್" ಗಳೊಂದಿಗಾಗಲೀ "ಗೆಯಿಷಾಗೃಹ" ಗಳಲ್ಲಾಗಲೀ 'ನೈಟ್ ಕ್ಲಬ್'ಗಳಲ್ಲಾಗಲೀ ವೇಚ್ಚ ಮಾಡುವ ಹಣವನ್ನು ಅನೇಕ ಸಂದರ್ಭಗಳಲ್ಲಿ ಅವರ ಪತ್ನಿಯರ ಸಂಪಾದನೆಯಿಂದ ಪಾವತಿ ಮಾಡುವುದಿದೆ

ತನ್ನ ಶರೀರ ಕಾಂತಿಯು ಪ್ರಾಯವಾಗಿ ಅಥವಾ ಪ್ರಸವಗಳಿಂದಾಗಿ ಬಾಧಿಸಲ್ಪಟ್ಟರೆ ಗಂಡನಿಗೆ ಸ್ವಲ್ಪ 'ಗ್ಲಾಮರ್' ಅನುಭವಿಸುವುದಕ್ಕಾಗಿ 'ಬಾರ್'—ಕ್ಯಾಬರೆ—ನೈಟ್ ಕ್ಲಬ್ ಇತ್ಯಾದಿಗಳಿಗೆ ಹೋಗಲಡ್ಡಿಯಿರದು

ಅಂತೆಯೇ ಕಾರು ಓಡಿಸುವಿಕೆ ಮತ್ತು "ಗೋಲ್ಫ್" ಆಟಗಳು ಮಾರ್ಧನ್ಯವನ್ನು ತಲಪಿದ ಈ ಕಾಲದಲ್ಲಿ ಅಶಕ್ತ—ಅಸಮರ್ಥ ಪತಿಯರನ್ನು ಅವಗಣಿಸಿ ಸ್ವಂತ ಭಾಯ್ ಫ್ರೆಂಡ್"ನೊಂದಿಗೆ ದೇಶಪರ್ಯಟನಕ್ಕೆ ತೆರಳುವ ಪತ್ನಿಯರೂ ವಿರಳವಲ್ಲ

ಪ್ರೇಮ - ವಿವಾಹ

ಜಪಾನೀಯರು 'ಸೆಂಟಿಮೆಂಟಲಿಸ್ಟ್'ಗಳಾಗಿ ಹೊರಗಿಂದ ತೋರುವರು ಆದರೆ ಪ್ರಾಯೋಗಿಕ ವೀಕ್ಷಣ ಗತಿಯನ್ನು ಅವಗಣಿಸಿದ 'ರೋಮಾನ್ಸ್' ಬಹಳ ವಿರಳ. ವಿವಾಹದ ಉದ್ದೇಶದಿಂದಲ್ಲವಾದರೂ ಸ್ವಲ್ಪ ಪ್ರೇಮಿಸುವ—ಪ್ರೇಮಪತ್ರಗಳನ್ನು ಬರೆಯುವುದು ಹಿಂದಿನ ಕಾಲದಿಂದಲೇ ವಾಡಿಕೆ ಆದರೆ ಈಗ ಸೇ 70ರಷ್ಟು ವಿವಾಹಗಳು 'ಪ್ರೇಮವಿವಾಹ'ಗಳಲ್ಲವೆನ್ನಲಾಗಿದೆ 'ವಿವಾಹ ಬ್ಯೂರೋ'ಗಳ ಮೂಲಕವಾಗಲೀ ಹಿರಿಯರು ಕೈಗೊಳ್ಳುವ ಸಮಾಲೋಚನೆಗಳ ಮೂಲಕವಾಗಲೀ ಹೆಚ್ಚಿನ ವಿವಾಹಗಳು ಜರಗುವುವು

ನಮ್ಮ ದೇಶದಂತೆ "ವಧು ಪರೀಕ್ಷೆಗಾಗಿ ವರ ಮತ್ತು ಆತನ ಸಂಗಡಿಗರು ಸಂದರ್ಶಿಸುವ ಆಚಾರ ಜಪಾನಿನಲ್ಲಿಯೂ ಪ್ರಧಾನ ವಧು ಪರೀಕ್ಷೆಯಲ್ಲಿ ತೇರ್ಗಡೆಯಾದರೆ ಕೆಲವು ತಿಂಡಿಗಳೂ ಉಂಗುರವೂ ವಿನಿಮಯ ವಿಧೇಯವಾಗುತ್ತವೆ ವಧೂವರರ ಹಿರಿಯರೂ ಒಳ ಮಧ್ಯಸ್ಥನೂ ಇಂತಹ ಸಮಾರಂಭದಲ್ಲಿ ಭಾಗವಹಿಸುವರು ಈತನು ಸಾಮಾನ್ಯವಾಗಿ ವರನು ನೆಂಕರನಾಗಿರುವ ಸಂಸ್ಥೆಯ ಒರ್ವ ಹೊಣಗಾರಿಕೆಯುಳ್ಳ ವ್ಯಕ್ತಿಯಾಗಿರುವನು. ದುಡಿಯುವವರಾಗೂ ದುಡಿಸುವವರೊಳಗಿನ ಸೌಹಾರ್ದತೆಯನ್ನು ಇದು ಕಾಣಿಸುತ್ತದೆ

ಹೆಣ್ಣು ನೋಡುವವರಿಗೆ ಉದ್ಯಾನ

ಯೋಕೋಹಾಮದ ಸಮೀಪ ಹೆಣ್ಣು ನೋಡುವರಿಗಾಗಿಯೇ ಮೀಸಲಾದ ಒಂದು "ಉದ್ಯಾನವನ" ಏರ್ಪಡಿಸಲ್ಪಟ್ಟುದಾಗಿ ಇತ್ತೀಚೆಗೆ ಒಂದು ವರದಿ ಇತ್ತು

ಭಾವೀ ವಧೂವರರು ಪರಸ್ಪರ ಸಂಧಿಸಿ ಹೃದಯ ಬಿಚ್ಚಿ ಸಂಭಾಷಣೆ ನಡೆಸಿ, ಸಮೀಪ ಬಂಧವೇರ್ಪಡಲು ಅನುಕೂಲ ಕಲ್ಪಿಸಿ ಒಂದು ವಿವಾಹ ಸಂಸ್ಥೆಯವರು ಈ ಉದ್ಯಾನವನ್ನು ಏರ್ಪಡಿಸಿದ್ದರು

ವಧುವು ಪ್ರಾಯಭರಿತಳಾಗುವ ವೇಗದಲ್ಲಿಯೇ ಆಕೆಯ ಶಾರೀರಕ ಬೆಳವಣಿಗೆ ಆಗಿರುವುದಿಲ್ಲ ಪರಿಣಾಮವಾಗಿ ವಧೂವರರ ಪ್ರಾಯದಲ್ಲಿ ಹೆಚ್ಚಿನ ವತ್ಯಾಸ ಇರುವುದಿಲ್ಲ ಆದರೂ ವಯಸ್ಸಿನ ಅಂತರ ಎರಡರಿಂದ ಇಪ್ಪತ್ತು ವರ್ಷಗಳ ತನಕವಿದ್ದ ಸಂತೃಪ್ತ ದಂಪತಿಗಳೇ ಹೆಚ್ಚು ದಂಪತಿಗಳೀರ್ವರೂ ಸಮಾನ ವಯಸ್ಸಿನವರಾಗಿರುವುದೂ ವಿರಳವಲ್ಲ ಸ್ತ್ರೀಯರಿಗೆ 22-25 ಮತ್ತು ಪುರುಷರಿಗೆ 25—28 ವಯಸ್ಸು ವಿವಾಹ ಪ್ರಾಯ ಹೆಚ್ಚಿನ ಯುವತಿಯರಿಗೂ 'ನೈಟ್ ಕ್ಲಬ್'ಗಳಲ್ಲಿ 'ಹಾಸ್ಟೆಸ್' ಆಗಿ ಸೇವೆ ಸಲ್ಲಿಸಿದ ಅನುಭವವಿರುತ್ತದೆ

ವಿವಾಹ ನಿರ್ಣಯವಾಗಿ ಒಂದು ವರ್ಷ ಕಳೆದೇ ವಿವಾಹ ಸಮಾರಂಭ ಈ ಅವಧಿಯಲ್ಲಿ ಭಾವೀ ವಧೂವರರು ಆಗಾಗ ಸಂಧಿಸಿ ಪರಸ್ಪರ ವಿಚಾರ ವಿನಿಮಯ ನಡೆಸಿ ಸಮೀಪವರ್ತಿಗಳಾಗುವರು, ಮುಂದಿನ ಜೀವನ ವಿಧಾನಗಳ ಬಗ್ಗೆ ಅಯೋಜನೆ ತಯಾರಿಸುವರು

ವಿವಾಹಾನಂತರ 'ಮಧುವಿಧು'ವಿಗಾಗಿ ದೂರದ ಪ್ರವಾಸೀಕೇಂದ್ರಗಳನ್ನು ಸಂದರ್ಶಿಸುವುದು ವಾಡಿಕೆ 'ಮಧು ವಿಧು'ವಿನ ಕಾರ್ಯಕ್ರಮವು ವಿವಾಹದ ಮುನ್ನವೇ 'ನವದಂಪತಿ'ಯರ ಅಂಗೀಕಾರ ಗಳಿಸಿರುತ್ತದೆ ವಿವಾಹಾನಂತರ ವಾಸಮಾಡಲಿರುವ ಬಾಡಿಗೆಯ ಮನೆಯೂ ಪೂರ್ವಭಾವಿಯಾಗಿಯೇ ನಿರ್ಧರಿಸಲ್ಪಟ್ಟಿರುತ್ತದೆ

ಸೂಕ್ಷ್ಮ ವೈದ್ಯಕೀಯ ಪರೀಕ್ಷೆ

ಜೋತಿಷ್ಯ, ಹಸ್ತರೇಖಾ ಫಲ ಇತ್ಯಾದಿಗಳಲ್ಲಿಯೂ ಜಪಾನೀಯರಿಗೆ ವಿಶ್ವಾಸವಿದೆ ಆದರೆ, ವಿವಾಹದಂತಹ ಅತಿಪ್ರಧಾನ ವಿಚಾರದಲ್ಲಿ ನೂತ್ರ ಜಾತಕ ಫಲ, ರಾಹುಕಾಲ ಇತ್ಯಾದಿಗಳ ಆತಂಕವಿಲ್ಲ ಬದಲಾಗಿ ವಧುವೂ ವರನೂ ಸೂಕ್ಷ್ಮವಾದ ವೈದ್ಯಕೀಯ ಪರಿಶೋಧನೆಗೆ ಒಳಗಾಗಲೇ ಬೇಕು ಉತ್ತಮ ಆರೋಗ್ಯದ ಬಗ್ಗೆ ಇಬ್ಬರೂ ಸರ್ಟಿಫಿಕೇಟು ಹೊಂದಿರಲೇಬೇಕು ವಿವಾಹ ಜೀವನದ ಭಾವೀ ಸಂತಾನದ ಸುರಕ್ಷಿತತೆಗೆ ಜಾತಕಕ್ಕಿಂತಲೂ ವೈದ್ಯಕೀಯ ಸರ್ಟಿಫಿಕೇಟಿಗೇ ಮಾನ್ಯತೆ! ಪ್ರಧನು ಪರಿಗಣನೆ

ವಿವಾಹಕ್ಕೆ ಮುಂಚಿತವಾಗಿ ಜಪಾನೀ ಯುವತಿಯರು ನರ್ತನ, ಆಡುಗೆ ವಿಧಾನ, ಮೋಟಾರು ಓಡಿಸುವಿಕೆ ಇತ್ಯಾದಿಗಳನ್ನೂ ಕಲಿತಿರುವರು 'ಚಾಪೂಜೆ ಯೆಂಬುದು ಅಲ್ಲಿ ವಿಶಿಷ್ಟ ಸಂಪ್ರದಾಯ ವಿವಾಹಕ್ಕೆ ಎರಡುವಾರಗಳ ಹಿಂದೆಯೇ ಆಹ್ವಾನ ಪತ್ರಿಕೆ ನೀಡಲ್ಪಡುತ್ತದೆ ಸಮಾರಂಭದಲ್ಲಿ ಭಾಗವಹಿಸುವವರೆಷ್ಟು ಮಂದಿಯೆಂಬುದೂ ವಿವಾಹ ದಿನದ ಮುನ್ನವೇ ನಿರ್ಧಾರವಾಗುತ್ತದೆ ಆಸನ ಸೌಕರ್ಯ, ಔತಣದ ವ್ಯವಸ್ಥೆ (ಜತೆಯಲ್ಲಿಯೇ ನಿತವ್ಯಯವೂ) ಮುಂತಾದವುಗಳಿಗೆ ಇದು ಅನುಕೂಲ ವಿವಾಹ ಮಂದಿರದಲ್ಲಿ ಆತಿಥಿಗಳಿಗೆ ನಿರ್ದಿಷ್ಟ ಸ್ಥಾನದಲ್ಲಿ ಆಸನಗಳನ್ನು ಇರಿಸಲಾಗಿರುವುದು ಅತಿಥಿಗಳು ತಂತಮ್ಮ ಹೆಸರು ವಿಳಾಸಗಳನ್ನು ನಿರ್ದಿಷ್ಟ ಪುಸ್ತಕದಲ್ಲಿ ಬರೆಯುವ ವಾಡಿಕೆಯಿದೆ. ಆ ಬಳಿಕ ವರನು ಸ್ವಾಗತಿಸಿ ನಿರ್ದಿಷ್ಟ ಸ್ಥಾನಕ್ಕೆ ಕರೆದುಕೊಂಡು ಹೋಗುವನು ಸಮಾರಂಭದ ವಿವಿಧ ದೃಶ್ಯಗಳನ್ನೂ ಸಂಭಾಷಣೆಗಳನ್ನೂ ದಾಖಲೆ ಮಾಡಿಕೊಳ್ಳಲು "ಕೆಮರಾ"ಗಳೂ 'ಟೇಪ್'ರಿಕಾ

(ಇಪ್ಪತ್ತೇಳನೇ ಪುಟ ನೋಡಿರಿ)

For all your Requirements
Visit
JANATHA BAZAAR
SAHAKARI MAHAL,
MANGALORE
unit of
S. K. C. C. W. STORES LTD.

ನಾನಿನ್ನೂ ೧೭ರ ಹರೆಯದವನಿರುವಾಗಲೇ ನನಗೆ ಡಾ| ಅನಿ ಬೆಸಂಟರ ಪರಿಚಯವಾಗಿತ್ತು. ಆ ನನ್ನ ಕಿಶೋರ ವಯಸ್ಸಿನಲ್ಲಿ ನಾನು ಬರೆಯುತ್ತಿದ್ದ ಪದ್ಯದ ಸಾಲುಗಳಲ್ಲಿ ವಿಶೇಷತೆಯನ್ನು ಎಲ್ಲಕ್ಕೂ ಮೊದಲು ಗುರುತಿಸಿದವರೇ ಅವರು; ನನ್ನ ಮೊದಲ ಪುಸ್ತಿಕೆ 'ದಿ ಫೀಷ್ಟ್ ಆಫ್ ಯೂಥ್'ನ್ನು ಅವರೇ ಮುದ್ರಿಸಿ ಪ್ರಕಟಿಸಿದರು. ಈ ಕೃತಿಯ ಪ್ರಕಟಣೆಯ ಸಮಯದಲ್ಲಿ ನಾನು ಒಮ್ಮೆ ಅವರಲ್ಲಿಗೆ ಹೋದಾಗ–"ತಮ್ಮಾ, ಆಗಾಗ ಇಲ್ಲಿಗೆ ಬರುತ್ತಿರು" ಎಂದರು. ನೀವು ಹಗಲು ರಾತ್ರಿ ಎಡೆಬಿಡದೆ ಹಲವಾರು ಕೆಲಸಗಳಲ್ಲಿ ತೊಡಗಿರುತ್ತೀರಿ. ನಾನು ಆಗಾಗ ಬಂದರೆ ನಿಮಗೆ ನನ್ನೊಡನೆ ಕುಳಿತು ಮಾತಾಡಲು ಸಮಯವಾದರೂ ದೊರಕೀತೇ?" ಎಂದು ನಾನು ಸಂಶಯ ವ್ಯಕ್ತಪಡಿಸಿದೆ. "ಸದಾ ಕೆಲಸಗಳಲ್ಲಿ ವ್ಯಸ್ತರಾಗಿರುವವರು ಮಾತ್ರ ಸಮಯವನ್ನು ನಿರ್ಮಿಸಿಕೊಳ್ಳ ಬಲ್ಲರು ಎಂಬುದನ್ನು ಯೂವತ್ತೂ ಮರೆಯ ಬೇಡ" ಎಂಬ ಉತ್ತರ ತಕ್ಷಣ ದೊರಕಿತು.

—ಹರೀಂದ್ರನಾಥ ಚಟ್ಟೋಪಾಧ್ಯಾಯ

ಪಂ. ನೆಹರೂ ಅವರ ನಿವಾಸ ತೀನ್ ಮೂರ್ತಿಯಲ್ಲಿ ಒಂದು ಸಂಜೆ ಉರ್ದೂ ಕವಿಗಳ ಸಭೆ ಸೇರಿತ್ತು. ಕವಿಗಳ ಈ ಕೂಟವನ್ನು 'ಮಹಫಿಲ್' ಎಂದೂ ಕವಿಗಳನ್ನು

ಶ್ರೀ ಶಿಮುಂಜೆ ಪರಾರಿ

ಹಿರಿಯರ ಹತ್ತಿರದಲ್ಲಿ

ಸಜ್ಜನರ ಸುದ್ದಿ ಲೇಸು, ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ—ಎಂದು ಮುಂತಾಗಿ ಸರ್ವಜ್ಞ ಹಾಡಿದ್ದಾನೆ. ಈ ಬಗೆಯ ಹಿರಿಯ ವ್ಯಕ್ತಿಗಳ ಜೀವನದ ಕೆಲವೊಂದು ರಸ ನಿಮಿಷಗಳನ್ನು ಶ್ರೀ ಶಿಮುಂಜೆ ಪರಾರಿಯವರು ಇಲ್ಲಿ ಸಂಗ್ರಹಿಸಿದ್ದಾರೆ.

'ಶಾಯರ್' ಎಂದು ಸಂಬೋಧಿಸುವುದು ಉರ್ದೂ ಸಂಪ್ರದಾಯ.

ಉರ್ದೂ ಭಾಷೆಯ ಹಿರಿ ಹಿರಿಯ ಶಾಯರುಗಳೆನಿಸಿದ ಸರ್ವಶ್ರೀ, ಹೆಜರತ್, ಜನಾಬ್ ಜೇಕಲ್, ಸರ್ದಾರ್ ಜಾಫರೀ, ಫಿರಾಕ್ ಸಾಹಬ್ ಮುಂತಾದ ಅನೇಕ ಮಂದಿ ಅಲ್ಲಿ ಕೂಡಿದ್ದರು. ಸಮಯವು ತೀರಾ ಕಡಿಮೆಯಿದ್ದ ಕಾರಣ ಎಲ್ಲರೂ ತಮ್ಮ ಚಿಕ್ಕ ಚಿಕ್ಕ ಕವನ (ಶಾಯರೀ)ಗಳನ್ನು ಓದಿ ತೋರಿಸುತ್ತಿದ್ದರು.

ಸರ್ದಾರ್ ಜಾಫರೀ ಅವರು ತನ್ನ ಕವನ ಹಾಡಲು ಎದ್ದು ನಿಂತಾಗ (ಜಾಫರೀ ಅವರ ಎಲ್ಲ ಕವನಗಳೂ ದೀರ್ಘವಾಗಿರುತ್ತವೆ.) ಕುಳಿತಿದ್ದವರಲ್ಲಿ ಒಬ್ಬನು ವ್ಯಂಗನಾಗಿ–'ಹೆಚ್ಚು ಶ್ರಮ ತೆಗೆದುಕೊಳ್ಳಬೇಡಿ ಸಾಹೆಬ್' ಎಂದು ಬಿಟ್ಟನು. ಶ್ರಮ? ಶ್ರಮ ಯಾರಿಗೆ? ಹೇಳುವವರಿಗೋ ಕೇಳುವವರಿಗೋ? ಎಂದರು ನೆಹರೂ

'ಸಾಹಬ್. ಈ ರಹಸ್ಯವನ್ನು ಮೂರ್ತಿ ಬಯಲು ಮಾಡಬೇಡಿ' ಎನ್ನುತ್ತಾ ಕೈ ಮುಗಿದು ಜಾಫರೀ ಮಹಫಿಲಿನ ನಗೆಯಲ್ಲಿ ಪಾಲುಗೊಂಡರು.

—ಎಂ. ಆರ್. ಗುಪ್ತಾ.

ಒಮ್ಮೆ ಮಜಾಜ್ ಸಾಹೇಬ್ ಅವರು ಒಂದು ಹೊಟೇಲಿನಲ್ಲಿ ಕುಳಿತ್ತಿದ್ದರು ಅಲ್ಲಿಗೆ ಆಗಮಿಸಿದ ಇನ್ನೊಬ್ಬ ವ್ಯಕ್ತಿ, ಬೇರಾವ ಕುರ್ಚಿಯೂ ಖಾಲಿಯಿರದ ಕಾರಣ ಮಜಾಜರ ಎದುರಲ್ಲಿ ಕುಳಿತು ಮೂಣಿಗೆ ಕಾಫಿ ತರಲು ಅಪ್ಪಣೆಯಿತ್ತನು. ತುಸು ಹೊತ್ತು ಘಮ್ಮನೆ ಕುಳಿತ್ತಿದ್ದ ಅವನು ಇದ್ದಕ್ಕಿದ್ದಂತೆಯೇ ಮಿರ್ಜಾಗಾಲಿಬರ ಶಾಯರಿಯ ಕೆಲಸಾಲುಗಳನ್ನು ಕುರುಕತೊಡಗಿದನು.

ಅಹಮು ಕೊಂ ಕೀ ಕಮಿ ನಹೀಂ ಗಾಲಿಬ್ ಏಕ್ ಧೂಂಡೋ ಹಜಾರ್ ಮಿಲ್ತೇ ಹೈಂ!

(ಮೂರ್ಖರಿಗೆ ಈ ಜಗತ್ತಿನಲ್ಲಿ ಕೊರತೆಯಿಲ್ಲ. ಒಬ್ಬನನ್ನು ಹುಡುಕಿದರೆ ಸಾವಿರಾರು ದೊರಕುತ್ತಾರೆ.)

ಮಜಾಜ್ ಸಾಹೇಬರು ಬೆಚ್ಚಿ ಬಿದ್ದು ಒಂದು ಸಲ ಅವನನ್ನೇ ದಿಟ್ಟಿಸಿದರು. ಆನಂತರ ಮುಗುಳ್ನಕ್ಕರು—'ನಿಮ್ಮ ಮಾತು ಸತ್ಯ ಜನಾಬ್. ಆದರೆ ಕ್ಷಮಿಸಿ, ಮೂರ್ಖರನ್ನು ಹುಡುಕೋ ಅಗತ್ಯಾನೇ ಇಲ್ಲ. ತಾವಾಗಿಯೇ ಬಂದು ಎದುರಿಗೇ ಕುಕ್ಕರಿಸುತ್ತಾರೆ."

—ಎಂ ಆರ್. ಗುಪ್ತಾ.

'ನಯೂಜ್' ಉರ್ದೂ ವಾರ ಪತ್ರಿಕೆಯ ಸಂಪಾದಕರಾದ ಮಹಮ್ಮದ್ ತುಫೈಲ್ ಸಾಹೇಬರು ಕರಾಚಿಗೆ ಹೋಗಲಿಕ್ಕಾಗಿ ಲಾಹೋರ್ ಸ್ಟೇಶನಿಗೆ ಬಂದಾಗ, ಸುಪ್ರಸಿದ್ಧ ಕವಿ ಹಜರತ್ 'ಜೋಶ್' ಮಲೀಹಾಬಾದೀ ಅವರು ಭೆಟ್ಟಿಯಾದರು ಸಾಂಪ್ರದಾಯಕ ಆಲಿಂಗನ ನಮಸ್ಕಾರಗಳಾದ ನಂತರ—ಜನಾಬ್, ಅಂದ ಹಾಗೆ

(ಇಪ್ಪತ್ತಾರನೇ ಪುಟ ನೋಡಿರಿ)

With best compliments from:

WOODLANDS HOTEL

MYLAPORE,

MADRAS - 4

and

MADRAS WOODLANDS HOTEL

BANGALORE - 25

ತ್ರಿಕಾಲಗಳಲ್ಲೂ ಸಾವಿತ್ರಿಯು ದೇವಸ್ಥಾನಕ್ಕೆ ಹೋಗುವುದನ್ನು ಬಿಡಲಿಲ್ಲ. ಅಲ್ಲಿ ಆಕೆ ದೇವರಿಗೆ ಹಾಕುವ ಪ್ರದಕ್ಷಿಣೆಗಳೆಷ್ಟೋ. ನಮಸ್ಕಾರಗಳೆಷ್ಟೋ, ಅರ್ಪಿಸುವ ಪುಷ್ಪಗಳೆಷ್ಟೋ! ಆಕೆ ದೇವ ದೇವನ ಮುಂದೆ ಸಾಷ್ಟಾಂಗ ವಂದಿಸಿದಳೆಂದರೆ ಕೆಲವು ನಿಮಿಷ ಕಳೆದರೂ ಆಕೆ ತಲೆಯೆತ್ತಳು. ಇದನ್ನು ಕಂಡ ಭಾವಿಕರು—'ಅಯ್ಯೋ ಪಾಪ, ಕಷ್ಟ'ವೆನ್ನುವರು. ಕೆಲವು ತಲೆತಿರುಕ ತರುಣರು—'ಗಂಡ ಹದಿನಾರಣೆ ಮರುಳಾಗಿ ಊರೆಲ್ಲಾ ಅಲೆಯುತ್ತಿದ್ದಾನೆ; ಹೆಂಡತಿ ಎಂಟಾಣೆ ಮರುಳಾಗಿ ಆವಾರದಲ್ಲೆಲ್ಲಾ ಉರುಳಾಡುತ್ತಿದ್ದಾಳೆ' ಎಂದು ಚುಚ್ಚು ಮಾತುಗಳನ್ನಾಡಿ ಆನಂದಿತರಾಗುತ್ತಿದ್ದರು. ಸಾವಿತ್ರಿಯ ಬಾಳ್ವೆಯು ನಿಂದೆ ತೆಗಳಿಕೆಗಳ ಮೂಟೆಯನ್ನು ಕಣ್ಣಿಬೇಕೆಂದೇ ನಿರ್ಮಿತವಾಗಿರುವಾಗ ಆಕೆಯು ಅದಕ್ಕೆ ತಗ್ಗಿ ಮುಗ್ಗುವಳೇ? ಮಹಾದೇವನ ಮುಂದೆ ದಂಡದಂತೆ ಬಿದ್ದ ಸಾವಿತ್ರಿಯ ಕಣ್ಣೀರಿನ ಹನಿಗಳು ಒಮ್ಮೆಮ್ಮೆ ಲೆಕ್ಕಮೂಡದಷ್ಟಿದ್ದು ಆಕೆಯ ನರಕ ಜೀವನವನ್ನು ತುಸು ಹಗುರ ಮಾಡುತ್ತಿದ್ದವು. ಹಲವೊಮ್ಮೆ ಆಕೆಯ ಕಣ್ಣೀರ ಕಾಲುವೆಯು ದೇವ ಮಂದಿರದ ಪಾವನ ಸೈಕತ ಭೂಮಿಯ ಒಂದು ಹಾಸನ್ನೂ ತೋಯುವುದಿತ್ತು. ಆದರೂ ಆಕೆಗೆ ದೇವನಿರುವುದರಲ್ಲಿ ಸಂದೇಹ ಬಂದಿರಲಿಲ್ಲ. ಆತನ ಕರುಣಾ ಕಟಾಕ್ಷವ ತಂಪಿನ ಭರವಸೆ ತಪ್ಪಿರಲಿಲ್ಲ. ಆ ದೇವದೇವನು ತನ್ನ ಪಾಪ ಸಂಚಯವನ್ನು ಭಸ್ಮೀಭೂತವನ್ನಾಗಿಸುವುದರಲ್ಲಿ ತತ್ಪರನಾಗಿರುವನೆನ್ನುವ ಆಕೆಯ ಬಲವಾದ ವಿಶ್ವಾಸಕ್ಕೆ ಭಂಗ ಬಂದಿರಲಿಲ್ಲ.

ಸಾವಿತ್ರಿಯ ಪತಿಯು ಬಡತನದ ಕಷ್ಟದಿಂದ ತಲೆ ಕೆಟ್ಟು ನಾಲ್ಕುವರ್ಷಗಳು ಸಂದಿದ್ದವಷ್ಟೇ. ಈತನಿಗೆ ಹುಚ್ಚುಹಿಡಿಯುವ ಮೊದಲು ಬಿಕ್ಷುಕನಾಗಿ ಕೆಲವು ಸಮಯ ಸಂಸಾರ ಸಾಗಿಸುತ್ತಿದ್ದನು. ಆಗ ಸಾವಿತ್ರಿಯು ನೆರೆ ಹೊರೆಯವರ ಮನೆ ಕೆಲಸಗಳಿಗೆ ನೆರವಾಗಿ ತನ್ನ ಹೊಟ್ಟೆಯ ಪಾಡನ್ನು ಸಾಗಿಸುತ್ತಿದ್ದಳು. ಗಂಡನು ಹುಚ್ಚನಾದ ಮೇಲೆ ಆತನ ಭಿಕ್ಷಾ ಜೀವನವು ಹಕ್ಕಿನಂತೆ ಸಾವಿತ್ರಿಯನ್ನೇ ಸೇರಿತ್ತು. ಅದರೊಂದಿಗೆ ಗಂಡನ ರಜೋಲೆಯನ್ನೂ ನೋಡಿಕೊಳ್ಳಬೇಕಿತ್ತು. ಪತಿಗೆ ಹುಚ್ಚು ಹಿಡಿದಂದು ಸಾವಿತ್ರಿಯು ನೆರೆಕರೆಯವರ ಕಾಲು ಹಿಡಿದು ಗಂಡನನ್ನು ತನ್ನ ಜೋಪಡಿಯೊಳಗೆ ನಿರ್ಬಂಧದಲ್ಲಿಡಿಸಿದಳು.'ಆದರೆ ಹುಚ್ಚನು ಗುಡಿಸಲಿನ ತಟ್ಟಿಗಳನ್ನೆಲ್ಲಾ ಕೀತುಮೂಡಿ ಕೆಲಕೆಲನೆ ನಗುತ್ತಾ ಹೊರಚಿಮ್ಮಿ ಪರಾರಿಯಾದನು. ಮುಂದೆ ಆಕೆಯ ಸತಿಯನ್ನು ನಿರ್ಬಂಧವಲ್ಲಿಡುವುದು ಅಸಾಧ್ಯವಾಯಿತು.

ಹುಚ್ಚನು ಧೂಳಿನಲ್ಲಿ ಹೊರಳುತ್ತಾ ಹಗಲೆಲ್ಲಾ ಕುಣಿದಾಡುವನು. ಆಗಾಗ ಅವನು ಮಕ್ಕಳ ಗುಂಪಿಗೆ ಇದಿರಾಗುವುದೂ ಉಂಟು. ಆಗ ಮಕ್ಕಳೆಲ್ಲಾ ಅವನ ಮೇಲೆ ಕಲ್ಲಿನ ಸುರಿಮಳೆಯನ್ನೇ ಸುರಿಯುವರು. ಇದರಿಂದ ಎಷ್ಟೋ ಸಾರಿ ಹುಚ್ಚನ ದೇಹವು ರಾಮರೂಢಿ ರಕ್ತವಾದುದುಂಟು. ಭಿಕ್ಷಾಟನೆಯ ಕಾಲದಲ್ಲಿ ಸಾವಿತ್ರಿಯೊಮ್ಮೆ ತನ್ನ ಪತಿಗೂ ಮಕ್ಕಳ ತಂಡಕ್ಕೂ ಆಗುತ್ತಿದ್ದ ಕಲಹವನ್ನು ಕಂಡು ಮಕ್ಕಳ ಮುಂದೆ ನಿಂತು ಅಳುತ್ತಾ—'ಮಕ್ಕಳೇ! ಇವರೇ ನನ್ನ ದೇವರು. ಹೊಡೆಯಬೇಡಿ' ಎಂದು ಅಂಗಲಾಚಿ ಬೇಡಿದ್ದಳು. ಅಂದು ಮಕ್ಕಳಿಗೆ ಕರುಣೆಯುಂಟಾಗಿರಬೇಕು. ಅಂದಿನಿಂದ ಯಾವ ಹುಡುಗನೂ ಸಾವಿತ್ರಿಯ ಪತಿಯನ್ನು ಪೀಡಿಸುವ ಗೊಡವೆಗೇ ಹೋಗಲಿಲ್ಲ.

ಸಂಜೆಯಾದೊಡನೆ ಸಾವಿತ್ರಿಯು ಊರನ್ನೆಲ್ಲಾ ಸುತ್ತಿ ಪತಿಯನ್ನು ಮನೆಗೆ ಕರೆದುಕೊಂಡು ಬರುವಳು. ಆಗ ಹುಚ್ಚನು ಭೀಭತ್ಸವಾಕ್ಯಗಳಿಂದ ಬಯ್ಯುತ್ತಾ ಸಾವಿತ್ರಿಯನ್ನು ಸಿಕ್ಕಿದುದರಲ್ಲಿ ಹೊಡೆಯುವನು. ಒಮ್ಮೆ ಊರವರು ಗಂಡನ ಹೊಡೆತಕ್ಕೆ ಬಲಿಬಿದ್ದ ಆಕೆಯನ್ನು ತಪ್ಪಿಸಿ 'ಪುಣ್ಯಸ್ತ್ರೀ! ಆತ ನಿನ್ನ ಪತಿಯಲ್ಲ; ಪೂರ್ವ ಜನ್ಮದ ಶತ್ರು. ಅವನ ಗೊಡವೆಯನ್ನು ಪುರೆ' ಎಂದು ಉಪದೇಶಿಸಿದ್ದರು. ಆದರೆ ಸಾವಿತ್ರಿಗೆ ತನ್ನ ಗಂಡನು ಹುಚ್ಚನಾದರೂ ದೂರ ತೇಲಿಸಿ ಬಿಡಲು ಮನ ಒಪ್ಪದು. ಆಕೆಯು ಪತಿಯ ಹೊಡೆತಗಳ ವೇದನೆಯನ್ನು ಸಹಿಸಲಾರದೆಂದು 'ಪರಮೇಶ್ವರಾ, ಈ ಜೀವನ ಸಾಕು ಮಾಡಪ್ಪಾ.' ಎಂದು ಅಳುವಳು. ಆಗಲೂ ಮರುಳು ಗಂಡನು ಆಕೆಯ ಹೃದಯದಿಂದ ತನ್ನ ಸ್ಥಾನವನ್ನು ಕಳೆದುಕೊಳ್ಳಲಿಲ್ಲ. ಆರ್ಯನಾರಿಯು ತನ್ನ ಧರ್ಮಪತಿಯನ್ನು ಹೇಗೆ ಮರೆಯಬಲ್ಲಳು?

ಂ ಂ ಂ

ಸಾವಿತ್ರಿಗೆ ಕೆಟ್ಟನೆಂಬ ಏಳು ವರ್ಷದ ಮಗನಿದ್ದ. ಅವನನ್ನು ಎಲ್ಲರೂ ಚೋಳಿಗೆ ಕೆಟ್ಟನೆನ್ನುವುದೇ ಹೆಚ್ಚು. ಅವನು ಎರಡು ವರ್ಷಗಳಿಂದ ಶಾಲೆಗೆ ಹೋಗುತ್ತಿದ್ದರೂ ಇನ್ನೂ ಒಂದನೇ ತರಗತಿಯಲ್ಲೇ ಇದ್ದಾನೆ. ಉಪಾಧ್ಯಾಯರು ಎಲ್ಲಾದರೂ ಸಾವಿತ್ರಿಯ ತಲೆಕುಡಿ ಕಂಡರೆ-'ಸಾವಿತ್ರೀ, ನಿನ್ನ ಮಗ ಭರ್ಜರಿ ಹೂಟಿ ಆಳಾದಾನು!' ಎಂದು ಅಣಕವಾಡುವರು. ಈ ಮಾತಿನಿಂದ ಯಾವ ತಾಯಿಯ ಕರುಳು ಬೇಯದು? ಸಾವಿತ್ರಿಯು ಉಪಾಧ್ಯಾಯರ ಮುಂದೆ ಕಣ್ಣೀರು ತುಂಬಿಕೊಳ್ಳುವಳು. ಅಂದು ದೇವ ಮಂದಿರದಲ್ಲಿ ದೇವ ದೇವನ ಮುಂದೆ ಕಣ್ಣೀರಿನ ವರ್ಷವು ನಿರರ್ಗಳವಾಗುವುದು. ಆದರೆ ಕಾಲನೇನೂ ಆಕೆಯ ಕಣ್ಣೀರಿನ ದಿನಗಳನ್ನು ಮೆಲುಕಾಡುತ್ತಾ ತನ್ನ ಕಾರ್ಯದಲ್ಲಿ ತತ್ಪರನಾಗಿಯೇ ಇದ್ದನು!

ಸಾವಿತ್ರಿಯು ಒಂದು ದಿನ ಮಧ್ಯಾಹ್ನದ ಊಟಕ್ಕೆ ಪೂರೈಸಿ ಕೆಟ್ಟನ ಆಗಮನವನ್ನು ನಿರೀಕ್ಷಿಸುತ್ತಿದ್ದಳು. ಆಂದು ಆಮಾವಾಸ್ಯೆ; ಸೋಮವಾರ. ಮಹಾದೇವನನ್ನು ಮಗನೊಂದಿಗೆ ಸಂದರ್ಶಿಸಬೇಕೆಂದು ನಿರೀಕ್ಷಿಸುತ್ತಿದ್ದಳು ತಾಸು ಹನ್ನೆರಡಾಯಿತು. ದೇವಸ್ಥಾನದಲ್ಲಿ ಬಲಿಯ ಗದ್ದಲವು ಊರವರಿಗೆ ಊಟದ ವೇಳೆಯನ್ನು ಸೂಚಿಸುತ್ತಿತ್ತು. ಆಗ ನೂರದಲ್ಲಿ ಅಳುತ್ತಾ ಬರುವ ಮಗನನ್ನು ಕಂಡು ತಾಯಿಯ ಎದೆಯು ಧಸಕ್ಕೆಂದಿತು. ಆಕೆಯು ಅಂಗಳದಿಂದ ಬಯಲಿಗಿಳಿದಳು. ಆಗ ಮಗನ ಬಿಕ್ಕಿ ಬಿಕ್ಕಿ ಅಳುವು ಆಕೆಗೆ ಸ್ಪಷ್ಟವಾಗಿ ಕೇಳಿಸಿತು. ಸಾವಿತ್ರಿಯು ಓಡಿ ಬಂದು ಮಗನನ್ನಪ್ಪಿದಳು. ಮಗನು ಕುರುಡನಾದರೂ ಬರಡನಾದರೂ ಹೆತ್ತುದಲ್ಲವೇ?

'ಮಗೂ, ಕೆಟ್ಟಾ! ಏನಾಯಿತಪ್ಪಾ?' ತಾಯಿ ಗಾಬರಿಯಿಂದ ಕೇಳಿದಳು. ತಾಯಿಯ ಲಲ್ಲೆಮಾತುಗಳಿಂದ ಮಗನ ಶೋಕವು ನಾಲ್ಮಡಿ ಹೆಚ್ಚಿತು. ಅವನು ಭೋರೆಂದು ಅತ್ತನು.

ಯಾರು ಹೊಡೆದರು ಕಂದಾ?' ತಾಯಿಯು, ಮಗನ ಮಲಿನ ಮೊಗವನ್ನು ಒರೆಸುತ್ತಾ ಪುನಃ ಪುನಃ ಕೇಳಿದಳು. ಆಗ ತಾಯಿಯ ಗಂಟಲಿಗೂ ನಡುಕ ಬಂದಿತ್ತು. ರಕ್ತನಾಳಗಳು ಕೊರಳಲ್ಲಿ ರಕ್ತದಿಂದ ತುಂಬಿ ಉಬ್ಬಿದ್ದವು. ತಾಯಿಗೂ ಆಳುಬರುವುದೆಂದು ತಿಳಿದ ಕೆಟ್ಟನು ತಡೆದು ತಡೆದು ಬರುವ ಮಾತುಗಳಿಂದ- 'ಮೂಸ್ತರರು ಹೊಡೆದರಮ್ಮಾ; ಪಾಠಬರಲಿಲ್ಲ' ಎಂದು ಅಂಗಿ ತೆಗೆದು ಮೈತೋರಿಸಿದನು. ಅವನ ಮೈಯಲ್ಲೆಲ್ಲಾ ಬೆತ್ತದ ಬಾಸುಂಡೆಗಳು ಮೂಡಿದ್ದವು.

'ಅಮ್ಮಾ, ಮೂಸ್ತರರು ಜಮೀನ್ದಾರರ ಮಗನಿಗೆ ಪಾಠ ಬಾರದಿದ್ದರೂ ಅವನ ಬೆನ್ನು ತಟ್ಟುತ್ತಾ ಹೇಳಿಕೊಟ್ಟರು. ನನಗೆ ಬಯ್ಯುತ್ತಾ ಚೆನ್ನಾಗಿ ಹೊಡೆದರು'—ಬಾಲಕನು ಉಪಾಧ್ಯಾಯರ ಸ್ವಭಾವವನ್ನು ವಿವರ್ಶಿಸಿದನು. ಅಂದು ಮಗನ ಮೈಯನ್ನು ಕಂಡ ತಾಯಿಯ ಕರುಳಿಗೆ ಎಷ್ಟು ನೋವಾಗಬೇಕೋ ಆಕೆಗೆ ಅಷ್ಟೂ ಆಯಿತು. ಮೂಸ್ತರರಿಗೆ ಹೊಟ್ಟೆಯಲ್ಲಿ ಒಂದು ಹಲ್ಲಿಯಾದರೂ ಹೊರದಿದ್ದರೆ ಕಂಡವರ ಮಕ್ಕಳಿಗೆ ಹೀಗೆ ಹೊಡೆಯುತ್ತಿದ್ದರೇ? ಅವರ ಎದೆಯಲ್ಲಿ ತಟಕು ಪುತ್ರಪ್ರೇಮವೂ ಇಲ್ಲದೇ ಹೋಯಿತಲ್ಲಾ! ಕಂದಾ! ನಿನ್ನನ್ನು ಹಡೆದವರು ಹು..... ನಾನು ಬಡವೆ. ನಿರ್ಗತಿಕನಾದ ನಿನಗೆ ಆ ಮೂಸ್ತರರು ಹೊಡೆಯದೆ ಏನು ಮಾಡಿಯಾರು? ಎಂದು ಸಾವಿತ್ರಿಯು ಅಳುತ್ತಾ, ಮಗನ ಮೈಗೆ ತಂಪಾಗುವಂತೆ ಗಾಳಿಹಾಕುತ್ತಾ ದೇವಾಲಯಕ್ಕೆ ಕರೆದುಕೊಂಡು ಬಂದಳು.ಆಂದು ತಾಯಿ ಮಗ ಇಬ್ಬರೂ ಕೈಲಾಸನಾಥನಿಗೆ ಕಾಲುದಣಿಯುವಷ್ಟು ಸುತ್ತು ಬಂದರು. ದೇವ ದೇವನ ಮುಂದೆ ಇಬ್ಬರೂ ಸಾಷ್ಟಾಂಗ ವಂದಿಸಿದರು. ಮಗನು ನಮಸ್ಕರಿಸಿ ಎದ್ದರೂ ತಾಯಿ ಬಿಕ್ಕಿ ಬಿಕ್ಕಿ ಅಳುತ್ತಾ, ಮೊಗವಡಿಯೊಗಿ ದಂಡದಂತೆ ಬಿದ್ದು ರೋದಿಸುತ್ತಿದ್ದಾಳೆ. ಪುನಃ ಮಹಾದೇವನ ಸಾನ್ನಿಧ್ಯವು ಆಕೆಯ ಕಣ್ಣೀರಿನಿಂದ ಪ್ಲಾವಿತವಾಯಿತು.

ಮರುದಿನದಿಂದ ತಾಯಿಯ ಅಪ್ಪಣೆಯಂತೆ ಕೆಟ್ಟ ಶಾಲೆ ಬಿಟ್ಟ. ಪಿತ್ರಾರ್ಜಿತ ಉದ್ಯೋಗವಾದ ಬಿಕ್ಷಾಟನೆಯಲ್ಲಿ ಆತನಿಗೆ ಅಭ್ಯಾಸವಾಗುವವರೆಗೆ ಆಕೆಯು ಮಗನನ್ನು ಕರೆದುಕೊಂಡೇ ದೇವಾವರಕ್ಕೆ ಹೋದಳು. ಮಗನು ಆ ವಿದ್ಯೆಯಲ್ಲಿ ಪರಿಚಿತನಾದ ಮೇಲೆ ತಾಯಿಮಕ್ಕಳು ಊರಿನ ಒಂದೊಂದು ಕಡೆಗೆ ತಿರುಪೆ ಎತ್ತಲು ಹೋಗತೊಡಗಿದರು.

ಕೆಟ್ಟನು ದೊಡ್ಡವನಾದ;ದಷ್ಟಸುಸ್ವನಾಗಿ ಬೆಳೆದ. ಆಗ ಜನರೆಲ್ಲಾ ಅವನಿಗೆ ಭಿಕ್ಷೆ ಹಾಕುವುದನ್ನು ನಿಲ್ಲಿಸಿದರು. ಕಂಡವರೆಲ್ಲಾ 'ಕೆಲಸ ಮಾಡೋ ಮಾಣಿ, ಕೋಣನಂತೆ ಬೆಳೆದಿದ್ದೀಯೂ?' ಎನ್ನುವರು. ಇದರಿಂದ ಮಗನ ಸಂಪಾದನೆಯು ಮಾರ್ಗಕ್ಕೆ ಕಲ್ಲು ಬಿತ್ತು. ಆಗ ತಾಯಿಯು ಊರ ಸಪ್ಪೈಹಸ್ತರ ಕೈ ಕಾಲು ಹಿಡಿದು ಆ ಊರಿನ ಸಂತೆಯ ಬಳಿ ಇವನಿಗೊಂದು ಚಿಕ್ಕ ಹೋಟೆಲನ್ನು ಇಡಿಸಿ ಕೊಟ್ಟಳು. ಆ ಹೋಟೆಲಿನಲ್ಲಿ ಸಾವಿತ್ರಿಯೇ ಕಾಫಿ ತಿಂಡಿಗಳನ್ನು ಮಾಡುವಳು. ಕೆಟ್ಟನೆ ಸಪ್ಲೈ ಮಾಡುವವನು.

ಕೆಟ್ಟನ ಹೋಟೆಲು ಸಾಮಾನ್ಯ ಸ್ಥಿತಿಯಲ್ಲಿ ಸಾಗುತ್ತಿದ್ದುದರಿಂದ ಸಾವಿತ್ರಿಯು ತಿರುಪೆಯ ಕೆಲಸವನ್ನು ನಿಲ್ಲಿಸಿದಳು. ಒಂದು ದಿನ ಕೆಟ್ಟನ ಹೋಟೆಲಿಗೆ 'ಹಂಹರಿ' ಎಂದು ಒಬ್ಬ ಉಡಾಪಿನ ಪೋಲೀಸನು ಬಂದು 'ಜೋಳಿಗೆ ಕೆಟ್ಟಾ, ಒಂದು ಸ್ಟ್ರಾಂಗ್ ಕಾಫಿ ಮಾಡು' ಎಂದು ಆರ್ಡರ್ ಮಾಡಿದನು. ಕೆಟ್ಟನು ಮೆಹನತ್ತಿನಿಂದ ಕಾಫಿ ತಯಾರಿಸಿ ಪೋಲಿಸನ ಮುಂದಿಟ್ಟ. ಪೋಲಿಸನು ಅದನ್ನೆತ್ತಿ ಆರ್ಧ ಕುಡಿದ. ಉಳಿದರ್ಧವನ್ನು 'ಥೂ' ಎಂದುಗಿದು—'ಮಾಣಿ, ಇದು ನಿನ್ನ ಬೊಳುಂಬೇ?' ಎಂದು ಹಣದ ಬದಲಿಗೆ ಎರಡು ತಪರಾಕಿ ಏರಿಸಿ ನಡೆದು ಬಿಟ್ಟನು. ಕೆಟ್ಟನಿಗೆ ನೋವಿನೊಂದಿಗೆ ಅಪಮಾನವೂ ಆಯಿತು. ಅವನು ಅಂದು ಅಂಗಡಿಮುಚ್ಚಿ ಮನೆಗೆ ಬಂದು ಮಲಗಿ ಬಿಟ್ಟ.

(ಇಪ್ಪತ್ತೈದನೇ ಪುಟ ನೋಡಿರಿ)

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-೧

ಶ್ರೀ ಯ. ನಾ. ಉಡುಪ

ಕಣ್ಣೀರಿನ ಫಲ

ಸಾವಿತ್ರಿಗೆ ಅಂದು ಜನ್ಮಾಷ್ಟಮಿ ಮತ್ತು ಯುಗಾದಿ ಕೂಡಿಬಂದಂತಾಯಿತು. ಆಕೆ ಸಂಜೆ ಹಣ್ಣುಕಾಯಿ ಹಿಡಿದುಕೊಂಡು ದೇವ ಮಂದಿರಕ್ಕೆ ಹೋಗಿ ಎಂದಿನಂತೆ ಪ್ರದಕ್ಷಿಣೆ ಹಾಕಿ ಮಹಾದೇವನಿಗೆ ದಂಡನಮನ ಎರಗಿದಳು. ಆರ್ಚಕನು ಹಣ್ಣುಕಾಯಿ ಮುಗಿಸಿ ತೀರ್ಥ ಕೊಡಲು ಹೊರಬಂದರೂ ಸಾವಿತ್ರಿಯ ನಮಸ್ಕಾರ ಮುಗಿದಿರಲಿಲ್ಲ. ಅವನು ಗಾಬರಿಯಾಗಿ 'ಸಾವಿತ್ರಮ್ಮಾ' ಎಂದು ಕೂಗಿದನು. ಸಾವಿತ್ರಿಯಾದರೋ ನಿಶ್ಚಂದ! ನೀರವ! ನಿಶ್ಚೇತನ!

ಶ್ರೀ ಗೋಪಾಲಕೃಷ್ಣ ಹಗಡ, ಕೇರೀಮನೆ.

ಸಮಾಜ ಸುಧಾರಣೆಗೆ ಮಹಿಳಾಮಂಡಳಿಗಳ ಕೊಡುಗೆ

ಹೆಣ್ಣನ್ನು ಹೀನವೆಂದು ಕಾಣುವ ಕಾಲವೆಂದೋ ಮುಗಿದು ಹೋಯಿತು. ಆನಳಿಗೂ ಸಮಾನ ಅವಕಾಶ, ಸಮಾನಸ್ಥಾನ ಇಂದಿನ ಸಮಾಜರಚನೆಯಲ್ಲಿವೆ. ಗಂಡಿನ ಹೆಗಲಿಗೆ ಹೆಗಲು ಹಚ್ಚಿ ಮಹಿಳೆಯಿಂದ ಮುಡಿಯ ತೊಡಗಿರುವಾಗ ಮಹಿಳಾ ಸಂಘಟನೆಯಿಂದ ಸಾಧ್ಯ ವಿರುವ ಕಾರ್ಯವೇನೂ ಅಲ್ಪವಲ್ಲ.

ದೇಶದ ಜನಸಂಖ್ಯೆಯಲ್ಲಿ ಮಹಿಳೆಯರಿಗೆ ಸುಮಾರು ಸಮಪಾಲು. ಜನ ಸಾಮಾನ್ಯರ ಆರ್ಥಿಕ ಅಭಿವೃದ್ಧಿ ದೇಶದ ಅಭಿವೃದ್ಧಿಗೆ ಆವಶ್ಯಕವಾಗಿರುವ ಹಾಗೆಯೇ ಸಮಾಜ ಜೀವನದಲ್ಲಿ ಸುಧಾರಣೆಯೂ ಆಶ್ಚೇ ಅವಶ್ಯವಾದದ್ದಾಗಿದೆ. ಬದುಕಿನ ಮಟ್ಟ ಏರಿದ ಹಾಗೆಯೇ ಬದುಕುವಿಕೆಯ ಮಟ್ಟವೂ ಸಾಕಷ್ಟು ಎತ್ತರದ್ದಾಗಬೇಕು. ನಾಳಿನ ಭಾರತದ ನವಪೀಳಿಗೆತಯಾರಾಗುವ ಮನೆ ಮನೆಯೂ ಸುಧಾರಿಸಬೇಕು. ಮನೆಯ ಇರುವಿಕೆಯಲ್ಲಿ, ಆಚಾರ-ವಿಚಾರಗಳಲ್ಲಿ ಸಾಕಷ್ಟು ಹೊಸ ಪ್ರಜ್ಞೆ ಬೆಳೆದುಬಂದ ಹೊರತು ಹೊಸ ಜಗತ್ತಿನ ಕರೆಯನ್ನಾಲಿಸುವದು ಸಾಧ್ಯವಾಗಲಾರದು. ಇದಕ್ಕಾಗಿಯೇ ನಮ್ಮ ಸಮಾಜ ಜೀವನದ ಪುನಾರಾಚನೆ ಅಗತ್ಯವಿದ್ದೆನ್ನಿಸಿದೆ. ಮನೆ ಮನೆಯಲ್ಲಿಯೂ ಮೂತ್ರೆ, ಮಡದಿ, ಮಗಳು ಎಲ್ಲರೂ ಗಂಡಸರಂತೆಯೇ ಬೆಳೆಯುವ ಭಾರತದತ್ತ ಕಣ್ಣಿತ್ತಿ ನೋಡುವದು ಅನಿವಾರ್ಯ. ಹೆಣ್ಣು ಹೀನಳು ಎಂಬ ಹಳೆಯ ನಂಬಿಕೆಗಳು ಇನ್ನಿಲ್ಲದಾಗಿ ಹೆಣ್ಣೂ ಮನುಷ್ಯಳು—ಆವಳಿಗೂ ಗಂಡಸರಿಗಿರುವ ಹಾಗೆಯೇ ಆಸೆ ಆಕಾಂಕ್ಷೆಗಳು, ಭಾವನೆಗಳು ಇವೆಯೆಂಬುದನ್ನು ನಮ್ಮ ಸಮಾಜ ಒಪ್ಪಿಕೊಳ್ಳಲೇಬೇಕಾಗಿದೆ. ದೇಶ ಕೈಗೆತ್ತಿಕೊಂಡಿರುವ ಜನಪದ ಅಭಿವೃದ್ಧಿಯೋಜನೆಯಲ್ಲಿ ಅದಕ್ಕಾಗಿಯೇ ಸ್ತ್ರೀ ಶಿಕ್ಷಣ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ವಿಶೇಷ ಗಮನ ಪೂರೈಸಲಾಗಿದೆ.

ಈ ಯೋಜನೆ ಪ್ರಾರಂಭದ ಸ್ಥಿತಿಯಿಂದ ಇಂದಿನ ವರೆಗೆ ಅನೇಕ ಬಾರಿ ಅನೇಕ ವಿಧದ ಬದಲಾವಣೆಗಳನ್ನು ಹೊಂದುತ್ತ ಬಂದಿದೆ. ಆದರೆ ಎಲ್ಲ ಬದಲಾವಣೆಗಳ ಉದ್ದೇಶ ಒಂದೇ ಒಂದು ದೇಶದ ಮಾನವ ಮತ್ತು ಸಾದನಾ ಸಂಪತ್ತುಗಳನ್ನು ಸಜ್ಜುಗೊಳಿಸಿ ತನ್ಮೂಲಕ ದೇಶದ ಜನತೆಯ ಸರ್ವಾಂಗೀಣ ಉನ್ನತಿಗೆ ಜನತೆಯ ಸ್ವಯಂಪ್ರೇರಿತ ನೆರವು ಸಹಕಾರ ದೊರಕುವಂತೆ ಮಾಡುವದು. ಮಹಿಳೆಯರ ನಿತ್ಯ ಜೀವನದಲ್ಲಿ ಮಾರ್ಪಾಡು. ಆವರು ಸುಸ್ಥಿಂತರಾಗಿ ಬಾಳುವ ಅವಕಾಶ ಕಲ್ಪಿಸಿ ಕೊಡುವ ದಿಸೆಯಲ್ಲಿ ಸಾಧ್ಯವಿರುವ ಎಲ್ಲ ಪ್ರಯತ್ನಗಳ ಪ್ರಸ್ತಾಪನೆ ಈ ಯೋಜನೆಯೊಳಗೊಂಡಿದೆ.

ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಜನಪದ ಅಭಿವೃದ್ಧಿ ಯೋಜನೆಯ ಅಂಗವಾಗಿ ಸುಮಾರು ಹದಿನೆಂಟು ನೂರು ಮಹಿಳಾಮಂಡಳಿಗಳು ರಾಜ್ಯದಲ್ಲಿದ್ದವು. ಈ ಮಂಡಳಿಗಳಲ್ಲಿದ್ದ ಸದಸ್ಯರ ಸಂಖ್ಯೆ ಸುಮಾರು ಮೂವತ್ತೈದು ಸಾವಿರ. ಮೂರನೆಯ ಯೋಜನೆಯ ಅವಧಿಯಲ್ಲಿ ಈ ಕಾರ್ಯಕ್ರಮ ತ್ವರಿತಗೊಂಡು ೨೭೫೦ಕ್ಕು ಹೆಚ್ಚು ಮಹಿಳಾ ಮಂಡಳಿಗಳನ್ನು ರಾಜ್ಯದಲ್ಲಿ ಸ್ಥಾಪಿಸಲಾಯಿತು. ಇವುಗಳಲ್ಲಿ ಸುಮಾರು ಒಂಭಾವಿರ ಕ್ಕಿಂತ ಹೆಚ್ಚಿಗೆ ಸದಸ್ಯ ಸಂಪತ್ತಿತ್ತೆಂದು ತಿಳಿಯುತ್ತದೆ. ಈ ಅಂಕೆ ಸಂಖ್ಯೆಗಳಿಂದ ನಮಗೆ ತಿಳಿಯುವ ಸಂಗತಿಗಳು ಮುಖ್ಯವಾಗಿ ಎರಡು-ಒಂದನೆಯದಾಗಿ ಮಂಡಳಿಗಳ ಸ್ಥಾಪನೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಜನತೋರಿದ ಆಸಕ್ತಿ. ಎರಡನೆಯದಾಗಿ ಮಂಡಳಿಗಳ ಯಶಸ್ವೀ ಕಾರ್ಯ ಯೋಜನೆಗಳಿಂದಾಗಿ ಆದಕ್ಕೆ ಲಭಿಸಿದ ಅಪಾರ ಜನಪ್ರಿಯತೆ

ಗ್ರಾಮಾಂತರ ಪ್ರದೇಶಗಳಲ್ಲಿಯ ಜನ ಮಹಿಳಾ ಮಂಡಳಿಗಳ ಸ್ಥಾಪನೆಗೆ ವಿಶೇಷ ಪ್ರೋತ್ಸಾಹ ಆದರಲ್ಲಿಯೂ ಮಹಿಳೆಯರು ವಿಶೇಷ ಉತ್ಸಾಹ ಆಸಕ್ತಿ ಹೊಂದಿದುದು ಕಂಡು ಬರುತ್ತದೆ. ಕಾರಣವಿಷ್ಟೇ . ಬಾಹ್ಯ ಜಗತ್ತನ್ನು ಬಿಚ್ಚುಗಣ್ಣಿನಿಂದ ನೋಡುವ ಆಸೆ. ಲವಲವಿಕೆ. ಮಹಿಳಾ ಮಂಡಳಿಗಳು ಗ್ರಾಮೀಣ ಮಹಿಳೆಯರ ಜೀವನದಲ್ಲಿ ಹೊಸ ಕ್ರಾಂತಿಯನ್ನೇ ಆರಂಭಿಸಿದವು ಎನ್ನಲಡ್ಡಿಯಿಲ್ಲ.

ಮಹಿಳಾ ಮಂಡಳಿಗಳು ಆಳವಡಿಸಿಕೊಳ್ಳಬಹುದಾದ ಕಾರ್ಯಕ್ರಮಗಳ ಕುರಿತು ಸ್ವಲ್ಪ ವಿವೇಚಿಸೋಣ. ಗ್ರಾಮ ನೈರ್ಮಲ್ಯದ ಬಗ್ಗೆ ಚರ್ಚಿಸಿ ಕಾರ್ಯಕ್ರಮ ರೂಪಿಸಬಹುದು. ಹೊಲಿಗೆಯ ವರ್ಗಗಳನ್ನು ನಡೆಯಿಸಿ ಹೊಲಿಗೆ ಕಲಿಯುವ ವಿದ್ಯಾರ್ಥಿನಿಯರಿಗೆ ಅವಕಾಶ ಒದಗಿಸಬಹುದು. ಗೃಹ ಕೈಗಾರಿಕೆಗಳನ್ನು ಕಲಿಸುವ ವಿಷಾರ್ಡು ಮಾಡಬಹುದು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನೇರ್ಪಡಿಸಿ ಊರಿನ ಜನಕ್ಕೆಲ್ಲ ಮನೋರಂಜನೆ ಒದಗಿಸುವ ಜತೆಗೆ ತಮ್ಮಲ್ಲಿರುವ ಪ್ರತಿಭಾಪ್ರಕಾಶನಕ್ಕೂ ಅವಕಾಶ ಮಾಡಿಕೊಳ್ಳಬಹುದು. ಜಾನಪದ ಸಾಹಿತ್ಯ ಸಂಗ್ರಹ ಕಾರ್ಯ ಕೈಗೊಳ್ಳಬಹುದು. ಮಕ್ಕಳ ಮನೆ ಪಾಲನೆಗಳ ವಿಷಯ ಚರ್ಚಿಸಿ ಮಾಹಿತಿ ಮೂಡಿಕೊಳ್ಳಬಹುದು— ಮಾಡಿಕೊಡಬಹುದು. ಇದೂ ಅಲ್ಲದೆ ಮಹಿಳೆಯರ ಭಾವನೆಗೆ ತೀರ ಸನಿಃಪದ ಅರಸಿನ. ಕುಂಕುಮ ಕಾರ್ಯಕ್ರಮ, ಭಜನೆ, ಸಂಪ್ರದಾಯದ ಹಾಡುಗಳ ಗೋಷ್ಠಿಗಳ ಕಾರ್ಯಕ್ರಮವನ್ನಿಟ್ಟುಕೊಂಡು ಜನಜಾಗೃತಿಯ ಕಾರ್ಯ ಕೈಗೊಳ್ಳಬಹುದು. ಕೇವಲ ಇದಿಷ್ಟೇ ಎಂತಲ್ಲ—ಮಹಿಳೆಯರ ಮನಸ್ಸಿಗೆ ಆಧುನಿಕ ಸಂಸ್ಕಾರ, ನವ ಪ್ರಪಂಚದ ಕರೆಗೆ ಒಗೊಡಬಲ್ಲ ಧ್ವನಿ ಒದಗಿಸಲು ಸಾಧ್ಯವಾಗುವಂತಹ ಅನೇಕ ಕಾರ್ಯಕ್ರಮಗಳನ್ನಿಟ್ಟುಕೊಂಡು ಅವುಗಳ ಪ್ರಯೋಜನವನ್ನು ಎಲ್ಲ ಮಹಿಳೆಯರಿಗೆ ಒದಗಿಸಿ ಕೊಡಬಹುದು. ಇಂದಿನ ಅನಿವಾರ್ಯವಾದ ಆವಶ್ಯಕತೆ ಎಂದೆನಿಸಿದ ಕುಟುಂಬ ಯೋಜನೆಯ ಕುರಿತಾದ ಸರಿಯಾದ ಮಾಹಿತಿ, ಪ್ರಚಾರ ಕಾರ್ಯ ಕೈಕೊಂಡು ಗ್ರಾಮೀಣ ಮಹಿಳೆಯರು ಮನಃಪೂರ್ವಿಯವುವ ತೆರದಲ್ಲಿ ಸುಸಂಘಟಿತವಾದ ಕಾರ್ಯಕ್ರಮ ಹಾಕಿಕೊಳ್ಳಬಹುದು. ಗ್ರಾಮಾಂತರ ಪ್ರದೇಶಗಳಲ್ಲಿರುವ ಮಹಿಳಾ ಮಂಡಳಿಗಳು ಆದರಲ್ಲಿರುವ ಊರಿನ ಮಹಿಳೆಯರೇ ಮಾಡುವ ಪ್ರಚಾರ, ನೀಡುವ ಮಾಹಿತಿ, ಒದಗಿಸಿ ಕೊಡುವ ಅನುಕೂಲತೆಗಳು ನಿಸ್ಸಂದೇಹವಾಗಿ ಪರಿಣಾಮಕಾರಿಯೂಗಿರುತ್ತವೆ ಎನ್ನುವದು ಎಲ್ಲರೂ ಒಪ್ಪತಕ್ಕ ಸಂಗತಿ. ಮಹಿಳಾಮಂಡಳದ ಸದಸ್ಯೆಯರು, ಸದಸ್ಯರಲ್ಲದ ಮಹಿಳೆಯರು ಎಲ್ಲರೂ ದೇಶದ ಈ ಮಹಾನ್ ಕಾರ್ಯದಲ್ಲಿ ನೆರವು ನೀಡಬೇಕಾದ ಅವಶ್ಯಕತೆಯಸ್ಸಂತೂ ಬೇರೆ ಒತ್ತಿ ಹೇಳಬೇಕಲ್ಲ.

ಆಹಾರ ತುಟಾರ್ಗತೆಯ ಇಂದಿನ ದಿನಗಳಲ್ಲಿ ಸಹ ಗ್ರಾಮ ಪ್ರದೇಶಗಳಲ್ಲಿ ವಿಶೇಷವಾಗಿ ಮಹತ್ವವನ್ನರಿಯದೆ ಅವಶ್ಯಯ ನಡೆಸುವದು ನಡೆದೇ ಇದೆ. ಬೆಳೆದ ಬೆಳೆ ಬೇಕು ಬೇಕಾದಂತೆ ಬಳಸಲ್ಪಡುವದಕ್ಕಿಂತಲೂ ಬೇಕಾದಷ್ಟೇ ಬಳಕೆಯೂಗುವದು ಒಳ್ಳೆಯದು ಮತ್ತು ಹಿತಕರ ಮಿತವ್ಯಯದ ಪಾಠವನ್ನು ಮಹಿಳೆಯರಿಗೆ ಕಲಿಸಲು ಮಹಿಳಾ ಮಂಡಳಿಗಳು ಉತ್ತಮವಾದ ಕಾರ್ಯಕ್ರಮ ಹಾಕಿಕೊಂಡು ಕಾರ್ಯೋನ್ಮುಖವಾಗಬಹುದಾಗಿದೆ. ಹೆಚ್ಚು ಗಳಸಬೇಕು ಎನ್ನುವಂತೆಯೇ ಹೆಚ್ಚು ಉಳಸಬೇಕು ಎನ್ನುವದು ನವಯುಗದ ಕರೆ. ಸುಖೀ ಸಂಸಾರ ಬಯಸುವ ಗೃಹಿಣಿಗೆ ಮಹಿಳಾ ಮಂಡಳ ಒಂದು ಶಾಲೆಯಿದ್ದ ಹಾಗೆ. ತನಗೆ ತಿಳಿಯದ ವಿಷಯಗಳ ಕುರಿತು ಜ್ಞಾನ ಸಂಪಾದನೆ ಮಾಡಿಕೊಳ್ಳಲು ಒಳತನ್ನು ಕೇಳಿಕೊಳ್ಳಲು ಜ್ಞಾನದೇಗುಲವಿದ್ದ ಹಾಗೆ. ಮಹಿಳಾ ಮಂಡಳಗಳ ಯಶಸ್ಸು ಆಮ ಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿಯೇ ಆಗಲಿ-ಪಟ್ಟಣಗಳಲ್ಲೇ ಆಗಲಿ ಮಹಿಳೆಯರ ಬೌದ್ಧಿಕ ವಿಕಾಸವನ್ನೇ ಅವಲಂಬಿಸಿದೆ. ಮಹಿಳೆಯರ ಈ ವಿಕಾಸ ಮಹಿಳಾ ಮಂಡಳಗಳನ್ನು ಅವಲಂಬಿಸಿ ಇದೆ ಎಂದರೆ ತಪ್ಪೇನೂ ಆಗಲಾರದಷ್ಟೇ!

ನಮ್ಮ ದೇಶ ಎಂದರೆ ನಮ್ಮಲ್ಲಿಯ ಅ ಸಂಖ್ಯಾತ ಹಳ್ಳಿಗಳು—ಹಳ್ಳಿಗಳಲ್ಲಿವಾಸಿಸುವ ಜನಕೋಟಿ. ಗ್ರಾಮಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ. ಹಳ್ಳಿ ಹಳ್ಳಿಯಲ್ಲಿಯೂ ಸುಧಾರಣೆಯ ನವ ಜಾಗೃತಿ ಮೂಡಿ ಬರಬೇಕಾದ ಈ ದಿನಗಳಲ್ಲಿ ಮಹಿಳಾ ಮಂಡಳಿಗಳ ಕೊಡುಗೆಯೇನೂ ಸಣ್ಣದಲ್ಲ. ಹೆಣ್ಣನ್ನು ಹೀನ ಎಂದು ಕಾಣುವ ಕಾಲ ಎಂದೋ ಮುಗಿದುಹೋಯಿತು. ಅವಳಿಗೂ ಸಮಾನ ಅವಕಾಶ, ಸಮಾನ ಸ್ಥಾನ ಇಂದಿನ ಸಮಾಜ ರಚನೆಯಲ್ಲಿಂದು ನಾವು ಕಾಣುತ್ತಿದ್ದೇವೆ. ಗಂಡಿನ ಹೆಗಲಿಗೆ ಹೆಗಲು ಹಚ್ಚಿ ಮಹಿಳೆಯಿಂದು ದುಡಿಯತೊಡಗಿರುವಾಗ ಮಹಿಳಾ ಸಂಘಟನೆಯಿಂದ ಸಾಧ್ಯವಿರುವ ಕಾರ್ಯ ಅಲ್ಪವೇನೂ ಅಲ್ಲ ಎಂಬುದು ನಾವೆಲ್ಲ ನೆನಪಿಡಬೇಕಾದ ಸಂಗತಿ. ●

ಗಣರಾಜ್ಯ ದಿನದ ಹಾರ್ದಿಕ ಶುಭಾಶಯಗಳು !

ಶ್ರೀ ಕೃಷ್ಣ ಜ್ಯುವೆಲರಿ ಮಾರ್ಟ್

ತೆಂಕಪೇಟೆ, ಉಡುಪಿ. ಫೋನ್: 366

ಉತ್ತಮ 22ct ಶಾತ್ರಿ ಚಿನ್ನದ ಆಭರಣಗಳನ್ನು ಮತ್ತು ಬೆಳ್ಳಿಯ ಯಾವತ್ತೂ ಒಡವೆಗಳನ್ನು ಶಾತ್ರಿಯಾಗಿ ಪುನಸ್ಸಿಗೆ ಒಪ್ಪುವಂತೆ ತಯಾರಿಸಿ ಕೊಡುತ್ತೇವೆ. ವಿವಿಧ ಮಾದರಿಯ ಪವನು ಬಂಗಾರದ ನೆಕ್ಲೆಸ್, ಬಳೆ, ಉಂಗುರ, ಬೆಂಡೋಲೆ, ಜೊಟ್ಟು, ಟಿಕ್ಕಿ, ಬೇಸಿರಿಗಳು, ಕರಿಮಣಿ, ಲಕ್ಷ್ಮೀತಾಳಿ, ತರವಾರು ಪೆಂಡೆಂಟು.

● ಇಂದೇ ನಮ್ಮ ಶೋರೂಮನ್ನು ಸಂದರ್ಶಿಸಿರಿ ●

ಶ್ರೀ ಕೃಷ್ಣ ವೆರ್ಕಾಟಿ ಸ್ಟೋರ್ಸ್

ತೆಂಕಪೇಟೆ, ಉಡುಪಿ. ಫೋನ್: 366

ರೇಡಿಯೋ ಮತ್ತು ಟ್ರಾನ್ಸಿಸ್ಟರುಗಳು, ಫ್ಯಾನುಗಳು, ಸ್ಟೀಲು ಕವಾಟು, ಸೋಫಾ ಕಂಬೆಡ್, ಹೊಲಿಗೆ ಯಂತ್ರಗಳು, ಗಡಿಯಾರಗಳು, ಎಲ್ಲಾ ತರದ ಸ್ಟೆಯಿನ್‌ಲೆಸ್ ಸ್ಟೀಲಿನ ಪಾತ್ರೆಗಳು, ಉಡುಗೊರೆಯ ಸಾಮಾನುಗಳು, ಟೇಪ್‌ರೆಕೋರ್ಡು ಇನ್ನೂ ಹಲವಾರು ತರದ ಸಾಮಾನುಗಳಿಗಾಗಿ

ಇಂದೇ ಸಂದರ್ಶಿಸಿರಿ !

ಜಾತ್ರೆಯ ಸಲುವಾಗಿ ಸ್ಪೆಶಲ್ ರಿಯಾಯಿತಿ ದರದಲ್ಲಿ ನೂರಾಟ ಮಾಡುತ್ತೇವೆ.

ಮ್ಯಾನೇಜರು : ಯು. ರಾಘವೇಂದ್ರಕೃಷ್ಣ ಭಟ್

ಹರಿದಾಸರ ಕೃತಿಗಳಲ್ಲಿ ಪ್ರಾಸರಾಹಿತ್ಯವೇಕೆ?

—ವಿದ್ವಾನ್ ಶ್ರೀ ಕೆ. ವೆಂಕಟರಾಯಾಚಾರ್ಯ

ಯತಿ ವಿಲಂಘನ ಕನ್ನಡದ ಅಸಾಧಾರಣ ಗುಣಗಳಲ್ಲಿ ಒಂದು. ಆಂದರೆ ಕನ್ನಡಿಗರು ಪ್ರಾಸಕ್ಕೆ ಹೆಚ್ಚು ಗಮನ ನೀಡಿದ್ದರು. ಆದರೆ, ದಾಸರ ಕೀರ್ತನೆಗಳಲ್ಲಿ ಪ್ರಾಸರಾಹಿತ್ಯವೇಕೆ? ಈ ಪ್ರಶ್ನೆಗೆ ಸಮರ್ಪಕ ಉತ್ತರವಿಂದು ಬೇಕಾಗಿದೆ.

ಸಾಹಿತ್ಯ ಮತ್ತು ಸಂಗೀತಗಳೆರಡು—ಜ್ಞಾನಾಧಿ ದೇವಿಯ (ಸರಸ್ವತಿಯ)—ಹಾಲೂಡುವ-ಸವಿಯಲಾಗುವ—ಬೋಲೆಗಳೆರಡೆಂದು ಸಂಸ್ಕೃತದಲ್ಲಿ ಸೂಕ್ತಿಯಿದೆ. ಹಾಗೆಂದರೆ ಸಾಹಿತ್ಯ ಸಂಗೀತಗಳೆಂಬವು ಅಲೌಕಿಕಾನಂದವನ್ನು ಒದಗಿಸಲು ಸನೂನಗಳಾಗಿ ಇಲ್ಲಿ ಪರಿಗಣಿಸಲಾಗಿವೆ. ಸಾಹಿತ್ಯಕೃತಿಗಳಲ್ಲಿ ಛಂದೋವೃತ್ತಿಗಳು ವಿವಿಧ ರೀತಿಯಲ್ಲಿದ್ದರೂ, ಆಯಾ ಭಾವಾನುಗುಣವಾಗಿ ಕೆಲವು ವಿಶೇಷತಃ ಬಳಕೆ ಗೊಂಡಿವೆ; ಅಂತೆ, ಇವನ್ನು ಆ ಬೇರೆ ಬೇರೆ ಭಾವಗಳಿಗೆ ತಕ್ಕಂತಹ ರಾಗಾಲಾಪಗಳಿಂದ ಹೇಳಿದರೇನೇ ಸೊಗಸೆಂದು ಹೇಳಿದಂತಾಯಿತು: ಗೋಪೀ ಗೀತೆ, ವೇಣುಗೀತೆ, ಭ್ರಮರ ಗೀತೆ ಇತ್ಯಾದಿಗಳಲ್ಲಿ ತುಸು ಶೃಂಗಾರವೂ; ಹೆಚ್ಚು ದುಃಖವೂ ಬೆರೆಸಿದೆಯೆಂಬುದು ಇಲ್ಲಿ ಗಮನೀಯವಿದೆ! ಸುಳಾದಿ ಉಗಾಭೋಗ, ಗುಂಡಕ್ರಿಯೆಗಳಲ್ಲಿ ಬೇರೆ ಭಾವಗಳಿವೆ; ಬೇರೆ ರಾಗ ಧಾಟಿಗಳವೆಯೆನ್ನಲಡ್ಡಿಯಿಲ್ಲ. ಆಂತೆ, ಸಂಗೀತ ಕೃತಿಗಳಲ್ಲಿ ಪ್ರಾಧಾನ್ಯತಃ ಗೇಯ (ನಾದ) ವಿರುವಂತೆ ಸಾಹಿತ್ಯವೂ ಇರಲೇ ಬೇಕಾದ ಅಂಗವಾಗಿದೆ. ಆವೊಂದು ಸಾಹಿತ್ಯ (ಕಥನ-ವಾಚನ) ವಿಲ್ಲದೆ, ಸಂಗೀತ (ಗಾಯನ) ಮುನ್ನಡೆಯಲಾಗದೆಂಬುದು ಸರ್ವವಿದಿತವಾಗಿದೆ. ಕೆಲವೆಡೆಯಲ್ಲಿ ಹಾಡುಗಾರರು (ಹಾಗೂ ಇತರರು) 'ರಾಗವೇ ರಸ, ಪದ ಕಸ'ವೆಂದು ಪರಿಗಣಿಸಿದಂತಿದೆ. ಕೆಲವೊಂದು ಪದ್ಯ ಕೃತಿಗಳನ್ನು ಹೇಳುವಾಗ ಸಾಹಿತ್ಯದತ್ತ ಸ್ವಲ್ಪವೂ ಗಮನಿಸದಿರುವುದುಂಟು. ಇದರಿಂದಾಗಿ, ಅವರ ಸಂಗೀತ ಕಚೇರಿಯು ಆ ಭಾಸಕರವಾಗಿಲೆಡೆಯಿದೆ. ಸಾಹಿತ್ಯದ ವೈಶಿಷ್ಟ್ಯದತ್ತ ತುಸು ಗಮನಿಸಿ, ಸಂಗೀತದ ಪ್ರಾಧಾನ್ಯದಿಂದ ಸಾಗಿಪರೇನೇ, ಈ ಉಭಯ ಕೂಟಗಳಿಂದಾಗಿ ರಸಿಕನಿಗೆ ಪರಮಾಹ್ಲಾದಕರವಾಗಲಡ್ಡಿಯಿಲ್ಲ! 'ವಾಗ್ಮಿ ಸರ್ವಂ ಪ್ರತಿಷ್ಠಿತಂ' ಎಂದು 'ನಾಟ್ಯ ಶಾಸ್ತ್ರ ಕಾರೆ'ನಾದ ಭರತ ಮುನಿಯೆಂದುದು ಗಮನೀಯ! ಸಾಹಿತ್ಯಕಾರನಿಗೆ ತುಸ ಸಂಗೀತದ ಅರಿವಿರಬೇಕು; ಸಂಗೀತಕಾರನಿಗೆ ತುಸ ಸಾಹಿತ್ಯದ ತಿಳಿವಿರಬೇಕು ಎಂಬುದೇ ಇಲ್ಲಿ ಮಥಿತಾರ್ಥ!

ಈ ಮೇರೆಗೆ, ಪ್ರಾಚೀನದ ಹರಿದಾಸರ ಕೃತಿಗಳನ್ನು ವಿವಿಧ ರಾಗ-ತಾಳಗಳಿಂದ ಹಾಡಿ, ಹಾಡಿಸಿ, ಆನಂದಿಸಲು ತಕ್ಕಂತೆ ಸ್ವರ ಮಂಡಲಗಳನ್ನು ಬರೆದು ಪ್ರಕಟಿಸಿದ ಕೆಲವು ಪುಸ್ತಕಗಳು ಕನ್ನಡದಲ್ಲಿ ಬಂದಿವೆ. ಅಂತಹ ಸಂಕಲನಗಳಲ್ಲಿ ಕೇವಲ ಗಾಯನ ಕ್ರಮಗಳು ಮಾತ್ರವಲ್ಲ, ಗೇಯ ಕೃತಿಗಳ ಸಾಹಿತ್ಯವೂ ಶುದ್ಧವಾಗಿರಬೇಕೆಂದು ಬಯಸಿದರೆ ತಪ್ಪಾಗದು! ಪ್ರಸ್ತುತ, ಶ್ರೀ ಸಂಗೀತ ಭೂಷಣ ಎಚ್. ಕೆ. ಅಶ್ವತ್ಥನಾರಾಯಣ ಶಾಸ್ತ್ರಿಯವರು ಸ್ವರಾವಳಿಗಳನ್ನು ಅಳವಡಿಸಿದ ಪುರಂದರದಾಸರ 105 ಕೀರ್ತನೆಗಳ ಪುಸ್ತಕ (1957ರಲ್ಲಿ ಅಚ್ಚಾದುದು) ಓದುತ್ತಿರುವಾಗ, ನನಗೆ ತೋರಿದ ಕೆಲವು ಪ್ರಾಸರಾಹಿತ್ಯಗಳ ವಿಚಾರವಿಲ್ಲಿ ಬರೆಯಲಾಗಿದೆ. (ಉಡುಪಿ, ಬೆಂಗಳೂರು, ಹೈದರಾಬಾದುಗಳಲ್ಲಿ ಸಾಮಾನ್ಯವಾಗಿ ಹೆಲವು ಹರಿದಾಸರ ಕೃತಿ ಸಂಕಲನಗಳು ಪ್ರಕಟವಾಗಿವೆ; ಇವಲ್ಲೂ ಕೆಲವೆಡೆ ಇಂತಹ ಪ್ರಾಸವಿಲ್ಲದ-ದ್ವಿತೀಯಾಕ್ಷರ ನಿಶ್ಚಿತವಿಲ್ಲದ-ಪದ್ಯಗಳಿವೆ) ಆದರೆ, ಹರಿದಾಸರ ಪದ್ಯಗಳಲ್ಲಿ ಕೆಲವನ್ನು ನೂತ್ರ ಆರಿಸಿ, ಸ್ವರಾವಳಿಯ ಹೊಂದಿಕೆಗೆಳೆಸುವಲ್ಲಿ; ಪ್ರಾಸಾದಿ ಶುದ್ಧರೂಪದವುಗಳನ್ನೇ ಈ ಅಭ್ಯಾಸುಗಳ ಕೈಪಿಡಿಯಲ್ಲಿ ನಮೂದಿಸ ಬಹುದಿತ್ತು; ಆದರಿಂದ ಅಭ್ಯಾಸುಗಳಿಗೂ ಶ್ರಾವಕರಿಗೂ ಸ್ವೇಚ್ಛವಾದ ಸಾಹಿತ್ಯ ಸಂಗೀತಗಳೆರಡೂ ದೊರೆತಂತಾಗುತ್ತಿತ್ತು ಎಂದು ನಮಗೆನ್ನಿಸುತ್ತದೆ!

ಪುರಂದರ ದಾಸರ ಹೆಸರನ್ನು ತ್ಯಾಗರಾಜರು ಉಲ್ಲೇಖಿಸಿದ್ದಾರೆ. ಆದರೆ, ಮೂಲತಃ ಆವೆಲ್ಲಾ ಕೃತಿಗಳ ಕರ್ತೃತ್ವ ವಿಚಾರ, ಪರಿಶುದ್ಧತೆಯ ಬಗೆ, ರಾಗತಾಳಗಳ ಉಚಿತತೆಗಳನ್ನೂ; ಸಾಹಿತ್ಯ ವಿಭಾಗದತ್ತ ವೈಶಾಲ ದೃಷ್ಟಿಯನ್ನೂ ಪರಿಗಣಿಸಿಯೇ ಬಲ್ಲವರು ಈ ತರದ ಸ್ವರಾವಳೀ ಸಂಯೋಜನ ಪ್ರಸಾರಣೆಗೆಳಿಸಿದರೇನೇ ಉಪಕಾರವೆಂದು ಬಗೆದು, ಈ ಬರೆಹಕ್ಕೆಳಸಿದೆ. ಈ ಬಗೆಗೆ ಬಲ್ಲವರು ತಕ್ಕ ಸಮಾಧಾನಗಳನ್ನು ಪ್ರಕಟಿಸಿದರೆ ಸಹಕಾರವಾದೀತು!

[ಪ್ರಾಚೀನರ ಕೃತಿಗಳಲ್ಲಿ ಆದಿ ಪ್ರಾಸವೇ ಪ್ರಾಮುಖ್ಯವಿದೆ. ಕೆಲವೆಡೆ ಮಧ್ಯಪ್ರಾಸ, ಅಂತ್ಯ ಪ್ರಾಸವಿದೆ ಹರಿದಾಸರ ಕೃತಿಗಳಲ್ಲಿ ಆದಿಪ್ರಾಸವೇ ಪ್ರಾಧಾನ್ಯವೆಂದು ಹಲವು ಕೃತಿಗಳಿಂದ ವಿದಿತವು. ಆಂದ ಮೇಲೆ, ಈ ಕೃತಿ ಸಂಕಲನದಲ್ಲಿ, 'ಪುರಂದರ ದಾಸ ಕೀರ್ತನ ಸ್ವರಾವಳಿ' ಯಲ್ಲಿ ಸಂಕಲಿತ ಪದ್ಯದಲ್ಲಿ ಈ ಆದಿ ಪ್ರಸಾರವಿಲ್ಲದಿರುವುದಕ್ಕೆ ಕಾರಣವೇನು? ಶಾಸ್ತ್ರೀಯ ರಾಗ ದಾಟಿ ಸ್ವರ ಸಂದರ್ಭಗಳನ್ನು ಅಳವಡಿಸಲೆಂದೇ ಆರಿಸಿದ ಈ ಪದ್ಯಗಳಲ್ಲಿ (ಬೇರೆ ಪ್ರತಿಗಳಲ್ಲಿ ಹೇಗಿವೆಯೋ ನೋಡಿಲ್ಲ. ಆಬಗೆ ಇನ್ನೊಮ್ಮೆ ನೋಡಬೇಕಾಗಿ ಸದ್ಯಃ ಇದೊಂದು ಪ್ರತಿಯನ್ನು ಆರಿಸಿದೆ.) ಹೀಗಿದ್ದರೆ ಇದೇ ಸಾಧುವೆಂದು ಬೇರೆಡೆ ಹೀಗಿದ್ದರೂ ಸಾಧುವಲ್ಲೆಂದು ಜನತೆ ತಿಳಿಯಲೆಡೆಯಿದೆ. ಆ

(ಇಪ್ಪತ್ತಮೂರನೇ ಪುಟ ನೋಡಿರಿ)

ಕರ್ಣಾಟಕ ಬ್ಯಾಂಕ್

ವಿಸ್ತರಣಾ ಕಾರ್ಯದಲ್ಲಿ ಅತೀವ ಗತಿಯಿಂದ
ಇದೀಗ ಸಾಗುತ್ತಿರುವ ನಿಮ್ಮ ನೆಚ್ಚಿನ ಬ್ಯಾಂಕಿಂಗ್ ಸಂಸ್ಥೆ

ನಮ್ಮ **109** ಶಾಖೆಗಳು

ನಗರ, ಉಪನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ
ಕೃಷಿ, ಕೈಗಾರಿಕೆ, ಸಣ್ಣ ಉದ್ದಿಮೆ, ಗ್ರಾಮೋದ್ಯೋಗಗಳಿಗೆ ಅಧ್ಯತೆ ಕೊಟ್ಟು ನೆರವು ನೀಡುವವು.

ನಿರಖು ಠೇವಣಿಗಳಿಗೆ ಸಾ. ಸೇ. 7½% ವರೆಗೆ ಬಡ್ಡಿ ತೆರುತ್ತೇವೆ.

ಅತ್ಯಧಿಕ ಬಡ್ಡಿ ಗಳಿಕೆಯ ಠೇವಣಿಗಳ ವಿವಿಧ ಯೋಜನೆಗಳು

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
ಇಂದೇ ನಿಮ್ಮ ಸಮೀಪದ ಶಾಖೆಯನ್ನು ಸಂದರ್ಶಿಸಿರಿ.

ಕರ್ಣಾಟಕ ಬ್ಯಾಂಕ್ ಲಿಮಿಟೆಡ್

(ರಿ. ಆಫೀಸು: ಮಂಗಳೂರು—3)

ಕಣ್ಣಿಗೆ ತಂಪು, ಹೃದಯಕ್ಕೆ ಶಾಂತಿ

ಯುಗಾಂತರ ಖ್ಯಾತಿಯ ಸುಬ್ರಹ್ಮಣ್ಯ ಕ್ಷೇತ್ರ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುತ್ತೂರು ಪಟ್ಟಣಕ್ಕೆ ಒಂಭತ್ತು ಮೈಲಿ ಇದರ ಮೊದಲು-ಹಳೆಯ ಹೆಸರು ಕುಕ್ಕೆ ಪಟ್ಟಣ ಪ್ರಾಚೀನ ಕಾಲದಲ್ಲಿ ಇದು ಹಲವಾರು ದೇವರ್ಷಿಗಳ ತಪೋಭೂಮಿ ಆಗಿರುವುದರಿಂದ ಪ್ರತಿಷ್ಠಿತವಾದ ನೂರಾರು ಲಿಂಗಗಳ ಪುಣ್ಯ ಭೂಮಿ ಎನ್ನಿಸಿ ಒಂದು ಕುಕ್ಕೆಯಲ್ಲಿ ಹಾಕಿಟ್ಟಿದ್ದರಿಂದ ಈ ಹೆಸರು ಬಂತೆಂದು ಪ್ರತೀತಿ

ತಾಯಿ ಮಕ್ಕಳನು ರಕ್ಷಿಸಿದಳು

ಸಾಂವರ್ತಕ ಕಲ್ಪದಲ್ಲಿ ಕದ್ರು ಮತ್ತು ವಿನತೆಯರ ನಡುವೆ ವಿವಾದ ಒಂದು-ಎಂದು ಕುದುರೆಯು ಬಣ್ಣದ ವಿಷಯದಲ್ಲಿ ಕದ್ರು ಆ ಒಣ್ಣ ಕರಿದಂದರೆ ವಿನತೆ ಬಿಳಿದಂದಳು ಸೋತವರು ಗೆದ್ದವರಿಗೆ ದಾಸಿಯಾಗಿರಬೇಕೆಂಬ ಶರ್ತ ಬೇರೆ ತನ್ನ ಕಂದಗೆ ಸ್ಪಷ್ಟವೆಂಬ ಇಚ್ಛೆಯಿಂದ ಕದ್ರು ತನ್ನ ಮಕ್ಕಳು ಸರ್ಪಗಳಿಗೆ ತಲ್ಲಣ ಮೂಡಿದಳು ತಾಯಿ ಮಾತನ್ನು ನಡೆಸಿಕೊಡಲು ಮಕ್ಕಳು ನಿರಾಕರಿಸಿದಾಗ ಕ್ರುದ್ಧಳಾಗಿ ನೆಕ್ಕಿಗೇರಿ, ನಿಮ್ಮ ಕುಲ ನಾಶವಾಗಲೆಂದು ಶಪಿಸಿದಳು.

ಕಶ್ಯಪರು ಕಳಿಸಿಕೊಟ್ಟರು

ರಾಜ ಸುಳ್ಳಾಗಲೆಲ್ಲ ಸರ್ಪಾಹುತಿ ಯಜ್ಞ ಸಮಾಪ್ತಿಯ ನಂತರ ಜನಮೇಜಯನು ಸರ್ಪಯಾಗ ಮಾಡಿದನು ಆಗ ಎಲ್ಲೆಲ್ಲೋ ಸರ್ಪಗಳು ನಿರಾಶ್ರಯವಾದವು ಎನ್ನುವ ವನ್ನು ಗರುಡನು ತಿಂದು ತೇಗಿದನು ಸರ್ಪರಾಜ ವಾಸುಕಿಯನ್ನೂ ಗರುಡ ಬಿಡಲಿಲ್ಲ. ಆತನ ಸುದ್ದಿವಿದಿಂದ ಕಶ್ಯಪರು ಬಂದು ಜೀವಪುಳಿಸಿದರು ಬಳಿಕ ತಪಸ್ಸಾದ್ರಿಯ ಪ್ರಸಿದ್ಧ ಪುಣ್ಯಾಶ್ರಮ ಶ್ರೀ ಸುಬ್ರಹ್ಮಣ್ಯಕ್ಕೆ ಅವನನ್ನು ಕಳಿಸಿದರು. ಇಲ್ಲಿ ನಲ ನಿಂತ ಸರ್ಪರಾಜನು ತನ್ನ ತಪೋ ಬಲದಿಂದ ಪರಮೇಶ್ವರನನ್ನು ಪ್ರಸನ್ನೀಕರಿಸಿಕೊಂಡನು ಪರಗಳನ್ನು ಪರಿಗ್ರಹಿಸಿ ಸತಿ-ಸುತ ಸಮೇತನಾಗಿ ಈ ಕ್ಷೇತ್ರದಲ್ಲಿ ವಾಸ ಮಾಡತೊಡಗಿದನು ಆದಿ ಸುಬ್ರಹ್ಮಣ್ಯವೇ ವಾಸುಕಿಯು ನಲೆ

ಸುಬ್ರಹ್ಮಣ್ಯನ ಅವತಾರ

ತನ್ನ ವಿಲಾಸ—ವಿಭ್ರಮಗಳಿಂದ ತ್ರಿಭುವನ ಸುಂದರಿ ಮೊಯ್ಯುು ಕಶ್ಯಪರನ್ನು ವೇಷಗಳಿಸಿದಳು ಆಕೆಗೆ ತಪೋಬಲದ ಪ್ರಭಾವದಿಂದ ಸಿಂಹಶಕ್ತಿ ಗರ್ವಾಸ, ತಾರಕಕೆಂಬ ಇಬ್ಬರು ಮಕ್ಕಳು ಹುಟ್ಟಿದರು ಭೂಮಿಯ ಮೇಲೆ ಅಕ್ರಮ ಪಾಪಿಷ್ಠರಿಗೆ ಕೊನೆಯೇ ಇಲ್ಲದಂತಾಯಿತು ಅವರ ಮಾಯಾಪುತ್ರರು ಕ್ಷೀಣವಾದ ಕೊಬ್ಬಿಗಳ ಮೇಲೆ ತಲೆಕೆಳಗಾಗಿ ನಿಂತು ಕಠೋರ ತಪಸ್ಸನ್ನಾಚರಿಸಿದರು ಪ್ರಸನ್ನನಾದ ಬ್ರಹ್ಮನಿಂದ ಔಂಸ ಸತ್ರೀತರರಿಂದ ಸಾವಿಲ್ಲದಂಬ ವರವನ್ನು ಪಡೆದು ಸ್ವರ್ಗ ಸೂರೂಡಲು ಮುಂದುವರಿದರು ತ್ರಿದಶರು ಪೀಡೆಯಿಂದ ಸುರರನ್ನು ರಕ್ಷಿಸುವುದಕ್ಕಾಗಿ ಅವನ ತೇಜಸ್ಸಿನಿಂದ ಶ್ರೀ ಸುಬ್ರಹ್ಮಣ್ಯನ ಅವತಾರವಾಯಿತು ಅವನು ಮೊದಲಿಗೆ ಪೂರ ಶೂರಾಸುರನನ್ನು ಸೀಳಿ ಎರಡು ಹೋಳು ಮಾಡಿ ಒಂದರಿಂದ ನವಿಲನ್ನೂ ಇನ್ನೊಂದರಿಂದ ಕೋಳಿಯನ್ನೂ ಸೀಳಿ ಸಿವನು ನವಿಲನ್ನು ವಾಹನವನ್ನಾಗಿಯೂ ಕೋಳಿಯನ್ನು ಧ್ವಜವನ್ನಾಗಿಯೂ ಪರಿಗ್ರಹಿಸಿದನು

ಮುಂದೆ ಸುಬ್ರಹ್ಮಣ್ಯನು ತನ್ನ ನೋದರಾದಿಗಳೆಂದುಡಗಿಡಿ, ಕುನ ಬರಗಿರಿಗೆ ಬಂದನು ಅಲ್ಲಿ ಅತನನ್ನು ಮುನಿಸಂಗವರೂ ಎಂಗಣಗಳೂ ಆರಾಧಿಸಿದರು ಆದಿನಿಂದ ಶ್ರೀ ಸುಬ್ರಹ್ಮಣ್ಯನು ಇಲ್ಲಿ ಒಂದು ಶಬ್ದದಿಂದ ದೇವತಾ ಸಮೂಹವನ್ನು ನಿತ್ಯ



ಅಲಂಕೃತ ರಥ

ಸನ್ನಿಹಿತನಾಗಿದ್ದಾನೆ ದು ಸ್ಥಳ ಪುರಾಣ ಹೇಳುತ್ತದೆ

ಶಾಂತಿಪೂರ್ಣ

ತುಳು ನಾಡಿನ ಸಪ್ತಕ್ಷೇತ್ರಗಳಲ್ಲಿ ಒಂದು ಶ್ರೀ ಸುಬ್ರಹ್ಮಣ್ಯ ಇವಕ್ಕೆ ಕಳಸ ಪರ್ವತದ ಸುಂದರ ಸಹ್ಯ ಹಿನ್ನೆಲೆಯಿದೆ. ಈ ಪರ್ವತ ಮಾಲೆಯು ಶ್ರೀ ಕ್ಷೇತ್ರವನ್ನು ಮತ್ತಷ್ಟು ಮೋಹಕವಾಗಿ ಮಾಡಿದೆ ಇಲ್ಲಿನ ಶ್ರೀ ಸುಬ್ರಹ್ಮಣ್ಯ ಬೆಳುದಿಂಗಳಲ್ಲಿ ಇದರ ತಪ್ಪಲಿನ ಸೌಂದರ್ಯ ಹೃದಯಂಗಮವಾಗಿದೆ ಪಗಲಲ್ಲಿ ಕಣ್ಣಿಗೆ ತಂಪಾಗಿ ಕಾಣುವ ಈ ಕ್ಷೇತ್ರ ಭಕ್ತ ಸಮುದಾಯದ ಹೃದಯಕ್ಕೂ ಶಾಂತಿಯನ್ನು ನೀಡುತ್ತದೆ.

ಯುಗಾಂತರದ ಕೀರ್ತಿ

ಈ ಕ್ಷೇತ್ರವು ಕೃತ ಯುಗದಿಂದಲೂ ಖ್ಯಾತಿಗೆತ್ತಿದೆಯೆಂದು ಐತಿಹ್ಯಗಳಿವೆ ಕೃತ ಯುಗದಲ್ಲಿ ಹಲವಾರು ಮುನಿ ಜನರು ಇಲ್ಲಿನ ತೀರ್ಥ ಸೇವೆಯಿಂದ ತಪಸ್ಸಿದ್ಧಿ ಹೊಂದಿದರು. ತ್ರೇತಾಯುಗದಲ್ಲಿ ಪರಶುರಾಮನು ತೆಕ್ಕುಂಟಿನ ಪಾಪಹತ್ಯಾ ದೋಷವನ್ನು ಈ ತೀರ್ಥದಲ್ಲಿಯೇ ತೊಳೆದ ಕಾಂಡನ ದ್ವಾಪರ ಯುಗದಲ್ಲಿ ಪಾಂಡವರು ಒಳ ವಾಸದ ವಾಪ ಕಷ್ಟಗಳಿಗೆ ಗುರಿಯಾದಾಗ ಇಲ್ಲಿನ ದಾನ ತೀರ್ಥದಲ್ಲಿ ನಿಂದುವ ದೆಸ್ಸಾನ ಮಾಡಿ, ಶ್ರೀ ದೇವರ ವರ ಪಡೆದು ನಿವಾರಿಸಿಕೊಂಡರು

ತಾನಾದಿ ಕಾಲದಿಂದಲೂ ಶ್ರೀ ಸುಬ್ರಹ್ಮಣ್ಯ ಕ್ಷೇತ್ರವು ಯಾತ್ರಾ ಮೋಹಗಳಿಗೆ ಸಿದ್ಧವಾಯಿದೆಯೆಂದು ಹೆಸರು ಪಡೆದಿದೆ ಶ್ರೀ ಸುಬ್ರಹ್ಮಣ್ಯನ ದರ್ಶನದಿಂದ ಕೃತಾರ್ಥರಾದವರು ಅನೇಕಾನೇಕ ವರ್ಷಗಳಿಂದ ಇಲ್ಲಿಗೆ ಬರುತ್ತಿರುವ ಯಾತ್ರಿಕರು ಎಂದೂ ಸತಂದರ್ಶಿಗಳು ಈ ಹೇಳಿಕೆಯನ್ನೇ ಪುಷ್ಟೀಕರಿಸುತ್ತವೆ ಇಲ್ಲಿನ ಮೂಲ ವೃಕ್ಷವು ಸರ್ವರೋಗ ನಾಶಿನಿಯೆಂಬ ಕೀರ್ತಿಗಳಿಸಿದೆ ●



ಆದಿ ಸುಬ್ರಹ್ಮಣ್ಯ ಸಂಕ

ಬ್ರಹ್ಮ ರಥೋತ್ಸವ

ಸುಬ್ರಹ್ಮಣ್ಯದ ಅಸಂಖ್ಯ ದರ್ಶನೀಯ ಸ್ಥಳಗಳು

ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಹೋದವರು ದೇವಾಲಯದ ಪಡು ಬಾಗಿಲಲ್ಲಿ ಇಳಿಯಬೇಕಾಗುತ್ತದೆ ಈ ಹೆಬ್ಬಾಗಿಲನ್ನು ದಾಟಿ ಮುಂದುವರಿದರೆ, ಮೂಡುಬಾಗಿಲು ದೊರೆಯುತ್ತದೆ ಇದುವೇ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಗುಡಿಯ ಪ್ರವೇಶ ದ್ವಾರ

ಶ್ರೀ ಸುಬ್ರಹ್ಮಣ್ಯ ದೇವಾಲಯವು ನಾಗರಾಜ ವಾಸುಕಿಯ ಕಲಾಂಶಭೂತನಾದ ಕುಮಾರಸ್ವಾಮಿಯ ಪರಮ ಪವಿತ್ರ ಧಾಮ ಗರ್ಭಗೃಹದ ಮುಂದೊಂದು ಗರುಡಗಂಬವಿದೆ. ವಾಸುಕಿಯ ಉಸಿರಾಟದಿಂದ ವಿಷಜ್ವಾಲೆ ಹರಡದಂತೆ ಈ ಕಂಬ ತಡೆಯುತ್ತದೆಂದು ನಂಬಿಕೆಯಿದ ಗರ್ಭಗೃಹದ ಮಧ್ಯದಲ್ಲಿನ ಪೀಠದಲ್ಲಿ ಮೇಲ್ಗಡೆ ಕುಮಾರಸ್ವಾಮಿ, ನಡುವೆ ವಾಸುಕಿ ಮತ್ತು ಕೆಳಗಡೆ ಶೇಷನ ವಿಗ್ರಹಗಳಿದ್ದು ಇವು ದೇವಾಲಯದ ಪ್ರಧಾನ ದೈವತಗಳಾಗಿ ಪೂಜೆಗೊಳ್ಳುತ್ತಿವೆ

ಕುಕ್ಕೆ ಲಿಂಗಗಳು

ಗರ್ಭಗೃಹದಿಂದ ಎತ್ತಪಕ್ಕ ತಿರುಗಿ ಹೋದರೆ, ಅಲ್ಲಿ ಕುಕ್ಕೆಯಲ್ಲಿಟ್ಟು ಪೂಜಿಸುವ ಹಲವಾರು ಕುಕ್ಕೇ ಲಿಂಗಗಳಿವೆ ಇವೆಲ್ಲವೂ ಹಿಂದೆ ವಾಸುಕಿಯು ಪೂಜಿಸಿದ ಲಿಂಗಗಳು ಎನ್ನುತ್ತಾರೆ ಮಕರ ಸಂಕ್ರಮಣ ದಂದು ಈ ಲಿಂಗಗಳಿಗೆ ರಥೋತ್ಸವಾದಿಗಳು ಜರಗುತ್ತವೆ.

ಷಣ್ಮುಖ ಸ್ಥಾಪಿತ ಭೈರವ

ದೇವಾಲಯದ ಒಳ ಪ್ರಾಕಾರದ ದಕ್ಷಿಣದಲ್ಲಿ ಕೃಪಾಲೇಶ್ವರ ಅಥವಾ ಭೈರವ ದೇವರ ಗುಡಿಯಿದೆ ತಾರಕಾಸುರನನ್ನು ಸಂಹರಿಸಿದ ಅಮಿತೋತ್ಸಾಹದಿಂದ ಷಣ್ಮುಖನು ಈ ದೇವರನ್ನು ಸ್ಥಾಪಿಸಿದನೆಂದು ಪ್ರತೀತಿಯಿದೆ.

ತವೆಂದೂ ನಂಬುಗೆ ಅಂಬಿಕೆಗೆ ನವರಾತ್ರಿಯಲ್ಲಿ, ಉಮಾಮಹೇಶ್ವರರಿಗೆ ಶಿವರಾತ್ರಿಯಲ್ಲಿ, ಸೂರ್ಯನಿಗೆ ರಥ ಸಪ್ತಮಿಯಲ್ಲಿ ವೈಭವದ ಉತ್ಸವಗಳು ನಡೆಯುತ್ತವೆ

ಮೂಗ್ನ ಮರ ಮತ್ತು ಸಂಪುಟ ನರಸಿಂಹ

ಶ್ರೀ ಸುಬ್ರಹ್ಮಣ್ಯ ದೇವಾಲಯದ ಒಳ ಆಂಗಣದಲ್ಲಿ ಶ್ರೀ ಸಂಪುಟ ನರಸಿಂಹ ದೇವರ ಗುಡಿಯಿದೆ ಈ ದೇವರು ಶ್ರೀ ಸುಬ್ರಹ್ಮಣ್ಯ ಮರಕ್ಕೆ ಸೇರಿದ್ದು, ಶ್ರೀ ಮಧ್ವಾಚಾರ್ಯರು ತಮ್ಮ ಸನ್ಯಾಸಾಶ್ರಮದ ಗುರು ಅಚ್ಯುತ ಪ್ರಜ್ಞರಿಗೆ ಈ ವರವನ್ನು ಕೊಟ್ಟರೆಂದು ಹೇಳಲಾಗುತ್ತದೆ ಈ ವರದ ಸ್ವಾಮಿಯನ್ನು ಸಂಪುಟ ನರಸಿಂಹ ದೇವರ ಪೂಜೆಯ ವರೆಗೆ ಮಾಡುತ್ತಾರೆ

ಬಲ್ಲಾಳರ ಕುಂಜ

ಶ್ರೀ ದೇವರ ವನಾಂಗಣದ ಮಹಾದ್ವಾರದ ಒಳ ಬಲ್ಲಾಳ ರಾಯನ ವಿಗ್ರಹ ಪೋದಿದೆ ದೇಗುಲವು ಬಲ್ಲಾಳ ರಾಯರ ಆಡಳಿತಕ್ಕೆ ಒಳಪಟ್ಟಿದ್ದನ್ನು ಅವರ ಕಾಲದಲ್ಲಿ ಉನ್ನತಿ ಹೊಂದಿದ್ದನ್ನು ಇದು ಪ್ರತ್ಯಕ್ಷೀಕರಿಸುತ್ತದೆ ರಾತ್ರಿ ಪೂಜೆಯಾದ ಮೇಲೆ ಮಂಗಳಾರತಿಯನ್ನು ಈ ವಿಗ್ರಹದ ಬಳಿಯಲ್ಲಿ ಒಪ್ಪಿಸುವ, ಜಂಬಾವಷ್ಠಿಯಂದು ದೇವರು ಉತ್ಸವ ಹೊರಟಾಗ ಈ ಬಲ್ಲಾಳ ರಾಯನ ಕಾಣಿಕೆ ಸ್ವೀಕರಿಸುವ ಸಂಪ್ರದಾಯಗಳು ಇಂದಿಗೂ ಇವೆ

ಚಂದ್ರಮೌಳೀಶ್ವರ

ಶ್ರೀ ಶಂಕರಾಚಾರ್ಯರ ಶೃಂಗೇರಿ ಮಠದ ಶಾಖೆಯೆಂದು ದೇವಾಲಯದ ಹೊರಾಂಗಣದ ಈಶಾನ್ಯದಲ್ಲಿದೆ ಇಲ್ಲಿ ಚಂದ್ರಮೌಳೀಶ್ವರ ದೇವರಿದ್ದಾರೆ.

ಅಂಗರಕ್ಷಕ ದೈವಗಳು

ಹೊರ ಪ್ರಾಕಾರದ ದಕ್ಷಿಣದಲ್ಲಿ ಹೊಸ ವಲಿಗಮ್ಮ ಮತ್ತು ಮರುಪಡಾಯರೆಂಬ ಎರಡು ದೈವಗಳ ಗುಡಿಯಿದೆ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಅಂಗರಕ್ಷಕರಂತೆ ಈ ದೈವಗಳಿವೆ

ರಜತ ಅಕ್ಷಯ ಪಾತ್ರೆಯ ದರ್ಶನ ತೀರ್ಥ

ದೇಗುಲದ ಮುಂಭಾಗದಲ್ಲಿ ಕುಮಾರ ಧಾರೆಯು ಧಾರೆಯೊಂದು ಹರಿಯುವುದು ಇದು ದರ್ಶನ ತೀರ್ಥ ಹಿಂದೆ ದರ್ಶನ ಮತ್ತು ರಜತ ತಕ್ಕಳಿಯ ಪಾತ್ರೆ ಹರಿದು ಬಂದ ನದಿಯೆಂದೆಂದು ಹೇಳುತ್ತಾರೆ ಇದು ಮತ್ಸ್ಯ ತೀರ್ಥ ಕುಮಾರಧಾರೆಯನ್ನು ಕೂಡುವುದು ಮತ್ಸ್ಯತೀರ್ಥದಲ್ಲಿ ವಿಧಿ ಮಡಿಸ್ನಾನ ಮಾಡಿದವರು ದರ್ಶನ ತೀರ್ಥದಲ್ಲಿ ಮಿಂದಾಗಲೇ ಅವರು ಪುಣ್ಯಬಾಜನರಾಗುತ್ತಾರೆಂದು ವಿಶ್ವಾಸ

ವಾಸುಕಿಯು ನೆಲೆ ಆದಿ ಸುಬ್ರಹ್ಮಣ್ಯ

ದೇವಾಲಯದ ಒಡಗು ದಿಕ್ಕಿಗೆ ಸುಮಾರು ೨೦೦ ಗಜ ದೂರ ನಡೆದರೆ, ದರ್ಶನ ತೀರ್ಥದ ಕಿನಾರೆಯಲ್ಲಿ ಪುನರುಜ್ಜೀವಿತ ಆದಿ ಸುಬ್ರಹ್ಮಣ್ಯದ ಗುಡಿಯಿದೆ ದೊಡ್ಡದೊಂದು ಹುತ್ತವಿಲ್ಲಿ ಕಾಣುತ್ತದೆ ಇಲ್ಲಿ ಬ್ರಹ್ಮ ಪ್ರತಿಷ್ಠಿತ ಶಿವಲಿಂಗವಿದೆಯೆಂದೂ ಷಣ್ಮುಖನು ಇಲ್ಲಿ ಅಂಶಿಕವಾಗಿ ನೆಲೆಸಿದ್ದಾನೆಂದೂ ಹೇಳುತ್ತಾರೆ ಇಲ್ಲಿನ ಮೃತ್ತಿಕಾ ವ್ರಣಾದ ಸರ್ಪಬಾದೆಗೆ ಸಿದ್ಧೌಷಧಿಯೆಂದೂ ನಂಬುಗೆ ಇಲ್ಲಿ ಪೂರ್ವ ದಿಕ್ಕಿನಲ್ಲಿ ಉದ್ಯಾನವೂ ಕಂಗೊಳಿಸುತ್ತವೆ

ಆಂಜನೇಯ

ಶ್ರೀ ಕ್ಷೇತ್ರದಲ್ಲಿ ಉತ್ತರಾದಿ ಮಠವೂ ಇದೆ ಈ ಮಠದಲ್ಲಿ ಆಂಜನೇಯ ದೇವರ ಮೂರ್ತಿಯಿದ್ದು ಇದಕ್ಕೆ ನಿತ್ಯ ಪೂಜಾದಿಗಳು ನೆರವೇರುತ್ತದೆ

ಗತವೈಭವದ ರುದ್ರಪಾದ

ದರ್ಶನ ತೀರ್ಥದ ಪಕ್ಕದಲ್ಲಿ ದೇವಾಲಯದಿಂದ ಸುಮಾರು ಅರ್ಧ ಮೈಲು ದೂರದಲ್ಲಿ ರುದ್ರಪಾದವಿದೆ. ಒಂದು ಶಿಲೆಯ



ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಪಕ್ಷಿನೋಟ

ಹಾಳು ಕೊಂಪೆಯಿಂದ ವೈಭವದ ಹಂಪೆಗೆ—

ಧರ್ಮದರ್ಶಿಗಳ ಒಮ್ಮುಖದ ಸಾಹಸೋದ್ಯಮ



ಬೆಳ್ಳಿ ಕನಜಡ ಗರುಡ ಕಂಬ

ಕೆಲವು ವರ್ಷಗಳಿಗೆ ಮೊದಲು ಸುಬ್ರಹ್ಮಣ್ಯನು ಗಟ್ಟದ ಬುಡದ ಒಂದು ಕಡೆಗೆ ಣಿಸಲ್ಪಟ್ಟ ಹಳ್ಳಿಯಾಗಿತ್ತು. ಆದರೆ, ಈ ಶತಮಾನದ ಆರಂಭದಿಂದ ಇದರ ಹೆಸರು ದಿನದಿಂದ ದಿನಕ್ಕೆ ಪ್ರಪರ್ಧಮಾನವಾಗುತ್ತ ಬಂತು. ದೇವಾಲಯದ ಆಡಳಿತೆಯು ಸುಸೂತ್ರವಾಗಿ ನಡೆಯಲಾರಂಭವಾಯ್ತು. ಆಡಳಿತೆದಾರರ ಉತ್ಸಾಹ ಮತ್ತು ಕ್ರಿಯಾಶೀಲತೆಗಳಿಂದ ಶ್ರೀ ಕ್ಷೇತ್ರವು ತನ್ನ ಮೊದಲಿನ ಸ್ವರೂಪವನ್ನು ಬದಲಾಯಿಸಿದೆಯೆನ್ನಬೇಕು.

ಸುಬ್ರಹ್ಮಣ್ಯ ಹಿಂದಿನಂತೆಯೇ ಇಂದೂ ಸರಕಾರದ ಮೀಸಲು ಕಾಡುಗಳ ನಡುವಿರುವ ಪುಟ್ಟ ಪಟ್ಟಣ. ಆರಣ್ಯ, ನದಿ, ಪರ್ವತಗಳ ಪ್ರಾಕೃತಿಕ ಸೌಂದರ್ಯದ ಆಗರ. ನೊನ್ನೆ ಮೊನ್ನೆಯವರೆಗೆ ಮಳೆಗಾಲದಲ್ಲಿ ಸುಬ್ರಹ್ಮಣ್ಯನ ಯಾತ್ರೆ ಅಸಾಧ್ಯವಾಗಿತ್ತು. ಆದರೆ, ಇಂದು ನಾಡಿನ ಎಲ್ಲ ಮೂಲೆಗಳಿಂದಲೂ ಬರಬಹುದಾದ ಸರ್ವ ಋತು ಯಾತ್ರಾ ಸ್ಥಾನವೆನಿಸಿದೆ. ನದಿ ನದಿಗಳಿಗೆ ಸೇತುವೆಗಳೂ ಪಕ್ಕಾ ರಸ್ತೆಗಳೂ ಈಗ ನಿರ್ಮಾಣಗೊಂಡಿದ್ದು ಪ್ರತಿನಿತ್ಯವೂ ಯಾತ್ರಾರ್ಥಿಗಳನ್ನು ಅವು ಕರೆದು ತರುತ್ತವೆ.

ಹೀಗೆ ಬನ್ನಿ

ಸುಬ್ರಹ್ಮಣ್ಯದ ಪೂರ್ವೋತ್ತರಕ್ಕೆ ೪೦ ಮೈಲಿಗಳ ದೂರದಲ್ಲಿ ಸಕಲೇಶಪುರವಿದೆ. ಮೂವತ್ತೆರಡು ಮೈಲು ಪಶ್ಚಿಮದಲ್ಲಿ ಪುತ್ತೂರಿದೆ. ಮಂಗಳೂರಿಗೆ ೬೭ ಮೈಲಿಗಳು. ಹಾಸನ ರೇಲ್ವೆ ನಿಲ್ದಾಣದಿಂದ ಸಕಲೇಶಪುರ ಪೂರ್ವವಾಗಿ. ಮಡಿಕೇರಿಯಿಂದ ಸುತ್ತೂರು ಪೂರ್ವವಾಗಿ ಮಂಗಳೂರಿನಿಂದ ಉಪ್ಪಿನಂಗಡಿ ಪೂರ್ವವಾಗಿ ಸುಬ್ರಹ್ಮಣ್ಯವನ್ನು ಸೇರಬಹುದು. ಎಲ್ಲ ಕಡೆಗಳಿಂದಲೂ ಈಗ ಬಸ್ಸುಗಳ ಸೌಕರ್ಯವೊದಗಿದೆ ಹಾಸನ—ಮಂಗಳೂರು ರೇಲ್ವೆ ದಾರಿಯು ಸಂಪೂರ್ಣಗೊಂಡು ರೇಲು ಓಡಲಾರಂಭಿಸಿದಾಗ ಸುಬ್ರಹ್ಮಣ್ಯ ರಸ್ತೆಯಲ್ಲಿ ನಿಲ್ದಾಣವಾಗುತ್ತದೆ.

(ಮುಂದಿನ ಪುಟ ನೋಡಿರಿ)

ಮೇಲೆ ಎರಡು ರುದ್ರಪಾದಗಳೂ ಇತರ ಕೆಲವು ಶಿಲಾಲೇಖಗಳೂ ಇವೆ. ಇಲ್ಲಿ ಹಿಂದೊಂದು ಗರ್ಭಗೃಹವಿದ್ದಿತೆಂದು ಅದರ ಭಗ್ನಾವಶೇಷಗಳಿಂದ ಅನುಮಾನಿಸಬಹುದು. ಕ್ಷೇತ್ರ ವಿಧಿ ನಡೆಸುವ ಪದ್ಧತಿ ಇಲ್ಲಿದೆ.

ಕಾಶಿಕಟ್ಟೆಯ ಸಿದ್ಧಿವಿನಾಯಕ

ದೇವಾಲಯದ ಪಡುಬದಿಯಲ್ಲಿ ಸುಮಾರು ೨ ಫರ್ಲಾಂಗು ದೂರದಲ್ಲಿ ಕಾಶಿಕಟ್ಟೆಯಿದೆ. ಇಲ್ಲಿರುವುದು ಆಂಜನೇಯ ಮತ್ತು ಗಣಪತಿ ವಿಗ್ರಹಗಳು. ನಾರದ ಮಹರ್ಷಿಗಳು ಇಲ್ಲೇ ಸಿದ್ಧಿವಿನಾಯಕನನ್ನು ಪ್ರತಿಷ್ಠಾಪಿಸಿದರೆಂದು ವಿಶ್ವಾಸವಿದೆ. ಶ್ರೀ ಕ್ಷೇತ್ರವನ್ನು ಪ್ರವೇಶಿಸುವಲ್ಲಿಯೇ ಈ ಕಟ್ಟೆಯಿದೆ.

ಬಿಲದ್ವಾರ—ಗೋಗರ್ಭ

ದೇವಾಲಯದಿಂದ ಸುಮಾರು ಅರ್ಧ ಮೈಲು ದೂರದಲ್ಲಿ ಕುಮಾರಧಾರೆಗೆ ಸೋಗುವ ದಾರಿಯಲ್ಲಿ ಬಿಲದ್ವಾರವಿದೆ ವಾಸುಕಿಯು ಗರುಡ ಭಾದೆ ತಾಳಲಾರದೆ ಇಲ್ಲಿ ಅಡಗಿದ್ದನೆಂದು ಹೇಳುತ್ತಾರೆ. ಇದರೊಳಗೆ ಗೋಗರ್ಭವೆಂಬ ತೀರ್ಥವಿದೆ. ಈ ತೀರ್ಥ ಪ್ರಾಶನವು ಕೃತಾರ್ಥಕಾರಿಯೆಂದು ಸಂಬುಗೆ

ತೀರ್ಥಸಾರ—ಕುಮಾರಧಾರೆ

ಕುಮಾರ ಧಾರೆಯು ಸರ್ವ ತೀರ್ಥಸಾರ. ಇದಕ್ಕೆ ಮೊದಲು ಪುಣ್ಯನದಿಯೆಂದೂ ಮುಂದೆ ಧಾರಾ ನದಿಯೆಂದೂ ಈಗ ಕುಮಾರಧಾರಾ ನದಿಯೆಂದೂ ಇದು ಹೆಸರಾಗಿದೆ. ಸಕಲ ಚರ್ಮವ್ಯಾಧಿಗಳಿಗೂ ಇಲ್ಲಿನ ಸ್ನಾನವು ಪರಿಹಾರವೆಂದು ಕಂಡು ಬಂದಿದೆ.

ಮತ್ಸ್ಯ ತೀರ್ಥ

ಕುಮಾರಧಾರೆಯನ್ನು ದರ್ಪಣ ತೀರ್ಥವು ಕೂಡುವ ಸ್ಥಳವಿಶೇಷ ಮತ್ಸ್ಯ ತೀರ್ಥ. ಕುಮಾರ ಸ್ವಾಮಿಯ ಅವಭೃತ ಸ್ನಾನವೂ ಕಾವಿಹಾರವಾಗುವುದು ಇಲ್ಲಿಯೇ. ಮಡೆಸ್ನಾನದ ಹರಕೆ ಹೊರುವವರು ಇಲ್ಲಿ ಮಿಂದು ಶುಚಿಭೂತರಾಗಿ ಅಂಗ ಪ್ರದಕ್ಷಿಣೆಗೆ ತೊಡಗುತ್ತಾರೆ. ದೇವಾಲಯದಿಂದ ಇದು ಸುಮಾರು ಒಂದೂವರೆ ಮೈಲು ಪಶ್ಚಿಮಕ್ಕಿದೆ.

ಪಂಚವಿಂ ತೀರ್ಥ

ದೇವಾಲಯದಿಂದ ಸುಮಾರು ಒಂದು ಮೈಲು ದೂರದಲ್ಲಿ ಪಂಚವಿಂ ತೀರ್ಥವೆಂಬ ಸ್ಥಾನವಿದೆ. ಇಲ್ಲಿ ಅಗ್ರಹಾರ ಸೋಮನಾಥ ದೇವಸ್ಥಾನವಿದೆ. ಇದರ ಸವಿಸಪಕ್ಕೇ ಸುಬ್ರಹ್ಮಣ್ಯ ಮಠದ ಸ್ವಾಮಿಯವರ ವೃಂದಾವನವಿದೆ.

ಅಭಿಷೇಕ ನಡೆವ ಕುಮಾರ ಪರ್ವತ

ಸುಬ್ರಹ್ಮಣ್ಯ ದೇವಾಲಯದ ಪೂರ್ವಕ್ಕೆ ಎತ್ತರೆತ್ತರವಾಗಿ ಕಾಣುವ ಪರ್ವತಶ್ರೇಣಿಯಲ್ಲಿ ಕುಮಾರ ಪರ್ವತವೆನ್ನುತ್ತೇವೆ. ಇದರ ಶಿಖರಕ್ಕೆ ಸುಮಾರು ೧೪ ಮೈಲಿಗಳ ದೂರವಿದೆ. ಶಿಖರವು ಸುಮಾರು ನಾಲ್ಕು ಸಾವಿರ ಅಡಿಗಳಷ್ಟು ಎತ್ತರವಿದೆ. ಇಲ್ಲಿಗೆ ಮುಟ್ಟುವ ದಾರಿಯು ದುರ್ಗಮವಾದುದರಿಂದ ವಿರುಪನರು ಅಪರೂಪ. ಕುಮಾರ ಪರ್ವತವು ನಿಜವಾಗಿ ಮೂರು ಶಿಖರಗಳಿಂದ ಕೂಡಿದೆ. ಬಿಳು ಹೆಡೆಗಳಂತಿರುವುದು ಶೇಷಪರ್ವತ. ಇನ್ನೊಂದು ಕುಮಾರ ಪರ್ವತ. ಮತ್ತೊಂದು ಸಿದ್ಧ ಪರ್ವತ. ಶೇಷ ಪರ್ವತವನ್ನು ದಾಟಿ ಕುಮಾರ ಪರ್ವತಕ್ಕೆ ಹೋಗಬೇಕಾಗುತ್ತದೆ. ಇದೇ ಕುಮಾರ ಪರ್ವತದಲ್ಲಿ ಕುಮಾರ ಸ್ವಾಮಿಗೆ ಸೇನಾಪತಿಯ ಸಟ್ಟಾಭಿಷೇಕವಾಯ್ತು; ಆ ಅಭಿಷೇಕದ ನೀರು ಉಭಯ ಕುಮಾರ ಧಾರೆಯೊಳಗಿ ಹರಿಯಿತು ಆರು ಮುಖಗಳುಳ್ಳ ಕುಮಾರ ಲಿಂಗಗಳು ಈ ಪರ್ವತದಲ್ಲಿ ದೊರೆಯುತ್ತವೆಂದು ಪ್ರತೀತಿಯಿದೆ.

ಅತ್ಯಂತ ದುರ್ಗಮವಾದ ಈ ಪರ್ವತವನ್ನು ಹತ್ತಿ ಸುತ್ತ ವೀಕ್ಷಿಸಿದರೆ, ಪ್ರಕೃತಿಯ ರಮ್ಯ ದರ್ಶನವಾಗಬಹುದು. ಆದರೆ, ಇತ್ತೀಚೆಗಿನ ದಿನಗಳಲ್ಲಿ ಅಂತಹ ಸಾಹಸಿಗಳು ಅಪರೂಪ. ಕುಮಾರ ಪರ್ವತಕ್ಕೆ ಹೋಗುವ ದಾರಿ ಸುಗಮವಾದರೆ, ಅದೊಂದು ಆದರ್ಶ ಬೆಟ್ಟಾರಣವಾಗಬಹುದು. ●



ಅತ್ಯಪರೂಪವಾದ ಬ್ರಹ್ಮರಥ



ರಥಬೀದಿಯ ದೃಶ್ಯ

(ಹಿಂದಿನ ಪುಟದಿಂದ)

ಉಚ್ಛ್ರಾಯ ಸ್ಥಿತಿಯಲ್ಲಿ

ಕರ್ನಾಟಕದ ಅತ್ಯಂತ ಪ್ರಾಚೀನ ತೀರ್ಥ ಕ್ಷೇತ್ರಗಳಲ್ಲಿ ಒಂದಾದ ಶ್ರೀ ಸುಬ್ರಹ್ಮಣ್ಯವು ಅತ್ಯಂತ ವೈಭವದಿಂದ ಮೆರೆದಾಡಿದ್ದ ಕಾಲವೊಂದಿತ್ತು. ಹೊಯ್ಸಳ ಬಲ್ಲಾಳರಸರ ಆಡಳಿತೆಗೆ ಇದು ಸೇರಿತ್ತೆಂಬ ತಿಳಿಯುತ್ತದೆ. ಕ್ರಿ ಶ. ೧೧೧೦ ರಿಂದ ೧೩೫೦ ಶತಮಾನದ ಅವಧಿಯಲ್ಲಿ ಇದು ಹೊಯ್ಸಳರ ಅಧೀನವಿತ್ತು. ದೇವಾಲಯದ ಪ್ರನೇಶದ್ವಾರದಲ್ಲಿರುವ ಕಂಬದಲ್ಲಿನ ಬಲ್ಲಾಳರಾಯನ ವಿಗ್ರಹವು ಇದಕ್ಕೆ ಪ್ರಬಲ ಸಾಕ್ಷಿ. ಹೊಯ್ಸಳರ ಪತನದೊಂದಿಗೆ ಸುಬ್ರಹ್ಮಣ್ಯದ ಪತನವೂ ಆರಂಭವಾಯಿತು.

ಪತನದ ದಾರಿಯಲ್ಲಿ

೧೪೧೦ ರಿಂದ ೧೪೪೦ರ ವರೆಗೆ ಈ ದೇವಾಲಯದ ಆಡಳಿತೆಯು ಈಸ್ಟ್ ಇಂಡಿಯಾ ಕಂಪೆನಿಯ ಕೈ ಸೇರಿತು. ಆದರೆ, ದೇವಾಲಯದ ಉದ್ಧಾರ ಕಾರ್ಯಗಳು ನಡೆಯಲಿಲ್ಲ. ಪಟ್ಟಣ ಬೆಳೆಯಲಿಲ್ಲ. ಕೆಟ್ಟ ಹವಾಮಾನದಿಂದಾಗಿ ರೋಗ ರುಜಿನಗಳು ತಲೆದೋರಿದುವು; ಜನ ಸಂಖ್ಯೆ ಇಳಿಯಿತು. ಶ್ರೀ ಸುಬ್ರಹ್ಮಣ್ಯ ಸ್ವಾಮಿಯು ಆವಾಸ ಭೂಮಿಯೊಂದು ಹಳ್ಳಿಯಾಗಿಯೇ ಉಳಿಯಿತು.

ಕೆಲ ಸಮಯದ ಅಜ್ಞಾತವಾಸಾನಂತರ ದೇಗುಲದ ಆಡಳಿತವು ಧರ್ಮದರ್ಶಿಗಳ ಕೈಗಳಿಗೆ ಬಂತು. ಆದರೆ, ಆ ವೇಳೆಗಾಗಲೇ ಶ್ರೀ ಕ್ಷೇತ್ರದಲ್ಲಿರುವ ಸುಬ್ರಹ್ಮಣ್ಯ ಮತ್ತು ಸ್ವಾಮಿ ಮತ್ತವರ ಪರಿವಾರದವರ ಕುತಂತ್ರಗಳಿಂದಾಗಿ ದೇವಾಲಯದ ಸ್ಥಿರ-ಚರಸೊತ್ತುಗಳಿಗೇ ಅಭದ್ರ ಪರಿಸ್ಥಿತಿ ತಲೆದೋರಿತು. ಹೀಗೆ ಒಂದೆಲ್ಲ ಹಲವು ರೀತಿಯಿಂದ ದೇವಾಲಯವು ಅಧಃಪತಿತವಾಗುತ್ತಿರುವುದನ್ನು ಶ್ರೀ ಬಾಗ್ಲೋಡಿ ಮನೆತನದ ರಾಮಕೃಷ್ಣಯ್ಯ ಎಂಬವರು ಸಂರಕ್ಷಿಸಿದರು ಆವರ ನಂತರ ಶ್ರೀ ಭೋಜರಾಯರೂ ಇವರ ಬಳಿಕ ಶ್ರೀ ಅನಂತ ರಾಮಪ್ಪನವರೂ ಶ್ರೀ ಸ್ವಾಮಿಗೆ ಆಸ್ತಿ-ಪಾಸ್ತಿಗಳನ್ನು ಸಂಗ್ರಹಿಸಲು ಮತ್ತು ಮಂದಿರವನ್ನು ಉಳಿಸಿ ಬೆಳೆಸಲು ಬದ್ಧಕಂಕಣರಾದರು.

ಪ್ರಗತಿಯ ಪಥದಲ್ಲಿ

೧೯೩೦ರ ನಂತರ ಶ್ರೀ ಕ್ಷೇತ್ರವು ಸರ್ವಾಂಗೀಣ ಅಭಿವೃದ್ಧಿಯ ದಾರಿಯಲ್ಲಿ ಹೆಜ್ಜೆಯಿಡತೊಡಗಿತೆನ್ನಬಹುದು. ಅಂದಿನಿಂದ ಈ ನಲುವತ್ತು ವರ್ಷಗಳ ಕಾಲದಲ್ಲಿ ಬೇರೆ ಬೇರೆ ಧರ್ಮದರ್ಶಿಗಳನ್ನು ಸರಕಾರವು ನೇಮಿಸಿತು. ಅಧಿಕಾರಕ್ಕೆ ಬಂದ ಧರ್ಮದರ್ಶಿಗಳು ದೇವಸ್ಥಾನದ ಸ್ಥಿರ-ಚರ ಸೊತ್ತುಗಳನ್ನು ಬೆಳೆಸುತ್ತ ಬಂದಿದ್ದಾರೆ. ಶ್ರೀ ಕ್ಷೇತ್ರದ ಪುನಾರಚನೆಗಾಗಿ ಅಸಕ್ತಿಯಿಂದ ದುಡಿದಿದ್ದಾರೆ ಅಕರ್ಷಕ ಮತ್ತು ಅನುಕೂಲಕರ ಪವಿತ್ರ ತೀರ್ಥಕ್ಷೇತ್ರವಾಗಿ ಅದನ್ನು ರೂಪಿಸಲು ಆವರು ಶಕ್ತಿ-ಬೆವರುಗಳನ್ನು ಒಂದು ಮಾಡಿದ್ದಾರೆ.

ದೇವಾಲಯಕ್ಕೆ ಹೆಚ್ಚಿನ ಜಮೀನುಗಳನ್ನು ಕೊಳ್ಳುವುದು, ಕೊಂಡು ಕೊಂಡ ಜಮೀನಿನಲ್ಲಿ ಕೃಷಿ ಕಾರ್ಯಗಳನ್ನು ಕೈಕೊಳ್ಳುವುದು, ಯಾತ್ರಿಕರಿಗಾಗಿ ಉತ್ತಮ ಮಟ್ಟದ ಛತ್ರಗಳನ್ನು ಕಟ್ಟಿಸುವುದು, ದೇಗುಲ ಮತ್ತಿತರ ಪ್ರೇಕ್ಷಣೀಯ ಸ್ಥಾನಗಳನ್ನು ಆಕರ್ಷಕವಾಗಿ ದುರಸ್ತಿಗೊಳಿಸುವುದು, ಪೂಜೆ-ಪುನಸ್ಕಾರಗಳಿಗೆ ಸೂಕ್ತ ಆವಶ್ಯಕ ಸಾಧನ-ಸಲಕರಣೆಗಳನ್ನು ಪೂರಯಿಸುವುದು- ಮೊದಲಾದ ಕರ್ತವ್ಯಗಳನ್ನು ಧರ್ಮದರ್ಶಿಗಳು ನಿರ್ವಂಚನೆಯಿಂದ ನಡೆಸುತ್ತಲಿದ್ದಾರೆ.

ಧರ್ಮದರ್ಶಿಗಳ ಸಾಧನೆ

ಈ ಧರ್ಮದರ್ಶಿಗಳ ಆಡಳಿತೆಯಲ್ಲಿಯೇ ಶ್ರೀ ಕ್ಷೇತ್ರದ ಸ್ವರೂಪ ಬದಲಾಗುತ್ತಿದೆ. ಶ್ರೀ ಸುಬ್ರಹ್ಮಣ್ಯ ದೇವಾಲಯವನ್ನು ಆಕರ್ಷಕ ರೀತಿಯಲ್ಲಿ ಪುನಾರಚಿಸಿದರು. ಆದಿ ಸುಬ್ರಹ್ಮಣ್ಯ ಗುಡಿಯನ್ನು ಹೊಸತಾಗಿ ಕಟ್ಟಿಸಿದರು. ಕಾಶಿಕಟ್ಟೆಯನ್ನು ದುರಸ್ತಿ ಪಡಿಸಿದರು ಮತ್ತು ತೀರ್ಥದಿಂದ ಪರ್ಣತೀರ್ಥದವರೆಗಿನ ಮಾರ್ಗವನ್ನು ವಿಸ್ತರಿಸಿದರು. ಜನತೆಯ ಆರೋಗ್ಯ ರಕ್ಷಣೆಗಾಗಿ ಆಸ್ಪತ್ರೆಯನ್ನೂ ಮಕ್ಕಳ ಶಿಕ್ಷಣಕ್ಕಾಗಿ ಶಾಲೆ-ಹೈಸ್ಕೂಲು, ಹಾಯರ್ ಸೆಕೆಂಡರಿ ಶಾಲೆಗಳನ್ನೂ ತೆರೆದರು. ಹೆಚ್ಚು ಹೆಚ್ಚಿನ ಛತ್ರಗಳನ್ನು ಕಟ್ಟಿಸಿದರು. ಶಾಲೆಗೆ ತನ್ನದೇ ಆದ ಕಟ್ಟಡ. ಮೂರಾಬಟ್ಟಾರಿಗೆ ಅಂಗಡಿಗಳು — ನೊವಲಾಮವನ್ನು ನಿರ್ಮಿಸಿಕೊಟ್ಟರು. ಕುಡಿಯುವ ನೀರಿನ ವ್ಯವಸ್ಥೆಯೊಂದು ಕಾರ್ಯರೂಪಕ್ಕೆ ಬರುತ್ತಲಿದೆ.

ಆಡಳಿತ ವರ್ಗ

ದೇವಾಲಯದ ಈಗಿನ ಧರ್ಮದರ್ಶಿ ಮಂಡಳಿಯಲ್ಲಿ ಈ ಕೆಳಗಿನವರಿದ್ದಾರೆ.

ಶ್ರೀ ಕೆ. ಸುಬ್ರಹ್ಮಣ್ಯ ಗೌಡ, ಅಧ್ಯಕ್ಷರು.
ಶ್ರೀ ಡಿ. ಕೆ ಹೆಬ್ಬಾರ್.
,, ಬಿ. ಸುಬ್ಬಯ್ಯ ಶೆಟ್ಟಿ.
,, ಬಿ. ಬಾಲಕೃಷ್ಣ ರೈ.
,, ಜಿ. ಪುಟ್ಟಸ್ವಾಮಿ.

ಶ್ರೀ ಎಸ್. ರಾಮಕೃಷ್ಣ ಭಟ್ ಅವರು ದೇವಸ್ಥಾನದ ಮೆನೇಜರರು. ತುಂಬು ಉತ್ಸಾಹದಿಂದ ದೇವಾಲಯದ ಉನ್ನತಿಗಾಗಿ ದುಡಿಯುವ ಧರ್ಮದರ್ಶಿಗಳಿಗೆ ಶ್ರೀ ಭಟ್ಟರು ತಮ್ಮ ಹೃತ್ಪೂರ್ವಕ ಸಹಕಾರ ನೀಡುತ್ತಲೇ ಬಂದಿದ್ದಾರೆ. ಆದರ ಫಲವೇ ಇಂದು ನಾವು ಕಾಣುವ ಹೊಸ ರೂಪದ ಸುಬ್ರಹ್ಮಣ್ಯ ಕ್ಷೇತ್ರ.

ಆಶೋತ್ತರಗಳು

ಶ್ರೀ ಕ್ಷೇತ್ರದಲ್ಲಿ ಇನ್ನೂ ಪ್ರಗತಿಯ ಸಾಧನೆಯೂಗಬೇಕು. ಯಾತ್ರಾರ್ಥಿಗಳಿಗೆ ಹೆಚ್ಚಿನ ವಿಶಾಲ ಛತ್ರಗಳು, ಕುಮಾರ ಪರ್ವತಕ್ಕೆ ಸರಿಯಾದ ದಾರಿ, ಜೀರ್ಣವಾದ ಬ್ರಹ್ಮರಥದ ಸ್ಥಾನಕ್ಕೆ ಹೊಸತೊಂದರ ತಯಾರಿ— ಶಿಕ್ಷಣ, ಆರೋಗ್ಯ ವ್ಯವಸ್ಥೆಯಲ್ಲಿ ಪ್ರಗತಿ—ಇವು ಕೆಲವು ಮಾತ್ರ. ಶ್ರೀ ಸುಬ್ರಹ್ಮಣ್ಯದ ಜನಸಂಖ್ಯೆಯೂ ಹೆಚ್ಚಬೇಕು. ಶ್ರೀ ಸ್ವಾಮಿಯ ಅನುಗ್ರಹದಿಂದ ಇವು ಅಸಾಧ್ಯವಾದುದಲ್ಲ. ಭಕ್ತ ಜನರ ನೆರವು ತುಂಬಿ ಬಂದಾಗ ಇನ್ನೆಲ್ಲ ಕೈಗೂಡುತ್ತವೆ. ಪುರುಷ ಪ್ರಯತ್ನವಾರಂ ಭವಾವರೆ ದೈವೀ ಅನುಗ್ರಹ ತಾನೇ ತಾನಾಗಿ ಕೂಡಿಕೊಳ್ಳುವುದೆಂಬುದು ಸತ್ಯ ತಾನೆ?

(ಮೂಲತ್ಕೈಪಡೆ ಪುಟ ನೋಡಿರಿ)



ಮತ್ಸ್ಯತೀರ್ಥದಲ್ಲಿ ಅವಭೃತೋತ್ಸವ

ಹರಿದಾಸರ ಕೃತಿಗಳಲ್ಲಿ ಪ್ರಾಸರಾಹಿತ್ಯವೇಕೆ?

(ಹದಿನೆಂಟನೇ ಪುಟದಿಂದ)

ಕಾರಣ ಬಲ್ಲವರು ನಿರ್ದಾಕ್ಷಿಣ್ಯವಾಗಿ ಈ ಬಗೆಗೆ ಗಮನಿಸ ಬೇಕಾಗಿ ಅರಿಕೆ]

೧. ಶರಣೆಂಬೆ ವಾಣೀ| ಜಗದೊಳು ನಿ ಮ್ಮನು| ಪೊಗಳುವೆ ನಮ್ಮ| ಹರಿಯ ತೋರಿಸೆಂದು| ಪ್ರಾರ್ಥಿಪೆನಮ್ಮ|| ಪಾಡುವೆ ಶ್ರುತಿಯ| ಬೇಡುವೆ ಮತಿಯ| ಪುರಂದರ ವಿಠಲನ| ಸೋದರ ಸೊಸಿಯ|| (ಮೊದಲಲ್ಲಿ ಪದ್ಯದ ಪಲ್ಲವಿಯೆತ್ತಿದೆ. ಆ ಮೇಲಿನ ಸೊಲ್ಲುಗಳಲ್ಲಿ ಪ್ರತಿಪಾದದಲ್ಲಾದರೂ ಅರಿವಾಸಿಗೊಮ್ಮೆ ಪ್ರಾಸವಿಲ್ಲ!)

೨) ಯಾರಿಗೆ ಯಾರುಂಟು! ತಂದೆ ಶ್ರೀ ಪುರಂದರ ವಿಠಲ ನಾರಾಯಣ| ನಾ ನಾಯೊ ಹೊತ್ತಿಗೆ ನೀ ಕಾಯೊ ಹರಿಯೆ|| (ಇಲ್ಲಿ ಪ್ರಾಸವಿದ್ದಂತಿಲ್ಲ)

೩) ಸತ್ಯವಂತರಿಗಿದು ಕಾಲವಲ್ಲ|| ಉಪಕಾರ ಮಾಡಿದರೆ ಅಪಕರಿಸುವ ಕಾಲ| ಸಕಲವನು ತಿಳಿದವಗೆ ದುರ್ಭಿಕ್ಷಕಾಲ|| ಸತಿ ಸುತರು ಎಂಬವರ| ನಂಬಲರಿಯದ ಕಾಲ| ಸಟೆಯಲ್ಲ ಇದು ವಿಪರೀತ ಕಾಲ|| (ಇಲ್ಲೂ ಪ್ರಾಸ ಯಾವ ತರದಲ್ಲೂ ಕಾಣದು)

೪) ಆವ ಕುಲವು ತಿಳಿಯಬಾರದು| ವಿದ್ಯೆಯಲ್ಲಿ ಪ್ರೌಢನಂತೆ-ಬೇಲೂರ ಚೆನ್ನಿಗ ನಂತೆ| (ಮಿಕ್ಕ ಸೊಲ್ಲುಗಳಲ್ಲಿ ನಾಲ್ಕು ಚರಣಗಳಲ್ಲೂ ಪ್ರಾಸವಿರುವಂತೆ ಇಲ್ಲಿರುವುದಿಲ್ಲ.)

೫) ಪೋಗೆ ಸಖೀ ನೀನು| ಗೋವರ್ಧನವಲ್ಲಿ ಗೋವುಗಳನು ಕಾಯ್ದು| ಗೋಕುಲನಂದನನ ನೀನು ತೋರೆ||

೬) ಪರಿಯ ಬಿಟ್ಟರೆ ಗತಿಯಿಲ್ಲ| (ಇದರ ಮೂರನೆಯ ಸೊಲ್ಲಿನ ಪ್ರತಿಪಾದದಲ್ಲೂ ಪ್ರಾಸದ ಗೊಡವೆಯಿಲ್ಲ.)

೭) ಎತ್ತ ಪೋದನಮ್ಮ| ವಿಪ್ರನ| (ಈ ಪದ್ಯದ ಮೂರು ಸೊಲ್ಲುಗಳಲ್ಲೂ ಪ್ರಾಸದ ಸಾಂಗತ್ಯವಿಲ್ಲ)

೮) ಬಿಡೆನಿನ್ನ ಪಾದವ ಬಿಂಕವಿನ್ನೇಕೋ (ಇದರ ಎರಡನೆಯ ಸೊಲ್ಲಲ್ಲಿ ಒಂಜೆಡೆ ಪ್ರಾಸವಿಲ್ಲ! ತಿರುಕ—ಪಿಡಿದ)

೯) ಕಂಡೆನಾ ಉಡುಪಿಯ ಕೃಷ್ಣರಾಯನ| (ಇದರ ಮೂರನೆಯ ಸೊಲ್ಲಿನ ಮೂರನೆಯ ಪಾದದಲ್ಲಿ ಪ್ರಾಸ ಕೆಟ್ಟಿದೆ: ಉಂಗುರ, ರಂಗು, ಧಿಂಧಿಮಿಧಿಮಿಮಿಕೆಂದು.)

೧೦) ನಾರಾಯಣ ಗೋವಿಂದ| ನಕ್ತಂಚರ ಹರ ನನ್ಯಗುಣಾಕರ| ನಾರದ ಗಾನ ವಿಲೋಲ ಪೆಂಬಲ್ಲಿ ಪ್ರಾಸ ಸರಿಯಿಲ್ಲ!

ಕೊನೆ: ಪದ್ಯದ ಪ್ರತಿಯೊಂದು ಶಬ್ದವೂ ಪರಸ್ಪರ ಹೊಂದಿಕೆಯಿಂದಿದೆ. ಅಂತೆ, ಪ್ರತಿ ಪಾದವೂ ಸ್ಮರಣಾರ್ಥವಾಗಿ ಪ್ರಾಸದಿಂದ ಕೂಡಿಸಲಾಗಿದೆ. ಕನ್ನಡದಲ್ಲಿ 'ಯತಿಯಂ ಮಿಕ್ಕರ್' ಎಂಬುದು ಪ್ರಾಚೀನದಿಂದ ಕೇಳಿದೆ; ಪ್ರಾಸವತ್ತ ಹೆಚ್ಚು ಗಮನವಿತ್ತ. ಆಧುನಿಕರ ನವ್ಯಕವಿ ಸಾಮ್ರಾಟರಲ್ಲಿ ಕೆಲ ನರೇನೋ ಪ್ರಾಸದತ್ತ ನೊಪಲು ಗಮನಿಸದಿದ್ದರೂ ಮುಂದೆ ಅತ್ತ ಒಲೆಯುತ್ತಿದ್ದಾರೆ. ಹರಿದಾಸರ ಕೃತಿಗಳಲ್ಲಿ ಪ್ರಾಸವಿಲ್ಲದೆ ಇರಲಾರದೆಂದು, ಆಮೇರೆಗೆ ಈ ಪದ್ಯಗಳ ಅಭ್ಯಾಸಗಳು ತುಸ ಪರಿಶೀಲಿಸಬೇಕೆಂದು ಅರಿಕೆ ಮಾಡಿಕೊಳ್ಳಲಾಗಿದೆ.

●●

ರಿಂಗಣ

ಹೆದ್ದಾರಿಯ ಸ್ಟಾಲಿನ್
ದಡ ದಡ ರೋಡ್—ಎಂಜಿನ್!
ಒಂದೆ ಗಾಲಿ ಕಾಲ ಗತಿ
ಉಕ್ಕಿನ ಮನುಷ್ಯನ ಯಾತಾಯಾತಿ
ಸಾರಿಗೆಗೆ ಅಡ್ಡಗಟ್ಟಿ

"ಉರುಳುರುಳು ನಿಷ್ಕರುಣಿ"
—ಎಂದೆನಾ
ಅವನು ಚಟ್ಟಿ ಚಟ್ಟಿ
ದಿನ್ನೆ ಕುಟ್ಟಿ
ತಗ್ಗಿಗೊಟ್ಟಿ

ಭೂಮಿಯೆಲ್ಲ ಕಂದಕ
ನಿಂದಕ—ವಂದಕ
ತೆಕ್ಕೆ ಬಿದ್ದ 'ಅಂಧಕ'
ಸಮವೋ ಗಂಧ—ಗಂಧಕ!

ಸಮ ನೆಲವೂ ನೆಲಸಮ
ಮೂಡ ಹೊರಟೆ-ಬಲಿಭೀಮ.

ನನ್ನ ಜೆನ್ನ ನಾನು ಏರೆ
ಹಾರಿ ಹಾರಿ ಸೋತ
ನನ್ನ ಬದುಕು ಗೃಹಮೇಧಕೆ
ನಾನೆ ಹೋತು—ಹೋತ
ಜೆಕ್ಕೆ ಪಾರ ಚೆಂಡು ಹೂವು
ಪರಿಮಳ ಬರಿ ಅತ್ತರು
ಮೂಸಿ ನಕ್ಕು ಅತ್ತರು.

ಮರಕಾಲಿನ ಎತ್ತರ
(ನಿಲುಕದು ಆಶೋತ್ತರ!)
ಹೊಗರಾಡುವ ಹಗರಣ
ಕೋಲಾಟವೂ ಹಗೆ—ರಣ

"ಬಿಟ್ಟಿ ಬಿಟ್ಟಿ, ಬೆಳಗಾಯಿತು
ತಟ್ಟೀ ಮನೆ ಹಾಳಾಯಿತು"
ಹಾಳು ಬಾವಿ-ಕೊಳ್ಳಿ ದೆವ್ವ
ಹಾಕುತಲೆ ಇದೆ ರಿಂಗಣ!

—ಗೌರೀಶ ಕಾಯ್ಕಿಣಿ.

[ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಸಮ್ಮೇಲನದಲ್ಲಿ ಜರುಗಿದ ಕವಿಗೋಷ್ಠಿಯಲ್ಲಿ ಓದಿದ ಕವನ]

ಬೂದಿಯ ರಾತಿಯ ಮೇಲೆ ನೀರು ಹೊಯ್ದರೆ ಕೂಡಲೆ ಇಂಗಿಹೋಗುತ್ತದೆ; ಅಹಂಕಾರದ ಬೂದಿ ರಾತಿಯಂತೆ. ಅಹಂಕಾರದಿಂದ ಮೆರೆಯುವವರ ಮನಸ್ಸಿಗೆ ಪ್ರಾರ್ಥನೆ, ಮತ್ತು ಧ್ಯಾನದಿಂದ ಏನೂ ಪ್ರಯೋಜನವಿಲ್ಲ.

○ ○ ○

ಕೊಡುವವನಿಗೆ ಹರುಷ
ಪಡೆವವನಿಗೆ ಸಂತೋಷ
ಜನಪ್ರಿಯ "ಪ್ರಕಾಶ"

ಮೂವತ್ತು ವರ್ಷಗಳಿಗೂ ಮಿಕ್ಕಿ
ದೇಶದ ವಿವಿಧ ರಾಜ್ಯಗಳಲ್ಲಿ
ಮಿಲಿಯಾಂತರ ಜನರಿಂದ
ಆದರಿಸಲ್ಪಟ್ಟಿವೆ—

ಪ್ರಕಾಶ ಬೀಡಿಗಳು

PRAKASH BEEDIES

ವರುಷದ ಎಲ್ಲ ದಿನಗಳಲ್ಲಿ ಎಲ್ಲ ಜನರಿಗೆ ಸೇವನೆಯ ಆನಂದವೀಯುತ್ತಿವೆ!

—ಪ್ರಜಾರಾಜ್ಯ ದಿನದ ಹಾರ್ದಿಕ ಶುಭಾಶಯಗಳನ್ನು ಕೋರುವ—

ಕೆ. ಎಂ. ಆನಂದ ಪ್ರಭು ಎಂಡ್ ಸನ್ಸ್

ಬಂದರ, ಮಂಗಳೂರು-1
ಫೋನ್: 3718

ಫೆಕ್ಟರಿ: ಕೆ.ರಾಡಿಯಾಲ್ ಬೈಲ್, ಮಂಗಳೂರು—3
ಫೋನ್: 3532

With best compliments

from

BALLAL MOTOR SERVICE

MOODABIDRI---MANGALORE

"FACE IS THE INDEX OF THE MIND...."

The more the variety of Typefaces....
....the more the Printed Matter attracts...

For a Choice Selection of the Widest

VARIETIES OF TYPE FACES
IN
ENGLISH & INDIAN LANGUAGES

Contact:

NORTON & CO.,
(SPARTAN TYPE FOUNDRY),
CHOOLAI, MADRAS-7.

THE LARGEST TYPE FOUNDRY.....
.....IN THE EASTERN HEMISPHERE!

ಕಣ್ಣೀರಿನ ಫಲ

(ಹದಿನಾರನೇ ಸುಟದಿಂದ)

ಸಾವಿತ್ರಿಯು ಇದನ್ನು ತಿಳಿದಳು. ಆಕೆಯು ಅಂದೂ ದೇವರ ಮುಂದೆ ಮಗನಿಗಾಗಿ ಕಣ್ಣೀರ ಕೋಡಿ ಹರಿಸಿದಳು. ಅಂದು ದೇವದೇವನ ಮುಂದೆ ನಿಂತಾಗ ಆಕೆಗೆ ಮನದಲ್ಲೊಂದು ದಿವ್ಯಾನಂದವು ಪ್ರವಹಿಸುತ್ತಿರುವಂತೆ ಭೋಧೆಯಾಯಿತು ಆಕೆಯು ಮನೆಗೆ ಬಂದು ಮಗನನ್ನು ಸಮಾಧಾನ ಪಡಿಸಿ ಪುನಃ ಅಂಗಡಿಗೆ ಕಳುಹಿಸಿದಳು. ಅಂದಿನಿಂದ ಕಿಟ್ಟನ ಭಾಗ್ಯ ದೇವತೆಯು ಸುಪ್ರಸನ್ನಳಾದಳು. ಆವನ ಚಾ, ಕಾಫಿಗಳು ಊರಲ್ಲೆಲ್ಲಾ ಹೆಸರುಗೊಂಡವು. ಅವನ ಪ್ರತಿಸ್ಪರ್ಧಿ ಹೋಟೆಲುಗಳೆರಡೂ ದಿವಾಳಿಯಾದವು. ಆ ದಾರಿಯಲ್ಲಿ ಸಾಗುವ ಬಸ್ಸುಗಳೆಲ್ಲಾ ಇದು ನಿಲ್ದಾಣವಲ್ಲದಿದ್ದರೂ ಅಲ್ಲಿ ನಿಲ್ಲುವುವು. ಕಿಟ್ಟನ ಕಾಫಿಯನ್ನು ಹಣಕೊಟ್ಟು ಕುಡಿಗ ಪ್ರಯಾಣಿಕರು ಬಾಯ್ತುಂಬಾ ಹೊಗಳುವರು. ಆ ಊರು, ನೆರೆಯೂರವರಲ್ಲದೆ ನಾಲ್ಕಾರು ಮೈಲುಗಳಿಂದ ಸೈಕಲುಪೋಲರು ಕಿಟ್ಟನ ಹೋಟೆಲಿಗೆಂದೇ ಬರುವರು. ಸುತ್ತುಮುತ್ತಲಿನವರಿಗೆಲ್ಲಾ ಆಗ ಕಿಟ್ಟನು ಕಿಟ್ಟಣ್ಣನಾದ.

ಕಿಟ್ಟನ ಕೈಯಲ್ಲಿ ಹಣ ಓಡಿಯಾಡ ತೊಡಗಿದ ಮೇಲೆ ಅವನೂ ಉರುಟು ಶುದ್ಧವಾಗಿ ಮಾತಾಡಬಲ್ಲ. ಅವನ ಉಪಾಧ್ಯಾಯರೂ ಅಲ್ಲಿಗೆ ಬಂದು ಕಾಫಿ ಕುಡಿದು ಅವನ ಬೆನ್ನು ತಟ್ಟಿ ಹೋಗುವರು. ಈಗ ಕಿಟ್ಟನ ಕೊರಳಲ್ಲಿ ಬಂಗಾರದ ಚೈನು; ಬೆರಳುಗಳಲ್ಲಿ ವಜ್ರದುಂಗುರ; ಮಣಿಗಂಟಿನಲ್ಲಿ ಅಮೂಲ್ಯ ರಿಸ್ಟ್‌ವಾಚು ಥಳಾಗಿ ಒಪ್ಪುತ್ತಿವೆ. ಈಗವನ ಹೋಟಿಲಿನಲ್ಲಿ ದುಡಿಯುವವರು ಹಲವರು. ಅವನು ತನ್ನ ದುಡಿಮೆಯಿಂದ ಹೋಟಲು ಮತ್ತು ಮನೆಯನ್ನು ಜೀರ್ಣೋದ್ಧಾರ ಮಾಡಿಸಿದ. ಸಾವಿತ್ರಿಯ ಒತ್ತಾಯದಂತೆ ದೇವ ಮಂದಿರದಲ್ಲಿ ಎರಡು ನಂದಾದೀಪ, ಹಲವು ಸೇವೆ ಮಾಡಿಸಿದ. ತನ್ನ ಹುಚ್ಚತಂದೆಯನ್ನು ಚಿಕಿತ್ಸೆಗಾಗಿ ಬೆಂಗಳೂರಿಗೆ ರವಾನಿಸಿದ. ಸಾವಿತ್ರಿಗೆ ಈ ಸಿರಿವಂತಿಕೆಯಲ್ಲೂ ಒಂದು ರೀತಿಯ ಭಯವೇ ಆಕೆಯು 'ಇದೆಲ್ಲಾ ಮಹಾದೇವನ ನಾಟಕ'ವೆನ್ನುವಾಗ ಆನಂದಾಶ್ರುವು ಸುರಿಯುವುದು.

ಭಾಗ್ಯಲಕ್ಷ್ಮಿಯು ಕಿಟ್ಟಣ್ಣನ ಸಿರಿ ಮೊಗದಲ್ಲಿ ಈಗ ಚಿಗುರು ಮೂಸೆ ಮೊಳೆಸಿದ್ದಾಳೆ. ಅವು ಅವನ ಚೆಂದುಟಿಯ ಮೇಲೆ ಸುಂದರವಾಗಿ ಒಪ್ಪುತ್ತಿವೆ. ಭಾಗ್ಯದೇವತೆಯು ಅವನಿಗೆ ಕೊಟ್ಟ ಎರಡು ವರಗಳಂತೆ ಎರಡು ಕಿವಿಗಳಲ್ಲೂ ಬೆಲೆಬಾಳುವ ವಜ್ರದ ಕುಡುಕುಗಳರಡು ಮಿನುಗುತ್ತಿವೆ.

ಂ ಂ ಂ

ಆ ಊರಿನ ಜಮೀನ್ದಾರನ ಮಗಳಾದ ಸ್ನೇಹಮಯಿಗೆ ತಾರುಣ್ಯವು ಆಕರ್ಷಕವಾಗಿ ಮೈತುಂಬಿತ್ತು. ಜಮೀನ್ದಾರರು ಇದಕ್ಕಾಗಿ ಎಷ್ಟೋ ಜಾತಕಗಳ ಆವಾಹನ ವಿಸರ್ಜನ ಮಾಡಿ ಕೊನೆಗೊಮ್ಮೆ ಒಬ್ಬ ಪದವೀಧರನನ್ನು ಗೊತ್ತು ಮಾಡಿದರು. ಇದನ್ನು ಕೇಳಿದ ಅವರ ಗೃಹಿಣಿಯು ಯಜಮಾನರನ್ನು ತುಂಬಾ ಪ್ರತಿಭಟಿಸಿದರು.

"ನಿಮಗೆ ವರ್ಷವಾದದ್ದಾದರೂ ಯೋಕೆ? ಪದವೀಧರನೆನ್ನುತ್ತೀರಷ್ಟೆ ಆವರಿಗೆ ಸಿಕ್ಕುವ ಸಂಬಳವೆಷ್ಟು? ಈ ಕಾಲದಲ್ಲಿ ಅವರ ದುಡಿಮೆಯು ಒಂದು ತುಂಬಿದ ಸಂಸಾರವನ್ನು ಡಿಂಗಾಗಿ ಸಾಗಿಸಲು ಸಾಕೇ? ಆದರಲ್ಲೂ ಇಂದಿನ ಪದವೀಧರರಲ್ಲಿ ತಾರುಣ್ಯವು ಹೊರಸೂಸುವ ದೇಹವೆಷ್ಟು ಮಂದಿಗಿದೆ? ಅವರು ವಿದ್ಯಾಭ್ಯಾಸ ಕಾಲದಲ್ಲಿ ಪೋಷಿಸಿದ ದುರಭ್ಯಾಸಗಳು ತುಂಬಿದ ಹೆರೆಯದಲ್ಲೇ ಆವರ ತಲೆ ತಿಂದು, ಜೋಗಟೆ ಮಾಡಿ ಉಗಿಯುತ್ತಿರುವುದನ್ನು ನೀವೇ ಕಾಣುತ್ತಿದ್ದೀರಿ. ವರಸಾಮ್ಯವಿಲ್ಲದ ಮದುವೆ ಮದುವೆಯೇ? ಜಮೀನುದಾರರ ಪತ್ನಿಯು ಖಂಡ ತುಂಡವಾಗಿ ಹೇಳಿ ಬಿಟ್ಟರು. "ಹಾಗಾದರೆ ಏನು ಮಾಡಬೇಕೆನ್ನುತ್ತೀ?" ಜಮೀನುದಾರರು ಪತ್ನಿಯ ಮೊಗ ನೋಡಿದರು.

'ನಮ್ಮ ಮಯಿಗೆ ಮನಸ್ಸಂತಹ ಚಾಲೂಕುಳ್ಳ ಗಂಡನಾಗಬೇಕು'

"ಆವನನ್ನು ಎಲ್ಲಿಂದ ತರಲಿ ಮಹಾರಾಯತಿ?"

ನಾನು ಹೇಳಿದರೆ ನಿಮಗಾಗುತ್ತದೋ ಇಲ್ಲೋ? ನಮ್ಮೂರಿನ ಕಿಟ್ಟಣ್ಣನಿಗೇನಾಯಿತು. ಹೇಳಿ. ನೋಡಲು ಸುಂದರ ರಾವಣ, ಊರಿಗೊಬ್ಬ ಪಂಚಾಯತು ಗೃಹಸ್ಥ, ಸಂಪತ್ತಿನಲ್ಲಿ ಆದ್ವಿತೀಯ; ದುರಭ್ಯಾಸ ನಾಸ್ತಿ; ಹೆಂಡತಿಯ ಮೇಲೆ ತುಂಬಾ ಪಾಶ ತೋರಿಸಬಲ್ಲ. ಮತ್ತೇನಾಗಬೇಕು ಹೇಳಿ?'

'ನಮ್ಮ ಮನೆತನವೆಂಥಾದ್ದು? ಅವನ ಮನೆತನವೆಂಥಾದ್ದು? ಹೊಲೆಯ ಹೊನ್ನು ಗಳಿಸಿದರೆ ಹಾರುವನಾಗುವನೇ? ಪೊನ್ನೆ ಮೊನ್ನೆಯವರೆಗೆ ಸಾವಿತ್ರಿ ನಮ್ಮ ಮನೆಗೆ ಭಿಕ್ಷೆಗೆ ಬರುತ್ತಿದ್ದಳು. ಆವರನ್ನು ನಾವು ಈಗ ನೆಂಟರು ಮಾಡಿಕೊಂಡರೆ ಆವರಿಗೆ ಮಣೆ ಇಡುವುದು ಹೇಗೆ ಹೇಳು?'

'ಅದೇ ನನಗಾಗುವುದಿಲ್ಲ. ಮೊದಲು ನಾವು ನೋಡಬೇಕಾದುದು ಮಗಳ ಸುಖವನ್ನು. ಮಯಿ, ಇಲ್ಲಿ ಬಾ' ಗೃಹಿಣಿಯು ಕೂಗಿದಳು.

ಹದಿನಾರು ವರುಷದ ಬಂಗಾರದ ಪುತ್ಥಳಿಯಂತಿದ್ದ ಸ್ನೇಹಮಯಿಯು ಬಂದು 'ಯಾಕಮ್ಮಾ?' ಎಂದಳು.

'ನಿನಗೆ ಕಿಟ್ಟಣ್ಣನು ಗಂಡನಾಗಬೇಕೇ?' ಪದವೀಧರನೇ? ಗೃಹಿಣಿಯು ಕೇಳಿದಳು.

'ಅಮ್ಮಾ, ಈಗ ನಾನು ಸಾವಿತ್ರಮ್ಮನ ಮನೆಗೆ ಹೋಗುತ್ತೇನೆ.' ಸ್ನೇಹಮಯಿಯು ಪೈಜಣಿಯ ನಾದ ಮಾಡುತ್ತಾ ಕಿಟ್ಟಣ್ಣನ ಮನೆಗೋಡಿದಳು

'ಕೇಳಿದಿರಾ? ಮಯಿಯ ವ್ಯಂಗದ ಮಾತುಗಳನ್ನು? ಆಕೆಯು ಈಚೆಗೆ ನಿತ್ಯವೂ ಕಿಟ್ಟಣ್ಣನ ಮನೆಗೆ ರೇಡಿಯೋ ಕೇಳಲು ಹೋಗುತ್ತಾಳೆ ನಿತ್ಯವೂ ಕಿಟ್ಟಣ್ಣನ

With Best Compliments from:

The United Trading Corporation &
Workshop (Private) Limited,

Attavar, Nandigudde Road,
MANGALORE

Dealers for

Hindustan Ambssador Cars

ಹಿರಿಯರ ಹತ್ತಿರದಲ್ಲಿ

(ಪದಿನೈದನೆ ಪುಟದಿಂದ)

ಹಿಂದೂಸ್ತಾನದಿಂದ ಯಾವಾಗ ಬಂದಿರಿ?' ಎಂದು ಅವರು ವಿಚಾರಿಸಿದರು.

ಇದೇ ಈಗ ಬರುತ್ತಿದ್ದೇನೆ

ಅದು ಸರಿ. ಆದರೆ ನೀವು ಇತ್ತ ಕಡೆ ಬರಲೇ ಇಲ್ಲ. ಅಲ್ಲಿ ಅಂತಹದೇನಿತ್ತು ನಿಮಗೆ?

ಅರೇ ಮಿಯೂ, ಅಲ್ಲಿ ಏನಿಲ್ಲ? ನನ್ನ ಬಾಲ್ಯ, ನನ್ನ ಯೌವನ ಎಲ್ಲವೂ ಅಲ್ಲಿವೆ. ಇಲ್ಲಿ ನನ್ನ ವೃದ್ಧಾಪ್ಯವಿದೆ, ನಾನಿದ್ದೇನೆ. ಅಷ್ಟೆ! ಎಂದು ನಿಟ್ಟುಸಿರಿಟ್ಟರಂತೆ ತುಫೈಲ್ ಸಾಹೇಬರು.

—ಮುಹಮ್ಮದ್ ಮುರ್ತುಜ.

ಒಮ್ಮೆ ಉರ್ದೂ ಕವಿ ಮುಜಾಜರ ಮನೆಗೆ ಬಂದ ತಿರುಕನೊಬ್ಬ ಬಹಳ ಕರುಣಾರ್ದ್ರವಾಗಿ ಭಿಕ್ಷೆ ಬೇಡಿದನು.

ಕ್ಷಮಿಸು ತಮ್ಮ, ನನ್ನ ಬಳಿ ಏನೂ ಇಲ್ಲ ಎಂದರು ಮುಜಾಜ್. ತಿರುಕ ಅಷ್ಟು ಸುಲಭವಾಗಿ ಹೋಗುವಂತಿರಲಿಲ್ಲ. ಅವನು ಅಲ್ಲಿಯೇ ನಿಂತು ಕೊಂಡು—ನಿಮ್ಮ ಮುಕ್ಕಳಿಗೆ ಸುಖವಾಗುತ್ತದೆ. ನಿನಗೆ ದೇವರು ಆರೋಗ್ಯ, ಆಯುಷ್ಯ, ಆದಾಯ ಕೊಡುವನು ಎಂದು ಏನೇನೋ ಹರಸತೊಡಗಿದನು.

ಈಗ ಮಾತ್ರ ಮುಜಾಜರಿಗೆ ಕೋಪ ಬಂತು. ಒಳ್ಳೆಯ ಸೂತಿನಲ್ಲಿ ಹೋದೆಯೋ ಸರಿ, ಇಲ್ಲವಾದರೆ ಆಶೀರ್ವಾದ ಕೊಟ್ಟ ನಿನಗೆ ನಾನು ಶಾಪ ಕೊಡಬೇಕಾಗುತ್ತದೆ ಎಂದು ಅವರು ಕಿರುಚಿದರು. ಏನಾದರೂ ನೀವು ಕೊಡಲೇಬೇಕು ಸ್ವಾಮಿ ಅದು ಶಾಪವಾದರೆ ತಾನೇ ಏನಂತೆ ಎಂದ ತಿರುಕ.

ಮುಂದಿನ ಜನ್ಮದಲ್ಲಿ ನೀನೊಬ್ಬ ಕವಿಯಾಗು ಎಂದರಂತೆ ಮುಜಾಜ್

—ಮುಗನೀ ಅಬ್ಬಾಸ್

ಕಳೆದ ಚುನಾವಣೆಯಲ್ಲಿ ಕರ್ನಾಟಕ ಮೂರೀ ವಿಭಾಗದಲ್ಲಿ ಮುಸ್ಲಿಂ ರೀಗಿನ ವತಿಯಿಂದ ಜನಾಬ್ ಪೀರ್ ಮಹಮ್ಮದ್ ಸ್ಪರ್ಧಿಸಿದ್ದರು. ಚುನಾವಣಾ ಪ್ರಚಾರ ಕ್ಕಾಗಿ ಹಣ ಒಟ್ಟು ಸೂದಬೇಕಿತ್ತು. ಅದಕ್ಕಾಗಿಯೇ ಒಂದು ವಿಶೇಷ ಸಭೆಯನ್ನು ಆಯೋಜಿಸಲಾಗಿತ್ತು. ಸ್ವಯಂ ಸೇವಕರು ಟಿನ್ನಿನ ಡಬ್ಬಿಯೊಂದಿಗೆ ಸಭೆಯಲ್ಲಿ ತಿರುಗಾಡಿ ಹಣ ಸಂಗ್ರಹಿಸುತ್ತಿದ್ದರು. ಹಣದ ಡಬ್ಬಿಯ ಶಬ್ದ ತುಸು ಜೋರಾಗಿತ್ತು. ಮುಸ್ಲಿಂ ಲೀಗಿನ ನಾಯಕರಾದ ಇಸ್ಮಾಯಿಲ್ ಸಾಹೇಬರು ಎದ್ದು ನಿಂತು—ಈಗ ಅಣ್ಣಾದೊರೈ ಭಾಷಣ ಮಾಡಲಿ ಬಾರದೆ, ಅವರ ಭಾಷಣಕ್ಕೆ ತೊಂದರೆ ಯಾಗದಂತೆ, ಮಹಾಜನರು ಸದ್ದಾಗದಂತೆ ಹಣವನ್ನು ಡಬ್ಬಿಯಲ್ಲಿ ಹಾಕಿ ಸಹಕರಿಸಬೇಕು ಎಂದು ವಿನಂತಿಸಿ ಕೊಂಡರು. ಕೂಡಲೇ ಅಣ್ಣಾದೊರೈ ಎದ್ದು ನಿಂತು—ಜಿಲ್ಲರೆ ಹಾಕಿದಾಗ ಮಾತ್ರ ಶಬ್ದವಾಗುತ್ತದೆ. ಅದರ ಒಡಲು ನೋಟನ್ನು ಹಾಕಿದರೆ.... .. ....ಎಂದರು.

ಸಭಾ ವಿಸರ್ಜನೆಯ ನಂತರ ಟಿನ್ನಿನ ಡಬ್ಬಿಗಳನ್ನು ಒಡಿದಾಗ ಆದರಲ್ಲಿ ಹಿಡಿ ಹಿಡಿ ನೋಟುಗಳಷ್ಟೇ ತುಂಬಿದ್ದುದನು ಕಂಡು ಎಲ್ಲರೂ ಚಕಿತರಾದರು.

—ಡಾ। ಅನಂತರಾಮನ್.

ಒಮ್ಮೆ ಒಬ್ಬ ಪ್ರಸಿದ್ಧ ಚಿತ್ರಕಾರ ಭೆಟ್ಟಿಯಾಗಾಗ ವಿಖ್ಯಾತ ಆಂಗ್ಲ ವಿಡಂಬನ ಮತ್ತು ನಾಟಕಕಾರ ಜಾರ್ಜ ಬರ್ನಾಡ ಶಾಹ ಅವನನ್ನು ತನ್ನ ಒಂದು ಚಿತ್ರ ಬಿಡಿಸುವಂತೆ ಕೇಳಿಕೊಂಡರು. ಹಾಗೆಯೇ ಚಿತ್ರ ಸುಂದರವಾಗಿ ಬಿಡಿಸಿದರೆ ನೂರು ಪೌಂಡುಗಳನ್ನು ಕೊಡುವುದಾಗಿಯೂ ಹೇಳಿದರು. ಚಿತ್ರಕಾರ ಸುಂದರವಾಗಿ ಅವರ ಚಿತ್ರರಚಿಸಿ ಕಳುಹಿಸಿ ಕೊಟ್ಟನು. ಶಾಹ ಅವರಿಗೆ ಚಿತ್ರ ಮೆಚ್ಚುಗೆಯಾಯಿತು ಕೂಡಲೇ ಅವರು ಇಪ್ಪತ್ತು ಇಪ್ಪತ್ತು ಪೌಂಡುಗಳ ಐದು ಚಕ್ಕುಗಳನ್ನು ಬರೆದು ಪ್ರಶಂಸೆಯ ಪತ್ರದೊಂದಿಗೆ ಚಿತ್ರಕಾರನಿಗೆ ಕಳುಹಿಸಿ ಕೊಟ್ಟರು. ಚೆಕ್ಕು ಮುಟ್ಟಿದ, ಕೂಡಲೇ ಚಿತ್ರಕಾರ ಶಾಹರ ಬಳಿ ಬಂದು ... ಸರ್, ಐದು ಚೆಕ್ಕುಗಳನ್ನೇಕೆ ಕಳುಹಿಸಿದಿರಿ? ಒಂದೇ ಚೆಕ್ ಕೊಡಬಹುದಿತ್ತಲ್ಲ? ಎಂದು ವಿಚಾರಿಸಿದನು.

ನೀನಿನ್ನೂ ಆ ಚೆಕ್ಕುಗಳನ್ನು ಕ್ಯಾಶ್ ಮಾಡಿಸಿಲ್ಲವಷ್ಟೇ?

ಇಲ್ಲ.

ಒಳ್ಳೆಯ ಕೆಲಸ ಮಾಡಿದೆ. ಚೆಕ್ ಕ್ಯಾಶ್ ಮಾಡ ಬೇಡ. ಇದರಿಂದ ನಿನಗೂ ಲಾಭ ವಿದೆ—ನನಗೂ ಲಾಭವಿದೆ. ಏಕೆಂದರೆ ನನ್ನ ಹಸ್ತಾಕ್ಷರ ಸಂಗ್ರಹಿಸಲು ನನ್ನ ಬಳಿ ಬರುವ ನನ್ನ ಪ್ರೇಮಿಗಳಿಗೆ ತಲಾ ಒಂದು ಹಸ್ತಾಕ್ಷರಕ್ಕೆ ನಾನು 30 ಪೌಂಡ್ ತಗೊಳ್ಳುತ್ತೇನೆ. ನೀನು ಈ ಐದು ಚೆಕ್ಕುಗಳನ್ನು ಆ ನನ್ನ ಸಾಹಿತ್ಯ ಪ್ರೇಮಿಗಳಿಗೆ ಮಾರಿ ಬಿಡು. ನಿನಗೆ ನೂರ ಬದಲು ನೂರೈವತ್ತು ಪೌಂಡ್ ದೊರಕುವುದು. ಅಂದರೆ ಐವತ್ತು ಪೌಂಡು ಲಾಭವಾಯ್ತಲ್ಲಾ.

ಆದು ಸರಿ. ಆದರಿಂದ ನಿಮಗೇನು ಲಾಭ?

ಲಾಭ? ಹಾಂ ಹೌದು, ಆ ನನ್ನ ಪ್ರೇಮಿಗಳು ಈ ಚೆಕ್ಕನ್ನು ಎಂದೂ ಕ್ಯಾಶ್ ಮಾಡಿಸೋದಿಲ್ಲ. ನನ್ನ ಹಸ್ತಾಕ್ಷರವನ್ನು ಸುರಕ್ಷಿತವಾಗಿಡಲಿಕ್ಕಾಗಿ ಅವರು ಈ ಚೆಕ್ಕಿಗೆ ಫ್ರೇಮು ಹಾಕಿಡುತ್ತಾರೆ, ಸರಿಯೂಯಿತಲ್ಲಾ ಮತ್ತೆ, ನನ್ನ ನೂರಕ್ಕೆ ನೂರು ಪೌಂಡು ಉಳಿದಂತಾಯಿತು ಎಂದು ಬಿಟ್ಟರು ಶಾಹ.

—ರಾ. ವಾಲಿನಾಥನ್.

ಹಸಿವೆಯಿಂದ ಚೀರುತ್ತಿದ್ದ ತನ್ನ ಮಗುವನ್ನು ರಬೀಯೇರನ ಪತ್ನಿ ಎದೆಗವಚಿಕೊಂಡಾಗ ರಬೀ ಉತ್ಸುಕತೆಯಿಂದ ನೋಡುತ್ತಾ ಕುಳಿತಿದ್ದನು—"ಈಗ ನೀನು ಸ್ವರ್ಗದ ಸ್ನಾನವನ್ನು ಕಳೆದುಕೊಂಡೆ" ಎಂದು ಅಮಾನುಷ ವಾಣಿಯೊಂದು ಆಗಲೇ ಗರ್ಜಿಸಿತು

ರಬೀ ಸಂತೋಷದಿಂದ ಕುಣಿದಾಡಿ ಬಿಟ್ಟನು. ಅನಂತರ—"ಬಹಳ ಒಳ್ಳೆದಾಯಿತು. ಪುರಸ್ಕಾರದ ದಾಸ್ಯದಿಂದ ನಾನೀಗ ಮುಕ್ತನಾದೆ. ಇನ್ನು ನಾನೊಬ್ಬ ಸಾಮಾನ್ಯ ಮಾನವನಂತೆ ದೇವರ ಸೇವೆ ಮಾಡಬಹುದು" ಎಂದು ಉತ್ತರಿಸಿದನು.

—ಒಂದು ಹಸೀದೀ ಕತೆ

ಆಲಾಪನೆ

ತೊಲಗ ಧೂರ್ತ ವ್ಲೇಂಛರೇ
ನಮಗೆ ದ್ರೋಹಗೈವಿರೇ |
ನಿಮ್ಮ ಹುಟ್ಟು ನಿಮ್ಮ ಬೆಳೆಕೆ
ಭಾರತವೆಂಬುದ ಮರೆತಿಹಿರೇ |

ಉಂಡ ಮನೆಗೆ ದ್ರೋಹವ
ಗೈವ ಲಂಡ ವಾಕರ-
ನಮ್ಮ ವೀರ ಯೋಧರು
ಧೈರ್ಯದಿಂದ ತರಿವರು |

ವೀರ ರಕ್ತ ನಮ್ಮದು |
ಶೌರ್ಯ ಧೈರ್ಯ ಹಸಿರದು.
ಹೇಡಿ ಪಾಕಿಸ್ತಾನವ.
ನಾವೆಲ್ಲ ದಹಿಸುವ

ನರಪಾತಕ ಯೊಪ್ಯಾಖಾನ
ರಕುತದ ನದಿ ಹರಿಸಿದ ಪಾಕಿಸ್ತಾನ
ಇರುವೆಗೇಕೆ ಭಾರತ.
ಸಿಗದು ನಿನಗೆ ಸಂತತ

ದಿವ್ಯ ಮೂರ್ತಿ ಭಾರತಿ-
ಭವ್ಯ ಅವಳ ಸಂಸ್ಕೃತಿ
ಇವಳ ಸ್ವಾತಂತ್ರ್ಯೋದ್ದೀಪನ
ಬೆಳಗಲೆಂದು ನಮ್ಮ ದಹನ |

ಚೀನ ಬರಲಿ ಬ್ರಿಟನು ಬರಲಿ
ಪರನೂಣು ಬಾಂಬೇ ಹಾಕಲಿ.
ಇರುವೆವರೆಗೆ—ಉಸಿರಾಟ
ಸ್ವಾತಂತ್ರ್ಯಕ್ಕೆಮ್ಮ ಹೋರಾಟ

ಆಗಲಿ ನಮ್ಮಯ ಬಲಿದಾನ
ಕುಡಿಯಲಿ ರಕ್ತವ ಪಾಕಿಸ್ತಾನ
ತಿನ್ನಲಿ ನಮ್ಮಯ ಒಡೆತ ಘನ
ಹೇಳಿ ಬಿಡಲಿ ಮತ್ತೆ ಪಲಾಯನ

ಭಾರತವುಳಿಯಲು ಸಂಸ್ಕೃತಿ ಬೆಳೆಯಲು
ಇದೊ ತನು ಮನಗಳ ಪಣವಿಹುದು
ಸ್ವಾತಂತ್ರ್ಯ ದೀಪಿಗೆ ಬೆಳಗುತಲಿರಲು
ನಮ್ಮಯ ಸಕಲವು ಮುಡಿಪಿಹುದು.

—ಪ. ರಾಮಕೃಷ್ಣ ಶಾಸ್ತ್ರಿ

ಮನೆಯ ವೈಭವವನ್ನು ಕತೆ ಕತೆಯಾಗಿ ನನಗೆ ವಿವರಿಸುವಳು. ನಮ್ಮ ಮಗಳು ಮಯಿಯು ನಿಜವಾಗಿಯೂ ಕಿಟ್ಟಣ್ಣನನ್ನು ಲಗ್ನವಾಗುವುದರಿಂದ ಸುಖಿಯಾಗುತ್ತಾಳೆ. ಗೃಹಿಣಿಯು ತನ್ನ ಕೊನೆಯ ತೀರ್ಮಾನವನ್ನು ಹೇಳಿಬಿಟ್ಟರು.

ಂ ಂ ಂ

ಜಮೀನ್ದಾರರೇ ಸಾವಿತ್ರಿಯ ಮನೆವರೆಗೆ ಬಂದು ನೆಂಟಸ್ತಿಕೆ ಪ್ರಸ್ತಾಪ ಮಾಡಿ ಹೋದರು. ಅದಕ್ಕನುಕೂಲವಾಗಿ ಕಿಟ್ಟಣ್ಣ ಸ್ನೇಹಮಯಿಯರ ಜಾತಕವೂ ಕೂಡಿ ಬಂತು. ಇದೇ ಸಮುಹೂರ್ತದಲ್ಲೇ ಕಿಟ್ಟಣ್ಣನ ತಂದೆಯು ಹುಚ್ಚರ ಆಸ್ಪತ್ರೆಯಿಂದ ಆರೋಗ್ಯಹೊಂದಿ ಊರಿಗೆ ಮರಳಿ ಬಂದರು ಸಾವಿತ್ರಿಗೆ ಅಂದು ಜನ್ಮಾಷ್ಟಮಿ ಮತ್ತು ಯುಗಾದಿ ಕೂಡಿ ಬಂದಂತಾಯಿತು. ಆಕೆ ಅಂದು ಸಂಜೆ ಹಣ್ಣುಕಾಯಿ ಹಿಡಿದುಕೊಂಡು ದೇವ ಮಂದಿರಕ್ಕೆ ಹೋಗಿ ಎಂದಿನಂತೆ ಪ್ರದಕ್ಷಿಣೆಹಾಕಿ ಮಹಾದೇವನಿಗೆ ದಂಡವತ್ ಎರಗಿದಳು.ಅರ್ಚಕನು ಹಣ್ಣುಕಾಯಿ ಮುಗಿಸಿ ತೀರ್ಥಕೊಡಲು ಹೊರಬಂದಂತೂ ಸಾವಿತ್ರಿಯ ನಮಸ್ಕಾರ ಮುಗಿದಿರಲಿಲ್ಲ. ಅವನು ಗಾಬರಿಯಾಗಿ 'ಸಾವಿತ್ರಮ್ಮಾ'ಎಂದು ಕೂಗಿದನು. ಸಾವಿತ್ರಿಯಾದರೋ ನಿಷ್ಪಂದ! ನೀರವ! ನಿಶ್ಚೇತನ! ಅರ್ಚಕನು ಓಡಿ ಬಂದು ಆಕೆಯನ್ನೆತ್ತಿದಾಗ ಆ ಮಹಾಮಾತೆಯ ಕಣ್ಣೀರಿನಿಂದ—ಆನಂದಾಶ್ರುವಿರಬಹುದು—ನೆಲವೆಲ್ಲಾ ಒದ್ದೆಯಾಗಿತ್ತು. ಆಕೆಯ ದಿವ್ಯಾತ್ಮವನ್ನು ಆಕೆಯ ಆರಾಧ್ಯ ದೇವನು ಆಯಕಟ್ಟಿನ ಸಮಯದಲ್ಲಿ ಕೊಂಡೊಯ್ದಿದ್ದನು.

ಸಾವಿತ್ರಿಯ ಕಣ್ಣೀರಿಗೆ ಕರಗಿದ ದೇವ ದೇವನು ಕಣ್ಬೆರೆದು ಆಕೆಯ ದಿಟ್ಟ ದಾರಿದ್ರ್ಯವನ್ನು ಪರಿಹರಿಸಿ ಐಹಿಕ ಸುಖವನ್ನು ಕೊಟ್ಟನು. ಮುಂದೆ?

ಪ್ರಜಾರಾಜ್ಯ ದಿನದ ಹಾರ್ದಿಕ ಶುಭಾಶಯಗಳು !

ಎಂ. ಚಿಕ್ಕಯ್ಯ ಶೆಟ್ಟಿ

ಆನಂದ ಉಪಾಹಾರ ಗೃಹ

ನ್ಯೂ ಆರ್ಥರ್ ರೋಡು, ತಾರ್‌ದೇವ್,

ಬೊಂಬಾಯಿ—34

ಜಪಾನಿನ ವೈಶಿಷ್ಟ್ಯಗಳು

(ಪದಿನಾಲ್ಕನೇ ಪುಟದಿಂದ)

ರ್ಡರ್'ಗಳೂ ಸುಸಜ್ಜಿತವಾಗಿರುತ್ತವೆ. ವರನ ಆತ್ಮೀಯ ಸೂತ್ರಧಾರನೊಬ್ಬನಿರುವನು. ಧ್ವನಿವರ್ಧಕದ ಮೂಲಕ ಕಾರ್ಯಕ್ರಮದ ವಿವರಗಳನ್ನು ಜಾಹೀರು ಮಾಡುವುದು, ಶುಭಾಶಂಸನೆಗಳಿಗಾಗಿ ಅತಿಥಿಗಳನ್ನು ಆಮಂತ್ರಿಸುವುದು, ತನ್ಮಧ್ಯೆ ಸ್ವಲ್ಪ ತಮಾಷೆ— ವಿನೋದ ಭಾವನೆಗಳಿಗೂ ಆಸ್ಪದ ಮಾಡಿಕೊಡುವುದು ಇತ್ಯಾದಿಗಳು ಸೂತ್ರಧಾರನ ಹೊಣೆ.

ವಿವಾಹ ವೇದಿಕೆ

ಮೂರು ಭಾಗಗಳಲ್ಲೂ ಅತಿಥಿಗಳು ಆಸೀನರಾಗಿದ್ದು ಮಧ್ಯೆ ವಧೂವರರು ಬೇರೆ ಬೇರೆ ಆಸನಗಳಲ್ಲಿ ಕುಳಿತಿರುವರು. ಸಾಮಾನ್ಯವಾಗಿರುವುದಕ್ಕಿಂತಲೂ ಹೆಚ್ಚು ನೀಳವಾದ ರೀತಿಗಳುಳ್ಳ ಕೋಟು ಮತ್ತು ಗೆರೆಗೆರೆಯ ಕಾಲಂಗಿ ವರನ ವೇಷ ವಿಶೇಷ. ವರನ ಪಕ್ಕದಲ್ಲೇ ಎಡಕ್ಕೆ ವಧು. ವೈಭವಯುಕ್ತ ವೇಷ ವಿಶೇಷ. ಕೊರಳನ್ನು ಮುತ್ತಿನ ಮಾಲೆಯೊಂದು ಅಲಂಕರಿಸಿರುತ್ತದೆ. 'ಟ್ಯಾಲೆಟ್'ಗಳ ಸಹಾಯದಿಂದ ವಿಶಿಷ್ಟ "ಮೇಕಪ್" ಸುಂದರಿ. ವಧೂವರರಿದಿರಲ್ಲಿ ಒಂದು ಬೃಹತ್ ಪರಿಮಾಣದ 'ಕೇಕ್' ಇರಿಸಲ್ಪಟ್ಟಿರುತ್ತದೆ. ಇದೂ ಅಲಂಕೃತ. ಸೂತ್ರಧಾರನ ನಿರ್ದೇಶದನ್ವಯ ಎದ್ದು ನಿಂತು ವಧೂವರರು ಒಂದು ಬಾಳಿನ ಸಹಾಯದಿಂದ 'ಕೇಕ್'ನ್ನು ತುಂಡರಿಸುವರು. ಒಂದೇ ಲೋಟದಿಂದ ಇಬ್ಬರೂ ಸ್ವಲ್ಪ ಸ್ವಲ್ಪ "ಸಾಕೆ" (ಮೊದಕ ದ್ರವ್ಯ) ಹೀರುವರು. ಮತ್ತೆ ಉಂಗುರ ಬದಲಾವಣೆ. ವಿವಾಹಕರ್ಮ ಸಮಾರೋಪ. ಆತಿಥಿಗಳೂ ವಿಶಿಷ್ಟ ವಿಧಾನದಲ್ಲಿ ಮೊದಕ ದ್ರವ್ಯ ಹೀರಿದಾಗ ವಿವಾಹಕ್ಕೆ ಅಂಗೀಕಾರ ಲಭಿಸಿದಂತೆ!

ಆ ಬಳಿಕ ಔತಣಾ ನಂತರ ಶುಭಾಶಂಸನೆಗಳು. ತಮಾಷೆ ಮತ್ತು ಕಾರ್ಯಮಿಶ್ರಿತ ಮೂತುಗಳು!

ವಧುವಿನ ಸಖಿಯೋರ್ವಳು ಹೇಳುವಳು:—

'ವಧು ಫಕ್ಕನೇ ಅಳುವ ಸ್ವಭಾವದವಳು. ಆಕೆಯ 'ಕಣ್ಣು ನೀರು' ನಷ್ಟವಾಗದಂತೆ ನೋಡುವ ಹೊಣೆಯನ್ನೂ ವರನೇ ವಹಿಸಬೇಕು....'

"ವರನು ಯುವತಿಯರನ್ನು ಕಂಡರೆ ಲಜ್ಜಾಸ್ವಭಾವದವನು; ಆತನಿಗೆ ಅಗತ್ಯವಿರುವ ವಿವಿಧ ವಿಚಾರಗಳನ್ನೂ ತಿಳಿಸುವ ಹೊಣೆ ವಧುವಿನದು." ಎಂದು ವರನ ಸಂಗಾತಿಯೂ ಸರಸವಾಗಿ ಹೇಳುವನು.

ಮಕ್ಕಳೂ, ಅಪ್ಯಾಯಸ್ಥರೂ ಇಂತಹ ವಿವಾಹ ಸಮಾರಂಭಗಳಲ್ಲಿ ಭಾಗವಹಿಸುವುದಿಲ್ಲ. ಸ್ವಂತ ಸಹೋದರ ಸಹೋದರಿಯರಾದರೂ ಈ ವಾಡಿಕೆಗೆ ಅಪವಾದವಲ್ಲ.

ಅತಿಥಿಗಳು ಹಿಂತೆರಳುವ ಅವಸರದಲ್ಲಿ ದ್ವಾರಗಳೇ ನೂತನ ವಧೂವರರಿಗೆ 'ಮಧು ವಿಧು'ವಿನಾಗಿ ನಿಶ್ಚಿತ ಸ್ಥಳಕ್ಕೆ ತೆರಳಲು ವಾಹನ ಸಿದ್ಧ. ವಧುವೇ ಸಾರಥ್ಯ ವಹಿಸುವಳು. ಹೀಗೆ ದಾಂಪತ್ಯ ರಥ ಸಾಗುತ್ತದೆ.

ಅವಿವಾಹಿತ ದಾಂಪತ್ಯ

ಅವಿವಾಹಿತ ದಾಂಪತ್ಯ ಜೀವನ (ದೋಸೆಯಿ) ಸಂಪ್ರದಾಯವೂ ಜಪಾನಿನ ವೈಶಿಷ್ಟ್ಯಗಳಲ್ಲೊಂದು ಸ್ತ್ರೀ ಪುರುಷರು ವಿವಾಹಿತರಾಗದೇನೇ ಪತ್ನಿ–ಪತಿಯರೆಂಬ ಭಾವನೆಯಿಂದ ಒಂದಾಗಿ ದಾಂಪತ್ಯ ಜೀವನವೊಂದು ಪರೀಕ್ಷಣವಾಗಿರಲೂ ಬಹುದು. ಪರಸ್ಪರ ಪ್ರೀತಿಸುವ ಸ್ತ್ರೀ–ಪುರುಷರು ಒಂದೆರಡು ವರ್ಷ ಒಂದಾಗಿ ಜೀವಿಸಿದ ಬಳಿಕ ಇಷ್ಟವಾದಲ್ಲಿ ಕೊನೆವರೆಗೂ ಹಾಗೆಯೇ ಸಂಸಾರ ನೌಕೆ ಸಾಗಬಹುದು; ಅಥವಾ ಮತ್ತೆ ವಿವಾಹಿತರಾಗಲೂ ಬಹುದು; ವಿವಾಹ ವಿಮೋಚನೆಗೂ ಅಡ್ಡಿಯಿಲ್ಲ.

ಅವಿವಾಹಿತ ದಾಂಪತ್ಯ ಜೀವನದ ವೇಳೆ ಮಕ್ಕಳಾಗದಂತೆ ಮುಂಜಾಗ್ರತೆ ವಹಿಸುವಳಾದರೂ ಮಕ್ಕಳುಂಟಾದರೆ ಹಾಗೆ ಹೆತ್ತವರದು ವೈವಾಹಿಕ ಜೀವನವಾಗಿ ಸಮೂಜ ಅಂಗೀಕರಿಸುವುದು.

ವನಿತೆಯರ ಅಂಗಸೌಂದರ್ಯಗಳನ್ನು ವರ್ಧಿಸಲು ವೈದ್ಯಕೀಯ ಜಗತ್ತು ನೆರವಾಗುತ್ತಿದೆ. ಸಾರ್ವಜನಿಕ ಉದ್ಯಾನಗಳು, ಕಾಫಿ ಹೋಟೆಲುಗಳು, ಬಾರ್‌ಗಳು, ರೈಲುಗಾಡಿಗಳು, ಮೋಟಾರು ವಾಹನಗಳು, ಇತ್ಯಾದಿ ಕಡೆಗಳಲ್ಲಿ ಬಹಿರಂಗವಾಗಿಯೇ ಜೋಂಬನ ಸ್ವಾತಂತ್ರ್ಯವನ್ನು ಯುವ ಜನಾಂಗವು ಉಪಯೋಗಿಸುತ್ತಿರುತ್ತದೆ.

ಗಂಡನಿಲ್ಲದ ದಾಂಪತ್ಯ

ರಾತ್ರಿ ಹತ್ತು ಗಂಟೆಯ ಬಳಿಕ ಕೆಲವು ನಿಶ್ಚಿತ ದಿನಗಳಲ್ಲಿ "ದಂಪತಿಯರ ಸಮಾಗಮ" ಎಂಬ ಶೀರ್ಷಿಕೆಯ ಟೆಲಿವಿಷನ್ ಕಾರ್ಯಕ್ರಮವು ಟೋಕಿಯೋ ಮಹಾನಗರದಲ್ಲಿ ಪ್ರಸಾರವಾಗುತ್ತದೆ. ರಾಷ್ಟ್ರದ ಯಾವುದಾದರೂ ಒಂದು ಮೂಲೆಯಲ್ಲಿರುವ ಮನೆಗೆ ಸಜ್ಜೀಕೃತ ಯಂತ್ರೋಪಕರಣಗಳೊಂದಿಗೆ ಕಲಾವಿದರು ತೆರಳುವರು. ಆ ಕುಟುಂಬದವರೊಂದಿಗೆ ಸಲ್ಲಾಸವನ್ನು ಪ್ರಶ್ನೋತ್ತರಗಳ ರೂಪದಲ್ಲಿ ಸಂಗ್ರಹಿಸಿ ಕೊಳ್ಳುವರು.

ಕೆಲವೊಮ್ಮೆ ಪತಿ—ಪತ್ನಿಯರೀರ್ವರೂ ಸ್ತ್ರೀಯರೇ ಆಗಿದ್ದು ದಾಂಪತ್ಯಜೀವನ ನಡೆಸುವವರೂ ಕೂಡ ಸಂಭಾವಣೆಯು ಕಾರ್ಯಕ್ರಮದಲ್ಲಿರುವುದಿದೆ. ಹೀಗೆ ಸ್ತ್ರೀಯರೇ ಪರಸ್ಪರ 'ರಿಜಿಸ್ಟರ್ಡ್ ವಿವಾಹ'ವಾಗಿ ದಾಂಪತ್ಯ ಜೀವನ ಸಾಗಿಸುವುದಿದೆ. ಮೂದ ಕಶ್ಚ ತುಳುಕುವ ಯುವತಿಯರೀರ್ವರು ಪತಿ—ಪತ್ನಿಯರು!

ಪ್ರಶ್ನೆಗಳಿಗೆಲ್ಲಾ ನಿಸ್ಸಂಕೋಚವಾಗಿಯೇ ಈ 'ದಂಪತಿ'ಗಳೂ ಉತ್ತರ ನೀಡುವರು

ಓರ್ವ ಯುವತಿಗೆ ಸೂತ್ರವೇ ಇಲ್ಲೊಬ್ಬ ಯುವತಿಯ ಮನಸ್ಸನ್ನೂ ಅಭಿಲಾಷೆಗಳನ್ನೂ ಪರಿಪೂರ್ಣವಾಗಿ ತಿಳಿಯಲು ಸಾಧ್ಯ....'ಸ್ವಂತ ಮಕ್ಕಳನ್ನು ಹೊತ್ತು ಹೆತ್ತು ಸಾಕುವುದೆಲ್ಲಾ ವೃಥಾ ಕಿರುಕುಳದ ಭಾರ....ಹಾಗೆ ಸಲಹಿ ಸಾಕಬೇಕೆಂದಾದರೆ ನಮ್ಮಲ್ಲಿ ಒಕ್ಕೈಯ ನಾಯಿಮರಿ ಇದೆ ...ಇದು ನಮ್ಮಿರ್ವರ ಜೀವನ....ಹೀಗೆಲ್ಲಾ ಆವರ ಉತ್ತರ.

ನಮ್ಮ ದೇಶದಲ್ಲಾದರೆ ಇದೊಂದು ಹಾಸ್ಯ ನಾಟಕವೆಂದೇ ತೋರಬಹುದಾದರೂ ಕಾನೂನು ಪ್ರಕಾರ ವಿವಾಹಿತರಾದ ಈ 'ಸ್ತ್ರೀ ದಂಪತಿ'ಯರು ರಹಸ್ಯವಾಗಿಯೂಗಲೀ ಬಹಿರಂಗವಾಗಿಯೂಗಲೀ ಪ್ರಣಯ ಲೀಲೆಗಳಲ್ಲಿ ತೊಡಗಿರುವರು. ಇವರ ಸ್ವರ್ಗ ಪ್ರೇಮ ಆಜೀವ–ಅನಾಧಾರಣ!

ಆದರೆ ಇಂತಹ 'ಮೂದಲಿ ದಂಪತಿಗಳ ಒಳ ಜಗಳ—ಅಂತರ್ಯುದ್ಧಗಳು ಅನೇಕ ಕೊಲೆಪಾತಕಗಳಿಗೂ ಕಾರಣವಾಗಿತ್ತೆನ್ನಲಾಗಿದೆ.

ಯುದ್ಧೋತ್ತರ ಸುಧಾರಣೆ

ಹಿಂದಿನ ಕಾಲದಲ್ಲಿ ಜಪಾನಿಯರು ಹೆದರುತ್ತಿದ್ದುದು ಅಲ್ಲಿನ ಭೂಕಂಪ, ಜ್ವಾಲಾಮುಖಿ, ಬೆಂಕಿ, ಮಿಂಚು ಮತ್ತು ತಂದೆ ....ಎಂಬವುಗಳಿಗಾಗಿತ್ತು. ಈಗ ಅವೆಲ್ಲಾ ಹೋಯ್ತು. ಯುವ ಜನಾಂಗವು ಯಾವುದಕ್ಕೂ ಭಯಪಡಬೇಕಾಗಿಲ್ಲವೆಂಬುದು ಈಗಿನ ಸಿದ್ಧಾಂತ. ಬದಲಾದ ಕಾಲಗತಿ!

ಅಂದು ಕುಟುಂಬದ ಅತಿ ದೊಡ್ಡ ಶಕ್ತಿ ತಂದೆ; ಸಮಾಜದ ಸರ್ವಾಧಿಪತಿಯರು ಹಿರಿಯರು.... ಹೀಗಿದ್ದುದೀಗ ಈ ಎಲ್ಲಾ ಬಗೆಯ ಶಕ್ತಿಗಳನ್ನೂ ನಿಯಂತ್ರಿಸಿದೆ—ಈಗಿನ ಯುವಜನಾಂಗ.

ದ್ವಿತೀಯ ಜಾಗತಿಕ ಯುದ್ಧದ ನಂತರ ಅದ ಅತಿ ಪ್ರಧಾನವಾದ ಬದಲಾವಣೆ—ಸುಧಾರಣೆಯಿದು. ಹಿಂದಿನ ಸಾಮಾಜಿಕ ಆರ್ಥಿಕ ಕೌಟುಂಬಿಕ ಶಿಸ್ತುಗಳಿಗೊಳಪಟ್ಟು ಬೆಳೆದ ಹೆತ್ತವರು ತಮ್ಮ ಮಕ್ಕಳ ಪರ್ತನೆಗಳನ್ನು ನಿಯಂತ್ರಿಸಲು ಅಶಕ್ತರಾಗಿದ್ದಾರೆ; ತಮ್ಮ ಹೀಳಿಗೆಗಳಿಗೆ ಪರಿಪೂರ್ಣ (ಅನೈತಿಕ) ಸ್ವಾತಂತ್ರ್ಯವನ್ನೂ ಸ್ವಾಧೀನ ಶೀಲವನ್ನೂ ಒದಗಿಸಿದ ಇಂದಿನ ಪರಿಣಾಮದ ಬಗ್ಗೆ ಪಶ್ಚಾತ್ತಾಪ ಪಡುತ್ತಿರಬೇಕು.

ರಾಜಾ ಪ್ರತ್ಯಕ್ಷ ದೇವತಾ! ಜಪಾನಿನಲ್ಲಿ ಚಕ್ರವರ್ತಿಯೇ ದೇವರೆಂದಿದ್ದ ಭಾವನೆ ಈಗ ಮರೆತಿದೆ.

(—ಸಂಗ್ರಹ)

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಏಳು, ಎದ್ದೇಳು ಓ೭೭ ತರುಣ!

ಏಳು, ಎದ್ದೇಳು ಓ೭೭ ತರುಣ ಬಾಂಧವಾ
ನಾಡಿಗೆ ಬರಲಿ ನಿನ್ನಿಂದ ಒಳ್ಳೆಯ ಗೌರವಾ
"ಧ್ರುವ ದಿಸೆ"ಯಲ್ಲಿ ಕೇಳು ಯುದ್ಧ
ಘೋಷಣ
ತರುಣ ಬಾಂಧವರಿಂದಲೇ ನಾಡಿಗೆ
ಭೂಷಣ!

ದುಡಿವ ಹಿರಿಯರ ಮಾತು,
ಮರೆತೆಯಾದರೆ ಹೋತು
ನಾಡಿಗಾದೀತು ಸೋಲು
ಆದಕೆ- ಆದನು ನೀ ಗೆಲ್ಲು!

ನಾಡಿಗೆ ಬಂದಿಹ ಈ ಕುತ್ತು
ವಿಶ್ವಕೆ ಬಂದಿಹುದಾಪತ್ತು
"ಯೌವ್ವನ" ಹಿಡಿದಿಹನೊಳ್ಳೆಯ ಗತ್ತು
ಅವನಿಂದಲೇ ಈ ಜಗಕೆ ವಿಪತ್ತು–?

ಕೇಳು ರಾಷ್ಟ್ರ ಪ್ರಧಾನಿ ಇಂದಿರಾ
ಮಾತು
ಅವಳ ಧೈರ್ಯಕೆ ಹೋಗಬೇಕವರು
ಸೋತು,
ಎಲ್ಲೆಲ್ಲೂ ಕೇಳುತಿರುವುದು ಧೈರ್ಯದ
ನುಡಿ
ಆದನೆಲ್ಲ ನಾವು ಹರಸಬೇಕು
ಎಲ್ಲರೊಡಗೂಡಿ!

ಕನ್ನಡದ ಸಿಹಿನೆಲದ ಯುವಕನೇ ಏಳು
ತಾಯಿ ಭಾರತೀಯನು ಜಯಿಸಲೇಳು
ಏಳು ಬೇಗ ನಾಡಿಗಾಗಿ ತ್ಯಾಗಿಯೂಗಲೇಳು
"ಭಾರತಿ"ಯ ಮಾನಕಾಗಿ ಬೊಂಕಕಳ್ಳ
ಬಾಳು!

"ಬಂಗ್ಲಾ—ಭಾರತಿ"ಯ ಜಯವ
ನಂಬಿ
ತಾಯಿ ಭಾರತಿಯ ಉಡಿಯ ತುಂಬು
ಗಡಿ ಕಾಶ್ಮೀರ,ಪಂಜಾಬಕಾಗಿ ನೀ ನಿಲ್ಲು
"ಕಾಶ್ಮೀರ"ವೇ ನಮ್ಮ ದೇವ
ದೀಪು !—?

—ಬಾಲಚಂದ್ರ ಎಸ್. ಬಡಿಗೇರ.

ಪ್ರಜಾರಾಜ್ಯಗಳ ಕತೆ

(ಹನ್ನೊಂದನೇ ಪುಟದಿಂದ)

ಪ್ರಜಾರಾಜ್ಯಗಳಲ್ಲಿ ಫ್ಲೋರೆನ್ಸ್, ವೆನಿಸ್, ಲೊಂಬಾರ್ಡಿ, ಮಿಲಾನ್, ಜಿನೇವಾಗಳು ಥಿರ್ಥ ಕಾಲ ಬಾಳಿದುವು. ಬಳಿಕ ನೆರೆರಾಷ್ಟ್ರಗಳಾದ ಇಟಲಿ, ಆಸ್ಟ್ರಿಯ ಮುಂತಾದುವುಗಳು ಅವನ್ನು ಕೈವಶ ಮಾಡಿಕೊಂಡುವು. ೮ ಮೊದಲು ಜಿನೇವಾ 1196 ವರುಷ ಮತ್ತು ವೆನಿಸ್ 800 ವರುಷಗಳ ಕಾಲ ಅನೂಚಾನ ಪ್ರಜಾಡಳಿತ ನಡೆಸಿದ್ದುವು.

ಏಸ್ ಲೆಂಡ್ ಗಣರಾಜ್ಯ ಆಧುನಿಕ ಗಣರಾಜ್ಯಗಳಲ್ಲಿ ಪ್ರಾಚೀನವಾಗಿದೆ. ಸ್ವಾಟ್ ಲಂಡ್, ಡೆನ್ಮಾರ್ಕ್, ನಾರ್ವೆಗಳ ರಾಜರ ನಿರಂಕುಶ ಪ್ರಭುತ್ವದಿಂದ ಕ್ರಿಸ್ತಶಕ 928ರಲ್ಲಿ ಬೇಸರ ಹೊಂದಿ ಓಡಿ ಬಂದು ಆಶ್ರಿತರಾದ ರಾಜ್ಯ ಆದಾಗಿತ್ತು. ಈ ನಡುಗುಡ್ಡೆಯಲ್ಲಿ ಜನರು ಚುನಾಯಿಸಿದ ಶ್ರೇಷ್ಠ ಮ್ಯಾಜಿಸ್ಟ್ರೇಟನಿಗೇ ಆಡಳಿತಾಧಿಕಾರವಿತ್ತು. ಇವನಿಗೆ ಸಹಕರಿಸಲು ಜನರೇ ಪ್ರತಿನಿಧಿ ಮಂಡಳಿಯೊಂದನ್ನು ಆಯ್ಕೆ ಮಾಡುತ್ತಿದ್ದರು 400 ವರುಷಗಳ ವರೆಗೆ ಈ ಪ್ರಜಾರಾಜ್ಯ ಆಳಿದ ತರುವಾಯ ಕ್ರಿಸ್ತಶಕ 1263ರಲ್ಲಿ ಜನರೊಳಗೆ ಆಂತರಿಕ ಕಲಹವುಂಟಾಯಿತು. ಕೆಲವರು ಏಸ್‌ಲೆಂಡ್ ನ್ನಾಳಲು ನಾರ್ವೆಯ ರಾಜ ಹಾಕೋನನ್ನು ಕರೆಸಿದರು. ಮುಂದೆ 1380ರಲ್ಲಿ ಏಸ್‌ಲೆಂಡ್ ಡೆನ್ಮಾರ್ಕಿಗೆ ವರ್ಗಾಯಿತು. ಕಳೆದ ಶತಮಾನವಷ್ಟು ನೆಪೋಲಿಯನ್ನನ ವಾಟರ್ಲೂ ಮುಂತ್ತ ಪ್ರಸಂಗದ ವೇಳೆಗೆ ಏಸ್‌ಲೆಂಡ್ ಬ್ರಿಟಿಷರ ವಶವಾಯಿತು. ಈ ಯುದ್ಧಗಳ ಬಳಿಕ ಮಾತ್ರ ಅದು ಡೆನ್ಮಾರ್ಕಿಗೆ ಕೈಬೀಸಿತು.

1292ರಲ್ಲಿ ರಾಜನನ್ನು ಕೊಲೆ ಮಾಡಿ, ಕ್ರಾಂತಿಯೆಬ್ಬಿಸಿ, ಫ್ರಾನ್ಸ್ ಪ್ರಜಾರಾಜ್ಯವಾಗಿ ನಡೆಸಿದ 12 ವರ್ಷಗಳ ಆಡಳಿತ ಏನೇನೂ ಫಲಕಾರಿಯಾಗಿರದೆ ಆಗಿನ ಅತ್ಯಾಚಾರಗಳು ಅನಾಯಕತ್ವದ ನೆನಪು ತರುತ್ತಿದ್ದುವು ಕ್ರಾಂತಿ ಹೂಡಿದ ನಾಯಕರಿಂದ ಒಬ್ಬರಿಗೊಬ್ಬರ ನಿರ್ನಾಮವಾಯಿತು. ಈ ಸುಸಂಧಿಯಲ್ಲಿ 1804ರಲ್ಲಿ ನೆಪೋಲಿಯನ್ ಫ್ರಾನ್ಸಿನ ಸಾಮ್ರಾಟ ತಾನೆಂದು ಸಾರಿದ 1848ರಲ್ಲಿ ಜನರು ಪುನಃ ರಾಜಸತ್ತೆಯನ್ನು ಮುರಿದು, ಪ್ರಜಾರಾಜ್ಯ ಸ್ಥಾಪಿಸಿದರು. ಲೂಯಿ ಜೋನಾಪಾರ್ಟನನ್ನು ಅಧ್ಯಕ್ಷನೆಂದು ಆರಿಸಿದರೂ, ತೃತೀಯ ನೆಪೋಲಿಯನ್ ಸಾಮ್ರಾಟನೆಂದು ಆತ ಸ್ವತಃ ಕಿರೀಟ ಧಾರಣೆ ಮಾಡಲು ಆಂತರಿಕ ಜಗಳದಿಂದ ಮುಂದೆ ಸಾಧ್ಯವಾಯಿತು. ಆದರೆ 1870ರಲ್ಲಿ ಮರಳಿ ಫ್ರಾನ್ಸ್ ಗಣರಾಜ್ಯವಾಯಿತು.

1939ರ ತನಕ ಫ್ರಾನ್ಸ್ ಪ್ರಜಾರಾಜ್ಯವಾಗಿದ್ದರೂ ದ್ವಿತೀಯ ವಿಶ್ವಯುದ್ಧದಲ್ಲಿ ಆ ವರ್ಷ ನವಂಬರ ತಿಂಗಳಲ್ಲಿ ಅದನ್ನು ಜರ್ಮನರು ಆಕ್ರಮಿಸಿದರು. ಗಿರಾಡು ಹಾಗೂ ಡಿಗಾಲೆ ದೇಶಭ್ರಷ್ಟರಾದರೂ ಅಲ್ಲಿ ಪ್ರಜಾಪ್ರಭುತ್ವ ನೆಲೆಯೂರಿಸಿದರು. ಡಿಗಾಲೆ ರಾಷ್ಟ್ರಾಧ್ಯಕ್ಷರಾಗಿ ಒಂದು ವರ್ಷದಲ್ಲಿ ಅಧಿಕಾರ ಪತನ ಹೊಂದಿದರೂ ಅಲ್ಲಿನ್ನೂ ಪದವಿಗಾಗಿ ಕತ್ತಾಟ ನಡೆದೇ ಇದೆ.

ವಿಶ್ವದಲ್ಲೇ ಪ್ರಸಿದ್ಧ ಪ್ರಜಾರಾಜ್ಯವಾದ 191 ಚದರ ಮೈಲಿ ವಿಸ್ತಾರದ ಆಂಡೋರಾ ರಾಜ್ಯಕ್ಕೆ 9ನೇ ಶತಮಾನದಲ್ಲಿ ಚಾರ್ಲಸ್ ಮ್ಯಾಗ್ನೆಯಿಂದ ಸ್ವಾತಂತ್ರ್ಯ ಸಿಕ್ಕಿತು. ಇದರ ಅಧಿಕಾರಕ್ಕಾಗಿ ಸ್ಪೇನ್ ಮತ್ತು ಫ್ರಾನ್ಸ್‌ಗಳು ಕಚ್ಚಾಡಿದುವು 1942ರಲ್ಲಿ ಜರ್ಮನಿ ಫ್ರಾನ್ಸಿನ ಮೇಲೆ ಧಾಳಿ ಮಾಡಿದರೂ ಅದರ ತಳ್ಳಿಗೆ ಬರಲಿಲ್ಲ. ಮೂಲ್ಟಾ ಇನ್ನೊಂದು ಪುಟ್ಟ ದ್ವೀಪ. ಬ್ರಿಟಿಷರು ಅದಕ್ಕೆ ಸ್ವಾತಂತ್ರ್ಯ ಕೊಟ್ಟಿದ್ದರೂ ಅದು ನಿರಾಕರಿಸುತ್ತಿನೆ—ಸ್ವಾತಂತ್ರ್ಯ ಬೇಡವೆಂದು.

ತನ್ನದೇ ಆದ ಸ್ವಂತ ನಡವಳಿಕೆ ರಚಿಸಿ 1291ರ ಲಾಗಾಯಿತು ಆಳುತ್ತಿರುವ ಪ್ರಾಚೀನ ಮತ್ತು ಪ್ರಬಲ ಗಣರಾಜ್ಯವಾದ ಸ್ವಿಜರ್ಲಂಡಿನಲ್ಲಿ ಹೆಂಗಸರಿಗೆ ಇಂದೂ ಮತಾಧಿಕಾರವಿಲ್ಲ. 38 ಚದರ ಮೈಲಿ ವಿಸ್ತಾರದ ಇಟಲಿಯ ಸಾನ್ ಮೂರಿನೋ ಬಹು ಪುಟ್ಟ ಪ್ರಜಾರಾಜ್ಯ. ಅದು ಪ್ರಾಚೀನವಾಗಿದ್ದು, ದ್ವಿತೀಯ ವಿಶ್ವ ಯುದ್ಧದಲ್ಲಿ ಮಿತ್ರರಾಷ್ಟ್ರಗಳ ವಿರುದ್ಧ ಕಾದಾಡಿದೆ. ಮತ್ತೊಂದು ಚಿಕ್ಕ ಬ್ರಿಟಿಷ್ ರಾಜ್ಯವೆಂದರೆ ಲುಂಡಿ.

ಬಿಳಿಯರಿಗೆ ನಾಗರಿಕ ಮತ್ತು ಆಸ್ತಿಯ ಹಕ್ಕನ್ನು ವಿರೋಧಿಸುವ ಏಕೈಕ ಪ್ರಜಾರಾಜ್ಯ ಆಫ್ರಿಕದ ಪಶ್ಚಿಮ ತೀರದ ಲೈಬೀರಿಯೂ. ಅಮೇರಿಕದ ಸಂವಿಧಾನವನ್ನು ಅನುಕರಿಸುವ ಈ ನಿಗ್ರೋಗಳ ತಾಯ್ನಾಡು 1847ರಲ್ಲಿ ಸ್ವತಂತ್ರವಾಗಿದೆ.

1776ರಲ್ಲಿ ಜನಿಸಿದ ಅಮೇರಿಕ ಪ್ರಜಾರಾಜ್ಯದಲ್ಲಿ ಸಂಸ್ಥಾನಕ್ಕೆ ಸ್ವಾಯತ್ತತೆ ಹಾಗೂ ಕೇಂದ್ರಕ್ಕೆ ಪರಿಮಿತ ಅಧಿಕಾರವಿದೆ. ದಕ್ಷಿಣ ಅಮೇರಿಕದ ಕೆಲಭಾಗಗಳು ಸ್ಪೇನಿನ ಆಡಳಿತದಲ್ಲಿದ್ದು, 19-20ನೇ ಶತಮಾನಗಳಲ್ಲಿ ಸಣ್ಣ ಸಣ್ಣ ಗಣರಾಜ್ಯಗಳಾಗಿನೆ. ಆದರೆ ಇಲ್ಲಿ ಸರ್ವಾಧಿಕಾರವೇ ಮಿಗಿಲಾಗಿರುವುದರಿಂದ ಆಗಾಗ ಸಶಸ್ತ್ರ ಕ್ರಾಂತಿ, ಬಂಡಾಯಗಳು ನಡೆಯುವುದು ಸರ್ವ ಸಾಮಾನ್ಯವಾಗಿದೆ.

ಮುಸ್ಲಿಮರಿಗೆ ಪ್ರಜಾರಾಜ್ಯದ ತೀವ್ರತೆ ಕಮ್ಮಿಯೂದರೂ ಮೊದಲ ವಿಶ್ವಯುದ್ಧದ ಬಳಿಕ ತುರ್ಕಿಸ್ತಾನವು ಕಮೂಲ ಪಾಶರ ನೇತೃತ್ವದಲ್ಲಿ ಹಲವು ಶತಮಾನಗಳ ಬಾದ ಸಾಹಿಕೆಯನ್ನು ಹರಿದೊಗೆದು ಸ್ವತಂತ್ರವಾಗಿದೆ ಅರಸೆ ಫರೂಕರನ್ನೂ ಪದಭ್ರಷ್ಟರಾಗಿಸಿ 1953ರಲ್ಲಿ ಈಜಿಪ್ತವೂ ಸ್ವತಂತ್ರವಾಯಿತು. ಅರಬ್ ರಾಷ್ಟ್ರಗಳಲ್ಲಿ ಸಿರಿಯ, ಲೆಬನಾನ್‌ಗಳೂ ಏತಿಯದಲ್ಲಿ ಬರ್ಮ, ಇಂಡೋನೇಶಿಯಗಳು ಇತರವಾಗಿ ಜೆಕೋಸ್ಲೋವಾಕಿಯ, ಆಸ್ಟ್ರಿಯ, ಪೋಲಂಡ್, ಹಂಗೇರಿ, ಸಿರಿಯ,ಪೂರ್ವ ಜರ್ಮನಿ ಹಾಗೂ ಯುಗೋಸ್ಲಾವಿಯಗಳು ಪ್ರಜಾರಾಜ್ಯಗಳಾಗಿವೆ. ●●

ಸುಮ್ಮಗಿರು ಮನವೆ!

ಚಿಂಚಲಿಸ ಬೇಡೆನ್ನ ಮನವೆ ಸುಮ್ಮಗಿರು ಒಂದು ನಿಮಿಷ!
ನಿನ್ನ ನುಡಿಗೇಳಿ ಕಳೆದುಕೊಂಡೆನು ಪರುಷ!! ‖ ಪಲ್ಲವಿ ‖

ಮುಂಜಾವಿನಿಂದ ಸಂಜೆಯವರೆಗೆ
ಜಗದ್ ವ್ಯಾಪಾರದಲಿ ಮುಳುಗಿ
ಶ್ರೀ ಹರಿಯೆಂತೋಡಿ ಬರುವ ಬಳಿಗೆ?
ಕೊಳೆಯೆಲ್ಲ ತುಂಬಿಹುದು ಒಳಗೆ!
ಬಾಳಿನೊಳಗೆಂತು ಸುರಿಯುವದು ಅಮೃತ ವರುಷ!
ಅದಕಾಗಿ ಸುಮ್ಮಗಿರು ಮನವೆ ಒಂದು ನಿಮಿಷ!! ‖ ೧ ‖

ನಾಮ ಜಪ ನಡೆದಿರಲು ಒಳಗೆ
ಕೊಳೆಯೆಲ್ಲ ದೂಡಿ ಹೊರಗೆ
ಪರಶಿವನು ಬರಲು ಬಳಿಗೆ
ಸೂಸುವದು ಸಂತಸವು ಒಳಗೆ!
ಅದಕಾಗಿ ಬೇಡುವೆನು ಎಲೆ ಮನವೆ ನಿನಗೆ!
ಚಂಚಲಿಸ ಬೇಡ ಸುಮ್ಮನಿರು ಒಂದೆ ಗಳಿಗೆ!! ‖ ೨ ‖

ಕ್ಷೀರಸಾಗರ ಶಯನ ಶ್ರೀಪತಿಯು
ಕೈಲಾಸದೊಡೆಯ ಪಶುಪತಿಯು
ಕಮಲೋದ್ಭವನು ಪ್ರಜಾಪತಿಯು
ತ್ರೈಮೂರ್ತಿಗಳ ಸಂಗಮವೆ ಎದೆಯು!
ಹೃದಯಸ್ಥ ಪರಮಾತ್ಮನನು ಕಾಣಲೆಂದು
ಸುಮ್ಮಗಿರು ಎಲೆ ಮನವೆ ನಿಮಿಷ ಒಂದು!! ‖ ೩ ‖

ಸುಮ್ಮನಿರೆ ನಿಮಿಷ ಕೆಲವೆ
ಅಂತರಾತ್ಮನಾ ನುಡಿಗೇಳುವೆ
ಸತ್ಯದೇವರ ತೆರೆದು ತೋರುವೆ
ನಿತ್ಯ ಅವನನು ಭಜಿಸುವೆ!
ಚಂಚಲಿಸ ಬೇಡೆನ್ನ ಮನನೆ ಸುಮ್ಮಗಿರು ಒಂದು ನಿಮಿಷ!
ನಿನ್ನ ನುಡಿಗೇಳಿ ಕಳೆದುಕೊಂಡೆನು ಪರುಷ!! ‖ ೪ ‖

— ದಿಗಂಬರ ಜೋಶಿ, ಬೆಳಗಾವಿ.

●●

ಹೊರ ಮಿಂಚನ್ನೇ ನೋಡಿ ಅವಸರದ ತೀರ್ಮಾಕ್ಕೆ ಬರುವವರು ಅಂತಃ ಸತ್ವನೇ ನೆಂಬುದನ್ನು ಹೇಗೆ ಅರಿತಾರು?

ಗಣ ರಾಜ್ಯದ ವೈಭವ!

ಐವತ್ತು ಸೀಟುರುವ
ಸರ್ವೀಸು ಬಸ್ಸಿನಲಿ
ಮತ್ತೊಂದು ನೂರು ಜನ ನಿಂತಿರುವರು!
ಐವತ್ತು ಹಾಸಿಗೆಯ
ಆಸ್ಪತ್ರಿ ಜಗಲಿಯಲಿ
ಮತ್ತೆ ನೂರಾರು ಜನ ಮಲಗಿರುವರು!
ಉಸಿರಾಡಲೊಂದಿಷ್ಟು
ಗಾಳಿಯೊದಗದ ಬಸ್ಸು
ಮದ್ದು—ನೀರೂ ಸಿಗದ ಆಸ್ಪತ್ರೆಯು!
ದಿನ ನಿತ್ಯ ಸಂಪು, ಬೆದ
ರಿಕೆ, ಘೋಷ, ಬಂದ್; ಜಗವೆ
ಸರಿಯಲ್ಲನೆಂಬ ಚಾಡಿಯ ನೋಡಿಯು!
ಸರಿಸಮಾನತೆ! ಇದು ಪ್ರ
ಜಾಸತ್ತೆ! ಮಾಲಕಗೆ
ಇಲ್ಲದಾ ಹಕ್ಕೆಲ್ಲ ಮಜದೂರಗೆ!
ತಲೆ ತಲಾಂತರದಿಂದ
ಉಳಿಸಿದಾ ಧನಿಗಿಲ್ಲ
ಹಕ್ಕೆಲ್ಲ ಒಕ್ಕಲಿಗೆ—ಬದುಕಲಲ್ಲ!
ಸ್ವಾತಂತ್ರ್ಯ ಲಭಿಸಿದಿ—
ಪ್ಪತ್ತೈದು ವರ್ಷಗಳ
ರಾಜಕೀಯದ ಹೊಲಸು ಸಾಕೆ? ಬೇಕೆ?
ಯಾರಿಗಾಗೀ ಧರಣಿ?
"ಗಣರಾಜ್ಯ"ದಾಶ್ರಯದಿ
ಮಂತ್ರಿ ಬಳಗಕೆ ಹೊರತು ತೃಪ್ತಿಯೆಲ್ಲಿ?

—ಎಚ್. ಎಂ. ನಾರಾಯಣ ಭಟ್

Gram : VISHWA Tel: 28111 & 28112

When at Bangalore

Stay at

HOTEL NATARAJA

Restaurant Boarding & Lodging.

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಹೆಣ್ಣಿನ ಹೃದಯ

(ಹತ್ತನೇ ಪುಟದಿಂದ)

ಮಳೆಗಾಲ ಬಂದೊಡನೆ ಅನಂದನ ಮಡದಿಯ ಮನಸ್ಸಿನಲ್ಲೂ ಮೋಡ ಕವಿಯಿತು. ಅವಳ ಸಿಹಿ ಪ್ರೇಮವನ್ನು ಮಳೆಗಾಲವು ಅತ್ಯಂತ ಕಹಿ ಆಕ್ಷೇಪಣೆಯನ್ನಾಗಿ ಮಾರ್ಪಡಿಸಿತ್ತು. ಇದಕ್ಕೆಲ್ಲಾ ಕಾರಣವಾಗಿದ್ದದ್ದು ಮಾಡಿನಲ್ಲಿದ್ದ ಬಿರುಕು...

ತಾನು ಕೊಡುವ ಬಾಡಿಗೆಗೆ ತನಗೆ ಸಿಕ್ಕಿರುವ ಮನೆ ಜೆನ್ನಾಗಿದೆಯೆಂದು ಮಳೆಗಾಲದ ಮುಂಚೆ ಅವನು ತಿಳಿದುಕೊಂಡಿದ್ದನು. ಬೇಂಕ್ ಗುಮಾಸ್ತ ಅದಕ್ಕೆಂತ ಅಧಿಕ ಹಣವನ್ನು ಮನೆ ಬಾಡಿಗೆಗಾಗಿ ಕೊಡುವಂತಿಲ್ಲ. ತಾನು ಅದೃಷ್ಟವಂತನೆಂದೇ ಅವನಂದು ತಿಳಿದುಕೊಂಡಿದ್ದನು.

ಅವನ ಮಡದಿ ಮೊದಲ ಸಲ ಆಟ್ಟವನ್ನು ನೋಡಿದಾಗ ಅಲ್ಲಿಯ ಹೊಲನನು ಕಂಡು ಆಶ್ಚರ್ಯಪಟ್ಟದ್ದಳು. ಅಂತಹ ಪರಿಸ್ಥಿತಿಯಲ್ಲಿ ಅಂದು ಅವಳಂದದ್ದೇನು?—ನಾವಿಬ್ಬರೂ ಒಂದಾಗಿರುವ ತನಕ ಇದೆಲ್ಲಾ ಏನು ಮಹಾ?

ಮುಚ್ಚಿಗೆಯಲ್ಲಿದ್ದ ಬಿರುಕನ್ನು ಅವಳು ನೋಡಿದ್ದಳು. ಆಗಲೂ ಅವಳಂದದ್ದೇನು? "ಏನಂತೆ? ನಾವಿಬ್ಬರೂ ಒಂದಾಗಿರುವ ತನಕ ಇವೆಲ್ಲ ಏನು ಮಾಡಿಯೊವು?"

ಆಗ ಅವನು ಅವಳ ಕಣ್ಣುಗಳತ್ತ ನೋಡಿದ್ದನು. ಅಲ್ಲಿ ಪ್ರೇಮಜ್ಯೋತಿ ನರ್ತಿಸುತ್ತಿತ್ತು. ಅವನ ಹೃದಯ ಹಾಯೊಗಿ ಹಾರಾಡಿಗ್ತು. ಅವಳ್ಕಂದಿದ್ದ ಮಾತುಗಳೆಲ್ಲವನ್ನೂ ಅವನು ನಂಬಿದ್ದನು.

ಆದರೆ ಒದೇ ಮುಚ್ಚಿಗೆಯ ಬಿರುಕಿನಿಂದ ಮಳೆಗಾಲದಲ್ಲಿ ನೀರು ಜನಿ ಹನಿಯೊಗಿ ಕೆಳಗೆ ಸುರಿಯಲಾರಂಭಿಸಿದಾಗ ಅವಳು ಹೂಂಕರಿಸಲು, ಆ ಮೇಲೆ ದೂರೀಯಲು ಆರಂಭಿಸಿದಳು.

ನೀರು ಬೀಳುವಲ್ಲಿ ಒಂದು ಬಾಲ್ದಿಯನ್ನು ಅವಳಿಡಲಾರಂಭಿಸಿದಳು. ಅದು ತುಂಬಿದೊಡನೆ ಸ್ನಾನಕೊಟಡಿಯಲ್ಲಿ ನೀರನ್ನು ಸುರಿದು, ಬಾಲ್ದಿಯನ್ನು ಪುನಃ ತಂದಿಡುತ್ತಿದ್ದಳು.

"ಅರೆ, ಭಗವಾನ್!" ಅವಳು ಗುಣುಗಾಡಿಕೊಳ್ಳುತ್ತ, "ಒಬ್ಬ ಶ್ರೀಮಂತನನ್ನು ನಾನು ಮದುವೆಯೊಗಬೇಕಾಗಿತ್ತೆ"ಂದು ಹೇಳಲಾರಂಭಿಸಿದಳು.

ಅವನು ಮೌನಮುದ್ರೆಯನ್ನೊಡೆಯದಿರುವದನ್ನು ಕಂತು ಅವಳು ಮುಂದರಿಯುತ್ತ "ನಾನು ಶ್ರೀಮಂತನನ್ನು ಮದುವೆಯೊಗುತ್ತಿದ್ದಲ್ಲಿ ದಿನವಿಡೀ ಸೋರುವ ಮನೆಯಲ್ಲಿರಲು ಆತನು ಬಿಡುತ್ತಿರಲಿಲ್ಲ"ವೆನ್ನುತ್ತಿದ್ದಳು.

ಆದನ್ನು ಕೇಳಿದ ಮೇಲೆ ಅವನು ಮೆಲ್ಲಗೆ ಹೇಳುತ್ತಿದ್ದನು "ಹಿಂದೂಮ್ಮೆ ಓರ್ವ ಜವಾನ ರಾಜಕುಮೊರಿ ಇದ್ದಳು ಅವಳು ಒಬ್ಬ ಬೇಂಕ್ ಕಾರಕೂನನನ್ನು ಮದುವೆ ಮಾಡಿಕೊಂಡಳು. ಆದರೆ ಅದ್ಯಾರೂ ಅವಳ ಆಕ್ಷೇಪಣೆಯನ್ನು ಕೇಳಿದವರೆ ಇಲ್ಲ.

"ನನ್ನ ಮಾತು ಯೊರಿಗೂ ಕೇಳಿಸುವುದಿಲ್ಲ ನಾವು ಮೌನವಾಗಿ ಅನುಭವಿಸುತ್ತಿದ್ದೇವೆ."

"ನಾವು!" ನಂಬಿಕೆ ಜಲ್ಲದೆ ಅವನು ಒಡನೆ ಹೇಳುತ್ತ "ನೀನು ರಾಜಕುಮೊರಿಯೆಂದು ಯೊರು ಹೇಳತ್ತಾರೆ"ಂದು ಕೇಳುತ್ತಿದ್ದನು.

"ರಾಜಕುಮೊರಿಯೊಬ್ಬಳಾಗಿ ನಾನೂ ಬಾಳುತ್ತಿದ್ದೆ– ನಾನೊಬ್ಬ ಶ್ರೀಮಂತನನ್ನು ಮದುವೆ ಆಗುತ್ತಿದ್ದಲ್ಲಿ"

"ಜದ್ಯಾವ ಶ್ರೀಮಂತನು ನಿನ್ನನ್ನು ಮದುವೆ ಮೂಡಿಕೊಳುತ್ತಿದ್ದನು? ನನ್ನನ್ನು ಪಡೆದುಕೊಂಡಿರುವದಕ್ಕೆ ನಿನ್ನ ಗೃಹಗಳಿಗೆ ನೀನು ಧನ್ಯವಾದ ಆರ್ಪಿಸಬೇಕು."

"ನಿನ್ನನ್ನು!" ನಂಜಿನಿಂದ ಹೊರಗೆ ಉಗುಳಬಿಟ್ಟಳು. "ನಿನಗೆ ಇರುವದು ಪುಟ್ಟ ಇಲಿಯ ಮೆದುಳು. ಅದಕ್ಕೆ ಸರಿಯಾದ ಸಂಬಳ ನನ್ನ ನೋಟದ ಬಲದಿಂದ ಅದೆಂತಹವನನ್ನೂ ಆಕರ್ಷಿಸಿಕೊಳ್ಳಬಹುದಾಗಿತ್ತು!"

"ಮತ್ತೇಕೆ ಹಾಗೆ ಮೂಡಲಿಲ್ಲ?" ವ್ಯಂಗ್ಯವಾಗಿ ಅವನು ಕೇಳಿದನು.

"ಯೊಕೆಂದರೆ, ನೀನು ನನಸ್ನು ಕೆಡಿಸಿಬಿಟ್ಟೆ." ಅವಳು ನಾಟಕೀಯವಾಗಿ ನುಡಿದಳು.

ಮಾತಿನಲ್ಲೂ ಅವನು ಪರಾಜಿತನ್ನಾದನು. ಮೌನಕ್ಕೆ ಶರಣೆಂದನವನು ಅವಳ ಈ ಕಹಿಮೊತುಗಳಿಂದ ಅವನಿಗೆ ಕಸಿವಿಸಿಯೊಗುತ್ತಿತು.

ಆಗ ಅವನ ಜ್ಞಾಪಕಾಶ್ವ ಕಳೆದ ದಾರಿಯುತ್ತ ಕಾಲೆಳೆಯುತ್ತಿತ್ತು .. .. ತಸಗೊಂದು ಜೊತೆ ಕಾಲ್ಚೀಲಗಳು ಬೇಕೆಂದು ಅವನ್ನು ತೆಗೆದುಕೊಳ್ಳಲು, ಮಧ್ಯಾಹ್ನದ ವಿರಾಮಕಾಲದಲ್ಲಿ ಪ್ಲೋರಾ ಪೌಂಟನಿನಲ್ಲಿದ್ದ ಅಂಗಡಿಗೆ ಹೋಗಿದ್ದನು. ಅಲ್ಲಿ ನೂರುತ್ತಿದ್ದಾಕೆಯ ಮುಗಳ್ನಗು ಅವನನ್ನು ಆಕರ್ಷಿಸಿತು. ಅವಳ ಕೆನ್ನೆಗುಣಿಯಲ್ಲಿ ಅವನ ಕಣ್ಣೋಟ ನಿಂತಿತು. ಅದೆಂತಹ ಕೆನ್ನೆಗುಣಿ! (ಹೌದು. ಅದುನೇ ಪಿಡ್ಡಾ. ಮೂನವ ಆನೆಗಳು ಬೀಳುವ ಹೊಂಡ! ತಾನೇ ಆಲೋಚಿಸಿಕೊಳ್ಳುತ್ತಿದ್ದನು.)

ಕೆನ್ನೆಗುಳಿ ಅವನ ಕಣ್ಮುಂದೆ ಬಂದಾಗ ಹಿಂದಿನ ಘಟನೆ ಅವನ ಸ್ಮೃತಿಪಟಲದಲ್ಲಿ ಬಿತ್ತು. ಸುನಃ ಆ ಗಲ್ಲ ತಗ್ಗುಗಳನ್ನು ಕಾಣ ಬೇಕೆಂಬಾಸೆ. ಆದರೆ ಯೊವ ಕಾರಣಕ್ಕಾಗಿ ಆ ಅಂಗಡಿಗೆ ಹೋಗುವುದು? ಇನ್ನೊಂದು ಜೊತೆ ಕಾಲ್ಚೀಲ ತೆಗೆದುಕೊಳ್ಳಲು ಅವನ ಬಳಿ ಹಣವಿಲ್ಲ ಕೆನ್ನೆಗುಳಿಯನ್ನು ಕಾಣದಿರಲು ಸಾಧ್ಯವೂ ಇಲ್ಲ. ಧೈರ್ಯದಿಂದ ಒಮ್ಮೆ ತಿತ್ತ ಹೋಗಿ ಬಂದನು, ತವಳ ಗಮನವನ್ನು ಸೆಳೆದುಕೊಂಡನು ...ಹೀಗೆ ಪ್ರಣಯ ಪ್ರತಿಮೆಗೆ ಪ್ರಾಣ ಪಾಯು ಉದಯವಾಯಿತು.

ಆಕೆಯೂ ಅನಂದದಿಂದ ಅವ ಪೊಷನೆ ಬಂದಿದ್ದಳು. ಬೇಯಿಸಿದ ಕಡಲೆ, ಬಟಾಟೆ ಪಲ್ಯಗಳನ್ನು ಸಂತೋಷದಿಂದ ಅವನೊಟ್ಟಿಗೆ ತಿಂದಿದ್ದಳು. ಆದರೆ ಇಂದು, ತನ್ನನ್ನು ತಾಜ್‌ಮಹಾಲ್ ಹೊಟೇಲಿಗೆ ಕರದೊಯ್ಯಲಿಲ್ಲವೆಂದು ಛೀ ಮೂರಿ ಹಾಕುತ್ತಿದ್ದಾಳೆ!

ಹಿಂದೆ ತಾನೆಷ್ಟು ಸುಖಿಯಾಗಿದ್ದೆ. ಹೇಳುವಸರಿಲ್ಲ, ಕೇಳುವನವರಿಲ್ಲ. ನಾನೇ ರಾಜ

(ಮೂವತ್ತಮೂರನೇ ಪುಟನೋಡಿರಿ)



ಭಾರತೀಯ ಇತಿಹಾಸ ದರ್ಶನ

(ಒಂಭತ್ತನೇ ಪುಟದಿಂದ)

ಮನುಷ್ಯ ಅಥವಾ ಅಮೂರ್ತವಾದ ಕೃತಿಯೊಂದಿಗೆ ಸಮೀಕರಿಸಿ, ಅದು ಭಾರತ ಇತಿಹಾಸದ ಸಾಮಾನ್ಯ ಅಧ್ಯಯನಕಾರರಲ್ಲಿ ಬಹಳ ಮಂದಿಯನ್ನು ಗೊಂದಲಕ್ಕೆ ಸಿಕ್ಕಿಸಿಕೊಳ್ಳುವಂತೆ ಮಾಡಿದೆ. ಶ್ರೀ ದಾಂಡೇಕರ ಅವರು ತಮ್ಮ "ಇತಿಹಾಸದ ಪ್ರೇರಕ ಶಕ್ತಿಗಳು" ಎಂಬ ಸುಸ್ಪಷ್ಟವಾದ ಮತ್ತು ಸಂಕ್ಷಿಪ್ತವಾದ ತಮ್ಮ ಗ್ರಂಥದಲ್ಲಿ ಮೂಲಕ ಇತಿಹಾಸದ ವಿವರಣೆಯನ್ನಿತ್ತಿದ್ದಾರೆ. ಅವರ ಪ್ರಕಾರ ಕೇವಲ ಆರ್ಥಿಕ ಪರಿಸ್ಥಿತಿಯೇ ಇತಿಹಾಸದ ಪ್ರೇರಕ ಶಕ್ತಿಯಾಗಿದೆ ಎಂದು ಹೇಳಲಾಗದು. ಅವರು ಚರಿತ್ರೆಯಲ್ಲಿ ಮಹಾನ್ ವ್ಯಕ್ತಿಗಳ ಪಾತ್ರಗಳನ್ನು ಅಲ್ಲಗಳೆಯುವುದಿಲ್ಲ. ಭಾರತೀಯ ಚರಿತ್ರೆಯಲ್ಲಿ ಗಾಂಧಿಯನ್ನು ಪ್ರಜ್ಞೋದ್ಭವಿಸಿದವರು ಮುಂತಾಗಿ ಸ್ವಾಮಿ ವಿವೇಕಾನಂದರು ಜನಮೆ ಜನತೆ—ಚರಿತ್ರೆಯನ್ನು ಒಟ್ಟಾಗಿ ಮುನ್ನಡೆಸಿದ ಶಕ್ತಿ. (Driving Forces of History —S. K. Dange)

ಸೃಜ್ಞಾತ್ಮಕ ವಿವೇಚನೆ

ಇದಕ್ಕೆ ಸೃಜನಶೀಲವಾದ ಮಾರ್ಕ್ಸ್‌ವಾದದ ನಿಷ್ಠೆಯಲ್ಲಿ ಭಾರತ ಇತಿಹಾಸದ ಗ್ರಂಥಗಳು ರಚಿಸಲ್ಪಟ್ಟಿದ್ದೇಕೆ ಮಾರ್ಕ್ಸ್‌ವಾದವೂ ಇಂದು ಅನೇಕ ಮಾರ್ಪಾಡುಗಳನ್ನು ಹೊಂದಿದೆ. ಭಾವನಿಕ ವಿಜ್ಞಾನದ ಸಾಕ್ಷಿಗೆ ಈ ಹೊಸ ಚಾರಿತ್ರಿಕ ಸಿದ್ಧಾಂತಗಳು ಮಾರ್ಕ್ಸ್‌ವಾದದ ಕೆಲವೊಂದು ಮುಖ್ಯಾಂಶಗಳನ್ನು ಒಪ್ಪಿಕೊಂಡಿವೆ. ಆತೆಯೇ ಕೆಲವೊಂದು ವಿಷಯಗಳನ್ನು ಅನುಮಾನಸವೆಂದು ತಿರಸ್ಕರಿಸಿವೆ.

ಭಾರತೀಯ ಇತಿಹಾಸದ ಅಧ್ಯಯನಕ್ಕೆ ಹೀಗಿರುವಾಗಿ ಬರೆದಿರುವ ಶ್ರೀ ಧರ್ಮಾನಂದ್ರ ಕೋಸಾಂಬಿಯವರ ಗ್ರಂಥವು ಇತಿಹಾಸ ಅಧ್ಯಯನಕ್ಕೆ ವೈಜ್ಞಾನಿಕ ದೃಷ್ಟಿಯ ಹೊಸಮಾರ್ಗವನ್ನು ತೆರೆದಿಟ್ಟಿದೆ. ಭಾರತೀಯ ಇತಿಹಾಸವನ್ನು ಕೇವಲ ಪಾಶ್ಚಿಮಾತ್ಯ ದೃಷ್ಟಿಕೋನದಿಂದ ಬರೆಯಬೇಕಾಗಿಲ್ಲ. ಕವಲು ಸೂಕ್ಷ್ಮವಾದುದೂ ಆಧುನಿಕ ಸಮಸ್ಯೆಗಳಿಗೆ ಅನೇಕ ಇತಿಹಾಸ ಗ್ರಂಥಗಳು ಈ ದೇಶದಲ್ಲಿ ಬರೆಯಲ್ಪಟ್ಟಿವೆ. ಭಾರತೀಯ ಬೆಳವಣಿಗೆಯ ವಿಶಿಷ್ಟತೆಯ ಕಾರಣಕ್ಕೆ ಇತಿಹಾಸದ ಅಧ್ಯಯನ ಹಾಗೂ ಅರ್ಥವಿವರಣೆಯ ಕಾರ್ಯದಲ್ಲಿ ಕೋಸಾಂಬಿಯವರು ಮಾರ್ಕ್ಸ್‌ವಾದವನ್ನು ಹೊಂದಿಕೊಂಡಿದ್ದಷ್ಟೂ ಕಮ್ಮಿಯಿಸ್ಟ್ ಸಿದ್ಧಾಂತವಾದಿಗಳಂತೆ—ಅವರು ರಷ್ಯನರಾಗಲೀ ಚೀನೀಯರಾಗಲೀ ಅಥವಾ ಭಾರತೀಯರೇ ಆಗಿದ್ದಲ್ಲಿಂತಲೂ ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಇವರು ಕಟ್ಟುವಾದಿಗೆ ಬಲಿಬೀಳುವ ಕಾರ್ಯರಾಗಿರಲಿಲ್ಲ; ಅವರು ಪ್ರಗತಿಪರ ಚರಿತ್ರೆಕಾರರಾಗಿದ್ದರು. ವಿಚಾರವಷ್ಟೇ ಅವರ ವಿಧಾನಗಳೂ ವೈಜ್ಞಾನಿಕವಾಗಿದ್ದವು.

ಕೋಸಾಂಬಿಯವರ ಕೃತಿಯನ್ನು ಮಾರ್ಕ್ಸ್‌ವಾದಿಗಳಲ್ಲದವರೂ ಇತಿಹಾಸದ ಒಂದು ಉತ್ತಮ ಅಧ್ಯಯನವೆಂದು ಕರೆದಿರುವರು. ಸೂರ್ಕ್ಸ್‌ವಾದದ ದೃಷ್ಟಿಕೋನದಿಂದ ಭಾರತೀಯ ಇತಿಹಾಸದ ಅವಲೋಕನ ಮಾಡಿರುವವರಲ್ಲಿ ಡಾ| ಕೆ. ಯಂ. ಅಶ್ರಫ್, ಡಾ| ದೇವಿಪ್ರಸಾದ ಚಟ್ಟೋಪಾಧ್ಯಾಯ, ಡಾ| ಚನ್ನಾನ, ಡಾ| ಇರ್ಫಾನ್ ಹಬಿಬ್, ಪ್ರೊ. ಯಸ್ ಆರ್. ಶರ್ಮಾರವರ ಬರೆಹಗಳು ಮಾರ್ಕ್ಸ್‌ವಾದದ ಮೂಲಸಿದ್ಧಾಂತಗಳಿಗೆ ನಮ್ಮ ದೇಶದ ಇತಿಹಾಸದಿಂದ ಕೆಲವೊಂದು ದೃಷ್ಟಾಂತಗಳನ್ನು ನೀಡಿವೆ. ಮಾರ್ಕ್ಸ್‌ವಾದದ ಸಿದ್ಧಾಂತಗಳಿಗೆ ಸುಷ್ಟಿ ನೀಡಿರುವ ಮುಖ್ಯವಾದ ಬರಹಗಳಲ್ಲಿ ಡಾ| ಕೆ. ಯಂ. ಅಶ್ರಫ್‌ರವರ 'ಹಿಂದೊಸ್ತಾನದ ಜನರ ಜೀವನ ಮತ್ತು ಪರಿಸ್ಥಿತಿಗಳು' (Life and Conditions of the People of Hindustan—K. M Ashraf) ಡಾ| ಚಟ್ಟೋಪಾಧ್ಯಾಯರ 'ಲೋಕಾಯತ' (Lokayata—Deviprasad Chattopadhyaya) ಡಾ| ದೇವರಾಜ ಚನ್ನಾನರವರ ಆಧಾರ ಸಮೃದ್ಧವಾಗಿರುವ 'ಪ್ರಾಚೀನ ಭಾರತವೆಲ್ಲಿ ಗುಲಾಮಗಿರಿ' (Slavery in Ancient India—Dev Raj Chanana) ಡಾ| ಇರ್ಫಾನ್ ಹಬಿಬ್‌ರವರ "ಮೊಗಲ ಭಾರತದ ಭೂವ್ಯವಸಾಯ ಪದ್ಧತಿ" (Agrarian System of Moghul Indian—Irfan Habib) ಇತ್ತೀಚಿಗಿನ ಅತಿ ಪ್ರಮುಖ ಇತಿಹಾಸ ಗ್ರಂಥಗಳು.

ಮಾರ್ಕ್ಸ್‌ವಾದ ಮಾರ್ಗದಲ್ಲಿ

ಇವುಗಳಲ್ಲದೆ ಇದೇ ದೃಷ್ಟಿಯಿಂದ ಭಾರತೀಯ ಇತಿಹಾಸವನ್ನು, ಇತಿಹಾಸದ ವಿವಿಧ ಚಾರಿತ್ರಿಕ ಚಳುವಳಿಗಳನ್ನು ಹಾಗೂ ಬೆಳವಣಿಗೆಯನ್ನು ಮುಖ್ಯತಃ ಆರ್ಥಿಕ ದೃಷ್ಟಿಕೋನದಿಂದ ಆಳದಿರುವ ಬರೆಹಗಳು ಇನೆ. ಭಾರತೀಯ ರಾಜಕೀಯ ಮುಂದಾಳುಗಳಾದ ಜವಹರ್‌ಲಾಲ್ ನೆಹರು ಮತ್ತು ಶ್ರೀ ಪಟ್ಟವರ್ಧನರವರ ಬರೆಹಗಳೂ, ಆಚಾರ್ಯ ನರೇಂದ್ರದೇವರ ರಾಷ್ಟ್ರೀಯವಾದ ಮತ್ತು ಸಮಾಜವಾದದ ಅಧ್ಯಯನಗಳೂ, ಜಯಪ್ರಕಾಶ್‌ರವರ ಪುಸ್ತಕಗಳೂ ಲೇಖನಗಳೂ ಕಮೂಲ ದೇವಿಯವರ ಬರೆಹಗಳೂ, ಡಾ| ರಾಮು ಮನೋಹರ ಲೋಹಿಯಾರವರ ಪುಸ್ತಕಗಳೂ ಈ ಪ್ರಭಾವಕ್ಕೆ ಜೀವಂತ ಸಾಕ್ಷಿಗಳಾಗಿವೆ. ಅದರಂತೆಯೇ ಮುಜಾಪರ ಅಹಮ್ಮದ್, ಡಾಂಗೆ, ಹರೀನ್ ಮುಖರ್ಜಿ ಪಿ. ಸಿ. ಜೋಶಿ ಮತ್ತು ನಂಬೂದರಿಪಾಡ್‌ರವರ ಬರೆಹಗಳೂ ಮಾರ್ಕ್ಸ್‌ವಾದದ ವರ್ಚಸ್ಸಿಗೆ ಉದಾರಹರಣೆಗಳಾಗಿವೆ. ಭಾರತೀಯ ಇತಿಹಾಸದ ಅಧ್ಯಯನಕ್ಕೆ ಹೊಸ ದೃಷ್ಟಿಯನ್ನೊದಗಿಸಿದ ಕಾರ್ಯದಲ್ಲಿ ಶ್ರೀಯುಂ. ಯನ್. ರೈ ಹಾಗೂ ರಾಹುಲ ಸಾಂಕೃತಾಯಣರವರ ಸೇವೆಯನ್ನು ಮರೆಯಲಾಗದು. ಅವರ ಬರೆಹಗಳು ಭಾರತೀಯ ಇತಿಹಾಸದ ತಿಳುವಳಿಕೆಯನ್ನು ಮಾರ್ಕ್ಸ್‌ನ ತತ್ವಗಳ ತಳಹದಿಯಲ್ಲಿ ಅರ್ಥಮಾಡಲು ಸಹಾಯಕವಾದುವು ಮಾತ್ರವಲ್ಲದೆ, ಹೊಸ ಕ್ಷೇತ್ರಗಳ ಅಧ್ಯಯನಕ್ಕೂ ಅನುವು ಮಾಡಿಕೊಟ್ಟುವು.

ಭಾರತೀಯ ಇತಿಹಾಸವು ಈ ಹಿಂದೆ ಬ್ರಿಟಿಷ್ ಸಾಮ್ರಾಜ್ಯದ ಅಂಗವಾಗಿರುವಾಗ ಸಂಪೂರ್ಣವಾಗಿ ಸಾಮ್ರಾಜ್ಯಶಾಹಿಗಳ ಹಿತದೃಷ್ಟಿಯಿಂದ ಬರೆಯಲಾಗಿತ್ತು. ರಾಜಕೀಯ ಮಹತ್ವವೇ ಅದರ ಮೂಲ ಮಂತ್ರವಾಗಿತ್ತು. ಆ ಕಾಲದಲ್ಲಿ ಬರೆಯಲ್ಪಟ್ಟ, ಭಾರತೀಯ ಇತಿಹಾಸಕಾರರ ಗ್ರಂಥಗಳು ಭಾರತದ ಗತ ಇತಿಹಾಸವೆಲ್ಲಾ ವೈಭವಯುತವಾದ ಸುವರ್ಣಯುಗವಾಗಿತ್ತೆಂದು ಹೇಳುವ ಬರೆಹಗಳಾಗಿದ್ದುವು. ಇತರರ ಆರೋಪಗಳನ್ನು ನಿರಾಕರಿಸುವ ಗ್ರಂಥಗಳಾಗಿದ್ದುವು ಸ್ವಾತಂತ್ರ್ಯೋತ್ತರ ಕಾಲದ ಭಾರತೀಯ ಇತಿಹಾಸಕಾರರೂ ಬಹುಮಟ್ಟಿಗೆ ರಾಷ್ಟ್ರೀಯವಾದದ ಪುರಸ್ಕರ್ತರೇ ಆಗಿರುವರು. ಭಾರತವು ಜಗತ್ ಇತಿಹಾಸ ಕಾರ್ಯದ ಒಂದು ಅಂಶದಲ್ಲಿ ಪಾಲುಗೊಳ್ಳುತ್ತಿದೆ. ಅದರ ಜನತೆಯ ಭವಿತವ್ಯ ಭವಿಷತ್ತು ಭೂಲೋಕದ ಎಲ್ಲಜನರ ಭವಿಷ್ಯತ್ತಿನೊಂದಿಗೆ ಬೆರೆತು ಕೊಂಡಿದೆ ಹಾಗೂ ಅವರ ಸಾಮಾಜಿಕ ಸಾಂಸ್ಕೃತಿಕ ಮತ್ತು ಆರ್ಥಿಕ ಜೀವನವಿಕಾಸವು ಇತರ ಜನಾಂಗಗಳ ಇತಿಹಾಸದೊಂದಿಗೆ ಅನಿವಾರ್ಯವಾಗಿ ಸಂಯೋಜನೆಗೊಂಡಿದೆ ಎಂಬ ಐತಿಹಾಸಿಕ ಸತ್ಯಕ್ಕೆ ಮಾರ್ಕ್ಸ್‌ವಾದವು ಕಾಣಿಕೆಯನ್ನು ಸಲ್ಲಿಸಿದೆ ಎಂಬುದರಲ್ಲಿ ಸಂದೇಹವಿಲ್ಲ. ಈ ದೃಷ್ಟಿಯಿಂದ ಮಾರ್ಕ್ಸ್‌ವಾದಿ ಇತಿಹಾಸ ಮನೋದೃಷ್ಟಿ ಸ್ವಾಗತಾರ್ಹವಾಗಿದೆ.

ದುಡಿಯದವನಿಗೆ ಉಣ್ಣುವ ಹಕ್ಕಿಲ್ಲ.

ಅಳತೆ ಮೀರಿದ ಸ್ವಾತಂತ್ರ್ಯವು ಮೇರೆ ಅರಿಯದ ಪಾರತಂತ್ರ್ಯಕ್ಕೆ ಮಾರ್ಗವಾಗುತ್ತದೆ.

ಅನುಭವವು ಒಂದು ಶ್ರೇಷ್ಠ ಶಾಲೆ; ಆದರೆ ಆ ಶಾಲೆಯ ಫೀ ಮಾತ್ರ ಹೆಚ್ಚು.

ಹರಕೆ ಹೊತ್ತರೂ ಬಯಕೆ ಫಲಿಸಲಿಲ್ಲ.

ಹೆಣ್ಣಿನ ಹೃದಯ

(ಮೂವತ್ತೊಂದನೇ ಪುಟದಿಂದ)

ಅಲ್ಲಿ, ಅನಂತರವಾದರೂ ಏನು? ಸುಖ ಸಂತೋಷ, ಆನೋದ, ಪ್ರಮೋದ ... ಈಗ ....ಎಲ್ಲದಕ್ಕೂ ಕಹಿನುಡಿ.

ಅವನ ಯೋಚನಾ ಬಂಡಿ ವೇಗವಾಗಿ ಧಾವಿಸುತ್ತಿತ್ತು. ಆದರೆ ಆದಕ್ಕೆ ಕಲ್ಪನೆ ಲಗಾಂ ಹಾಕೆದಂತಾಗಿದ್ದು ಟ್ರೈನ್ ಅವನಿಳಿಯಬೇಕಾಗಿದ್ದ ನಿಲ್ದಾಣದಲ್ಲಿ ನಿಂತಾಗ. ಏರುವವರ ಗುಂಪನ್ನೆದುರಿಸಿ, ಇಳಿಯುವವರ ಕೂಟದೊಂದಿಗೆ ಕೂಡಿಕೊಂಡು ಅವನು ಬಂಡಿಯಿಂದಿಳಿದನು. ಆವನು ನಿಲ್ದಾಣದಿಂದ ಹೊರಗೆ ಬಂದಾಗ ಮಳೆಯೂ ನಿಂತಿತ್ತು.

ದಾರಿ ಅಡ್ಡಡಾಟಲು ನಡೆಯುತ್ತಿದ್ದಾಗ ಒದ್ದೆ ನೆಲದಲ್ಲಿ ಬೂಟು ಜಾರಿ ಅವನು ಕೆಳಗೆ ಬಿದ್ದುಬಿಟ್ಟನು. ಅವನು ನೋಲಕ್ಕೇಳುವ ಮುಂಚೆಯೇ ಟೀಕ್ಸಿಯೊಂದು ಅವನ ಕಾಲಿನ ಮೇಲಿನಿಂದ ಹಾಯ್ದುಹೋಯಿತು. ಬೆದ್ದಾಗ ಆದ ಪೆಟ್ಟಿನೊಂದಿಗೆ ಟೀಕ್ಸಿಯೂಡಿದ ನೋವಿನಿಂದಾಗಿ ಅವನಿಂದ ಮೇಲಕ್ಕೇಳಲಾಗಲಿಲ್ಲ. ಟೀಕ್ಸಿಚಾಲಕನು ಅದೇನು ಆಗಿಲ್ಲವೆಂಬಂತೆ ವೇಗವಾಗಿ ಬಂಡಿಯನ್ನೋಡಿಸಿಬಿಟ್ಟನು. ದಾರಿಹೋಕರ ದೃಷ್ಟಿ ಅವನತ್ತ ಹರಿದು, ಕೆಲವರು ಸೇರಿ ಅವನನ್ನು ಆಸ್ಪತ್ರೆಗೆ ಸೇರಿಸಿದರು.

ಪ್ರಥಮ ಚಿಕಿತ್ಸೆ ಉಪಚಾರಗಳಿಂದಾಗಿ ಅವನಿಗೆ ಮಾತಾಡುವ ಶಕ್ತಿ ಬಂದಿತ್ತು. ಅವನ ಬಳಿ ಬಂದ ಶ್ವೇತ ವಸ್ತ್ರಧಾರಿಣಿ ದಾದಿಯು ಮುಗುಳ್ನಗುತ್ತ "ನಿಮ್ಮ ಹೆಂಡತಿಗೆ ಹೇಳಿ ಕಳುಹಿಸಿದ್ದೇವೆ. ಇದೀಗ ಅವರು ಬಂದು ಬಿಡುತ್ತಾರೆ. ರೋಗಿಯ ಹೃದಯದಲ್ಲಿ ಉತ್ಸಾಹ ತುಂಬಿಸಲು ಒಳ್ಳೆಯ ಹೆಂಡತಿ ಹಾಗೆ ಬೇರೆ ಯಾರಿಂದಲೂ ಸಾಧ್ಯವಿಲ್ಲ. ಆದು ಅವನ ಸ್ವಂತದ್ದು, ಆದರಿಂದಾಗಿಯೇ...."ಕಣ್ಣು ಹೊಡೆದು ಹೇಳತವೂಸೆಯೂಡಿದಳು.

ಅದಕ್ಕೆ ಆನಂದ ಆದೇನನ್ನೂ ಆನ್ನಲಿಲ್ಲ. ಆಕೆ ಹೇಳುತ್ತಿರುವುದು ಹೆಂಡರ ಹೆಂಡಿರ ವಿಷಯ, ತನ್ನದಲ್ಲ.

'ನಿಮ್ಮ ಪೆಟ್ಟಿಗೆಯಲ್ಲಿ ಹೆಸರು ವಿಳಾಸ ಸಿಕ್ಕಿದುವು' ಸಂತೋಷದಿಂದ ಹೇಳುತ್ತ, "ನೋಡಿ ಅಲ್ಲಿ ಬರುತ್ತಿದ್ದಾರೆ....ಕ್ಷಮಿಸಿ ನನ್ನನ್ನು....." ಆಕೆ ಅತ್ತ ಸರಿದಳು.

ಆನಂದನ ಹೆಂಡತಿ ಅವನ ಹತ್ತಿರ ಬಂದಳು. ಕಾಲಿಗೆ ಕಟ್ಟಿದ ಪಟ್ಟಿಯನ್ನು ಕಂಡೊಡನೆ ಅವಳ ಕಣ್ಣೀರ ಕಟ್ಟೆ ಒಡೆಯಿತು. ಅವನ ಎದೆಯ ಮೇಲೆ ಬೀಳುತ್ತ, ಆಳುತ್ತಿದ್ದಂತೆ ಆಕೆ ಅಂದಳು: "ಆಪೆ, ಭಗವಾನ್! ನಿನಗೇಕೆ ಹೀಗಾಗಬೇಕಾಯಿತು.. ಇಷ್ಟು ಜನರಿರುವಾಗ? ನನ್ನನ್ನು ಕ್ಷಮಿಸು, ಆನಂದ. ನನಗೆ ದುಃಖವಾಗುತ್ತಿದೆ. ನನ್ನ ಮಾತುಗಳನ್ನು ಹೃದಯಕ್ಕೆ ಹಚ್ಚಿಕೊಳ್ಳಬೇಡ."

ಆವಳು ಮುಖವನ್ನು ಮೇಲಕ್ಕೆತ್ತಿ ಆವನ ಕಾಲಿನ ಪಟ್ಟಿಯನ್ನು ಮೃದುವಾಗಿ ಮುಟ್ಟಿದಳು. 'ಗುಣ ಬೇಗನೆ ಆಗಲಿ. ತೀರ್ಥ ಮನೆಗೆ ಬಾ, ಆನಂದ. ಇನ್ನೆಂದಿಗೂ ನಿನಗೆ ದುಃಖಕೊಡುವದಿಲ್ಲ. ಸತ್ಯವಾಗಿ ಹೇಳುತ್ತೇನೆ. ಆಣೆ ಮಾಡುತ್ತೇನೆ. ನಾನು ಗುಣುಗಾಡುವದಿಲ್ಲ, ಆಕ್ಷೇಪಿಸುವದಿಲ್ಲ, ಎದುರಾಡುವದಿಲ್ಲ. ಮುಚ್ಚಿಗೆಯ ಚಿಕ್ಕ ಛಿದ್ರ ಆದೇನು ಮಾಡೀತು? ನಾವಿಬ್ಬರೂ ಒಂದಾಗಿರೋಣ. ಅಂತಹ ನೂರು ಬಿರುಕುಗಳಿದ್ದರೂ ನಾನು ಮನಸ್ಸಿಗೆ ಹಚ್ಚಿಕೊಳ್ಳುವದಿಲ್ಲ.'

ಆನಂದನನ್ನು ಆಸ್ಪತ್ರೆಯಿಂದ ಮನೆಗೆ ಕಳುಹಿಸಿದ್ದರು. ಚಿಕ್ಕ ಗಾಯವಾಗಿ ತಪ್ಪಿಸಿಕೊಂಡದ್ದು ಅವನ ಅದೃಷ್ಟವೆಂದು ಡಾಕ್ಟರರು ಹೇಳಿದರು.

ಅವನು ಸ್ವಲ್ಪ ಸ್ವಲ್ಪ ಕುಂಟುತ್ತಿದ್ದನು. ತನಗೆ ತಾನೇ ಸಂತೋಷಪಡಿಸಿಕೊಳ್ಳುತ್ತ. ಕಾಲುವು ಎಲ್ಲಾ ಗಾಯಗಳನ್ನು ಗುಣಪಡಿಸುತ್ತದೆಂದು ಹೇಳಿಕೊಂಡು, ಅದರೊಂದಿಗೆ ಹೃದಯದ ಗಾಯವನ್ನು ಕೂಡಾವೆಂದು ಸೇರಿಸಿಕೊಂಡನು.

ಒಡನೆ ಅವನು ಗುಣಪಡಿಸಿದ್ದನ್ನು ಕಾಲವೇ ಗಾಯಗೊಳಿಸುತ್ತದೆಂಬುದನ್ನು ಅವನು ಜ್ಞಾಪಿಸಿಕೊಂಡನು.

ಆಕೆ ಹೇಳಿದ್ದಂತೆ ಆವನಿಗೆ ಸ್ವಾಗತ-ಸತ್ಕಾರ ಸಿಕ್ಕಿದುವು. ಆವಳು ಆದೇನನ್ನೂ ದೂರಲಿಲ್ಲ. ಆಕೆ ಕರುಣಾಮೂರ್ತಿಯಾಗಿದ್ದಳು. ಒಂದೇ ತಪ್ಪಿಯಲ್ಲಿ ಆವರಿಬ್ಬರೂ ಒಟ್ಟಿಗೆ ಊಟ ಮಾಡುತ್ತಿದ್ದರು.

೦ ೦ ೦

ಮರುವರ್ಷ ಮಳೆಗಾಲ ಮುಂಚೆ ಬಂತು. ಮಳೆ ಭಯಂಕರವಾಗಿ ಸುರಿಯಲಾರಂಭವಾಯಿತು. ಸ್ನಾನ ಕೊಟ್ಟಿಡಿಯಿಂದ ಬಾಲ್ದಿ ತರಲು ಆವಳಿದ್ದ ಜಿಲ್ಲಾದಳು. ಹೋಗುತ್ತಿರುವಾಗ. 'ಆರೆ ಭಗವಾನ್! ನಾನೊಬ್ಬ ಶ್ರೀಮಂತನನ್ನು ಮದುವೆಯಾಗುತ್ತಿದ್ದಲ್ಲೆಂಯ ಗುಣುಗುಟ್ಟುವ ಆದೇವನ ಕಿವಿಗೆ ಬಿತ್ತು!

[ದಿ ಸಂಡೇ ಸ್ಟೇಂಡರ್ಡ್ ಹಿಂದೂ]

ಆಹಾರಾಹವರಂಗಗಳು

ಜೈ ಜವಾನ್! ಜೈ ಕಿಸಾನ್!
ಜೈ ಭಾರತ ಜನ ಮಹಾನ್! "ಕವಿ,
ಆಹಾರಾಹವ ಕಳಗಳ
ಏಕಮತ್ಯ ಬೆಳೆಯುತಿರಲು (ಅ. ಪ.)

ಇತ್ತ ಕರ್ಮನಿರತ ಶೈತ
ಅತ್ತ ವೀರ ಟ್ಯಾಂಕ್‌ರಾಜುತ್ತ,
ನೆಲವ ಕೊಚ್ಚಿ ಶೈತಸಿಲ್ಲಿ
ಬಲವೆರ್ಪಡಿಸಿ ಸೇನಗಲ್ಲಿ (೧)

ಶೈತ ನೀರ ಹಾಯ್ಸುವಂತೆ
ಯೋಧರು ಮುಂಬಾಯ್ತರಲ್ಲಿ
ಹೊಡೆಯೆ ಧಾನ್ಯ ಶೈತನಿಲ್ಲ
ಸದೆ ಬಡೆವರು ಯೋಧರಲ್ಲಿ (೨)

ಗದ್ದೆ ಗದ್ದೆ ಬೆಳೆಯುತಿರಲು
ಯುದ್ಧ ವೀರ ಬಲಿಯುತಿರಲು
ಕೃಷಿಕ ವೀರರೀಕತೆಗೆ.
ಕಲಿಮಲ್ಲರು ಆ ಕಡೆಗಿನ (೩)

ಜಲ ಸೇನೆಯ ತಲೆಕಲಿಯಲು
ವಾಯು ಸೇನೆ ಜಯಹಾಯಲು
ಭೂ ಸೇನೆಗೆ ಹೆರುವ ಬಲವು
ಬೆನ್ನೆಲುಬೋಲ್ ಕೃಷಿಕನಿರಲು (೪)

ನಮ್ಮ ಬೆಳೆಯ ನಾವ್ರೆ ಬೆಳೆಸಿ
ನಮ್ಮ ಜನಕೆ ಬಡಿಸುತಿರಲು
ಕರ್ಮವೀರರಾಗೆಲ್ಲರು
ಆಭಿನಾವನವಿ ಸೆಬೆಯನಿಲಲು (೫)

ಯುದ್ಧ ಬಲಿ ಬಾನವಿರಲಿ
ಭನ್ನ ಸೈನ್ಯ ಸಿದ್ಧನಿರಲು
ಶೈತ ನಿತ್ಯ ದುಡಿಯುತಿರಲು
ಭಯ ಸರಿವುದು, ಜಯವುಲಿವುದು! (೬)

ಸ್ವಾತಂತ್ರ್ಯವೆ ಈ ಭಾರತ
ಜಾತ್ಯತೀತ ಏಕ್ಯಮತ್ಯ
ಶರಣಾಗತ ಸಂರಕ್ಷಕ
ಬಂಗ್ಲಾದೇಶ ಅಭ್ಯುದಯಕ
ಕೋಟಿ ಕೋಟಿ ಕೊರಳಗಳಲಿ
ಪ್ರಪಂಚನೇ ನೈವಿಳುವಂತೆ. (೭)

—"ಮಧ್ವನಿಧಿ ಜಲಜನಾಭತನಯ"

ನಾನು ಮತ್ತು ನಾವು

(ಎಂಟನೇ ಪುಟದಿಂದ)

ಗಿವೆ. ಈ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರುವ ಮಾನವತೆಯನ್ನು ನಾನೇ ಉದ್ಧರಿಸಬೇಕಾಗಿದೆ.

ನನ್ನಿಂದಾಗದು. ಆದು ನನ್ನಿಂದ ಶೈಲಾಗದು ಎಂದು ಪ್ರತಿಯೊಬ್ಬನೂ ತನ್ನ ಆಸಾಮರ್ಥ್ಯವನ್ನು ತೋರುವುದಕ್ಕಿಂತ ನಾನು ಮಾಡುವೆನು ಇಲ್ಲವೆ ಮಡಿಯುವೆನು. ಹಾಗೂ ನಾವು ಮಾಡೋಣ' ಎಂಬ ದೃಢ ನಿರ್ಧಾರವನ್ನು ತಳೆದಾಗ ಈ ಮನಃಸಾಕ್ಷಿಗೆ ವಿರೋಧವಾದ ವರ್ತನೆಯು ತಾನಾಗಿಯೇ ನಶಿಸಿ ಹೋಗುವುದು. 'ಪುರಾಣ ಮಿತ್ಯೇವನ ಸಾಧುಸರ್ವಂ 'ಮನಃ'ಪೂತಂ ಸಮಾಚರೇತ್' ಎಂಬ ಆರ್ಯೋಕ್ತಿಗಳ ಸಾಮಂಜಸ್ಯವನ್ನರಿತು ಆಚರಿಸುವಂತಾಗಬೇಕು. ಅಧಿಕಾರ ದರ್ಪಕ್ಕೆ ಹೆದರಿ ತಲೆಯಾಡಿಸುವ ಪಾಗೂ ಪ್ರಾಜ್ಞಲ ಮನ್ಯರನ್ನು ಪೂರ್ವಾಪರ ವಿಚಾರಿಸದೆ ಅನುಸರಿಸುವ ಈ ಅಂಧಶ್ರದ್ಧೆಯನ್ನು ಮೊದಲು ತೊರೆಯಬೇಕು.

ಕೋಣನ ಬುದ್ಧಿಯನೊಬ್ಬ 'ಕೋಣ ಕರು ಹಾಕಿತು' ಎಂದರೆ ಕೂಡಲೇ 'ಹಟ್ಟಿಯಲ್ಲಿ ಕಟ್ಟಿ' ಎಂಬ ಅಂಧಾನುಸರಣೆಗೆ ಎಡೆ ಕೊಡಬಾರದು. ಆಗಲೇ ಎಲ್ಲರ ಅಸ್ತಿತ್ವಗಳು ಬೆಳಗುವವು. 'ಯುಕ್ತಿ ಯುಕ್ತಂ ವಾಚೋ ಗ್ರಾಹ್ಯಂ-ಬಾಲಾದಪಿ ಶುಕಾದಪಿ' ಎಂಬಂತೆ ವಿಚಾರ ಪರಿಶುದ್ಧವಾದ ಅಭಿಪ್ರಾಯಕ್ಕೆ ವೈಯುಕ್ತಿಕ ಹಿರಿಮೆ ಕಿರಿಮೆಗಳು ಅಡ್ಡಿಯಾಗಬಾರದು. ಆಗಲೇ ಸರ್ವತೋಮುಖನಾದ ಏಳಿಗೆಯೂದೀತು. ಸರ್ವ ಸಮಾನತೆಯ ಮಾನವೀಯತೆಯು ಳ್ಳಿ ನಾನು ಎಂಬುದು ನಾವಾಗಿ ಮಾರ್ಪಟ್ಟು ದೇಶದ ಸರ್ವತೋಮುಖ ಪ್ರಗತಿ ಸಭವಾದೀತು. ಆಲ್ಲದೆ ನಮ್ಮ ಆಕರ್ಷ ಸೂತ್ರದ ಸಮನ್ವಯ:-

'ಸರ್ವೇಜನಾಃ ಸುಖಿನೋಭವಂತು'

For your Motor Transport
Needs
In South Kanara

REMEMBER

THE
HANUMAN TRANSPORT Co.
(PRIVATE) LIMITED,

Post Box No. 27,

UDIPI, S. K.

(Estd: 1930)

Telephone:
Managing Director : 319
Controller of Works & Stores: 319A

Telegrams:
"HANUMANCO"

ಪಕ್ಷಾಂತರ ವೃತ್ತಿ

(ಎಳನೀ ಹುಟದಿಂದ)

ಇದನ್ನು ಅಭ್ಯಸಿಸಿ ಅಲ್ಲಿರುವ ನಾತ್ವಿಕ ತಾತ್ವಿಕತೆಗಳನ್ನು ಅರಿಯುವುದಂತೂ ನೂರಮೇ ಉಳಿಯಿತು. ರಾಜಕೀಯ ಪಕ್ಷನೆಂದರೆ ಅಧಿಕಾರ ಗಳಿಸಿಕೊಡುವ ಆಥವಾ ಪ್ರಭಾವ ಬೆಳಸಿಕೊಳ್ಳುವ ಸಾಧನವನ್ನಾಗಿಸಿ "ದಳ್ಳಾಳಿ"ಯಾಗಿ ಕಂಡಿನ್ನಾರೆ ಈ ವರ್ಗದ ಜನ.

ಇಂದು ಪಕ್ಷಾಂತರಕ್ಕೆ ಸ್ಪೇರಕವಾಗುತ್ತಿರುವುದು ಇದೇ ದೃಷ್ಟಿ. ಅದರೆ ಇದು ಪ್ರಜಾಪ್ರಭುತ್ವಕ್ಕೆ ಎಂಥ ಗಂಡಾಂತರಕಾರಿ ಎಂಬುದನ್ನು ನಾವು ವಿಚಾರಿಸುತ್ತಿಲ್ಲ. ಪ್ರಜಾರಾಜ್ಯದ ಪ್ರಜೆಗಳಾಗಿ ಈ ಪದ್ಧತಿಯನ್ನು ಎಷ್ಟು ಸುಸಂಬದ್ಧವಾಗಿ ಬೆಳೆಸಿಕೊಂಡು ಪೋಗಬೇಕೋ, ಎಷ್ಟು ಗುರುತರ ಹೊಣೆ ನಮ್ಮ ಮೇಲೆ ಇದೆಯೋ ಅವನ್ನೆಲ್ಲ ಗಾಳಿಗೆ ತೂರಿ ರಾಜಕೀಯವನ್ನು ಇಷ್ಟು ಲಘುವಾಗಿ ಎಣಿಸುವುದು ನಿಜವಾಗಿಯೂ ಸಾಧುವಲ್ಲ. ನಮ್ಮ ಪ್ರತಿಷ್ಠೆಗಾಗಿ ರಾಜಕೀಯದ ಬಳಕೆ ನಡೆಯಬಾರದು. ಅದು ದೇಶಕ್ಕಾಗಿ ಇದೆ. ದೇಶದ ಅಭಿವೃದ್ಧಿ ಸಾಧನೆಗಾಗಿಯೇ ನಡೆಯಬೇಕು. ಏನಾದರೂ ಮಾತುವುದಕ್ಕೆ, ಏನಾದರೂ ಗಳಿಸುವುದಕ್ಕೆ ಪಕ್ಷಕಟ್ಟಿ, ಪಕ್ಷನೇರಿ. ನಡಿಸುವ ಕಾಯಕ, ಮೂಯಕ್ಕಗಳ ಬಗ್ಗೆ ಜನ ಎಚ್ಚರ ವಹಿಸಿ ಸೂಕ್ತ ಪ್ರತಿಕ್ರಿಯೆ ತೋರಿಸಿದರೆ ಮಾತ್ರ ಈ ವ್ಯವೃತ್ತಿ ನಿಂತೀತು. ವ್ಯಜಾಪ್ರಭುತ್ವ ಉಳಿದೀತು.

ಶಿಸ್ತುಗೇಡಿಗಳು

ಈ ಪಕ್ಷಾಂತರಗೊಳ್ಳುವ ಶಿಸ್ತುಗೇಡಿಗಳ ಸಂಖ್ಯೆ ಇಂದು ಹೆಚ್ಚಾಗ ತೊಡಗಿದೆ. ಅದೇ ಒಂದು ರಾಜಕೀಯ ಫ್ಯಾಶನ್ನಾಗಿ ಬಿಟ್ಟಿದೆ. ಒಂದು ಕಡೆ ಒಂದು ಹೇಳಿಕೆ, ಮತ್ತೊಂದು ಕಡೆ ನುತ್ತೊಂದು ಹೇಳಿಕೆ ನೀಡಿ ಆಗ್ಗದ ಪ್ರಸಿದ್ಧಿ ಈ ಜನಕ್ಕೆ ಲಭ್ಯವಾಗುತ್ತದೆ. ಅವಕ್ಕಾಗಿಯೇ ಜೊಲ್ಲು ಸುರಿಸುತ್ತಲೂ ಇರುತ್ತಾರೆ ಇಂಥವರ ಮೇಲೆ ಸಾಮೂಜಿಕವಾಗಿ, ರಾಜಕೀಯವಾಗಿ ಯಾವ ನಿಯಂತ್ರಣವೂ ಇರದ್ದರಿಂದ ಶಿಸ್ತು ಭಂಗವೆನ್ನುವುದು ಯಾವ ಭಯವೂ ಇಲ್ಲದ ಸಂಗತಿಯಾಗಿದೆ. ಒಂದು ಪಕ್ಷದಿಂದ ಶಿಸ್ತಿನ ಕ್ರಮಕ್ಕೆ ಒಳಗಾದವರು ಮತ್ತೊಂದು ಪಕ್ಷಕ್ಕೆ ಸುಲಭವಾಗಿ ಸೇರುತ್ತಾರೆ. ಅಲ್ಲಿಯೂ ಅವರ ಹೇಯಬರಕ ಹಾಗೆಯೇ ಎನ್ನುವುದು ತಿಳಿದರೂ ಹೊಸ ಅಂಗಡಿಗೆ ಹೇಗಾದರೂ ಗಿರಾಕಿಗಳು ಇರಲಿ ಎಂಬಂತೆ ಈ ಶಿಸ್ತುಗೇಡಿಗಳನ್ನೇ ಒಂದು ಪಕ್ಷವಾಗುವುದೂ ಇಂದು ಅಸಂಭವನೇನೂ ಇಲ್ಲ, ಅಸಾಧ್ಯವೂ ಇಲ್ಲ

ಅಲ್ಲಿಯೂ ಈ ಶಿಸ್ತುಗೇಡಿಗಳು ಆ ಪಕ್ಷವನ್ನು ಒಲಿಸಿಕೊಳ್ಳುವಾಗ, ಬಳಸಿಕೊಳ್ಳುವಾಗ ತಮ್ಮಪ್ಪನ ಆಸ್ತಿಯಂತೆಯೇ ಕಾಣುತ್ತಾರೆ. ಪಕ್ಷದ ಕಾರಣದಿಂದ ಏನಾದರೂ ಅಧಿಕಾರ ದಕ್ಕಿದರೆ ಆದು ತಮ್ಮದೇ ಎನ್ನುವಂತೆ ತಿಳಿಯುತ್ತಾರೆ. ಅಧಿಕಾರದ ಗಳಿಕೆಯ ವರೆಗೆ ಪಕ್ಷ ಮುಖ್ಯ, ಅನಂತರ ಪಕ್ಷ ಗೌಣವಾಗಿ ವ್ಯಕ್ತಿಯ ಪ್ರಭಾವ ಮುಂದಾಗುತ್ತದೆ. ತನ್ನಿಂದಲೇ ಎಲ್ಲವೂ ಎನ್ನುವುದಕ್ಕೆ ಸಲ್ಲವಿ ಹಾಡಿ ನಂಬಿಸಿ, ಬಿಂಬಿಸಿ ಪಕ್ಷವನ್ನೂ ಹಿಂದೆ ಸರಿಸಿ ಮರೆಸಿ ತಮ್ಮನ್ನೇ ಮೆರೆಸಿಕೊಳ್ಳುವ ಈ ಶಿಸ್ತಿಲ್ಲದ ಶಿಸ್ತುಗೇಡಿಗಳ ಪಕ್ಷ ಹುಟ್ಟಿದರೆ ಕಟ್ಟಿದರೆ ಅದರಿಂದ ಪ್ರಜಾ ಪ್ರಭುತ್ವಕ್ಕೆ ದೇಶಕ್ಕೆ ಯಾವ ಹಿತ ಸಾಧಿಸಿದಂತಾಗುತ್ತದೆ.

ವ್ಯಕ್ತಿ—ಪಕ್ಷ—ದೇಶ

ವ್ಯಕ್ತಿಗಿಂತಲೂ ತತ್ವವುಳ್ಳ ಪಕ್ಷ ದೊಡ್ಡದು ಪಕ್ಷಕ್ಕಿಂತಲೂ ದೇಶ ದೊಡ್ಡದು. ಈ ದೇಶದ ಸೇವೆಗಾಗಿಯೇ ಪಕ್ಷ ಹುಟ್ಟಬೇಕಾಗುತ್ತದೆ. ಪಕ್ಷಕ್ಕಾಗಿ ವ್ಯಕ್ತಿ—ಪಕ್ಷದ ದೇಶದ ಹಿತಕ್ಕಾಗಿ ನಿಷ್ಕನಾಗಿರಬೇಕಾಗುತ್ತದೆ.

ಈ ಸೇವಾಭಾವನೆಯಿಂದ ಪಕ್ಷ ಸೇರಿದರೆ ಜವನಿಗೆ ಪಕ್ಷವೇ ದೊಡ್ಡದಾಗಿ ಕಾಣುತ್ತದೆ. ಪಕ್ಷದ ಆಶ್ರಯದಲ್ಲಿ ಶಿಸ್ತು—ನಿಯಮಗಳ ಚೌಕಟ್ಟಿನಲ್ಲಿ ಸೇರುವ, ಸಾಗುವ ವ್ಯಕ್ತಿಗಳಿಗೆ ಅಲ್ಲಿ ಅಧಿಕಾರ ವ್ಯಕ್ತಿಪ್ರತಿಷ್ಠೆ ನಿರಪೇಕ್ಷವಾಗುತ್ತದೆ. ಅದು ಇಲ್ಲದಿದ್ದಾಗ ಪಕ್ಷಾಂತರ ತಲೆ ಹಾಕುತ್ತದೆ.

ಪ್ರಜಾ ಪ್ರಭುತ್ವದಲ್ಲಿ ಪಕ್ಷಗಳು ಇರಬೇಕಾದ್ದು ಅವಶ್ಯ. ಅದು ಸರಿಯಾಗಿ ಪ್ರಜೆಗೆ ಆಂದಿನ ಸ್ಥಿತಿಗತಿಯ ಪ್ರಜ್ಞೆ ಮೂಡಿಸಿ ಬೆಳೆಯ ಬೇಕಾದದ್ದೂ ಅಪೇಕ್ಷಣೀಯ. ಈ ರೀತಿ ಪಕ್ಷಗಳು ಬೆಳವಣಿಗೆಗೆ ಪ್ರಜಾಪ್ರಭುತ್ವಕ್ಕೊಂದು ಪೋಷಕ. ಆದರೆ ಅದನ್ನು ಬೆಳೆಸುವ ಹವ್ಯಾಸದಲ್ಲಿ, ಹೆಸರಿನಲ್ಲಿ ಏನಾದರೂ ತ್ವರೆಯಾಗಿ—ಮರೆಯಾಗಿಸುವ ಶಿಸ್ತುಗೇಡಿತನ ಮಾತ್ರ ಪ್ರಜಾಪ್ರಭುತ್ವಕ್ಕೆ ಆದಿ ವ್ಯಾಧಿಗಳನ್ನು ತಂದ ಹಾಗೆಯೇ ಎಂದು ತಿಳಿಯಬೇಕು. ಯಾವುದೇ ಪಕ್ಷದಲ್ಲಾಗಲೀ ಈ ಶಿಸ್ತುಗೇಡಿಗಳಿಗೆ ಸರಿಯಾದ ನೀತಿ ರೂಪಿಸದಿದ್ದರೆ 'ಛಲೇಜಾವ್' ಎನ್ನದಿದ್ದರೆ ಪಕ್ಷದ ಶುದ್ಧೀಕರಣವಾಗಲಾರದು. ಆದರೆ ಪಾವಿತ್ರ್ಯ, ಚಾರಿತ್ರ್ಯ ಬೆಳೆಯಲಾರದು. ಹಾಗಾಗಿ ಪ್ರಜಾಪ್ರಭುತ್ವದ ಶೀಲ ಸಂವರ್ಧನೆಗಾಗಿ ಈ ಪಕ್ಷಾಂತರ ವೃತ್ತಿ—ವ್ಯಕ್ತಿಗಳ ಬಗ್ಗೆ ಎಚ್ಚರವಹಿಸದಿದ್ದರೆ ಈ ಶಿಸ್ತುಗೇಡಿಗಳ ಪಕ್ಷದ ಕೂಟ ಮೂಟಗಳಿಂದ ಏನಾದರೂ ಅನಿಷ್ಟ ಸಭವಿಸೀತು ಪ್ರಜಾತಂತ್ರದ ಆದರ್ಶವನ್ನು ಅಳಿಸಿ ಹಾಕೀತು.

ಬೂದಿಯು ರಾಶಿಯ ಮೇಲೆ ನೀರು ಹೊಯ್ದರೆ ಕೂಡಲೆ ಇಂಗಿಹೋಗುತ್ತದೆ; ಅಹಂಕಾರ ಬೂದಿರಾಶಿಯಂತೆ. ಅಹಂಕಾರದಿಂದ ಮೆರೆಯುವವರ ಮನಸ್ಸಿಗೆ ವ್ಯಾರ್ಧನೆ ಮತ್ತು ಧ್ಯಾನದಿಂದ ಏನೂ ಪ್ರಯೋಜನವಿಲ್ಲ.

ಂ ಂ ಂ

ಖಂಡನ ಸುಲಭ;ಮಂಡನ ಕಷ್ಟದಾಯಕ.

ಂ ಂ ಂ

ಮೈಸೂರು ರಾಜ್ಯದ ಸಂಪರ್ಕ ವ್ಯವಸ್ಥೆ

ಸಮೂಹಾಯುದ ಅಭಿವೃದ್ಧಿಯಲ್ಲಿ ರಸ್ತೆ ಸಂಪರ್ಕದ ಪಾತ್ರ ಅತ್ಯಮೂಲ್ಯ

ಹತ್ತು ವರ್ಷಗಳ ಹಿಂದೆ ರಾಜ್ಯದಲ್ಲಿದ್ದ ಒಟ್ಟು ರಸ್ತೆಗಳ ಉದ್ದ 27,246 ಮೈಲಿಗಳು. ಈಗ ಆ ಉದ್ದ 39,332 ಮೈಲಿಗಳಷ್ಟಾಗಿದೆ. ಇದರಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿ 28,468 ಮೈಲಿಗಳಿದ್ದರೆ 10,864 ಮೈಲಿ ರಸ್ತೆ ತಾಲೂಕು ಅಭಿವೃದ್ಧಿ ಮಂಡಳಿ ಆಶ್ರಯದಲ್ಲಿ ಇವೆ.

ಲೋಕೋಪಯೋಗಿ ಇಲಾಖೆಯ ವ್ಯವಸ್ಥೆಗೆ ಒಳಪಟ್ಟಿರುವ ರಸ್ತೆಯ ಉದ್ದ ಈ ದಶಕದಲ್ಲಿ ಶೇಕಡ 61ರಷ್ಟು ಹೆಚ್ಚಿದೆ. ರಾಜ್ಯದ ಸರಾಸರಿ ರಸ್ತೆ ಸೌಲಭ್ಯ ಪ್ರತಿ ನೂರು ಚದರ ಮೈಲಿಗೆ 53 ಮೈಲಿ ಪ್ರತಿ ಲಕ್ಷ ಜನಸಂಖ್ಯೆಗೆ 166 ಮೈಲಿ.

ಚಂಪಾ ಷಷ್ಠಿಯ

ವೈಭವೋಪೇತ ಬ್ರಹ್ಮರಥೋತ್ಸವ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಮಾರ್ಗಶಿರ ಶುದ್ಧ ಷಷ್ಠಿಯ ದಿನ ವರ್ಷಾವಧಿ ಉತ್ಸವ ನಡೆಯುವುದು. ಇದಕ್ಕೆ ಹಲವು ದಿನ ಮೊದಲೇ ಇದರ ಅಂಗಗಳು ಆರಂಭವಾಗುವುವು. ಈ ಷಷ್ಠಿಯ ಉತ್ಸವಕ್ಕೆ ನಾಡಿನ ಮೂಲೆ-ಮೂಲೆಗಳಿಂದಲೂ ಸಾವಿರಾರು ಭಕ್ತ ಜನರು ಬರುತ್ತಾರೆ. ದೇವಸ್ಥಾನದ ಹಲವಾರು ಛತ್ರಗಳಲ್ಲಿ ಇವರಿಗೆಲ್ಲ ಉಳಕೊಳ್ಳಲು ವ್ಯವಸ್ಥೆ ಮಾಡುವುದು ಅನಾಧ್ಯವಾಗುತ್ತದೆ. ಭಕ್ತರು ನೈ ಕೊರೆಯುವ ಚಳಿಯನ್ನೂ ಗಮನಿಸದೆ ರಸ್ತೆಯಲ್ಲಿ ಓಡಾಡುತ್ತಿರುತ್ತಾರೆ.

ಸುಬ್ರಹ್ಮಣ್ಯದ ರಥವು ಇದೀಗ ಜೀರ್ಣವಾಗಿರುವುದಾದರೂ ಅದು ಅತ್ಯಂತ ಹಿರಿದಾದ ರಥ. ಇದರಲ್ಲಿ ಮನೋಹರವಾದ ಕೆತ್ತನೆಯ ಕೆಲಸಗಳಿವೆ. ಈ ರಥವನ್ನು ಎಳೆಯುವುದಕ್ಕಾಗಿ ಕಾಡಿನಿಂದ ತೋರವಾದ ಮತ್ತು ಉದ್ದವಾದ ಬೆತ್ತವನ್ನು ಕಡಿದು ತರುತ್ತಾರೆ. ಸುಮುಹೂರ್ತದಲ್ಲಿ ದೇವರ ರಥಾರೋಹಣವಾದ ನಂತರ ಒಂದು ಗರುಡ ಪಕ್ಷಿಯು ರಥದ ನೆತ್ತಿಯ ಮೇಲೆ ಕಾಣಿಸಿ ಕೊಳ್ಳುತ್ತದೆ. ಅದು ಒಂದು ಸುತ್ತು ಹಾರಿ ನುಸ್ತೆ ಮಾಯವಾಗುತ್ತದೆ. ಗರುಡಾಗಮನವಾಯಿತೆಂದು ಹಿಗ್ಗಿದ ಜನರು ಪ್ರಚಂಡ ಕರತಾಡನ ಮಾಡುತ್ತಾರೆ. ರಥವನ್ನು ಎಳೆದುಕೊಂಡು ಮುಂದೊಯ್ಯುತ್ತಾ ರಥೋತ್ಸವಾನಂತರ, ರಥವನ್ನೆಳೆದ ಬೆತ್ತವನ್ನು ಕಡಿದು ತುಂಡು ತುಂಡುಗಳಾಗಿ ಮಾಡಿ ಹಂಚುತ್ತಾರೆ. ಇದಕ್ಕಾಗಿ ನೆರೆದ ಭಕ್ತರು ಪರದಾಡುತ್ತಾರೆ. ಈ ಬೆತ್ತದ ತುಂಡನ್ನು ತೇದು ಗಂಧದಂತೆ ಲೇಪಿಸಿದರೆ, ವ್ಯಾಧಿಗಳು ದೂರವಾಗುತ್ತವೆಂಬ ವಿಶ್ವಾಸ ಜನತೆಯದ್ದು.

ಜೇಷ್ಠ ಮಾಸದಿಂದ ಭಾದ್ರಪದ ಮಾಸಗಳ ನಡುವಣ ಅಲ್ಪ ಕಾಲಾವಧಿಯನ್ನು ಬಿಟ್ಟರೆ, ಸುಬ್ರಹ್ಮಣ್ಯದಲ್ಲಿ ಪ್ರತಿನಿತ್ಯವೂ ಒಂದಲ್ಲ ಒಂದು ಉತ್ಸವ ನಡೆಯುತ್ತದೆನ್ನಬಹುದು. ಪ್ರತಿನಿತ್ಯವೂ ನಿರ್ಮಾಲ್ಯ ವಿಸರ್ಜನಾದಿ ಪೂಜೆಯಿಂದ ತೊಡಗಿ ರಾತ್ರಿ ೮ ಮಂಗಳ ಪೂಜೆಯವರೆಗೂ ತ್ರಿಕಾಲ ಪೂಜೆಗಳು ಸಾಂಗವಾಗಿ ನೆರವೇರುತ್ತವೆ.

ಶ್ರೀ ಕ್ಷೇತ್ರದಲ್ಲಿ ನಡೆಯುವ ಕೆಲವು ಉತ್ಸವಗಳು ಇಪ್ಪು-ವಸಂತ ಪೂಜೆ, ರಾಮ ನವಮಿ, ಅಕ್ಷಯತದಿಗೆ, ಲಕ್ಷದೀಪ, ಪಂಚಮಿ ಮಹೋತ್ಸವ, ಚಂಪಾಷಷ್ಠಿ ಉತ್ಸವ,ಕೆರುಷಷ್ಠಿ, ರಥ ಸಪ್ತಮಿ.

ಅಲಂಕೃತ ರಥೋತ್ಸವಗಳು ಮಾತ್ರವಲ್ಲದೆ ಶೇಷವಾಹನ, ಅಶ್ವವಾಹನ, ಮಯೂರವಾಹನ, ಪುಷ್ಪರಥ, ಛಂಡಿ ಮತ್ತು ಪಾಲಕೆಗಳಲ್ಲಿಯೂ ಬೇರೆ ಬೇರೆ ದಿನಗಳಲ್ಲಿ ಶ್ರೀ ದೇವರ ಉತ್ಸವಗಳು ನಡೆಯುತ್ತವೆ.

ಭಕ್ತ ಮಹಾಶಯರು ಅಪೇಕ್ಷಿಸುವುದಾದರೆ, ಆಯಾಯಾ ಸೇವೆಗಳಿಗೆಂದು ಗೊತ್ತು ಮಾಡಿದ ಸೌಲ್ಯವನ್ನು ಕೆತ್ತಲ್ಲಿ ಕಾರ್ತಿಕ ಶುದ್ಧ ಗರಿಂದ ಜ್ಯೇಷ್ಠ ಶುದ್ಧ ೬ರವರೆಗೆ ಯಾವ ದಿನವೂ ಯಾವ ಉತ್ಸವವನ್ನೂ ನಡೆಸುವ ಏರ್ಪಾಡಿರುವುದು. ಈ ರೀತಿಯ ಉತ್ಸವಗಳನ್ನು ನಡೆಸುವುದರಿಂದ ದೇವರ ಸೇವೆಯು ನಡೆದು, ಮಾಡಿಸಿದವರ ಇಷ್ಟಾರ್ಥ ಸಿದ್ಧಿಯಾದ ಹಲವಾರು ಉದಾಹರಣೆಗಳುಂಟು. ●



ಬಂಡಿ ಉತ್ಸವ

ಸುಬ್ರಹ್ಮಣ್ಯದಲ್ಲಿ ಈ ವರ್ಷ ಜರಗಿದ ಧರ್ಮ ಸಮ್ಮೇಳನದ ಕೆಲವು ದೃಶ್ಯಗಳು



ಧರ್ಮ ಸಮ್ಮೇಳನ ಆಹ್ವಾನಿತ ಅತಿಥಿಗಳು

ಎಡದಿಂದ ಬಲಕ್ಕೆ— ಶ್ರೀ ಸುಬ್ರಹ್ಮಣ್ಯ ಸ್ಥಿತ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರು, ಸಮ್ಮೇಳನದ ಉದ್ಘಾಟಕರಾದ ಮಂಗಳೂರು ರಾಮಕೃಷ್ಣಾಶ್ರಮದ ಶ್ರೀ ವಿಜ್ಞಾನಂದಜಿ, ಸಮ್ಮೇಳನ ಅಧ್ಯಕ್ಷತೆ ವಹಿಸಿದ ಧರ್ಮಸ್ಥಳದ ಶ್ರೀ ಸ್ವಾಮಿ ಪರಮಹಂಸ ಶೇಷಾಚಾರ್ಯರು, ಉಪನ್ಯಾಸಕರಾದ ಶ್ರೀ ಕೆ ವಿಷ್ಣುಮೂರ್ತಿ ಭಟ್, ಆದಳಿತ ಮಂಡಳಿಯ ಅಧ್ಯಕ್ಷ ಶ್ರೀ ಕೆ.ಸುಬ್ರಹ್ಮಣ್ಯ ಗೌಡ, ಇನ್ನೋರ್ವ ಭಾಷಣಗಾರ ಶ್ರೀ ಎಸ್. ಕೃಷ್ಣ ಭಟ್ (ಉಪನ್ಯಾಸವಿಲ್ಲ) ಹಿಂದಿನಿಂದ—ಶ್ರೀ ಎಸ್. ರಾಮಕೃಷ್ಣ ಭಟ್, (ಮೆನೇಜರ್) ಶ್ರೀ ಪಿ. ಸುಬ್ಬಯ್ಯ ಕಟ್ಟೆ, (ಟ್ರಸ್ಟಿ)

ಉಡುಪಿಯ ಶ್ರೀ ಶ್ರೀನಿವಾಸ ಇವರ ಹರಿಕಥಾ ಕಾಲಕ್ಷೇಪ

ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪುತ್ತೂರಿನ 'ನಾಟ್ಯಾಲಯ'ದ ಶಿಷ್ಯವೃಂದ. ಹಿಂದೆ ನಿಂತವರು—ನೃತ್ಯ ಅಧ್ಯಾಪಕ ಶ್ರೀ ರಾಧಾಕೃಷ್ಣ ಮತ್ತು ದೇವಳದ ಮೆನೇಜರ್

ಸಮಾಜವಾದಿ ಯಾರು?

(ಐದನೇ ಪುಟದಿಂದ)

ನಗಳ ನಡುವಿನ ಘೋರ ವೈಷಮ್ಯದ ನಿವಾರಣೆ, ಭೂ ಹಿಡುವಳಿ ನಗರದ ಆಸ್ತಿ ಇತ್ಯಾದಿಗಳಿಗೆ ಪರಮೋಪಧಿ–ಇವೇ ಮುಂತಾದ 'ಗರೀಬೀ ಹಟಾವೋ'ದ ಚಿಕಿತ್ಸಾ ಕ್ರಮಗಳನ್ನು, (Broad Spectrum Antibiotics) ಉಪಯೋಗಿಸಲು ಹೊರಟಿರುವುದೇನ ತರಬೇತಿಯ ವೈದ್ಯರಂತೆ.

'ತೇನ ತ್ಯಕ್ತೇನ ಭುಂಜೀಥಾಃ' 'ಸರ್ವೇ ಜನಾಃ ಸುಖಿನೋ ಭವಂತು' ಇತ್ಯಾದಿ ಸುಭಾಷಿತಗಳನ್ನು ಉರುಳಿಸುವವರು, ಅಥವಾ ಇವುಗಳಂತೆ ನಡೆಯುವವರು ಸಮಾಜವಾದಿಗಳಾಗುವರೇ? ಇಂಥ ಜನ ಸಜ್ಜನರು, ಸಾಧುಗಳು, ಪೂಜ್ಯರು, ಅನುಕರಣೀಯರು ಪ್ರಶಂಸೆಗೆ ಯೋಗ್ಯರು–ಇದರಲ್ಲಿ ಸಂದೇಹವೇ ಇಲ್ಲ. ಆದರೆ ಆ ಪುಟ್ಟಿಗೆ ಅವರು ಸಮಾಜವಾದಿಗಳಾದಂತೆಯೇ? ಈ ಕುರಿತು ಅಸಂದಿಗ್ಧವಾದ ನಿರ್ದಿಷ್ಟವಾದ ವ್ಯಾಖ್ಯೆ ಅಗತ್ಯ. ಇಲ್ಲವಾದರೆ ಇಂದಿನ ಸಂಭ್ರಮದ ಸಂದುಗಟ್ಟಿನಲ್ಲಿ ಎಲ್ಲರೂ ಸಮಾಜವಾದಿಗಳಾಗಿ ಯೂರೂ ಸಮಾಜವಾದಿಗಳಲ್ಲವೆಂದಾಗಿ ಅನವಸ್ಥೆಯ ಪ್ರಸಂಗ ಉಂಟಾಗಬಹುದು. ಅಲ್ಲ ಈಗಾಗಲೇ ಉಂಟಾಗಿದೆ.

ಕಾರ್ಲಮಾರ್ಕ್ಸ್ ಘೋರ ಪಾಂಡಿತ್ಯದಲ್ಲಿ ಬಾಳಿದ. ಅದರೆ ಅವನ ಆಪ್ತ ಮಿತ್ರ ಅವನ ಕಮ್ಯುನಿಸಂ ತತ್ವವನ್ನು ಜನಪ್ರಿಯಗೊಳಿಸಲು ಅವನೊಂದಿಗೆ ಕೊನೆತನಕ ನಾಥವಾದ ಹೈತ್ರಿಸಿಟ್ಟಿ ಬಳಿದು ಕಮ್ಯೂನಿಸ್ಟ್ ಪ್ರಣಾಳಿಕೆ–ಸಂಘಟನೆಗಳಲ್ಲಿ ತೊಡಗಿನ ವಿಜಲ್ಲಿ ಒಳ್ಳೇ ಧನಾಢ್ಯ ಉದ್ದಿಮೆಗಾರನಾಗಿದ್ದನು. ಅಂದಾಗ ವೈಯುಕ್ತಿಕ ಬಡತನಕ್ಕೂ ವ್ಯಕ್ತಿಯ ವಾರ್ತಾಕನಕ್ಕೂ ಸಮಾಜವಾದಕ್ಕೂ ಯಾವ ಬಾದರಾಯಣ ಸಂಬಂಧ?

ಸಮಾಜವಾದಿಯೆಂದರೆ ಯಾರು? ಸಮಾಜದ ಬಗೆಗೆ ಚಿಂತಿಸುವವನೋ? ಸಮಾಜಸೇವೆಯೋ? ಸಂಸ್ಕೃತ ನಾಟಕಗಳಲ್ಲಿ ನಾಟಕದ ಸ್ತ್ರೀಪಕ್ಷ ವರ್ಗಕ್ಕೆ ನಾಯಕಿ ಕರೆಂದು ಕರೆಯುತ್ತಾರೆ. ಬರ್ನಾರ್ಡ್ ಶಾ "ಜಾಣ ಹೆಣ್ಣಿಗಾಗಿ ಸಮಾಜವಾದದ ಕೈಪಿಡಿ"(Intelligent woman's guide to Socialism)ಎಂಬ ಅತ್ಯಂತ ಸ್ವಾರಸ್ಯದ ಪುಸ್ತಕವನ್ನು ಬರೆದಿದ್ದಾನೆ. ಅದರ ಆರಂಭದ ವಾಕ್ಯವೇ ಹೀಗಿದೆ. "what is Socialism? Socialism is Communism. But Communism is bad English"(ಸಮಾಜವಾದವೆಂದರೇನು? ಸಮಾಜವಾದವೇ ಕಮ್ಯೂನಿಸಂ. ಆದರೆ ಕಮ್ಯೂನಿಸಂ ಕೆಟ್ಟ ಭಾಷೆ. ಮೈಲಿಗೆ ಭಾಷೆ!) ಈ ನೋತಿಸ್ಸಿನ ತೋರಿಕೆಗೆ ಒಂದು ಜೋಡ್ಯನಿದ್ದರೂ ಇರಬಹುದು ಕಾಣೋದ್ಯವಲ್ಲ. ಆದರ ಹಿಂದೆ ಒಂದು ತಿಳುವಳಿಕೆಯ ಅಂಶವಿದೆ

ಸಮಾಜವಾದಿ ಎಂಬವನು ತಾನೇ ತನ್ನ ವ್ಯಕ್ತಿಗತ ಜೀವನವನ್ನು ಎಷ್ಟೇ ತಿದ್ದಿ ಸರಳಗೊಡಿಸಿದರೂ ನಿರಾಡಂಬರವಾಗಿಸಿದರೂ ಆತ ಸಮಾಜವಾದಕ್ಕಾಗಿ ದುಡಿದಂತೆ ಆಗಲಿಲ್ಲ. ಆತ ಭೂತದಯಾವಾದಿಯಾಗಿರಬಹುದು. ಮಾನವತಾವಾದಿಯೂಗಬಹುದು. ಭಾವಿಕ ಸಾಧುವೆನಿಸಿಕೊಳ್ಳಬಹುದು. ಆದರೆ ಹೀಗೆ ಅವನೊಬ್ಬನೇ ಇಲ್ಲ; ಹತ್ತು ಸಾವಿರ ಮಂದಿ ಈ ಪರಿವರ್ತನೆ ಹೊಂದಿದರೂ ಅದು ಸಮಾಜವಾದವಲ್ಲ ಅವರು ಸಮಾಜವಾದಿಗಳಲ್ಲ.

ಶಾ ಅಂತೆ ಸಮಾಜವಾದ ಮತ್ತು ಕಮ್ಯೂನಿಸಂ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು. ನಾಣಿಸಿನ ಕಾಳೇನು? ಬಾರನೆಲ್ಲಿ ಒಂದೇ ತಾನೇ? ಸೋಶಲಿಸ್ಟ್ ಮತ್ತು 'ಕಮ್ಯೂನಿಸ್ಟ್' ಈ ಎರಡು ಪದಗಳ ನೂಲಿನ 'ಸೊಸೈಟಿ'ಯನ್ನು ಮತ್ತು 'ಕಮ್ಯೂನಿಟಿ' ಇವುಗಳಲ್ಲಿ ಏನು ಮಹಾ ಭೇದವಿದೆ? 'ಸಮಾಜ' 'ಕೋಮು' ಅಂದರೆ ಬೇರೆ ಬೇರೆ ಭಿನ್ನ 'ಪದಾರ್ಥ'ಗಳಲ್ಲ. ಇರಲಿ. ಮೇಲ್ನೋಟಿನ ಅರ್ಥದಲ್ಲಿ 'ಸೋಶಲಿಸಂ' 'ಕಮ್ಯೂನಿಸಂ' ಗಳೆಂದರೇನು?

Socialism: Principle that individual liberty should be completely subordinated to the interests of the Community with the deductions that can be drawn from them.

ಉದಾ: the State ownership of land capital (ವ್ಯಕ್ತಿಯ ಸ್ವಾತಂತ್ರ್ಯವನ್ನು ಸಮಾಜದ ಹಿತಗಳಿಗೆ ಪೂರ್ಣ ವಿಧೇಯನಾಗುವಂತೆ ಮಾಡಬೇಕೆಂಬ ತತ್ವ ಮತ್ತು ಈ ತತ್ವದಿಂದ ಹೊರಡುವ ಸಿದ್ಧಾಂತಗಳು. ಉದಾ: ಭೂಮಿ, ಭಂಡವಾಳಗಳ ಸಾರ್ವಜನಿಕ ಒಡೆತನ) ಇನ್ನು 'ಕಮ್ಯೂನಿಸಂ' Communism: joint ownership or common position in regard to some thing as a social system with the necessary provisions for labour and distribution (ಯಾವುದಾದೊಂದು ಸಂಗತಿಗೆ ಸಂಬಂಧಪಟ್ಟ ಸಂಯುಕ್ತ ಒಡೆತನ ಅಥವಾ ಸಾಮೂಹಿಕ ನಿಲುಮೆ. ಜತೆಗೆ ದುಡಿಮೆ ಮತ್ತು ವಿತರಣೆಯ ಕುರಿತು ಅಗತ್ಯ ಬಿದ್ದ ಏರ್ಪಾಟು) ಇನ್ನು Society ಎಂಬ ಶಬ್ದಕ್ಕೆ community ಗಿಂತ ಒಂದು ವಿಶಿಷ್ಟ ಅರ್ಥವೂ ಇದೆ. ಅದು upper classes of a community. ಜನ ಸಮುದಾಯದಲ್ಲಿಯ ಮೇಲ್ವರ್ಗಗಳೆಂದೂ ಧ್ವನಿಸುತ್ತದೆ. ಒಟ್ಟಿನಿಂದರೆ 'ಕಮ್ಯೂನಿಸಂ' ಗಿಂತ 'ಸೋಶ್ಯಲಿಸಂ' ದೆಚ್ಚು ಶಿಷ್ಟ ಪ್ರತಿಷ್ಠಿತ ಪದವಾಗಿ ಬಳಕೆಯಲ್ಲಿ ಬಂದಿರಬೇಕು!

ಉತ್ಪಾದನೆ ವಿತರಣೆಗಳ ವ್ಯವಸ್ಥೆಯನ್ನು ಸಾರ್ವಜನಿಕ ಸಾಮುದಾಯಿಕ ಒಡೆತನದಡಿಗೆ ತರುವುದೂ ಇಡುವುದೂ ಇವೆರಡೂ ಪದಗಳ ಅರ್ಥ. ಇದರೆ ಕಮ್ಯೂನಿಸಂ ನಲ್ಲಿ ಯಾವುದೇ ವಸ್ತುವನ್ನು ಒಂದು ಗುಂಪು ಸಾಮುದಾಯಿಕವಾಗಿ ಭೋಗಿಸುವ ವಶದಲ್ಲಿಟ್ಟುಕೊಳ್ಳುವ ಅರ್ಥಕ್ಕೂ ಪ್ರಾಧಾನ್ಯ. (ದ್ರೌಪದಿಯ ಮೇಲೆ ಪಾಂಡವರ ಪತಿತ್ವ) ಇಲ್ಲಿ ಸರಕಾರದ ಒಡೆತನವೇ ಎಂಬ ನಿರ್ದಿಷ್ಟವಾಗುವುದಿಲ್ಲ. ಮಾರ್ಕ್ಸ್ ಪ್ರತಿಪಾದಿಸಿದಂತೆ ಧನದ ಉತ್ಪಾದನೆ ಮತ್ತು ವಿತರಣೆಗಳ ಮೇಲೆ ಅದಕ್ಕಾಗಿ ಸರಕಾರದ ಸೋಲೆ ಶ್ರಮಜೀವಿಗಳ ಸರ್ವಾಧಿಕಾರಿತ್ವವೇ ಕಮ್ಯೂನಿಸಂ ಸಮಾಜವಾದದಲ್ಲಿ ಸರಕಾರೀ ಒಡೆತನವೇ ಮುಖ್ಯ. ಸರಕಾರದ ಮೇಲೆ ಯಾರ ಒಡೆತನ? ಅದು ಅಷ್ಟೊಂದು ನಿರ್ದಿಷ್ಟವಿದ್ದಂತೆ ಇಲ್ಲ.

ಇನ್ನು ಸಮಾಜವಾದದ ಸ್ಥಾಪನೆ ಸಂವಿಧಾನಕ್ಕೆ ಅನುಗುಣವಾಗಿ ಸಂಸದೀಯ ಪ್ರಜಾಪ್ರಭುತ್ವದ ಮಾರ್ಗದಿಂದ ಆರ್ಥಾತ್ ಅಹಿಂಸಾತ್ಮಕ ವಿಕಾಸಕ್ರಮದಲ್ಲಿ ಮುಂದುವ ಸಂಕಲ್ಪ ಸಾಧನೆ ಸೋಶಲಿಷ್ಟರದು. ಅದನ್ನೇ ಕೆಸಾಗ ಕಾರ್ಮಿಕರ ಶ್ರಮಜೀವಿ ವರ್ಗದ, ಸಮಾಜದ ಅತಿ ಕನಿಷ್ಠವರ್ಗದ (Proletariate) ಬಂಡೆದ್ದ ಕ್ರಾಂತಿಯಿಂದ ಸ್ಥಾಪಿಸುವುದು ಅದೂ ಆ ವರ್ಗದ ಸರ್ವಾಧಿಕಾರಿತ್ವದಲ್ಲಿ – ಇದು ಕಮ್ಯೂನಿಷ್ಟರ ಸಂಕಲ್ಪ ಮತ್ತು ಸಾಧನೆ (ಆದರೆ ಇದಕ್ಕೂ ಒಂದು ಧನ್ಯ ಅಪವಾದ ಭಾರತದೇ ಮೂಡಿ ಕಾಣಿಸಿತು. ಕೇರಳದಲ್ಲಿಯೇ ಪ್ರಥಮ ಸಲ ಕಮ್ಯೂನಿಸ್ಟ ಪಕ್ಷವು ಚುನಾವಣೆಗಳನ್ನು ಗೆದ್ದು ಮತಪೆಟ್ಟಿಗೆಯ ಮುಖಾಂತರ ಅಧಿಕಾರಕ್ಕೆ ಬಂದು ತನ್ನ ಸತ್ತೆಯನ್ನು ಸ್ಥಾಪಿಸಿತು!)

ಇದರಿಂದ ಒಂದು ಮಾತು ಸುಸ್ಪಷ್ಟ, ಸಮಾಜವಾದ ಒಂದು ಸಮಾಜ ರಚನೆಯ ಕುರಿತ ಸಿದ್ಧಾಂತ ಅಥವಾ ಕಾರ್ಯಕ್ರಮ. ಅದೊಂದು ವ್ಯಕ್ತಿಗತ ಗ್ರಹಿಕೆಯ ಆಚರಣೆಯ ವಿಷಯವಲ್ಲ. ಸಾಮುದಾಯಿಕ ಒಡೆತನ, ರಾಷ್ಟ್ರೀಕರಣ, ಅಂಥ ಸತ್ತಾಕ್ರಮಣ ಕ್ರಾಂತಿ ಕೆಸಾಗ–ಕಾರ್ಮಿಕರೇ ಮುಂತಾದ ಶ್ರಮಜೀವಿ ವರ್ಗಗಳ ಸಂಘಟನೆ ಇವುಗಳಲ್ಲಿ ವಿಶ್ವಾಸ ಇವುಗಳಿಗಾಗಿ ಪ್ರಾಮಾಣಿಕ ಪ್ರಯತ್ನ–ಪ್ರವೃತ್ತಿ ಇದೊಂದೇ ಸಮಾಜವಾದಿಯನ್ನು ಹೆಗ್ಗುರುತು. ವೈಯುಕ್ತಿಕ ಪ್ರಾಮಾಣಿಕತೆ, ಸದಾಚಾರ, ಶೀಲ, ಭೂತದಯೆ, ಔದಾರ್ಯ, ಅಹಿಂಸೆ, ವಿನಯ, ಸಂಯಮ–ಇನ್ನೆಲ್ಲ ಗುಣಗಳು ಯಾವ ವ್ಯಕ್ತಿಗೂ ಅವಶ್ಯ. ಆತ ಆಳಾಗಿರಲಿ, ಮುಂದಾಳಾಗಿರಲಿ, ಅಳರಸನಾಗಿರಲಿ, ಬಡತನದ ತತ್ವಜ್ಞಾನ ತತ್ವಜ್ಞಾನದ ಬಡತನವನ್ನೇ ಹೊರಗೆಡಹುತ್ತದೆ, ಹೊರತು ಆ ತತ್ವಜ್ಞಾನಿ ಒಬ್ಬ ಸಮಾಜವಾದಿ ಎಂಬುದಲ್ಲ

ಹೀಗೆ ಸಾಮೂಹಿಕ ಉಚ್ಚಾಟನೆಯಲ್ಲಿ, ಶ್ರಮಜೀವಿಗಳ ಆಂದೋಲನ ಕ್ರಾಂತಿಗಳಲ್ಲಿ ಆ ಮೂಲಕ ಧನೋತ್ಪಾದನೆಯ ಎಲ್ಲ ಸಾಧನಗಳ ಮೇಲೆ ಹಾಗೂ ಧನದ ವಿತರಣೆಯ ಮೇಲೆ ಸಮಾಜದ ಸತ್ತೆಯ ಸ್ಥಾಪನೆಯಲ್ಲಿ ನಿಷ್ಠೆಯುಳ್ಳವನು ನೂತ್ರ ನಿಜವಾದ ಸಮಾಜವಾದಿ. ಉಳಿದವರೆಲ್ಲ ಎಷ್ಟೇ ಒಳ್ಳೆಯವರಿರಲಿ, ವ್ಯಕ್ತಿವಾದಿಗಳೇ ಹೊರತು ಸಮಾಜವಾದಿಗಳಲ್ಲ.

●●

ರಾಯರು:— "ನಾ ಸ್ವಲ್ಪ ಗಾಳೀ ತಕ್ಕೊಂಡು ಬರ್ತೀನಪ್ಪಾ ..."
ಹೊಸ ಸೇವಕ:— "ನಿಮಗೇನು ಬೇಕಾದ್ರೂ ನಾನೇ ತಂದು ಕೊಡಬೇಕೂಂತ ಹೇಳಿದ್ದಾರೆ ಅನ್ಯಾಯವು ಗಾಳೀನೂ ನಾನೇ ತಂದು ಬಿಡ್ತೀನೇ...."

ಪರ್ಯಾಯ ಮಹೋತ್ಸವ

(ನಾಲ್ಕನೇ ಪುಟದಿಂದ)

ಕ್ಷೀನಾರಾಯಣ ಶರ್ಮ, ಸಗ್ರಿ ಹಯಗ್ರೀವಾಚಾರ್ಯ, ಬನ್ನಂಜೆ ಅನಂತ ಕೃಷ್ಣ ಉಪಾಧ್ಯ, ಅಲೆವೂರು ಸೀತಾರಾಮಾಚಾರ್ಯ, ಕೆ. ಹರಿದಾಸ ಉಪಾಧ್ಯ ಮತ್ತು ಶ್ರೀ ಕೆ. ನರಸಿಂಹ ಉಪಾಧ್ಯರು ಈ ವಿದ್ವಾಂಸರ ಪಟ್ಟಿಯಲ್ಲಿದ್ದರು.

ಕರ್ನಾಟಕದ ರಾಜ್ಯಪಾಲ ಶ್ರೀ ಧರ್ಮವೀರರಿಗೆ ಅಧಿಶಾಸನ ದುರಂಧರ, ಡಾ| ಸರೋಜಿನಿ ಮಹಿಷಿಗೆ ಕರ್ನಾಟಕ ಸರಸ್ವತಿ, ನ್ಯಾಯಾಧೀಶ ಶ್ರೀ ಎಸ್. ಬಿ. ದಾತಾರರಿಗೆ ನ್ಯಾಯ ಭೂಷಣ, ಜ| ಕಾರ್ಯಪ್ಪನವರಿಗೆ ಸಮಾಜ ಸೇವಾ ಪರಾಯಣ, ಶ್ರೀ ವೀರೇಂದ್ರ ಹೆಗ್ಗಡೆಗೆ (ಧರ್ಮಸ್ಥಳ) ಧರ್ಮಭೂಷಣ, ಡಾ| ಟಿ. ಮಾಧವ ಪೈ (ಮಣಿಪಾಲ)ಯವರಿಗೆ ನವಸಮಾಜ ಶಿಲ್ಪಿ ಮತ್ತು ಡಾ| ಯು ರಘುರಾಮರಾಯರಿಗೆ 'ವೈದ್ಯಭೂಷಣ'ನೆಂಬ ಬಿರುದನ್ನು ನೀಡಿ ಶ್ರೀ ವಿಬುಧೇಶ ತೀರ್ಥರು ಗೌರವಿಸಿದರು.

ಸನ್ಮಾನಿತರು ತಮಗೆ ನೀಡಿದ ಗೌರವಕ್ಕಾಗಿ ತಮ್ಮ ಕೃತಜ್ಞತೆಗಳನ್ನು ಸಮರ್ಪಿಸಿದರು. ಅದಮಾರು ಶ್ರೀಯವರು ಈಗಾಗಲೇ ಅನೇಕ ಸಮಾಜಹಿತ ಕಾರ್ಯಗಳನ್ನು ಮಾಡಿದ್ದಾರೆ; ಇನ್ನೂ ಅತಿಶಯ ಸೇವೆ ಅವರಿಂದ ಸಲ್ಲುವಂತಾಗಲೆಂದು ರಾಜ್ಯಪಾಲರು ಹಾರೈಸಿ, ರಾಜ್ಯವನ್ನು ಬಿಟ್ಟು ಹೋಗುವುದಕ್ಕೆ ಮೊದಲು ಅಶೀರ್ವಾದ ಪಡೆಯಲು ಬಂದಿದ್ದೇನೆಂದು ಹೇಳಿದರು. ಶ್ರೀ ವಾದರ ಅನುಗ್ರಹದಿಂದ ದೇಶಕ್ಕಾಗಿ ದುಡಿಯುವ ಶಕ್ತಿ ಹೆಚ್ಚಾಗಿ ತನಗೊದಗಲೆಂದು ಡಾ| ಮಹಿಷಿಯವರು ಬಯಸಿದರು. ಡಾ| ಪೈಯವರು ಅದಮಾರು ಶ್ರೀಪಾದರು ಧರ್ಮದ ಬಗ್ಗೆ ಯುವಜನಾಂಗದಲ್ಲಿ ಆಸಕ್ತಿ ಹುಟ್ಟುವಂತಹ ಸಾಹಸ ತೋರಿದ್ದಾರೆಂದು ನಿರೂಪಿಸಿದರು. ತನ್ನ ಪೂರ್ವ ಜನ್ಮದ ಸುಕೃತದಿಂದ ಶ್ರೀ ಕ್ಷೇತ್ರದ ಅಧಿಕಾರ – ಶ್ರೀ ವಾದರ ಅನುಗ್ರಹ ತನ್ನದಾಗಿವೆಯೆಂದು ಶ್ರೀ ಹೆಗ್ಗಡೆಯವರು ಹೇಳಿದರು.

ತಾಲೂಕು ಅಭಿವೃದ್ಧಿ ಮಂಡಳಿಯ ಪರವಾಗಿ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಪರ್ಯಾಯ ಶ್ರೀ ವಾದರಿಗೆ ಸನ್ಮಾನ ಪತ್ರ ವರ್ಪಿಸಿದರು. ಪರ್ಯಾಯ ಮಹೋತ್ಸವ ಆಚರಣಾ ಸಮಿತಿಯ ಅಧ್ಯಕ್ಷ ಶ್ರೀ ಕೆ. ಕೆ. ಪೈಯವರು ಸಮೂರಂಭಕ್ಕೆ ಬಂದಿರುವ ಸಂದೇಶಗಳನ್ನು ಓದಿದರು.

ಆನಂತರ ಶ್ರೀ ವಾದರುಗಳ ಆಶೀರ್ವಚನಗಳು ಆರಂಭವಾದುವು. ಗೌಡಸಾರಸ್ವತ ಸಮಾಜದ ಗೋಕರ್ಣ ಪರ್ತಕಾಳಿ ಮಠದ ಶ್ರೀ ದ್ವಾರಕಾನಾಥ ಶ್ರೀ ಪಾದರು ಜಾಗತಿಕ ಕಲ್ಯಾಣಕ್ಕಾಗಿ ಮಾಧ್ವ ಸಿದ್ಧಾಂತದಲ್ಲಿ ಆಸಕ್ತಿ ಹೆಚ್ಚಬೇಕೆಂದರು. ಜೀವನದಲ್ಲಿ ಜ್ಞಾನ—ಪ್ರೇಮಗಳು ಮುಖ್ಯ. ನಮಗೆ ಜ್ಞಾನವೂ ಇಲ್ಲ. ಪ್ರೇಮವೂ ಇಲ್ಲ. ಜ್ಞಾನ—ಪ್ರೇಮಗಳ ಸಮ್ಮಿಳನವೇ ಭಕ್ತಿ. ನಮ್ಮಲ್ಲಿ ಭಕ್ತಿ ವೈರಾಗ್ಯಗಳುಂಟು. ಆದರೆ, ದುರ್ದೈವದಿಂದ ದೇವರ ಮೇಲೆ ವೈರಾಗ್ಯ, ಪೇಹದ ಮೇಲೆ ಭಕ್ತಿ—ಇದು ಆದಲು ಬದಲಾಗಬೇಕೆಂದು ಪೇಜಾವರ ಶ್ರೀಗಳು ಹೇಳಿದರು. ಧರ್ಮದ ವಿಷಯದಲ್ಲಿನ ಈ ಭಾವ ಪರಿಸ್ಥಿತಿಗಾಗಿ ಫಲಿಮಾರು ಶ್ರೀ ಪಾದರು ವಿಷಾದಿಸಿ, ಸಮಾಜಸೇವೆ—ಪರೋಪಕಾರಗಳಲ್ಲಿ ಧರ್ಮಭಾವನೆಯಿರಬೇಕು ಭಗವಂತನ ಆರಾಧನೆಯಿಂದ ಆತ್ಮಶುದ್ಧಿ ಮಾಡಿಕೊಳ್ಳಬೇಕು ಎಂದರು.

ಪರ್ಯಾಯ ಮಠದ ಶ್ರೀ ವಿಬುಧೇಶತೀರ್ಥರು ನಾವು ಮಾಡುವ ಸ್ಥಿತಿ ಕಾರ್ಯದಲ್ಲೂ ಭಕ್ತಿ--ಆತ್ಮಾರ್ಪಣಾ ಭಾವವಿರಬೇಕು. ಶ್ರೀ ಕೃಷ್ಣ ಹೇಳಿದ್ದು--ನನ್ನನ್ನೇ ನಂಬು, ನನ್ನನ್ನೇ ಆಶ್ರಯಿಸು ಎಂದು. ನಾವು ಕರ್ತವ್ಯ ಪರಾಯಣರಾಗಿ ದೈವದ ಮೇಲೆ ಭಾರ ಹಾಕಬೇಕು ಎಂದು ಆಶಿಸಿ ತಮ್ಮ ಪರ್ಯಾಯ ಕಾಲದಲ್ಲಿ ಸರ್ವರ ಸಹಕಾರವನ್ನು ಬಯಸಿದರು.

ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಪರ್ಯಾಯ ಕಾಲದ ಅಧಿಕಾರಿ ವರ್ಗವನ್ನು ಶ್ರೀ ಮಠದ ಪರವಾಗಿ ಘೋಷಿಸಿದರು. ಶ್ರೀ ಕು. ಶಿ. ಹರಿದಾಸ ಭಟ್ಟರು ವಂದನಾರ್ಪಣೆ ಮಾಡಿದರು. ಮಧ್ಯಾಹ್ನದ ಮಹಾಪೂಜಾನಂತರ ಸುಮಾರು ೧೫ ಸಾವಿರ ಅನ್ನಾರಾಧನೆ ನಡೆಯಿತು.

ಈ ಸಮಾರಂಭಕ್ಕೆ ಉಡುಪಿ ಮತ್ತೇತರ ಚಿತ್ರಾಪುರ, ಸುಬ್ರಹ್ಮಣ್ಯ, ಗೋಕರ್ಣ ಮಠಾಧೀಶರು ಸಮಾಗಮಿಸಿದ್ದರು. ಆದರೆ, ಉಡುಪಿ ಮಠಗಳ ಹೆಚ್ಚಿನ ಶ್ರೀಗಳವರ ಅನುಪಸ್ಥಿತಿ ಮತ್ತೊಮ್ಮೆ ಕಾಣಿಸಿತು. ಈ ಕೊರತೆಯೊಂದನ್ನು ಬಿಟ್ಟರೆ ಸಮಾರಂಭ ಯಶಸ್ಸು ಸಡೆಯಿತೆಂದೇ ಹೇಳಬೇಕು.

●●

ಜಾಣನು ಜಗತ್ತಿನಲ್ಲಿ ಯಾವುದಕ್ಕೂ ತನ್ನ ಮನವನ್ನು ಮಾರುವುದಿಲ್ಲ.

ಂ ಂ ಂ

ಜೀವನದಲ್ಲಿ ನಿಮಗೆ ಏನು ಒದಗುವುದೆಂಬುದು ಅಷ್ಟು ದೊಡ್ಡ ವಿಷಯವಲ್ಲ. ನೀವು ಒದಗಿದ್ದನ್ನು ಹೇಗೆ ಬರಮಾಡಿಕೊಳ್ಳುವಿರೆಂಬುದು ಮಹತ್ವದ್ದು

ಂ ಂ ಂ

ನೀವು ನಿಜವಾಗಿ ಸಂಭಾಷಣ ಚತುರರಾಗ ಬೇಕಿದ್ದರೆ ಇತರರ ಮಾತುಗಳನ್ನು ನೀವು ಚೆನ್ನಾಗಿ ಆಲಿಸಿ ಸ್ವತಃ ಅಷ್ಟು ಕಡಿಮೆ ಮಾತಾಡಿ, ಪಶ್ಚಾತ್ತಾಪಕ್ಕೆ ಕಾರಣವಾಗುವಂಥ ನುಡಿಗಳನ್ನಾಡಬೇಡಿರಿ.

ಂ ಂ ಂ

With best compliments from:

Sri M. MADHVARAJ

PROPRIETOR

CORONET

GROUP OF FISHING INDUSTRIES

MALPE & KARWAR

State Award winners for Top Export of Seafoods for successive 4 years since 1968.

ANCHOR is our Mark. QUALITY is our Pack

Tel: CORONET, Malpe. *Phone:* 581 to 587 Udipi.

ಗುರು ಕರುಣ ‡‡

[ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ]

ತಂದೆ! ತಂದೆ ನಲ್ನುಡಿಯ ಹೂಗಳನು
ಬಗೆಯ ಬೊಗಸೆಯಲಿ ತುಂಬಿ;
ದೂಡಿ ಬಿಡಬೇಡ ಕಾಡು ಹೂವೆಂದು
ಬಂದೆ ನಿನ್ನಡಿಯ ನಂಬಿ.

೨

ಕಲ್ಲು ಮುಳ್ಳ ನಲಿ ಕೆಸರು ಹುಲ್ಲಿನಲಿ
ಇಲ್ಲವೇನು ಹೂ ಹಣ್ಣು?
ಬಲ್ಲೆ ಎನ್ನೊಡೆಯ ಎತ್ತಿಕೋ ಮತ್ತೆ
ಅಘಃನಾತ ಬರಿಮಣ್ಣು!

೩

ದಾಸ್ಯ ಪಾಶ್ಯ ಭಾರದಲಿ ಪೂರದಲಿ
ಕೊರಳು ಕುಗ್ಗಿ ಮುಳು ಮುಳುಗಿ.
ಆರ್ಯ ವೈಕನ್ಯ ತೇಂಕುತಿರಲು ನೀ
ಚಂದ್ರ ನೋಕುಮೆನೆ ಬೆಳಗಿ—

೪

ಬಂದೆ. ಭಾರತವ ಗಗನಭದಗಲದಲಿ.
ನೇರ ದಾರಿಯನು ತೋರಿ;
ಕವಿವ ಕತ್ತಲೆಯು ಕಾಲು ಕಿತ್ತಿತೋ
ಕರುಣ ಕಿರಣ ನೀ ಬೀರಿ!

೫

ಗುಡಿಯ ಬೆಳಗಿಸಿದ.ಮೂರ್ತಿ ನೀನಲ್ತೆ
ಶಿಲ್ಪ ಜೀವ ರಕ್ತ.

ಅಲ್ಲಿ ಭಜನ ಪೂಜನವು ಸಾಗುತಿದೆ
ಶುಭ್ರವ ಶಿನದ ಭಕ್ತಿ.

೬

ಇಲ್ಲಿ, ದೂರದಲಿ, ಗುಡಿಯು ಹೊರಗೆ, ಕೈ–
ಮುಗಿದು ಬಾಗಿ ನಿಂತೆ;
ದಿವ್ಯ ನರ್ತನವ ಕಂಡೆ ಹೇ ಪ್ರಭೋ
ಜೀಲುವು ದೂರದಿಂದೆ!

೭

ಪುಣ್ಯವಂತರೆಮೊ ನೀನ ಮಂತ್ರಗಳ
ಘೋಷಿಸುತ್ತಲಿಹರು;
ನಿನ್ನ ಮುಖದ ಮಂಗಳಕೆ ಆರತಿಯ
ಎತ್ತಿ ಸುತ್ತಿ ಬಿಹರು.

೮

ಎನೆಯ ಕೊಳೆಯನ್ನು ತೊಳೆಯದೆಂತಿನ್ನು
ಪುಣ್ಯವೆತೆಗೆ ಬರಲಿ?
ಎನ್ನ ಕಣ್ಣೀರೆ ದೃಷ್ಟಿಗಂಜನವು
ಜನ್ಮ ಧನ್ಯವಿರಲಿ!

೯

ನಿನ್ನ ಪುಣ್ಯಾಗ್ನಿ ಸ್ಪರ್ಶ ನೂತ್ರದಲಿ
ಭೂತಿ ಎನಿಸಿ ದೇಹ;
ಪಿಂಡ ಕರ್ಪೂರವಂತೆ ಜ್ವಲಿಸಿತೋ
ಭವದ ಪಾಪ ಗೇಹ.

೧೦

ತೇನ ಶ್ರೀ ಗಂಧವಂತೆ ಕರಗುತಿರೆ
ಕುಸು ಪರಿಸಿತ್ತು;

ಇಂಡ್ಯಾವನು ಕೆಣಕದಿರು ಮುಂದೆ ಇನ್ನೊಮ್ಮೆ

ಹ್ಯೂ ಬಾಂಗ್ಲಾ ಜ್ಯೂ ಬಾಂಗ್ಲಾ ಜ್ಯೂ ಬಾಂಗ್ಲಾ ದೇಶ್
ಜೈ ಇಂಡ್ಯಾ ಜೈ ಇಂಡ್ಯಾ ಜೈ ಇಂಡ್ಯಾ ದೇಶ್.
ಬಲು ಜೂಟ ನೀನೆಂದು ಯೊಹ್ಯಾಖಾನ
ನಿರ್ನಾನುವಾಯಿತು ಆ ಸ್ಥಾನಮಾನ
ಆಮೆರಿಕವ ಶಸ್ತ್ರಾಸ್ತ್ರ ಪೂರ್ಕೆಕೆ ಸಾಕೆ?
ನಿಧ ವಿಧವ ಟ್ಯಾಂಕುಗಳ ಉಪಕಾರ ಬೇಕೆ?
ಆಸುರಿಕನ ವಿಳನೆಯ ನೌಕಾಪಡೆ ಯೊಳೆ?

ಮೂರ್ನ ಪಾಕ್ ಅದು ನಿನ್ನ ಕೈಬಿಟ್ಟು ಹೋಯ್ತು,
ಜೈ ಬಾಂಗ್ಲಾ ನೇಶವದು ನಿರ್ನೂನಾವಾಯ್ತು,
ಎಲ್ಲರಿಗೆ ನೀನಾಗಿಹೆ ಬಲುದೊಡ್ಡ ಕುತ್ತು,
ನಿನ್ನ ಧನು ನೀತಿಯಲಿ ಪಾಕ್ ಜರಿದು ಬಿತ್ತು,
ಅಧಿಕಾರವೆಲ್ಲ ಭುಟ್ಟೋನ ಕೈವಶವದಾಯ್ತು.

ಎಲೆ ಭುಟ್ಟೋ, ನೀಡು ಮುಜಿಬುರಿಗೆ
ಸ್ವಾತಂತ್ರ್ಯ ಇನ್ನು,
ಶರಣಾಗು ಭಾರತದ ಮಡಿಲಲ್ಲಿ ಬೇಗ ನೀನು,

ನರಹತ್ಯೆಯೆಂದರೆ ಗೋಹತ್ಯೆ ಏನು?
ನಮ್ಮಂತೆ ಮನುಜ ನೀನಲ್ಲವೇನು?
ಗೋಮುಖ ವ್ಯಾಘ್ರನು ನೀನಾಗಿಹೆಯೇನು?
ರಕ್ತ ಪಿಪಾಸುವೂ ಆಗಿಹೆಯ ನೀನು?

ಭುಟ್ಟೋ... ...!.....!. ....!

ಕಾಡು ಮಲ್ಲಿಗೆಯ ಬೀಡು ಬೆಳಗಲ್ಕೆ
ನಿನ್ನ ಕರುಣೆ ಬಂತು.

‡‡ ೨-೧೦—'೭೨ ರಂದು ಮಂಗಳೂರು ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಜರಗಿದ ಶ್ರೀ ರಾಮಕೃಷ್ಣ ಪರಮ ಹಂಸರ ಜಯಂತ್ಯುತ್ಸವದಂದು ಬರೆದು ಹಾಡಿದ ಕವನ.

●●

ಸ್ವತಂತ್ರ ಪಾಕಿನ ಆಸೆಯನು ಬಿಟ್ಟು ಬಿಡು
ನಾಯಂತೆ ಬೊಗಳದಿರು, ಉತ್ತಮ
ನೆನಿಸಿಬಿಡು
ಬೇಗ ಯೋಚಿಸಿ, ಭಾರತದೊಡನೆ ಸೇರಿಬಿಡು
ಯೂಜನೆಯ ಯೋಚನೆಯ ಶೀಘ್ರದಲಿ
ನೀಮೂಡು.

ಇಲ್ಲದಿದೆ.....!
ಕತ್ತೆತ್ತಿ ನಡೆಯದಿರು ನೀನೆಂದು ಮುಂದೆ!
ಆಗಿರುವೆ ತೋಕೆಕ್ಕೆ ನೀನೊಂದು ಕುಂದೆ!

ಹೇಗಿತ್ತು ಹೇಳು.....?...
ಭಾರತೀಯರ ಪೆಟ್ಟು ಹೇಗಿತ್ತು ಹೇಳು,
ಸ್ನೇಹ ಹಸ್ತವ ನೀಡಿ ಕೈಚಾಚ ಕೇಳು,
ಬೇಳದಿರು ಭಾರತದ ಮೇಲೆ ಮತ್ತೊಮ್ಮೆ.
ಇಂಡ್ಯಾವನು ಕೆಣಕದಿರು ಮುಂದೆ
ಇನ್ನೊಮ್ಮೆ.

ಯಂ. ಡಿ. ಪಾಲ್ ಜಾಧವ್.
ಮುಂಡೋಡು

●●

ನವಯುಗ
ಚಿನ್ನದ ಹಬ್ಬದ ನಿಧಿಗೆ
ಉದಾರ ಸಹಾಯ ಮಾಡಿ
ಪ್ರೋತ್ಸಾಹಿಸಿರಿ.

ಪ್ರಜಾರಾಜ್ಯ ದಿನದ
ಹಾರ್ದಿಕ ಶುಭಾಶಯಗಳು!



ಶಂಕರ್ ಟೊಕೀಸ್
ಭದ್ರಾವತಿ

ಗಣರಾಜ್ಯೋತ್ಸವದ ಶುಭಾಶಯಗಳು!

ಮೈಸೂರು ಟೈಪ್ ಫೌಂಡ್ರಿ
ಎಸ್. ಸಿ. ರೋಡು, ಬಂಡಿ ಸೇಷಮ್ಮ ಚೌಲ್ಟ್ರಿ,
ಬೆಂಗಳೂರು – 9.

ಆಧುನಿಕ ಯಂತ್ರಸಾಧನಗಳಿಂದ ಸುಸಜ್ಜಿತವಾಗಿ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಸ್ಕಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.
ಇಂದೇ ವಿವರಗಳಿಗೆ ಬರೆಯಿರಿ.

The Mysore Type Foundry
LETTERS FOUNDERS
S. C. Road, Bandi Seshamma Choultry
BANGALORE-9.

ಪ್ರಸಾರ ವ್ಯವಸ್ಥೆಯ ಹೊಸ ದಿಗಂತಗಳು

ಭಾರತದಲ್ಲಿ ಮೊತ್ತಮೊದಲು ಪ್ರಸಾರ ವ್ಯವಸ್ಥೆ ಆರಂಭವಾದದ್ದು ಕ್ರಿಸ್ತಶಕ 1927 ರಲ್ಲಿ. ಆಗ ಮುಂಬಯಿ ಮತ್ತು ಕಲ್ಕತ್ತಾ ಈ ಎರಡು ನಗರಗಳಲ್ಲಿ ಮಾತ್ರ ಅಲ್ಪ ಶಕ್ತಿಯ ಪ್ರಸಾರ ಕೇಂದ್ರಗಳಿದ್ದವು. ಅಂದಿನಿಂದ ಈವರೆಗೆ ಪ್ರಸಾರ ವ್ಯವಸ್ಥೆ ಬಹಳಷ್ಟು ಬದಲಾವಣೆ ಹೊಂದಿದೆ. ಇಂದು ನಮ್ಮ ದೇಶದಲ್ಲಿ ಆಕಾಶವಾಣಿಯ 39ಪ್ರಧಾನ ಕೇಂದ್ರಗಳೂ, 32 ಸಹಾಯಕ ಸಹ ಪ್ರಸಾರ ಕೇಂದ್ರಗಳಿವೆ. ಸ್ವಲ್ಪದರಲ್ಲೇ ಹೇಳುವುದಾದರೇ ಉತ್ತರದಲ್ಲಿ ಲೇಹ್‌ನಿಂದ ದಕ್ಷಿಣದಲ್ಲಿ ತಿರುವನಂತಪುರದವರೆಗೂ ಹಾಗೂ ಪಶ್ಚಿಮದಲ್ಲಿ ರಾಜಕೋಟಿಂದ ಪೂರ್ವದಲ್ಲಿ ಆಗರ್‌ತಲಾದ ತೇಜುವರೆಗೆ ಆಕಾಶವಾಣಿಯ ಬಾಲ ಹಬ್ಬಿದೆ. ಮಧ್ಯಮ ಹಾಗೂ ಲಘು ತರಂಗ ಪ್ರಮಾಣದ 132 ಪ್ರಸಾರ ಯಂತ್ರಗಳು ಈ ಜಾಲಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುತ್ತಿವೆ. ಆಕಾಶವಾಣಿಯು ದೇಶದಜನಸಂಖ್ಯೆಯ ಶೇ. 90ರಷ್ಟು ಮಂದಿಗೆ ಹಾಗೂ ದೇಶದ ವಿಸ್ತೀರ್ಣದ ಶೇಕಡ 80ರಷ್ಟು ಪ್ರದೇಶಕ್ಕೆ ಸೇವೆ ಸಲ್ಲಿಸುವ ಗುರಿಯನ್ನು ಇಷ್ಟರಲ್ಲೇ ತಲುಪಲಿದೆ. 20 ವರ್ಷಗಳ ಹಿಂದೆ ಪ್ರಸಾರ ಸೇವೆ ಜನಸಂಖ್ಯೆಯ ಶೇ. 20 ಮಂದಿಗೆ ಹಾಗೂ ಪ್ರಾದೇಶಿಕ ವಿಸ್ತೀರ್ಣದಲ್ಲಿ ಶೇ. 12ರಷ್ಟು ಪ್ರದೇಶಕ್ಕೆ ಮಾತ್ರ ದೊರೆಯುತ್ತಿದ್ದಿತೆಂಬುದನ್ನು ಗಮನಿಸಿದಾಗ ಪ್ರಸಾರ ರಂಗದಲ್ಲಿ ಆಗಿರುವ ಅಸಾಧಾರಣ ಪ್ರಗತಿಯ ಕಲ್ಪನೆ ಯಾಗುತ್ತದೆ.

ಪ್ರತಿ ಮನೆಯಲ್ಲೂ ಆಕಾಶವಾಣಿಯ ಧ್ವನಿ ಕೇಳುವಂತೆ ಮಾಡುವಲ್ಲಿ ಆಕಾಶವಾಣಿಯ ಎಂಜನೀಯರುಗಳ ಪಾತ್ರ ಬಹು ಮುಖ್ಯವಾಗಿದೆ. ಪ್ರಸಾರ ಯಂತ್ರಗಳ ಕಾರ್ಯನಿರ್ವಹಣೆ, ಧ್ವನಿಮುದ್ರಣ, ನಿಯಂತ್ರಣ, ಹಾಗೂ ಪ್ರಸಾರ ಇತ್ಯಾದಿ ನಿತ್ಯದ ಕೆಲಸಗಳಾದರೂ, ಎಂಜಿನೀಯರುಗಳ ದಕ್ಷತೆಯ ಪ್ರತೀಕವಾಗಿವೆ. ಆಕಾಶವಾಣಿಯ ಎಂಜನಿಯರುಗಳು, ಸ್ಟುಡಿಯೋಗಳಲ್ಲಿ ಹಾಗೂ ಪ್ರಸಾರ ಕೇಂದ್ರಗಳಲ್ಲಿ ಗಳಿಗೆ-ಗಳಿಗೆಗೂ ಅನೇಕ ತಾಂತ್ರಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕಾಗುತ್ತದೆ.

ಹೊಸ ಯುಗದ ಹೊಸ ಸವಾಲು

ಟೆಲಿವಿಷನ್ ಅಭಿವೃದ್ಧಿಯ ಕ್ಷೇತ್ರದಲ್ಲಿ ಆಕಾಶವಾಣಿಯ ಎಂಜನೀಯರುಗಳು ಹೊಸ ಸವಾಲನ್ನು ಎದುರಿಸುತ್ತಿದ್ದಾರೆ. ಭಾರತದಲ್ಲಿ ಟೆಲಿವಿಷನ್ ಯುಗ ಇದೀಗ ಪ್ರಾರಂಭವಾಗಿದೆ. ಟೆಲಿವಿಷನ್ ಹೊಸ ತಂತ್ರವನ್ನು ಅವಲಂಬಿಸಿದೆ. ಮುಂದಿನ ದಶಕದ ಮಧ್ಯಂತರ ಹೊತ್ತಿಗೆ ಇಡೀ ದೇಶದಲ್ಲಿ ಟೆಲಿವಿಷನ್-ಜಾಲವನ್ನೊ ಪ್ರಸರಿಸುವ ಉದ್ದೇಶವಿದೆ. ಮುಂಬರುವ ಎರಡು ವರ್ಷಗಳಲ್ಲಿ ಇನ್ನೂ ಐದು ಹೊಸ ಟೆಲಿವಿಷನ್ ಕೇಂದ್ರಗಳು ಅಸ್ತಿತ್ವಕ್ಕೆ ಬರಲಿವೆ. ಈ ಅವಧಿಯಲ್ಲಿಯೇ ಉಪಗ್ರಹಗಳ ಮೂಲಕ ಪ್ರಸಾರ ಕೈಕೊಳ್ಳುವ ಬಗ್ಗೆ ಪ್ರಯೋಗಗಳು ನಡೆಯಲಿವೆ. ಎಂಜನೀಯರುಗಳು ರೇಡಿಯೋ ಪ್ರಸಾರ ವ್ಯವಸ್ಥೆಯ ವಿಸ್ತರಣೆಗೆ ಪ್ರಯತ್ನಿಸಿದಂತೆ ಟೆಲಿವಿಷನ್ ಪ್ರಸಾರದ ವಿಕಾಸಕ್ಕೂ ಮುಂದಾಗಬೇಕಾಗಿದೆ.

ನಮ್ಮ ದೇಶದಲ್ಲಿ ಲಭ್ಯವಿರುವ ಪ್ರತಿಭೆಯನ್ನೂ ಸಾಧನಸಾಮಗ್ರಿಗಳನ್ನೂ ಬಳಸಿಕೊಂಡು ರೇಡಿಯೋ ಪ್ರಸಾರದ ಅಥವಾ ಟೆಲಿವಿಷನ್ ಪ್ರಸಾರದ ಅಭಿವೃದ್ಧಿಯಷ್ಟನ್ನು ಸಾಧಿಸಬೇಕಾಗಿದೆ. ಈ ಗುರಿಸಾಧನೆಗಾಗಿ ಕೈಗಾರಿಕಾ ಹಾಗೂ ತಾಂತ್ರಿಕ ಬುನಾದಿ ಭದ್ರವಾಗಿರಬೇಕು. ಈ ದಿಶೆಯಲ್ಲಿ ಇನ್ನೂ ಸಾಧಿಸಬೇಕಾದ್ದು ಬಹಳವಿದೆ. ವಿದ್ಯುಚ್ಛಕ್ತಿ ಉಪಕರಣಗಳು ಹಾಗೂ ಸಂಪರ್ಕ ಸಾಧನಗಳಲ್ಲಾಗಿರುವ ಪ್ರಗತಿಯಾಗೂ ಸಂಶೋಧನೆಯಿಂದಾಗಿ ಈ ಅಡಿಪಾಯ ನಿರಂತರವಾಗಿ ಬಲಗೊಳ್ಳುತ್ತ ನಡೆದಿದೆ.ಪ್ರಸಾರಕಾರ್ಯದಲ್ಲಿ ಹಾಗೂ ಟೆಲಿವಿಷನ್‌ಗಾಗಿ ಅಗತ್ಯವಾದ ನಾನಾ ಉಪಕರಣಗಳ ದೇಶೀ ಮೂದರಿಯ ಉತ್ಪಾದನೆಯಿಂದಾಗಿ, ಹಾಗೂ ಭಾರತ ಇಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ವಿದ್ಯುಚ್ಛಕ್ತಿಉಪಕರಣಗಳ ತಯೂರಿಕೆಯಲ್ಲಿ ಹೊಸ ವಿಧಾನಗಳನ್ನು ಅನುಸರಿಸುತ್ತಿರುವುದರಿಂದಾಗಿ, ಈ ಗುರಿ ಸಾಧ್ಯವಾಗುತ್ತಿದೆ.

ಸಂಶೋಧನೆ-ಅಭಿವೃದ್ಧಿ ವಿಭಾಗ

ಆಕಾಶವಾಣಿಯ ಸಂಶೋದನೆ ಹಾಗೂ ಅಭಿವೃದ್ಧಿ ವಿಭಾಗ ಅಸ್ತಿತ್ವಕ್ಕೆ ಬಂದ ದಿನದಿಂದಲೂ ಪ್ರಸಾರಕ್ಕೆ ಸಂಬಂಧಿಸಿದ ಎಲ್ಲಾ ತಂತ್ರಗಳಲ್ಲಿ ದೇಶೀ ಪ್ರತಿಭೆಗೆ ಪ್ರೋತ್ಸಾಹ ನೀಡುತ್ತ ಬಂದಿದೆ. ಇಷ್ಟೇ ಅಲ್ಲದೇ ಪ್ರಸಾರ ಕಾರ್ಯದಲ್ಲಿ ಬಳಸಲಾಗುವ ನಾನಾ ಉಪಕರಣಗಳ ಉತ್ಪಾದನೆಗಾಗಿ ಕೈಗಾರಿಕೆಗಳಿಗೆ ಉತ್ತೇಜನ ನೀಡುತ್ತಿದೆ.

ಕಳೆದ ಕೆಲವು ವರ್ಷಗಳಿಂದಲೂ ಪ್ರಸಾರದ ಅನೇಕ ಉಪಕರಣಗಳನ್ನು ಹೊರದೇಶಗಳಿಂದ ತರಿಸಿಕೊಳ್ಳುವ ಬದಲು ಅವುಗಳನ್ನು ದೇಶದಲ್ಲೇ ತಯೂರಿಸುವ ಬಗ್ಗೆ ವಿಶೇಷ ಗಮನವನ್ನು ನೀಡಲಾಗಿದೆ. ಈ ಹಿಂದೆ ಟ್ರಾನ್ಸ್‌ಮೀಟರ್ ವಾಲ್ವಗಳು, ಮತ್ತು ತರ ಬಿಡಿಭಾಗಗಳಿಗಾಗಿ ಪ್ರತಿ ವರ್ಷವೂ ಬಹಳಷ್ಟು ಅಮೂಲ್ಯನಾಣ ವಿದೇಶೀ ವಿನಿಮಯ ವೆಚ್ಚವಾಗುತ್ತಿದ್ದಿತು. ಈಗ ಈ ವೆಚ್ಚದಲ್ಲಿ ಬಹಳಷ್ಟು ಉಳಿತಾಯ ಮಾಡಲಾಗಿದೆ.

ಯೂವುದೇ ಒಂದು ಆಕಾಶವಾಣಿ ಕಾರ್ಯ ಯೋಜನೆಯನ್ನು ಹಾಗೂ ಅದರ ವಿದೇಶೀ ವಿನಿಮಯ ವೆಚ್ಚದ ಸ್ಥಿತಿಯನ್ನೂ ಗಮನಿಸಿದಾಗ ಈ ಪ್ರಗತಿಯ ಸ್ಪಷ್ಟ ಚಿತ್ರ ಮೂಡುತ್ತದೆ. ಉದಾಹರಣೆಗಾಗಿ 20 ಕಿಲೋವಾಟ್ ಶಕ್ತಿಯ ಮಧ್ಯಮ ತರಂಗ ಪ್ರಮಾಣದ ಟ್ರಾನ್ಸ್‌ಮಿಟರನ್ನೇ ತೆಗೆದುಕೊಳ್ಳಿ. 1965ರಲ್ಲಿ, ಈ ಕಾರ್ಯ ಯೋಜನೆಗೆ ಬೇಕಾಗಿದ್ದ ಉಪಕರಣಗಳಿಗೆ 10 10 ಲಕ್ಷರೂ. ವೆಚ್ಚ ತಗಲುತ್ತಿದ್ದಿತು. ಈ ಪೈಕಿ 5 57 ಲಕ್ಷರೂ. ಗಳಷ್ಟು ವಿದೇಶಿ ವಿನಿನಿಮಯದ ವೆಚ್ಚವಾಗುತ್ತಿತ್ತು. ಆದೇ 1969ರಲ್ಲಿ ಈ ಯೋಜನೆಯ 9. 99 ಲಕ್ಷರೂ. ವೆಚ್ಚದಲ್ಲಿ ವಿದೇಶಿ ವಿನಿಮಯದ ಪಾಲು 4. 11ಲಕ್ಷ ರೂಗಳಷ್ಟಿತ್ತು. ಅಂದರೆ ಒಟ್ಟು ವೆಚ್ಚದ ಶೇ. 41ರಷ್ಟು ನಾಲ್ಕನೆಯ ಯೋಜನೆಯಲ್ಲಿ ಇಂತಹ ಕಾರ್ಯ ಯೋಜನೆಗೆ ತಗಲುವ ಒಟ್ಟು 17. 41ಲಕ್ಷ ರೂ. ಗಳಲ್ಲಿ ವಿದೇಶಿ ವಿನಿಮಯದ ಪಾಲು 2. 50ಲಕ್ಷರೂ. ಗಳಷ್ಟಿರುವುದು. ಅಂದರೆ ಒಟ್ಟು ವೆಚ್ಚದ ಶೇ 18ರಷ್ಟು ಇದರಿಂದ ವರ್ಷ ವರ್ಷಕ್ಕೆ ನಮ್ಮ ವಿದೇಶಿ ವಿನಿಮಯ ವೆಚ್ಚದಲ್ಲಿ ನಿರಂತರವಾಗಿ ಉಳಿತಾಯವಾಗುತ್ತಿರುವುದು ಸ್ಪಷ್ಟವಾಗಿದೆ. ಆಕಾಶವಾಣಿಯ ಸಂಶೋಧನಾ ಇಲಾಖೆ ಹಾಗೂ ದೇಶದ ಕೈಗಾರಿಕಾ ಸಂಸ್ಥೆದ ಸಂಘಟಿತ ಯತ್ನಗಳಿಂದಾಗಿ ಇಷ್ಟೊಂದು ಪ್ರಗತಿ ಸಾಧ್ಯವಾಗಿದೆ.

ಅಣುಶಕ್ತಿ ಅಭಿವೃದ್ಧಿ

(ಎರಡನೇ ಪುಟದಿಂದ)

ಭಾಗದವರು "ರಿಯೊಕ್ಟರ ಕಾರ್ಯವಿಧಾನ ಹಾಗೂ ಉಸ್ತುವಾರಿ" ಎಂಬ ವಿಷಯದಲ್ಲಿ ತರಪೇತಿ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ. ಎಂಜಿನೀಯರಿಂಗ್ ಪದವೀಧರರಿಗೆ ಮೀಸಲಾಗಿರುವರ ಈ ತರಪೇತಿ ವರ್ಗದ ಅವಧಿ ಸುಮೂರು ಎರಡು ವರ್ಷಗಳು.

ಸಂಶೋಧನಾ ಉದ್ದೇಶದಿಂದ ರಿಯೊಕ್ಟರುಗಳಿಗೆ ಹಾಗೂ ಅಣು ವಿದ್ಯುಚ್ಛಕ್ತಿ ಕೇಂದ್ರಗಳಿಗೆ ಅಗತ್ಯವಾದ ಸುಪರ್ ವೈಸರುಗಳು ದೊರೆಯುವಂತೆ ಸೋಡಿಕೊಳ್ಳುವದೇ ಈ ಕಾರ್ಯಕ್ರಮದ ಗುರಿ ಈ ತರಪೇತಿ ಕಾರ್ಯಕ್ರಮ 1960ರಲ್ಲಿ ಪ್ರಾರಂಭವಾಯಿತು. ಪ್ರತಿವರ್ಷ ಸುಮೂರು ಹತ್ತುನುಂದಿ ಈ ಕಾರ್ಯಕ್ರಮದನ್ವಯ ತರಪೇತಿ ಪಡೆಯುತ್ತಾರೆ.

ಅಣುವಿಕಿರಣದಿಂದ ರಕ್ಷಣೆ ಒದಗಿಸುವ ಸಂಸ್ಥೆಯವರು ವಿಶ್ವ ಸಂಸ್ಥೆಯ ಆರೋಗ್ಯ ಸಹಯೋಗ ಪಡೆದು 1962ರಿಂದಲೂ 'ರೇಡಿಯೋಲಾಜಿಕಲ್ ಫಿಜಿಕ್ಸ್' ಎಂಬ ವಿಷಯದಲ್ಲಿ ತರಪೇತಿ ಕಾರ್ಯಕ್ರಮ ಆರಂಭಿಸಿದ್ದಾರೆ. ಪ್ರತಿವರ್ಷ ಸುಮೂರು 20 ಮಂದಿ ತಜ್ಞರು ಈ ವರ್ಗದಲ್ಲಿ ತರಪೇತಿ ಪಡೆಯುತ್ತಿದ್ದಾರೆ. 'ರೇಡಿಯೇಷನ್ನಿನ ವೈದ್ಯಾನಿಕ ಉಪಯೋಗಗಳು' ಎಂಬ ವಿಷಯದಲ್ಲೂ, ನಾಲ್ಕುವಾರದ ಅವಧಿಯ ಎರಡು ತರಪೇತಿ ವರ್ಗಗಳನ್ನು ಈ ಸಂಸ್ಥೆ ಏರ್ಪಡಿಸಿದೆ ಇದಲ್ಲದೆ ವೈದ್ಯಕೀಯ ವಿಭಾಗದವರು, ಐಸೋಟೋಪ್‌ಗಳ ವೈದ್ಯಕೀಯ ಉಪಯೋಗಗಳು ಎಂಬ ವಿಷಯದಲ್ಲಿ ತರಪೇತಿ ನೀಡುತ್ತಿದ್ದಾರೆ. ಹೀಗೆ ನಾನಾ ತರಪೇತಿ ಕಾರ್ಯಕ್ರಮಗಳ ಮೂಲಕ ನಮ್ಮ ಅಣುಶಕ್ತಿ ಕಾರ್ಯಕ್ರಮ ಗಮನಾರ್ಹ ಪ್ರಗತಿಸಾಧಿಸಿದೆ.

●●

ಗಣರಾಜ್ಯೋತ್ಸವದ ಹಾರ್ದಿಕ ಶುಭಾಕಾಂಕ್ಷೆಗಳು

ಹೊನ್ನ ಹಬ್ಬವನ್ನು ಆಚರಿಸುವ ಸಡಗರದಲ್ಲಿರುವ

ಕರ್ನಾಟಕದ

ಪ್ರಪ್ರಥಮ ಕನ್ನಡ ವಾರಪತ್ರಿಕೆ

ನವಯುಗಕ್ಕೆ

ಭದ್ರಾವತಿ

ಟೌನ್ ಕೋ-ಆಪರೇಟಿವ್

ಬ್ಯಾಂಕಿನ

ಸಹಕಾರ-ಶುಭಾಶಯ

ಷೇರು ಬಂಡವಾಳ — ಒಂದು ಲಕ್ಷಕ್ಕೂ ಅಧಿಕ

ಷೇರುದಾರರು — 1000ಕ್ಕೂ ಹೆಚ್ಚು

ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೊಳಪಟ್ಟಿದೆ.

ಊರಿನ ವ್ಯವಹಾರಸ್ಥರ ಅನುಕೂಲ ನಮ್ಮ ಗುರಿ.

ಅವರ ಪ್ರೋತ್ಸಾಹದಿಂದ ಅಭಿವೃದ್ಧಿಯ ಹಾದಿಯಲ್ಲಿ.

ಕೆ. ಎಂ. ಶ್ರೀನಿವಾಸಮೂರ್ತಿ
ಕಾರ್ಯದರ್ಶಿ

ಕೆ. ಎಸ್. ಶ್ರೀಧರಮೂರ್ತಿ
ಅಧ್ಯಕ್ಷ

ಭದ್ರಾವತಿ
ಟೌನ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ಭದ್ರಾವತಿಯ ಡೈರೆಕ್ಟರುಗಳ ಮಂಡಳಿ

ಗಣ ರಾಜ್ಯೋತ್ಸವದ
ಹಾರ್ದಿಕ ಶುಭಾಶಯಗಳು !

ನಿಮ್ಮ ಮನರಂಜನೆಯ ಸಮಸ್ಯೆಯನ್ನು ನೀಗಿಸಲು
ಉಡುಪಿಯ ಶ್ರೇಷ್ಠ ದರ್ಜೆಯ ಎರಡು ಚಿತ್ರಮಂದಿರಗಳು
ನಿಮ್ಮ ಬೇಸರವನ್ನು ನೀಗಿಸಲು ಇಲ್ಲಿವೆ !

ಅಲಂಕಾರ್ (ಫೋನ್ : 327) ಆಸ್ಪತ್ರೆ ರಸ್ತೆ

ಕಲ್ಪನಾ (ಫೋನ್ : 437) ಉಪೇಂದ್ರಬಾಗ್

ಮತ್ತು

ಕುಂದಾಪುರದ ನವೀಕೃತ ಭವ್ಯ ಚಿತ್ರಮಂದಿರ

ಗೀತಾಂಜಲಿ
(ಫೋನ್ : 34)

ಅತ್ಯುತ್ತಮ ಚಲಚ್ಚಿತ್ರಗಳ ಪ್ರದರ್ಶಕರು

ಮ್ಯಾನೇಜರು:

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ : ಎಸ್. ಆರ್. ಬಿಲ್ಡಿಂಗ್ಸ್, ಉಡುಪಿ (ದ. ಕ.)

Compliments from:

SWASTIK INDUSTRIAL CORPORATION

BANNANJE - - UDIPI-1

Phone: 535

(Structural Engineers
&
Bus body Builders)

★

Authorised dealers for

U-Foam Products

Visit or write

ಆಹ್ಲಾದಕರ ಸುವಾಸನೆ

ಮೈಸೂರು ಗಂಧದ ಎಣ್ಣೆಯು
ತನ್ನ ಶ್ರೇಷ್ಠತೆಯಿಂದ
ಜಗದ್ವಿಖ್ಯಾತಿಯನ್ನು ಪಡೆದಿದೆ.

ಪರಿಶುದ್ಧವಾದ ಗಂಧದ ಎಣ್ಣೆಯು
ಮೈಸೂರು ಸರ್ಕಾರದ ಸೀಲು ಮತ್ತು ಲೇಬಲ್
ಗಳುಳ್ಳ ಸೀಸೆಗಳಲ್ಲಿ ಮಾತ್ರ ದೊರೆಯುತ್ತವೆ.

ಮೈಸೂರು ಸರ್ಕಾರದ ಗಂಧದ ಎಣ್ಣೆ
ಕಾರ್ಖಾನೆ
ಮೈಸೂರು ಮತ್ತು ಶಿವಮೊಗ್ಗ.

ಪ್ರಜಾರಾಜ್ಯೋತ್ಸವದ ಶುಭಾಶಯಗಳು!

1947ರಲ್ಲಿ ಸ್ಥಾಪನೆಯಾಗಿ 1971ರಲ್ಲಿ
ರಜತೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದ
ಜಿಲ್ಲೆಯ ಅತ್ಯಾಧುನಿಕ ಸೌಂದರ್ಯವರ್ಧಕ

ಚಿನ್ನಾಭರಣಗಳ ಭಂಡಾರ

ಎಸ್. ಎಲ್. ಶೇಟ್ಸ್
ಡಾಯ್‌ಮಂಡ್ ಹೌಸ್

ಕಾರ್ನಾಡು ಸದಾಶಿವ ರಾವ್ ರಸ್ತೆ,
ಹಂಪನಕಟ್ಟೆ, ಮಂಗಳೂರು-1.

S. L. SHET
DIAMOND HOUSE

K. S. RAO ROAD,
MANGALORE-1

60 ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:— ಮೈಸೂರು, ಬೆಂಗಳೂರು ಮತ್ತು ಮುಂಗಳೂರು.

LICENCE No. 33
Licensed to Post without Prepayment

You benefit in more ways when you bank with Vijaya Bank



The Vijaya Bank Ltd.
Regd. Office : Mangalore
Admn. Office : Race Course Road, Bangalore-1.
Chairman : M. Sunder Ram Shetty

Total No. of Branches 141

Mysore	103	Maharashtra	4
Kerala	26	Andhra Pradesh	1
Tamil Nadu	5	Delhi	2

Our Total No. of Branches in South Kanara 41.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೨೨

NAVAYUGA

3–2–1972

ರಾಜ್ಯದ ರಾಜ್ಯಕೀಯ

ಸುಂದೋಪಸುಂದರ ನಡುವೆ ಊರ್ವಶಿ?

'ನಾನೇ ಕರ್ನಾಟಕದ ಭಾವೀ ಮುಖ್ಯ ಮಂತ್ರಿ, ಇವರೇ ನನ್ನ ಸಂಪುಟದ ಸದಸ್ಯರು. ನಾನು ಆ ಗದ್ದುಗೆಗೇರಿದ ಮೇಲೆ ನಿಮ್ಮ ಆಶೆ–ಆಕಾಂಕ್ಷೆಗಳನ್ನು ಖಂಡಿತಕ್ಕೂ ಮೊತ್ತ ಮೊದಲಿಗೇನೇ ಗಮನಿಸುತ್ತೇನೆ; ಈಡೇರಿಸುತ್ತೇನೆ. ಅದುವರೆಗೆ ನೀವು ವಾತ್ರ ನಮ್ಮಕೈಬಿಡಬೇಡಿ; ಬಿಟ್ಟು ಕೊಡಬೇಡಿ' ಎಂದು ಆಥವಾ ಎಂಬರ್ಥದ ವಿಶ್ವಾಸವಾಗ್ದಾನಾದಿಗಳನ್ನು ಕಳೆದುಕೊಂಡು ವರ್ಷದಲ್ಲಿ ನೀಡಿದವರು ಹಲವರು.

ಲೋಕಸಭಾ ಚುನಾವಣಾ ನಂತರ ಸಿಂಡಿಕೇಟ್ ಎಮ್ಮೆಲ್ಯೆಗಳನ್ನು ಕೈಬೀಸಿ ಕರೆದು ಶ್ರೀ ಪಾಟೀಲರ ಸಂಪುಟವನ್ನು ಉರುಳಿಸಿ ರಾಜ್ಯಕ್ಕೆ ರಾಷ್ಟ್ರಪತಿ ಆಳಿಕೆಯನ್ನು ತಂದುಕೊಟ್ಟ ಶ್ರೇಯಸ್ಸು ಇಂಡಿಕೇಟ್ ಆಧ್ವರ್ಯುಗಳಿಗೆ. ಅಂದಿನಿಂದ ಇಂದಿನ ತನಕ ತುಂಬ ಕಾಲ ಕಳೆದಿದೆ; ಹಲವಾರು ಘಟನೆಗಳು ನಡೆದಿವೆ; ಇಂಡಿಕೇಟಿನ ಕೀರ್ತಿ ಕಲಶವೀಗ ಗೌರಿಶಂಕರವನ್ನೆತರಿದೆ. ಶ್ರೀಮತಿ ಇಂದಿರಾಗಾಂಧಿಯವರ ನಾಮ ಬಲದಿಂದ ಹುಲ್ಲು ಕಡ್ಡಿಯಾದರೂ ಗೆದ್ದು ಬರುತ್ತದೆ ಎಂಬ ಅಚಲ ವಿಶ್ವಾಸಿಗಳು 'ಮಹೇಶ್ವರೀವಾ ದಿಲ್ಲೀಶ್ವರೀವಾ' ಎಂದು ಉಗ್ಗಡಿಸುತ್ತಾರೆ.

ದುಃಖದ ಸಂಗತಿಯೆಂದರೆ, ಕರ್ನಾಟಕದ ಸಿಂಹಾಸನದ ಮೇಲೆ ಹಲವರು ಬಯಮುಖ ಪ್ರತಿಭಾ ಸಂಪನ್ನರು ಕಣ್ಣಿಟ್ಟವಾರಿ. ತಾವು ಗೆದ್ದೇ ಗೆದಿಯುವುದು ಗ್ಯಾರಂಟಿ ಎಂದಿವರು ನಂಬಿದ್ದಾರೆ. ಅವರ ವಿರೋಧಿಗಳಿಗೂ ಇಂಥದೇ ಗ್ಯಾರಂಟಿಯಿರುವುದು ಸಹಜವಾದರೂ ಅನರ–ಇವರ ಗ್ಯಾರಂಟಿಗಳ ನಡುವೆ ಡಿಫೆನೆನ್ಸ್ ಇದೆ. ಎರಡನೆಯವರದ್ದು ಡಿಫೆನ್ಸಿವ್ ಕಾನ್ಫಿಡೆನ್ಸು. ಕ್ರೀಡಾ ಮನೋಭಾವ ಚುನಾವಣಾ ರಂಗದಲ್ಲೂ ಅನಿವಾರ್ಯ.

ಶ್ರೀ ಸಿದ್ಧ ವೀರಪ್ಪನವರು ಅಂದು ಭಾರಿ ಹುಮ್ಮಸ್ಸಿನಿಂದ ಕೂಡಿದ್ದರು. ತಾನು ಮುಖ್ಯ ಮಂತ್ರಿಯಾದೆನೆಂದೇ ಕನಸುಕಂಡರೆ.. ಅವಗದ್ದು ತಿರುಕನ ಕನಸು ಎಂದರು ಅವರಿಗಾಗದವರು. ನೀವು ಇಪ್ಪತ್ತು ಸದಸ್ಯರ ನಾಯಕರೇ ಹೊರತು ನೂರ ಇಪ್ಪತ್ತರ ನಾಯಕರಲ್ಲವೆಂದರು ರಾಜ್ಯವಾಲ ಧರ್ಮವೀರರು. ಸರಕಾರ ರಚಿಸಬಾರದೆಂದು ಎಚ್ಚರಿಸಿದರು ಯುವಕರು. ದೇವರಾಜ ಅರಸರು ಪುಂಡಿಗೆ ಮೆಲ್ಲುತ್ತ ದಿಲ್ಲಿಯಿಂದ ಬೇಡವೆಂದು ಆದೇಶ ತಂದರು. ಗುಜರಾತಕ್ಕೆ ಆಗಬಹುದೆಂದ ಹೈಕಮಾಂಡು ಕರ್ನಾಟಕಕ್ಕೆ ಆಗಕೂಡದೆಂದಿತು. ಶ್ರೀ ಸಿದ್ಧವೀರಪ್ಪರ ರೊಟ್ಟಿ ತುಪ್ಪಕ್ಕಂತೂ ಬೇಳಲಿಲ್ಲ; ತಿಪ್ಪೆಗೂ ಅವರವನ್ನು ಎಸೆಯಲಿಲ್ಲ.

ಅನರು ಮುಖ್ಯ ಮಂತ್ರಿಯಾಗುವ ಆಶೆಗೆ ತಿಲಾಂಜಲಿ ನೀಡಲಿಲ್ಲ. ಅರಸಿಕೊಡನೆ ಅವರ ಭಿನ್ನಾಭಿಪ್ರಾಯ ಬಹಳ ದಿನ ನಡೆದು ಬಂತು. ಅರಸರು ನುರಿತ ಜಾಣರು, ಪ್ರವೀಣರು. ಅವರು ತನ್ನ ಸಿಂಹಾಸನವನ್ನು ಭದ್ರಪಡಿಸಿಕೊಂಡರು. ಇವಕ್ಕೆ ಬೆಂಗಳೂರಿನ ಅನುಗ್ರಹಕ್ಕಿಂತ ದಿಲ್ಲೀ ಆಶೀರ್ವಾದವೇ ಮುಖ್ಯವೆಂದವರೆಂದೋ ತಿಳಿದುಕೊಂಡಿದ್ದರು. ಇಂಡಿಕೇಟಿನೊಳಗೆ ಈಗ ಸಿದ್ಧವೀರಪ್ಪನವರದ್ದು ಏನೂ ನಡೆಯುವುದಿಲ್ಲ; ನಡೆಯಬಾರದು ಅವಕ್ಕೇ ದಿಲ್ಲಿಯಲ್ಲೇ ಅಭ್ಯರ್ಥಿಗಳ ಅಂತಿಮಯಾದಿ ತಯಾರಾಗುತ್ತದೆ—ಶ್ರೀಮತಿ ಗಾಂಧಿಯದ್ದೇ ನೇದವಾಕ್ಯ; ಅದನ್ನು ಬರೆದು ಕೊಡುವವರು ದೇವರಾಜ್

ದೇವರಾಜ ಅರಸರು ಅಂದು ಸಿದ್ಧವೀರಪ್ಪನವರಿಗೆದುರು ನಿಂತದ್ದು ತಾನು ಮುಖ್ಯ ಮಂತ್ರಿಯಾಗ ಬೇಕೆಂಬ ಹೆಬ್ಬಯಕೆಯಿಂದ. ಹಲವಾರುಬಾರಿ ತಾನೇ ಮುಖ್ಯಮಂತ್ರಿ ಎಂದು ಅವರು ಭ್ರಮಿಸಿ ಪೂತಾಡಿದ್ದೂ ವಿಶ್ವಾಸ ದಾನ ಮಾಡಿದ್ದೂ ಉಂಟು. ಆದರೆ, ಏಕನಾತ್ಮತ್ತಾಗಿ ಈಗ ಅವರು ಚುನಾವಣೆಗಿಳಿಯುವುದಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ಅವರು ನೀಡುವ ಒಂದೇ ಒಂದು ಕಾರಣವೆಂದರೆ, ರಾಜ್ಯದ ಇಂಡಿಕೇಟಿನ ಶಕ್ತಿಯನ್ನು ಬೆಳೆಸಲು ತನಗಿಂತ ಸಮರ್ಥನಿನ್ನೊಬ್ಬನಿಲ್ಲವೆಂದು. ಶ್ರೀಮತಿ ಗಾಂಧಿಯನರಿಗೆ ತನ್ನ ಮೇಲೆ ವಿಶ್ವಾಸವಿರುವಾಗಲೇ ತನ್ನ ಆಶೋತ್ತರಗಳನ್ನು ಸೂರಯಿಸಿಕೊಳ್ಳಬೆ. ಮುಳ್ಳಿನ ಕಿರೀಟದಂತಹ ಮುಖ್ಯಮಂತ್ರಿ ಪದವಿಯ ನೇಲೇಕೆ ಮುಗಿದು ಬೀಳಬೇಕು? ಒಂಬೊಮ್ಮೆ, ಎನೆಮ್ಮೈ ಅದರೂ ತಾನಾ ಪೀರನೇರಲು ಹಲವು ಕೋಟಗಳನ್ನು ಒಡೆಯಬೇಕಾಗುತ್ತದೆ. ಆ ದಕ್ಕಿಂತ ಪಕ್ಷದ ಸೂತ್ರಧಾರನಾಗಿ ಎಲ್ಲರನ್ನೂ ಗೊಂಬೆಯಾಡಿಸಬಾರದೇಕೆ? ಸ್ಪರ್ಧಾನಿಯಿಂದ ವರಸಿದ್ಧಿಸಿಕೊಳ್ಳಬಾರದೇಕೆ? ಆದುದರಿಂದ ಅರಸರು ದೂರವುಳಿದರು; ತನ್ನವರನ್ನು ಮುಖ್ಯಮಂತ್ರಿ ಮಾಡಿ ತಾನು ಕುಣಿಸುವಷ್ಟರಿಂದಲೇ ತೃಪ್ತಿ ಕಾಣಲು ನಿರ್ಧರಿಸಿದರು. ಇದು ಸಾಧ್ಯವಾದೀತೆ?

ರಾಜ್ಯದ ಮೂಜಿ ಮುಖ್ಯಮಂತ್ರಿ ಕೆಂಗೆಲ್ ಹನುಮಂತಯ್ಯನವರು ರಾಜ್ಯದ ರಾಜ್ಯಕೀಯವ ಮೇಲೆ ಜಿಗುಪ್ಸೆಗೊಂಡು ದಿಲ್ಲಿಗೆ ಹಾರಿಹೋದ ಧೀಮಂತರು ಶ್ರೀಮತಿ ಗಾಂಧಿಯವರು ಎಳ್ಳನ್ನು ಸಂಕೇತ ಮಾಡಿದ್ದರೆ, ಅವರು ದಿಲ್ಲಿಯನ್ನು ಬಿಟ್ಟು ಬೆಂಗಳೂರಿಗೇ ಬಿಡಾರ ತರುತಿದ್ದರು. ಶ್ರೀ ಕೆಂಗೆಲ್ ತನ್ನ ಮೇಲೆ ಪ್ರಧಾನಿಯ ವಿಶ್ವಾಸವಿದೆಯೆಂಬುದು ಬಲವಾಗಿ ನಂಬಿದ್ದಾರೆ. ಏಕೆಂದರೆ, ಅವರನ್ನು ಕರೆದು ಮಂತ್ರಿ ಮಾಡಿದವರು ಶ್ರೀಮತಿ ಗಾಂಧಿ ಮಾತ್ರ-ಇದೂ ಇಂಡಿಕೇಟ್ ರೂಪುಗೊಂಡ ಮೇಲೆ. ಆದರೆ ಕೆಂಗಲ್ಲರನ್ನು ರಾಜ್ಯಕ್ಕೆ ಕಳಿಸಲು ಶ್ರೀಮತಿ ಗಾಂಧಿ ಸಿದ್ಧರಾಗಲಿಲ್ಲ. ದೇಶದಿಂದಲೇ ಅವರನ್ನು ಓಡಿಸುವ ಬಗ್ಗೆ ಆಕೆ ಹಲವು ಬಾರಿ ಯೋಚಿಸಿದ್ದರು. ಸಮಯ ಪರಿವಕ್ವನಾಗಲಿಲ್ಲ. ಮಾರ್ಚಿ ಚುನಾವಣೆಗಳು ಮುಗಿಯುತ್ತಲೇ ನೇರ ರಾಜ್ಯಕೀಯದಿಂದ ಹಲವಾರು ಅತಿರಥ–ಮಹಾರಥರನ್ನು ಒಕೆ ಮೂರಪ್ಪೋಡಿಸಲಿದ್ದಾರೆ; ಇವರಲ್ಲಿ ಕೆಂಗೆಲ್ಲರ ಹೆಸರೂ ಇದೆಯೆಂದರೆ ಅವರ ನೆಲೆಯೆಲ್ಲಿನೆಯೆಂದು ಅವರಿಗೂ ಗೊತ್ತಾದೀತು.

ಹಿಂದೆ ಮೈಸೂರಿನ ಮುಖ್ಯ ಮಂತ್ರಿಯಾಗಿದ್ದಾಗ, ಕೆಂಗೆಲ್ ಉಡುಪಿ ಕೃಷ್ಣನ ದರ್ಶನ ಪಡೆಯಲು ಬಂದರು. ಮರಳಿದ ಒಂದೆರಡು ತಿಂಗಳಲ್ಲೇ ಅವರು ಉರುಳಿ ಹೋದರು. ಮೊನ್ನೆ ನಡೆದ ಪಂಚಾಯತಿನಲ್ಲಿ ಪಾಲುಗೊಳ್ಳಲು ಕೆಂಗೆಲ್ ಬರುತ್ತಾರೆಂದು ದಟ್ಟ ವರದಿಗಳು ಹಬ್ಬಿದ್ದವು; ಆದರೆ, ಅವರು ಬರಲಿಲ್ಲ ಹದಿನಾರು ವರ್ಷ ಹಿಂದಿನ ದುರಂತ ಅವರಿಗೆ ನೆನಪಾಯಿತೇನೋ! ಮುಖ್ಯಮಂತ್ರಿಪದವನ್ನು ಕಳೆದುಕೊಳ್ಳಲು ಅವರೇಕೆ ಬಯಸುತ್ತಾರೆ?

ದೇವರಾಜ ಅರಸರು ಚುನಾವಣಾ ರಂಗಕ್ಕೆ ಇಳಿಯುವುದಾದರೆ, ಅವರು ವ್ಯಾದೇಶಿಕ ಸಂಚಾಲಕತನಕ್ಕೆ ರಾಜಿಕೊಡಬೇಕಾಗಿತ್ತು. ಅವರು ರಾಜಿಕೊಟ್ಟರೆ, ಶ್ರೀಮತಿ ಗಾಂಧಿಗೆ ಅವರಷ್ಟೇ ಬೇಕಾದವರೊಬ್ಬರು ಸಂಚಾಲಕತನಕ್ಕೆ ನಿರ್ವಹಿಸಲು ಬೇಕಾಗಿತ್ತು. ಆಗ ಕೇಳಿಬಂದ ಹೆಸರು ಡಾ| ಸರೋಜಿನಿ ಮಹಿಷಿಯವರದ್ದು.ಮಹಿಷಿಯವರ ಮಾನ ಸನ್ಮಾನ ಕೇಂದ್ರದಲ್ಲಿ ತುಂಬ ಇದೆ. ಶ್ರೀಮತಿ ಗಾಂಧಿ ಬಾಯಿಂದ ಬಂದರೆ, ಅವರಿಗಾಗಿ ಬೆಂಗಳೂರಿನ ಮಹಾಮಲ್ಲರು ಕಣಾದಿಂದ ಕಂಡಿತ ಹಿಂಜರಿಯುತ್ತಾರೆ.

ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿಯಾಗಲು ಚುನಾವಣೆಗಿಳಿಯುವಂತೆ ಹೈಕಮಾಂಡು ಶಿಕ್ಷಣಮಂತ್ರಿ ಸಿದ್ಧಾರ್ಥಶಂಕರರಾಯರಿಗೆ ಆದೇಶ ನೀಡಿತು. ಅಂತಹದೇ ಆದೇಶ ತನಗೂ ಬಂದೀತೆಂದು ಕೆಂಗೆಲ್ ನಂಬಿರಬಹುದು ಆದರೆ, ಅದು ಬರಲೂ ಇಲ್ಲ. ಮಹಿಷಿಯವರಿಗೆ ಅಂತಹ ಆಕಾಂಕ್ಷೆಯೂ ಇಲ್ಲ ರಾಜ್ಯದ ಹಲವು ಭೂತಗಳನ್ನು ತೃಪ್ತಿ ಪಡಿಸುವುದು ಅಸಾಧ್ಯವೆಂದವರಿಗೆ ಗೊತ್ತು. ತನ್ನನ್ನು ದೊಡ್ಡದು ಮಾಡಿದವರನ್ನೇ ತಾನು ಮರೆತಿರುವಾಗ, ಉಳಿದವರಿಂದ ಸಮ್ಮಾನಗಳಿಸುವುದು ಹೇಗೆ? ಆದರ ಮೇಲೆ ಮೂರು ಗಂಡುಗಳು ಬಯಸುವ ಹುದ್ದೆಯ ಮೇಲೆ ತನಗೇಕೆ ಕಣ್ಣು? ಶ್ರೀಮತಿ ಗಾಂಧಿಗೂ ಅಷ್ಟೆ, ಸಭ್ಯೆ ಹೀಗೆ ಇರಲಿ; ಚುನಾವಣೆ ಮುಗಿಯಲಿ, ಗೆದ್ದ ಮೇಲೆ ಸುಂದೋಪಸುಂದರು ಹೊಡೆವಾಡ ತೊಡಗುತ್ತಾರೆ. ಆಗ ಅನಿವಾರ್ಯವಾದರೆ, ಊರ್ವಶಿಯನ್ನು ಕಳಿಸಿದರಾಯ್ತು.

ಸಿದ್ಧವೀರಪ್ಪನವರು ಸರಕಾರ ರಚಿಸುವೆನೆಂದು ಹೇಳಿದಾಗ ಅದನ್ನು ಜೆಂಬಲಿಸಿದ ಪ್ರಬಲ ವ್ಯಕ್ತಿ ಶ್ರೀ ಎಂ. ಪಿ. ಕೃಷ್ಣಪ್ಪ. ಡಿಪ್ಲಿಯಲ್ಲಿ ಉಪಮಂತ್ರಿಯಾಗಿದ್ದ ಕೃಷ್ಣಪ್ಪ ಮುಖ್ಯಮಂತ್ರಿಯಾಗುವ ದೊಡ್ಡ ಆಸೆಯಿಟ್ಟುಕೊಂಡು ಬೆಂಗಳೂರಿಗೆ ಬಂದರು. ಅವರ ಆಕೆ ಆಕಿಯಾಗಿಯೇ ಉಳಿಯಿತು. ಒಂದು ವರ್ಷದ ಹಿಂದೆ ಬಾಯಿ ತುಂಬ ಮಾತಾಡಿದವರು ಈಗ ಬೀಗಮುದ್ರೆ ಹಾಕಿಕುಳಿತಿದ್ದಾರೆ. ಬಾಯಲ್ಲಿ ಹುಣಸೇ ಬೀಜ ಹಾಕಿಕೊಂಡಿದ್ದಾರೆ. ಅವರ ಭಾಗ್ಯದ ಬಾಗಿಲು ತೆರೆಯಲೇ ಇಲ್ಲ, ತೆರೆಯುವ ಲಕ್ಷಣಗಳೂ ಇಲ್ಲ.

ಈ ನಡುವೆ ಮತ್ತೊಂದಿರಡು ಹೆಸರುಗಳು ಮುಂದೆ ಬಂದಿವೆ. ಮೊಪಲನೆಯದು ಇಂಡಿಕೇಟಿನ ಶ್ರೀ ಎಸ್.ಎಂ. ಕೃಷ್ಣನವರ

(ಹನ್ನೆರಡನೇ ಪುಟ ನೋಡಿರಿ)

ಸರ್ವಾರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

ಸ್ವತಂತ್ರ ಐತಿಹಾಸಿಕ ಕಾದಂಬರಿ

೧

ಸೂರ್ಯೋದಯಕ್ಕೆ ಸರಿಯಾಗಿ ಅರಮನೆಯಲ್ಲಿ ಮಂಗಳವಾದ್ಯ ಮೊಳಗಿತು. ಎಂದೂ ಕಾಣದ ಉತ್ಸಾಹ, ಆನಂದ ಹೊರಸೂಸಿ ಹರಿಯಿತು.

ರಾಜಧಾನಿಯಲ್ಲಿ ಹಬ್ಬದ ಸಡಗರ, ಸಂಭ್ರಮ.

ನಾಲಂಕೃತ ಸ್ತ್ರೀಯರು ಆತುರ. ಆತುರವಾಗಿ ಅಂತಃಪುರದತ್ತ ಧಾವಿಸಿದರು. ಪ್ರಸೂತಿಕಾ ಗೃಹದ ಬಾಗಿಲು ಮುಚ್ಚಿತ್ತು.

ಮಾಲು ಹಾಡುಳಿಯ ಅಳುವ ಧ್ವನಿ ಒಳಗಿಂದ ಕೇಳಿಬರುತಿತ್ತು.

ಒಳ ಸುಳ್ಳಳಲು ಹೆಂಗಳೆಯರು ಆತುರ ಪಡುತಿದ್ದರು.

ಅಷ್ಟರಲ್ಲಿ ರಂಜನೆ ಓಂಕಾರ ಅಲೆ ಅಲೆಯಾಗಿ ಹರಿದು ಬಂದು, ನಿಂತಿದ್ದವರ ಕಿವಿಯನ್ನಪ್ಪಳಿಸಿತು.

ಕೂರಚಾಗಿಲಲ್ಲಿ. ತುದಿಗಾಲ ನೇಲೆ ನಿಂತಿದ್ದ ಹೆಣ್ಣೊಬ್ಬಳು 'ಗಂಡು ಆಯಿತೇ?' ಎಂದಳು.

'ಗಂಡು! ಆದರೆ ಆನುಮಾನವಿಲ್ಲ ಶಂಖನಾದ ಆದರ ಸಂಕೇತ' ಹೀಗೆಂದು ಹತ್ತಿರದಲ್ಲಿ ನಿಂತಿದ್ದ ಇನ್ನೊಬ್ಬಳು ತನ್ನ ಲೋಕಾನುಭವವನ್ನು ಪ್ರದರ್ಶಿಸಿದಳು. 'ಸೂತ ಧ್ವನಿ ಮಾಡಿ' ಅಳುವ ಸ್ವರದಿಂದಲೇ ಶಿಶು ಗಂಡೆಂಬುದು ಪತ್ತೆಯಾಗಿತ್ತೆ' ವಿದಗ್ಧೆಯೊಬ್ಬಳು ರಾಗ ಎಳೆದಳು.

ಹೀಗೆ ಮಾತು-ಕತೆ ನಡೆಯುತ್ತಿರಲು ಪ್ರಸೂತಿಕಾ ಗೃಹದ ಬಾಗಿಲು ತೆರೆಯಿತು. ಅರೆತೆರೆದ ಬಾಗಿಲ ನಂದಿಯಲ್ಲಿ, ದಾದಿಯೊಬ್ಬಳು ಮುಖವನ್ನು ಹೊರಹಾಕಿದಳು.

ತುದಿಗಾಲಲ್ಲಿ ನಿಂತಿದ್ದ ಸ್ತ್ರೀಯರು ಕೊರಳೆತ್ತರಿಸಿ 'ಮಗು—?'

ಆದರ ಇಂಗಿತವನ್ನು ಗ್ರಹಿಸಿದ ದಾದಿ 'ಗಂಡು' ಎಂದು ಉತ್ತರಿಸಿದಳು.

"ಮಗು—ಬಾಣಂತಿ ಆರೋಗ್ಯವೇ?"

"ಮಗು ಹೇಗಿದೆ?"

'ಮಗು ಮಾರಂತಿದೆ."

ಒಂದೇ ಉಸುರಿಗೆ ಪ್ರಶ್ನೆಗಳ ಸುರಿಮಳೆ.

ದಾದಿ ಕದ ಮುಚ್ಚಿಕೊಂಡಳು.

"ಹೇಳಿದ್ದರೆ ಗಂಟು ಹೋಗುತಿತ್ತೇ' ರೊಚ್ಚಿಗೆದ್ದ ಹೆಣ್ಣೊಬ್ಬಳು ಸ್ವರ ಎರಿಸಿದಳು.

"ಅರಮನೆಯ ಪರಿಚಾರಕರೆಂದರೆ ಹೀಗೆಯೇ! ಅರಸರಿಗೂ ಇಲ್ಲದ ಬಿಗುಮಾನ". ಮತ್ತೊಬ್ಬಳು ತನ್ನ ಜ್ಞಾನ ಪ್ರದರ್ಶನಕ್ಕೆ ಪೀಠಿಕೆ ಹಾಕಿದಳು.

"ಹೇಳಿದ್ದಿದ್ದರೆ ಬೇಡ! ಅಂತಃಪುರದಲ್ಲೇ ಇರುತ್ತೇನು ಮಗು? ಬೆಳಿವ ನೇಲೆ ಹೊರಕ್ಕೆ ಬಂದೇ ಬರುತ್ತೆ. ಆಗ ನೋಡಿದರಾಯಿತು."

ತನಗೆ ತಾನೇ ಸಮಾಧಾನ ತಂದುಕೊಂಡಳು ಬೇರೊಬ್ಬಳು.

ಹೀಗೆ ಅವರವರಿಳಿಗೆ ಮಾತುಕತೆ ಮುಂದುವರಿಯುತ್ತಲೇ ಇತ್ತು. ಮುಂದಿ ಬಂದು ಆ ನೆರವಿಯನ್ನು ಕೂಡಿಕೊಳ್ಳುತ್ತಲೇ ಇತ್ತು. ಒಳಗಿನಿಂದ ಬರುವ ವಾರ್ತೆಗಾಗಿ ಕಾದು ನಿಂತಿತು ಅಗಾಧ ಜನಸ್ತೋಮ.

ಎಲ್ಲರ ಮನೆಯಲ್ಲೂ ಇದು ನಡೆಯುವ ನಿತ್ಯ ಮಹೋತ್ಸವ. ಜನನ-ಮರಣ ಇರದ ಮನೆ ಯಾವೂದು?

ಈ ಉತ್ಸಾಹ, ಆನಂದ, ಆತಂಕ ಎಲ್ಲರ ಮನೆಯಲ್ಲೂ ಕಂಡು ಬರುವುದೇ!

ಆದರೆ ಇದು ಅರಮನೆಯಲ್ಲಿ ನಡೆದುದು. ರಾಷ್ಟ್ರಕೂಟರ ರಾಜ ಇಂದ್ರನ ತಂಗಿಯ ಚೊಚ್ಚಲ ಪ್ರಸವ. ಜೊತೆಗೆ, ಆ ಮನೆತನದ ಆಳ್ವಿಕೆಯನ್ನು ಗುರ್ಜರದ ತನಕವೂ ತನ್ನ ಬಾಹುಬಲದಿಂದ ಹಬ್ಬಿಸಿದ ಸೇನಾಪತಿ ಚಾಳುಕ್ಯ ನರಸಿಂಹನ ಪತ್ನಿಯ ಪ್ರಥಮ ಪ್ರಸವ.

ಚಾಳುಕ್ಯ-ರಾಷ್ಟ್ರಕೂಟ ಮನೆತನಗಳ ಬಾಂಧವ್ಯದ ಬೆಲ್ಲವಚ್ಚು ಗೊಂಡುದನ್ನು ಕಣ್ಣಾ ತುಂಬ ನೋಡಲು ಯಾರಿಗಿಲ್ಲ ಕಾತರ? ಅದೊಂದು ಅಪೂರ್ವ ಘಟನೆ. ನಗರಕ್ಕೆ ನಗರ ನೆರೆದುದರಲ್ಲಿ ಆಶ್ಚರ್ಯವಿಲ್ಲ.

ಪುನಃ ಕದ ತೆರೆಯಿತು.

ಒಳಗಿನ ವಾರ್ತೆಯನ್ನು ತಿಳಿಯಲು ಜನರ ಕಿವಿಗಳು ನಿಮಿರಿ ನಿಂತವು—

ಎಡಕ್ಕೆ

ಕಾದಂಬರಿ

ಓದುಗರಲ್ಲಿ ಅರಿಕೆ

ಬಾಲ್ಯದಲ್ಲಿ ಒಂದಿಷ್ಟು ಕತೆಗಳನ್ನು ಬರೆದಿರುವುದು ನಿಜ. ತಿಳಿದೋ ತಿಳಿಯದೆಯೋ ಅವುಗಳನ್ನು ಪ್ರಮುಖ ಪತ್ರಿಕೆಯ ಸಂಪಾದಕರು ಪ್ರಕಟಿಸಿದ್ದೂ ನಿಶ್ಚಯ. ಆದರೆ ತಂತ್ರ ಕೈಗತವಾಗಿದೆಯೆಂದು ಹೇಳುವ ಧೈರ್ಯ ನನಗಿಲ್ಲ.

ಕಾದಂಬರಿಯನ್ನು ಬರೆಯುವ ಸಾಹಸ ಎಂದೂ ಮಾಡಿದವನಲ್ಲ. ಪರಕಪ ಕೆಳಗೆ ನಿದ್ದೆಪಡಿಸಿದ ತಕಿರಿಯ ಅಧಾರದ ಮೇಲೆ ಕಾದಂಬರಿಯನ್ನು ರೂಪಿಸಿದ್ದೇನೆ. ಬಹು ಭಾಗ ಸಂಭಾಷಣೆಯಲ್ಲಿಯೇ ಮುಗಿಯುತ್ತದೆ. ವರ್ಣನೆ ಇಲ್ಲವೇ ಇಲ್ಲ. ಮಾತು-ಕತೆಯ ಮೂಲಕ ಕಥಾ ಭಿತ್ತಿಯನ್ನು ಬಿತ್ತರಿಸಿದ್ದೇನೆ.

ಇದು ಸಾವಿರ ವರ್ಷಗಳ ಹಿಂದಿನ ಘಟನೆ. ಆ ಕಾಲ ಹೇಗಿತ್ತು ಎಂದು ಊಹಿಸುವುದೂ ಪ್ರಯಾಸದ ಕೆಲಸ. ನಾನು ಅಧಾರವಾಗಿ ಸಿಕ್ಕಿದ ಗ್ರಂಥಗಳಿಗೇ ಈ ವಿಚಾರದಲ್ಲಿ ಶರಣು ಹೋಗಿದ್ದೇನೆ. ಇನ್ನಷ್ಟು ಲಂಬಿಸಿ, ಮೈ ತುಂಬಿಸುವ ಕೆಲಸ ಮಾಡಿದ್ದರೆ ಒಳ್ಳೆಯದಿತ್ತು ಎಂದು ಹಲವರು ಅಭಿಪ್ರಾಯಪಡಬಹುದು. ಆವರೇ ಅದನ್ನು ಮಾಡಲಿ ಎಂಬುದು ನನ್ನ ಆಸೆ.

ಅರಿಕೇಸರಿಯ ಹುಟ್ಟನೊಡನೆ ಮೊದಲಾಗುವ ಈ ಕಿರು ಕಾದಂಬರಿ ಅವನು ಪಟ್ಟಾಭಿಷಿಕ್ತನಾಗುವ ವರೆಗಿನ ವಿವರವನ್ನು ಒಳಗೊಂಡಿದೆ. ಕೆಲವು ನಾನು ಕಡೆದು ನಿಲ್ಲಿಸಿದ ವ್ಯಕ್ತಿಗಳು. ಅವು ಚಾರಿತ್ರಿಕ ಸತ್ಯಗಳಲ್ಲ. ಓದುಗರ ಪ್ರತಿಕ್ರಿಯೆಯನ್ನು ನಾನು ತಿಳಿಯಲು ಆಶಿಸುತ್ತೇನೆ.

ಜೆಟ್ಟನ ಪೀಠಿಕೆ ಆನಗತ್ಯ. ಬರವಣಿಗೆಯೇ ನಿಮ್ಮ ಮುಂದಿರುವಾಗ ಹೆಟ್ಟನ ಹಿನ್ನೆಲೆ ಆನಗತ್ಯ.

—ಲೇಖಕರು.

ದಾದಿಯ ಗುರುತಿನವಳೊಬ್ಬಳು, ಆವಳ ತೀರ ಸಮೀಪಕ್ಕೆ ಹೋಗಿ 'ಚಂಪಾ! ಮಗು ಯಾರಂತಿದೆಯೆ?' ಎಂದು ಪಿಸುಗುಟ್ಟಿದಳು, ತನ್ನ ಉತ್ಸುಕತೆಯನ್ನು ತಡೆದುಕೊಳ್ಳಲಾರದೆ.

ಬಾಗಿಲ ಸಂದಿಯಲ್ಲಿ ನಿಂತಿದ್ದ ಚಂಪಾ ತುಟಿಗುಲುಗಿಸುವಷ್ಟರಲ್ಲಿ, ಆವಳನ್ನು ಯಾರೋ ಒಳಕ್ಕೆಳೆದುಕೊಂಡರು.

ಅಷ್ಟರಲ್ಲಿ ಜನ-ಜಂಗುಳಿಯಲ್ಲಿ ನೂಕು-ನುಗ್ಗಲಿಗೆ ಆರಂಭವಾಯಿತು.

'ದಾರಿ ಬಿಡಿ!' ಎಂದು ಹೇಳುತ್ತ ರಾಜ ಭಟರು, ದಾರಿ ಮಾಡಿಕೊಂಡು ಬಾಗಿಲ ಅಂಚಿನ ವರೆಗೂ ನಡೆದು ಬಂದರು ಆವರನ್ನು ಹಿಂಬಾಲಿಸಿ ಬಂದ, ಸಿಂಹದಂತೆ ಗಂಭೀರ ಹೆಜ್ಜೆಯಿಡುತ್ತ ಚಾಳುಕ್ಯ ನರಸಿಂಹ.

ಜನ ಅವನಿಗೆ ದೈ ಮುಗಿದು ದೂರ ಸರಿದರು.

ಚಾಳುಕ್ಯ ನರಸಿಂಹ ಬಾಗಿಲ ಮುಂದು ನಿಂತು, ಮೆಲ್ಲಗೆ, ಬಹು ಮೆಲ್ಲಗೆ ಕದ ಬಡಿದ. 'ಎಷ್ಟು ಬಡಕೊಂಡರೂ ಈ ಜನ ಬಿಡುವುದಿಲ್ಲ. ಸೈರಣೆ ಕಳೆದು ಕೊಂಡಂತಿದೆ' ಎಂದು ಗೊಣಗುತ್ತ ಒಳಗಿಂದೊಬ್ಬಳು ಆಗಣಿ ತೆಗೆದಳು. ಆ ಕೊಂಕು ಮಾತು ನರಸಿಂಹನ ಕಿವಿಗೆ ಬೀಳದಿರಲಿಲ್ಲ ಆದರೆ ಅವನ ಗನುನ ಆದರ ಮೇಲೆ ಹರಿಯಲಿಲ್ಲ.

ಕದ ತೆರೆದ ದಾದಿ, ಇದಿರಿನಲ್ಲಿ ನಿಂತ ದಂಡನಾಯಕರನ್ನು ಕಂಡು ಗಾಬರಿಯಿಂದ ಓಡುಗಚ್ಚಿದಳು. ಯಾಂತ್ರಿಕವಾಗಿ ನಡುವನ್ನು ಬಾಗಿಸಿ, ಸೇನಾಪತಿಗಳನ್ನು ಒಳಕ್ಕೆ ಬರಮಾಡಿಕೊಂಡಳು. ಪುನಃ ಬಾಗಿಲನ್ನು ಭದ್ರ ಪಡಿಸಲಾಯಿತು.

ನರಸಿಂಹ ಒಳ ಭಾಗದಲ್ಲಿದ್ದ ಭದ್ರಾಸನ ಒಂದರಲ್ಲಿ ಕುಳಿತ. ಆವನ ಮುಖ ಗಂಭೀರವಾಗಿತ್ತು. ಕೆರಳಿದ್ದ ಕುತೂಹಲ ಮುಖದಲ್ಲಿ ಬಿಂಬಿತವಾಗಿತ್ತು. ಆವನ ಅಂತರಂಗದ ತುಮುಲವನ್ನು ಗ್ರಹಿಸಿದ ಪರಿಚಾರಿಕೆ 'ಇನ್ನೇನು ಹೊರಕ್ಕೆ ತಂದು ಬಿಡುತ್ತಾರೆ! ಆಗಲೇ ಸ್ನಾನ ಮುಗಿದಿದೆ. ಸ್ವಲ್ಪ ಸಬುಯ ಹಿಡಿಯಬಹುದು—'

ಆವಳಿಂದ ಮಾತು ಪೂರ್ಣಗೊಳಿಸುವುದು ಆಗದೆ ಹೋಯಿತು. ನರಸಿಂಹ ನಡುನೆ ಬಾಯಿ ಹಾಕಿ 'ದೇವಿಯವರ ಪ್ರಕೃತಿ ಹೇಗಿದೆ?'

'ಆರೋಗ್ಯವಾಗಿದ್ದಾರೆ. ಒಂದಿಷ್ಟು ದಣಿವು ಮಾತ್ರ ಇದೆ.'

'ಏನಾದರೂ ಆಹಾರ ಕೊಟ್ಟಿದೆಯೇ?'

'ಅಕ್ಕಿ ಹುರಿದ ಗಂಜಿ ಆಗಲೇ ಕುಡಿಸಿಯಾಯಿತು.'

'ಹೆರಿಗೆ ತುಂಬ ಕಷ್ಟವಾಯಿತೇ?'

'ಹೇಳುವ ತೊಂದರೆ ಆಗಲಿಲ್ಲ. ಒಂದು ಸಲ ನಮಗೂ ಗಾಬರಿಯಾಯಿತು. ಆ ಮೇಲೆ ಸೂಲಗಿತ್ತಿಯ ಸಲಹೆಯಂತೆ ರಾಜ ವೈದ್ಯರನ್ನು ಕರೆಸಿಕೊಂಡೆವು. ಅವರು ಏನೋ ಗುಳಿಗೆ ತಿನ್ನಿಸಿದರು. ಅನಂತರ ಎಲ್ಲ ಸರಿಹೋಯಿತು. ನಿರೀಕ್ಷೆ— ಉದ್ವೇಗಗಳ ತೂಗುಯ್ಯಾಲೆಯಾಗಿದ್ದ ನರಸಿಂಹ-

ನವಜಾತ ಶಿಶುವನ್ನು ಚೀನಾಂಬರದಲ್ಲಿ ಸುತ್ತಿ ಹೊರ ತಂದರು. ದಾದಿಯೊಬ್ಬಳು ಶಿಶುವನ್ನು ನರಸಿಂಹನ ಮುಂದು ಹಿಡಿದಳು.

ಮಗು ಆಳುವುದಕ್ಕೆ ಆರಂಭಿಸಿತು.

ನರಸಿಂಹನ ಮನಸ್ಸಿಗೆ ಆದರಿಂದ ಕಸಿವಿಸಿಯಾಯಿತು. ತಾಯಿಯನ್ನು ಅಗಲಿದ ಶಿಶು ಆಳುವುದು ಸಹಜ. ಹಾಗೆಂದು ತೀರ್ಮಾನಿಸಿದ ರಾಷ್ಟ್ರಕೂಟ ದಂಡನಾಯಕ ನರಸಿಂಹ. ಆದರೆ ನಿಜ ಸ್ಥಿತಿ ಹಾಗಿರಲಿಲ್ಲ.

(ಹನ್ನೊಂದನೇ ಪುಟ ನೋಡಿರಿ)

ಕತೆಯುಗ ನಿ—ನಿ—೧೬

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 22

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೫೫

ಚಿಕ್ಕ ಜೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಗೆಲ್ಲುವ ತಂತ್ರದಿಂದ ಐಕ್ಯಸಾಧನೆಯೂಗದು

ಮುಂಬರುವ ರಾಜ್ಯ ವಿಧಾನ ಸಭೆಗಳ ಚುನಾವಣೆಗಳಿಗೆ ಪಕ್ಷದ ಅಭ್ಯರ್ಥಿಗಳನ್ನು ಆರಿಸುವ ಕೆಲಸವೀಗ ಆರಂಭವಾಗಿದೆ. ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟಕ್ಕೆ ಆಯ್ಕೆ ಸಮಿತಿಯ ಶಿಫಾರಸುಗಳು ಹೋಗಿವೆ. ಈ ನಡುವೆ ಕೆಲವು ರಾಜ್ಯಗಳಲ್ಲಿ 'ಇಂಡಿಕೇಟು ಇಬ್ಭಾಗವಾದದ್ದು ಸುವೇದ್ಯವೇ ಇದೆ. ಮಧ್ಯಪ್ರದೇಶದಲ್ಲಿ ಶ್ಯಾಮ ಚರಣಶು ಕ್ಲಾರು ತನ್ನ ಸಚಿವ ಸಂಪುಟದ ರಾಜಿನಾಮೆ ಕೊಡಬೇಕಾಗಿಬದಂದ್ದು ಹೈಕಮಾಂಡಿನ ಆದೇಶದ ಬಲದಿಂದ ಪಕ್ಷದ ಏಕತೆಯ ರಕ್ಷಣೆಗಾಗಿ ಅವರಿಗೆ ಈ ಆಜ್ಞೆ ನೀಡಲಾಯ್ತು. ಅಸ್ಸಾಮದಲ್ಲೂ ಪಕ್ಷದ ತುಕ್ಕುಡಿಗಳ ಹೋರಾಟ ಹದಿನೈದು ದಿನಗಳ ಹಿಂದೆ ಪ್ರಧಾನಿ ಗಾಂಧಿ ಹಾಕಿದ ಬೆಸುಗೆಯಿಂದ ನಿಂತಿತ್ತು. ಆದರೆ, ಇದೀಗ ಆ ಬೆಸುಗೆ ಕರಗಿಹೋಗಿ, ಮತ್ತೆ ಏಕತೆಯ ಪ್ರಶ್ನೆ ಬಂತು. ಮುಖ್ಯಮಂತ್ರಿ ಮಹೇಂದ್ರ ಮೋಹನ ಚೌಧುರಿಯವರು ರಾಜಿನಾಮೆ ನೀಡಬೇಕೆಂದು ಡಿಳ್ಳಿಯಿಂದ ಕರೆಬಂತು. ವರಿಷ್ಠರು ರಾಜಿನಾಮೆ ಕೇಳಿದಾಗ ಈ ಇಬ್ಬರೂ ಮುಖ್ಯ ಮಂತ್ರಿಗಳು ಹಿಂದು ಮುಂದು ನೋಡದೆ ಆಜ್ಞಾಪಾಲರಾದರು. ಶಿಸ್ತಿನ ಸಿಪಾಹಿಗಳಾದರು. ಶ್ರೀಮತಿ ಗಾಂಧಿಯವರಿಗೆದುರು ನಿಂತು ತಲೆಯೆತ್ತುವುದು ಸಧ್ಯ ಸಾಧ್ಯವಿಲ್ಲೆಂದವರಿಗೆ ಗೊತ್ತು.

ಹೀಗೆಯೇ ಅಭ್ಯರ್ಥಿಗಳ ಆಯ್ಕೆಯ ವಿಷಯದಲ್ಲಿ ಎಲ್ಲೆಡೆಯೂ ಗುಂಪುಗಾರಿಕೆಯೆದ್ದು ಬಂದಿದೆ. ತೀವ್ರ ಅತೃಪ್ತಿ ತಲೆ ನೋರಿದೆ. ತಮಗೆ ಸಾಕಷ್ಟು ಪ್ರಾತಿನಿಧ್ಯ ದೊರೆಯಲಿಲ್ಲವೆಂದು ಯುವತುರುಷ್ಕರು ಮರುಗುತ್ತಾರೆ.ಅಸಮಾಜವಾದಿಗಳಿಗೇನೇ ಹೆಚ್ಚು ಪ್ರಾತಿನಿಧ್ಯ ದೊರೆಯಿತೆಂದು ಸಮಾಜವಾದಿ ವೇದಿಕೆ ದೂರುತ್ತಿದೆ. ಆವರೆ 'ಸಮಾಜವಾದ'ದ ನಿಯಮಗಳನ್ನು ಪಾಲಿಸ ಹೋದರೆ, ಸೂಕ್ತ ಅಭ್ಯರ್ಥಿಯನ್ನು ಇಂಡಿಕೇಟಿನಲ್ಲಿ ಅರಸಲು ಸಾಧ್ಯವಾಗದೆಸಿಸುತ್ತದೆ. ಇದು ಕರ್ನಾಟಕದ ಮಟ್ಟಿಗೆ ನೂರಕ್ಕೆ ನೂರು ಸತ್ಯ. ಬೆಂಗಳೂರಿನಲ್ಲಿ ಅಭ್ಯರ್ಥಿಯ ಆಯ್ಕೆ ಕಷ್ಟ ಸಾಧ್ಯವೆಂದು ಡಿಳ್ಳಿಯಲ್ಲಿ ಅರಸರು ಸಭೆ ಕರೆದರು. ಅಲ್ಲಿನ ತಂಪು ಹವೆಯಲ್ಲಿಯೂ ಎಲ್ಲಾ ಸ್ಥಾನಗಳಿಗೆ ಒಮ್ಮತದ ನಿರ್ಧಾರ ಕೈಕೊಳ್ಳುವುದು ಅವರಿಗೆ ಸಾಧ್ಯವಾಗಲಿಲ್ಲ. ಸದ್ಯ ತಯಾರಾದ ಪಟ್ಟಿಯನ್ನು ಸ್ಕ್ರೀನಿಂಗ್ ಮಾಡಲು ಸಮಿತಿಯೊಂದರ ನಶಕ್ಕೆ ಒಪ್ಪಿಸಲಾಯ್ತಂತೆ. ಈ ಸ್ಕ್ರೀನಿಂಗ್‌ನಲ್ಲಿ ಸಾಚಾವಾಗಿ ಉಳಿದುಕೊಂಡ ಪೆಸರುಗಳನ್ನು ಕೇಂದ್ರ ಸಮಿತಿ ಪರಿಶೀಲಿಸುವುದಂತೆ. ಈಗಿನ ಪಟ್ಟಿಯನ್ನು ಅಕ್ಷೇಪಿಸುವವರು ಯುನಕ ಇಂಡಿಕೇಟಿಗರು ಬಲವಾಗಿ ನಿರೋಧಿಸಿದ್ದಾರೆ. ಯುವ ತುರುಷ್ಕರು, ಸಮಾಜವಾದಿ ವೇದಿಕೆಯವರು ಮತ್ತು ಮಾಜಿ ಪ್ರಸವಾ–ಹಾಲಿ ಇಂಡಿಕೇಟ್ ಗುಂಪು ಅವರಿಗೆ ಬೆಂಬಲ ನೀಡುತ್ತಾರೆ ಇವರೆಲ್ಲರೂ ಒಂದು ಸೇರಿ, ತಮ್ಮ ತೀವ್ರ ಅಸಂತೋಷವನ್ನು ತೋರ್ಪಡಿಸಿದ್ದಾರೆ; ಈ ಪಟ್ಟಿಯಂತೆ ಆಯ್ಕೆ ನಡೆದರೆ ಉಗ್ರ ಪರಿಣಾಮಗಳನ್ನು ಎದುರಿಸಬೇಕಾಗಬಹುದೆಂದೂ ಎಚ್ಚರಿಸಿದ್ದಾರೆ. ರಾಜ್ಯದ ಯುವಕ ಇಂಡಿಕೇಟಿಗರು ಮೂರರಲ್ಲಿ ಎರಡು ಸ್ಥಾನಗಳು ತಮಗೆ ಬೇಕೆಂದು ಬೇಡಿದ್ದರು. ಅವರಿಗೆ ಒಂದೂ ಸಿಕ್ಕಂತಿಲ್ಲ. ಭಾರೀ ಅಧಿಕಾರದ ಆಸೆಯಿಂದ ಅಧಿಕಾರ ತ್ಯಜಿಸಿ, ಅಧಿಕಾರದಿಂದ ವಂಚಿತರಾಗಿ, ಅಧಿಕಾರದಾಸೆಯಿಂದ ಇಂಡಿಕೇಟಿಗೆ ಬಂದವರೆಲ್ಲ ಸ್ವಾರ್ಥ ಪಡೆಯಲು ಕುತಂತ್ರ ನಡೆಸುತ್ತಿದ್ದಾರೆಂದು ಉಳಿದವರು ಬಹಳ ಹಿಂದೆಯೇ ಆರೋಪಿಸಿದ್ದರು. ಈ ಆರೋಪವನ್ನು ಅಲ್ಲಗಳೆಯುವುದು ನಿಜಕ್ಕೂ ಸಾಧ್ಯವಿರಲಿಲ್ಲ. ಸಮಾಜವಾದಿ ವೇದಿಕೆಯು ರೂಪಿಸಿದ ಲಕ್ಷ್ಮ ರೂಪಾಯಿಗೆ ಹೆಚ್ಚಿನ ಆಸ್ತಿವಂತರಲ್ಲದವರು ಚುನಾವಣಾ ರಂಗಕ್ಕೆಳಿಯಲು ಮುಂದೆ ಬರುವುದು ಇಲ್ಲ. ಕೇಂದ್ರ ಚುನಾವಣಾ ಸಮಿತಿಗೆ ಅಧಿಕೃತ ಅಭ್ಯರ್ಥಿಯನ್ನು ವಿರೋಧಿಸಿ ಚಂದ್ರಶೇಖರ್ ಆಯ್ಕೆಗೊಂಡರು. ಇವರು ಯುವ ತುರುಷ್ಕರು, ಸಮಾಜವಾದಿ ವೇದಿಕೆಯ ಪ್ರಮುಖರು, ಯುವಕರೂ ಮಾಜೀ ಪ್ರಸವಾ–ಹಾಲಿ ಇಂಡಿಕೇಟಿಗರೂ ಹೌದು. ಇವರ ನಾಯಕತ್ವದಲ್ಲಿ ರಾಜ್ಯದ ಪಟ್ಟಿ ವಿರೋಧಿಗಳು ಕೇಂದ್ರ ಸಮಿತಿಯನ್ನು ತಂತಾಪಿಗೆ ತೆಗೆದುಕೊಳ್ಳುವರೆಂದು ಸುದ್ದಿ. ಆದರೆ, ಒಬ್ಬ ಚಂದ್ರ ಶೇಖರಿಂದ ಇಡಿಯ ಪಟ್ಟಿಯನ್ನು ಬದಲಿಸುವುದಕ್ಕಾಗದು. ಯಾರೊಡನೆ ಹೇಗೆ ನಿಗಬೇಕೆಂದು ಚೆನ್ನಾಗಿ ತಿಳಿದಿರುವ ಪ್ರಧಾನಿ ಗಾಂಧಿ ಭಿನ್ನ ಮತೀಯರನ್ನು ಒಮ್ಮೆಗೆ ಸಮಾಧಾನ ಪಡಿಸಬಲ್ಲರು. ತನ್ನ ನಾಮದ ಬಲದಿಂದ ಜಯಗಳಿಸುವುದೀಗ ಸಾಧ್ಯವೆಂದೇ ಆಕೆ ಚುನಾವಣೆಗೆ ಮುಂದುವರಿದಿದ್ದಾರೆ.

ರಾಜ್ಯಗಳಲ್ಲಿ ನಿರ್ಮಾಣವಾಗುವ ಸರಕಾರಗಳ ಸಹಕಾರದ ಪ್ರಮಾಣದಿಂದ ದೇಶವು ಮುಂದಿನ ವರ್ಷಗಳಲ್ಲಿ ಭಿರ್ಕಿಕ ಸ್ವಾತಂತ್ರ್ಯಗಳಿಸಿ ಬಲ್ಲುದು. ಆದುದರಿಂದ ಸುಭದ್ರ ಸರಕಾರಗಳನ್ನೇ ಚುನಾಯಿಸಿರೆಂದು ಪ್ರಧಾನಿ ಶ್ರೀಮತಿ ಗಾಂಧಿ ಕರೆಕೊಟ್ಟಿದ್ದಾರೆ ಪಾಕಿಸ್ತಾನದೊಡನಾದ ಸಂಗ್ರಾಮದಲ್ಲಿ ಭಾರತ ಜಯಗಳಿಸುವುದಕ್ಕೆ ಕೇಂದ್ರದಲ್ಲಿ ಬಲಿಷ್ಠ ಸರಕಾರವಿದ್ದದೇ ಕಾರಣವೆಂದು ಅವರ ಅಭಿಪ್ರಾಯವನ್ನು ಸಮರ್ಥಿಸಲು ಅವರೇ ಮುಂದಾಗಲಿಲ್ಲ. ಇಡಿಯ ದೇಶ ಒಂದಾಗಿ ನಿಂತಿತೆಂದು ಅವರೇ ಒಪ್ಪಿಕೊಂಡಿದ್ದಾರೆ. ಯುದ್ಧದ ಪರಿಣಾಮವಾಗಿ ನಾವು ಹಲವಾರು ಸೆನುಸ್ಯೆಗಳನ್ನು ಮುಖ್ಯವಾಗಿ ಆರ್ಥಿಕ ಸೆನುಸ್ಯೆಯನ್ನು ಎದುರಿಸಬೇಕಾಯಿತೆಂಬುದು ನಿಜ. ಸಮರದ ವೆಚ್ಚ, ಸೇನೆಯ ಸುಸಂಘಟನೆಗೊಂದಿಗೆ ವಿದೇಶೀ ನೆರವಿನ ಅಭಾವ–ಮೊದಲಾದುವನ್ನು ನಾವು ಕೆಚ್ಚೆದೆಯಿಂದ ಭರಿಸಿಕೊಳ್ಳ ಬೇಕಾಗಿದೆ. ದೇಶದ ಅರ್ಥವ್ಯವಸ್ಥೆಯನ್ನು ಪುನರ್ಘಟಿಸಿ ಅನಕ್ಕೆ ಪುನರ್ಚೇತನವನ್ನು ತಂದಿಯಬೇಕಾದರೆ, ರಾಜ್ಯ–ಕೇಂದ್ರಗಳು ಒಮ್ಮುಖವಾಗಿ ಪ್ರಯತ್ನ ಸಾಗಿಸಬೇಕಾದದ್ದೂ ಅನಿವಾರ್ಯವೇ. ಈ ದೃಷ್ಟಿಯಿಂದ ಶ್ರೀಮತಿ ಗಾಂಧಿಯವರು ಬಡತನದ ನಿರ್ಮೂಲನ–ಆರ್ಥಿಕ ಪುನಶ್ಚೇತನದ ಘೋಷಣೆಗಳ ಬಲದಿಂದ ತಮ್ಮ ಪಕ್ಷವನ್ನು ಗೆಲ್ಲಿಸಲು ಈ ಬಾರಿ ಹೊರಟಿದ್ದಾರೆ. ಅವರ ಇರಾದೆ ಉತ್ತಮವಾದದ್ದು; ಆದರ್ಶಪ್ರಾಯವಾದದ್ದು. ಆದರೆ, ಇಂಡಿಕೇಟು ಮಾತ್ರವೇ ಸುಭದ್ರ ಸರಕಾರ ರಚಿಸಬಲ್ಲುದೆಂದು ಅವರು ನಂಬಿದ್ದರೆ, ಅದು ಮೂರ್ಖ ಸುಳ್ಳು. ಗುಂಪುಗಾರಿಕೆ–ಅಸಮೋಧಾನಗಳಿಂದ ತುಂಬಿ ತುಳುಕಾಡತೊಡಗಿದ ಇಂಡಿಕೇಟು ತನ್ನ ಐಕ್ಯಕ್ಕಾಗಿಯೇ ಪರಿಶ್ರಮಿಸುವ ಅಗತ್ಯವಿಂದು ಇದೆ. ಗೆಲ್ಲುವ ತಂತ್ರದಿಂದ ಐಕ್ಯಸಾಧನೆಯೂಗುವುದಿಲ್ಲ.

ಶಿಕ್ಷಣ ವಿಭಾಗದ ರೋಗ

ಕನ್ನಡ ಮಾಧ್ಯಮದಲ್ಲಿ ಶಾಲಾ ಶಿಕ್ಷಣ ಪಡೆದಿದ್ದ, ಪದವಿ ಶಿಕ್ಷಣದಲ್ಲಿ ಕನ್ನಡವನ್ನು ತೆಗೆದುಕೊಂಡಿದ್ದ, ಹಲವಾರು ವರ್ಷ ಕನ್ನಡವನ್ನು ಪಾಠಮಾಡಿದ್ದ, ಕನ್ನಡ ಪರೀಕ್ಷೆಯ ಪ್ರಶ್ನಪತ್ರ ತಯಾರಿಸಿದ್ದ, ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿದ್ದ ಒಬ್ಬ ಮುಖ್ಯೋಪಾಧ್ಯಾಯರನ್ನು ಕನ್ನಡ ಬಾರದವರು ಎಂಬ ಕಾರಣದಿಂದ ಹಿಂಬಡತಿ ಮಾಡಿದ ಘಟನೆಯೊಂದು ಕೇರಳದ ಶಿಕ್ಷಣ ವಿಭಾಗದಲ್ಲಿ ನಡೆಯಿತು. ಈ ಕ್ರಮವನ್ನು ಪ್ರತಿಭಟಿಸಿ ಶಿಕ್ಷಣಾಲಯಗಳು ವಿದ್ಯಾರ್ಥಿಗಳು ಮುಷ್ಕರ ಹೂಡಿದರು. ಪರಿಣಾಮ ರಮಣೀಯವಾದೀತು, ಸರಕಾರವು ಈ ಪರಿಸ್ಥಿತಿಯೇಕೆ ಉದ್ಭವಿಸಿತೆಂದು ಪರಿಶೀಲಿಸುವ ಭರವಸೆ ನೀಡಬಹುದು; ತನ್ನ ಆಜ್ಞೆಯನ್ನೂ ಹಿಂತೆಗೆದುಕೊಳ್ಳಬಹುದು. ಆದರೆ, ಹೀಗೇಕಾಯ್ತು ಎಂಬುದೇ ಮುಖ್ಯ ಪ್ರಶ್ನೆ. ಪ್ರಶ್ನಿತ ಮುಖ್ಯೋಪಾಧ್ಯಾಯರ ಮಾತೃಭಾಷೆ ಕೊಂಕಣಿಯೆಂದು ಹೇಳಲಾಗುತ್ತದೆ. ಮಲೆಯಾಳ ಮಾತೃಭಾಷೆಯಾಗಿರುವವರಿಗೆ ಕನ್ನಡಬಾರದೆಂಬುದು ಕೇರಳ ಸರಕಾರದ ಸಾಮಾನ್ಯ ಅಭಿಪ್ರಾಯವಿರಬಹುದು. ಆದರಂತೆಯೇ ಕೊಂಕಣಿ ಮಾತೃಭಾಷೆಯಾಗಿರುವವರಿಗೂ ಕನ್ನಡ ಬರುವುದಿಲ್ಲ ಎಂದು ಅಧಿಕಾರಿಗಳು ತಪ್ಪಾಗಿ ತಿಳಿದುಕೊಂಡಿರಬಹುದು. ತಮ್ಮ ತಪ್ಪನ್ನವರು ತಿದ್ದಿಕೊಳ್ಳ ಬಹುದು; ಆದಕ್ಕೆ ತಪ್ಪಿದರೆ, ಪ್ರಶ್ನಿತ ಅಧ್ಯಾಪಕರು ತಮಗೆ ಕನ್ನಡ ಬರುತ್ತದೆಂಬುದನ್ನು ಸಿದ್ಧಪಡಿಸಬೇಕಾಗಬಹುದು. ಚಿಕ್ಕ ಪುಟ್ಟ ಅಲ್ಲಸಲ್ಲದ ಕಾರಣಗಳನ್ನು ಸೃಷ್ಟಿಸಿಮೂಡಿ, ಅವುಗಳಿಂದ ಶಿಕ್ಷಕರನ್ನು ಗೋಳು ಹೊಯ್ಯುವುದು ಶಿಕ್ಷಣ ವಿಭಾಗದ ಅಭ್ಯಾಸವಾಗಿ ಹೋಗಿರುವಂತೆ ಭಾಸವಾಗುತ್ತದೆ. ಈ ರೋಗ ಕೇರಳ ಸರಕಾರಕ್ಕೆ ಮಾತ್ರ ಅಂಟಿದ್ದಲ್ಲ. ಕರ್ನಾಟಕದ ಶಿಕ್ಷಣ ವಿಭಾಗದಲ್ಲೂ ಹರಡಿದೆ. ಮುಖ್ಯವಾಗಿ ವೇತನ ವಿತರಣೆಯಲ್ಲೇ ಅತ್ಯಂತ ವಿಲಂಬ ನೀತಿಯನ್ನು ಅದು ಅನುಸರಿಸುತ್ತಿದೆಯೆಂದು ದೂರುಗಳು ಬರುತ್ತಿವೆ. ತಕ್ಕುವೇತನವೆಂದು ದೊರಕುತ್ತದೆಯೆಂದು ಬಡಕೂಲಿಯವನಿಗೂ ಗೊತ್ತು; ಆದರೆ ಶಿಕ್ಷಕರು ಮಾತ್ರ ಇದಕ್ಕೆ ಅಪವಾದ. ಹಾಗಾಗಿ ಅವರು ಮಾನವಂತರಾಗಿ ಬಾಳುವುದು ಕಷ್ಟವಾಗುತ್ತದೆ; ಕೊಟ್ಟ ಮಾತನ್ನು ಉಳಿಸುವುದು ದುಸ್ತರವಾಗುತ್ತದೆ.

●●

ರಾಷ್ಟ್ರವಿಭೂತಿ

ಪದ್ಮಭೂಷಣ ಟಿ. ಎ. ಪೈ



ಶ್ರೀ ಟಿ. ತನಂತ ಪೈ.

ಹೆಸರು ಅನಂತ, ಎಂತೆಯೇ ತವರೆ ಕಾರ್ಯಕ್ಷೇತ್ರವೂ ಎನಂತ. ಅವರ ಕೀರ್ತಿ ಲತೆ ಹಬ್ಬಿದ್ದೂ ಎನೇತಕ್ಕೆ.

ಈ ವಾರವೂ ರಾಷ್ಟ್ರಪತಿಗಳು ಗಣ ರಾಜ್ಯ ವಿಶೋತ್ಸವನ ನೆಲೆ ನೇಕ ಸೇವಕ ರಲ್ಲಿ ಕೆಲವುಗೆ ವಿವಿಧ ಪ್ರಶಸ್ತಿ ನೀಡಿ ಗೌ ರವಿಸಿದರು. ಶ್ರೀ ಅನಂತ ಪೈಯವರು ಪದ್ಮಭೂಷಣ ಪ್ರಶಸ್ತಿಗಳಿಸಿದರು. ಜಿಲ್ಲೆ ಯಲ್ಲಿ ರಾಷ್ಟ್ರ ಪ್ರಶಸ್ತಿಗಳಿಸಿದವರಲ್ಲಿ ತತ್ಪಂ ತ ಕಿರಿಯರು ಶ್ರೀ ಪೈ.

ತೊಂಭೈ ವರ್ಷಾಂತರವೆನ್ನ ಮೊದ್ದ ಕು ಟುಂಬ ನಿರ್ವಹಣೆ ಸರಿಕಾರ ಅನಂತ ಕಾ ರ್ಯಕ್ಷೇತ್ರವೂ ವಿದ್ಯಾಸಂಸ್ಥೆಯೆನ್ನುವ ರಾಷ್ಟ್ರೀಯ ಸ್ವಾತಂತ್ರ್ಯ ಸೋರಾಟದ ವೇಳೆಯಲ್ಲೇ ರಾಷ್ಟ್ರ ಪ್ರಜ್ಞೆಯನ್ನು ಬೆಳೆ ಸಿಕೊಂಡುಬಂದ ರಾಷ್ಟ್ರ ಪ್ರೇಮಿಗಳೆ ಕು ಟುಂಬವು.

ಖಾಸೇಂದ್ರ ಅನಂತ ಪೈಯವರು ಗಾಂ ಧೀ ಕಕ್ಕಾ ನುಯಾಯಿಗಳು. ಅವರ ತಂದೆ ಪುತ್ರ ಶ್ರೀ ಟಿ. ಅನಂತ ಪೈ.

ಉಡುಪಿ - ಮಂಗಳೂರಿನಲ್ಲಿ ಶಿಕ್ಷಣ ಪಡೆದ ಶ್ರೀ ಪೈ ಕನ್ನ ಹಿರಿಯರು ಕಟ್ಟುವ ಸಿಂಡಿಕೇಟ್ ಬ್ಯಾಂಕಿನ ನೇತೆಯನ್ನು ನೆರಿ ಕೊಂತರು ಅದೆನ್ನೆ ಜನರಲ್ ಮೆನೇಜ ರ್, ಮೆನೇಜಿಂಗ್ ಡೈರೆಕ್ಟರ್. ಜೆಮ್ಶ್ ಮ್ಯಾಡ್ ದುತ್ತ ರಾಷ್ಟ್ರೀಕರಣಗೊಂತ ಮೇರೆ ಕೆಮ್ಮೋಡಿಯನ್ ಪೀಗೆ ಹಲವು ಹ ಪರು ಹೊತ್ತೆ ಪಮಿಗಳ್ತೆ ಕಾಲು ಶತಮಾ ನಕ್ಕೂ ಮಿಕ್ಕೆ ಮಾಡಿದರು

ಪದ್ಮಶ್ರೀ ಡಾ| ಟಿ.ಎಂ.ಎ. ಪೈಯವರ ಗರುತಿಯುತ್ತೆ ಬರ್ಗಿದರು ಬ್ಯಾಂಕಿನ ನರ್ವ ತೋಮುಖ ಪ್ರಗತಿಗಾಗಿ ಪಟ್ಟೆನಿಸಿದರು; ಅಹರ್ನಿಶಿ ಕಾರ್ಯಶಾಲಿಯಾದರು; ಇವರೆ ಜೀವ ರಿನ ಫಲವಿಂದು ದೇಶವ್ಯಾಪಿಯಾಗಿ ಬ್ಯಾಂ ಕಿಂಗ್ ಉದ್ಯಮವಲ್ಲಿ ಗಣ್ಯ ಸ್ಥಾನ ಪಡೆ ದಿದೆ

ಜೀವನದಿಂದ ನಿಗಮದ ಅಧ್ಯಕ್ಷ ಸ್ಥಾನ ವು ಅವರನ್ನು ಸಿಂಡಿಕೇಟ್ ಬ್ಯಾಂಕಿನಿಂದ ಕರೆಯಿತು. ಈ ಪೆಟ್ಟಿನ ಪೋಕಾಕೆಯನ್ನು ನಿರ್ವಹಿಸುವ ಅತಲಸ್ಥೀಯ ಶಕ್ತಿ ಶ್ರೀ ಪೈಯವರಲ್ಲಿತ್ತು. ನಾಗರಿಕ ಉಡ್ಡಿಕಾರಿ ಗಳ ಭದ್ರಮುಷ್ಟಿಯಲ್ಲಿ ಜೀವ ವಿಮೆಯ ಸಂದೇಶ ಶ್ರೀ ಸಾಮಾನ್ಯನ ಕೈಗೆಳ್ಳುತ್ತ ಉಪಲು ಹಿಂದು ಮುಂದು ನೋಡುತ್ತಿತ್ತು.

ಶ್ರೀ ಸಾಮಾನ್ಯರ ನಡುವೆಯೇ ಶ್ರೀ ಸಾ ಮಾನ್ಯರಾಗಿಯೇ ಅಸಾಮಾನ್ಯರಾದ ಶ್ರೀ ಪೈಯವರು ಈ ಕರಿನ ಕರ್ತವ್ಯವನ್ನು ತ ನ್ನೆ ಹೆಗಲಲ್ಲಿ ಮುಗುಳ್ಳಗುತ್ತಲೇ ಹೊತ್ತು ಕೊಂಡರು.

ತನ್ನ ಅಧಿಕಾರಾವಧಿಯ .ಆರಂಭದಲ್ಲೇ ಆದ್ವಿತೀಯ ಯಶಸ್ಸನ್ನು ಸಂಪಾದಿಸಿದರು. ದೊಡ್ಡ ದೊಡ್ಡ ಸಿವಿಲ್ ಅಧಿಕಾರಿಗಳು ಒಂ ದೂವರೆ ದಶಕದಲ್ಲಿ ಸಾಧಿಸಲಾಗದ ಬಹು ಮುಖ ಸಾಧನೆಯನ್ನು ಶ್ರೀ ಪೈ ಬರಿಯ ಒಂದೂವರೆ ವರ್ಷಗಳಲ್ಲಿ ಸಾಧಿಸಿ ತೋರಿ ಸಿದರು.

ತನ್ನ ಎಳೆ ಹರೆಯದಲ್ಲೇ ವಿಧಾನ ಸಭಾ ಸದಸ್ಯರಾಗಿ, ತನ್ನ ಕ್ಷೇತ್ರದ ದಾಗೂ ಇತ ರೆಡೆಯ ಜನತೆಯೊಡನೆ ನಿಕಟ ಪರಿಚಯ ಹೊಂದಿದ ಶ್ರೀ ಪೈಯವರದ್ದು ಅರ್ಧಿಕ ಕ್ಷೇತ್ರದಲ್ಲೇ ಅನುಪಮ ಮಡಿಮೆ. ಶ್ರೀನಾ ಮಾನ್ಯನ ಅಶೋತ್ತರಗಳನ್ನು ಮನವರಿಕೆ ಮಾಡಿಕೊಂಡ ಅವರದ್ದು ಅಗಿ ನೆಲೇ ತನ್ನ ಕಾರ್ಯಕ್ಷೇತ್ರದಲ್ಲಿ ಅವುಗಳನ್ನು ಸಾಧಿಸಲು ಹೋರಾಡಿದ ಪ್ರಾತೂಣಿಕೆ ಹಿರಿನೆ ಇಂದು ತನ್ನ ವಿಶಾಲ ಕಾಯ ರಾಷ್ಟ್ರೀಯ ಕಾರ್ಯ ರಂಗದಲ್ಲೂ ತದೇ ವಿಶಾಲ ಮನೋಭಾವ ನೆಯುಂದ ಕರ್ತವ್ಯ ಪರಾಯಣರಾದ ಶ್ರೀ ಪೈ ಭಾರತ ಭೂಷಣರೂ ಹೌದು.

ವಿಶ್ವ ವ್ಯಾಪ್ತಿಯುಳ್ಳ ಮಣಿಪಾಲದ ಶಿ ಕ್ಷಣ ಸಂಸ್ಥೆಗಳನ್ನು ಕಟ್ಟುವಲ್ಲಿ ಶ್ರೀ ಪೈ ಯವರು ತಮ್ಮ ಅಯುಷ್ಯದ ಬಹುಭಾಗವ ನ್ನು ತೇದಿದ್ದಾರೆ

ಉತ್ತಮ ಶಿಕ್ಷಣವೇತ್ತನೆಂದು, ಉ ತ್ತಮ ಅರ್ಥಶಾಸ್ತ್ರಿಯೆಂದು, ಉತ್ತಮ ಸಮಾಜ ಸೇವಕನೆಂದು ಉತ್ತಮ ರಾಷ್ಟ್ರವಿ ಭೂತಿಯೆಂದು ಹಿಂದೆಯೇ ಹೆಸರಾದ ಶ್ರೀ ಪೈಯವರ ಬಹುಮುಖೀಸೇವೆಯನ್ನು ರಾ ಷ್ಟ್ರಪತಿಗಳು ಗಮನಿಸಿ ಅವರನ್ನು ಪದ್ಮ ಭೂಷಣ ಪ್ರಶಸ್ತಿಯಿಂದ ಗೌರವಿಸಿದ್ದು ಹೆಮ್ಮೆಯ ಸಂಗತಿ

ಪದ್ಮಭೂಷಣ ಪೈಯವರು ಭಾರತ ರತ್ನ ಪೈಯವರಾಗುತ್ತಾರೆಂದು ಅವರನ್ನು ಬಲ್ಲ ಯಾರಾದರೂ ಹೇಳಬಹುದು.

ಶ್ರೀ ಪೈಯವರು "ನವಯುಗ"ದ ಸದ ಭಿಮಾನಿ ಬಳಗದವರು, ಅವರಿಗೆ ದೊರೆತ ಗೌರವದಿಂದ "ನವಯುಗ"ವು ಹರ್ಷ ಪು ಲಕಿತವಾಗಿದೆ.

●●

ವಿದ್ಯಾದಾಯಿನಿಯಲ್ಲಿ ವಾರ್ಷಿಕೋತ್ಸವ

ಸುರತ್ಕಲ್ (24-1-1972): "ಅನತೋ ಮೂ ಶವ್ಪನುಯ, ತನುಸೋಮು ಜ್ಯೋತಿರ್ಗ ಮಯ" ಎಂಬ ಉಪನಿಷತ್ ವಾಣಿಯಂತೆ ಅ ಜ್ಞಾನದಿಂದ ಜ್ಞಾನೋರ್ಗಕ್ಕೆ ತರುಗುತ್ತ ತನ್ನಲ್ಲಿ ನ್ಹ ವ್ಯಕ್ತಿತ್ವವನ್ನು ವಿಕಾಸ ಗೈಯುವುದಕ್ಕೆ ಪ್ರ ಯತ್ನಿಸುವುದೇ ವಿದ್ಯಾಭ್ಯಾಸದ ಗುರಿ ಆ ದೃಷ್ಟಿ ಯಿಂದ ಶಾಲಾ ಕಾಲೇಜುಗಳಲ್ಲಿ ಪಾಠಗಳ ಜೊತೆ ಯಲ್ಲಿ ಇತರೆತರ ಚಟುವಟಿಕೆಗಳಿಗೂ ಅಷ್ಟೇ ಪ್ರಾಶಸ್ತ್ಯ ವೀಯಬೇಕಾಗಿದೆ. ಪಾಠವು ಮೂನವರಲ್ಲಿ ಹಣವಿದ್ದಂತೆ ಕೇವಲ ಹಣವಿದ್ದ ಮಾತ್ರದಿಂದ ಶಾಂತಿ ಮೊರಕಮ. ಅದನ್ನು ಸದುಪಯೋಗಗೊ ಳಿಸಿದಲ್ಲಿ ಮಾತ್ರ ಅನನು ಶಾಂತಿಯನ್ನು ಪಡೆ ಯಬಲ್ಲ. ಆದರಂತೆ ಪಾಠವನ್ನು ಎಡೆಬಿಡದೆ ಓದಿ ದ್ದಿಗ್ರಿಯನ್ನೂ ಪಡೆಯ ಬಹುದು. ಆದರೆ ತನಗೆ ಮೊತೆ ಉದ್ಯೋಗವನ್ನು ಅಜ್ಜುಕಟ್ಟಾಗಿ ನಡೆ ಯಿಸಿಕೊಂಡು ಹೋಗಬೇಕಾದರೆ ಅವನಲ್ಲಿ ಕಲಾ ಚಾತುರ್ಯ ಇರಬೇಕಾಗುತ್ತದೆ. ಅದ್ದರಿಂದ ವಿ ದ್ಯಾ ಸಂಸ್ಥೆಗಳಲ್ಲಿ ಪಾಠಗಳ ಜೊತೆಯಲ್ಲಿ ಪಾಠೇ ತರ ಚಟುವಟಿಕೆಗಳಿಗೂ ಸಮಾನ ಪ್ರಾಧಾನ್ಯ ವೀಯಬೇಕು" ಎಂದು ವಿದ್ಯಾದಾಯಿನೀ ಹೈ ಯರ್ ಸೆಕೆಂಡರಿ ಶಾಠೆಯ ವಾರ್ಷಿಕೋತ್ಸವದ ಅಧ್ಯಕ್ಷ ಸ್ಥಾನದಿಂದ ಪಣಂಬೂರು ಕೇಂದ್ರೀಯ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಪಿ. ಯಂ ವೆಂಕಟರಾಮಯ್ಯ ಇವರು ನುಡಿದರು. ಆರಂಭದಲ್ಲಿ ಸ್ವಾರ್ಥನೆಯೊಡೊಡನೆ ಶಾಲೆಯ ಮೆನೇಜರರೂ, ರಾಷ್ಟ್ರಪ್ರಶಸ್ತಿ ವಿಜೇತರೂ ಆದ ಎಂ. ವಾಸುದೇವರಾಯರು ಸ್ವಾಗತ ಭಾಷಣವ ನ್ನಿಯಲು ಶಾಠೆಯ ಹಳೆಯ ವಿದ್ಯಾರ್ಥಿಗಳಾದ ಬಿ. ಶಾಂತಾರಾಮ ಸೋಮಯೊಜೆ, ಸೆಕ್ಷನ್ ಆಫೀಸರ್, ಬಂದರ ಯೋಜನೆ, ಪಣಂಬೂರು- ಇವರು ಶಾಲೆಯಲ್ಲಿ ಕಲಿತ ತನ್ನ ಬಾಲ್ಯದ ಅನು ಭವಗಳನ್ನು ಕಾವ್ಯ ಶೈಲಿಯಲ್ಲಿ ವಿವರಿಸುತ್ತ ಸ್ವ ಸ್ತಿವಾಚನ ಗೈದರು ಮುಖ್ಯೋಪಾಧ್ಯಾಯ ಶ್ರೀ ಪಿ ನಾರಾಯಣಾಚಾರ್, ಇವರು ವಾರ್ಷಿಕ ವ ರದಿಯನ್ನು ಓದಲು ಶ್ರೀ ವೆಂಕಟಕೃಷ್ಣರಾಯ ರು ಸಂದೇಶವಾಚನ ಗೈದರು.

ಅಧ್ಯಕ್ಷರು ಪಾಠ ಮತ್ತು ಪಾಠೇತರ ಚಟು ವಟಿಕೆಗಳಲ್ಲಿ ವಿಜೇತರಾದವರಿಗೆ ಬಹುಮಾನವ ನ್ನಿಯಲು ವಿದ್ಯಾದಾಯಿನೀ ಸಂಸ್ಥೆಯ ಕೋ ಶಾಧಿಕಾರಿಗಳಾದ ಎಡ್ವಕೇಟ್ ಪಿ ಶ್ರೀನಿವಾಸ ರಾವ್, ಇವರು ಧನ್ಯವಾದಗಳನ್ನರ್ಪಿಸಿದರು. ಕೊನೆಯಲ್ಲಿ ಸುನೋರಂಜನಾ ಕಾರ್ಯಕ್ರಮವಾ ಗಿ ಸ್ಥಳೀಯ ವಿದಾರದ ಶ್ರೀ ಪುಟ್ಟಸ್ವರ ಶಿಷ್ಯರಿಂದ ಇಂಗ್ಲಿಷ್, ಹಿಂದಿ ನಾಟಕ, ಗೀತ ನಾಕಟ, ಯಕ್ಷಗಾನ ಕುಣಿತವರ ಕಾಳಗ, ಮೊದಲಾದ ವಿಶೇಷ ಕಾರ್ಯಕ್ರಮಗಳು ಜರಗಲು ಜನ-ಗಣ ಮನದೊಂದಿಗೆ ಆಂತಿನ ಕಾರ್ಯಕ್ರಮವು ಮುಕಾ ಯವಾಯಿತು.

ಅದೇ ದಿನ ಬೆಳಿಗ್ಗೆ ಮುಖ್ಯೋಪಾಧ್ಯಾಯರು ರಾಷ್ಟ್ರಧ್ವಜವನ್ನು ಅರಳಿಸಲು ವಿದ್ಯಾರ್ಥಿಗಳ ಭದ್ಮವೇಶ ಸ್ಪರ್ಧೆ ಮೊದಲಾದ ಕಾರ್ಯಕ್ರಮ ಗಳು ನಡೆದ ಬಳಿಕ ವಿದ್ಯಾದಾಯಿನೀ ಸಂಸ್ಥೆ ಯೊಳಗಿನ ಶಾಲೆಗಳ ವಿದ್ಯಾರ್ಥಿಗಳೆಲ್ಲರಿಗೂ ಸಿಹಿ ತಿಂಡಿಯನ್ನು ಹಂಚಲಾಗಿತ್ತು.

'ಯುವಜನ ಮೇಳ'ದ ಉದ್ಘಾಟನೆ

ಉದಯವಾಣಿಯ ಆಶ್ರಯದಲ್ಲಿ ಮಣಿಪಾಲ ದ ರೋಟರ್ಯಾಕ್ಟ್ ಕ್ಲಬ್, ಎಂ. ಜಿ ಎಂ ಕಾ ಲೇಜು ಪರಿಸರದಲ್ಲಿ ಜರಗಿಸಿದ 'ಯುವಜನ ಮೇಳ'ವನ್ನು ಮಣಿಪಾಲ ಕೆ ಎಂ ಸಿ.ಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಎಸ್. ವಿ ಸುರೇಜ್ ಕರ್ ರವರು ತಾ 15ರಂದು ಉದ್ಘಾಟಿ ಸುತ್ತಾ, ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳ ಬಗ್ಗೆ ತಾವೇ ಯೋಚಿಸಿ ಕೊಳ್ಳಬೇಕು ಈ ದೃ ಷ್ಟಿಯಿಂದ ಮಣಿಪಾಲದ ರೋಟರ್ಯಾಕ್ಟ್ ಕ್ಲಬ್ಬು ಜರಗಿಸುತ್ತಿರುವ ವಿಚಾರಗೋಷ್ಠಿಯೂ ಅತ್ಯಂತ ಪುಷ್ಕಾದ್ದಾಗಿದೆ. ಈ ದಿಶೆಯಲ್ಲಿ ರೋಟರ್ಯಾಕ್ಟ್ ನ ಸೇವೆಯು ಅತ್ಯಂತ ಸ್ಮರಣೀಯವೂ ಆಗಿದೆ ಎಂದು ನುಡಿದರು.

ಡಾ। ಟಿ. ಎಂ. ಎ ಪೈಯವರು ಮೂತಾಡಿ ವಿದ್ಯಾರ್ಥಿಗಳ ಮನಸ್ಸನ್ನು ಮೆನೇಜ್‌ಮೆಂಟಿನವ ರು ಹಾಗೂ ಹಿರಿಯರು ಅರಿಯಲು ಇಂತಹ ಸೆ ಮಿನಾರ್ ಅತ್ಯಂತಉಪಕಾರಿ. ಈ ರೀತಿಯ ವಿಚಾ ರ ವಿನಿಮಯಗಳಿಂದ ಮೆನೇಜ್‌ಮೆಂಟ್, ವಿದ್ಯಾ ರ್ಥಿ ಮತ್ತು ಅಧ್ಯಾಪಕರುಗಳಲ್ಲಿ ಪರಸ್ಪರ ತಿಳಿವ ಳಿಕೆ ಬೆಳೆಯಲು ಸಹಕಾರಿ ಎಂದು ನುಡಿದರು.

ನಂತರ ಜರಗಿದ ವಿಚಾರಗೋಷ್ಠಿಯ ಆರಂ ಭದಲ್ಲಿ ರೋಟರ್ಯಾಕ್ಟ್ ಸಭಸ್ಯೆ ಕುಗಿ ರಾಜೇಶ್ವರಿ ಸ್ವಾಗತಿಸಿದರು. ಕ್ಲಬ್ ಅಧ್ಯಕ್ಷ ಶ್ರೀ ಮಿರ್ಜ ಕ್ಲಬ್ಬಿನ ಧ್ಯೇಯೋದರ್ಶಗಳನ್ನೂ ಅದು ನೂಡಿರು ವ ಸೇವೆಯನ್ನೂ ವಿವರಿಸಿದರು ಕ್ಲಬ್ಬಿನ ಬೇರ್ ಮೆನ್ ಶ್ರೀ ಕೊ. ಮ. ಕಾರಂತರೂ ಈ ಸಂದ ರ್ಭದಲ್ಲಿ ಮಾತಾಡಿ ವಿದ್ಯಾರ್ಥಿಗಳಿಗೆ ತಮ್ಮ ಸಮ ಸ್ಯೆಗಳ ಕುರಿತು ಚಿಂತನೆ ನಡೆಸುವಂತೆ ಕರೆ ನೀ ಡಿದರು.

ದ. ಕ. ದ ವಿವಿಧ ಕಾಲೇಜುಗಳ 41 ಪ್ರತಿ ನಿಧಿಗಳು ಈ ವಿಚಾರ ಗೋಷ್ಠಿಯಲ್ಲಿ ಭಾಗವಹಿ ಸಿದ್ದರು. 'ವಿಶ್ವವಿದ್ಯಾನಿಲಯದ ಆಡಳಿತೆಯಲ್ಲಿ ವಿದ್ಯಾರ್ಥಿಗಳ ಸ್ಥಾನ', 'ವಿದ್ಯಾರ್ಥಿ ಅಧ್ಯಾಪಕ ಸಂಬಂಧ', 'ಪರೀಕ್ಷಾ ವಿಧಾನ', 'ವಿದ್ಯಾರ್ಥಿ ಸಮಾಜ ಸೇವೆ', 'ಶಿಸ್ತು ರಕ್ಷಣೆಯಲ್ಲಿ ವಿದ್ಯಾ ರ್ಥಿಗಳ ಹೊಣೆ', 'ವಿದ್ಯಾರ್ಥಿ ಮತ್ತು ರಾಜಕೀ ಯ', 'ಆದರ್ಶ ಶಿಕ್ಷಕ', 'ಆದರ್ಶ ವಿದ್ಯಾ ರ್ಥಿ', ಹೀಗೆ ಆನೇಕ ಶೈಕ್ಷಣಿಕ ಸಮಸ್ಯೆಗಳನ್ನು ಪ್ರತಿನಿಧಿಗಳು ಚಿಳ್ಳ ಗುಂಪುಗಳಾಗಿ ಚರ್ಚಿಸಿ ವರದಿ ಗೂಡಿಸಿದರು.

ದ. ಕ. ಜಿಲ್ಲೆಗೊಂದು ವಿಶ್ವವಿದ್ಯಾಲಯ ಅವಶ್ಯ

ಕಳೆದ ತಾ. 22ರಂದು ಡಾ। ಟಿ. ಟಿ. ಎಂ. ಎ ಪೈಯವರು ಮೂಡಬಿದಿರೆಯ ಮಹಾವೀರ ಕಾಲೇಜಿನ ವಿದ್ಯಾರ್ಥಿನಿ ನಿಲಯವನು ಶ್ರಮು ಖ ಸಮಾಜ ಸೇವಾ ಕಾರ್ಯಕರ್ತ ಶ್ರೀ ಎಸ್. ಎನ್. ಮೂಡಬಿದ್ರಿಯವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಆರಂಭದಲ್ಲಿ ಶ್ರೀ ಜಿ. ವಾಸು ದೇವ ಪೈಯವರು ಸ್ವಾಗತಿಸಿದರು. ಶ್ರೀ ಜಿ. ಎನ್. ಭಟ್ಟರು ಸಂದೇಶಗಳನ್ನೋದಿದರು.

ಡಾ| ಪೈಯವರು ಮೂತಾಡಿ, ಮೈಸೂರು ರಾಜ್ಯದ ಇತರ ಎಲ್ಲ ಜಿಲ್ಲೆಗಳಿಗಿಂತ ದ. ಕ. ಜಿಲ್ಲೆಯ ವಿದ್ಯಾರ್ಥಿಗಳು ಬುದ್ಧಿವಂತರು. ಇಲ್ಲಿ ಯ ಶಿಕ್ಷಣ ಉಚ್ಚ ಮಟ್ಟದ್ದು. ಭೋಜನಾ ಸೌಕರ್ಯಗಳು ರಾಜ್ಯದ ಇತರ ಜಿಲ್ಲೆಗಳ ಶಾ ಲಾ ಕಾಲೇಜುಗಳಿಗಿಂತ ಇಲ್ಲಿ ಹೆಚ್ಚಾಗಿವೆ. ವಿ ದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿದೆ. ನಮ್ಮ ಜಿ ಲ್ಲೆಯ ಶಿಕ್ಷಣದ ವೈಶಿಷ್ಟ್ಯ ವನ್ನುಳಿಸಬೇಕಾದರೆ ನಮ್ಮ ಜಿಲ್ಲೆಗೊಂದು ವಿಶ್ವವಿದ್ಯಾಲಯ ಅವಶ್ಯ ವೆಂದರು.

ಪ್ರಿನ್ಸಿಪಾಲ್ ಪ್ರೊ| ಯು. ಶ್ರೀನಿವಾಸ ಉ ಪಾಧ್ಯಾಯರು ವರದಿವಾಚನ ಗೈದರು. ಅಂತ್ಯದ ಲ್ಲಿ ಶ್ರೀ ಬಿ. ಟಿ. ಆಚಾರ್‌ರವರು ವಂಡನೆಗಳ ನ್ನರ್ಪಿಸಿದರು.

ಸಂದರ್ಶಿಸಿ!! — ಸಂತೃಪ್ತರಾಗಿರಿ!!

ಬ್ಲೂಜಾಗದಾ ವಜ್ರಗಳಿಗೆ ಅಧುನಿಕ ಶೈಲಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಏಡಿಯಾಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ

ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಜುಲ್ಫಿಕರ್ ಅಲಿ ಭುಟ್ಟೋ

ಯದ್ವಾ ತದ್ವಾ ವರ್ತಿಸುತ್ತಾರೆ

ಬಾಂಗ್ಲಾದೇಶದ ಉದಯವಿಂದು ಕತ್ತಲೆಯಲ್ಲೂ ಕಾಣಬಹುದಾದ ಸತ್ಯ. ಭಾರತವೇ ಮೊದಲುಗೊಂಡು ಬ್ರಹ್ಮ, ನೇಪಾಳ, ಬಾರ್ಬಡೋಸ್, ಮಂಗೋಲಿಯಾ, ಯುಗೊಸ್ಲಾವಿಯಾ, ಪೋಲೆಂಡ್ ಮೊದಲಾದ ಪುಧ್ಯಮ—ಚಿಕ್ಕ ದೇಶಗಳು ಆದನ್ನು ಮನ್ನಿಸಿದುವು.

ಆವಶ್ಯವೆನಿಸಿದಾಗ ಮನ್ನಣೆ ನೀಡುವುದಾಗಿ ಸಾರಿದ್ದ ಸೋವಿಯತ್ ರಶ್ಯಾವು ತನ್ನ ವಾಗ್ದಾನವನ್ನು ಕ್ಷಿಪ್ರವಾಗಿಯೇ ಪರಿವಾಲಿಸಿತು. ಬ್ರಿಟನ್–ಫ್ರಾನ್ಸ್ ಆಸ್ಟ್ರೇಲಿಯಾ ಮೊದಲಾದುವು ಇನ್ನೂ ಹಲವು ದೇಶಗಳನ್ನು ಕೂಡಿಕೊಂಡು ಒಮ್ಮೆಗೇ ಮನ್ನಣೆ ನೀಡುವ ಬಗ್ಗೆ ಸರ್ಯಾಲೋಚನೆ ನಡೆಯುತ್ತಿದೆ.

ಪಾಕ್ ಅಧ್ಯಕ್ಷ ಭುಟ್ಟೋ ಮಹಾಶಯರು ವಿಶ್ವದ ರಾಷ್ಟ್ರಗಳನ್ನು ಎಚ್ಚರಿಸಿದ್ದರು—ಬಾಂಗ್ಲಾ ಮನ್ನಣೆ ನೀಡಿದರೆ, ಪಾಕಿಸ್ತಾನವು ರಾಜ ತಾಂತ್ರಿಕ ಸಂಬಂಧಗಳನ್ನು ಕಡಿದುಕೊಳ್ಳುವುದೆಂದು ಒಂದೊಂದು ದೇಶವೂ ಬಾಂಗ್ಲಾ ದೇಶವನ್ನು ಮನ್ನಿಸುತ್ತ ಬಂದಂತೆ ಒಂದೊಂದರೊಡನೆಯೇ ಭುಟ್ಟೋ ತನ್ನ ಸಂಬಂಧವನ್ನು ಕಡಿದುಕೊಳ್ಳುತ್ತ ಬಂದರು.

ಬ್ರಿಟನ್ನಾದಿಗಳು ಭುಟ್ಟೋರ ಬಗ್ಗೆ ತೀವ್ರ ಕಳಕಳಿ ವಹಿಸಿವೆಯಂತೆ. ಅವು ಬಾಂಗ್ಲಾ ದೇಶೋದಯವನ್ನು ಕಡೆಗಣಿಸಲು ಸಿದ್ಧವಿಲ್ಲವಂತೆ. ಆದರೊಂದಿಗೇ ಪಾಕಿಸ್ತಾನವು ಏಕಾಂಗಿಯಾಗುವುದನ್ನೂ ಅವು ನೋಡಲಾರವಂತೆ.

ಆದುದರಿಂದ ಹತ್ತಾರು ರಾಷ್ಟ್ರಗಳನ್ನು ಕೂಡಿ ಏಕ ಕಾಲದಲ್ಲೇ ಮನ್ನಣೆ ನೀಡಿದರೆ ಭುಟ್ಟೊ ಮಹಾಶಯರು ರಾಜ ತಾಂತ್ರಿಕ ಸಂಬಂಧವನ್ನು ಕಡಿದುಕೊಳ್ಳಲು ಹಿಂಜರಿದಾರು ಎಂಬ ಆಸೆ ಅವುಗಳಿಗೆ.

ಆದರೆ, ಮಹಾಶಯ ಭುಟ್ಟೊ ವರ್ತನೆ ವಿಲಕ್ಷಣ. ಅವರ ಬಗ್ಗೆ ಅವರ ಶತ್ರುವಿಗೂ ಕರುಣೆ ಮೂಡಬೇಕು. ಘೋರ ವಿಧ್ವಂಸಾನಂತರ ತನ್ನ ಪ್ರಜೆಗಳನ್ನು ಹೇಗೆ ಸಾಂತ್ವನಗೊಳಿಸಬೇಕೆಂಬುದೇ ಅವರಿಗೆ ಅರಿಯದು. ಆದುದರಿಂದಲೇ ಅವರು ಪೂರ್ವಾಪರ ವಿರೋಧವಾದ ಮಾತುಗಳನ್ನು ಬೊಗಳುತ್ತಾರೆ.

ಅವರ ಈ ಬೊಗಳಿಕೆಯ ಹಿಂದಿರುವ ಉದ್ದೇಶ ಬಾಂಗ್ಲಾ ತಮ್ಮ ಕೈ ತಪ್ಪಿ ಹೋಗಿಸೆ; ಅದನ್ನು ಮರಳಿ ತರುವುದು ಸಾಧ್ಯವೇ ಇಲ್ಲವೆಂದು ಪಾಕ್ ಅಂಧಮತೀಯ ಭೀರುಗಳಿಗೆ ಮನವರಿಕೆ ಮಾಡಿರುವುದು, ಈ ಆಕ್ರಮಣಕ್ಕೆ ಭಾರತವೇ ಕಾರಣವೆಂದು ತೋರಿಸಿ ಕೊಡುವುದು.

ಆದುದರಿಂದ ಭಾರತದೊಡನೆ ಸಹಬಾಳ್ವೆಯನ್ನು ಬಯಸುವ ಅವರು ವಸ್ತು ಸ್ಥಿತಿಯನ್ನು ಗೌರವಿಸಲು ಮೊನ ಮೇಷವೆಣಿಸುತಿದ್ದಾರೆ—ಭಾರತಕ್ಕೂ, ಅದರ ಸವಾರ್ಧಕಿಗೂ ಬೆದರಿಕೆಯನ್ನೂ ಹಾಕುತ್ತಾರೆ..

ಬಾಂಗ್ಲಾ ದೇಶಕ್ಕೆ ಹಲವು ದೇಶಗಳು ಈಗಾಗಲೇ ಮನ್ನಣೆ ನೀಡುವ ಉದ್ದೇಶ ಹೊಂದಿದರೂ ಅರಬ ಜಗತ್ತು ಈ ಬಗ್ಗೆ ಹೆಚ್ಚು ಉತ್ಸುಕವಾದಂತಿಲ್ಲ. ಆಫ್ರೇಸ್ಯಾ ದೇಶಗಳ ಸಮ್ಮೇಳನವು ವಸ್ತು ಸ್ಥಿತಿಯನ್ನು ಪರಿಶೀಲಿಸಲು ನೇಮಿಸಿದ ಸಮಿತಿಯು ವರದಿ ಬಂದ ಕೂಡಲೇ ಬಾಂಗ್ಲಾ ದೇಶವನ್ನು ಪಾಲುಗೊಂಡ ದೇಶಗಳು ಮನ್ನಿಸಲು ಮುಂದೆ ಬರಬಹುದು.

ಆದನ್ನು ತಡೆಯುವುದಕ್ಕಾಗಿಯೇ ಭುಟ್ಟೋ ಮಹಾಶಯರು ಅರಬ ರಾಜ್ಯಗಳ ಸಂಚಾರಕ್ಕೆ ಹೊರಟಿರು. ಟರ್ಕಿಯೊಂದನ್ನು ಬಿಟ್ಟು ಉಳಿದೆಡೆಯಲ್ಲಿ ಅವರಿಗೆ ಖಚಿತವಾದ ಭರವಸೆ ದೊರೆಯಲಿಲ್ಲ.

ಟರ್ಕಿ ಹಿಂದಿನಿದಲೂ ಜಾತ್ಯಂಧ ದೇಶ. ಪಾಕ್ ಮುಸ್ಲಿಮವಾದವನ್ನು ಪುರಸ್ಕರಿಸುತ್ತ ಬಂದ ರಾಷ್ಟ್ರ- ಜಂಕಾರಾದಲ್ಲಿ ಭುಟ್ಟೊ ಮತ್ತು ಟರ್ಕಿ ಅಧ್ಯಕ್ಷ ಸುನಾಯ್ ಅವರು :ಒಂದಾಗಿ ಘೋಷಿಸಿದರು— ಬಾಂಗ್ಲಾಕ್ಕೆ ಮನ್ನಣೆ ನೀಡುವುದರಿಂದ ಪಾಕಿಸ್ತಾನ ಮತ್ತು ಅದರ ಹಿಂದಿನ ಪೂರ್ವ ವಿಭಾಗಗಳ ನಡುವಣ ಸಂಬಂಧಗಳಲ್ಲಿ ಹೊಸ ಕ್ಲೇಷಗಳು ಉಂಟಾಗುತ್ತವೆ.

ತನ್ನೊಬ್ಬನ ಕಂರ ಬಲಕ್ಕೆ ವಿಶಾಲ ಜಗತ್ತು ಸೊಪ್ಪು ಹಾಕದ್ದರಿಂದ ಭುಟ್ಟೋ ಸುನಾಯ್‌ಯವರದನ್ನೂ ಕೂಡಿಸಿ ಕೂಗಿದರು.

ಆಮೆರಿಕೆಯು ತನ್ನ ಶಸ್ತ್ರಾಸ್ತ್ರಗಳನ್ನು ಟರ್ಕಿ–ಜೋರ್ಡಾನ್‌ಗಳ ಮೂಲಕ ಪಾಕಿಸ್ತಾನಕ್ಕೆ ಕಳಿಸಿದ್ದುಂಟು. ಈಗ ಆ ಸೊರಿಕೆಯು ಬಾಂಗ್ಲಾ ನೀತಿಯೂ ಟರ್ಕಿಯ ಮೂಲಕ ಜಗತ್ತಿಗೆ ಮತ್ತೊಮ್ಮೆ ಬಹಿರಂಗವಾಯಿತೆನ್ನೋಣವೆ?

ಈ ಘೋಷಣೆಯನ್ನು ಯಾರು ಕೇಳಬೇಕು? ಅರಬ ದೇಶಗಳು ಮಾತ್ರ ಕೇಳಬಹುದೋ ಏನೋ! ಆಸ್ಪೇಸ್ಯಾದಲ್ಲಿ ಕಳೆದುಕೊಳ್ಳುತ್ತಿರುವ ತನ್ನ ಪ್ರಭಾವವನ್ನು ಮರುಭೂಮಿ ಅರಬ ಪ್ರದೇಶದಲ್ಲಾದರೂ ಉಳಸಲೆಳಸುವ ಆಮೆರಿಕೆ ಕೇಳಲೇ ಬೇಕು.

ಭಾರತದ ಪ್ರಧಾನಿ ಶ್ರೀಮತಿ ಗಾಂಧಿಯವರು ಭುಟ್ಟೋ ಮಹಾಶಯರಿಗೆ ಕರೆ ನೀಡಿದ್ದರು– ಭಾರತ ಉಪಖಂಡದಲ್ಲಿ ಶಾಂತಿಯನ್ನು ಬಯಸುವ ನೀವು, ಉಪಖಂಡದ ದೇಶಗಳೊಡನೆ ಮಾತುಕತೆಗೆ ಬನ್ನಿ.

ಆದರೆ; ಭುಟ್ಟೋಗೆ ಮನಸ್ಸಿಲ್ಲ. ಅವರು ಬಾಂಗ್ಲಾದೇಶವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ. ತನಗೆ ಶೇಕ ಮುಜಿಬುರರೊಡನೆ ಮಾತಾಡಲಿದೆ–ಅವರ ಕೊನೆಯ ಮಾತು ಕೇಳಲಿದೆ ಎನ್ನುತ್ತಾರೆ ಜನರು.

ಪಾಕಿಸ್ತಾನದೊಡನಿರುವ ಸಂಬಂಧಕ್ಕೆ ಮಂಗಳವನ್ನೆಂದೊ ಹಾಡಿದ್ದ ಮುಜಿಬುರ ಭರತವಾಕ್ಯವನ್ನು ಭುಟ್ಟೊ ಇನ್ನೂ ನಂಬುವುದಿಲ್ಲ—ಪಾಕಿಸ್ತಾನದ ಜನತೆಯನ್ನು ಸಮಾಧಾನ ಪಡಿಸಲು ಈ ಅಪನಂಬಿಕೆ ಸಹಾಯಕವಾಗುತ್ತದೆ.

ಡಾಕ್ಕಾದಿಂದ ಭಾರತದ ಸೇನೆ ಹಿಂದೆ ಮರಳ ಬೇಕು; ತಾನು ಮುಜಿಬುರ್‌ರೊಡನೆ ಮಾತನಾಡಬೇಕು; ಬಾಂಗ್ಲಾವನ್ನು ಮತ್ತೆ ಪೂರ್ವಪಾಕಿಸ್ತಾನವೆಂದು ಅವರು ಒಪ್ಪಿಕೊಳ್ಳುವಂತಾಗಬೇಕು. ಇದು ಭುಟ್ಟೋ ಕನಸು.

—ಇದು ಕನಸು ಅಲ್ಲ; ಪಾಕ್ ಪ್ರಜೆಗಳನ್ನು ಸಾಂತ್ವನಗೊಳಿಸಲು ಬಳಸುವ ಆರ್ಮ್ ಕಂಟೆಂಟ್ ಟಾನಿಕ್ಕು.

ಭಾರತದ ಸೇನೆ ಅನಿವ್ಯಕತೆಗಿಂತ ಒಂದು ಕ್ಷಣವೂ ಡಾಕ್ಕಾದಲ್ಲಿ ಇರುವುದಿಲ್ಲ ಅದು ಹಿಂದೆ ಬಂದೇ ಬರುತ್ತದೆ.

ಬಾಂಗ್ಲಾ ನಾಯಕರು ಪಾಕಿಸ್ತಾನದೊಂದಿಗೆ ನೂತುಕತೆಗೆ ತೊಡಗಬೇಕಾದರೆ ಬಾಂಗ್ಲಾಕ್ಕೆ ಮನ್ನಣೆ ನೀಡುವ ಶರ್ತ ಪೇರಿದ್ದಾರೆ. ಇದನ್ನು ಉಡೇರಿಸದೆ ಮಾತಿಲ್ಲವಾದರೆ, ಉಡೇರಿಸದೆ ಮಾತೇಕೆ?

ಅದನ್ನೇ ಶ್ರೀಮತಿ ಗಾಂಧಿ ಹೇಳಿದ್ದಾರೆ. ಬನ್ನಿ ನಾವು ನೀವು ಮತ್ತು ಮುಜಿಬ್ ಕೂತು ಉಪಖಂಡದಲ್ಲಿನ ಶಾಶ್ವತ ಶಾಂತಿಯ ಬಗ್ಗೆ ವಿಚಾರ ವಿನಿಮಯ ಮಾಡೋಣ ವಸ್ತುಸ್ಥಿತಿಯನ್ನು ನೀವು ಒಪ್ಪಿಗಳೆದರೂ ಅದು ಒಪ್ಪಲಾಗುವುದಿಲ್ಲ.

ಭುಟ್ಟೋ ವಾದ ಬೇರೆ. ತ್ರಿಪಕ್ಷೀಯ ಮಾತುಕತೆ ಅಸಾಧ್ಯ. ಭಾರತದೊಡನೆ ನಾನು ಪ್ರತ್ಯೇಕವಾಗಿ ಮಾತಾಡುತ್ತೇನೆ ಬಾಂಗ್ಲಾ ನಾಯಕರನ್ನೂ ಬೇರೆಯಾಗಿಯೇ ಭೇಟಿ ಮಾಡುತ್ತೇನೆ. ಇಬ್ಬರನ್ನೂ ಒಂದೇ ಮೇಜಿನೆದುರು ಕಾಣಲಾಗದು.

ಭುಟ್ಟೋರ ಈ ನಿಲುವಿಯಿಂದ ಯಾವ ಸ್ಪಯೋಜನವೂ ಆಗದು ಅವರ ಅಂಕಾರಾ ಸಂದರ್ಶನ ಅರಬ ದೇಶಗಳನ್ನು ಮತ್ತೆ ಅಂಧಕಾರದಲ್ಲಿ ಮುಳುಗಾಡಿಸುವಲ್ಲಿ ಸಶಕ್ತವಾದೀತೋ ಏನೋ!

ಇದೀಗ ಭುಟ್ಟೊ ಕೆಂಪು ಚೀನಕ್ಕೆ ದರ್ಶನ ನೀಡುತ್ತಾರೆ. ಭಾರತದ ಮೇಲೆ ಪಾಕ್ ಯುದ್ಧ ಸಾರುವುದಕ್ಕೆ ಕೆಲವು ದಿನ ಮೊದಲು ಅವರು ಆಕಸ್ಮಿಕವಾಗಿ ಪೀಕಿಂಗಿಗೆ ಹಾರಿದ್ದರು.

ಆಗ ಅವರು ಪಾಕ್ ನಿಯೋಗವೊಂದರ ನಾಯಕರು. ಹದಿಮೂರು ಕೋಟಿ. ಪಾಕಿಸ್ತಾನಿಗಳ ನಿಯೋಗದ ಅಧ್ಯರ್ಯು ತಾನು ಎಂದು ಹೇಳಿಕೊಂಡರು. ಈಗ ಅದೇ ಪಾಕಿಸ್ತಾನದ ಸರ್ವಾಧಿಕಾರಿಯಾಗಿ ಭೇಟಿ ನೀಡಿದರು.

ಅವರ ಪಾಕಿಸ್ತಾನ ಬರಿಯ ಐದೂವರೆ ಕೋಟಿಯದ್ದೆಂದು ಲೋಕ ಹೇಳುತ್ತದೆ. ಪೀಕಿಂಗು ಅಂದೇ ಇನ್ನಾವೂಬಾದಕ್ಕೆ ಸಂಪೂರ್ಣ ಸಹಕಾರದ ಭರವಸೆ ನೀಡಿತ್ತು; ಆದರೆ, ಅದು ಯಾವಸಹಾಯವನ್ನೂ ನೀಡಲಿಲ್ಲ.

ಇದೀಗ, ಭುಟ್ಟೊ ತನ್ನ ಮಿತ್ರರಾರೆಂದು ಕಂಡುಕೊಳ್ಳಲು ಪೀಕಿಂಗಿಗೆ ಹೋದರು. ಬಾಯ್ಮಾತಿನ ಸಹಕಾರ ಪಡೆದು ಬಂದರು; ಕೆಲ ಮಟ್ಟಿನ ಸೈನಿಕ ನೆರವೂ ಸಂಪಾದಿಸಿರಬಹುದು.

(ಎಂಟನೇ ಪುಟ ನೋಡಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ದ ದರ್ಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಇದು ನಮ್ಮ ಭಾರತ

ಸಜ್ಜನರ ನಡೆ ತೀರ್ಥ

"ಬನ್ನಿ, ಬನ್ನಿ ಸೇರ್‌ಜಿ, ಬನ್ನಿ." ತನ್ನ ಮುಗಿಲೆಯ ಮೆಟ್ಟಲನ್ನೇರುತಿದ್ದ ಗಜಾನನ ನನ್ನು ಸಖಾರಾಮನು ಸ್ವಾಗತಿಸಿದನು. ಆತನ ಕೆಳಗುಂವಿನ ಮುಖವನ್ನು ನೋಡುತ್ತ ಕೇಳಿದನು-'ನಿನು ಮಿತ್ರ, ಏನೋ ತೊಂದರೆಯಿಂಗಳಪಟ್ಟಂತೆ ತೋರುತ್ತದೆ....."

ಗಜಾನನನು ತನ್ನ ಸಂಕಟವನ್ನು ತೋಡಿಕೊಂಡನು— "ನೋಡು, ನನ್ನ ಹುಟ್ಟೂರಿನ್ನ ಮಂಗಳೆಯನ್ವಿನೆಯೆಂದು ಸುದ್ದಿ ಬಂದಿದೆ. ನಾನಿಗಲೇ ಅಲ್ಲಿಗೆ ಹೋಗಲೇ ಬೇಕು ಖರ್ಚಿಗೆಂದು ಸ್ವಲ್ಪ ಹಣ ತೆಗೆದು ಕೊಳ್ಳುತ್ತೇನೆ. ಬೇಗನೆನ್ನನ್ನು ನೀನು-ಇಟ್ಟುಕೊಳ್ಳು. ಇನ್ನೊಂದಕತೆಯೊಮಗಿವಾಗ ತೆಗೆದುಕೊಳ್ಳುತ್ತೇನೆ.'

ಲೆಕ್ಕ ಪುಸ್ತಕಗಳನ್ನು ತೆರೆದು ನೋಡಿದಾಗ, ಎರಡು ಸಾವಿರ ರೂಪಾಯಿಗಳಷ್ಟು ಸಾಲುಗಳಿದ್ದುವು. ನನ್ನ ಲಾಭಾಂಶವನ್ನು ಮುಂದಿಟ್ಟುಕೊಂಡು ಸಖಾರಾಮನ ಪೆಸರಿಗೆ ಗಜಾನನನು ಒಂದಂಷ್ಟನ್ನು ಜಮಾ ಮಾಡಿದನು. ಗಜಾನನನು ಮಹಾರಾಷ್ಟ್ರದ ಚಿಪಳೂಣಿಯೆಂಬ ಹಳ್ಳಿಯಲ್ಲಿ ಮಟ್ಟಿ ವ್ಯಾಪಾರದ ವ್ಯಾಪಾರ ಮಾಡುತಿದ್ದನು. ಮೂಲಿನ ಬೆಲೆ ಎರಡು ಸಾವಿರವಿದ್ದರೂ ಮೂರುಕಟ್ಟೆ ಬಹಳ ತೇಜಿಯೊಗಿನ್ದುದರಿಂದ ಅವುಗಳ ಬೆಲೆ ಹೆಚ್ಚಿತ್ತು. ಅದುವರಿಂದಲೇ ಒಮ್ಮೊಂದು ಹಣ ಅವನ ಹೆಸರಿಗೆ ಜಮೆಯೊಗಿತ್ತು.

ಗಜಾನನನು ಬಾಯಿ ಎಂಭೆತ್ತು ರೂಪಾಯಿಗಳನ್ನು ತೆಗೆದುಕೊಂಡನು. ಉಳಿದ ಹಣವನ್ನು ಸಖಾರಾಮನ ಬಳಿ ಬಿಟ್ಟು ತನ್ನೂರಿಗೆ ಹೊರಟು ನಿಂತನು. ಹಳ್ಳಿಯ ಪಾಠಾಯಪ್ಪಿ ಲೂಟಿಗಾರರ ಕೈಗೆ ಸಿಕ್ಕುವಿವ್ವನು. ಅವರು ಪಪ್ಪು ಲಾರಿಗಳಿಂದ ಹೊಡೆದು ಗಜಾನನನ್ನು ಮೂರ್ಛೆಗೊಳಿಸಿದರು. ಅವನ ಬಳಿಯಿದ್ದ ಹಣವನ್ನು ಕಿತ್ತುಕೊಂಡು ಓಡಿ ಹೋದರು. ಎಚ್ಚರವಾಗುವಾಗ, ಅಕ್ಕಪಕ್ಕದ ಹಳ್ಳಿಗರು ತನ್ನ ಸುತ್ತಲೂ ಸೇರಿರುವುದನ್ನು ಮಾತುತ್ತಿರುವುದು ಗಜಾನನನ ಅನುಭವಕ್ಕೆ ಬಂತು. ಸತಾರಾ ನಗರ ಪುಕ್ಕು ತನ್ನಹಳ್ಳಿ ಮಂಡಲಾಯಾ ದಾರಿಯು ಬಂದು ಕಾಡು ಹಳ್ಳಿಯಿಲ್ಲಿ ಈ ಮಾರಂಕ ಘಟನೆ ಜರುಗಿತ್ತು.

ಗಜಾನನನು ಧಾರ್ಮಿಕವಿಷಯ ಅಭಿಪ್ರಾಯಿಯಲ್ಲಿ ಉಳಿದು ಕೂಡು ಚೇತರಿಸಿಕೊಂಡನು. ಹಳ್ಳಿಗರ ಸೇನೆಗಾಗಿ ಕೃತಜ್ಞತೆ ಸಲ್ಲಿಸಿ, ತನ್ನೂರಿಗೆ ಹೊರಟು ನಿಂತನು. ಆದರೆ ಅನಿರೀಕ್ಷಿತವಾಗಿ ಅವನು ಮಹಿಮು ಹೋದನು ಅಲ್ಲಿ ಆತನ ಪರಿಚಯಸ್ಥರಾರೂ ಇರಲಿಲ್ಲ. ಹಾಗಾಗಿ ಸಾವಿನ ಈ ಮುರಂತವ ಸುದ್ದಿ ಬೇರೆ ಯಾರಿಗೂ ಕೂಡಲೇ ದೊರೆಯಲಿಲ್ಲ.

ಸತಾರಾ ನಗರದಲ್ಲಿದ್ದ ಗಜಾನನನ ಸ್ನೇಹಿತರಿಗೂ ಆತನ ಸಾವಿನ ಸುದ್ದಿ ತಿಳಿಯಲಿಲ್ಲ. ಸಖಾರಾಮನಿಗೂ ಸಮಾಚಾರ ಹತ್ತಲಿಲ್ಲ. ಅವನು ಗಜಾನನನ ಹೆಸರಿಗೆ ಹಲವು ಪತ್ರ ಬರೆದನು; ಆದರೆ ಉತ್ತರ ಬರಲಿಲ್ಲ. ಆದುದರಿಂದ ಆತನದಾಗಿದ್ದ ಐದು ಸಾವಿರ ರೂಪಾಯಿಗಳನ್ನು ತನ್ನ ವ್ಯಾಪಾರದಲ್ಲಿ ತೊಡಗಿಸಿದನು. ಗಜಾನನನನ್ನು ಹುಡುಕುವುದಕ್ಕಾಗಿ ಅವನೂರಿಗೊಬ್ಬ ನೌಕರನನ್ನು ಕಳಿಸಿದನು.

ಹಲವು ದಿನಾನಂತರ ಅವನು ಮರಳಿದನು-"ಬಹಳ ಒಳ್ಳೆಯ ಸುದ್ದಿ ತಂದಿದ್ದೇನೆ ಸ್ವಾಮಿ. ಗಜಾನನನು ತನ್ನ ಹಳ್ಳಿಗೆ ಮರಳುತ್ತಿರುವಾಗಲೇ ದರೋಡೆಯೋರರ ಕೈಗೆ ಸಿಕ್ಕು ಸತ್ತು ಹೋದನು. ಅವನ ಮನೆಯಲ್ಲಿ ವಿಧವೆ ಹೆಂಡತಿ ಮತ್ತು ಹನ್ನೆರಡು ವರ್ಷದ ಮಗನೊಬ್ಬನಿನ್ದಾನೆ. ಗಜಾನನನು ತನ್ನುಬಳಿಯಿಟ್ಟ ಹಣದ ಕತೆಯೇ ಅವರಿಗೆ ಗೊತ್ತಿಲ್ಲ ಆತ ಸತ್ತ ಸುದ್ದಿಯೂ ದೆರೂ ಒಂದೆರಡು ತಿಂಗಳ ಬಳಿಕ ಅವರಿಗೆ ಸಿಕ್ಕಿತಂತೆ. ಅವನ ಹಣದ ಬಗ್ಗೆ ಯೂವ ಸ್ವಾಮಿಯೂ ಇಲ್ಲ.'

'ರಾಮ್ ರಾಮ್' ಸಖಾರಾಮನಿಂದ ಉದ್ಗಾರಗಳಿಲ್ಲ ಅವನು ತನ್ನ ನೌಕರನ ಕೆನಿಂದ ಬಂಗೆರೆಯೆಕೊಂಡನು—'ಶಂಕರ, ನೀನೇನು ಹೇಳುತಿದ್ದಿಯೂ? ನಿನ್ನೆ ಬುದ್ಧಿಗೊಂದಿಸ್ಟು ಬೆಂಕಿ ಬೀಳಲಿ. ಗಜಾನನನ ಮನೆಯವರು ಹಣಕ್ಕಾಗಿ ವಿಲಿ ವಿಲಿ ಒದ್ದಾಡುತ್ತಿರಲಿ, ನಾನು ಆ ಹಣವನ್ನು ಅನ್ಯಾಯವಾಗಿ ಕಿಮು ತೇಗಬೇಕು! ಇಂತಹ ಮಾತು ನನ್ನ ನೌಕರನೊಬ್ಬನ ಬಾಯಿಂದ ಬರಬಾರದಾಗಿತ್ತು? ಸಖಾರಾಮನ ಕಂಠ ಗದ್ಗದವಾಯ್ತು; ಕಣ್ಣುಗಳು ತುಂಬಿ ಬಂದುವು.

ಅಲ್ಪಾವಧಿಯಲ್ಲೇ ಸಖಾರಾಮನು ಗಜಾನನನ ಹೆಂಡತಿ—ಗಂಡು ಮಗನನ್ನು ತನ್ನ ಮನೆಗೆ ಕರೆಸಿಕೊಂಡನು. ತಾಪು ವ್ಯಾಪಾರದಲ್ಲಿ ತೊಡಗಿಸಿದ್ದ ಗಜಾನನನ ಐದು ಸಾವಿರ ರೂಪಾಯಿಗಳನ್ನು ಬಡ್ಡಿ ಸಹಿತ ಅವರಿಗೊಪ್ಪಿಸಿದನು. ಅವರನ್ನು ಅವರ ಹಳ್ಳಿಗೆ ಸಕುಶಲವಾಗಿ ತಲಪಿಸುವ ವ್ಯವಸ್ಥೆ ಮಾಡಿದನು,

ಆಗ ಸತಾರಾದಲ್ಲಿ ಶಾಹೂ ಮಹಾರಾಜರು ರಾಜ್ಯವಾಳುತಿದ್ದರು. ಸಖಾರಾಮನ ಧರ್ಮ—ನ್ಯಾಯಶೀಲತೆಯ ಸಮಾಚಾರ ಅವರಿಗೂ ತಲುಪಿತ್ತು. ಅವರು ಸಖಾರಾಮನನ್ನು ತನ್ನ ದರಬಾರಿಗೆ ಕರೆದು ಕೊಂಡರು. ಅವನನ್ನು ಉಚಿತ ಉಡುಗೊರೆಗಳಿಂದ ಸಮ್ಮಾನಿಸಿದರು.

'ಸಖಾರಾಮ' ತಮ್ಮಂಥ ಪ್ರಾಮಾಣಿಕ ನಾಗರಿಕರಿರುವುದರಿಂದಲೇ ನಾನೂ ನನ್ನ ರಾಜ್ಯವೂ ಗೌರವದಿಂದ ತಲೆಯೆತ್ತಿ ಬದುಕುತಿದ್ದೇವೆ' ಎಂದರು.

(ಸಂಗ್ರಹ)

ಪ್ರಗತಿಯ ಪಡಿನೆಳಲು – ಪ್ರದರ್ಶನಗಳು

"ಇಲ್ಲಿ ಖಳನಾಯಕರು
ನ್ಯಾಸಾತ್ರ ಧಾರಿಗಳು
ಮರಾಕ್ರಮಣಕ್ಕೈದು
ನ್ಯಾಯವೀಡುವ ತನಕ॥

ಇಬ್ಬಗೆಯ ಪಾತ್ರಧಾರಿಗಳ
ಈ ದರಬಾರಿನಲ್ಲಿ
ನಮಗೆ ನ್ಯಾಯವಾದಿಗಳಾರು?
ನ್ಯಾಯ ದೊರೆಯುವುದೆಂತು?

ಬನೇಮೈ ಅಹಲ್—ಎ – ಹವಸ್ ಮುದ್ದಾಯಿ
ಫಿ, ಮುನ್ನಿಫ್ ಫಿ: ಕಿಸೇ ವಕೀಲ್ ಕರೀಂ,
ಕಿಸ್‌ಸೆ ಮುನ್‌ಸಫಿ ಜಾಹೇಂ?

(ಫೈಜ್ ಅಹ್ಮದ ಫೈಜ್)

ಫೈಜ್ ಅಹ್ಮದ್ ಫೈಜ್ ಪಾಕಿಸ್ತಾನದ ಸುಪ್ರಸಿದ್ಧ ಕವಿಗಳು. ಹಾಗೆ ಹೇಳುವುದಾದರೆ, ಪಾಕಿಸ್ತಾನದಲ್ಲಿರುವುದಕ್ಕಿಂತಲೂ ಭಾರತದಲ್ಲೇ ಅವರ ಅಭಿಮಾನಿಗಳ ಸಂಖ್ಯೆ ಹೆಚ್ಚು. ಪಾಕ್ ಮಿಲಿಟರಿ ಆಡಳಿತಗಾರರು ಫೈಜ್ ಅವರನ್ನು ಕಾರಾಗೃಹದಲ್ಲಿಟ್ಟಾಗ ಅವರು ಮೇಲ್ಕಂಡ ಕವನವನ್ನು ಬರೆದರು. ಪ್ರಜೆಗಳ ಪಾಕ್ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದೇ ಫೈಜ್ ಅವರು ಮಾಡಿದ "ಮಹಾಪರಾಧ"ವಾಗಿತ್ತು. ಪಾಕ್ ಮಿಲಿಟರಿ ಆಡಳಿತಗಾರರಿಗೆ ಪಾಕ್ ಸ್ವಾತಂತ್ರ್ಯ ವೆಂದರೆ ವರ್ಡ್‌ಸಲಾಗದ ಭಯ ಎದುರಿಸಲಾಗದ ಅಪಾಯ.

ಕಳೆದ ಅಕ್ಟೋಬರ್ ತಿಂಗಳು ಶ್ರೀನಗರದಲ್ಲಿ ಒಂದು ಪ್ರದರ್ಶನ ನಡೆಯಿತು. ಜಾಹಿರಾತು ಮತ್ತು ಚಾಕ್ಷುಷ ಪ್ರಚಾರ ನಿರ್ದೇಶನಾಲಯದವರು ಏರ್ಪಡಿಸಿದ ಈ ಪ್ರದರ್ಶನದಲ್ಲಿ ಬಂಗ್ಲಾದೇಶಕ್ಕೆ ಸಂಬಂಧಿಸಿದಂತೆ ಒಂದು ವಿಭಾಗ. ಆದರಲ್ಲಿ ಶೇಖ್ ಮುಜೀಬುರ್ ರೆಹಮೂನ್ ಅವರ ಭಾವಚಿತ್ರವಿತ್ತು. ಅದರ ಅಡಿಯಲ್ಲಿ ಫೈಜ್ ಅಹ್ಮದ್ ಫೈಜ್ ಅವರ ಈ ಹಿಂದೆ ಉಲ್ಲೇಖಿಸಲಾದ ಕವನದ ಸಾಲುಗಳು. ಪ್ರದರ್ಶನ ಅತ್ಯಂತ ಆಕರ್ಷಕವಾಯಿತು. ಜನಸಂದಣಿ ಅಪಾರವಾಗಿತ್ತು

ಇತ್ತೀಚಿನ ಭಾರತ–ಪಾಕ್ ಯುದ್ಧಾನಂತರವೂ ದೆಹಲಿಯಲ್ಲಿ ಒಂದು ಪ್ರದರ್ಶನವನ್ನು ವ್ಯವಸ್ಥೆಗೊಳಿಸಲಾಗಿತ್ತು. 'ಭಾರತ ಸವಾಲನ್ನೆದುರಿಸಿತು' ಎಂಬುದೇ ಈ ಪ್ರದರ್ಶನದ ಹೆಸರು ಇಂತಹದೇ ಪ್ರದರ್ಶನಗಳನ್ನು ಮುಂಬಯಿ, ಕಲ್ಕತ್ತಾ, ಲಕ್ನೊ, ಗ್ವಾಲಿಯರ್ ನಗರಗಳಲ್ಲಿ ಏರ್ಪಡಿಸಲಾಗಿತ್ತು.

ಜಾಹಿರಾತು ಮತ್ತು ಚಾಕ್ಷುಷ ಪ್ರಚಾರ ವಿಭಾಗದವರು ದೇಶದ ಮಹಾನಗರಗಳಲ್ಲಿ ಕಾಲ—ಕಾಲಕ್ಕೆ ಏರ್ಪಡಿಸುವ ಪ್ರದರ್ಶನಗಳು, ಸಂಬಂಧಿಸಿದ ರಾಜ್ಯಗಳ ಜನರಿಗೆ ಆಯಾ ರಾಜ್ಯಗಳ ಪ್ರಗತಿಯನ್ನೂ, ಇಡೀ ದೇಶದ ಸಮಗ್ರ ಪ್ರಗತಿಯ ಚಿತ್ರವನ್ನೂ ಬಿಂಬಿಸುವುವಲ್ಲದೇ, ಈ ಪ್ರಗತಿಗೆ ಆಯಾ ರಾಜ್ಯಗಳು ಯಾವರೀತಿ ನೆರವಾಗುತ್ತಿವೆ ಎಂಬುದನ್ನು ನಿರೂಪಿಸುತ್ತವೆ. ಉದಾಹರಣೆಗೆ ಬೆಂಗಳೂರಿನಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ಪ್ರದರ್ಶನ, ಸ್ಥಳೀಯ ಕೈಗಾರಿಕೆಗಳಿಂದ ಹಾಗೂ ಕೇಂದ್ರ ಸರ್ಕಾರದ ಉದ್ಯಮಗಳಿಂದ ಇಲ್ಲಿಯ ಜನತೆ ಯಾವರೀತಿ ಪ್ರಯೋಜನ ಪಡೆಯುತ್ತಿದ್ದಾರೆ ಎನ್ನುವುದನ್ನು ಸ್ಪಷ್ಟವಾಗಿ ನಿರೂಪಿಸಿತು. ಸಾರ್ವಜನಿಕರಲ್ಲಿ ಅದರಲ್ಲೂ ವಿಶೇಷವಾಗಿ ಯುವ ಜನಾಂಗದಲ್ಲಿ ದೇಶದಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಹಾಗೂ ಅಲ್ಪಾವಧಿಯಲ್ಲಿ ಸಾಧ್ಯವಾಗಿರುವ ಅದ್ಭುತ ಪ್ರಗತಿಯ ಬಗ್ಗೆ ಯಥಾವತ್ತಾದ ಕಲ್ಪನೆ ಮೂಡಿಸುವಲ್ಲಿ ಈ ಪ್ರದರ್ಶನಗಳು ಅತ್ಯಂತ ಯಶಸ್ವಿಯೂಗಿವೆ.

ದೇಶದ ಉದ್ದಗಲಕ್ಕೂ ಸಂಚರಿಸುವ ಈ ಪ್ರದರ್ಶನಗಳು ಭಾವೈಕ್ಯ ಸಾಧನೆಗೂ ನೆರವಾಗುತ್ತವೆ.

ಧನಿಕರು ತಮ್ಮ ಆಸ್ತಿಯನ್ನು ಸ್ವಾರ್ಥತ್ಯಾಗಕ್ಕಾಗಿ, ಲೋಕಸೇವೆಗಾಗಿ ಉಪಯೋಗಿಸುವರೋ ಅಥವಾ ಸ್ವೋಪಭೋಗತ್ಯಾಗಿ ಬಳಸುತ್ತಿರುವರೋ ಎಂಬುದನ್ನು ದೇವರು ಪರೀಕ್ಷಿಸುವನು.

—ವಿನೋಬಾ

ಸಂಪೂರ್ಣ ಸುರಕ್ಷಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
141 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಜತೆ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನೆ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎನ್. ಸುಂದರ್‌ರಾಮ್ ಶೆಟ್ಟಿ,
ಜನರಲ್ ಮೆನೇಜರ್.

ವಿದೇಶಿ ನೆರವು— ಆರ್ಥಿಕ ಅಭಿವೃದ್ಧಿಗೆ ಪೋಷಕವೇ?

(ಪೂರ್ವ ಪ್ರತಿನಿಧಿಯಿಂದ)

ವಿದೇಶೀ ನೆರವು ಹಾಗು ಆರ್ಥಿಕ ಅಭಿವೃದ್ಧಿ ಇವುಗಳ ನಡುವಣ ಸಂಬಂಧ ಯಾವರೀತಿ ಇರಬೇಕು ಎಂಬ ಪ್ರಶ್ನೆ ಈಗ ವ್ಯಾಧಾನ್ಯ ಪಡೆದಿದೆ. ಬಡದೇಶಗಳ ತೀವ್ರ ಅಭಿವೃದ್ಧಿಗಾಗಿ ವಿದೇಶಿ ಸಂಪನ್ಮೂಲಗಳನ್ನು ಪಡೆಯುವುದರ ಬಗ್ಗೆ ಅರ್ಥಶಾಸ್ತ್ರಜ್ಞರು ಅನುಕೂಲಕರ ಅಭಿಪ್ರಾಯ ತಳೆದಿದ್ದಾರೆ. ಅಭಿವೃದ್ಧಿಹೊಂದುತ್ತಿರುವ ಯಾವುದೇ ಅರ್ಥವ್ಯವಸ್ಥೆಯ ಆರಂಭ ಹಂತದಲ್ಲಿ ವಿದೇಶಿ ನೆರವು ಬೇಕೇ ಬೇಕೆಂಬುದು ಸೈದ್ಧಾಂತಿಕವಾಗಿ ಸರಿ ಎನಿಸುತ್ತದೆ. ಇಂತಹ ಅರ್ಥವ್ಯವಸ್ಥೆಯಲ್ಲಿ ಉಳಿತಾಯ ಬಹಳ ಕಡಿಮೆ.

ಯಾವುದೇ ದೇಶದ ಅಭಿವೃದ್ಧಿಗೆ ಮುಖ್ಯವಾಗಿ ಬಂಡವಾಳ ರಚನೆ ಅತಿಮುಖ್ಯ. ಈಬಂಡವಾಳ ರಚನೆ ಮುಖ್ಯವಾಗಿ ಆ ದೇಶದಲ್ಲಿನ ಉಳಿತಾಯ ಪ್ರಮಾಣವನ್ನು ಆಧರಿಸುತ್ತಿದೆ. ಆದರೆ ಬಡದೇಶಗಳಲ್ಲಿ ಕೆಲವೇ ದಿನಗಳಲ್ಲಿ ಉಳಿತಾಯ ಪ್ರಮಾಣವನ್ನು ಏರಿಸುವುದು ಕಷ್ಟ ಸಾಧ್ಯ. ಇಂತಹ ಪರಿಸ್ಥಿತಿಯಲ್ಲಿ ಬಂಡವಾಳ ಬಯಸುವ ರಾಷ್ಟ್ರ ವಿದೇಶಿ ನೆರವನ್ನು ಅಪೇಕ್ಷಿಸುತ್ತದೆ. ಈ ರೀತಿ ಬಂದ ನೆರವು ಅಂತಹ ಅರ್ಥವ್ಯವಸ್ಥೆಯ ಬಂಡವಾಳ ಕೊರತೆಯನ್ನು ನಿವಾರಿಸುತ್ತದೆ.

ವಿದೇಶಿ ನೆರವು ಇನ್ನೊಂದು ವಿಷಯದಲ್ಲೂ ಸಹಾಯಕವಾಗುತ್ತದೆ. ದೇಶ ವಿದೇಶಗಳ ನಡುವೆ ನಡೆಯುವ ವಾಣಿಜ್ಯದಲ್ಲಿ ಅಂದರೆ ಆಮದು- ರಫ್ತು ಅಂತರದಲ್ಲಿ ಉಂಟಾಗುವ ಕೊರತೆ ನಿವಾರಣೆಗೂ ನೆರವಾಗುವುದು ಬಡದೇಶದಲ್ಲಿ ಉಳಿತಾಯ ಪ್ರಮಾಣ ಕಡಿಮೆ ಇರಬಹುದು. ಇಂತಹ ಸಂದರ್ಭಗಳಲ್ಲಿ ಬಡರಾಷ್ಟ್ರಗಳು ತಮ್ಮ ಅಭಿವೃದ್ಧಿ ದೃಷ್ಟಿಯಿಂದ ಹೊರ ದೇಶಗಳಿಂದ ಕೆಲವು ಯಂತ್ರೋಪಕರಣಗಳು, ತಾಂತ್ರಿಕ ತಜ್ಞರುಇತ್ಯಾದಿಗಳನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ.ಈ ಆಮದಿಗೆಅಗತ್ಯವಾದ ವಿದೇಶಿ ವಿನಿಮಯ ಸಮಸ್ಯೆ ವಿದೇಶಿ ಸಂಪನ್ಮೂಲಗಳಿಂದ ಪರಿಹಾರವಾಗುವುದು. ಒಂದು ವೇಳೆ ವಿದೇಶಿ ನೆರವುಪಡೆಯುವ ರಾಷ್ಟ್ರದ ರಫ್ತು ವ್ಯಾಪಾರ ತನ್ನ ಆಮದು ವ್ಯಾಪಾರಕ್ಕೆ ಸರಿಯಾಗಿದ್ದರೆ ಸಮಸ್ಯೆ ಉದ್ಭವವಾಗದಿರಬಹುದು. ಆದರೆ ಬಡರಾಷ್ಟ್ರಗಳು ಈ ಸಮಸ್ಯೆಗೆ ಸಿಲುಕದೆ ಮುನ್ನಡೆಯುವುದು ಅಪರೂಪ.

ಈ ನೋಲಿನ ಎರಡು ಸಿದ್ಧಾಂತಗಳ ತಿರುಳು ಇಷ್ಟೇ. ವಿದೇಶಿ ನೆರವಿನಿಂದ ಬಡದೇಶಗಳ ಬಂಡವಾಳ ಪರಿಸ್ಥಿತಿ ಸುಧಾರಣೆಗೊಳ್ಳುವುದಲ್ಲದೆ ಆಮದು ರಫ್ತುಗಳ ಅಂತರದಲ್ಲಿನ ಕೊರತೆಗಳು ನಿವಾರಣೆಯಾಗುತ್ತವೆ. ಭವಿಷ್ಯದಲ್ಲಿ ಅಂತಹ ಅರ್ಥವ್ಯವಸ್ಥೆಗಳ ರಫ್ತು ವ್ಯಾಪಾರ ಹೆಚ್ಚಿ ಅಭಿವೃದ್ಧಿಗೆ ನಾಂದಿಯಾಗುವುದು, ವಿದೇಶಗಳ ಮೇಲಣ ಅವಲಂಬನ ಕಡಿಮೆಯಾಗುವುದು.

ನಾವು ಕಳೆದ ೨೦ ವರ್ಷಗಳಿಂದ ವಿದೇಶಿ ನೆರವನ್ನು ಪಡೆದಿದ್ದೇವೆ. ನಮ್ಮ ಸ್ವೀಜ ಅನುಭವ ಸಿದ್ಧಾಂತಗಳಿಗೆ ತದ್ವಿರುದ್ಧವಾಗಿದೆ. ಕಳೆದ ದಶಕದಲ್ಲಿ ರಾಷ್ಟ್ರದಲ್ಲಿನ ಉಳಿತಾಯ ಪ್ರಮಾಣ ಏರಿದೆ. ಆದರೆ ರಾಷ್ಟ್ರ ಆದಾಯವನ್ನು ಲಕ್ಷದಲ್ಲಿಟ್ಟುಕೊಂಡು ನೋಡಿದಾಗ ರಫ್ತು ವ್ಯಾಪಾರದಲ್ಲಿ ಬರುತ್ತಿರುವ ಆದಾಯ ಕಡಿಮೆಯಾಗಿದೆ. ವಿದೇಶಿ ನೆರವಿನ ಉದ್ದೇಶ ಸಾಧನೆಯಾಗಿಲ್ಲ.

ವಿದೇಶಿ ನೆರವು ನಮ್ಮ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗದಿರಲು ಕಾರಣವೇನು? ಬಹುಶಃ ವಿದೇಶಿ ನೆರವು ನೀಡುವಾಗ ಈ ದೇಶದ ಅಭಿವೃದ್ಧಿ ಕ್ರಮವನ್ನು ಕಡೆಗಾಣಿಸಿದ್ದೇ ಕಾರಣವಿರಬಹುದು.

ರಫ್ತು ವ್ಯಾಪಾರದಲ್ಲೂ ವಿದೇಶಿ ಸಂಪನ್ಮೂಲಗಳು ನಮಗೆ ನೆರವಾಗಿಲ್ಲ ರಫ್ತು ವ್ಯಾಪಾರವನ್ನು ಉತ್ತಮಗೊಳಿಸಲು ವಸ್ತುಗಳ ಬೆಲೆಯನ್ನು ನಮ್ಮ ವಸ್ತುಗಳ ಬೆಲೆಯನ್ನು ಕಡಿಮೆ ಮಾಡಲು ಸಾಧ್ಯವಾಗಿಲ್ಲ. ಅಭಿವೃದ್ಧಿಗೆ ನೆರವಾಗುವುದರ ಬದಲಾಗಿ ವಿದೇಶಿ ಸಂಪನ್ಮೂಲ ನಮಗೆ ತೊಂದರೆಯನ್ನೇ ತಂಗೊಡ್ಡಿದೆ. ಆರ್ಥಿಕ ಅಭಿವೃದ್ಧಿ ಮೂತು ಒಂದೆಡೆ ಇರಲಿ ವಿದೇಶಿ ನೆರವು ರಾಷ್ಟ್ರದ ಅಸ್ತಿತ್ವಕ್ಕೆ ಅಡಚಣೆ ಮಾಡುವುದು ಎಂಬುವಾಗಿ ಇತ್ತೀಚಿನ ಅನುಭವದಿಂದ ವ್ಯಕ್ತವಾಗಿದೆ. ನಮಗೆ ಬೇಕಾಗುವ ವಿದೇಶಿ ವಸ್ತುಗಳು, ತಾಂತ್ರಿಕಜ್ಞಾನ, ಸಾಧನೋಪಕರಣಗಳನ್ನು ನಮ್ಮ ಹಣದಿಂದಲೇ ತರಿಸಿಕೊಳ್ಳುವುದರ ಬಗ್ಗೆ ಶ್ರಮಿಸುವುದು ಎಂದೆಂದಿಗೂ ಉತ್ತಮ. ವಿದೇಶಗಳ ನೆರವಿಗೆ ಕೈಯೊಡ್ಡುವುದು ಸರಿಯಲ್ಲ. ನಮ್ಮ ದೇಶದಲ್ಲಿ ಇತ್ತೀಚೆಗೆ ಕೈಗಾರಿಕಾಭಿವೃದ್ಧಿ ತೀವ್ರವಾಗಿ ಸಡಿಲುತ್ತಿದೆ. ಕೈಗಾರಿಗಾ ವಸ್ತುಗಳ ಗುಣಮಟ್ಟ ಹಾಗು ಪ್ರಮಾಣ ದ್ವಿಗುಣ ಹೊಂದುತ್ತಿವೆ ವಸ್ತುಗಳ ಬೆಲೆಯನ್ನು ಕಡಿಮೆ ಮಾಡುವುದಲ್ಲದೆ, ವಿವಿಧ ಕ್ಷೇತ್ರಗಳಲ್ಲಿ ರಫ್ತು ಬದಲಿಕೆಗಳನ್ನು ಬಳಸಿದರೆ ವಿದೇಶಿ ನೆರವಿನ ಅಗತ್ಯವೇ ಇಲ್ಲ.

ಸದ್ಯದಲ್ಲಿ ನಮಗೆ ವಿದೇಶಿಗಳ ಕೆಲವೊಂದು ಕಚ್ಚಾವಸ್ತುಗಳು ಅಗತ್ಯವಿರಬಹುದು. ಆದರೆ ನಮ್ಮ ರಫ್ತು ಪ್ರಮಾಣವನ್ನು ಹೆಚ್ಚಿಸಿದರೆ ಇದರಿಂದ ಲಭ್ಯವಾಗುವ ವಿದೇಶಿ ವಿನಿಮಯವನ್ನು ನಮಗೆ ಅಗತ್ಯವಾದ ಆಮದು ಮೇಲೆ ವೆಚ್ಚ ಮಾಡಬಹುದು. ರಫ್ತು ವ್ಯಾಪಾರ ಹೆಚ್ಚಿಸುವ ಸಾಧ್ಯತೆ ನಮಗೆ ಸಾಕಷ್ಟಿದೆ. ದೇಶದ ಉಕ್ಕು ಮತ್ತು ಇತರ ಭಾರಿ ಇಂಜನಿಯರಿಂಗ್ ವಸ್ತುಗಳ ಕಾರ್ಖಾನೆಗಳ ಉತ್ಪಾದನಾ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಂಡರೆ, ವಾಣಿಜ್ಯ ಬೆಳೆಗಳ ಉತ್ಪಾದನೆಯನ್ನು ಮತ್ತಷ್ಟು ಹೆಚ್ಚಿಸಿದರೆ, ವಿದ್ಯುಚ್ಛಕ್ತಿಯ ಪ್ರಸ್ತುತ ಬಳಕೆ ವಿಧಾನವನ್ನು ಉತ್ತಮಗೊಳಿಸಿದರೆ ನಮ್ಮ ರಫ್ತು ಪ್ರಮಾಣವನ್ನು ಹೆಚ್ಚಿಸಬಹುದಲ್ಲದೆ, ಆಮದು ಪ್ರಮಾಣವನ್ನು ಕಡಿಮೆ ಪಡಿಸಬಹುದು.

ರಾಜ್ಯಪಾಲರಿಂದ ನಳ್ಳಿನೀರು ಯೋಜನೆಯ ಉದ್ಘಾಟನೆ

ಉಡುಪಿಗೆ ನಳ್ಳಿನೀರು ಒದಗಿಸುವ ಯೋಜನೆಯ ಉದ್ಘಾಟನಾ ಸಮಾರಂಭವು ಕಳೆದ ತಾ. 18ರಂದು ರಾಜ್ಯ ಸರಕಾರದ ಸಣ್ಣ ನೀರಾವರಿ ಮತ್ತು ಸಾರ್ವಜನಿಕಾರೋಗ್ಯ ಖಾತೆಯ ಚೀಫ್ ಇಂಜಿನಿಯರ್ ಶ್ರೀ ಎಸ್. ಪಿ. ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಮಾರಂಭಕ್ಕೆ ಡಾ| ಸರೋಜಿನಿ ಮಹಿಷಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಆರಂಭದಲ್ಲಿ ಪ್ರಾರ್ಥನೆಯ ಬಳಿಕ ನಗರ ಸಭಾಪತಿ ಡಾ। ವಿ. ಎಸ್. ಆಚಾರ್ಯರು ಸ್ವಾಗತಿಸಿದರು.

ರಾಜ್ಯಪಾಲರು ತಮ್ಮ ಉದ್ಘಾಟನಾ ಭಾಷಣದಲ್ಲಿ ನೀರಿನ ಅವಶ್ಯಕತೆಗಳನ್ನು ವಿವರಿಸಿ, ಈ ಕ್ಷೇತ್ರಕ್ಕೆ ಇದು ತನ್ನ ಕೊನೆಯ ಭೇಟಿಯೆಂದೂ ತನ್ನದೇ ಆಸಕ್ತಿಯಲ್ಲಿ ಉಡುಪಿಯ ಜನತೆಗೆ ನೀರೂ ಪೂರೈಸುವಂತಾದುದಕ್ಕೆ ಪರ್ಷ ವ್ಯಕ್ತಪಡಿಸಿದರು.

ಡಾ। ಮಹಿಷಿಯವರು ಯೋಜನೆಯನ್ನು ಶ್ಲಾಘಿಸಿ ಈ ಕ್ಷೇತ್ರಕ್ಕೆ ನೀರು ಒದಗಿಸುವಲ್ಲಿ ರಾಜ್ಯದ ಸಂಬಂಧ ಪಟ್ಟ ಅಧಿಕಾರಿಗಳನ್ನು ಅಭಿನಂದಿಸಿದರು.

ಸುಪರಿಂಟೆಂಡಿಂಗ್ ಇಂಜಿನಿಯರ್ ಶ್ರೀ ಸೂರ್ಯನಾರಾಯಣರು ತಾಂತ್ರಿಕ ವಿಚಾರಗಳ ಕುರಿತು ವರದಿ ಒಪ್ಪಿಸಿದ ಬಳಿಕ ಚೀಫ್ ಇಂಜಿನಿಯರ್ ಶ್ರೀ ಎಸ್. ಪಿ. ಭಟ್ಟರು ಅಧ್ಯಕ್ಷ ಭಾಷಣ ಮಾಡಿ ಈ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ರಾಜ್ಯಪಾಲರಿತ್ತ ಸಹಕಾರವನ್ನು ಸ್ಮರಿಸಿದರು.

ಕಾರು ಅಪಘಾತದಲ್ಲಿ ಮೃತ್ಯು

ಅಸಿಸ್ಟೆಂಟ್ ಕಲೆಕ್ಟರ್ ಆಗಿದ್ದ ಬಿ| ಬಿ. ನಾರಾಯಣ ಹೆಗ್ಡೆಯವರ ಮಿತ್ರ ಹಾಗೂ ಕಾಪು ಕಾಫಿ ಪ್ಲಾಂಟರ್ ಶ್ರೀ ಕೆ. ಸೂರಣ್ಣ ಶೆಟ್ಟರ ಆಳಿಯ ಶ್ರೀ ಮೋಹನದಾಸ ಹೆಗ್ಡೆಯವರು ಮೂಳೂರು ಬಳಿ ತಾ. 21ರಂದು ಸಂಭವಿಸಿದ ಭೀಕರ ದೈಪ್ಪಕರ ಕಾರು ಅಪಘಾತದಲ್ಲಿ ತೀವ್ರ ಜಖಂಗೊಂಡು ತಾ. 22ರಂದು ಮಣಿಪಾಲ ಆಸ್ಪತ್ರೆಯಲ್ಲಿ ದೈವಾಧೀನರಾದರು. ದಿವಂಗತರು ಪತ್ನಿ, ಎಂಟುವರುಷ ವಯಸ್ಸಿನ ಮಗಳು, ವೃದ್ಧ ತಾಯಿ ಮತ್ತು ಆಸಾರ ಬಂಧು ಮಿತ್ರಗಣ್ಣನ್ನು ಅಗಲಿರುವರು.

39 ವರುಷ ಪ್ರಾಯದವರಾಗಿದ್ದ ಶ್ರೀ ಹೆಗ್ಡೆಯವರು ಉಡುಪಿ ಸುಂಗಳೂರುಗಳಲ್ಲಿ ಬಿ. ಡಿ. ಓ. ಆಗಿಯೂ ಹೈದರಾಬಾದ್‌ನ ರಾಜೇಂದ್ರ ನಗರದ ಹಿರಿಯಂಟೀಲನ್ ಸೆಂಟರ್‌ನಲ್ಲಿ ಇನ್‌ಸ್ಟ್ರಕ್ಟರ್ ಆಗಿಯೂ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದರು. ಸದ್ಯ ಅವರು ಹೆಬ್ರಾಳ ಕೃಷಿ ವಿಜ್ಞಾನ ಸಂಸ್ಥೆಯಲ್ಲಿ ಅಡಳಿತ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದು ಸ್ನೇಹಿತರೊಬ್ಬರ ಮದುವೆಗೆ ಆಗಮಿಸಿದವರು ಮಂಗಳೂರಲ್ಲಿ ಮದುವೆಯಲ್ಲಿ ಭಾಗವಹಿಸಿ ತನ್ನ ಊರಿಗೆ ಮರಳುತ್ತಿದ್ದಾಗ ಈ ದುರಂತ ಸಂಭವಿಸಿತು.

ಇವರ ಜತೆ ಸಪ್ರಯಾಣ ಮಾಡುತ್ತಿದ್ದ ಇವರ ಸಂಬಂಧಿಕರು ಹಾಗೂ ಮಂಗಳೂರಿನಲ್ಲಿರುವ ಪಿ ಡಬ್ಲ್ಯು ಡಿ. ಇಂಜಿನಿಯರ್ ಶ್ರೀ ಗೋವಿಂದ ಶೆಟ್ಟರ ಅಳ್ಳ ಹಾಗೂ ಮದ್ರಾಸು ಸಿಟಿ ಕಾರ್ಪೋರೇಶನ್‌ನಲ್ಲಿ ಅಧಿಕಾರಿಯಾಗಿದ್ದು ನಿವೃತ್ತರಾದ ಶ್ರೀ ನುಜೂರು ಜಗನ್ನಾಥ ಶೆಟ್ಟರ ಪತ್ನಿ ಶ್ರೀಮತಿ ಸೀತಮ್ಮ ಸೆಟ್ಟಿಯವರು ಸ್ಥಳದಲ್ಲೇ ಮೃತರಾಗಿರುವರು.

ಶಿರಸಿ ರೊಟರಿ ಕ್ಲಬ್ ಜೀವವಿಮಾ ವ್ಯವಹಾರ ಸ್ಪರ್ಧೆಯ ಫಲಿತಾಂಶ

ಶಿರಸಿ ರೊಟರಿ ಕ್ಲಬ್ಬಿನವರು ತಾರೀಕು 2-8-1971ರಿಂದ 31-10-1971ರ ವರೆಗಿನ ಅವಧಿಗೆ ನಿರ್ಧರಿಸಿದ ಶಿರಸಿ ತಾಲೂಕು ಜೀವ ವಿಮಾ ವಿಜಯಬ್ಯಾಂಕ್ ವ್ಯವಹಾರ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದ್ದು ಶಿರಸಿಯ ಶ್ರೀ ವಿ. ಆರ್. ಭಾಗವತರು 86 ಜನರಿಂದ 8ಲಕ್ಷ 77ಸಾವಿರ ರೂಪಾಯಿಗಳ ಹೊಸ ವ್ಯವಹಾರವನ್ನು ದೊರಕಿಸಿ, ಮೊದಲನೇ ಬಹುಮಾನ ಪತಿಯಲು ಅರ್ಹರಾಗಿದ್ದಾರೆ. ರೊಟರಿಯನರ ಈ ಸ್ಪರ್ಧೆಯ ಬಹುಮಾನವು ರೊಟೇರಿಯನ್ನರಾದ ಶ್ರೀ ಭಾಗವತರಿಗೇ ದೊರೆತಿರುವದು ಸುಹತ್ತದ ಅಂಶವಾಗಿದೆ ಎನ್ನಬಹುದು.

ಶ್ರೀ ಭಾಗವತರು ಕಳೆದ ಇದೇ ಅವಧಿಯಲ್ಲಿ "ಜೀವನವಿಮಾ" ಚೆಯರ್‌ಮೆನ್ನರಿಂದ ಇಡಲ್ಪಟ್ಟ ಹೊಸ ವಿಮಾ ವ್ಯವಹಾರದ ಸ್ಪರ್ಧೆಯಲ್ಲೂ ಧಾರವಾಡ ವಿಭಾಜನ್ನಿಗೆ ಶಿರಸಿ ಶಾಖೆಯಿಂದ ಮೊದಲ ನಂಬರು ಪಡೆದಿದ್ದಾರ.

ಪೆರ್ಡೂರು ಹೈಸ್ಕೂಲಿನ ವರ್ಧಂತ್ಯುತ್ಸವ

ಪೆರ್ಡೂರು ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. 12ರಂದು ಪ್ರೊ। ಎಸ್. ವಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು ಆರಂಭದಲ್ಲಿ ಡಾ। ಎಂ ಆರ್. ಹೆಗ್ಡೆ ಸ್ವಾಗತಿಸಿದರು. ಪ್ರೊ। ಭಟ್ಟರು ವಿವಿಧ ಸ್ಪರ್ಧೆಗಳಲ್ಲಿ ಜಯಗಳಿಸಿ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿದರು. ಆದರೆ ವಿದ್ಯಾರ್ಥಿಗಳೆಲ್ಲ ಬಹುಮಾನ ವಸ್ತುಗಳ ಮೌಲ್ಯವನ್ನು ರಕ್ಷಣಾನಿಧಿಗೆ ನೀಡಿ ಬದಲಿಯ ಪ್ರಶಸ್ತಿಪತ್ರಗಳನ್ನು ಸ್ವೀಕರಿಸಿದರು.

ಪ್ರೊ| ಭಟ್ಟರು ಭಾಷಣ ಮಾಡುತ್ತಾ, ಯಕ್ಷಗಾನದ ಬಗ್ಗೆ ಸೂತಾಡಿ ಧರ್ಮ ಸಾಹಿತ್ಯ ಮತ್ತು ವಿಜ್ಞಾನ ಇವುಗಳ ನಡುವಣ ಬಾಂಧವ್ಯವನ್ನು ತಿಳಿಯೊಗಿ ವಿವರಿಸಿದರು. ಅಲ್ಲದೆ ಶಾಲೆಗೆ ಶುಭ ಕೋರಿದರು.

ಮನರಂಜನಾ ಕಾರ್ಯಕ್ರಮಗಳ ಅಂಗವಾಗಿ 'ಭಗವಾನ್ ಬುದ್ಧ' ಎಂಬ ಕನ್ನಡ ನಾಟಕ ಹಾಗೂ 'ಕಲ್ಲಾಡ ವೇರೆರ್' ಎಂಬ ತುಳು ನಾಟಕ ಅಲ್ಲದೆ ಕುಮಾರಿ ಪ್ರಮಿಳಾ ಆವರ ನೃತ್ಯ ಪ್ರದರ್ಶನಗಳೆದ್ದುವು

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಚಂದಾ ಹಣ ಬಾಕಿ ಇರುವವರು ದಯವಿಟ್ಟು ಅದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಭಾರಿ ವಿದ್ಯುತ್ ಉಪಕರಣಗಳ ಕೈಗಾರಿಕೆ

–ಶ್ರೀ ಪಿ. ಎಸ್. ಮೂರ್ತಿ

ದೇಶದ ಭಾರೀ ಉಪಕರಣಗಳ ಕೈಗಾರಿಕೆಯಲ್ಲಿ ಕಳೆದ ಒಂದು ದಶಕವನ್ನಲ್ಲಿ ಮಹತ್ವದ ಪ್ರಗತಿಯನ್ನು ಸಾಧಿಸಲಾಗಿದೆ. ಈ ಕೈಗಾರಿಕೆಯು ಎದುರಿಸಿದ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವಲೋಕಿಸಿದರೆ ಈ ಉಪಕರಣಗಳ ವಿನ್ಯಾಸ, ತಾಂತ್ರಿಕ ಜ್ಞಾನ ಮತ್ತು ವಿವಿಧ ಉಪಕರಣಗಳ ತಯಾರಿಕೆ ಇತ್ಯಾದಿ ವಿಷಯಗಳಲ್ಲಿ ಈ ಕೈಗಾರಿಕೆಯಲ್ಲಿ ಸ್ವಾವಲಂಬನೆಯ ಗುರಿಯನ್ನು ಬಹುಮಟ್ಟಿಗೆ ಸಾಧಿಸಿದ್ದೇನೆ ಸರ್ಕಾರಿ ಕ್ಷೇತ್ರದಲ್ಲಿನ ಭಾರಿ ಪ್ರಮಾಣದ ವಿದ್ಯುತ್ ಉಪಕರಣಗಳಿಗೆ ಸಂಬಂಧಿಸಿದ ನಿರ್ಣಯ ಸಂಸ್ಥೆಗಳು ಈ ವರೆಗೆ ನಾಲ್ಕು ಕಾರ್ಖಾನೆಗಳನ್ನು ಸ್ಥಾಪಿಸಿವೆ. ಈ ಕಾರ್ಖಾನೆಗಳಲ್ಲಿ ಒದಗಿಸಿರುವ ವಿವಿಧ ಸೌಲಭ್ಯಗಳಿಂದಾಗಿ ಇದೀಗ ದೊಡ್ಡ ಪ್ರಮಾಣದ ಪವರ್ ಟ್ರಾನ್ಸ್‌ಫಾರ್ಮರ್‌ಗಳು, ಟರ್ಬೋಫೀಡ್‌ಗಳು ಮತ್ತು ಜನರೇಟರ್‌ಗಳನ್ನು ವಿದ್ಯುತ್ ಕೇಂದ್ರಗಳಿಗಾಗಿ ತಯಾರಿಸಲಾಗುತ್ತಿದೆ. ದೇಶದಲ್ಲಿನ ವಾಹನಾಯನಿಕ ಸೌಕರ್ಯ ಮತ್ತು ತಜ್ಞ ವಾಹನಾಯನಿಕ ವಸ್ತುಗಳ ಕೈಗಾರಿಕೆಗಳಲ್ಲಿ ಬಹಳ ಉಪಯುಕ್ತವಾದ ಕೈಗಾರಿಕಾ ಬಾಯಿಲರ್‌ಗಳು, ಸ್ಟೀಮ್ ಟರ್ಬೈನ್‌ಗಳು, ಕೆಮಿಕಲ್ ಪ್ಲಾಂಟ್‌ಗಳು, ಪೆಟ್ರೋಲಿಯಂ ಸಂಸ್ಕರಣಾಗಾರಗಳು ಇತ್ಯಾದಿ ಉಪಕರಣಗಳನ್ನು ಇದೀಗ ಕಾರ್ಖಾನೆಯಲ್ಲಿ ಒದಗಿಸಿರುವ ವಿವಿಧ ಸೌಲಭ್ಯಗಳಿಂದಾಗಿ ವಿದ್ಯುತ್ ಉತ್ಪಾದನೆ ಮತ್ತು ಪ್ರಸರಣೆಗೆ ಬೇಕಾಗುವ ಇತರ ಸಲಕರಣೆಗಳನ್ನು ತಯಾರಿಸಬಹುದು.

ಸರ್ಕಾರಿ ಕ್ಷೇತ್ರದ ಕೆಲವು ಇಲೆಕ್ಟ್ರಿಕಲ್ (ಇಂಡಿಯಾ) ಲಿಮಿಟೆಡ್ ಕಾರ್ಖಾನೆಯು ಈಗಾಗಲೇ ಜಲವಿದ್ಯುತ್ ಉತ್ಪಾದನಾ ಯಂತ್ರಗಳನ್ನು ತಯಾರಿಸುತ್ತಿದೆ. ಇದೀಗ ೧೨ ಉಷ್ಣತಾಜನ್ಯ ವಿದ್ಯುತ್ ಯಂತ್ರಗಳಿಗಾಗಿ ಬೇಡಿಕೆಯಿದೆ. ಇದುವರೆಗೆ ಈ ಕಾರ್ಖಾನೆಯಲ್ಲಿ ಇರುವ ಒಟ್ಟು ಬೇಡಿಕೆಯಲ್ಲಿ ಜಲವಿದ್ಯುತ್ ಉತ್ಪಾದನಾ ಯಂತ್ರಗಳು ಮತ್ತು ೨ ಉಷ್ಣತಾಜನ್ಯ ವಿದ್ಯುತ್ ಉತ್ಪಾದನಾ ಯಂತ್ರಗಳ ಬೇಡಿಕೆಯನ್ನು ಪೂರೈಸಲಾಗಿದೆ. ಆಲ್ಲದೆ ಈ ಕಾರ್ಖಾನೆಯು ಬಾಯಿಲರ್ ಮತ್ತು ಟರ್ಬೋಸೆಟ್‌ಗಳಿಗಾಗಿಯೂ ಬೇಡಿಕೆಗಳನ್ನು ಸ್ವೀಕರಿಸಿದೆ.

ಹೆವಿ ಇಲೆಕ್ಟ್ರಿಕಲ್ (ಇಂಡಿಯಾ) ಲಿಮಿಟೆಡ್ ಸಂಸ್ಥೆಯು ಸಂಯುಕ್ತ ಅರಬ್ ಗಣರಾಜ್ಯ, ಇರಾಕ್ ಮತ್ತು ಸಿಂಗಪುರಗಳಿಗೆ ನಮ್ಮ ದೇಶದಲ್ಲಿ ತಯಾರಾದ ಭಾರಿ ಪ್ರಮಾಣದ ಪವರ್ ಟ್ರಾನ್ಸ್‌ಫಾರ್ಮರ್‌ಗಳು, ಕಂಟ್ರೋಲ್ ಗೇರ್‌ಗಳು, ಸ್ವಿಚ್‌ಗೇರ್‌ಗಳು, ಕೆಪಾಸಿಟರುಗಳು ಇತ್ಯಾದಿ ಉಪಕರಣಗಳನ್ನು ರಫ್ತು ಮಾಡಿದೆ. ಸ್ವಿಚ್ ಗೇರುಗಳು ಮತ್ತು ಪವರ್‌ಟ್ರಾನ್ಸ್‌ಫಾರ್ಮರ್‌ಗಳಿಗಾಗಿ ಇರಾಕ್ ಮತ್ತು ಸಿಲೋನ್‌ಗಳಿಂದ ಬೇಡಿಕೆಗಳು ಬಂದಿದ್ದು ಅವನ್ನು ಪೂರೈಸಬೇಕಾಗಿದೆ. ಈ ಭಾರಿ ಪ್ರಮಾಣದ ವಿದ್ಯುತ್ ಉಪಕರಣಗಳನ್ನು ದೇಶದಲ್ಲಿಯೆ ತಯಾರಿಸಲಾಗುತ್ತಿರುವುದರಿಂದ ವಿದೇಶಿ ವಿನಿಮಯವನ್ನು ಉಳಿಸುತ್ತಿದ್ದೇವೆ. ಅಷ್ಟೇ ಅಲ್ಲದೆ ಗಳಿಸುತ್ತಲೂ ಇದ್ದೇವೆ. ಈ ವಿವಿಧ ಯಂತ್ರಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸುತ್ತಿರುವುದರಿಂದ ದೇಶದ ಅಭಿವೃದ್ಧಿಯೂ ತ್ವರಿತ ಗತಿಯಲ್ಲಿ ಸಾಗುತ್ತಿದೆ. ತಿರುಚಿಯಲ್ಲಿರುವ ಭಾರಿ ವಿದ್ಯುತ್ ಉಪಕರಣಗಳ ಕಾರ್ಖಾನೆಯೂ ಈಗಾಗಲೇ ಹೆಚ್ಚು ಒತ್ತಡದ ವಾಲ್ವ್‌ಗಳಿಗಾಗಿ ನೋರ್ವೆಂಡ್ ಮತ್ತು ಪಶ್ಚಿಮ ಜರ್ಮನಿಯಿಂದ ಬೇಡಿಕೆಗಳು ಬಂದಿದ್ದು ಅವನ್ನು ಪೂರೈಸಲಾಗಿದೆ. ಹೈದರಾಬಾದಿನಲ್ಲಿರುವ ಸ್ವಿಚ್‌ಗೇರ್ ತಯಾರಿಸುವ ಭಾರಿ ವಿದ್ಯುತ್ ಉಪಕರಣಗಳ ಕಾರ್ಖಾನೆಯೂ ಸಹಾ ಸಾಕಷ್ಟು ಮುನ್ನಡೆದಿದ್ದು ಮೂಲವಿಗೆಗೆ ಕೆಲವು ವಿದ್ಯುತ್ ಉಪಕರಣಗಳನ್ನು ರಫ್ತುಮಾಡಿದೆ. ಈ ಕಾರ್ಖಾನೆಯಲ್ಲಿ ತಯಾರಾದ ವಿವಿಧ ವಿದ್ಯುತ್ ಸಲಕರಣೆಗಳನ್ನು ವಿದೇಶಗಳಿಗೆ ರಫ್ತು ಮಾಡುವ ಮುನ್ನ ಅವುಗಳ ಗುಣಮಟ್ಟವನ್ನು ಸೂಕ್ಷ್ಮವಾಗಿ ಪರೀಲಿಸಲಾಗುವುದು. ಈ ವಿವಿಧ ವಸ್ತುಗಳಿಗೆ ಸಂಬಂಧಿಸಿದ ವಿನ್ಯಾಸ ತಯಾರಿಕೆ ಮತ್ತು ವಾಣಿಜ್ಯ ಇವುಗಳಿಗೆ ಸಂಬಂಧಿಸಿದ ವಿಷಯಗಳನ್ನು ನೋಡಿಕೊಳ್ಳಲು ೧೨೦೦ಕ್ಕೂ ಮಿಂರಿದ ಇಂಜಿನಿಯರ್‌ಗಳು ಸೇವೆಸಲ್ಲಿಸುತ್ತಿದ್ದಾರೆ. ೫೦೦ ಮಂದಿ ಕಾರ್ಮಿಕರು ಈ ಕಾರ್ಖಾನೆಯಲ್ಲಿ ದುಡಿಯುತ್ತಿದ್ದಾರೆ.

ವಿದ್ಯುತ್ ಸಲಕರಣೆಗಳ ಕಾರ್ಖಾನೆಗಳನ್ನು ಸ್ಥಾಪಿಸಲು ಹೆಚ್ಚು ಹಣ ಅಗತ್ಯ. ಆದುದರಿಂದಲೇ ಆರ್ಥಿಕ ವಿಷಯವನ್ನು ಮೊದಲು ವಿವೇಚಿಸಿ ನಂತರ ಇಂತಹ ಕಾರ್ಖಾನೆಯ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ

ಯದ್ವಾ ತದ್ವಾ ವರ್ತಿಸುತ್ತಾರೆ

(ಪುಟ ೫ ರಿಂದ)

ಮುಂದೆ ತನಗೆ ಗುರಿ ಪಾಯಿಂಟ್, ಪೀಕ್ ಪಾಯಿಂಟ್—ಅಂಕಾರಾಗಳನ್ನು ನಂಬಿ ಭುಟ್ಟೋ ಮುಂದಿಡಬಹುದಾದ ಯೋಜನೆಗೆ ತೊಡಗಬಹುದು. ಆದರೆ, ಆ ಯೋಜನೆ ಕಾರ್ಯರೂಪಕ್ಕೆ ಬರುವುದು ಸುತರಾಂ ಸ್ಯಾಧ್ಯವಿಲ್ಲ

ಮುಳುಗುವ ದೋಣಿಯೇರಲು ಪೀಕಿಂಗಾಗಲೀ ವಾಶಿಂಗ್ಟನ್ನಾಗಲೀ ಸಿದ್ಧವಾಗದು ಪಾಕ್ ರಾಜ್ಯ ನೀತಿಯನ್ನು ಬೆಂಬಲಿಸುವುದೆಂದರೆ ಮುಳುಗುವ ದೋಣಿಯೇರಿದಂತೆಯೇ ಎಂದು ಅವುಗಳಿಗೆ ಬಿದ್ದೆಂದೋ ಮನವರಿಕೆಯಾಗಿದೆ.

ಆದರೂ ತನ್ನ ರಾಜ್ಯಕೀಯ ಹೇರಾಸೆಯಿಂದ, ಶಕ್ತಿ ಸಮತೋಲನದ ಜಪೋಚ್ಚಾರದಿಂದ ಅವು ಇನ್ನಾನೂಬಾದದ ಬೆನ್ನು ಚಪ್ಪರಿಸುತ್ತಿವೆ.

ಇದನ್ನು ಕಂಡುಕೊಳ್ಳದ ಭುಟ್ಟೋ ತನ್ನ ವಿನಾಶವನ್ನು ತಾನೇ ತಂದು ಕೊಳ್ಳುತ್ತಾರೆ.

ನಾನಿಬ್ಬರು
ನಮಗಿಬ್ಬರೇ ಮಕ್ಕಳು
ಚಿಕ್ಕ ಸಂಸಾರ
ಸುಖಕ್ಕೆ ಆಧಾರ

ಎರಡು ಅಥವಾ ಮೂರು ಮಕ್ಕಳ ನಂತರ ಮುಂದೆ ಮಕ್ಕಳಾಗದಾಗೆ ಚಿಕಿತ್ಸೆ ಪಡೆಯುವುದು ಅತ್ಯುತ್ತಮ.

ಹೆಂಗಸರಿಗೆ— ಸಂತಾನ ನಿರೋಧ ಶಸ್ತ್ರಚಿಕಿತ್ಸೆ
ಗಂಡಸರಿಗೆ— ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ

ನುರಿತ ವೈದ್ಯರುಗಳಿಂದ ಶಸ್ತ್ರ ಚಿಕಿತ್ಸೆ ಪಡೆಯುವ ಅವಕಾಶವಿದೆ. ಹೆಂಗಸರಿಗಿಂತ ಗಂಡಸರು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವುದು ಉತ್ತಮ ಏಕೆಂದರೆ

1. ತುಂಬಾ ಸುಲಭ
2. 30 ನಿಮಿಷಗಳಲ್ಲಿ ಚಿಕಿತ್ಸೆ ಮುಗಿದು, ಮನೆಗೇ ಹೋಗಬಹುದು. ಹೆಂಗಸರಾದರೆ 7 ದಿನ ಆಸ್ಪತ್ರೆಯಲ್ಲಿರಬೇಕು.

ಗಂಡಸರೇ — ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಯ ಅವಕಾಶವನ್ನು ಉಪಯೋಗಿಸಿಕೊಳ್ಳಿ.

ನಿಮ್ಮ ತಾತ್ಕಾಲಿಕ ಖರ್ಚಿಗಾಗಿ ಹಣ ಕೊಡುವ ವ್ಯವಸ್ಥೆಯೂ ಇದೆ.

ನೆನಪಿಡಿ — ಕುಟುಂಬ ಯೋಜನೆ ಕೇಂದ್ರದ ಚಿನ್ಹೆ —

ಕೆಂಪು ತ್ರಿಕೋಣ

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. 75/1971.

ಶಿವರಾಮ ಬಾಯಿರಿ —ವಾದಿ

ಮತ್ತು

ಪದ್ದಕ್ಕ ಶೆಟ್ತಿ ಕೂಡಾ —ಪ್ರತಿವಾದಿರು.

ಯಿವರೊಳಗೆ

1ನೇ ಪ್ರತಿವಾದಿ.—ಪದ್ದಕ್ಕ ಶೆಟ್ತಿ—ತೇಜಪ್ಪ ಶೆಟ್ರು ಮಗಳು–ಉಡ್ಸಿ ತಾಲೂಕು ಬೆಳ್ಳಂಪಳ್ಳಿ ಗ್ರಾಮ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ನಿಮ್ಮ ತಂದೆ ಮೃತ ತೇಜಪ್ಪ ಶೆಟ್ರು ತಾರೀಕು 25–8–1968ರಲ್ಲು ರೂಪ್ಯಾ 500/-ಕ್ಕೆ ಬರಕೊಟ್ಟ ದಿಮಾಂಡು ನೋಟಿನ ಅ್ಯವೇಜನ್ನು ವ್ಸಲು ಪಡಿಯುವ ಹಕ್ಕನ್ನು ಟ್ರಾನ್ಸ್‌ಫರ್ ಪಡೆದ ವಾದಿಗೆ ಬರಬೇಕಾದ ಅ್ಯವೇಜಿಗೆ ಆತನು ಮಾಡಿದ ಮೇಲ್ಕಂಡ ದಾವೆಯು ತಾರೀಕು 15–2–1972ಕ್ಕೆ ಯಿಟ್ಟಿದೆ. ಉದಾಪರಿಸುವಂಥಾದ್ದು ಯಿದ್ದರೆ ಆ ದಿವ್ಸ ಹೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳ ಬಹುದು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Balachandra Rao
Advocate for Plaintiff.

Udipi, 27–1–1972.

In the Court of Munsif Kundapur

O. S. 353/65 Ex. C. 395/71

Ganapathi Kamath —Plaintiff
Decree holder

Verses

Seetharam Aithala and 11 others
—Defendants
—Respondents

To

12th Respondent Defendant
K. Abdul Rahiman, son of
Budda alias Chayabba,
Koteshwar Village.

Please take notice that the above execution petition filed for recovery of the amounts due under decree has been posted to 24-2-72 for your appearance before the Court. In default of your appearance the petition will be decided in your absence.

By order of Court

Narayana Kamath
Advocate for Decree holder
Plaintiff

20—1—72

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ನವಯುಗ— ಪ್ರಜಾಪ್ರಭುತ್ವಾಂಕದ ಬಿಡುಗಡೆ

ತಾ. 27-1-72ರಲ್ಲು ನವಯುಗ ಪತ್ರಿಕೆಯ ಪ್ರಜಾಪ್ರಭುತ್ವಾಂಕವು ಭದ್ರಾವತಿಯ ಪ್ರಸಿದ್ಧ ವಕೀಲರೂ ವಾಗ್ಮಿಗಳೂ ಬರಹಗಾರರೂ ಆದ ಬಡೆಕಿಲ ಕೃಷ್ಣ ಭಟ್ಟರಿಂದ ಸರಳ ರೀತಿಯಲ್ಲಿ ಬಿಡುಗಡೆ ಮಾಡಲ್ಪಟ್ಟಿತು ಭದ್ರಾವತಿಯ ಮೂಜಿ ಶಾಸಕರೂ ಸಾರ್ವಜನಿಕ ಕಾರ್ಯಕರ್ತರೂ ಆದ ಶ್ರೀ ಬಿ. ಸೂಧನಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.

ಉದ್ಘಾಟಿಸುತ್ತಾ ಶ್ರೀ ಭಟ್ಟರು ನವಯುಗವು ಇಂದಿಗೆ 50 ವರ್ಷಗಳಿಂದ ತನ್ನ ಅಸ್ತಿತ್ವವನ್ನು ಬೆಳಿಸಿಕೊಂಡು ಬಂದು ಸಾಹಿತ್ಯ ಸೇವೆ ಮಾಡುತ್ತಿರುವುದು ಶ್ಲಾಘನೀಯವೆಂದೂ ನವಯುಗದ ಪುನರ್ಜೀವನದಿಂದಾಗಿ ದಕ್ಷಿಣ ಕನ್ನಡಕ್ಕೂ ಕರ್ನಾಟಕಕ್ಕೂ ವೈಶಿಷ್ಟೀಕ ಹಾಗೂ ಸಾಹಿತ್ಯಿಕ ಲಾಭವಿದೆ ಎಂದೂ ತಿಳಿಸಿ ಇದರ ಉತ್ತರ್ಷಕ್ಕೆ ಪ್ರಯತ್ನಿಸಿ ನಮ್ಮ ಜಿಲ್ಲೆಯ ಬರಹಗಾರರ ಬಳಗವನ್ನು ವೃದ್ಧಿಸಬೇಕೆಂದು ತಿಳಿಸಿದರು. ಪೂತ್ರ ಬಲ್ಲದೆ ಇತರ ಕೆಲಸದಲ್ಲಿ ಸಂಖ್ಯಾಧಿಕ್ಯ ಮುಖ್ಯವಲ್ಲವೆಂದೂ ವಿಚಾರವೇ ಅಗ್ರಸ್ಥಾನವನ್ನು ಪಡೆಯಬೇಕೆಂದೂ ತಿಳಿಸಿ ನವಯುಗದ ಸರ್ವಾಂಗೀಣ ಪ್ರಗತಿಯಲ್ಲಿ ಸಹಕರಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಡಾ. ಪಿ. ಗುರುರಾಜ ಭಟ್ಟರು ಶ್ರೀ ಎ. ಜಿ. ಅಯ್ಯರ ಬಗ್ಗೆ ಈ ಸಂದರ್ಭದಲ್ಲಿ ಹಿತವಚನಗಳನ್ನು ನುಡಿದರು. ಅಧ್ಯಕ್ಷರು ಈ ಪತ್ರಿಕೆಗೆ ಉಜ್ವಲ ಭವಿಷ್ಯವಿದೆ ಎಂದು ಆಶಿಸಿದರು. ಶ್ರೀ ಹೊಸ್ಮನೆ ಶಿಟ್ಟರು ಆರಂಭದಲ್ಲಿ ಸ್ವಾಗತಿಸಿ, ಆತಿಥಿಗಳ ಪರಿಚಯ ನೂಡಿದಲ್ಲದೆ ಆಂತ್ಯದಲ್ಲಿ ವಂದನಾರ್ಪಣೆ ಮಾಡುತ್ತ ಸದ್ಯವೇ ಆಜರಿಸುವ ನವಯುಗ ಸುವರ್ಣೋತ್ಸವಕ್ಕೆ ಸರ್ವರ ಸಹಕಾರ ಕೋರಿದರು.

ಮಿಲಾಗ್ರಿಸ್ ಕಾಲೇಜಿನಲ್ಲಿ ವಿಚಾರ ಸಂಕೀರ್ಣ

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಕನ್ನಡ ವಿಭಾಗವು ವಿಚಾರ ಸಂಕೀರ್ಣವೊಂದನ್ನು ಕಳೆದ ತಾ. 27ರಂದು ಜರಗಿಸಿತು. ಸಭೆಯ ಆರಂಭದಲ್ಲಿ ಪ್ರಿನ್ಸಿಪಾಲ್ ಡಾ। ಗುರುರಾಜ ಭಟ್ಟರು ಸಮೂರಂಭದ ಮುಖ್ಯ ಅತಿಥಿಗಳಾದ ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರ ಹಾಗೂ ಭದ್ರಾವತಿಯ ಮಾಜಿ. ಎಂ ಎಲ್. ಎ. ಆಗಿರುವ ಶ್ರೀ ನೂಥ ಪಾಚಾರ್ಯರನ್ನು ಸಭೆಗೆ ಪರಿಚಯ ಮಾಡಿಕೊಟ್ಟು ಸ್ವಾಗತಿಸಿದರು ಬಳಿಕ ಶ್ರೀ ಅನಂತರಾಮು ಬಳ್ಳಾಳ, ಕುಮಾರಿ ವಿನುಲಾಯು, ಸಿಸ್ಟರ್ ವಕಾಡಾ, ಕುಮಾರಿ ಜಿ. ಸುಧಾಮಯಿ ಎಂಬವರು ಕ್ರಮವಾಗಿ "ಪಂಪನ ಕೃಷ್ಣ— ಒಂದು ಸಮೀಕ್ಷೆ", "ಶಿವರಠಣರ ವಚನಗಳಲ್ಲಿ ಜೀವನಾದರ್ಶ", 'ಜಗತ್ಕಲ್ಯಾಣಕ್ಕೆ ಕ್ರೈಸ್ತ ಸಂತರ ಕೊಡುಗೆ', "ಜನಜೀವನಕ್ಕೆ ಆಧ್ಯಾತ್ಮಿಕತೆಯ ಆವಶ್ಯಕತೆ ಎಂಬ ವಿಷಯದ ಮೇಲೆ ತಾವೇ ಸಿದ್ಧಪಡಿಸಿದ ಪ್ರಬಂಧಗಳನ್ನು ಓದಿದರು. ತದನಂತರ ಮುಖ್ಯ ಅತಿಥಿಗಳಾದ ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರು ನಾಲ್ಕೂ ವಿಚಾರಗಳನ್ನು ಸಮನ್ವಯಿಸಿ ಬೋಧ ಪ್ರದವಾದ, ವಿಚಾರ ಪರಿಪ್ಲುತವಾದ ಭಾಷಣವನ್ನಿತ್ತರು. ಆನರು ಮಾತನಾಡುತ್ತಾ ಆಧ್ಯಾತ್ಮ ಎನ್ನುವುದು ಕೇವಲ ಆಂಧಶ್ರದ್ಧೆಯೂಗಬಾರದು. ಯಾರು ಬಯಸಿ ಹುಟ್ಟಲಿಲ್ಲ ಬಯಸಿದಾಗ ಸಾಯುವಂತಿಲ್ಲ. ಬಾಳಿದನ್ನೂ ಕಾಲ ಆಂತಃಪ್ರೇರಣೆಗೆ ತಕ್ಕಂತೆ, ಮನಸಾಕ್ಷಿಯೂಗಿ ವಿರೋಧವಾಗದ ರೀತಿಯಲ್ಲಿ ಚೆನ್ನಾಗಿಯೇ ಬಾಳಬೇಕು. ನಮ್ಮ ದೈವಕ್ಕೆ ಹೆದರಿ ನಾವು ಬಾಳಬೇಕಿಲ್ಲ. ಆದು ಹೇಡಿತನ. ನಮ್ಮ ಒಳ ಪ್ರೇರಣೆಗೆ ವಿರೋಧವಾದ ರೀತಿಯಲ್ಲಿಯೇ ಬಾಳಬೇಕು ಎಂದು ತಿಳಿಸಿದರು. ಸುಂದುವರಿಸುತ್ತಾ ಅವರು ಯೂರೂಬುದ್ಧಿ ನಂತರಾಗಿ ಹುಟ್ಟಲಿಲ್ಲ. ಜ್ಞಾನವನ್ನು ಸಂಪಾದಿಸಬೇಕು, ಅದಕ್ಕಾಗಿ ಜಿಜ್ಞಾಸೆ ಆಗತ್ಯ ಎಂದು ತಿಳಿಸಿದರು. ಜೀವನದ ಮೌಲ್ಯಗಳ ಕುರಿತು ಪ್ರಸ್ತಾಪಿಸುತ್ತಾ ಮೌಲ್ಯಗಳಲ್ಲಿ ಇತ್ತೀಚಿನ ಮೌಲ್ಯ, ಆಧುನಿಕ ಮೌಲ್ಯ, ಈಗಿನ ಮೌಲ್ಯ ಎಂಬುದಿಲ್ಲ. ಮೌಲ್ಯವೆಂಬುದು ಸನಾತನವಾದುದು, ನಿರಂತರವಾದುದು ಎಂದು ತಿಳಿಸಿದರು. ಭಾಷಣದ ಆಂತ್ಯದಲ್ಲಿ ವಿದ್ಯಾರ್ಥಿಗಳು ಬರೆದ ಪ್ರಬಂಧಗಳ ಕುರಿತು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಆಂತ್ಯದಲ್ಲಿ ಕಾಲೇಜ್ ಯೂನಿಯನ್ನಿನ ಉಪಕಾರ್ಯದರ್ಶಿಯೂದ ಶ್ರೀ ಉಮಾನಾಥ ಶೆಟ್ಟರು ಧನ್ಯವಾದವನ್ನು ಅರ್ಪಿಸಿದರು.

ರಜತೋತ್ಸವ ಸ್ಮಾರಕ ಶಾಲಾ ಕಟ್ಟಡ ಶಿಲಾನ್ಯಾಸ

ಮೂಡಬಿದಿರೆಯ ಪ್ರಾಂತ್ಯ ಸರಕಾರಿ ಹಯರ್ ಪ್ರೈಮರಿ ಶಾಲೆಯ ರಜತೋತ್ಸವ ಸ್ಮಾರಕ ಶಾಲಾ ಕಟ್ಟಡದ ಶಿಲಾನ್ಯಾಸವನ್ನು ತಾ. 22ರಂದು ಬಲ್ಲಾಳ ಮೋಟಾರ್ಸ್‌ನ ಮಾಲಕ ಶ್ರೀ ಕೆ. ಜಯರಾಜ ಬಲ್ಲಾಳರು, ಶ್ರೀ ಜಿ. ವಾಸುದೇವ ಪೈಯವರ ಆಧ್ಯಕ್ಷತೆಯಲ್ಲಿ ನೆರವೇರಿಸಿದರು. ಆರಂಭದಲ್ಲಿ ರೋಟರಿ ಕ್ಲಬ್‌ನ ಆಧ್ಯಕ್ಷ ಪ್ರೊ। ಯು. ಶ್ರೀನಿವಾಸ ಉಪಾಧ್ಯಾಯರು ಸ್ವಾಗತಿಸಿ, ಈ ಕಟ್ಟಡದ ನಿರ್ಮಾಣ ಕಾರ್ಯವನ್ನು ಈ ವರುಷದ ತಮ್ಮ ಸಮಾಜಸೇವಾ ಕಾರ್ಯವಾಗಿ ರೋಟರಿ ಕ್ಲಬ್ ಸ್ವೀಕರಿಸಿದ್ದು ಆದಃ ಯಶಸ್ವಿಯಾಗುವಂತೆ ಸಾರ್ವಜನಿಕರ ಸಹಕಾರ ಕೋರಿದರು ಶಾಲಾ ಮುಖ್ಯೋಪಾಧ್ಯಾಯ ಶ್ರೀ ವೈ. ರಾಮಕೃಷ್ಣರು ವರದಿವಾಚನ ಗೈದರು. ರೋಟರಿ ಗವರ್ನರರ ಪ್ರತಿನಿಧಿ ಶ್ರೀ ಕೆ. ಎನ್. ಬಾಸ್ರಿಯವರು ಸಮಯೋಚಿತ ಮಾತುಗಳನ್ನಾಡಿದರು. ಶ್ರೀ ಕೆ. ಜಯರಾಜ ಬಲ್ಲಾಳರು ತಮ್ಮ ತೀರ್ಥರೂಪರಾದ ದಿ| ಕೆ. ಸಾಂಡ್ಯರಾಜ ಬಲ್ಲಾಳರ ಸ್ಮರಣಾರ್ಥ ರೂ. 1001ನ್ನು ಶಾಲಾ ಕಟ್ಟಡಕ್ಕೆ ದಾನವಾಗಿತ್ತರು.

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟ್

R. R. C. 446/71

ಸುನಂದಾದೇವಿ — ಅರ್ಜಿದಾರಳು.

ರಾಮಣ್ಣ ಪ್ರಭು ಕೂಡಾ — ಎದ್ರಿರು.

2ನೇ ಎದ್ರಿ ಶ್ರೀಧಾಕರ S/o ಕೊರಗಪ್ಪಯ್ಯ, ಬಂಟ್ವಾಳ ತಾಲ್ಲು ಕಾವಳಪಡೂರು ಗ್ರಾಮವ ಕರಂಬಳಕೋಡಿ. P.O. ವಗ್ಗೆ. S.K. ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದ್ರೆ, ಅರ್ಜಿದಾರಳು ಮೂದಿದ ಮೇಲ್ಕಾಣಿಸಿದ ಗೇಣಿ ಅರ್ಜಿಯಲ್ಲಿ ನಿಮ್ಮ ಹಾಜರಾತಿ ಬಗ್ಗೆ ಇವೇ 29-2-72ಕ್ಕೆ ಇರುತ್ತದೆ. ಆ ದಿನ ಬೆಳಗ್ಗೆ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ನ್ಯಾಯ ನ ವಕೀಲರ ಮೂಲಕ ಹಾಜ್ರಾಗಿ ಉದಪರಿಸಿಕೊಳ್ಳಲು ತಪ್ಪಿದರೆ ನಿಮ್ಮನ್ನು ಶಿಕ್ಷಾ ಮಾಡಿ ಮುಂದುವರಿಸಲಾಗುವುದು.

(ಸಹಿ) V.M. Bhat.
B. A , L L. B.,
Advocate for Applicant

ಪುತ್ತೂರು, 28—1—72.

ಕುಂದಾಪುರ ಮು. ಕೋರ್ಟಿನಲ್ಲಿ

O. S. 316/71

ವಾದಿ— ಮಲ್ಯಯ್ಯ ಸೋರೆಗಾರ.

ಪ್ರತಿವಾದಿರು— ಲೋರೆನ್ಸ ನಜ್ರತ್ ಕೂಡಾ

2ನೆ ಪ್ರತಿವಾದಿಗೆ ಯಾಮೂಲಕ ತಿಳಿಸುವ ನೇನೆಂದರೆ—2ನೆ ಪ್ರತಿವಾದಿ ಶಿರೂರು ತಿಂನುಪ್ಪ, ದೇವನಮನ ಮಗ, ಕುಂದಾಪುರ ತಾಲ್ಲು ಪಡುವರಿ ಗ್ರಾಮದ ಯಜಮಾನೆ.

ವಾದಿಯು ಕಟ್ಟಡ ನಗ್ಗೆರೆ ಸ್ವಾಧೀನತೆ ಬಗ್ಗೆ ನಿಮ ನಗ್ಗೆರೆ ಮೇಲೆ ದಾಕಲು ಗೂಡಿದ ಮೇಲ್ಕಂಡ ದಾವೆಯು ತಾರೀಕು. 6-3-1972 ಕ್ಕೆ ತನ್ನಿಗೆ ಯಿಟ್ಟಿರುವುದರಿಂದ ಸದ್ರಿ ದಾಪೆಯಲ್ಲಿ ನಿಮ ಕತೆಯಿಂದ ಯೇನಾದರೂ ಉದಾಪರಣೆ ದಾಕಲು ಮಾಡುವರು ಯಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವ್ಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ಕೇಳಿ ಪೈಸಲು ಮಾಡೋಣಾದೀತೆಂತ ಯಿಮೂಲಕ ತಿಳಿಸೋಣಾಗುತ್ತದೆ.

M. Madhava Rao
Advocate for Plff.

ತಾರೀಕು 28-1-72, ಕುಂದಾಪುರ.

ನಮ್ಮ ಬಿಳ್ಳ

ಯುದ್ಧದ ಹೆಸರಿನಲ್ಲಿ ಮಾತ್ರ ಇರಕೂಡದು;
ಮೂಲಭೂತ ಆದರ್ಶಧ್ಯೇಯಗಳಿಗಾಗಿ ಇರಬೇಕು'

—ಇಂದಿರಾ ಗಾಂಧಿ.



ವಿಧವಿಧದ ಫಲಗಳನ್ನು ಕೊಡುವಂತಾಗುವಂತೆ ಈ ವಿಜಯವನ್ನು ಅಕ್ಕರೆಯಿಂದ ಬೆಳೆಸಬೇಕು.
ಸನುರಾಂಗಣದಲ್ಲಿ ನಮ್ಮ ಸೈನಿಕರು ಗೆದ್ದ ಯುದ್ಧವನ್ನು ಪ್ರತಿಯೊಬ್ಬರೂ ಗೃಹರಂಗದಲ್ಲಿ ಮುಂದುವರಿಸಬೇಕು.

ವಿಭಜನೆಯ ಬೋಧಕರ ವಿರುದ್ಧ ಹಕ್ಕುಗಳ ಏಕಸ್ವಾಮ್ಯ ಪಡೆದವರ ವಿರುದ್ಧ ನಾವು ಸನುರವನ್ನೇ ಸಾರುವಾ.

ರಾಷ್ಟ್ರದ ಏಕ್ಯಕ್ಕಾಗಿ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಲಿಕ್ಕಾಗಿ ನಾವು ಯುದ್ಧವನ್ನೇ ಹೂಡುವಾ.

71/478

ಉಡುಪಿ ಯಕ್ಷಗಾನ ಕೇಂದ್ರದ ವಾರ್ಷಿಕೋತ್ಸವ

ಉಡುಪಿ ಯಕ್ಷಗಾನ ಕೇಂದ್ರದ ಪ್ರಥಮ ವಾರ್ಷಿಕೋತ್ಸವವು ತಾ. 28ರಂದು ಎಂ. ಜಿ. ಎಂ. ಕಾಲೇಜಿನ ಮುಂಡಣ ಮಂಟಪದಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದ್ಮಭೂಷಣ ಶ್ರೀ ಆಲ್ಕಾ ರಂಗಾಚಾರ್ಯ (ಶ್ರೀರಂಗ)ರ ಅಧ್ಯಕ್ಷತೆಯಲ್ಲಿ ನೆರವೇರಿತು. ಯಕ್ಷಗಾನ ಪದ್ಧತಿಯಂತೆ ಸಭೆ ಪ್ರಾರಂಭವಾಯಿತು. ಯಕ್ಷಗಾನ ಕೇಂದ್ರದ ಡೈರೆಕ್ಟರ್ ಪ್ರೊ| ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸುತ್ತಾ, ಕಾರಂತರ ಶಕ್ತಿ ಸೌಮನವರ ಆತಿಥ್ಯಾವಧಿ ಮುಕ್ತು ಸ್ಥಳೀಯರ ಪ್ರೋತ್ಸಾಹದಿಂದ ಕೇಂದ್ರವು ಮುನ್ನಡೆಯುತ್ತಿದೆ ಎಂದರು.

ಶ್ರೀರಂಗರು ಮಾತಾಡಿ, ದಿಲ್ಲಿಯಲ್ಲಿರುವ ನೇಷನಲ್ ಸ್ಕೂಲ್ ಆಫ್ ಡ್ರಾಮಾ ಮಾದರಿಯಲ್ಲಿ ಕನ್ನಡ ನಾಡಿನ ಯಕ್ಷಗಾನ ಮೊದ್ಲಾಟಗಳಂತ ವ್ಯಾವಸಾಯಿಕ ಜಾನಪದ ಕಲೆಗಳ ಶಾಲೆಗಳನ್ನು ಸ್ಥಾಪಿಸಿ ಜವುಗಳನ್ನುಳಿಸಲು ಪ್ರಯತ್ನಿಸುವುದು ಬಹಳ ಎಂದರು. ಶ್ರೀ ಕೆ. ವ್ಯಾಸರಾಯ ಶೈಮವರು ಧನ್ಯವಾದ ಅರ್ಪಿಸಿದರು.

ಇದೇ ಸಂದರ್ಭದಲ್ಲಿ ಕಾಲೇಜು ಪ್ರಿನ್ಸಿಪಾಲರು, ವ್ಯಾಖ್ಯಾನಕರು ಮುಕ್ತು ವಿದ್ಯಾರ್ಥಿಗಳು ಪದ್ಮಭೂಷಣ ಪದವಿ ಶ್ರೀರಂಗುಗೆ ಸನ್ಮಾನಪತ್ರವಿತ್ತು ಸತ್ಕರಿಸಿದರು.

ಪ್ರೊ| ಕೆ. ಎಸ್. ಶ್ರೀಪತಿ ಆಚಾರ್ಯರು ಸನ್ಮಾನ ಪತ್ರವನ್ನು ಓದಿ ಹೇಳಿದರು. ಎಸ್. ಎಸ್. ಮೂಡಪಪ್ರಿಯೆಯವರು ಅವರನ್ನು ಗಂಧದ ಕರಡಿಗೆಯಲ್ಲಿಟ್ಟು ಶ್ರೀರಂಗರಿಗೆ ಅರ್ಪಿಸಿದರು.

ಶ್ರೀ ರಂಗರು ತಮ್ಮ ಉತ್ತರದಲ್ಲಿ ಅಧ್ಯಾಪಕನ್ನು ಪ್ರಾಮಾಣಿಕನಾಗಿ ನುಡಿನರೆ ನೌರವ ಅವನನ್ನು ಆರಿಸಿಕೊಂಡು ಬರುತ್ತದೆ. ಇಂದಿಗೂ ಅಧ್ಯಾಪಕರಿಗೆ ಬೇಕಾದುನು ವಿದ್ಯಾರ್ಥಿಗಳ ನೌರವ ಮತ್ತು ಪ್ರೀತಿ ಹೊರತು ಬೇರಾವುನೂ ಅಲ್ಲ. ಶಿಸ್ತು ಸ್ವಭಾವತಃ ಬರಬೇಕಾದ್ದು. ಸತ್ಯವಾದಿತ್ವ, ಪ್ರಾಮಾಣಿಕತೆ ಇವೂ ಇಂದು ಶಿಸ್ತು. ಇಂದು ಸಮಾಜ ಇವನ್ನು ಕತೆಗಾಣಿಸಿರುವುದರಿಂದ ವಿದ್ಯಾರ್ಥಿ ಸಮುದಾಯವಲ್ಲಿ ನೂತ್ರ ಶಿಸ್ತನ್ನು ಅಪೇಕ್ಷಿಸುವುದು ಸರಿಯಲ್ಲ. ಸಮಾಜ ಶಿಸ್ತನ್ನು ಮೆನ್ನಿಸಲಿ ಎಂದರು.

ಕನ್ನಡ ಪ್ರಾಧ್ಯಾಪಕ ಶ್ರೀ ವಿ. ಶ್ರೀನಿವಾಸ ಭಟ್ಟರು ಧನ್ಯವಾದ ಸಮರ್ಪಿಸಿದರು. ಕೇಂದ್ರವನ್ನ ಪ್ರಗತಿಗಾಗಿ ಮತಿಯುತ್ತಿರುವ ಗುರು ವೀರಭದ್ರನಾಯಕರಿಗೂ, ಭಾಗವತ ನೀಲಾವರ ರಾಮಕೃಷ್ಣರಿಗೂ, ಮದ್ದಳೆಗಾರ ಹಿರಿಯಮ್ಮ ಗೋಪಾಲರಾಯರಿಗೂ ಉಡುಗೊರೆಗಳನ್ನಿಯಲಾಯಿತು.

ಅಂತ್ಯದಲ್ಲಿ ಕೇಂದ್ರದ ವಿದ್ಯಾರ್ಥಿಗಳಿಂದ 'ಅವಕುಶ' ಎಂಬ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಿತು. ಗುರು ವೀರಭದ್ರನಾಯಕರು ಇದರಲ್ಲಿ ಶ್ರೀ ರಾವಣನಾಗಿ ಅಭಿನಯಿಸಿದರು.

●●

ದೇವರೇ, ಮಿತಭಾಷಿಗಳಾದ ಮಂತ್ರಿಗಳನ್ನು ನಮಗೆ ನೀಡು. [ಹಿತವಚನಕಾರ ಮಹಿಳೆಯರನ್ನು ದಯಪಾಲಿಸು.

o o o

ದ. ಕನ್ನಡದ (ಆ) ಕಾಂಗ್ರೆಸ್ ಅಭ್ಯರ್ಥಿಗಳು

ದ. ಕ. ದ ಯಾದಿಯಲ್ಲಿ ಐಂಟ್ಯಾಳವನ್ನು ಕಮ್ಯೂನಿಸ್ಟ್ ಪಾರ್ಟಿಗೆ ಬಿಟ್ಟುಕೊಡುವುದೆಂದು ನಿರ್ಧರಿಸಲಾಗಿದ್ದು ಉಳಿದ ಪದಿನೂರು ಸ್ಥಾನಗಳಿಗೆ ಈ ಕೆಳಗಿನಂತೆ ಶಿಫಾರಸು ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಕೇಂದ್ರ ಚುನಾವಣಾ ಸಮಿತಿಯು ಇದರಲ್ಲಿ ಹೆಚ್ಚಿನ ಬನಲಾವಣೆ ಮಾಡಲಾರದೆಂದು ಹೇಳಲಾಗುತ್ತಿದೆ. ಮಂಗಳೂರು: ಶ್ರೀಮತಿ ಎಡ್ಡಿ ಸಲ್ದಾನ, ಮಂಗಳೂರು, ಶ್ರೀ ಫರೀದ್, ಸುಳ್ಯ: ಶ್ರೀ ಪಿ. ಡಿ. ಬಂಗೇರಾ, ಬೆಳ್ತಂಗಡಿ: ಶ್ರೀ ಸುಬ್ರಹ್ಮಣ್ಯ ಗೌಡ, ಪುತ್ತೂರು: ಶ್ರೀ ಕೆ. ಶಂಕರ ಆಳ್ವ, ಕಾರ್ಕಳ: ಶ್ರೀ ವೀರಪ್ಪ ಮೊಲಿ, ಮೂಡಬಿದ್ರೆ: ಡಾ|| ವಾಮೋದರ, ಉಡುಪಿ: ಶ್ರೀಮತಿ ಮನೋರಮಾ ಮಧ್ವರಾಜ್, ಬ್ರಹ್ಮಾವರ: ಶ್ರೀ ಜಯಪ್ರಕಾಶ ಶೆಟ್ಟಿ, ಕುಂದಾಪುರ: ಶ್ರೀಮತಿ ವಿನ್ಸಿಸ್ಟ್ರೆಡ್ ಫೆರ್ನಾಂಡಿಸ್, ಬೈಂದೂರು: ಶ್ರೀ ಎ ಜಿ. ಕೊಡ್ಗಿ, ಕಾಸು: ಶ್ರೀ ಭಾಸ್ಕರ ಶೆಟ್ಟಿ ಸುರತ್ಕಲ್: ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.

ಶ್ರೀ ಸತ್ಯ ಸಾಯಿಬಾಬಾರ ಕುರಿತು ಭಾಷಣ

ಇತ್ತೀಚೆಗೆ ಜರಗಿದ ಉಡುಪಿ ರೋಟರಿ ಕ್ಲಬ್ಬಿನ ಸಭೆಯಲ್ಲಿ ಮಾಜಿ ಎಲ್.ಐ.ಸಿ. ಡಿವಿಜನಲ್ ಮೆನೇಜರ್ ಶ್ರೀ ಕೆ ಆರ್. ಕೆ. ಭಟ್ಟ ಶ್ರೀ ಸತ್ಯಸಾಯಿ ಬಾಬಾರ ಕುರಿತು ಹೃದಯಂಗಮವಾಗಿ ಮಾತಾಡಿದರು. ಶ್ರೀ ಬಾಬಾರ ಸಂದೇಶದ ಕುರಿತು ಅವರು ಪ್ರಸ್ತಾಪಿಸಿದರು. ಪೆಜ್ಞಾನಿಗಳು ವಿದ್ಯಾನಂತರು, ಪಂಡಿತರು ಶ್ರೀ ಬಾಬಾರಲ್ಲಿ ದೇವಾಂಶವನ್ನು ಕಂಡುಕೊಂಡಿರುತ್ತಾರೆಂದು ಶ್ರೀ ಭಟ್ಟರು ಹಲವು ಘಟನೆಗಳ ಮೂಲಕ ವಿವರಿಸಿದರು ಅಲ್ಲದೆ ಅವರ ಹಲವು ಪವಾಡಗಳ ಕುರಿತೂ ಅವರು ಪ್ರಸ್ತಾಪಿಸಿದರು. ಆರಂಭದಲ್ಲಿ ಅಧ್ಯಕ್ಷ ಡಾ ಕೆ. ಮೋಹನದಾಸ ಪೈಯವರು ಸ್ವಾಗತಿಸಿ ಶ್ರೀ ಕೆ ಆರ್.ಕೆ. ಭಟ್ಟರು ಉಡುಪಿ ರೋಟರಿ ಸಾಧನೆಗೆ ಕಾರಣವೆಂದೂ ಅವರ ಮಾರ್ಗದರ್ಶನದಿಂದ ಕ್ಲಬ್ಬು ಪ್ರಬುದ್ಧವಾಗಿ ಬೆಳೆದಿರುವುದೆಂದೂ ಹೇಳಿದರು.

ಶ್ರೀ ಎ.ಜಿ. ಆಲ್ಡಿಯವರು ಶ್ರೀ ಭಟ್ಟರ ಪರಿಚಯ ಮಾಡಿ ಕೊಟ್ಟರು.

ಮಂಗಳೂರಲ್ಲಿ ಪ್ರಜಾರಾಜ್ಯೋತ್ಸವ

ತಾ 26ರಂದು ನಗರನ ನೆಹರೂ ಮೈದಾನದಲ್ಲಿ ಗಣರಾಜ್ಯ ದಿನೋತ್ಸವದ ಅಂಗವಾಗಿ ಬೆಳಿಗ್ಗೆ 8 ಗಂಟೆಗೆ ಜರಗಿದ ಧ್ವಜಾರೋಹಣ ಸಮಾರಂಭದಲ್ಲಿ ದ. ಕ. ಜಿಲ್ಲಾಧಿಕಾರಿ ಶ್ರೀ ಎನ್. ಎ. ಮುತ್ತಣ್ಣನವರು ಸೇರಿದ್ದ ಬೃಹತ್ ಜನ ಸಮೂಹವನ್ನು ಉದ್ದೇಶಿಸಿ ಮಾತನಾಡಿದರು. ಅವರು ಇನ್ನು ಕೆಲವೇ ದಿನಗಳಲ್ಲಿ ಜರಗಲಿರುವ ವಿಧಾನ ಸಭಾ ಚುನಾವಣೆಯ ಕಾಲದಲ್ಲಿ ಶಿಸ್ತು ಮತ್ತು ಕಾನೂನನ್ನು ಪಾಲಿಸಿ ಸರಕಾರದೊಡನೆ ಸಹಕರಿಸುವಂತೆ ಜಿಲ್ಲೆಯ ಜನತೆಯನ್ನು ವಿನಂತಿಸಿದ್ದಾರೆ. ಅಲ್ಲದೆ ನಾವೀಗ ನಮ್ಮ ಜವಾನರ ಹಾಗೂ ಕಿಸಾನರ ಅಕ್ಷೋತ್ತರಗಳನ್ನು ಕಾಪಾಡಲು ದುಡಿಯಬೇಕೆಂದು ಕರೆ ಇತ್ತಿದರು.

ಪಥ ಸಂಚಲನ ನಡೆದ ಬಳಿಕ ಪೋಲೀಸರ ಮಕ್ಕಳಿಂದ ಶಾರೀರಿಕ ವ್ಯಾಯಾಮ, ಸೈಂಟ್ ಎಲೋಸಿಯಸ್ ಕಾಲೇಜು ಮಾಧ್ಯಮಿಕ ವಿದ್ಯಾರ್ಥಿಗಳಿಂದ ವ್ಯಾಯಾಮ, ಎನ್. ಸಿ. ಸಿ. ನೇವಲ್ ವಿಂಗ್, ಪಣಂಬೂರು ಕೇಂದ್ರೀಯ ವಿದ್ಯಾಲಯದವರಿಂದ 'ನುತೆನಾಡಿನ ಜನರು' ನೃತ್ಯ, ಗರ್ಲ್ಸ್‌ಗೈಡ್ಸ್‌ಗಳಿಂದ ಪ್ರದರ್ಶನ, ಅಗ್ನಿಶಾಮಕ ದಳದವರಿಂದ ಬೆಂಕಿ ನಂದಿಸುವ ಕುರಿತು ಪ್ರದರ್ಶನ ಮೊದಲಾದ ಪ್ರದರ್ಶನ ಕಾರ್ಯಕ್ರಮಗಳು ಜರಗಿದವು.

ಸಂಜೆ ಪುರಭವನದಲ್ಲಿ ರಾಷ್ಟ್ರೀಯ ಭಾವೈಕ್ಯ ಸಮಿತಿಯ ಸರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜಿಲ್ಲಾಧಿಕಾರಿ ಶ್ರೀ ಎನ್. ಎ. ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಜರಗಿತು.

ನಗರ ಸಭಾ ಸದಸ್ಯರುಗಳಾದ ಶ್ರೀ ಎಸ್. ಎಲ್. ಭೋಜೋ ಮತ್ತು ಪಿ ಎಫ್. ರೊಡ್ರಿಗಸ್‌ರವರು ಭಾಷಣ ಮಾಡಿದರು. ಮೂಸ್ಟರ್ ಪ್ರೇಮನಾಥ ಮತ್ತು ಸಾರ್ಟಿಯವರಿಂದ ನೃತ್ಯ, ಉಜ್ರೆ, ಎಸ್. ಡಿ. ಎಂ. ಕಾಲೇಜಿನ ಶ್ರೀ ಬಿ ಡಿ. ಶೆಟ್ಟಿಯವರಿಂದ ಅನುಕರಣೆ ನಡೆದು ಅಂತ್ಯದಲ್ಲಿ ಕಡಲನಾಡು ಕಲಾವಿದರಿಂದ "ತ್ರಿವರ್ಣ ಭಾರತ" ಎಂಬ ಬಾಲಕ ಪ್ರದರ್ಶನವು ಯಶಸ್ವಿಯಾಗಿ ಜರಗಿ ಜನಮೆಚ್ಚುಗೆ ಗಳಿಸಿತು. ಅಂತ್ಯದಲ್ಲಿ ಶ್ರೀ ಎಲ್ಲೂರು ಉಮೇಶ ರಾವ್ ರವರು ಧನ್ಯವಾದವಿತ್ತರು.

ನಿನಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಕೊಲಿಟಿಯಲ್ಲಿ, ಸ್ಯಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ್ ತೂಕದಲ್ಲಿ
ಮುಂದಾಗಿ ನಮ್ಮಿಂದ ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 404/71.

ಸೋಮಪ್ಪ ಕರಸ್ಪಾ ಬ್ಯಾ —ವಾದಿಯು.
ಫ್ರಾನ್ಸಿಸ್ ಡಿಸೋಜಾ —ಪ್ರತಿವಾದಿ.

ಪ್ರತಿವಾದಿ— ಫ್ರಾನ್ಸಿಸ್ ಡಿಸೋಜಾ, ಫೋಟೋ ಡಿಸೋಜರ ಮಗ, ಜುಂಗಕೂರು ತಾಲೂಕು ತಾಲೂಕಾ ಸ್ಥಾನದ ಕಸ್ಟೋಳಿ ಎಂಬಲ್ಲಿ ಇರುವವರು. ಇವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ.

ಮೇಲಿನ ವಾದಿಯು ನಿಮಗೆ ಕಾರೀಕು 17-8-1956ರಲ್ಲಿ ಬರೆಕೊಟ್ಟ ಸಟ್ಟಿಮೆಂಟ್ ಡೀಡ್ ಪ್ರಕಾರ ಸದ್ರಿ ಸೆಟ್ಟಿಮೆಂಟ್ ಡೀಡ್‌ನಲ್ಲಿ ಕಾಣಿಸಿ ಆಸ್ತಿ ಜಮಾವಾಗಿರುವ ವಾದಿಗೆ ತಿಂಗಳು ನಿಂದರೆ ರೂಪಾ 6.00ರಂತೆ ಕಳೆದ ಕಾರೀಕು 23-2-1961 ಇಂದ 31-1-72ರ ವರೆಗಿನ ಆರಸಾರ್ಥನುತ್ತು ಆಯೂಯೂ ವ್ಯಾಜೆ ಕಾರೀಕಿನ ಬಡ್ಡಿ ಮುತ್ತು ಫೀಕ್ಸ್ ನೋಟಿಸಿನ ಖರ್ಚು ಸಸ್ಟೆದೆ ಒಟ್ಟು ರೂಪಾ 1027.46 ಕೇಳಿ ನಿಮ್ಮ ಮೇಲೆ ದಾಕ್ಲೆ ಮಾಡಿದ ಮೇಲಿನ ದಾವಾ ನಿಮ್ಮ ಹಾಜರಾತಿ ಬಗ್ಗೆ ತಾರೀಕು 17—2—72ಕ್ಕೆ ಇಟ್ಟಿರುತ್ತದೆ ಆ ಕುರಿತು ನಿಮಗೆ ಆಕ್ಷೇಪಣೆಗಳಿದ್ದರೆ ನೀವು ಕಾರೀಕು 17—2—72ರ ಪೂರ್ವಾಹ್ನ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಖುದ್ದಾಗಲೇ ನಿಮ್ಮ ವಕೀಲರ ಮೂಲಕವಾಗಲೀ ಹಾಜರು ಆಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು. ಕೋರ್ಟ್ ಹುಕುಂ ಪ್ರಕಾರ ಈ ನೋಟಿಸು ಪ್ರಕಟಿಸಿಯದೆ.

D. Venkatesh Bhat.
ವಾದಿಳ ಕಡೆ ವಕೀಲ್.

ಕಾರ್ಕಳ, ತಾರೀಕು. 28—1—72.

In the Court of the Addle Munsiff, Puttur, S.K.

O. S. 600/71

U. Dasappa Gowda —Plaintiff
State of Mysore & others
—Defendants

D3 Iddinabba alias Unhi
Partner- Bharath Timber
Trading Company,
Thumbe, Buntwal Taluk,
Post THUMBE.

Temporary—Injunction Notice and Suit Notice

Please take notice that the above Suit stands posted to 5-2-72 for your appearance and you are hereby directed to appear before the court on the said day at 10-30 A. M. in person or through an advocate failing which the case will proceed in your absence.

(By order of court)

U. P. SHIVARAMA
Adv. for Plaintiff

READ & ADVERTISE IN NAVAYUGA Weekly

(ಎರಡನೇ ಪುಟದಿಂದ)

ಮಗುವಿಗೆ ಆಗ ತಾಯಿಯ ಆಸರೆ ಬೇಡ. ಗುರುತೂ ಇಲ್ಲ. ಹಾಲೇ ಇಲ್ಲದಾಗ ಹಾಲೂಡಿಸುವ ಪ್ರಶ್ನೆ ಏಳುವುದಿಲ್ಲ.

ಈ ಸೂಕ್ಷ್ಮ ಆ ಶೂರನಿಗೆ ತಿಳಿಯದು.

ಅಲ್ಲಿಯ ತನಕ ಮಗುವಿಗೆ ಹೊರ ಜಗತ್ತಿನ ಸಂಪರ್ಕ ಇರಲಿಲ್ಲ. ಅದು ತನಕ ಅದು ತಾಯಿಯ ಗರ್ಭದಲ್ಲಿ ಸುರಕ್ಷಿತವಾಗಿತ್ತು.

ಅದು ಬಂಧನ! ಆದರೂ ಅದಕ್ಕೆ ಅವ್ಯಾಯನಾನ್ನ. ದಾಸ್ಯವನ್ನು ಸ್ವಾತಂತ್ರ್ಯ ಎಂದು ನಂಬಿ ನಡೆಯುವ ಜನ ಅಂಗೂ ಇದ್ದರು; ಮುಂದೆಯೂ ಇರುತ್ತಾರೆ. ಮಗುವಿಗೆ ಅದರ ಅರಿವು ಇಲ್ಲ.

ಬಂಧನ—ಬಿಡುಗಡೆ. ಎರಡನ್ನೂ ಅದು ತಿಳಿಯದು.
ಆದರ ಪಾಲಿಗೆ ಬಿಡುಗಡೆಯೇ ಬಂಧನವೆನಿಸಿತು.
ಬದುಕೇ ಬಂಧನವೆಂದು ಗ್ರಹಿಸಿ ಆತ್ತಿತ್ತೇನೋ?

ಅಂತಹ ವಿಸ್ಮೃತಿಯನ್ನು ನರಸಿಂಹನಲ್ಲಿ ಆ ಶಿಶು ಮೂಡಿಸಿತು

ಕೆಂಡ ಸಂಪಿಗೆಯ ಬಣ್ಣ.
ತಿದ್ದಿದ ಮೂಗು, ಬಾಯಿ, ಕಣ್ಣು.
ಬಿಲ್ಲಿನಂತೆ ಬಾಗಿದ ಹುಬ್ಬುಗಳು.
ಸೆಳೆ ಮಿಂಚಿನಂತೆ ಹೊಳೆವ ಪಾಪೆಗಳು.

ತಮ್ಮ ವೈಯಳಿವಿನೊಡನೆ–ತಮ್ಮ ನೆನಪನ್ನು ತಂದು ಕೊಡಬಲ್ಲ–ತಮ್ಮಿಬ್ಬರನ್ನೂ ಹೋಲುವ ಸುಂದರ ಶಿಶು. ತಮ್ಮ ಕುಲದ ಕುಡಿ, ಪ್ರೇಮಾನುರಾಗದ ಬಿತ್ತೊಂದು ಹೀಗೆ ದೇಹ ಹೊತ್ತು ಬಂದುದನ್ನು ಕಂಡು ನರಸಿಂಹ ಒಳ ಒಳಗೇ ಹರ್ಷಿತನಾದ.

ಕೈಯಲ್ಲಿದ್ದ ಮಗುವನ್ನು ಮುಖದ ವರೆಗೂ ಎತ್ತಿ, ಹೂವಿನ ಮೇಲೆ ಹೂವಿಡುವಂತೆ, ಅದರ ಹಣೆಯನ್ನೊಮ್ಮೆ ಮುದ್ದಿಸಿದ.

ದಾದಿಯೊಬ್ಬಳು ಶಿಶುವನ್ನು ಅವನ ಕೈಯಿಂದ ತನ್ನ ಕೈಗೆ ತೆಗೆದು ಕೊಂಡಳು. ಸಂತೃಪ್ತಿಯಿಂದ ನರಸಿಂಹ ಶಿಶುವಿನ ಕೈಯಲ್ಲೊಂದು ಸುವರ್ಣದ ನಾಣ್ಯವನ್ನಿಟ್ಟ. ನಿಂತಿದ್ದ ದಾದಿಯರಿಗೂ ಯಥೋಚಿತ ಬಹುಮಾನ ನೀಡಿದ.

ಅಷ್ಟರಲ್ಲಿ ದಾದಿಯೊಬ್ಬಳು ಅಲ್ಲಿಗೆ ಬಂದು 'ಪ್ರಭುಗಳು ದಯ ಮಾಡಿಸಬೇಕು. ದೇವಿಯವರು ಬರಹೇಳಿದರು' ಎಂದಳು. ಅವನು ಅದನ್ನೇ ಬಯಸಿದ್ದ. ದೇವಿಯ ದರ್ಶನಕ್ಕೆ ಆತ ಹಾತೊರೆದಿದ್ದ. ತನ್ನೊಳಗೇ ನಡೆಯುತಿದ್ದ ತಿಕ್ಕಾಟವನ್ನು ಆತ ಮೌನವಾಗಿ ಅನುಭವಿಸುತಿದ್ದ. ದೇವಿಯನ್ನು ಕಾಣ ಬಹುದೇ ಎಂದು ಕೇಳುವುದರಲ್ಲಿದ್ದ. ಆದರೆ ರಾಜ ಗಾಂಭೀರ್ಯ ಆದಕ್ಕೆ ಅಡ್ಡಿಯಾಗಿ ನಿಂತಿತು.

ಹಾಗೆ ಕೇಳುವುದರ ಔಚಿತ್ಯ, ಅನೌಚಿತ್ಯ ಅವನನ್ನು ಕಾಡಿತ್ತು.
ಈಗ ಅವಕಾಶ ಅದಾಗಿಯೇ ಒದಗಿ ಬಂತು.

ಆತ ದಾದಿಯನ್ನು ಆತುರವಾಗಿ ಹಿಂಬಾಲಿಸಿದ. ಆಕೆ ಆತನನ್ನು ಕೋಣೆಯೊಂದರ ಮುಂದು ಕರೆತಂದಳು. ಹೊರಗಿನಿಂದಲೇ 'ಚಂಪಾ! ಪ್ರಭುಗಳು ಚಿತ್ತೈಸಿದ್ದಾರೆ. ಬರಬಹುದೇ?' ಎಂದಳು.

ಕೋಣೆಯ ಬಾಗಿಲು ತೆರೆಯಿತು.

ಶುಭ್ರವಾದ ಆ ಕೋಣೆಯೊಳಕ್ಕೆ ನರಸಿಂಹ ಕಾಲಿಟ್ಟ. ದೂಪ ಧೂಮ ಕೋಣೆಯನ್ನು ವ್ಯಾಪಿಸಿತ್ತು. ಕೋಣೆಯ ಮಧ್ಯದಲ್ಲೊಂದು ಮಂಚ. ಮಂಚದ ಮೇಲೆ ಪಾಸಿದ್ದ ಸೊಗಸಾದ ಮೆತ್ತೆಯ ಮೇಲೆ ಬಾಣಂತಿ ಮಲಗಿದ್ದಳು. ಮಂಚದ ಪಕ್ಕದಲ್ಲೊಂದು ಬೆಳ್ಳಿಯ ತೊಟ್ಟಿಲು. ತೊಟ್ಟಿಲಲ್ಲಿ ಪುಟ್ಟ ಕಂದ ಮಲಗಿತ್ತು. ಮಂಚದ ಎರಡು ಪಾರ್ಶ್ವಗಳಲ್ಲಿ ಭಂಗಾರದ ಕಾಲುದೀಪಗಳು. ಅವುಗಳಲ್ಲಿ ಹಚ್ಚಿಟ್ಟ ಹತ್ತಿಯ ಬತ್ತಿಗಳು ಉರಿಯುತಿದ್ದವು. ಅವುಗಳ ಮಂದ ಪ್ರಕಾಶ ಕೋಣೆ ತುಂಬ ಹರಡಿತ್ತು. ಆ ಬೆಳಕಿನ ಆಸರೆಯಲ್ಲಿ ನರಸಿಂಹ ಮಂಚದವರೆಗೂ ಹೋಗಿ, ಆದರ ಅಂಚಿನಲ್ಲಿ ಕುಳಿತು ಕೊಂಡು 'ದೇವಿ! ಹೇಗಿದ್ದೀಯಾ' ಎಂದು ಮೃದುವಾಗಿ ಮಡದಿಯನ್ನು ನುಡಿಸಿದ.

ತಡೆಯಲಾರದ ನೋವನ್ನು ತಿನ್ನುತಿದ್ದರೂ, ನಗುತ್ತಲೇ ಆವಳು ಆವನನ್ನು ತನ್ನ ಬಾಹುಲತೆಯಲ್ಲಿ ಬಾಚಿಕೊಂಡಳು.

'ಇದ್ದೀನಿ. ಜೆನ್ನಾಗಿಯೇ ಇದ್ದೀನಿ ಸ್ವಾಮಿ, ನಿಮ್ಮ ಆರೋಗ್ಯ—?'
'ನಿನ್ನ ಆರೋಗ್ಯ ಇಂದು ಮುಖ್ಯ. ಅದನ್ನೇ ವಿಚಾರಿಸುತಿದ್ದೀನಿ.'
'ಕಂದನನ್ನು ನೋಡಿದಿರಾ?'
'ನೋಡಿದೆ'
'ಅದು ಯಾರಂತಿದೆ? ಹೇಳಿ ನೋಡೋಣ.'
'ನಮ್ಮಿಬ್ಬರನ್ನೂ ಸುಲಿದು ಬಂದಿದೆ'

ನೀವು ಸುಳ್ಳು ಹೇಳುತಿದ್ದೀರಿ. ಅದು ನಿಮ್ಮಂತಿದೆ. ಎಷ್ಟು ದೇವರಿಗೆ ಹರಕೆ ಹೊತ್ತೆನೋ? ಎಷ್ಟು ಸುಹಾಸಿನಿಯರ ಸೇವೆ ನಡೆಯಿಸಿದೆನೋ? ನಮ್ಮ ಪುಣ್ಯ; ಆಸೆ ಫಲಿಸಿತು. ನಿಮ್ಮನ್ನೇ ಹೋಲುವ ಕಂದನನ್ನು ದೈವ ಕರುಣಿಸಿತು. ಆತ ನಿಮ್ಮಂತೆ ಕೀರ್ತಿವಂತನಾಗಲಿ. ಅದೂ ಆ ದೈವಕ್ಕೆ ಬಿಟ್ಟದ್ದು'

'ಆಯಾಸ ಮಾಡಿಕೊಳ್ಳಬೇಡ'

'ನನಗೇನೂ ಆಗಿಲ್ಲ ನನ್ನ ದೊರೆ. ಎಲ್ಲ ತಾಯಂದಿರೂ ತಿನ್ನಲೇಬೇಕಾದ ನೋವನ್ನು ನಾನೂ ತಿಂದಿದ್ದೇನೆ. ಆದರಲ್ಲೇನಿದೆ ಮಹಾ! ಇಂತಹ ಗೊಂಬೆಯನ್ನು ಪಡೆಯಲು ಎಷ್ಟು ಕಷ್ಟ ಅನುಭವಿಸಿದರೂ ಕಡಿಮೆಯೇ! ಅಂತೂ ನನ್ನ ಋಣ ತೀರಿತು. ನಿಮ್ಮದನ್ನು ನಿಮಗೆ ಒಪ್ಪಿಸಿದೆ.'

'ಅದಕ್ಕೇನು ಬಹುಮಾನ ಕೊಡಲಿ?'

'ನೀವೇ ಇದ್ದೀರಲ್ಲ'
'ನಾನು ಇದ್ದೇ ಇರುತ್ತೇನೆ. ಈ ಕಂದನ್ನನ್ನ ತಾಯಿಗೆ—?'
'ಇನ್ನು ಮುಂದೆ ಏನಿದ್ದರೂ ಅದಕ್ಕೇ ಮೀಸಲಿಡಿ'

'ನಿಮ್ಮಿಬ್ಬರೊಳಗೆ ಅದನ್ನು ಇನ್ನು ಮುಂದೆ ಸಮವಾಗಿ ಹಂಚಿ ಬಿಡುತ್ತೇನೆ.' ಹೀಗೆಂದು ನರಸಿಂಹ ಅವಳ ಹಣೆಯನ್ನೊಮ್ಮೆ ಮುದ್ದಿಸಿ, ರತ್ನದ ಹಾರವೊಂದನ್ನು ಅವಳ ಕತ್ತಿಗೆ ಕಟ್ಟಿದ.

(ಮುಂದುವರಿಯುವುದು)

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ
ಚಿನ್ನದ ಹಬ್ಬದ ನಿಧಿಗೆ
ಉದಾರ ಸಹಾಯ ಮಾಡಿರಿ!

NAVAYUGA 3-2-1972

Registered with the Registrar of News Papers for India under No. R. N. 3646/'57

REGD. No. B. G. 176
LICENCE No. 33
Licensed to Post without Prepayment

ಸಾಕಪ್ಪಾ ಸಾಕು, ಈ ಯುದ್ಧ!

ಸ್ವಿಜರ್‌ಲಾಂಡಿನ ಸಂತಿತ ಬೀನ್ ಬೇಕ್ ಸ್ ಟೀಟೆ ನಡೆಸಿನ ಒಂದು ಸಂಶೋಧನೆಯ ಪ್ರಕಾರ ಕಳೆದ 3,560 ವರ್ಷಗಳಲ್ಲಿ, 14, 514 ಯುದ್ಧಗಳು– ಸಂಭವಿಸಿದ್ದು– ಅವರಲ್ಲಿ ಇಂದಿನ ವಿಸ್ತಾದ ಜನಸಂಖ್ಯೆಯಿಂದಲೂ ಅಧಿಕವಾಗಿ 365 ಕೋಟಿ ಮಂದಿ ಮಡಿದಿದ್ದಾರೆಂದು ತಿಳಿದು ಬಂದಿದೆ.

ಮೊದಲು ವಿಶ್ವಯುದ್ಧದಲ್ಲಿ ಒಂದು ಕೋಟಿ ಜನ ಸತ್ತರು. ಎರಡು ಕೋಟಿ ಜನರಿಗೆ ಗಾಯಗಳಾದವೆಲ್ಲವೂ ಲೆಕ್ಕಾಚಾರದ ಮಾತಿದೆ. ರೋಗಗಳಿಂದ ಸತ್ತರು. ಇದರಲ್ಲಿ 33,800 ಕೋಟಿ ಡಾಲರುಗಳಷ್ಟು ಹಣ ಖರ್ಚಾಗಿ ನಷ್ಟ ಉಂಟಾಯಿತೆಂದರೆ ದ್ವಿತೀಯ ವಿಶ್ವ ಯುದ್ಧದಲ್ಲಿ 3ನೆ ಲಕ್ಷ ಮಂದಿ ಸತ್ತರು. 9 ಕೋಟಿ ಜನರಿಗೆ ಗಾಯವಾಗಿ, 4,00,000 ಕೋಟಿ ಡಾಲರು ಖರ್ಚಾಗಿ ನಷ್ಟವಾಯಿತು. ಮುಸೋಲಿನಿ ಸತ್ತಲ್ಲೇ 250 ಲಕ್ಷ ಜನರೆಗಳು ಜಾಗೂ 145 ಲಕ್ಷ ಬೆಲ್ಜಿಂಗುಗಳು ನಾಶವಾದವು. 1971 ಮಾರ್ಚಿ 3ರಿಂದ 16ರ ತನಕ ಭಾರತ ಮತ್ತು ಪಾಕಿಸ್ತಾನಗಳ ನಡುವೆ ನಡೆದ ಯುದ್ಧದಲ್ಲಿ ಸಂಭವಿಸಿದ ಕಷ್ಟನಷ್ಟಗಳೆಷ್ಟು.

ಯುದ್ಧಾರಂಭದಲ್ಲಿ ಪಾಕಿಸ್ತಾನದಲ್ಲಿ 1200 ಟ್ಯಾಂಕುಗಳೂ 285 ವಿಮಾನಗಳೂ ಇದ್ದುವು.

ಪಾಕಿಸ್ತಾನದ 94 ವಿಮಾನವೂ ಭಾರತದ ಒಂದು ನೌಕಾ ವಿಮಾನವೂ ಸೇರಿ 95 ವಿಮಾನಗಳು ನಾಶವಾದವು. ಪೂರ್ವ ರಂಗದಲ್ಲಿ 207 ಮತ್ತು ಪಶ್ಚಿಮದಲ್ಲಿ 37 ಟ್ಯಾಂಕುಗಳನ್ನು ಪಾಕ್ ಕಳೆದುಕೊಂಡಿದ್ದರೆ ಭಾರತ ಪೂರ್ವದಲ್ಲಿ 7ಜಾಗೂ ಪಶ್ಚಿಮದಲ್ಲಿ 65 ಟ್ಯಾಂಕುಗಳನ್ನು ಕಳೆದುಕೊಂಡಿತು ಭಾರತದಲ್ಲಿ ಒಂದು ಯುದ್ಧ ನೌಕೆ ಮತ್ತು ನಾಶವಾಗಿದ್ದರೆ ಪಾಕಿಸ್ತಾನದ 4 ಯುದ್ಧನೌಕೆ, ಎರಡು ಜಲಾಂತರ್ಗಾಮಿ ನೌಕೆ, 16 ಗನ್‌ಬೋಟ್, 12ಮೈನ್‌ಸ್ವೀಪರ್‌ಗಳನ್ನು ಕಳೆದುಕೊಂಡಿತು. ಭಾರತದ ಭೂಬಾಗ 30 ಚದರ ಮೈಲಿ ಪಾಕಿಸ್ತಾನಕ್ಕೂ, ಸಬ್ಬಿನು ರಂಗದ 400 ಚದರ ಮೈಲಿ ಸೇರಿ ಪಾಕಿನ 1400 ಚದರ ಮೈಲಿಗೂ ಹೆಚ್ಚು ನಿಸ್ಸಾರ ಪ್ರದೇಶ ಭಾರತಕ್ಕೂ ಸಿಕ್ಕಿತು. ಭಾರತದ ನುರಿತ ಇಂಜಿನಿಯರುಗಳು ತುಲವು ಪಾಕಿನ ಟ್ಯಾಂಕುಗಳನ್ನು ರಿಪೇರಿ ಮಾಡಿದುದರಿಂದ ಮೆಚ್ಚಿನ ನಷ್ಟವಾಗಿದೆ.

ಪಾಕಿಸ್ತಾನ ವಾಯುಪಡೆಯ ವಿಮಾನ ಚಲನೆಗಳು ತಗ್ಗಿದೆ. ಅವರ ಅನೇಕ ರಾಜ್ಯಗಳು ನಮ್ಮ ವಶವಾಗಿವೆ, ಅವರಲ್ಲಿ ಢಾಕಾವಲ್ಲಿ ಸಾವಿರ ಅಧಿಕಾರಿಗಳೊಂದಿಗೆ 23 ಸಾವಿರ ಸೈನಿಕರು, ಸಯ್ಯೆದ್‌ಪುರದಲ್ಲಿ 5ಸಾವಿರ ಸೈನಿಕರು, ಜೋಗ್ರಾದಲ್ಲಿ 43 ಅಧಿಕಾರಿಗಳೂ ಸೇರಿ 1500 ಸೈನಿಕರೂ ರಂಗಪುರದಲ್ಲಿ 15 ಅಧಿಕಾರಿಗಳೂ ಸೇರಿ 345 ಸೈನಿಕರೂ ಶರಣಾಗತರಾಗಿ. ಲೆಕ್ಕವಿಲ್ಲದಷ್ಟು ಸೈನಿಕರೂ, ನೌಕಾಸೈನಿಕರೂ ಸತ್ತಿದ್ದಾರೆ.

ಭಾರತೀಯ ಪಡೆಯ ಸೇನೆಯಲ್ಲಿ ಪೂರ್ವದಲ್ಲಿ 1047 ಮಂದಿ ಸತ್ತು, 3042 ಮಂದಿ ಗಾಯಗೊಂಡು, 89 ಮಂದಿ ಕಾಣೆಯಾದರು. ಪಶ್ಚಿಮದಲ್ಲಿ 1426ಮಂದಿ ಸತ್ತು, 3611ಮಂದಿ ಗಾಯಗೊಂಡು, 2149 ಮಂದಿ ನಾಪತ್ತೆಯಾದರು. ಇದೂ ಸೇರಿ ಕಳೆದ 3560 ವರ್ಷದಲ್ಲಿ ಸಂಭವಿಸಿದ ಯುದ್ಧ 14 ಸಾವಿರದ 514 ಮಾತ್ರ.

ನ್ಯಾಟೊ ಕೂಟದ ರಾಷ್ಟ್ರಗಳು ಇಪ್ಪತ್ತು ವರ್ಷಗಳಲ್ಲಿ ಶಸ್ತ್ರಾಸ್ತ್ರಗಳಿಗಾಗಿ 1 30,000ಕೋಟಿ ಡಾಲರು ವ್ಯಯಿಸಿದೆ. ವರ್ಷಕ್ಕೆ 10ಸಾವಿರ ಕೋಟಿ ಡಾಲರಿಗಿಂತಲೂ ಹೆಚ್ಚಾದ ಈ ವೆಚ್ಚದಲ್ಲಿ ಶೇ. 75ನ್ನು ಅಮೇರಿಕ ನಹಿಸಿಕೊಂಡಿದೆ.ಅಣುಶಕ್ತಿ, ರಕ್ಷಣಾ ವ್ಯವಸ್ಥೆ ಇತ್ಯಾದಿಗಾಗಿ ಅಮೇರಿಕದ ರಾಷ್ಟ್ರೀಯ ವೆಚ್ಚದ ಬಜೆಟ್ ಶೇ. 60 ವ್ಯಯಿಸುತ್ತದೆ ಇತರ ಮಿಲಿಟರಿ ನಾಲ ಮೊದಲಾದುವುಗಳಿಗೆ ಇನ್ನೂ ಶೇ. 20 ವ್ಯಯ ಗೊಳಿಸುವುದು.

ಹಿಂದಿನವಕ್ಕಿಂತ ಮೂರು ಪಟ್ಟು ಬೆಲೆಗೆ ಅಮೇರಿಕ ಯುದ್ಧ ಸಾಧನಗಳನ್ನು ಮೂರುತ್ತದೆ. ಅದರ B-17 ಬಾಂಬರ್ ವಿಮಾನಕ್ಕೆ ಬೆಲೆ 200,000 ಡಾಲರು, B-29ಕ್ಕೆ 600 000 B-36ಕ್ಕೆ 4,000,000, B-52ಕ್ಕೆ, 8,000,000 ಡಾಲರು ಕ್ರಯವಿದೆ. ಮೊದಲ ವಿಶ್ವಯುದ್ಧದಲ್ಲಿ ಅಮೇರಿಕದ ಗುತ್ತೇದಾರಿ ಸಂಸ್ಥೆಗಳು – 4 600 ಕೋಟಿ ಡಾಲರು, 2ನೇ ಸಮರದಲ್ಲಿ 12300 ಕೋಟಿ ಡಾಲರು, ಕೊರಿಯ ಯುದ್ಧದಲ್ಲಿ 1,18,000 ಡಾಲರ್ ಲಾಭ ಪಡೆದಿವೆ.

1964ರಲ್ಲಿ ಅಮೆರಿಕ ವಿಯೆತ್ನಾಂ ಸಮರ ಆರಂಭಿಸಿದ ಮೂರು ವರುಷಗಳೊಳಗೆ ಅಮೆರಿಕೆಯ ಏಳು ಖ್ಯಾಮುಖ್ಯ 'ಏರೋಸ್ಪೇಸ್' ಸಂಸ್ಥೆಗಳ ಲಾಭಾಂಶ ಅರ್ಧದಷ್ಟು ಹೆಚ್ಚಾಗಿದೆ. ನೇಪಾಂ ಬಾಂಬ್ ಸಪ್ಲ್ಲಾಯ್ ಗೋವ್ ಕೆಮಿಕಲ್ ಕಂಪೆನಿ ಮತ್ತು ಪೋಟೋಗ್ರಾಫಿಕ್ ಫಿಲ್ಮ್ ಹಾಗೂ ಆಸ್ಫೋಟಕ ಸಾಮಗ್ರಿಯನ್ನು ತಯಾರಿಸುವ ಈಸ್ಟ್‌ಮನ್ ಕೊಡಕ್‌ಗೆ ದ್ವಿಗುಣ ಲಾಭ ದೊರಕಿದೆ. ಫಾರ್ಚೂನ್ ಪತ್ರಿಕೆ ಪ್ರಕಟಿಸಿದಂತೆ ಜನರಲ್ ಡಿಯ್ನಮಿಕ್ಸ್ ಸಂಸ್ಥೆಗೆ ನಾಲ್ಕನೆಯ ಲಾಭ ಯುದ್ಧದಲ್ಲಿ 1964ರಲ್ಲಿ 237,300,000 ಡಾಲರು ಸಿಕ್ಕಿದ್ದರೆ1970ರಲ್ಲಿ ಅದು 328,480,00 ಡಾಲರುಗಳಿಗೇರಿದೆ. ಪೆಂಟಗಾನಿನ ಸರಕು ಸಪ್ಲಾಯ್ಯ ಭೂರೀ ಸಂಸ್ಥೆಯಾದ ಇಂಟರ್ ನ್ಯಾಶನಲ್ ಟಿಸಿನೆಸ್ ಮೆಷೀನ್ಸ್‌ಗೆ ಇದ್ದ ಲಾಭ 431,100,000 ಡಾಲರು ಆಗಿದ್ದರೆ 1970ರಲ್ಲಿ 100 ಕೋಟಿ ಡಾಲರುಗಳಷ್ಟು ಅದು ಹೆಚ್ಚಿದೆ.

ಆಸ್ಫೋಟಕ ಮತ್ತು ಬಾಂಬುಗಳನ್ನು ತಯಾರಿಸುವ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ವಿಯೆತ್ನಾಂ ಯುದ್ಧದಲ್ಲಿ 1964ರಲ್ಲಿ ಪಡೆಯುತ್ತಿದ್ದ ಲಾಭ 61 21,000 ಡಾಲರುಗಳಿಂದ 214,000,000 ಡಾಲರುಗಳಿಗೇರಿದೆ. ಇದೇ ಅವಧಿಯಲ್ಲಿ ಗುತ್ತೇದಾರಿಕೆ ಸಂಸ್ಥೆ ಬ್ರಿಟನ್ನಿನ 'ಏರೋಸ್ಪೇಸ್' ಹಾಕರ್ ಸಿಡ್ಡೆ ಸಂಸ್ಥೆಯ ಲಾಭಾಂಶ 6,200,000 ಡಾಲರುಗಳಿಂದ 19,500,000 ಡಾಲರುಗಳಷ್ಟು ಹೆಚ್ಚಿದೆ. ಕೊರಿಯ ಯುದ್ಧದ ವೇಳೆಯಲ್ಲಿ ಅಮೇರಿಕೆಯ ಆರ್ಡರಿನಂತೆ ವಿಯೆತ್ನಾಂ ಯುದ್ಧಕ್ಕಾಗಿ ಅಮೇರಿಕೆಗೆ ಮಿಲಿಟರಿ ಸರಕುಗಳನ್ನು ಪೂರೈಸುತ್ತಿದ್ದ ಜಪಾನಿನ ಹಿಟಾಚಿ ಇಲೆಕ್ಟ್ರಿಕ್ ಸಂಸ್ಥೆಯ ಲಾಭ 1965ಕ್ಕಿಂತ ನಾಲ್ಕು ಪಾಲು ಅಂದರೆ 1970ರಲ್ಲಿ 139, 790,000 ಡಾಲರು ಆಗಿದೆ. ವರ್ಷವೂ ವಿಯೆತ್ನಾಂ ಯುದ್ಧಕ್ಕೆ ಅಮೇರಿಕ 2200 ಕೋಟಿ ಡಾಲರನ್ನು, (596,000 ಶಾಲಾ ತರಗತಿಗಳಿಗೂ 656,000 ಆಸ್ಪತ್ರೆ ಮಂಚಗಳಿಗೂ ವ್ಯಯಿಸಲು ಸಾಕಾಗುವ ಖರ್ಚನ್ನು) ವ್ಯಯಿಸುತ್ತಿದೆ

ಅಮೇರಿಕ ಯುದ್ಧಕ್ಕಾಗಿ ಕಳೆದ 10 ವರ್ಷದಲ್ಲಿ ವ್ಯಯಿಸಿದ ಖರ್ಚಿನಿಂದ ವಿಶ್ವದ ಪ್ರತಿಯೊಬ್ಬನಿಗೂ ತಲಾ 1ಮನೆ ಕಟ್ಟಲಾದೀತು. ಅದರಿಂದ ಉಳಿಯುವ ಹಣ 660,000 ಕೋಟಿ ಡಾಲರೆನ್ನಲಾಗಿದೆ. ಇದರಲ್ಲಿ 320,000 ಕೋಟಿ ಕೊಳಚೆ ಪ್ರದೇಶ ನಾಶ ಮತ್ತು ಗೃಹ ನಿರ್ಮಿತಿಗೆ, 6,000 ಕೋಟಿ ಡಾಲರು–ಶಾಲಾ ನಿರ್ಮಿತಿಗೆ, 7000 ಕೋಟಿ ಆಸ್ಪತ್ರೆಗಳಿಗೆ ಮತ್ತು 210,00 ಕೋಟಿ ಸಾರ್ವಜನಿಕ ರಸ್ತೆ, ಕಟ್ಟಡಗಳಿಗೂ ಬಳಸಬಹುದಂತೆ!

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

ಸುಂದೋಪಸುಂದರ ನಡುವೆ ಊರ್ವತಿ?

(ಒಂದನೇ ಪುಟದಿಂದ)

ದ್ದು. ಅವರ ಸನೂಜವಾದದ ಪ್ರಗತಿಶೀಲತೆಯ ಬಗ್ಗೆ ಯಾರಿಗೂ ಅನುಮಾನವಿಲ್ಲ. ಆದರೆ, ಅವರು ರಾಜ್ಯದ ರಾಜ್ಯಕೀಯಕ್ಕೆ ಇಳಿಯಲು ಮನಸ್ಸು ಮಾಡುತ್ತಾರೆಯೇ ಎಂಬುದು ಯಕ್ಷ ಪ್ರಶ್ನೆ.

ಇನ್ನೊಂದು ಹೆಸರು ಚಿರಪರಿಚಿತವಾದದ್ದು. ವೀರೇಂದ್ರ ಪಾಟೀಲರದ್ದು. ಕೇಂದ್ರ ಪಕ್ಷದೊಡನೆ ಸಂಬಂಧ ಕಡಿದುಕೊಳ್ಳಲು ನಿರಾಕರಿಸಿದ ಅವರ ಪಕ್ಷವು ಅಭ್ಯರ್ಥಿಗಳನ್ನು ಎಷ್ಟು ಸ್ಥಾನಕ್ಕೆ ನಿಲ್ಲಿಸುವುದೆಂಬುದೊಂದು ಪ್ರಶ್ನೆ. ಇವರಲ್ಲಿ ಎಷ್ಟು ಮಂದಿ ಜಯಗಳಿಸಬಲ್ಲರೆಂಬುದು ಮತ್ತೊಂದು ಪ್ರಶ್ನೆ. ಜಯಗಳಿಸುವುದು ಬೇರೊಂದು ಪ್ರಶ್ನೆ. ಶ್ರೀಮತಿ ಗಾಂಧಿಯವರ ಕೀರ್ತಿ ವಿಶ್ವವ್ಯಾಪ್ತಿಯಾಗಿರುವ ಈ ಸಮಯದಲ್ಲೂ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾದರೆ ಅದು ಜಗತ್ತಿನ ಅಷ್ಟಮ ಅಶ್ಚರ್ಯವಾಗುವುದರಲ್ಲಿ ಸಂದೇಹವಿಲ್ಲ. ●

ನೋಟೀಸು

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಮಂಗಳೂರು

P & S. C. No. 1/1972.

ಮೃತ ಸುಂಜಯ್ಯ ಶೆಟ್ಟಿಗೆ ಬರಬೇಕಾದ ಐವೇಜನ ಬಾಬ್ತು ಕೆ.ಸುಂಜಯ್ಯ ಶೆಟ್ಟಿ, ನಗ್ಗೆರೆದು —ಅರ್ಜಿದಾರರು

ಮೇಲ್ಕಂಡ ಅರ್ಜಿದಾರರು ಅವರ ಆಪ್ತ ಪುಟ್ಟಯ್ಯ ಶೆಟ್ಟಿ ಮಗ ಮೃತ ಸುಂಜಯ್ಯ ಶೆಟ್ಟಿ, ಕುಂದಾಪುರ ತಾಲೂಕು ಕಾಳಾವರ ಗ್ರಾಮದ ನಿವಾಸಿ ಇವರಿಗೆ ಬರತಕ್ಕ ಕೆಲ ಐವೇಜನ ಬಾಬ್ತು 1ನೆ ಕೆ ಮಂಜಯ್ಯ ಶೆಟ್ಟಿ ಹೆಸರಲ್ಲಿ ಸಕ್ಸೆಸರನ್ ಸರ್ಟಿಫಿಕೇಟ್ ಕೊಡಬೇಕೆಂದು ಅರ್ಜಿ ಕೊಟ್ಟಿದ್ದು ಅದಕ್ಕೇನಾದರೂ ಆಕ್ಷೇಪ ವಿದ್ದಲ್ಲಿ ತಾ. 29–2–1972ರಂದು ಬೆಳಿಗ್ಗೆ ಘಂ. 11ಕ್ಕೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪದಾರರು ಹಾಜರಾಗಿ ತಿಳಿಸತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

Sd/- K. Rajaram Hegde

ಅರ್ಜಿದಾರರ ಎಡ್ವೋಕೇಟ್

ಮಂಗಳೂರು, 18—1—1972.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೇತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

Edited, Printed & Published by K. U. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೨೩

NAVAYUGA

10—2—1972

ರಾಜ್ಯಪಾಲರಿಗೆ

ಬೀಳ್ಕೊಡುಗೆ ಮತ್ತು ಸ್ವಾಗತ

ಕರ್ನಾಟಕದ ರಾಜ್ಯಪಾಲ ಪದವಿಗೆ ಬಂದವರೆಲ್ಲರೂ ಇತಿಹಾಸ ನಿರ್ಮಿಸಿದ ಪಾಖಲೆಯುಳ್ಳವರು; ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್, ಶ್ರೀಗಳಾದ ವಿ.ವಿ.ಗಿರಿ, ಜಿ.ಎಸ್. ಪಾಠಕ್ ಮತ್ತೀಗ ನಿವೃತ್ತರಾದ ಶ್ರೀ ಧರ್ಮವೀರ— ಇವರೆಲ್ಲರೂ ಸಾಮಾನ್ಯ ವ್ಯಕ್ತಿಗಳಲ್ಲ. ಈ ಮಹಾ ವ್ಯಕ್ತಿಗಳನ್ನು ರಾಜ್ಯಪಾಲರೆಂದು ಪಡೆದ ಕರ್ನಾಟಕ ಧನ್ಯ.

ಮೊದಲ ಮೂವರ ಕಾಲಾವಧಿಯಲ್ಲಿ ರಾಜ್ಯದಲ್ಲಿ ಸುಭದ್ರ ಸರಕಾರವಿತ್ತು; ರಾಜ್ಯಕೀಯ ವಿವಾದಗಳು ಒಂದು ಪಕ್ಷದ ಆಂತರ್ವಿವಾದವಾಗಿ ಉಳಿದಿತ್ತು; ಏರು—ತಗ್ಗುಗಳಿಂದ ತುಂಬಿದ್ದರೂ ಅವರಿಂದ ರಾಜ್ಯಪಾಲರುಗೇನೂ ಚಿಂತೆಯಿರಲಿಲ್ಲ. ಶ್ರೀ ಧರ್ಮವೀರರು ಇಲ್ಲಿಗೆ ರಾಜ್ಯಪಾಲರಾಗಿ ಬಂದಾಗಲೂ ಹಾಗೇನೇ. ಶ್ರೀ ವೀರೇಂದ್ರ ಪಾಟೀಲರ ಸರಕಾರ ಬಂಡೆಕಲ್ಲಿನಂತೆ ವಿಧಾನಸೌದದಲ್ಲಿ ಕಾರುಬಾರು ಮಾಡುತಿತ್ತು.

ಶ್ರೀ ಧರ್ಮವೀರರು ಇಲ್ಲಿಗೆ ಬರುವುದಕ್ಕೆ ಮೊದಲು ಪಂಜಾಬ ಮತ್ತು ಪಶ್ಚಿಮ ಬಂಗಾಳಗಳಲ್ಲಿ ರಾಜ್ಯಪಾಲರಾಗಿದ್ದರು. ಅವರು ರಾಜ್ಯಪಾಲರಾಗಿದ್ದಾಗಲೇ ಆಯೆರಡೂ ರಾಜ್ಯಗಳಲ್ಲಿ ಸರಕಾರ ಪತನಗೊಂಡಿತ್ತು, ರಾಷ್ಟ್ರಪತಿ ಆಳಿಕೆ ಘೋಷಿತವಾಗಿತ್ತು. ಜನಪ್ರಿಯ ಸರಕಾರಗಳ ಅಡಳಿತೆಯಲ್ಲಿ ನಡೆದಿದ್ದ ನೂರಾರು ಅನ್ಯಾಯಗಳನ್ನು ಅವರು ಸರಿಪಡಿಸಿದ್ದುಂಟು. ಪ್ರತಾಪ ಸಿಂಹ ಕೈರಾನರ ಸುದೀರ್ಘಮುಖ್ಯಮಂತ್ರಿತನದ ಹೊಲಸನ್ನು ಹೊರಗೆ ಹಾಕಿ ಆಡಳಿತವನ್ನು ಚುರುಕುಗೊಳಿಸಿದ ಕೀರ್ತಿ ಪಂಜಾಬದ ರಾಜ್ಯಪಾಲ ಧರ್ಮವೀರರದ್ದು.

ಬಂಗಾಳದಲ್ಲಿ ಕಮ್ಯುನಿಸ್ಟರ ಕೈ ಮೇಲಾದ ವೇಳೆ, ಕಾಂಗ್ರೆಸ್ಸು ಅಧಃಪತಿತವಾಯ್ತು. ಆಗ ಶ್ರೀ ಧರ್ಮವೀರರನ್ನು ಕಲಕತ್ತಿಗೆ ಕಳಿಸಲಾಯ್ತು. ಯಾವ ರಾಜ್ಯಪಾಲರೂ ಎದುರುಸದಿದ್ದ ಹಲವಾರು ವಿಷಮ ಪರಿಸ್ಥಿತಿಯನ್ನು ಶ್ರೀ ಧರ್ಮವೀರ ಎದುರಿಸಿದರು. ಮುಖ್ಯಮಂತ್ರಿಯು ತನ್ನ ಬಹುಮತವನ್ನು ವಿಧಾನ ಸಭೆಯಲ್ಲಿ ಸಿದ್ಧಪಡಿಸಲು ಸಿದ್ಧರಿಸಿದಾಗ ಅಡಳಿತ ಮುಖರ್ಜಿಯವರ ಸಂಪುಟವನ್ನೇ ಕಿತ್ತು ಹಾಕಿದ ಧೀರರು ಅವರು. ಇದರ ಪರಿಣಾಮವಾಗಿ ಉದ್ಭವಿಸಿದ ಕಷ್ಟಕೋಟಲೆಗಳನ್ನು ಅವರು ಎಂಟೆದೆಯಿಂದ ಎದುರಿಸಿದರು. ಮುಂದೆ "ಜನಪ್ರಿಯ" ಸರಕಾರವು ಸ್ಥಾಪನೆಗೊಂಡ ಬಳಿಕ ನಿವೃತ್ತರಾದರು.

ಎರಡಾವ ಮೇಲೆ ಮೂರೆಂಬಂತೆ, ಶ್ರೀ ಧರ್ಮವೀರರು ಕರ್ನಾಟಕಕ್ಕೆ ಬಂದರು. ಲೋಕಸಭೆಗೆ ಮಧ್ಯಾವಧಿ ಚುನಾವಣೆಯ ತಯಾರಿಯ ಸಮಯ. ಶ್ರೀ ವೀರೇಂದ್ರರ ಬೆಂಬಲಿಗರಲ್ಲಿ ಕೆಲವರು ಇಂಡಿಕೇಟಿಗೆ ಹಾರಿದರು. ಚುನಾವಣೆ ನಡೆಯಿತು; ಇಂಡಿಕೇಟು ಜಯಭೇರಿಗಳಿತು; ಎಮ್ಮೆಲ್ಯೆಗಳನ್ನು ಕೈ ಬೀಸಿ ಕರೆಯಿತು. ಅಧಿಕಾರ ಲೋಲುಪರು ವೀರೇಂದ್ರರನ್ನು ಬಿಟ್ಟು ಹಗ್ಗವ ಇನ್ನೊಂದು ತುದಿ ಹಿಡಿದರು. ಸಂಪುಟ ಉರುಳಿತು; ವಿಧಾನ ಸಭೆ ವಿಸರ್ಜಿತವಾಯ್ತು; ರಾಷ್ಟ್ರಪತಿಗಳ ಆಡಳಿತ ಬಂತು.

ಸಲಹೆಗಾರರಿಲ್ಲದೇನೇ ತಾನು ಆಡಳಿತೆ ನಡೆಸುವೆನೆಂದರು ಶ್ರೀ ಧರ್ಮವೀರರು. ನಡೆಸಿಯೂ ನಡೆಸಿದರು. ರಾಜ್ಯಕೀಯ ವಿವಾದವಲ್ಲಿ ಸಿಕ್ಕಿಯೂ ಸಿಕ್ಕಿದರು. ಮೊದ ಮೊದಲಿಗೆ ಅವರು ಶ್ರೀ ವೀರೇಂದ್ರ ಸಂಪುಟದ ಪ್ರತಿನಿಧಿಯೆಂದು .ನೂರಿದರು ಕೆಲವರು. ಇವರಲ್ಲಿ ಇಂಡಿಕೇಟಿಗರೂ ರಾಜ್ಯದ ಎಲ್ಲಾ ಇಂಡಿಕೇಟ್ ಎಂಪಿಗಳೂ ಮುಖ್ಯರು. ಇವರು ಡಿಳ್ಳಿಗೂ ದೂರೊಯ್ದರು ಶ್ರೀ ರಾಜ್ಯಪಾಲರು ಜಪ್ಪೆನ್ನಲಿಲ್ಲ; ಆದರೂ ಅವರ ಆಡಳಿತ ವಿಧಾನ ಬದಲಾಯ್ತು ಎಂಬ ದೂರು. ರಾಷ್ಟ್ರಪತಿಗಳ ಸ್ಪೀತಿನಿಧಿಯಲ್ಲ, ಕೇಂದ್ರ ಸರಕಾರದ ದಲಾಲಿ ಎಂಬ ಹೆಸರನ್ನೂ ಅವರು ಕೇಳ ಬೇಕಾಯ್ತು. ಆದರೆ, ಈ ಮಾತು ಸುಳ್ಳು ಎಂಬುದನ್ನು ಅವರು ತನ್ನ ಅಧಿಕಾರವ ಕೊನೆಯ ದಿನಗಳಲ್ಲಿ ಸಿದ್ಧಪಡಿಸಿದರು. ಕೇಂದ್ರದ ನೆರವಿನಲ್ಲಿ ಖೋತವಾದರೆ ರಾಜ್ಯದ ಓವರ್ ಡ್ರಾಫ್ಟ್ ತೀರಿಸುವುದು ಅನಾಧ್ಯನೆಂಬ ಅವರ ಉದ್ಗಾರದಲ್ಲಿ ತೀರಿಸುವುದು ಕಷ್ಟಸಾಧ್ಯವೆಂಬ ರಾಜ್ಯದ ನಿಲುಮೆ ಸ್ಪಷ್ಟವಾಗಿತ್ತು. ಇದನ್ನು ಉತ್ಪ್ರೇಕ್ಷೆ ಮಾಡಿ ಪತ್ರಿಕೆಗಳು ತೀರಿಸಲು ಸಾಧ್ಯವಿಲ್ಲವೆಂಬ ಬೆದರಿಕೆ ಹಾಕಿದಂತೆ ಪ್ರತಿಬಿಂಬಿಸಿದವು. ಇದರಿಂದ ತನ್ನ ನಿಲುಮೆಯನ್ನು ರಾಜ್ಯಪಾಲರು ರಾಷ್ಟ್ರಪತಿಯವರಿಗೆ ವಿವರಿಸಬೇಕಾಯ್ತು. ತಪ್ಪು ಗ್ರಹಿಕೆಗೆ ಆಸ್ಪದವಾಗುದಕ್ಕೆ ಕ್ಷಮೆಯೂ ಜನೆ ಮಾಡಬೇಕಾಯ್ತು. ಇಲ್ಲಿಯೂ ಶ್ರೀ ಧರ್ಮವೀರರು ಇತಿಹಾಸ ನಿರ್ಮಿಸಿದರು.

ಶ್ರೀ ಧರ್ಮವೀರರು ಐ. ಸಿ. ಎಸ್. ಅಧಿಕಾರಿಯೊಗಿದ್ದವರು. ವಿವಿಧ ಇಲಾಖೆಗಳಲ್ಲಿ ಭಾರತದ ಸೇವೆ ಸಲ್ಲಿಸಿ ನಿವೃತ್ತರಾದ ನಾಗರಿಕ ಅಧಿಕಾರಿಗಳು. ನಾಗರಿಕ ಅಧಿಕಾರಗಳಲ್ಲಿ ಪಾನಿತ್ಯವನ್ನು ನ್ಯಾಯ ಪೀಲತೆಯನ್ನು ಸಂರಕ್ಷಿಸಿಕೊಂಡು; ಆಡಳಿತೆ ಜನಪ್ರಿಯವಾಗುವಂತೆ ಮಾಡುವ ತಂತ್ರಗಳನ್ನು ಚೆನ್ನಾಗಿ ಬಲ್ಲವರು. ಎಲ್ಲಿ ಸೇರಿ ಹೋಗುತ್ತಿದೆಯೆಂದು ತಿಳಿದವರು. ಆದುದರಿಂದಲೇ ಅವರ ಆಡಳಿತಾವಧಿಯಲ್ಲಿ ಭ್ರಷ್ಟ ಅಧಿಕಾರಿಗಳೆಲ್ಲರೂ ಗಡಗಡನೆ ನಡುಗುತಿದ್ದರು.

ಶ್ರೀ ಧರ್ಮವೀರರು ಶ್ರೀ ಸಾಮಾನ್ಯರೊಡನೆ ಬೆರೆಯಲಿಲ್ಲ, ನಿಜ. ಅವರು ಬೆಳೆದು ಬಂದ ವಾತಾವರಣವೇ ಹಾಗೆ. ಆದರೆ, ತನ್ನೊಡನೆ ಬೆರೆಯಬಂದ ಶ್ರೀ ಸಾಹೂಕ್ಕಾರನ್ನು ಅವರೆಂದೂ ದೂರವೋಡಿಸಲಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಅವರು ಜನರ ಕರೆಗಳನ್ನು ಮನ್ನಿಸಿದರು; ಜನತೆಯ ಸುಖದುಃಖಗಳನ್ನು ಕೇಳಿದರು; ಅವನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶ ನೀಡಿದರು 'ದೊರೆಯ ತನಕ ದೂರು ಕೊಟ್ಟದ್ದೇನೆ' ಎಂದು ಶ್ರೀ ಸಾಮಾನ್ಯನೂ ಹಿಗ್ಗಿನಿಂದಲೇ ಅನ್ನುವಂತೆ, ತನಗೆ ನ್ಯಾಯ ದೊರಕೆಯೇ ದೊರೆಯುತ್ತದೆ ಎಂಬ ವಿಶ್ವಾಸವಿಟ್ಟುಕೊಳ್ಳುವಂತೆ ಅವರು ಆಡಳಿತವನ್ನು ನಿರ್ವಹಿಸಿದರು.

ಹಿಂದಿನ ಸರಕಾರಗಳು ಮಾಡಿದ್ದ ಹಲವಾರು ಅನ್ಯಾಯಗಳನ್ನು ಸರಿಪಡಿಸುವಲ್ಲಿ ನೀಡಿದ್ದ ಭರವಸೆಗಳನ್ನು ಕಾರ್ಯಗತಗೊಳಿಸುವಲ್ಲಿ, ಅವರು ಮುಂದಾದರು. ಸಾಧ್ಯವಿದ್ದಲ್ಲಿ ಸಂಘ ಸಂಸ್ಥೆಗಳಿಗೆ ಸರಕಾರದ ನೆರವು ನೀಡಿದರು. ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳುಬೆಯನ್ನು ದಿಟ್ಟ ತನದಿಂದ ಎದುರಿಸಿ ಅಧಿಕಾರಿಗಳ ಪರವಾಗಿ ಸಮರ್ಥನೆ ನೀಡಿದ ಶ್ರೀ ಧರ್ಮವೀರರು ರಾಜ್ಯಕಾರಣಿಗಳು ತಿಕ್ಷ್ಣಣ ರಂಗವನ್ನು ಪ್ರವೇಶಿಸುವರೆಂದು ಕರೆಸಿಕೊಂಡರು. ಬೆಂಗಳೂರು ಕಾರ್ಪರೇಶನ್ನಿನ ಮೇಯರ್ ಕಮಿಷನರ್ ವಿವಾದದಲ್ಲೂಕಷ್ಟೇ. ಆಧಿಕಾರಿಗಳ ನಿಲುವು ನ್ಯಾಯಸಮ್ಮತವೆಂದವರು ಸಾರಿಯೇ ಬಿಟ್ಟರು

ಶ್ರೀ ಧರ್ಮವೀರರು ವಿವಾದಾತೀತ ರಾಜ್ಯಪಾಲರಾಗಲಿಲ್ಲ. ಒಬ್ಬನು ಎಲ್ಲರನ್ನೂ ಮೆಚ್ಚಿಸುವುದು ಅಸಾಧ್ಯವೆಂಬುದು ಹಳೆಯ ಕಾಲದ ಮಾತು. ಆದರೆ ಅವರು ಆದಷ್ಟು ಹೆಚ್ಚು ಜನರನ್ನು ಮೆಚ್ಚಿಸಿದರು—ತನ್ನ ಸಮರ್ಥ ಆಡಳಿತೆಯಿಂದ. ಶ್ರೀ ಸಾಮಾನ್ಯರಲ್ಲಿ ಭರವಸೆಯನ್ನು ಮೂಡಿಸಿದರು. ಇನ್ನೂ ಕೆಲಕಾಲ ಧರ್ಮವೀರರ ಆಡಳಿತವಿರುತಿದ್ದರೆ, ಆಡಳಿತ ಸಾಫ್ ಆಗುತ್ತಿತ್ತು ಎನ್ನುವಂತೆ ಮಾಡಿದ್ದರು.

ಅವರನ್ನು ಹಲವಾರು ಸಮಾರೋಹಗಳನ್ನು ಏರ್ಪಡಿಸಿ ಬೀಳ್ಕೊಳ್ಳಲಾಯ್ತು. ಅವರು ಡಿಲ್ಲಿಗೆ ತೆರಳುವಾಗ ಇಂಡಿಕೇಟ್ ಅಧ್ವರ್ಯುಗಳನ್ನುಳಿದು ಇತರರೆಲ್ಲರೂ ಹಾರ್ದಿಕವಾಗಿ ಬೀಳ್ಕೊಡಲು ನಿಲ್ದಾಣದಲ್ಲಿ ನೆರೆದಿದ್ದರು ಎಂದರೆ ಇಂಡಿಕೇಟಿನ ಹೊರಣ ಜವರ ಕಾವಲಿಯಲ್ಲಿ ಬೇಯಲಿಲ್ಲವೆನ್ನಬಹುದು.

ಸುಮಾರು ೪೧ ವರ್ಷಗಳ ಕಾಲ ದೇಶ ಸೇವೆಯಲ್ಲಿ ತೊಡಗಿದ ಶ್ರೀ ಧರ್ಮವೀರರು ಉತ್ತರ ವ್ರದೇಶಕ್ಕೆ ಸೇರಿದವರು. ಉತ್ತಮ ಆರೋಗ್ಯವನ್ನು ಉಳಿಸಿಕೊಂಡು ಬಂದಿರುವ ಅವರಿಂದ ದೇಶ ಬಯಸಿದರೆ ಮುಂದೆಯೂ ಸೇವೆ ಸಲ್ಲಬಹುದು. ಅಧಿಕಾರವನ್ನು ಅವರೆಂದೂ ಬಯಸಲಿಲ್ಲ, ತನ್ನನ್ನು ಬಯಸಿ ಬಂದ ಅಧಿಕಾರವನ್ನವರೆಂದೂ ತ್ಯಜಿಸಲಿಲ್ಲ. ಶ್ರೀ ಧರ್ಮವೀರರಿಂದ ಇನ್ನೂ ದೇಶ ಉತ್ತಮ ಸೇವೆ ಪಡೆಯಲೆಂದು ಈ ಸಮಯದಲ್ಲಿ ಹಾರೈಸ್ಸುಲೇ ಬೇಕು.

ಶ್ರೀ ಧರ್ಮವೀರರ ಸ್ಥಾನದಲ್ಲಿ ಶ್ರೀ ಮೋಹನಲಾಲ ಸುಖಾಡಿಯೂ ಕರ್ನಾಟಕದ ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಶ್ರೀ ಸುಖಾಡಿಯೂ ರಾಜ್ಯಕೀಯದಲ್ಲೇ ಪರಿಣತರಾದ ವ್ಯಕ್ತಿ. ರಾಜಸ್ತಾನದಲ್ಲಿ ಬಹುದೀರ್ಘಕಾಲ ಮುಖ್ಯಮಂತ್ರಿಯಾಗಿದ್ದ ಶ್ರೀ ಸುಖಾಡಿಯೂರ ರಾಜ್ಯಕೀಯ ಆನುಭವ ಅಪಾರ. ಇತ್ತೀಚೆಗೆ ರಾಜ್ಯದಲ್ಲಿ ವಿವಾದಾತ್ಮಕ ವ್ಯಕ್ತಿಯಾಗಿ ಪರಿಣಮಿಸಿದ್ದರಿಂದ, ಇಂಡಿಕೇಟ್ ಹೈಕಮಾಂಡಿನ ಆದೇಶದಂತೆ ರಾಜಿನಾಮೆಯಿತ್ತವರು. ಚುನಾವಣೆಯ ನಂತರ ರಾಜ್ಯಪಾಲ ಪದವಿ ಅವರಿಗೆ ನಿಶ್ಚಿತವಿತ್ತು. ಆಯರೆ, ಮುಖ್ಯಮಂತ್ರಿ ಶ್ರೀ ಬರ್ಮತುಲ್ಲಾಖಾನರು ಅದಕ್ಕೆ ಮೊದಲೇ ರಾಜಸ್ತಾನದಿಂದ ಸುಖಾಡಿಯೂರನ್ನು

(ಪುಟ ೨ರಲ್ಲಿ ನೋಡಿ)

ಸರ್ವಾರ್ಪಣ

ಲೇಖಕರು: ಶ್ರೀ ಬಡೆಕಲ ಕೃಷ್ಣ ಭಟ್, ಭವ್ಯಾವತಿ

(ಕಳೆದ ಸಂಚಿಕೆಯಿಂದ)

೨

'ಚಂಪಾ! ಒಂದಿಷ್ಟು ಕಾಯಿಸಿದ ನೀರು ಕೊಡು. ನೀರಡಿಕೆ ತಡೆಯ ಲಾಗುವುದಿಲ್ಲ.'

ದಾದಿ ಎನ್ನು ಬೀದು ಮಣ್ಣಿನ ಕೂಜೆಯಿಂದಿಷ್ಟು ನೀರನ್ನು ಬೆಳ್ಳಿಯ ಲೋಟವೊಂದಕ್ಕೆ ಬಗ್ಗಿಸಿಕೊಂಡಳು. ಅನಂತರ ಲೋಟದಲ್ಲಿದ್ದ ನೀರನ್ನು ರೋಗಿಯ ಬಾಯಿಗೆ, ನೆಲ್ಲಗೆ, ಬಹು ಮೆಲ್ಲಗೆ ಹುಯ್ಯಲಾರಂ ಭಿಸಿದಳು.

ರೋಗಿಯ ನಾಲಿಗೆ ಒಣಗಿತ್ತು: ಮೈ ಬೆವತಿತ್ತು.

ಮುಖವೆ ತುಂಬ ಬೆವರ ಹನಿ.

ದಾದಿಗೆ ಗಾಬರಿಯೊಯಿತು.

"ಅಯಾನವಾಗುತ್ತಿನೆಯಾ ತಾಯಿ?"

"ತುಸು ಅಯಾರಿಜೆ ಮೈ ಬೆವತು ಒದ್ದೆಯಾಗಿನೆ. ಒಂದಿಷ್ಟು ಒರಸಬಹ್ದೆಮಾ?"

"ತಮೊಂಮ ಕೆಲಸವೇ ದೇವಿ"

ಹೊಮ್ಮ ಕೊಂಡಿದ್ದ ಬಟ್ಟೆಯನ್ನು ಸರಿಸಿ ಚಂಪಾ ಆಕೆಯ ಮೈಯ ನ್ನೊರಸಿದಳು.

'ಉಸಿರು ಬಿಡುವಷ್ಟಕ್ಕೂ ಪ್ರಯಾಸವಾಗಿದೆ. ಒಕೆಗೆಲ್ಲ ಉರಿ. ತಡೆದು ಕೊಳ್ಳಲಾರದ ಬೇಗೆ. ಒಂದಿಷ್ಟು ನಾಳೆ ಬೀಸಿತ್ತೀಯೆ?'

ಚಂಪಾ ಲಾವಂಚದ ಬೀಸಣಿಕೆಯನ್ನೆತ್ತಿಕೊಂಡಳು. ಮೆತ್ತಗೆ ಬೀಸಲಾರಂಭಿಸಿದಳು. ಒಡೆಯಿಂದ ರೋಗಿಗೆ ಹಿತವಾದಂತೆ ಕಂಡಿತು.

'ಕಂದ ನಿದ್ದೆ ಮಾಡಿದೆಯಾ?'

'ಕುಮಿದು ಪಾಪೊಗಿ ಮಲಗಿನೆ.'

"ನಿನಗೆ ನಸ್ಸಿಂದ ತೊಂದರೆಯಿಮ್ಮ. ನಿನ್ನೆಯಿಂದ ನಿದ್ದೆ ಇಲ್ಲ ತುಂಬ ಸೊರಗಿದ್ದೀಯೆ. ಹೋಗಿ ಮಲಗಿಕೋ! ಬೇಕಾದೆರೆ ಕರೆಯುತ್ತೀನೆ."

"ಅನ್ನಲಿ ತೊಂದರೆಯಲ್ಲಿ ನೆರವಾಗುವುದು ನೀವಾ ಧರ್ಮ. ಈ ಕೆಲಸ ನನಗೆ ಸಂತೋಷವನ್ನು ಕೊಡುತ್ತದೆ. ನೀವು ಮೊದಲಿನಂತಾದರೆ ಸಾಕು."

'ಮೊದಲಿನಂತಾವರೆ?-ಅಗುವಂತೆಯೇ ಕಾಣುವುದಿಲ್ಲ. ತುಂಬ ಹೆದ ರಿಕೆಯಾಗಿದೆ. ನಾನು ಬದುಕುವುದಿಲ್ಲ ಚಂಪಾ! ಹಾಗೇನಾದರೂ ಆದರೆ-'

ದಾದಿ ಅವಳನ್ನು ಮಾತನಾಡಲು ಬಿಡಲಿಲ್ಲ. ನಡುನೆಯೆ ತಡೆದಳು. ಎದ್ದಿಲ್ಲದೆ ಕೈರ್ಯ ತಂದುಕೊಂಡು. ಮುಂದೆ ಆಡಲಿದ್ದ ಅಮಂಗಳದ ಮಾತನ್ನು ತಡೆದರು ಅದೆರೂ ಉಚ್ಚಾರಿಸಿದ ಅಳಿದಿಂದ ಮೂಡಿ ಬಂದ ಅಳ ಲನ್ನು ತಡೆಯಲಾರದಾದಳು.

ಎರಡು ಕೊಟ್ಟು ಕಣ್ಣೀರು—ಅವಳ ಇಚ್ಛೆಗೂ ವಿರುದ್ಧವಾಗಿ ತೊಟ್ಟಿನ್ದ—ರೋಗಿಯ ಮೇಲೆ ಬಿದ್ದಿತು.

'ನೀನು ಅಳುತ್ತಿದ್ದಿಯಾ? ಯಾಕೆ? ಏನಾಯಿತು?'

ರೋಗಿ ಪ್ರಶ್ನಿಸಿದಳು.

'ನೀವೇ ನಮಗೆ ಆಸರೆ ತಾಯಿ ನಿಮ್ಮನ್ನು ನಂಬಿ ನಾವಿಲ್ಲಿರುವುದು. ನೀವು ಇಲ್ಲವೆನ್ನುವ ನೆಲೆ ಕಟ್ಟಿ ನಂಬಿಕೆಯಿಟ್ಟ ಸೂತಕಿಂದ ನಮ್ಮ ಜೀವಹಾಯಕ ಸ್ಥಿತಿಯ ನೆನಪಾಗಿ ದುಃಖ ಒತ್ತರಿಸಿತು. ನಿಮ್ಮ ಕೊಟ್ಟಿ ಕಣ್ಣಾಗಿರಲಿ.'

"ನಾವು ಮಾಡಿರುವುದಾದರೂ ಏನು? ಕಸ್ಸ ಪಾಕ ಮೈ ಮುರಿಯೆ ದುಡಿಸಿಕೊಳ್ಳುತ್ತಿದ್ದೀನೆ."

"ದುಡಿಸಿಕೊಳ್ಳುವುದು ನಿಜ. ಬದುಕು ನೆಡೆಯಲು ಎಲ್ಲಾ ದಿರೂ ದುಡಿಯಬೇಕಲ್ಲ ದುಡಿಸಿಕೊಂಡರೂ ನಿಮ್ಮ್ಯತೆ ದಂಡಿಸದೆ ಹೊಟ್ಟೆ ತುಂಬ ಹಾಕುವವರು ಸಿಗುವುದು ದುರ್ಲಭ. ನೀವು ದುಡಿಸಿ ಕೊಂಡುದರಲ್ಲಿ ಅಪರಾ ಧವಿಲ್ಲ. ಹೊಟ್ಟೆ ನೋಡಿ ಹಿಟ್ಟು ಹಾಕುತ್ತಾರೆಯೆ?"

"ಬಾಯಿಗಿಷ್ಟು ನೀರು ಬಿಡು. ಹಿಂಗದೆ ಆಸರು. ಆದು ನಿರುತ್ತಲೇ ಇದೆ. ಇಳಿಯುವ ಲಕ್ಷಣ ಕಾಣುವುದಿಲ್ಲ. ಕೊನೆಗಾಲದ ಆಸರೇನೊ?"

ರೋಗಿಯ ಮಾತಿನಿಂದ ಚಂಪಾ ತಬ್ಬಿಬ್ಬಾದಳು. ಆದು ಅವಳ ಮರ್ಮಸ್ಥಾನವನ್ನು ತಾಕಿತ್ತು. ಆಕೆ ಗಾಬರಿಗೊಂಡಳು. ಆದರೆ ಕರ್ತವ್ಯ ವನ್ನು ಮರೆಯಲಿಲ್ಲ. ರೋಗಿಯ ಅಪೇಕ್ಷೆಯಂತೆ ಪುನಃ ನೀರು ಕುಡಿಸಿ ದಳು.

ರೋಗಿಯ ಅನಿರೀಕ್ಷಿತ ಮಾತುಗಳಿಂದ ಚಂಪಾ ಮೂಕೆಯಾದಳು. ಮೌನವಾಗಿದ್ದುಕೊಂಡೇ ಅಕೆ ಯಮ ಹಿಂಸೆಯನ್ನನುಭವಿಸಿದಳು. ದುಃಖವನ್ನದುಮಿ ಹಿಡಿಯುವುದು ಅವಳಿಂದಾಗಲಿಲ್ಲ.

ಆಕೆ ಅಳಲಾರಂಭಿಸಿದಳು.

'ಇಷ್ಟಕ್ಕೆ ಯಾರಾದರೂ ಅಳುತ್ತಾರೆಯೇ? ನನ್ನ ಸಾವಿಗೆ ನೀನೇಕೆ ಅಳಬೇಕು? ಎಲ್ಲಿಯೇ ಇರು, ನಿನಗೆ ದುಡಿನೆ. ತಪ್ಪಿದ್ದಲ್ಲ. ಇಲ್ಲಲ್ಲದಿದ್ದರೆ ಇನ್ನೊಂದೆಡೆ, ಆದು ನಡೆದೇ ನಡೆಯುತ್ತೆ. ಗೋಳಿಡಲು ನಾನೇನು ಗೋತ್ರದವಳೇ?'

'ನೀವು ನಮ್ಮ ಭಾಗದ ದೇವಿ. ಈ ದೇವಿಯನ್ನು ನಂಬಿ ನಡೆದು ಕೊಂಡೆ. ಇನ್ನೊಂದು ದೈವಕ್ಕೆ ಇನ್ನೆಂತು ಕೈ ಮುಗಿದು ಬದುಕಲಿ? ಆದೇ ಯೋಚನೆ'

'ನನಗಂತೂ ನಿದ್ದೆ ಬರಲೊಲ್ಲದು. ನಸ್ಸಿಂದ ನಿನ್ನ ನಿದ್ರೆಗೆ ಭಂಗ, ಹೋಗಿ ಮಲಗಿಕೋ'

ರೋಗಿ ಒತ್ತಾಯಿಸಿದಳು. ಚಂಪಾ ಅಲ್ಲಿಂದ ಕದಲಲಿಲ್ಲ. ರೋಗಿ ಯನ್ನೇ ನೋಡುತ್ತ ಕುಳಿತಳು. ಕೊನೆಗೊಮ್ಮೆ ಅವಳೇ ಮೌನವನ್ನು ಮುರಿದಳು

'ರಾಜ ವೈದ್ಯರಿಗೆ ಕರೆ ಕಳಿಸಲೇ?'

'ಕರೆಸು! ಆದರೆ ಯಾರು ಬಂದು ಏನು ಮಾಡಬಲ್ಲರು? ವೈದ್ಯರು ಆಯುರ್ವಾನ ಮಾಡಬಲ್ಲರೇ? ಇದು ಭ್ರಮೆ! ಚಂಪಾ ಹೋಗುತ್ತಾ ಕಂದನನ್ನು ಪಕ್ಕದಲ್ಲಿ ತಂದಿರಿಸು. ಅದರ ಮುದ್ದು ಮುಖವನ್ನು ನೋಡುತ್ತಾ ಹಾಯಾಗಿ ಮಲಗುತ್ತೇನೆ.'

ರೋಗಿ ಪಕ್ಕಕ್ಕೆ ಹೊರಳಿದಳು. ಚಂಪಾ ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ಎತ್ತಿ ತಂದು ರೋಗಿಯ ಹತ್ತಿರ ಮಲಗಿಸಿದಳು. ಆತ್ಮೀಯತೆ ಯಿಂದ, ತಾಯಿ ಮಗುವಿನ ಮುಂಗುರುಳ ಮೇಲೆ ಕೈಯಾಡಿಸಿದಳು.

ಎದೆಯ ಹಾಲನ್ನುಂಡು ಬೆಳೆಯ ಬೇಕಾಗಿದ್ದ ಆ ಮಗು ಅವಳ ಸನಿ ಯದಲ್ಲಿ ಯಾವುದರ ಪರಿವೆಯೂ ಇಲ್ಲದೆ ನಿದ್ರಿಸಿತು.

ಆಕೆಯ ಅಸ್ವಸ್ಥತೆ ಅಂತಃಪುರವನ್ನು ವ್ಯಾಪಿಸಿತು. ಬಂಧು-ಬಾಂಧ ವರು, ದಾಸ—ದಾಸಿಯರು, ರಾಜ ವೈದ್ಯರು ಬಂಧುದಕ್ಕೂ ಮೊದಲು ಅಲ್ಲಿ ಸೇರಿದರು. ಆದರೆ ಯಾರಿಗೂ ಕೋಣೆಯನ್ನೂ ಪ್ರವೇಶಿಸುವ ಧೈರ್ಯ ಬರಲಿಲ್ಲ.

ಅವರು ಅನುಭವಿಸುತ್ತಿದ್ದ ಮೂಕ ಸಂಕಟ, ಮುಖದಲ್ಲಿ ಮುದ್ರಿ ತವಾಗಿತ್ತು—ಒಬ್ಬರ ಮುಖವನ್ನೊಬ್ಬರು ನೋಡುತ್ತ, ಅವರೆಲ್ಲ ಕಡೆದ ಕಂಬಗಳಂತೆ ನಿಂತಿದ್ದರು.

ಮುಂದೆಂತೋ—ಅದೇ ಎಲ್ಲರನ್ನೂ ಕಾಡುತಿದ್ದ ಪ್ರಶ್ನೆ. ಅಷ್ಟರಲ್ಲಿ ಚಂಪಾ ಬಂದಳು. ಅವಳ ಬೆನ್ನ ಹಿಂದೆ ನಡೆದು ಬಂದರು ರಾಜ ವೈದ್ಯರು. ಅವರನ್ನು ಅನುಸರಿಸಿ ಬರುತ್ತಿದ್ದರು ಜಡ ಮನಸ್ಸಿನ ನರಸಿಂಹ-ಬದ್ದೆಗರು.

ಎಲ್ಲರೂ ರೋಗಿ ಮಲಗಿದ್ದ ಕೋಣೆಯನ್ನು ಪ್ರವೇಶಿಸಿದರು.

ಹೊನ್ನ ಕಾಲು ದೀಪದಲ್ಲಿ ಉರಿಯುತಿದ್ದ ಬತ್ತಿ ಗರಿಕಾತ್ತ ಬಂದಿತ್ತು. ದೀಪದಲ್ಲಿದ್ದ ತೈಲ ಮುಗಿಯುತ್ತ ಬಂದಿತ್ತು.

ಅದನ್ನು ನೋಡಿದ ಚಂಪಾ, ಕಡ್ಡಿಯ ಸಹಾಯದಿಂದ ಬತ್ತಿಯನ್ನು ಮುಂದು ಮಾಡಿದಳು. ಎಣ್ಣೆ ಹುಯಿದು, ಉರಿಯನ್ನು ದೊಡ್ಡದು ಮಾಡಿ ದಳು.

ಢಾಳಾಗಿ ಉರಿಯಲಾರಂಭಿಸಿದ ಬೆಳಕಿನಲ್ಲಿ ಸುತ್ತಲಿನ ಕತ್ತಲು ಕಳೆಯಿತು. ಬೆಳಕಿನ ಸಹಾಯದಲ್ಲಿ ವೈದ್ಯರು ರೋಗಿಯ ಮುಖವನ್ನೊಮ್ಮೆ ದಿಟ್ಟಿಸಿ ನೋಡಿದರು. ಕಣ್ಣೆವೆಗಳನ್ನು ಬಿಡಿಸಿ, ಬೊಂಬೆಗಳನ್ನು ಪರೀಕ್ಷಿಸಿ ದರು. ಮೂಗಿನ ಹೊಳ್ಳೆಗಳ ಹತ್ತಿರ ಬೆರಳಿಟ್ಟು, ಕೊಂಚ ಕಾಲ ಹಾಗೆಯೇ ಕಳೆದರು.

ಆಕೆಯ ಎಡಗೈಯನ್ನೆತ್ತಿಕೊಂಡು, ನಾಡಿಯ ಬಡಿತವನ್ನು ಎಣಿಸ ಲಾರಂಭಿಸಿದರು. ಉಳಿದವರ ಎದೆ ಡವ—ಡವ ಎಂದು ಬಡಿದು ಕೊಳ್ಳಲಾ ರಂಭಿಸಿತು.

ಅವರ ಬಾಯಿಂದೇನು ಬರುತ್ತದೋ ಅದನ್ನು ಕೇಳುವ ಆತುರ; ಕಾತರ, ರುದ್ರ ಮೌನ ಕೋಣೆಯನ್ನು ವ್ಯಾಪಿಸಿತ್ತು.

ವೈದ್ಯರ ಸ್ಪರ್ಶದ ಕಾವು ತಟ್ಟಿ, ರೋಗಿ ಕಣ್ಣರಳಿಸಿದಳು. ಸುತ್ತೊಮ್ಮೆ ಕಣ್ಣು ಹಾಯಿಸಿದಳು ಕಣ್ಣ ಸನ್ನೆಯಿಂದ ಚಂಪಳನ್ನು ಹತ್ತಿರಕ್ಕೆ ಕರೆದಳು.

ರೋಗಿಯ ಇಂಗಿತವನ್ನರಿತ ಚಂಪಾ ಅವಳ ಬಾಯಿಗೆ ನೀರು ಬಿಟ್ಟಳು.

ರೋಗಿ ಚೇತರಿಸಿಕೊಂಡಳು.

ವೈದ್ಯರು ಗರ ಹೊಡೆದವರಂತೆ, ತುಟಿಯಲುಗಿಸದೆ ನಿಂತಿದ್ದರು—

ಅವರು ಏನನ್ನೂ ಹೇಳಲಿಲ್ಲ. ಉಳಿದವರಿಗೆ ಕೇಳುವ ಧೈರ್ಯ ಉಳಿ ದಿರಲಿಲ್ಲ. ಎಲ್ಲರೂ ವಿಷಣ್ಣ ವದನರಾಗಿ ನಿಂತಿದ್ದರು.

ಕೊನೆಗೆ ವೈದ್ಯರೇ 'ಒಂದಿಷ್ಟು ಹಾಲು ಬೇಕು. ಈ ಗುಳಿಗೆಯನ್ನು ಅದರಲ್ಲಿ ತೇದು ಕುಡಿಸ ಬೇಕು. ವಿಪರೀತ ಸ್ರಾವದಿಂದ ತುಂಬ ನಿತ್ರಾಣ ಆಗಿದೆ. ಸರಿಹೋಗಬಹುದು' ಎಂದು ತಮ್ಮ ಜೋಳಿಗೆಯಿಂದ ಗುಳಿಗೆ ಯನ್ನು ತೆಗೆದರು. ಆದನ್ನು ಹಾಲಿನಲ್ಲಿ ಬೆರಸಿ ಕುಡಿಸಿದರು.

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ: 51
ಸಂಚಿಕೆ: 23

ಸಂಸ್ಥಾಪಕರು:
ದಿ! ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೫೧

ಚಿಕ್ಕ ಜೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಪೀಕಿಂಗಿನಲ್ಲಿ ಭುಟ್ಟೋ ಗಳಿಸಿಕೊಂಡದ್ದೇನು?

ಪಾಕ್ ಬಂಧನದಲ್ಲಿದ್ದ ವಂಗ ಬಂಧು ಶೇಕ ಮುಜಿಬುರ್ ರೆಹಮಾನರನ್ನು ಮುಕ್ತಗೊಳಿಸುವುದಕ್ಕೆ ಮೊದಲೇ ಪೀಕಿಂಗಿಗೆ ತೆರಳಿ ಬರುವೆನೆಂದುಕೊಂಡಿದ್ದ ಪಾಕ್ ರಾಷ್ಟ್ರಪತಿ ಜುಲ್‌ಫಿಕರ್ ಅಲಿ ಭುಟ್ಟೊ ಅದೇಕೋ ತನ್ನ ಮೊದಲ ನಿರ್ಧಾರ ಬದಲಿಸಿದರು. ವಂಗ ಬಂಧುವನ್ನು ಬಿಡುಗಡೆಗೊಳಿಸಿದರು. ದೇಶದ ಆಂತರಿಕ ಸಮಸ್ಯೆಗಳ ಪರಿಹಾರಕ್ಕೆ ನೆರವಾದೀತೆಂಬ ಆಶೆಯಿಂದ ಆಫಘಾನಿಸ್ತಾನವನ್ನು ಅನಿರೀಕ್ಷಿತವಾಗಿ ಸಂದರ್ಶಿಸಿದರು. ಟರ್ಕಿಗೆ ಅಧಿಕೃತ ಭೇಟ್ಟನೀಡಿದರು, ಮತ್ತೆ ಕೊನೆಗೆ ಪೀಕಿಂಗನ್ನು ಮುಟ್ಟಿದರು. ಭುಟ್ಟೊ ಮತ್ತು ಪೀಕಿಂಗ್‌ಗಳ ಬಾಂಧವ್ಯ ಹಳೆಯದ್ದು; ಭುಟ್ಟೊ ಪೀಕಿಂಗಿಗೆ ಬರುವುದೂ ಇದು ಮೊದಲ ಸಲವಲ್ಲ; ಆದರೆ, ಇದೀಗ ಅವರು ಬಾಕಿ ವಾಕಿಸ್ತಾನದ ಸರ್ವಾಧಿಕಾರಿಯೂಗಿ ಮೊತ್ತಮೊದಲ ಬಾರಿಗೆ ಪೀಕಿಂಗ್ ಹಾರಿದರೆಂಬುದು ಮಾತ್ರ ಗಣನೀಯ. ಭಾರತ ಮತ್ತು ರಶ್ಯಗಳೊಡನೆ ವಿರಸ ತಂದುಕೊಂಡ ಬಳಿಕ ಚೀನಾಕ್ಕೆ ಪಾಕಿಸ್ತಾನವೇ ಹತ್ತಿರದ ಗೆಳೆಯ. ಭುಟ್ಟೋ ಅಂದರೆ, ಚೀನಾದ ಆತ್ಮೀಯ ಗೆಳೆಯನೇ ಹೌದು. ಅವರು ಬಯಸಿದ್ದೆನ್ನೆಲ್ಲಾ ಕೈಯೆತ್ತಿ ನೀಡಬಲ್ಲ ದೇಶವೊಂದಿದ್ದರೆ ಅದು ಚೀನಾ ಮಾತ್ರ. ಏಕೆಂದರೆ, ಪಾಕಿಸ್ತಾನ–ಚೀನಾಗಳೆರಡೂ ಭಾರತದ ಮೇಲೆ ನಂಜುಕಾರುತ್ತಿರುವ ಎರಡು ನೆರೆಹೊರೆಯ ದೇಶಗಳು. ಆದುದರಿಂದ ಈ ಸಮಾನ ಗುರಿಯಿಂದ ಅವರು ಒಂದಾಗುವುದು ಅಸಾಧ್ಯವಲ್ಲ; ಆದರೂ ಪಾಕಿಸ್ತಾನ ಮತ್ತು ಚೀನಾಗಳ ರಾಜ್ಯ ನೀತಿಯಲ್ಲಿ ಆಕಾಶ ಪಾತಾಳಗಳಷ್ಟು ಅಂತರ ಏದೆ. ಪಾಕ್ ನಾಯಕರು ವಸ್ತು ಸ್ಥಿತಿಯನ್ನು ಮನವರಿಕೆ ಮಾಡಿಕೊಳ್ಳುವಷ್ಟು ಉದಾರತೆಯನ್ನೆಂಮೂ ತೋರಿಸಿದ್ದಿಲ್ಲ; ಆದರೆ, ಚೀನಾ ನಾಯಕತ್ವ ಇದಕ್ಕೆ ಅಪವಾದವಾಗಿದೆ.

ಬಾಂಗ್ಲಾ ದೇಶದ ಉದಯ ಹಗಲಿನಷ್ಟು ಸ್ಪಷ್ಟ. ಇದನ್ನು ಮನ್ನಿಸಿದವರೊಡನೆ ರಾಜತಾಂತ್ರಿಕ ಸಂಬಂಧ ಕಡಿದುಕೊಳ್ಳುತ್ತೇವೆಯೆಂದು ರಾಷ್ಟ್ರಪತಿ ಭುಟ್ಟೋ ಬೆದರಿಸಿದರು. ತನ್ನ ಧ್ವನಿಗೆ ಅಂಕಾರವನ್ನೂ ಸೇರಿಸಿಕೊಂಡರು. ಆದರೆ, ಅವರ ಸ್ವರವೇರುತ್ತ ನಡೆದಂತೆ ಬಾಂಗ್ಲಾ ದೇಶವನ್ನು ಮನ್ನಿಸಿದ ದೇಶಗಳ ಸಂಖ್ಯೆ ಬೆಳೆಯಿತು. ರಶ್ಯ, ಬ್ರಿಟನ್ನುಗಳೂ ಸೇರಿದಂತೆ ಮೂವತ್ತು ದೇಶಗಳ ಮಾನ್ಯತೆ ಈಗಾಗಲೇ ಅದಕ್ಕೆ ದೊರೆತಿದೆ. ಇದು ಕಡಿಮೆ ಮಹತ್ವದ್ದಲ್ಲ. ಇನ್ನೂ ಕೆಲಕಾಲದಲ್ಲಿ ನಾಗರಿಕ ಜಗತ್ತಿನ ಎಲ್ಲ ದೇಶಗಳೂ ಬಾಂಗ್ಲಾದ ಉದಯವನ್ನು ಒಪ್ಪಿಕೊಳ್ಳತ್ತವೆಂಬುದು ಸತ್ಯ. ಪಾಕಿಸ್ತಾನವೂ ಅದರ ಉತ್ತೇಜಕ ಶಕುನಿ ರಾಷ್ಟ್ರಗಳೂ ಬಾಂಗ್ಲಾವನ್ನು ಮಾನ್ಯಮಾಡಲಿಲ್ಲವೆಂದ ಮಾತ್ರಕ್ಕೆ ಅದು ಇಲ್ಲವಾಗುವುದಿಲ್ಲ.

ಇಸ್ಲಾಮಾಬಾದವು ಆರಂಭದಿಂದಲೂ ಕುರುಡು ನೀತಿಯನ್ನೇ ನೆಮ್ಮಿಕೊಂಡಿದೆ. ಇದರಿಂದಾಗಿಯೇ ಅದಕ್ಕೆ ವಸ್ತುಸ್ಥಿತಿಯ ಪರಿಚಯವಾಗುತ್ತಲೇ ಇಲ್ಲ. ಆದರೆ, ಪೀಕಿಂಗು ಅದಕ್ಕಿಂತ ಬುದ್ಧಿವಂತ. ಜಗತ್ತಿನ ರಾಜ್ಯನೀತಿಯ ವಾತಾವರಣವನ್ನೆತ್ತ ಹರಿಯುತ್ತವೆಂಬುದನ್ನದು ತಿಳಿದುಕೊಳ್ಳಲೆತ್ನಿಸುತ್ತದೆ. ತನ್ನ ಛಲವಾದವನ್ನದು ಬಿಟ್ಟುಕೊಡದಿದ್ದರೂ, ವಸ್ತುಸ್ಥಿತಿಯನ್ನದು ಅರಿತುಕೊಂಡು ಮುಂದುವರಿಯುತ್ತದೆ. ರಶ್ಯದೊಡನೆ ಪುತಭೇದವಿರುವ ಚೀನಾಕ್ಕೆ ಭಾರತ–ರಶ್ಯ ಸಂಬಂಧವೊಂದು ತಲೆಶೂಲೆ. ಆದುದರಿಂದಲೇ ಅದು ಪಾಕಿಸ್ತಾನವನ್ನು ಆಪ್ತಮಿತ್ರನೆಂದು ಹತ್ತಿರಕ್ಕೆಳೆದುಕೊಳ್ಳಹತ್ತಿತೆಂಬುದನ್ನು ಮರೆಯಲಾಗದು.

ಭುಟ್ಟೋ ಬಹಳಷ್ಟನ್ನು ತೋಡಿಕೊಳ್ಳಲೆಂದು ಪೀಕಿಂಗಿಗೆ ತೋಪರು. ತೋಡಿಯೂ ಕೊಂಡರು. ಆಪಮಾನ ಮತ್ತು ಪರಾಜಯಗಳ ಗರ್ತದಿಂದ ತನ್ನನ್ನೆತ್ತಬೇಕೆಂದು ಗೋಗರೆದರು. ಹಿಂದೆ ಮಿಲಿಟರಿ ನಿಯೋಗದ ನಾಯಕನಾಗಿ ಬಂದಿದ್ದ ತನಗೆ ನೀಡಿದ್ದ ಆಶ್ವಾಸನೆಗಳನ್ನವರು ಈಡೇರಿಸಲಿಲ್ಲವೇಕೆಂದು ಪ್ರಶ್ನಿಸಲಿಲ್ಲ; ಪ್ರಶ್ನಿಸುವುದರಿಂದ ಪೀಕಿಂಗ್ ಬಾಂಧವ್ಯ ಕೆಡುವುದೆಂದು ಅವರಿಗೆ ಗೊತ್ತು. ಪರ್ಯಾಲೋಚನೆ—ಪರಿಶೀಲನಾನಂತರ ಜಂಟಿ ಹೇಳಿಕೆಯೇನೋ ಹೊರಬಿತ್ತು. ಆದರೆ, ಅದು ಭುಟ್ಟೋರ ರಾಕ್ಷಸ ತೃಷೆಯನ್ನು ಹಿಂಗಿಸಿತೆ? ಇದಕ್ಕೆ ಸಾಕಷ್ಟು ಪುರಾವೆಗಳು ಲಭ್ಯವಾಗಿಲ್ಲ. ಪಾಕಿಸ್ತಾನದ ದಯನೀಯ ದುರವಸ್ಥೆಯ ಬಗ್ಗೆ ಪೀಕಿಂಗು ಕಣ್ಣೀರು ಸುರಿಸಿದ್ದು ನಿಜ ವಿರಬಹುದು,ಸಹಾನುಭೂತಿ–ಸಹಾನುತಾಪಗಳ ನದಿ ಕೋಡಿ ಹರಿದಿರಲೂ ಬಹುದು. ರಕ್ಷಣೆಗೆ ಸಂಬಂಧಿಸಿದಂತೆ ರಾಷ್ಟ್ರಪತಿ ಭುಟ್ಟೋ ಕೇಳಿದ್ದನ್ನೆಲ್ಲಾ ಕೊಡಮೂಡಲು ಪೀಕಿಂಗ್ ಒಪ್ಪಿದೆಯೆಂದು ಕೆಲವು ವ್ಯಾಖ್ಯಾನಗಾರರು ಹೇಳುತ್ತಾರೆ. ಪೀಕಿಂಗ್ ಕೊಡುವುದಾದರೆ, ಅದರ ಸಂಪೂರ್ಣ ಮಿಲಿಟರಿ ಬಲವನ್ನೇ ಭುಟ್ಟೋ ಕೇಳಿಯಾರು. ಅವರಿಗೆ ಪಾಕಿಸ್ತಾನವನ್ನು ಕಟ್ಟುವ ಇರಾದೆಯಿಲ್ಲ; ಭಾರತವನ್ನು ಮುಳುಗಿಸುವ ದೈತ್ಯಾಕಾಂಕ್ಷೆಯಿಂದವರು ಅಂಧರಾಗಿದ್ದಾರೆ. ಭಾರತದೊಡನಾದ ಹದಿನಾಲ್ಕು ದಿನಗಳ ಸಮರದಲ್ಲಿ ನಷ್ಟವಾದ ಸೈನಿಕ ಬಲವನ್ನು ತುಂಬಿ ಕೊಡಲು ಪೀಕಿಂಗು ಸಮ್ಮತಿಸಿದೆಯೆಂದು ತಿಳಿಯುತ್ತದೆ ಆದರೆ, ಇದು 'ಪುಕ್ಕಟೆಯೊಗಿ' ಎಂದು ಕೆಲವರು ವ್ಯಾಖ್ಯಾನಿಸಿದರೆ ಇನ್ನು ಕೆಲವರು ಈ ಅರ್ಧವನ್ನು ಖಂಡಿಸುತ್ತಾರೆ. ನಷ್ಟ ಭರ್ತಿ ಮಾಡಲು ಪೀಕಿಂಗು ಮುಂದೆ ಬಂದಿರುವುದು ಸಹಜವೇ; ಆದರೆ, ಅದಕ್ಕಾಗಿ ಪಾಕಿಸ್ತಾನದಿಂದ ಬಾರೀ ಮೊತ್ತದ ಬೆಲೆ ಬಯಸುವುದೂ ನ್ಯಾಯವೇ.

ಬಾಂಗ್ಲಾ ದೇಶದ ವಿಷಯದಲ್ಲಿಯೂ ಅಂಕಾರದ ಹೇಳಿಕೆಯಂತೆ ಪೀಕಿಂಗ್ ಹೇಳಿಕೆಯಲ್ಲದಿರುವುದು ಗಮನೀಯ. ಆದುದರಿಂದ ಪಾಕಿಸ್ತಾನದ ಬಾಂಗ್ಲಾ ನೀತಿಯನ್ನು ಚೀನಾ ಒಪ್ಪಿದೆಯೆಂದು ನಂಬಿದರೆ ತಪ್ಪಾದೀತು. ಭದ್ರತಾ ಸಮಿತಿಯಲ್ಲಾಗಲೀ ವಿಶ್ವಸಂಸ್ಥೆಯ ಸಾಮಾನ್ಯಾಧಿವೇಶನದಲ್ಲಾಗಲೀ ಬಳಸಿದ ಕಟು ಭಾಷೆಯಲ್ಲಿ ಭಾರತವನ್ನು ಅದು ಈಗಲೂ ಖಂಡಿಸಿತೆಂದು ಹೇಳಲು ಸಾಕ್ಷ್ಯಾಧಾರಗಳು ಸಾಲವು. ತನ್ನ ಹಳೆಯ ಶತ್ರುವೊಬ್ಬನನ್ನು ನೆನಪಿಸುವಂತೆ ಅದು ಹಲ್ಲು ಕಡಿದಿರಬಹುದು. ಭುಟ್ಟೋ ಮಹಾಶಯರಿಗೆ ನೀಡಿದ ಭವ್ಯ ಸ್ವಾಗತ–ವಿದಾಯಗಳಿಂದಲೇ ಭುಟ್ಟೋ ಯಾತ್ರೆ ಸಫಲವೆಂದು ವ್ಯಾಖ್ಯಾನಿಸುವುದಾದರೆ, ಅದು ತಪ್ಪಾಗುತ್ತದೆ. ಇತ್ತೀಚೆಗಿನ ವರ್ಷಗಳಲ್ಲಿ ಚೀನಾ ರಾಜ್ಯಕೀಯವು ವಸ್ತುಸ್ಥಿತಿಯ ಮನನಕ್ಕೆ ಪ್ರಾಶಸ್ತ್ಯ ನೀಡುತ್ತದೆಯೆಂಬುದು ಎಲ್ಲರಿಗೂ ಗೊತ್ತು. ಇದನ್ನು ಅರ್ಥ ಮಾಡಿಕೊಳ್ಳಲು ಭುಟ್ಟೋ ಅಶಕ್ತರಾದರೆ, ಅವರು ಮುಂದೆಯೂ ಜಾರಿ ಬೀಳುತ್ತಾರೆಯೆಂಬುದು ನಿಸ್ಸಂಶಯ. ಭಾರತದ ವಿರುದ್ಧ ಪಾಕಿಸ್ತಾನವನ್ನು ಎತ್ತಿ ಕಟ್ಟುವುದರಿಂದಲೇ ತಮ್ಮ ಫಸಲೆಯುಳಿಯ ಬಹುದೆಂದು ಚೀನೀ ನಾಯಕರು ನಂಬಿರುವವರೆಗೆ ಭುಟ್ಟೋಗೆ ಅವರಿಂದ ಉತಾವಲಿ ದೊರೆಯುತ್ತದೆ; ಪಾಕ್ ಉಬ್ಬುತ್ತದೆ.

ಅಗತ್ಯ ಯೋಜನೆ

ದೇಶ ರಕ್ಷಣೆಯ ದೊಡ್ಡ ಹೊಣೆಗಾರಿಕೆಯನ್ನು ಹೊತ್ತು ತಮ್ಮ ಪ್ರಾಣವನ್ನು ಪಣಪಾಗಿರಿಸಿ ದುಡಿಯುವ ರಕ್ಷಣಾ ಪಡೆಯ ನರ ಮಕ್ಕಳಿಗೆ ಹಲವು ಬಗೆಯ ಶಿಕ್ಷಣ ಸೌಲಭ್ಯಗಳು ದೊರೆಯುತ್ತಿದ್ದುವು. ಆದರೆ, ಕೆಲವು ವರ್ಷಗಳಿಂದ ಅವನ್ನು ಹಿಂದೆಗೆದು ಕೊಳ್ಳಲಾಗಿತ್ತು. ಇದೀಗ ಭಾರತ-ಪಾಕ್ ಕದನದ ವೇಳೆ ರಕ್ಷಣಾಪಡೆಯ ಮಹತ್ವ ಮತ್ತೊಮ್ಮೆ ಜಗಜ್ಜಾಹೀರಾದುದರಿಂದಲೋ ಏನೋ, ಈ ಸೌಲಭ್ಯಗಳು ಮತ್ತೆ ದೊರೆಯುವಂತಾಗಿವೆ. ಜೀವಂತರಾಗಿರುವ ಸಿಬ್ಬಂದಿಯವರ ಮಕ್ಕಳು ಮತ್ತವರ ಅವಲಂಬಿತರಿಗೆ ಮಾತ್ರವಲ್ಲದೆ, ಕರ್ನಾಟಕ ರಾಜ್ಯದಲ್ಲಿ ಈ ರಾಜ್ಯದವರಾಗಿದ್ದು ಯುದ್ಧದಲ್ಲಿ ಪ್ರಾಣಕಳೆದುಕೊಂಡಿರುವವರ ಅಥವಾ ತೀವ್ರ ಅಂಗವಿಕಲರಾಗಿರುವವರ ಮಕ್ಕಳಿಗೆ ಮತ್ತು ಅವಲಂಬಿತರಿಗೂ ಈ ಯೋಜನೆಯ ಪ್ರಯೋಜನ ಲಭ್ಯವಾಗುವುದು.

ನೆರೆ ಬಂದಾಗ ಹೊಳೆ ಹುಚ್ಚು ಹುಚ್ಚಾಗಿ ಹರಿಯುವಂತೆ ಈ ಮಿಲಿಟರಿ ಛಾತ್ರಮಿತ್ರ ಯುದ್ಧಾನಂತರದ ಕೆಲವು ದಿನಗಳಲ್ಲಿ ಮಾತ್ರ ಜ್ಯಾರಿಯಲ್ಲಿದ್ದರೆ ಸಾಲದು. ರಕ್ಷಣಾ ಪಡೆಯವರೂ ವೇತನ ಪಡೆಯುತ್ತಾರೆಂಬುದು ನಿಜ; ಆದರೆ, ಅವರು ತಮ್ಮ ಪ್ರಾಣವನ್ನು ಸದಾ ದೇಶಕ್ಕಾಗಿ ಪಣವಿಟ್ಟಿದ್ದಾರೆಂಬುದನ್ನು ಮರೆಯಬಾರದು. ಅವರು ದೇಶದ ರಕ್ಷಣೆಯ ಭಾರವನ್ನು ಹೊತ್ತಿರುವಂತೆ ಅವರ ಕುಟುಂಬದ ರಕ್ಷಣೆಯ ಭಾರವನ್ನು ಜನತೆ ಹೊರಬೇಕಾದದ್ದು ನ್ಯಾಯವೇ. ಆದುದರಿಂದ ಯೋಧರ ಕುಟುಂಬ ಕಲ್ಯಾಣಕ್ಕಾಗಿ ಶಾಶ್ವತ ವ್ಯವಸ್ಥೆಯೊಂದು ಅನಿವಾರ್ಯವಾಗಿದೆ. ಪ್ರಧಾನಿ ಶ್ರೀಮತಿ ಗಾಂಧಿಯವರು ಈ ನಿಟ್ಟಿನಲ್ಲಿ ಬಹಳಷ್ಟು ಕಾಳಜಿ ವಹಿಸಿದ್ದಾರೆ; ಅವರು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು; ಜನತೆ ಅದಕ್ಕೆ ಉದಾರ ದಾನ ನೀಡಬೇಕು.

●●

ಗೇಹರಾಜ್ಯದಲ್ಲಿ

ಅಸ್ತು ಅಂದರೆ ತಥಾಸ್ತು

'ಅಲ್ರಿ...'

'ಅಲ್ಲಾಂಗೆ...'

'ಏನು?'

'ನೀನನ್ನೋದೇನು!'

'ಅಲ್ಲಾ, ಮೊತ್ತ ಕೇಳೋದಕ್ಕೊಬ್ಬನೇ ಅಲ್ಲಾಂತಸ್ಲೇಕಾನ್ರೆ ತಮ ವಿರೋಧಿ ನಕ್ಷೆ ವೆ ನೀತಿ....'

'ತಂದಿನ ಜಲ್ಲಾನ್ನು, ನಿಂದಿನ ಜಂತ ವಿಕೇಷಣ ಸೇರ್ಸಿ ಬಿಡು....'

'ನೋಡಿ....'

'ನೋಡ್ತೆ...'

'ನಿನಗ್ನ?'

'ಮತ್ತೇನಿಲ್ಲ? ನಿನ್ನ ಶ್ರೀಮುಖವನ್ನ..'

'ರಾಜ್ಯಪಾಲ ಧರ್ಮವೀರಯ ನಿನ್ಗೆತ್ತ ರಾದೆಯ....'

'ಹ್ಞೂಂ....ತರೆಮೊನ್ನೆ...'

'ನೋಪನ್ಲೇಲಾ ಸುಖಾಸುಮ್ಮ ರಾಜ್ಯ ವ ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಿದೆ ಯ....'

'ಸ್ವೀಕರಿಸಿದೊನ್ನಾ....'

'ಅವ್ರ ನೊಮ್ಮೆ ರಾಜಸ್ಥಾನದಲ್ಲಿ ಮುಖ್ಯಮಂತ್ರಿಯಾಗಿದ್ದೆರೆಲ್ಲಾ....'

'ಪಾಮು ಕಣೇ ಪಾಮು. ಅವ್ರ ನೆಹರೂ ಕಾಲದ ಮುಖ್ಯಮಂತ್ರಿ.'

'ಆಮ ಪಾನ್ನಿ. ಶ್ರೀಮತಿ ಗಾಂಧಿ ಹಳೆ ಮುಖ್ಯರುಂತ್ರಿಗಳನ್ನೆಲ್ಲಾ ಮನೆಗೆ ಕಳಿ ಸಿ ಕತ್ತಿದ್ದಾರೆ...'

'ಮನೆಗೆ ಕಳ್ಸ ಕಣೇ. ನಿಷ್ಕ್ರಿಯ ರಾಜ್ಯಕಾರಣಕ್ಕೆ, ಸಕ್ರಿಯಮಂದ....'

'ಪಾಗಂದರೆ?'

'ಮಂತ್ರಿ ಸ್ಥಾನದಿಂದ ರಾಜ್ಯಪಾಲ-ರಾಯೆಭಾರಿ-ಹೈಕಮಿಷನರ್ ಸ್ಥಾನಗಳಿಗೆ...'

'ಜನೇನ್ದ್ರಾಗ್ಲೇಲ್ಲಿರಿ? ಸುಖಾಸುಮ್ಮ ವಿ ಷಯದಲ್ಲಿ ಎಮ ಸರಿಯೂಗಿರಬಹುದು..'

'ಅಲ್ಲೆ, ಅಸ್ಲಾಮನ ಜಾಲಿಕಾರನ್ನು ಮೊಡಿಸ್ದೇನು? ಮತ್ತೇಗೆ ಮೋಹಕ್ಕೆ ಕುಮಾರ ಚೌಹುರಿಯರ ಪಾಡೇನು? ಅಂಧ್ರದಲ್ಲಿ ಹ್ಯಾರ್ಮಂದಿಷ್ಟಿಯವರ ಗಲಭೆಗಾಯ್ತು? ಮಧ್ಯಪ್ರದೇಶದ ಶ್ಯಾಮ ಚರಣ ಶುಕ್ಲಾರನ್ನು ಗದ್ದುಗೆಯಿಂದ ಇಳಿಯುವಂತೆ ಆದೇ ಶ ನೀಡಿದರಲ್ಲಾ?'

'ಹ್ಞೂಂ ಆವ್ರ ನ್ಯಾಪಕ್ಕೆ?'

'ಸ್ಥಾನ ತುಂಬುವುದಕ್ಕೇನಂತೆ? ಯೂರಾದರೊಬ್ಬ ಇದ್ದೇ ಇರುತ್ತಾನೆನ್ನು...'

'ಇನ್ನು ಉಳಿದಿರುವುದೆಂದರೆ ಮಹಾರಾಷ್ಟ್ರ ಮಾತ್ರ....'

'ಆದೇನೋಪ್ಪಾ, ಮುಂದಿನ ಬಾರಿಯೂ ಸ್ಪರ್ಧಿಸಲು ವಿ ಪಿ. ನಾಯಕರಿಗೆ ಶ್ರೀಮತಿಯವರ ಅನುಮತಿ ದೊರಕಿಸಿಕೆಯೆಂತೆ....'

'ಆದ್ಯಾಕೋ! ಅವರನ್ನು ಗದ್ದುಗೆಯಿಂದಿಳಿಸಲು ಭಾರೀ ಸಂಚು ನಡೆಯುತಿತ್ತಂತೆ....'

"ನಡೆಯುತಿತ್ತು ಏನು, ನಡೆದಿತ್ತು. ಆದರೆ, ಯಶವಂತರಾವ ಚವನರನ್ನು ಕೇಂದ್ರದಿಂದ ನಿವೃತ್ತಿಗೊಳಿಸುವ ತಂತ್ರದಲ್ಲಿ ಮಂಚಾಣಿಗರ ಮನನೋಯದಂತೆ ನಾಯಕರಿಗೆ ಟಿಕೇಟು ಕೊಟ್ಟರಬಹುದು. ಮತ್ತೊಂದು ನೋಡು..'

'ಏನು?'

'ಟಿಕೇಟು ಕೊಟ್ಟ ಮಾತ್ರಕ್ಕೆ ಮುಖ್ಯ ಮಂತ್ರಿ ಪಟ್ಟ ಉಳಿಯಿತೆಂದು ಅರ್ಥ ವಲ್ಲ....'

'ಅದು ಹೇಗಾಗುತ್ತೆ? ತನ್ನ ಹಿಂದಿನ ಸ್ಥಾನ ಉಳಿಸ ಬಯಸುವುದು ತಪ್ಪಲ್ಲ ತಾನೆ?'

'ತಪ್ಪು—ಒಪ್ಪಿನ ವ್ಯಾಖ್ಯಾನೆ ಪ್ರಜಾ ಸತ್ತೆಯಲ್ಲಿ ಬದಲಾಗಬಹುದು. ಎಮ್ಮೆಲ್ಯೆ ಗಳು ಬೇರೆಯವನಾಗಬೇಕೆಂದು ಬಯಸಿ ದಾಗ.'

'ಪಕ್ಷದ ಏಕತೆಗಾಗಿ ನಾಯಕರು ಅಧಿ ಕಾರ ಬಯಸಬಾರದು.'

'ಪಾಗೆ ಬಾ ಮತ್ತೆ....'

'ಅಲ್ರಿ, ಅಂಧ್ರಪ್ರದೇಶದಲ್ಲಿ ಆರುವ ತ್ತೈದು ಮಿಂದವರಿಗೆ ಟಿಕೇಟು ಕೊಡಲಿ ಲ್ಲವಂತೆ....'

'ಹ್ಞೂಂ.... ಇದನ್ನೇ ಕಟ್ಟುನಿಟ್ಟಾಗಿ ಮುಂದೆಯೂ ಅನುಸರಿಸಿದರೆ ಒಳ್ಳೆಯದಾ ಗುತಿತ್ತೋ ಏನೋ....'

'ಪಾಗಲ್ಲಾರಿ. ಚುನಾವಣೆಯಲ್ಲಿ ಸ್ಪರ್ಧಿಸುವ ಅಧಿಕಾರದಿಂದ ವಂಚಿತಗೊಳಿಸುವುದು ನ್ಯಾಯ ಸಮ್ಮತವೇನು?'

'ಯಾಕಲ್ಲಾ? ಪಕ್ಷಕ್ಕೆ ತನ್ನದೇ ಆದ ನೀತಿ ರೂಪಿಸಿಕೊಳ್ಳುವ ಅಧಿಕಾರವಿದೆ ಕಾನ್ರೆ?'

'ನೋಡಿ, ಈ ನಿಯಮದಿಂದ ೨೫ ಎಮ್ಮೆಲ್ಯೆಗಳು ಇಬ್ಬರು ಮಂತ್ರಿಗಳಿಗೆ ಇಂಡಿಕೇಟು ಟಿಕೇಟು ಇಲ್ಲವಾಗುತ್ತಂತೆ....'

'ಅಲ್ರೆ, ಈ ನಿಯಮವನ್ನು ಇಡಿಯ ದೇಶಕ್ಕೆ ಅನ್ವಯಿಸಿದ್ದರೆ ಭಾರೀ ಚಲೋ ವಾಗುತ್ತಿತ್ತು....'

'ಯಾಕಂತೀರಾ?'

'ಸಿಂಡಿಕೇಟಿನ ಬಲವಾದ್ರೂ ಹೆಚ್ಚು ತ್ತಿತ್ತು. .'

'ಹ್ಯಾಗಂತೀರಾ?'

'ಅಲ್ರೆ, ಸಿಂಡಿಕೇಟಿನ ಹುದ್ದರಿಗಳ ಬೇ ಟೆ ಯಶಗಳಿಸುತ್ತಿತ್ತು. ಅದಕ್ಕೆ ಅರುವ ತ್ತೈದು ಮಿಂದವರಾದರೇನು? ಒಂದ್ರೀತಿ ಯಿಂದ ಅವ್ರೇ ಬೇಕೂನ್ನು.'

'ಹ್ಞೂಂ....ಆದ್ರೆ ಪಾಪ, ಅದು ಅಂಧ್ರ ಕ್ಕೆ ಮಾತ್ರ ಮಿಸಲಂತೆ....ಅಲ್ರಿ, ನಮ್ಮ ದೇವರಾಜ ಅರಸರು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲಾಂತ ಭಾರೀ ಸುದ್ದಿ ಯಿತ್ತು....'

'ಅದು ಮೊದಲಿಗೆ ಬಂದ ವರದಿ....'

'ಕೊನೆಗೆ ಬಂದ ವರದಿಯೇನಂತೆ?'

'ಕೊನೆಯ ವರದಿಯನ್ನೂ ಬರುತ್ತಿದೆ ಯಷ್ಟೆ....'

'ಹಾಗಲ್ಲಾರೀ, ಆ ನಂತರ ಬಂದ ವರ ದಿ ಯಾವುದು?'

'ಅವರು ಸ್ಪರ್ಧಿಸುವುದು—ಬಿಡುವುದು ಶ್ರೀಮತಿ ಗಾಂಧಿಯ ಇಷ್ಟಕ್ಕೆ ಬಿಟ್ಟದ್ದು....'

'ಹಾಗಂದರೆ?'

'ಸಿಲ್ಲಿ ಎಂದಾಕೆ ಅಂದರೆ ನಿಲ್ಲುವುದು ಇ ಲ್ಲವಾದರೆ ಇಲ್ಲ....'

'ವಿಧೇಯತೆ ಅಂದ್ರೆ ಹೀಗಿರಬೇಕು....'

'ಯಾಕೆ?'

'ಅಲ್ರಿ, ಟಿಕೇಟು ಕೊಡೀಂತ ಹಳ್ಳಿ ಯಿಂದ ಡಿಳ್ಳಿಗೆ ಬೆಂಗ್ಳೂರ್ ಮಾರ್ಗವಾಗಿ ಹುದ್ದರಿ ಇರುವ ವಿಮಾನ ಓಡುತ್ತಿರುವಾಗ, ಅರಸರ ತ್ಯಾಗ—ವಿಧೇಯತೆಗಳು ಪ್ರಶಂಸನೀಯ....'

'ನಿಜಕ್ಕೂ, ಆದ್ರೆ ನೋಡು....'

'ಏನು?'

'ಬೆಂಗ್ಳೂರಿಂದ ನೂರಾರು ತಂತಿಗಳು ಶ್ರೀಮತಿ ಗಾಂಧಿಗೆ ಹೋಗಿವೆಯಂತೆ....'

'ಏನೆಂತ?'

'ಅರಸರನ್ನು ಒಪ್ಪಿಸಿ, ಒಪ್ಪಿಸಿ, ಅಂತ'

'ಯಾವುದಕ್ಕೆ?'

'ಮತ್ಯಾವುದಕ್ಕೆ?'

'ಮತ್ಯಾವುದಕ್ಕೆ? ಇಲೆಕ್ಷನ್ನಿಗೆ....'

'ಓ ಹೀಗೆ ದ್ಯಾನಿಡ ವ್ಯಾಖ್ಯಾಯಾಮು?'

'ಮತ್ತೆಂಥದು?'

'ಆಂದ್ರೆ ಇದು ಆಷಾಢಭೂತಿತನ....'

'ಹಾಗಂದುಕೋ ಬೇಕಾಗಿದ್ರೆ, ಯಾರು ಬೇಡಾಂತಾರೆ?'

'ಅಲ್ರಿ, ಅದಕ್ಕಿಂತ ಟಿಕೆಟ್ಟೇ ಕೇಳಬಹು ದಿತ್ತಲ್ಲಾ?'

ನೋಡಮ್ಮ, ಅರಸರು ಬರಿಯ ಎಮ್ಮೆ ಲ್ಯೆಯಿಂದ ತೃಪ್ತರಾಗಲಾಗದು. ಅವರ ಕಣ್ಣು ಮುಖ್ಯಮಂತ್ರಿ ಪದದ ಮೇಲೆ. ಆ ದು ದಕ್ಕಿಸಿಕೊಳ್ಳುವುದಕ್ಕೇ ಈಯೆಲ್ಲಾ ತಂತ್ರವಿರಬಹುದು....'

'ಅದು ಸರಿನ್ನಿ. ಶ್ರೀಮತಿ ಗಾಂಧಿ ತ ಸ್ತು ಅಂದರೆ ಉಳಿದವರೆಲ್ಲರೂ ತಥಾಸ್ತು ಅಂತಾರೆ....'

'ನೋಡು, ಶ್ರೀಮತಿ ಗಾಂಧಿ ಅಂದರೂ ಅರಸು ನಿರಾಕರಿಸಿದರೆ, ಅವರಿಗೆ ಅಧಿಕಾರ ದ ಮೇಲೆ ವ್ಯೋಹವಿಲ್ಲ ಅನ್ನಬಹುದು....'

ಅದು ಹೇಗಾಗುತ್ತೀರಿ? ಶ್ರೀ ಸಾಮ್ರಾ ನ್ಯನ ಸಾಕಾರಮೂರ್ತಿಯ ವಾಕ್ಯ ದೇ ಶದ ವಾಣಿ. ಅದನ್ನು ಮಿರೋದೆಂದರೆ, ಬಹು ಜನಾಭಿಪ್ರಾಯವನ್ನು ಕಡೆಗಣಿ ಸೋದೆಂದೇ ಅರ್ಥ....'

'ಹ್ಞೂಂ....'

'ಅಲ್ರಿ, ರಾಜ್ಯಪಾಲರಾಗಿದ್ದ ಧರ್ಮವೀ ರರು ರಾಷ್ಟ್ರಪತಿಯವರಲ್ಲಿ ಕ್ಷಮೆ ಯಾಚಿ ಸಿದರಂತೆ....'

'ಅದೋ, ಅದು ಮತ್ತೊಂದು ಪ್ರಕ ರಣ....'

'ಏನು?'

'ಕೇಂದ್ರ ರಾಜ್ಯಕ್ಕೆ ನೀಡುವುದಾಗಿ ಸಾ ರಿದ ಸಹಾಯ ಧನದಲ್ಲಿ ಸಿಂಹ ಪಾಲನ್ನು ಕೊಡಲಾಗದೆಂದು ಅದು ಹೇಳಿದ್ದರಿ-ದ ರಾಜ್ಯಪಾಲರು ತರಾಟೆಗೆ ತೆಗೆದುಕೊಂ ಡರು....'

'ಹೌದು. ಹಾಗೆ ಮಾಡಿದರೆ ಓವರ್ ಡ್ರಾಫ್ಟನ್ನು ಹಿಂದಿರುಗಿಸಲಾಗದೆಂದರು...'

'ಜವೇ ಕೇಂದ್ರದ ಬಗ್ಗೆ ಅವಿಧೇಯತೆ ನೋಡು. ರಾಜ್ಯಪಾಲರು ಕೇಂದ್ರ ಸರಕಾ ರದ ಪ್ರತಿನಿಧಿಯೊಗಿ ರಾಷ್ಟ್ರಪತಿಗಳ ಪರ ವಾಗಿ ರಾಜ್ಯವಾಳುವಾಗ ಅಂತಹ ಬೆದರಿ ಕೆ ಹಾಕುವುದೆಂದಿಧೀನು?'

'ಹಾಗಲ್ಲಾರಿ, ರಾಜ್ಯಪಾಲರು ರಾಜ್ಯ ದ ಹಿತ ಸಂಬಂಧವನ್ನು ಗಮನಿಸಬೇಕು; ಅವರ ವಾಣಿ ರಾಜ್ಯ ಸರಕಾರದ ವಾಣಿ....'

'ಸರಿ ಅದು ಸರಕಾರವಿರುವಲ್ಲಿ ಸರಿ ಹೋಗಬಹುದು. ಆದರೂ ನೋಡು ಪ ಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದಾಗ ಇದೇ ಧರ್ಮವೀರರು ಮುಖ್ಯಮಂತ್ರಿ ತ ಯೊರಿಸಿಕೊಟ್ಟ ಭಾಷಣದ ಕೆಲನಂಶವ ನ್ನು ವಿಧಾನ ಮಂಡಳದ ಸಭೆಯಲ್ಲಿ ಓದ ಲು ನಿರಾಕರಿಸಿದ್ದರು....'

'ಹ್ಞೂಂ....ಹೌದೂನ್ನಿ.'

ಆದಿರಲಿ ...ನೋಡಿ, ರಾಜ್ಯಪಾಲರು ಹಾಗೆಲ್ಲ ಬೆದರಿಕೆ ಹಾಕಲಿಲ್ಲವಂತೆ. ಪತ್ರಿ ಕೆಗಳು ಉತ್ಪ್ರೇಕ್ಷೆಯಿಂದ ವರದಿ ಮಾಡಿ ದುವಂತೆ...'

'ನಿಜಾನ್ನು. ಶ್ರೀ ಧರ್ಮವೀರರು ಏನೆಂ ದರೂ ಏನು ಮಾಡಿದರೂ ದಿಟ್ಟತನ ತೋ ರಿಸುತಿದ್ದ ಕಾಲವೊಂದಿತ್ತು. ಹಾಗೇನೇ ಎಂದು ಉಪ್ಪುಖಾರ ಹೆಚ್ಚಿ ...'

'ಅಲ್ಲಾರಿ, ಪಾಪ, ಕರ್ನಾಟಕಕ್ಕೆ ಬಂ ದು ಅವರು ಕೇಳಬಾರದ್ದನ್ನು ಕೇಳಬೇ ಕಾಯ್ತು..'

'ಯಾಕಂತೀಯೂ?'

'ಮೊದಲಿಗೆ ಸಿಂಡಿಕೇಟ್‌ಪರರೆಂದು ದೂ ರಿಸಿ ಕೊಂಡರು. ಈಗ ಹೀಗೆ...'

"ಹ್ಞೂಂ....ಸಾರ್ವಜನಿಕ ಕಾರ್ಯಕ ರ್ತರು ಇದಕ್ಕೆಲ್ಲಾ ಸೊಪ್ಪುಹಾಕುವು ದಿಲ್ಲ...."

'ಸೊಪ್ಪು ಹಾಕದವರು, ಸಾರ್ವಜನಿಕ ಕಾರ್ಯಕರ್ತರೂ ಆಗುವುದಿಲ್ಲ....'

—ಗೋರಾ

Gram: VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging.

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಸೋವಿಯತ್ ದುರ್ಬೀನಿನಲ್ಲಿ

ಕೆಂಪು ಚೀನದ ನಿಜ ಸ್ವರೂಪ

ಇತಿಹಾಸವು ಎರಡು ದೇಶಗಳನ್ನು—ಚೀನಾ ಮತ್ತು ಅಮೆರಿಕಗಳನ್ನು ನಗ್ನಗೊಳಿಸುತ್ತಲೇ ಇದೆ. ಒಂದರ ಕ್ರಾಂತಿಕಾರಿ ನಟನೆಗಳನ್ನು, ಇನ್ನೊಂದರ ಪ್ರಜಾತಾಂತ್ರಿಕ ನಟನೆಗಳನ್ನು ಅದು ಬಯಲಿಗಿಡುತ್ತಿದೆ. ತಮ್ಮ ನಿಜವಾದ ಮುಖವನ್ನು ಅವರು ಬಚ್ಚಿಟ್ಟುಕೊಳ್ಳಲು ಆದೆಷ್ಟೇ ಪ್ರಯತ್ನಿಸಲಿ, ಇತಿಹಾಸವು ಮಾತ್ರ ಅವುಗಳ ಎದೆಯಲ್ಲಿರುವ ಸುಳ್ಳನ್ನು ಹೊರಗೆಡಹುತ್ತಲೇ ಇದೆ. ಭಾರತ ಉಪಖಂಡದಲ್ಲಿಯ ಇತ್ತೀಚಿನ ಘಟನೆಗಳಂತೂ, ಜಗತ್ತಿನ ಈ ಭಾಗದಲ್ಲಿ ಈ ಎರಡು ರಾಷ್ಟ್ರಗಳಿಗೂ ಇರುವ ನಿಜವಾದ ಆಸಕ್ತಿಗಳನ್ನೂ ಅಪೇಕ್ಷಿತ ಫಲಗಳನ್ನು ಸಾಧಿಸಲು ಅವೆರಡೂ ಹೂಟ ಹೂಡಿರುವುದನ್ನೂ ಮತ್ತಿಷ್ಟು ಸ್ಪಷ್ಟವಾಗಿ ಬಯಲಿಗಿಟ್ಟಿವೆ.

ಅಮೆರಿಕವು ಪ್ರಜಾಪ್ರಭುತ್ವದ ಪರವಾಗಿ ಇದೆಯೆಂಬುದು ಅಮೆರಿಕನ್ ಪ್ರಚಾರದಲ್ಲಿಯು ಬಹುದೊಡ್ಡ ಭಾಗವಾಗಿ ಬಂದಿದೆ. ಹೀಗಿದ್ದಾಗಲೂ ತನ್ನ ಹಿತಗಳಿಗೂ ಧೋರಣೆಗಳಿಗೂ ಅದು ವಿರೋಧವಾಗಿ ಕಾಣಿಸಿದಲ್ಲೆಲ್ಲ ಪ್ರಜಾಪ್ರಭುತ್ವದ ಪ್ರತಿಕ್ರಿಯೆಯನ್ನು ಬುಡಮೇಲುಗೊಳಿಸುತ್ತ ಬಂದಿರುವ ಬಹುದೊಡ್ಡ ದಾಖಲೆಯೆ ಅಮೆರಿಕನ್ ಆಡಳಿತಕ್ಕಿದೆ ಇಂಥ ಅಧಮ ಕಾರ್ಯಕ್ಕೆ ಕಣ್ಣುಕೋರೈಸುವ ದೃಷ್ಟಾಂತವೆಂದರೆ, ಗಾಜಿಯರ ಜಿನೀವಾ ಒಡಂಬಡಿಕೆ ಪ್ರಕಾರ ವಿಯೆತ್ನಾಮಿನಲ್ಲಿ ನಡೆಯಬೇಕಾಗಿದ್ದ ಚುನಾವಣೆಗಳನ್ನು ಅಮೆರಿಕದವರು, ಹೋಚಿಮಿನ್ಹ್ಹರೇ ವಿಯೆತ್ನಾಮಿನ ನಿಜವಾದ ನಾಯಕರಾಗಿ ಉದಯಿಸುತ್ತಾರೆಂಬ ಭಯದಿಂದ ಸಂಪೂರ್ಣ ಹಾಳುಮಾಡಿದುದೇ ಆಗಿದೆ ಆ ದೇಶದ ವಿರುದ್ಧ ಅಮೆರಿಕದ ಲಕ್ಕಮಣಕ್ಕೆ ಇದುವೇ ನಾಂದಿಯೂ ಗಿದ್ದಿತು.

ಚೀನದ ಬಗ್ಗೆ ಹೇಳುವುದಾದರೆ, ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವವರ ನಿಜವಾದ ರಕ್ಷಕನೆಂದರೆ ನಾನೇ, ತೃತೀಯ ಜಗತ್ತಿನ ವರ ಪ್ರತಿಪಾದಕನು ನಾನೆ ಎಂದುಹರ ಭಾರೀ ಸೋಗನ್ನು ಕಂಡು ನಗದೆ ಬೇರೇನನ್ನು ಮಾಡಲಿಕ್ಕಾಗುವುದಿಲ್ಲ. ಚೀನವು ಅಮೆರಿಕದ ಜೊತೆಗಾರನೂ ಆಗಿ, ಅದೇ ಕಾಲಕ್ಕೆ ಈ ಕೆಲಸವನ್ನೂ ಮಾಡುತ್ತೇನೆನ್ನುವುದು ಕೇವಲ ಬೂಟಾಟಿಕೆಯ ಮಾತು.

ಚೀನದ ಈ ಘೋಷಣೆಗಳು ಅವುಗಳ ಹಿಂದಿರುವ ನಿಜವಾದ ಉದ್ದೇಶಗಳ ಪರಿಚಯವಿಲ್ಲದವರಿಗೆ ತುಂಬಾ ಆಕರ್ಷಕವಾಗಿಯೇ ಕಾಣಿಸುತ್ತವೆ ಆದರೆ ಅವುಗಳ ಹೊರ ಮುಖಗಳು ಆಕರ್ಷಕವಾಗಿರುವಷ್ಟು ನಿಜ ಸ್ವಭಾವವು ಏನೇನೂ ಆಕರ್ಷಕವಾಗಿಲ್ಲ.

೧೯೪೯ರ ಆರಂಭದಲ್ಲಿ — ಎರಡನೇ ಲೋಕ ಯುದ್ಧವು ಕೊನೆಗೊಂಡ ಬಳಿಕ—ಮೊವ್ತೆ ತುಂಗರು ಭಂಡವಾಳವಾದೀ ದೇಶಗಳಲ್ಲಿಯ ವರ್ಗ ಸಮರದ ಬಗ್ಗೆ ಮತ್ತು ಎರಡು ಜಾಗತಿಕ ವ್ಯವಸ್ಥೆಗಳ—ಸಮಾಜವಾದ ಮತ್ತು ಬಂಡವಾಳವಾದಗಳ ಪರಸ್ಪರ ವಿರೋಧದ ಬಗ್ಗೆ ಮಾರ್ಕ್ಸ್‌ವಾದೀ ಲೆನಿನ್‌ವಾದೀ ಉಪದೇಶವನ್ನು ಪರಿಷ್ಕರಿಸಲು [ಮತ್ತು ಅದಕ್ಕೆ ಬದಲು ರಾಷ್ಟ್ರೀಯತಾವಾದ ಹಾಗೂ ಭೌಗೋಲಿಕ ರಾಜಕಾರಣಗಳ ಆಧಾರದ ಮೇಲೊಂದು ತಾತ್ಪಿಕ ಸಂಯೋಜನೆಯನ್ನು ಮುಂದಿಡಲು ಪ್ರಯತ್ನಿಸಿದರು. ಈ ಸಂಯೋಜನೆಯ ಸಾರಾಂಶ ಇಷ್ಟೆ. ಸಂ. ರಾ. ಅಮೆರಿಕ ಮತ್ತು ಸಮಾಜವಾದೀ ವಲಯಗಳ ನಡುವೆ ಒಂದು "ಮಧ್ಯವರ್ತಿ ವಲಯವು" ಇದೆ. ಈ ಮಧ್ಯವರ್ತಿ ವಲಯದಲ್ಲಿ ಎರಡು ಉಪ ವಿಭಾಗಗಳು ಇವೆ. ಮೊದಲನೆಯದರಲ್ಲಿ ಏಶಿಯ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕದ ವಿಶಾಲವಾದ ಪ್ರದೇಶವಿದೆ. "ಈ ಪ್ರದೇಶದಲ್ಲಿ ಆಧುನಿಕ ಜಗತ್ತಿನ ವಿರೋಧಾಭಾಸಗಳೆಲ್ಲವೂ ಸ್ಪಷ್ಟವಾಗಿ ವ್ಯಕ್ತ ಪಡುತ್ತಿವೆ. ಸಾಮ್ರಾಜ್ಯವಾದೀ ಪ್ರಾಬಲ್ಯದಲ್ಲಿ ಇದೇ ಅತ್ಯಂತ ದುರ್ಬಲ ಕೊಂಡಿಯೊದರೂ ಸಾಮ್ರಾಜ್ಯವಾದಕ್ಕೆ ನೇರವಾಗಿ ಪ್ರಹಾರ ಹಾಕುವ ಜಾಗತಿಕ ಕ್ರಾಂತಿಯ ಚಂಡಮಾರುತದ ವಲಯವೆಂದರೆ ಇದೇ ಆಗಿದೆ. ಇನ್ನು ಎರಡನೆಯ ಭಾಗದಲ್ಲಿ ಔದ್ಯೋಗಿಕವಾಗಿ ಅಭಿವೃದ್ಧಿಗೊಂಡ ಪಶ್ಚಿಮ ಯುರೋಪಿನ ದೇಶಗಳೂ ಜಪಾನು, ಆಸ್ಟ್ರೇಲಿಯ ಹಾಗೂ ಕೆನಡಾಗಳೂ ಸೇರುತ್ತವೆ. ಹಾಗೂ ಇವೆಲ್ಲವೂ ಸಂ. ರಾ ಅಮೆರಿಕನ ದಬ್ಬಾಳಿಕೆಗೆ ವಸ್ತುವಾಗಿರುವುದರಿಂದ ವಾಸ್ತವಿಕವಾಗಿಯೆ ಅವು ಕೂಡ ಅಮೆರಿಕನ್ ವಿರೋಧಿಗಳಾಗಿವೆ.

ಈ ಮೂಲೋವಾದೀ ಪ್ರಮೇಯದ ಪ್ರಕಾರ, "ಮಧ್ಯವರ್ತಿ ವಲಯದಲ್ಲಿ ಅಮೆರಿಕನ್ ಸಾಮ್ರಾಜ್ಯವಾದ ಆಕ್ರಮಣವೇ ಅಬಾಧಿತ ವ್ಯೂಹ"ವಾಗಿದೆ 'ಅಲ್ಲಿ ತನ್ನ ಹತೋಟಿಯನ್ನು ಸ್ಥಾಪಿಸುವುದು" ಮತ್ತು "ಸಂ. ರಾ. ಅಮೆರಿಕದ ಹಾಗೂ ಅದರ ಸೆಂಟರ ಜನತೆಗಳನ್ನೂ ಒಳಗೊಂಡು ಸಮಸ್ತ ದೇಶಗಳ ಜನರನ್ನೆಲ್ಲ ಅಮೆರಿಕನ್ ಏಕನಾಯ್ಯ ಸಂಸ್ಥೆಗಳ ಹತೋಟಿಗೂ ಅವುಗಳ ಗುಲಾಮಗಿರಿಗೂ, ದಾಸ್ಯಕ್ಕೂ ಒಳಪಡಿಸುವುದೇ' ಗುರಿಯೂಗಿದೆ.

ಸೋವಿಯತ್ ಒಕ್ಕೂಟ ಮತ್ತು ಬೇರೆ ಸಮಾಜವಾದೀ ದೇಶಗಳ ಬಗ್ಗೆ ಹೇಳುವುದಾದರೆ, ಮೂಲೋವಾದೀ ದೃಷ್ಟಿಯಲ್ಲಿ ಅವುಗಳಿಗೆ ಸಂ ರಾ ಅಮೆರಿಕದ ಸೈನಿಕ ಹಾಗೂ ರಾಜಕೀಯ ವರ್ತುಲಗಳ ಆಕ್ರಮಣಕಾರೀ ಯೋಜನೆಗಳಲ್ಲಿ ದ್ವಿತೀಯ ಸ್ಥಾನವನ್ನು ನೀಡಲಾಗಿದೆ. ಮತ್ತೆ ಸೋವಿಯತ್ ಒಕ್ಕೂಟದ ವಿರುದ್ಧ ಸಂ. ರಾ. ಅಮೆರಿಕದ ಹಗೆತನವು ಕೇವಲ "ಧೂಮತೆರೆ" ಯೂಗಿದೆ!

ಇಂಥ ಒಂದು ಭೌಗೋಲಿಕ—ರಾಜಕೀಯ "ಸಿದ್ಧಾಂತ"ದಿಂದ ಯೂರಿಗೆ ಪ್ರಯೋಜನವಾಗುತ್ತದೆಯೆಂಬುದನ್ನು ಇಲ್ಲಿ ಹೇಳುವುದೇ ಬೇಡ. ಸಮಾಜವಾದ ಹಾಗೂ ಬಂಡವಾಳವಾದಗಳ ನಡುವಿನ ಐತಿಹಾಸಿಕ ಸಮರವನ್ನು ಕನಿಷ್ಠವಾಗಿ ಕಾಣುವುದು ಹಾಗೂ ಸಾಮ್ರಾಜ್ಯವಾದೀ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಸೋವಿಯತ್ ಒಕ್ಕೂಟ ಮತ್ತು ಅಖಂಡ ಸಮಾಜವಾದೀ ಸಮುದಾಯವ ಮಹತ್ವವನ್ನು ಅಲ್ಪವಾಗಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ ವರ್ಗ ನೋಟವಿಲ್ಲದ ಈ "ಮಧ್ಯವರ್ತಿ ವಲಯ"ದ ಸಿದ್ಧಾಂತವನ್ನು ಒಪ್ಪಿಕೊಳ್ಳುವುದಾದರೆ, ಸೈಗಾನಿನ ಕೈಗೊಂಬೆಗಳ, ದಕ್ಷಿಣದ ಕೊರಿಯದ, ತೈವಾನಿನ ಮತ್ತು ಜಗತ್ತಿನ ಬೇರೆ ಪ್ರತಿಗಾಮಿ ಹಾಗೂ ನಿರಂಕುಶ ಆಡಳಿತಗಳೂ ಸಾಮ್ರಾಜ್ಯವಾದ—ವಿರೋಧಿ ದೇಶಗಳ ಮಧ್ಯೆ ಸೇರಿಸಲ್ಪಡಬೇಕಾಗುತ್ತದೆ. ಇದೇ ರೀತಿ, ಇಸ್ರೇಲಿ ಆಕ್ರಮಣಕಾರಿಗಳನ್ನೂ ಅವರಿಗೆ ಬಲಿಯೂದ ಅರಬ್ಬೀ ಜನರನ್ನೂ ಅಧವಾ ದಕ್ಷಿಣ ಆಫ್ರಿಕ ಗಣರಾಜ್ಯದ ಬಿಳೀ ಕುಲವಾದಿ ಅಧಿಕಾರಿಗಳು ಹಾಗೂ ಅವರ ವರ್ಣಭೇದ ನೀತಿಗೆ ತುತ್ತಾಗಿರುವ ಆಫ್ರಿಕ ನರನ್ನೂ ಇಲ್ಲವೆ ಪೋರ್ಚುಗೀಸ್ ವಸಾಹತುಶಾಹಿಗಳನ್ನು ಮತ್ತು ಅವರ ವಿರುದ್ಧ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಅಂಗೋಲ ಹಾಗೂ ಮೊಜಾಂಬಿಕ್‌ನ ಜನಗಳನ್ನೂ ಅದರ ಬೆಳಕಿನಲ್ಲಿ ನೋಡಬೇಕಾಗುತ್ತದೆ.

ಅದೇ ರೀತಿ, ಬ್ರಿಟನ್, ಪಶ್ಚಿಮ ಜರ್ಮನಿ, ಜಪಾನ್, ಕೆನಡ ಮೊದಲಾದವುಗಳಂಥ ಬೊಡ್ಡ ಬಂಡವಾಳವಾದೀ ನೇಶಗಳನ್ನೂ "ಸ್ವಾಮ್ರಾಜ್ಯವಾದ—ವಿರೋಧಿ ರಂಗ"ದಲ್ಲಿ ಸೇರಿಸುವ ಮೂಲೊ ಕಲ್ಪನೆಗೂ ಯಾವೊಂದು ಅರ್ಥವೂ ಇರಲಾರದು. ಆದರೆ ಮೂಲೋವಾದಿಗಳು ಮಾಡುತ್ತಿರುವುದು ಇದನ್ನೆ. ಇದಕ್ಕೆ ತಮ್ಮದೇಶದ ಸ್ವಾರ್ಥಸಾಧನೆಯ ಉದ್ದೇಶವಲ್ಲದೆ ಬೇರೆ ಯಾವ ಕಾರಣವೂ ಇರಲಾರದು. ಇದಿಷ್ಟೇ ಅಲ್ಲದೆ "ಮಧ್ಯವರ್ತಿ ವಲಯ"ದ ಸಿದ್ಧಾಂತಕ್ಕೆ ಕೆಲವೊಂದು ದೇಶಗಳೊಡನೆ ಪೇಕಿಂಗಿಗೆ ಇರುವ ಆರ್ಥಿಕ ಹಾಗೂ ರಾಜಕೀಯ ಸಹಕಾರಗಳನ್ನು ಸಮರ್ಥಿಸಿಕೊಳ್ಳುವುದೂ ಕರ್ತವ್ಯವಾಗಿದೆ ಸೋವಿಯೆತ್—ವಿರೋಧಿ ಸಮಾಜವಾದ—ವಿರೋಧಿ ಕಾರ್ಯ ದಿಕ್ಕಿನಲ್ಲಿ ಜೊತೆಗೂಡುವ ಮೂಲಕ ಇಂಥ ಸಹಕಾರವನ್ನು ಸಾಧಿಸಿಕೊಳ್ಳುವುದೂ ರಹಸ್ಯ ಸಂಗತಿಯೇನಾಗಿಲ್ಲ ಆದರೆ ಚೀನವು ಈ ದಿಸೆಯಲ್ಲಿ ಅಷ್ಟೇನೂ ಮುಂದುವರಿದಿಲ್ಲವೆಂದೂ ಸ್ಪಷ್ಟವಾಗಿದೆ. ಅಂತೆಯೆ ಪೇಕಿಂಗು ವಾಸ್ತವಿಕತೆಯಲ್ಲಿ ಸಂ ರಾ. ಅಮೆರಿಕೆಗೆ ಹತ್ತಿರವಾಗುತ್ತಿರುವಂತೆಯೆ "ಪರಮ ರಾಜ್ಯ ಶಕ್ತಿಗಳ ವೇಲೆ ಹೊಸ ಹೆಲ್ಲೆಯನ್ನು ಆರಂಭಿಸಿದೆ ಸಂ. ರಾ ಅಮೆರಿಕದೊಂದಿಗೆ ತನ್ನ ಕೂಟವು ಜಗತ್ತಿನಲ್ಲಿ ಚೀನದ ನೀತಿ ನಿಲುವಿನ ವಿಶ್ವಾಸಾರ್ಹತೆಯನ್ನು ಹಾಳು ಮಾಡುತ್ತದೆಯೆಂಬುದು ಪೇಕಿಂಗಿಗೂ ಗೊತ್ತು. ಆದರೆ ಇದರ ಸೋವಿಯತ್—ವಿರೋಧ ಮತ್ತು ಅಧಿನಾಯಕತ್ವವಾದೀ ಮಹತ್ವಾಕಾಂಕ್ಷೆಗಳು ಎ

(ಎಂಟನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ
ದಿ ಸದೆ ದಶಾಲಾ (ಪೆವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಆಯುರ್ವೇದಿಕ
ತಲೆ ಸಿಡಿತ ಮೈ ನೋವು
ಉಬ್ಬುಕು ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಆಯುರ್ವೇದಿಕ ಲಿಮಿಟೆಡ್,
ಮದ್ರಾಸು-೪

ಅಭಿಪ್ರಾಯ

ಕಮ್ಯೂನಿಸ್ಟ್ ಪಾರ್ಟಿಗಳಲ್ಲಿ ಪಂಗಡಗಳು ಕೆಲವಾರು - ಗುರಿ ಒಂದೇ

ಬ್ರಿಟನಿನ ಮೂಲಕ ಬಂದಿರುವ ರಷ್ಯಾದ ಬೀಜಕ್ಕೆ ಇಲ್ಲಿನವರು ನೀರು ಗೊಬ್ಬರ ಕಾಕ ಸಲು, ಇವಿನ ಸರ್ಕಾರ ಬೇಲಿ ಹಾಕಿರುವವರಿಂದ ಅನರ ಗಿತ ಪಬ್ಬಿರುತ್ತದೆ. ಆದು ಹಲವಾರು ರೂಪಗಳನ್ನು ಪಡೆದಿರುತ್ತದೆ. ಕ್ರಾಂತಿ, ಕ್ರಾಂತಿಯೆಂದು ಕೂಗುತ್ತಿರುವದೇ ಕಮ್ಯೂನಿಸ್ಟರ ಅಭ್ಯಾಸ. ಎಲ್ಲರ ಲ್ಲೂ ಕ್ರಾಂತಿಕಾರಿಗಳೆಂದು ಕರೆದು ಕೊಳ್ಳುವುದುಂಟು. ಕೆಲವರು ಸಮಾಜವಾದಿ, ಕೆಲವರು ಸಮತಾವಾದಿಗಳು, ಕೆಲವರು ಸಮಾಜ ಸಮತಾವಾದಿಗಳಾದಲ್ಲಿ ಕೆಲವರು ಸಮತಾ ನಿಷ್ಠಾಜವಾದಿಗಳು! ಪುರೋಗಾಮಿ ಕಮ್ಯೂನಿಸ್ಟ್ ಪಾರ್ಟಿ ಪ್ರತಿಗಾಮಿ ಕಮ್ಯೂನಿಸ್ಟ್ ಪಾರ್ಟಿಗಳೂ ಇವೆ. ನಕ್ಸಲೀಯರೆಂಬ ವಾಕ್ಸೀಮೆ ಮನೋಭಾವನೆಯ ಕಮ್ಯೂನಿಸ್ಟ್ ಪಕ್ಷವೂ ಇವೆ. ಯಾವ ವಾಮಪಂಥೀಯ ಧಮಂಕರ ವಿಷಯವನ್ನು ಈ ಪಕ್ಷ ಹೇಳುತ್ತಿದೆ. (ಬಹುಷಃ ಆಡಳಿತ ವಿರೋಧಿಸುವುದು.) ಇವೆಲ್ಲ ತೀವ್ರ ವಿರೋಧ ಕಂತುಬುಂಡಿ ಇತರ ಕಮ್ಯೂನಿಸ್ಟರು ನಕ್ಸಲೀಯರನ್ನು ದೂಷಿಸುತ್ತಾರೆ. ಕ್ರಮೇಣ ಕಾವು ಆರಿದಾಗ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಅದೇ ವಿಷಯವನ್ನು ಹೇಳುತ್ತದೆ. ಇನಕ್ಕೆ ನಿರೋಧ ತೀವ್ರವಾಗಿಲ್ಲವಾದಲ್ಲಿ ಒದೆನೆ, ವಿರೋಧ ತೀವ್ರವಾಗಿದ್ದಲ್ಲಿ ಮೆಲ್ಲನೆ ಅನರ ಕಾವು ಆರಿದಂತೆ, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯೂವು ಅದೇ ವಿಷಯವನ್ನು ಹೇಳುತ್ತದೆ.

ಇದು ನಮ್ಮ ನೆಲಕ್ಕೆ ಮಾತ್ರ ಸೀಮಿತವಲ್ಲ. ಪಾಕಿಸ್ತಾನ ಆಕ್ರಮಣ ನಡೆಸಿದಾಗ ಮಾರ್ಕ್ಸ್‌ವಾದಿ ಕಮ್ಯೂನಿಸ್ಟರು ಬೆದರಿಕೆ ಹಾಕಿದರು. ಎಲ್ಲೆಡೆಯೂ ಸಂಖು ಹೂಡಲು, ಗೊಂದಲ ಉಂಟುಮಾಡಲು, ಮತೀಯ ಮಾರಾಮಾರಿ ನಡೆಯುವಂತೆ ಬಹಳಷ್ಟು ಪ್ರಯತ್ನಿಸಿದರು. ಜನತೆ ಅದಕ್ಕೆ ಮಣಿಯಲಿಲ್ಲ. ಇದ್ದರೂ ತೀವ್ರವಾಗಿ ಇದನ್ನು ಭಾರತೀಯ ಜನಸಂಘವಲ್ಲದೆ ಬೇರಿನ್ಯಾರೂ ಖಂಡಿಸಲಿಲ್ಲ. ಇದರ ಪರಿಣಾಮವಾಗಿ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯೂ ವೈರ್ಯವಾಗಿ ನಮ್ಮ ನಿಲುವನ್ನು ಖಂಡಿಸಿತು. ಜಸ್ಟ್ ಇಲ್ಲ, ಒಂದು ಹೆಜ್ಜೆ ಮುಂದೆ ಹೋಗಿರುತ್ತದೆ. ಆಕ್ರಮಣಗಾರರನ್ನು ಹೊಡೆದಟ್ಟುತ್ತ ನಮ್ಮ ವೀರ ಸೇನಾನಿಗಳು ಮುಂದೆದಿದ್ದರು ಅದನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಖಂಡಿಸಿತು. ವಿಜಯೀ ಸೇನೆ ಪ್ರಗತಿಪಥದಲ್ಲಿ ಮುನ್ನಡೆಯುತ್ತಿದ್ದಾಗ ಹಿಂದಿನಿಂದ ಅವರನ್ನು ತಡೆದು ನಿಲ್ಲಿಸುವಂತೆ ಸಮರ ವಿರಾಮದ ಆಜ್ಞೆ ಬಂತು. ಕೇಂಡೆಥ್ ಮಾತ್ರವಲ್ಲ ಸೇನಾಧಿಪತಿ ಮಾಣಿಕ್‌ಷಾರವರೂ ನಮ್ಮ ಅಸಮೋಘಾನನನ್ನು ವ್ಯಕ್ತಪಡಿಸಿದರು. ಇವರು ನಮ್ಮ ರಾಜಕಾರಣಿಗಳಂತೆ ಎದ್ದದ್ದಕ್ಕೆ, ಕೂತದ್ದಕ್ಕೆ ಪತ್ರಿಕೆಗಳವರಿಗೆ ಸುದ್ದಿ ಕೊಡುವವರಲ್ಲ. ಅಂತಹವರೂ ತಮ್ಮ ಅಸಮೋಧಾನವನ್ನು ವ್ಯಕ್ತಪಡಿಸಿದರು!

ಭಾಂಬಿನಲ್ಲಿ ನಾವು ಸೋಲನ್ನನುಭವಿಸಿದರೂ ಬಂಗ್ಲಾ ಬಿಡುಗಡೆಯೂಯಿತಲ್ಲವೆಂದು ಭಾವಿಸಿದ್ದಾಗ, ಸರಿಯೂದ ಸಮಯವನ್ನು ನೋಡಿ, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯೂ ಒಂದು ಹೇಳಿಕೆಯನ್ನಿತ್ತಿತು. ಗಿಳಲರಲ್ಲಿ ಪಾಕಿಸ್ತಾನ ಆಕ್ರಮಣ ನಡೆಸಿ ಕಾಶ್ಮೀರದಲ್ಲಿ ಸಾಗಿ ಬರುತ್ತಿದ್ದುದನ್ನು ಸೇನಾಧಿಪತಿ ಕರಿಯಪ್ಪನವರು ಹೊಡೆದಟ್ಟಲು ಮುಂದಾದಾಗ ದಿಲ್ಲಿ ಸರ್ಕಾರ ಅಡ್ಡ ಬಂತು; ಸಮರ ವಿರಾಮ ರೇಖೆ ಸೂಚಿಸಲಾಯಿತು. ಆದರ ಪರಿಣಾಮವಾಗಿ ಕಾಶ್ಮೀರದ ಒಂದು ಭಾಗ ಪಾಕಿಸ್ತಾನಿಗಳ ವಶವಾಗಿ ಹೋಯಿತು. ಈ ಸಲ ಆಕ್ರಮಣವನ್ನು ತಡೆಗಟ್ಟುತ್ತ ಮುನ್ನಡೆದ ವೀರ ಸೇನಾನಿಗಳು ಆ ಭೂಪ್ರದೇಶವನ್ನು ವಶಪಡಿಸಿಕೊಳ್ಳುತ್ತ ಉತ್ಸಾಹದಿಂದ ಮುನ್ನಡೆಯುತ್ತಿದ್ದರು ಅಂದು ಪಂಡಿತ ಜವಾಹರ ಲಾಲ ನೆಹ್ರೂರವರು ಕರಿಯಪ್ಪನವರ ಕಾರ್ಯಗಳಿಗೆ ಅಡ್ಡ ಕಾಲಿಟ್ಟರಂದಲ್ಲಿ, ಇಂದು ಅವರ ಮಗಳು ಇಂದಿರಾ ಗಾಂಧಿ ಮಾಣಿಕ್ ಷಾರವರಿಗೆ ಅದೇ ರೀತಿ ಮಾಡಿದರು. ಅದೇ ರೀತಿ ಆಕ್ರಮಣ ನಡೆಯುತ್ತಿದೆ, ಅದೇ ಪರಂಪರೆ ಅಡ್ಡಗಾಲಿಡುತ್ತಿದೆ. ಹಾಗಿದ್ದರೂ ಸ್ವಲ್ಪ ಸಮಯದಲ್ಲೇ ಆಕ್ರಮಿತ ಕಾಶ್ಮೀರ ಭೂಭಾಗದ ಸ್ವಲ್ಪಾಂಶವನ್ನು ಕೇಂಡೆಥ್‌ರವರ ಮಾರ್ಗದರ್ಶನದಲ್ಲಿ ನಮ್ಮ ಧೀರ ಸೇನಾನಿಗಳು ಬಿಡಿಸಿಕೊಂಡಿದ್ದರು. ಆ ಆಕ್ರಮಿತ ಪ್ರದೇಶವನ್ನು ಅಂದರೆ ಐಕ್ಯ ರಾಷ್ಟ್ರ ಸಂಘ ಶಾಂತಿರೇಖೆ ಎಳೆದಿರುವದನ್ನು ದಾಟಲು ನಮ್ಮ ಇಂದಿರಾಜಿಯವರು ಸಿದ್ಧರಿಲ್ಲವೆಂದಾಯಿತು. ಅದೇ ಇಂದಿರಾಜಿಯವರು ಆಕ್ರಮಣಗಾರರನ್ನು ಎಗುರಿಸುವ ಮುಂಚೆ ಹೇಳಿದ್ದೇನು?–ಪಾಕಿಸ್ತಾನಕ್ಕೆ ಮರಣಾಂತಿಕ ಪ್ರಹಾರವನ್ನೀಯುವದಾಗಿ; ಆದ್ಯಾವ ತಾಷ್ಕೆಂಟಿಗೂ ಒಪ್ಪುವದಿಲ್ಲವೆಂದು; ಹಿಡಿದ ಭೂಭಾಗವನ್ನು ಬಿಟ್ಟುಕೊಡುವದಿಲ್ಲವೆಂದು.... ಈಗ ಅವರು ಸ್ವರ ಬದಲಾಯಿಸಿರುವದು ಸ್ಪಷ್ಟವಾಗಿದೆ. ಇದಕ್ಕೇನಾದರೂ ಕಾರಣ ಇರಬಹುದೇ? ಇಂದಿರಾಜಿಯವರು ರಷ್ಯಾಕ್ಕೆ ಹೋಗಿಬರುತ್ತಿರುವದು ಸರ್ವ ಸಾಮಾನ್ಯ ವಿಷಯವಾಗಿದೆ. ರಷ್ಯಾದೊಂದಿಗೆ ಇಂದಿರಾಜಿಯವರು ಒಪ್ಪಂದ ಮಾಡಿಕೊಂಡಿದ್ದಾರೆ. ಹೀಗಿರುವಾಗ ಅವರ ಸ್ವರ ಬದಲಾವಣೆಗೆ ರಷ್ಯಾದ ಹಹವಾಗುಣ ಕಾರಣ ಇರಬಹುದೇ?

ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯೂವು ರಷ್ಯಾದ ಕಮ್ಯೂನಿಸ್ಟ್ ಪಾರ್ಟಿಯ ಶಾಖೆಯೆ ಹಾಗೆ ಇದೆ. ಆವರ ಮಾರ್ಗದರ್ಶನದಂತೆ ಈ ಪಾರ್ಟಿ ಕೆಲಸಮಾಡುತ್ತಿದೆ. ಕಾಂಗ್ರೆಸ್ಸಿನೊಳಗೆ ಕೆಲವರನ್ನು ಕಳುಹಿಸಬೇಕೆಂದು ಹೇಳಿದೊಡನೆ ಕೆಲವರನ್ನು ಕಳುಹಿಸಲಾಗಿರುತ್ತದೆ ಕಾಂಗ್ರೆಸ್ಸಿನೊಂದಿಗೆ ಚುನಾವಣಾ ಒಡಂಬಡಿಕೆ ಮಾಡಿಕೊಳ್ಳಬೇಕೆಂದು ಹೇಳಿರುವಂತೆ ಅದೇ ರೀತಿ ವರ್ತಿಸಿರುತ್ತದೆ. ಈ ಪಕ್ಷವು ಇತ್ತೀಚೆಗೆ ಶಾಂತಿ ಸಮರರೇಖೆಯ ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ: ಪಾಕಿಸ್ತಾನವುರ್ಗಳಲರಲ್ಲಿ ಆಕ್ರಮಿಸಿದಾಗ ನಮ್ಮ ಸೈನಿಕರು ಅದನ್ನೆದುರಿಸಿದೊಡನೆ ಶಾಂತಿರೇಖೆ ಎಳೆಯಲಾಯಿತು. ಆದರಿಂದಾಗಿ ಬಹಳಷ್ಟು ಪ್ರದೇಶ ಪಾಕಿಸ್ತಾನಿಗಳ ಹಿಡಿತಕ್ಕೊಳಗಾಗಿದೆ. ಅದನ್ನು ನಾವು ಕೇಳಬಾರದು. ಅಷ್ಟೇ ಅಲ್ಲ. ಆದರಲ್ಲಿ ಸ್ವಲ್ಪಂಶವನ್ನು ಈ ಸಲ ನಮ್ಮ ಸೈನಿಕರು ಬಿಡಿಸಿರುವರು. ಅದನ್ನು ಪಾಕಿಸ್ತಾನಿಗಳಿಗೆ ಬಿಟ್ಟುಕೊಟ್ಟು ಗಿಳಲರ ರೇಖೆಗೆ ಹಿಂತಿರುಗಬೇಕು. ಹಿಂತಿರುಗುವಾಗ ಭಾಂಬಿನ ಕುರಿತು ಛಕಾರವೆತ್ತಬಾರದು! ಹೀಗೆ ಮಾಡಿದಲ್ಲಿ ಮತೀಯ ಮೈತ್ರಿ ಬೆಳೆಯುತ್ತದೆ. ಹಾಗೆ ಮಾಡದಿದ್ದಲ್ಲಿ ಭಾರತೀಯ ಜನಸಂಘ ಬೆಳೆಯುತ್ತದೆ.

ಕ್ರಮಶಃ ಎಲ್ಲಾ ಕಮ್ಯೂನಿಸ್ಟ್ ಪಾರ್ಟಿಗಳು ಇಂತಹ ನಿರ್ಧಾರವನ್ನು ಸ್ಪಷ್ಟಪಡಿಸಿವೆ. ಇಂದಿರಾಜಿಯವರೂ ಇಂತಹದೇ ಮಾತುಗಳನ್ನಾಡಲಾರಂಭಿಸಿದ್ದಾರೆ ಬೇರೆಯವರು ತಲೆಯಿಡುವ ಮುಂಚೆ ನಾವಾಗಿಯೇ ಕಾಶ್ಮೀರದಲ್ಲಿ ಬಿಡಿಸಿರುವ ಪ್ರದೇಶವನ್ನು ಬಿಟ್ಟುಕೊಡುವ ರೀತಿಯಲ್ಲಿ ಆವರಾಡುತ್ತಿದ್ದಾರೆ. ಇವೆಲ್ಲವೂ ಒಂದೇ ವೀಣೆಯ ಭಿನ್ನ ಭಿನ್ನ ಸಂಗೆಗಳೇನು? ಬಾರಿಸುವ ಕೈ–ಅವ್ಯಕ್ತ ಹಸ್ತ—ಒಂದೇ. ಬೇರೆ ಬೇರೆ ಸಮಯದಲ್ಲಿ ಹೊರಬರುತ್ತಿರುವ ರಾಗ ಒಂದೇ. ಕಮ್ಯೂನಿಸ್ಟ್ ಪಾರ್ಟಿಗಳಲ್ಲಿ ಪಂಗಡಗಳು ಹಲವಾರಿರಬಹುದು. ಆದರೆ ಅವೆಲ್ಲವುಗಳ ಗುರಿ ಒಂದೇ. ಇಲ್ಲವಾದಲ್ಲಿ ಎಲ್ಲಾ ಕಮ್ಯೂನಿಸ್ಟ್ ಪಾರ್ಟಿಗಳು ಒಂದೇ ರೀತಿಯ ತೀರ್ಮಾನಕ್ಕೆ ಬರಲಾರವು. ಇಂದಿರಾಜಿಯವರ ಮಾತುಗಳಿಂದ ಅವರು ಅದೇ ಜೇನುಗೂಡಿನ ರಾಣಿ ನೊಣವಾಗಲು ಪ್ರಯತ್ನಿಸುತ್ತಿರುವರೇ ಅನಿಸುತ್ತದೆ. ಅದು ಜೇನುಗೂಡಲ್ಲ. ಸಾಂಕ್ರಾಮಿಕ ರೋ

PUBLICATION

In the Court of the Munsif of Buntwal. South Kanara.

O. S No. 168 of 1971.

Between:

B. Ananta Bhat —Plaintiff.

And

Pandurnga Bhat and ors.

—Defendants

NOTICE TO DEFENDANT NO. 4 AND 5

To

1. (D. H.) Babu, son of Sadananda Bhat. C/o K. Laxman Nayak, Gurukripa. Chilmi. Lady Hill, Mangalore. S. K.

2. Divakara. S/o Sadananda Bhat. C/o Shridhara Bhat, Bank of Bikaner and Jaipur Coimbatoru. Tamilnadu.

Please take notice that the above suit against you for the reliefs mentioned therein stands posted to 8—3—1972 in the above court at 11 A. M. for your appearance. Should you fail to appear in person or through a pleader on the said date at 11 A. M. you will be declared exparte and the matter will be decided in your absence.

(By order of the Court)

B. A. SOMAYAJI

Advocate for plaintiff.

B. C. Road. Dt. 2—2—1972.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
142 ಶಾಖೆಗಳಿಂದ ಹಬ್ಬರುವ **"ವಿಜಯಾ ಬ್ಯಾಂಕ್"**ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಆತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಬೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, **ಬೆಂಗಳೂರು-1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಜೆನರಲ್ ಮೆನೆಜರ್.

ಮಕ್ಕಳ ಕಥೆ

ಎಷ್ಟೊಂದು ಬೇಸರು — ಈ ದೊಡ್ಡವರು

ಎಂಥಾ ಬೋರು ಈ ದೊಡ್ಡವರು. ನಿಜವಾಗಿಯೂ ಕುತೂಹಲಕಾರಿಯೂದಂಥ ವಿಚಾರ ಅವರಿಗೆಂದೂ ಹೊಳೆಯುವುದೇ ಇಲ್ಲ.

ಅಮ್ಮಿ, ಅಪ್ಪ, ಅಜ್ಜ, ಅಜ್ಜಿ, ದೊಡ್ಡಮ್ಮನೂತಿಲ್ಲಾ ಮತ್ತು ದೊಡ್ಡಪ್ಪ ಎಂದೇ ಯಿ ಒಬ್ಬೊಬ್ಬರ ಕಡೆಗೂ ಒಮ್ಮೊಮ್ಮೆ ದೃಷ್ಟಿ ಬೀರುತ್ತ ಅಲಿಕ್ ಮೇಜಿನ ಮುಂದೆ, ಕೇವಲ ಬೇಸರದಿಂದ ಕಾಲು ಆಡಿಸುತ್ತ ಕೂತಿದ್ದ

"ಕಾಲು ಆಡಿಸುವುದನ್ನು ನಿಲ್ಲಿಸು"ಎಂದು ಅಮ್ಮಿ ಗಡುಸಾಗಿಯೇ ಹೇಳುತ್ತ, ಕೆಲಸಕ್ಕೆ ಹೊತ್ತಾದೀತೆಂದು ಅವಸರವಸರದಿಂದಲೇ ಚಹಾ ಕುಡಿಯುತ್ತಿದ್ದಳು.

ಅಲಿಕ್ ಆಕೆಯ ಕಡೆಗೆ ಶ್ರದ್ಧೆತುಂಬಿದ್ದ ನೋಟವೊಂದನ್ನು ಬೀರುತ್ತಾನೆ, ಅವಳ ಮಾತು ತನಗೆ ಕೇಳಿಸಲೇ ಇಲ್ಲವೇನೊ ಎಂಬುವಂತೆ ನಟಿಸುತ್ತಾನೆ.

"ಏನಾಗಿದೆ ನಿನಗೆ?" ಅಮ್ಮಿ ಧ್ವನಿ ಏರಿಸಿ ಕೇಳುತ್ತಾಳೆ. "ನಾನು ಹೇಳಿದುದನ್ನು ನೀನು ಕೇಳಲೆ ಹೋದರೆ....." ಒಂದು ಕ್ಷಣ ಸುಮ್ಮನಾಗುತ್ತಾಳೆ, "ಬೇರೆ ಮಕ್ಕಳೊಡನೆ ಆಡಲು ನಿನ್ನನ್ನು ಬಿಡುವುದಿಲ್ಲ."

ಅಮ್ಮಿ ಅದನ್ನೇಕೆ ಈಗ ಹೇಳಬೇಕು? ಅವಳು ಇಷ್ಟರಲ್ಲೇ ಆಫೀಸಿಗೆ ಹೊರಟು ಹೋಗುತ್ತಾಳೆ. ಅಲಿಕ್ ಅಂಗಳದಲ್ಲಿ ಎಲ್ಲಾ ಹುಡುಗರೊಡನೆ ಸೇರಿಕೊಳ್ಳ ಬಹುದು.

"ಕಾಲು ಆಡಿಸಬೇಡ ಆಲ್ಲೊಬ್ಬ ಒಳ್ಳೇ ಹುಡುಗನಿದ್ದಾನೆ ಒಳ್ಳೆ ಹುಡುಗರೆಲ್ಲ ಅಮ್ಮಿ ಹೇಳಿದ್ದನ್ನು ಕೇಳುತ್ತಾರೆ." ಅಜ್ಜಿ ಗಟ್ಟಿಸಿ ಹೇಳಲೆಂದೇ ಬೆರಳಿತ್ತಿ ಮಾತನಾಡುತ್ತಾಳೆ. "ನೀನು ಕೇಳದೆ ಹೋದರೆ ಬಲವಾದ ಗಾಳಿ ಬಂದು ದೂರ ದೂರಕ್ಕೆ ನಿನ್ನನ್ನು ಕೊಂಡೊಯ್ಯುತ್ತದೆ."

ಎಂಥ ತಮಾಷೆ ಈ ಅಜ್ಜಿ! ನೂರಾರು ಬಾರಿ ಅಜ್ಜನ ಮಾತನ್ನು ನಾನು ಕೇಳಿಲ್ಲ? ಮತ್ತೆ ಗಾಳಿಯಂತೂ ಅವನನ್ನು ಎಲ್ಲಿಗೂ ಕೊಂಡೊಯ್ದಿಲ್ಲ.

"ಮೊಡಬೇಕೆಂದು ಹೇಳಿದುದನ್ನು ನೀನು ಮೊಡದೇ ಹೋದರೆ, 'ಸೋಲೀಸಿನವನನ್ನು ಕರೆಯುತ್ತೇನೆ' ಎಂಬುದಾಗಿ ದೊಡ್ಡಮ್ಮ ಮಾತಿಲ್ಲಾ ತನ್ನ ಧ್ವನಿಯನ್ನೂ ಸಂಭಾಷಣೆಗೆ ಸೇರಿಸುತ್ತಾಳೆ. ಅಲಿಕ್ ಕೇವಲ ಉಪೇಕ್ಷಿಸಿ ಬಿಡುತ್ತಾನೆ. 'ಪೋಲೀಸಿನವನನ್ನು ಕರೆಯುತ್ತೇನೆನ್ನುವುದು ದೊಡ್ಡಮ್ಮನ ಹಳೆಯ ದೌರ್ಬಲ್ಯ. 'ಪೋಲೀಸಿನವನನ್ನು ಕರೆಯುತ್ತೇನೆಂದು ಆಕೆ ದಿನದಲ್ಲಿ ಅನೇಕ ಬಾರಿ ಹೇಳುತ್ತಲೇ ಇರುತ್ತಾಳೆ. ಆದರೆ ಅವನಂತೂ ಎಂದೂ ಬಂದಿಲ್ಲ.

ಅಲಿಕ್‌ನ ಕಾಲುಗಳು ಆಡುತ್ತಲೇ ಇದ್ದುವು.

"ಅವರು ಹೇಳಿದ್ದನ್ನು ನೀನೇಕೆ ಮಾಡುವುದಿಲ್ಲ?" ಈ ಬಾರಿ ತಪ್ಪ ಆರ್ಭಟಿಸಿದ. "ನೀನು ಎಲ್ಲರಿಗೂ ತ್ರಾಸುಕೊಡುತ್ತಿದ್ದೀ. ನೀನು ಇದನ್ನು ನಿಲ್ಲಿಸದೇ ಹೋದರೆ, ನಿನ್ನನ್ನು ಕಾಡಿಗೆ ಕೊಂಡೊಯ್ದು, ಅಲ್ಲಿ ನಿನ್ನೊಬ್ಬನನ್ನೇ ಬಿಟ್ಟು ಬಂದು ಬಿಡುತ್ತೇನೆ."

ಈ ಮಾತು ಅಲಿಕ್ ಒಂದು ಕ್ಷಣಕಾಲ ಯೋಚಿಸುವಂತೆ ಮಾಡುತ್ತದೆ. ಆದರೆ, ಒಮ್ಮೆ ಪಾರ್ಕಿಗೆ ಹೋಗಿದ್ದಾಗ, ತಾನು ದೊಡ್ಡವರಿಂದ ದೂರಾಗಿ ಅಲೆದು ತಪ್ಪಿಸಿಕೊಂಡಿದ್ದಾಗ ಅಪ್ಪ ಎಷ್ಟೊಂದು ಹೆದರಿಕೊಂಡಿದ್ದನೆಂಬುದು ಅಲಿಕ್‌ಗೆ ತಕ್ಷಣವೇ ನೆನಪಾಗುತ್ತದೆ. ಇನ್ನಿಷ್ಟು ಜೋರಾಗಿ ಕಾಲನ್ನು ಆಡಿಸಲಾರಂಭಿಸುತ್ತಾನೆ, ಪಾದಗಳು ಖುರ್ಚಿಗೆ ತಾಕುತ್ತವೆ.

ಈ ವರೆಗೂ ಸುಮ್ಮಗಿದ್ದ ಅತನ ಅಜ್ಜ ಅಲಿಕ್ ಹೆಗಲ ಮೇಲೆ ಮೆತ್ತಗೆ ಕೈ ಇಟ್ಟು ಪ್ರೀತಿಯ ಮೆಲುಮಾತಿನಲ್ಲಿ ಹೇಳುತ್ತಾಳೆ.

'ಹೇಳಿದ್ದನ್ನು ನೀನು ಕೇಳದೆ ಹೋದರೆ ನಾನು ಒಂದು ಚೂರು ಕೂಡ ಸಿಹಿ ನಿನಗೆ ಕೊಡುವುದಿಲ್ಲ.'

'ಹೋ....ಹೋ....ನಂಗೊತ್ತು, ನನಗೆ ಗ ಹಬ್ಬಿಸುತ್ತಿರುವ ನೊಣಗಳ ಗುಂಪೆಂಬುದನ್ನು ಅವರು ಅರಿತುಕೊಂಡಲ್ಲಿ ಒಳ್ಳೆಯದು. ಇಲ್ಲವಾದಲ್ಲಿ, ಅವರೇ ಆಂದಿರುವಂತೆ, ನಿಜವಾಗಿ ಅವರು ಜ್ವಾಲಾಮುಖಿ ಪರ್ವತದ ಮೇಲೆ ಕುಳಿತುಕೊಂಡಿರುವರೆನ್ನಲೇ ಬೇಕಾಗುತ್ತದೆ.

ವ್ಯಕ್ತಿಗಿಂತ ದೇಶ ಮುಖ್ಯ. ದೇಶದ ದಿಸೆಯನ್ನು ದಾಸ್ಯದತ್ತ ಒಯ್ಯುವ ಅಧ್ಯಾವ ದೊಡ್ಡ ವ್ಯಕ್ತಿಯೂ ತ್ಯಾಜ್ಯವೇ ಸರಿ. ಬೆಂಬಲದ ಮದ ಕೆಲವೊಮ್ಮೆ ಅಪಾಯಕಾರಿ ಆಗುವದುಂಟು. ಮದನೇರದಂತೆ ಉಪಯೋಗಿಸುವ ಅಂಕುಶ ಜನತೆಯ ಕೈಯಲ್ಲಿದೆ, ಅದನ್ನು ಪ್ರಯೋಗಿಸುವ ಸಮಯ ಹತ್ತಿರ ಬರುತ್ತಿದೆ. ಅದರ ಸದುಪಯೋಗ ವಾಗದಿದ್ದಲ್ಲಿ ಮುಂದಕ್ಕೆ ಹೊಸ ಕಾಂಗ್ರೆಸ್ಸು ಕೂಡಾ ಕಮ್ಯೂನಿಸ್ಟ್ ಪಾರ್ಟಿಯ ಒಂದು ರೂಪಾಂತರವೆಂಬುದನ್ನು ಮನಗಂಡು ಅನುಭವಿಸಬೇಕಾಗುತ್ತದೆ. ಇದಕ್ಕೆ ಕಾಂಗ್ರೆಸು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆಸುತ್ತಿರುವ ಚುನಾವಣಾ ಮೈತ್ರಿಯೇ ಮುನ್ಸೂಚನೆ ಇದೆ.

—ಶ್ರೀ ಶಿವಶಂಕರ

●●

ಮೂತಾಡ್

ಮೂತಾಡು ಕನ್ನಡ

ಮೂತಾಡ್ ಮೂತಾಡು ಕನ್ನಡ
ಸಿರಿಗನ್ನಡ
ಮೂತಾಡ್ ಮೂತಾಡು ಕನ್ನಡಾ
ಒಬ್ಬಳು ದಿಲ್ಲೀಲಿ
ಒಬ್ಬನು ಸ್ವರ್ಗದಲಿ
ಒಬ್ಬನ ನೆಲೆಯಿನ್ನೂ
ತಿಳಿದಿಲ್ಲ ಕನ್ನಡಾ ||ಮೂತಾಡ್||
ಯಾವೋಳು ದಿಲ್ಲೀಲಿ?
ಯಾವೋನು ಸ್ವರ್ಗದಲಿ?
ಯಾವೋನ್ನ ನೆಲೆ ಇನ್ನೂ
ತಿಳಿದಿಲ್ಲ ಕನ್ನಡಾ ||ಮೂತಾಡ್||
ಇಂದಿರಾ ದಿಲ್ಲೀಲಿ
ಗಾಂಧೀಜಿ ಸ್ವರ್ಗದಲಿ
ನೇತಾಜಿ ನೆಲೆ ಇನ್ನೂ
ತಿಳಿದಿಲ್ಲಾ ಕನ್ನಡಾ ||ಮೂತಾಡ್||
ಒಬ್ಬನು ಕತ್ತಿಗೆ
ಒಬ್ಬನು ಶಾಂತಿಗೆ
ಒಬ್ಬನು ಎರಡಕ್ಕೂ
ಬೆಲೆಕೊಟ್ಟ ಕನ್ನಡಾ ||ಮೂತಾಡ್||

ಸಿಕ್ಕೇ ಸಿಕ್ಕುತ್ತದೆ' ಆತ ವಿಜಯ ಧ್ವನಿಯಲ್ಲಿ ಹೇಳುತ್ತ ಮತ್ತಿಷ್ಟು ಜೋರಾಗಿ ಕಾಲನ್ನಾಡಿಸಲಾರಂಭಿಸುತ್ತಾನೆ.

ಇಲ್ಲಿಯವರೆಗೆ ದೊಡ್ಡಪ್ಪ ಎಂದೇಯಿ ಮಾತ್ರವೇ ಉಕ್ಸೇಪಿಸದೆ ಸುಮ್ಮಗಿದ್ದ. ಸಂಭಾಷಣೆಯನ್ನು ಕೂಡ ಆತ ಕೇಳುತ್ತಿದ್ದಿಲ್ಲವೆಂಬಂತೆ ಕಾಣಿಸುತ್ತಿತ್ತು. ಆತ ಭುಂಜಿಸುತ್ತಲೇ ಇದ್ದ.ಆದರೆ ಈಗ ಉಪಾಹಾರವನ್ನು ಮುಗಿಸಿ ಮೇಜಿನ ಆಚೆಗಿದ್ದ ಭಾಗಿನೇಯನನ್ನು ಖುಷಿಯಿಂದ ನೋಡುತ್ತಿದ್ದ. ಒಂದು ಮಾತನ್ನೂ ಆಡದೆ ಆತ ಮೇಲೇಳುತ್ತಾನೆ, ಆತನ ಬಲವಾದ ಕೈಗಳು ಅಲಿಕ್‌ನನ್ನು ಮೇಲೆತ್ತುತ್ತವೆ, ಮೆತ್ತಗೆ ನೆಲದ ಮೇಲೆ ಕೂರಿಸುತ್ತವೆ. ಅನಂತರ ಆತ ಅಲಿಕ್‌ನ ಖುರ್ಚಿಯನ್ನೆತ್ತಿಕೊಂಡು, ಮಿಸೆಯ ಅಡಿಯಲ್ಲಿ ಮುಗುಳ್ನಗೆ ಬೀರುತ್ತ ಅದನ್ನು ಕೊಠಡಿಯಿಂದ ಹೊರತಂದ.

ಅಲಿಕ್ ನಿಂತಿದ್ದಾನೆ-ಬಾಯಿ ತೆರೆದು, ಏನೊಂದೂ ತೋಚದೆ. ತನ್ನ ವಾದಗಳನ್ನು ಆವನು ಈಗ ಏನು ಮಾಡಬೇಕು?

●●

ಸಂದರ್ಶಿಸಿರಿ — ಸಂತೃಪ್ತರಾಗಿರಿ!!
ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನ್ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=
ಐಡಿಯಲ್ ಫೊಟೋ ಹೌಸ್ PHONE: 3131
ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1
Tele: GOLDKING Estd: 1947 Phone: 3242 Res: 3272

ಯಾವೋನು ಕತ್ತಿಗೆ?
ಯಾವೋನು ಶಾಂತಿಗೆ?
ಯಾವೋನು ಎರಡಕ್ಕೂ
ಬೆಲೆಕೊಟ್ಟ ಕನ್ನಡಾ ||ಮೂತಾಡ್||
ನೇತಾಜಿ ಕತ್ತಿಗೆ
ನೆಹರೂಜಿ ಶಾಂತಿಗೆ
ಶಾಸ್ತ್ರೀಜಿ ಎರಡಕ್ಕೂ
ಬೆಲೆಕೊಟ್ಟ ಕನ್ನಡಾ ||ಮೂತಾಡ್||
ಒಬ್ಬನು ಲಾಲನು
ಒಬ್ಬನು ಬಾಲನು
ಒಬ್ಬನು ಪಾಲನು
ತಿಳಿದಿಯೊ ಕನ್ನಡಾ ||ಮೂತಾಡ್||
ಯಾವೋನು ಲಾಲನು?
ಯಾವೋನು ಬಾಲನು?
ಯಾವೋನು ಪಾಲನು?
ತಿಳಿದ್ದೇಳು ಕನ್ನಡಾ ||ಮೂತಾಡ್||
ಲಾಲ ಲಜಪತರಾಯ
ಬಾಲ ಗಂಗಾಧರ
ಪಾಲ ಬಿಪಿನಚಂದ್ರ
ತಿಳಿದಿಯೊ ಕನ್ನಡಾ ||ಮೂತಾಡ್||
ಒಬ್ಬ ಭೂಸೇನೆಯು
ಒಬ್ಬ ವಾಯುದಳದ
ಒಬ್ಬ ನೌಕಾದಳದ
ಅಧಿಪತಿಯು ಕನ್ನಡಾ ||ಮೂತಾಡ್||
ಯಾವೋನು ಭೂಸೇನೆ?
ಯಾವೋನು ವಾಯುದಳ?
ಯಾವೋನು ನೌಕಾದಳದ
ಅಧಿಪತಿಯು ಕನ್ನಡಾ||ಮೂತಾಡ್||
ಮಾಣಿಕ್ ಷಾ ಭೂಸೇನೆ
ಪಿ. ಸಿ. ಲಾಲ್ ವಾಯುದಳ
ನಂದಾ ನೌಕಾದಳದ
ಅಧಿಪತಿಯು ಕನ್ನಡಾ ||ಮೂತಾಡ್||
ಒಬ್ಬನು ಸಿಂಡಿಕೇಟ್
ಒಬ್ಬನು ಇಂಡಿಕೇಟ್
ಒಬ್ಬನು ಯೂವ ಕೇಟ್
ತಿಳಿಯೋಲ್ಲ ಕನ್ನಡಾ||ಮೂತಾಡ್||
ಯಾವೋನು ಸಿಂಡಿಕೇಟ್?
ಯಾವೋನು ಇಂಡಿಕೇಟ್?
ಯಾವೋನ್ನ ಕೇಟ್ ಇನ್ನೂ?
ತಿಳಿಯೋಲ್ಲ ಕನ್ನಡಾ ||ಮೂತಾಡ್||
ನಿಜಲಿಂಗ ಸಿಂಡಿಕೇಟ್
ದೇವ್‌ರಾಜ ಇಂಡಿಕೇಟ್
ವೀರೆಂದ್ರ ಯೂವ ಕೇಟ್
ತಿಳಿಯೋಲ್ಲ ಕನ್ನಡಾ||ಮೂತಾಡ್||

—ಶ್ರೀ ಬಿ. ರಮಾನಂದ ಮೂರ್ತಿ,
ಮೈಸೂರು.

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—
ಮಿತ ಸಂತತಿ
ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ಕೆಂಪು ಚೀಣದ ನಿಜ ಸ್ವರೂಪ

(ಐದನೇ ಪುಟದಿಂದ)

ಪ್ಪೊಂದು ತೀವ್ರವಾಗಿನೆಯೆಂದರೆ, ಸಂ. ರಾ. ಅಮೆರಿಕದೊಂದಿಗೆ ನಿಕಟವಾಗಿ ಸಾಗುವ ಮೂಲಕವೆ ತಮ ಇವೆಡನ್ನೂ ಸಾಧಿಸಿಕೊಳ್ಳಬೇಕೆಂದು ಹವಣಿಸುತ್ತಿದೆ.

ಚೀಣೀ ಜನತಾ ಗಣರಾಜ್ಯವು; ಎಂದೂ "ಪರಮರಾಜ್ಯಶಕ್ತಿ" ಯಾಗುವುದಿಲ್ಲ ವೆಂದು ಕೀಕಿಂಗ್ ನಾಯಕರು ವಿದ್ಯುಕ್ತವಾಗಿ ಸಾರುತ್ತಾರೆ. ಚೀಣಿ ಪ್ರತಿನಿಧಿಯೊಬ್ಬರು ಪ್ರಪಂಚ ಸಂಸ್ಥೆ ವೇದಿಕೆಯ ನೂಲಕ, ಚೀಣವು, "ಏಶಿಯ, ಆಫ್ರಿಕ ಹಾಹಾಗೂ ಲ್ಯಾಟಿನ್ ಅಮೆರಿಕದ ಬಹು ಸಂಖ್ಯಾತ ದೇಶಗಳಂತೆಯೆ ತೃತೀಯ ಜಗತ್ತಿಗೆ ಸೇರಿದೆ" ಯೆಂದು ಕೂಡ ಹೇಳಿದರು ಮತ್ತು ಅದು ಒಂದು ವರ್ಧಿಷ್ಣು ದೇಶ" ವಾಗಿದೆಯೆಂದೂ ನುಡಿದರು. ಆದರೆ ಇಂಥ ಘೋಷಣೆಗಳಿಂದಾಗಿ ಚೀಣವು ಭೌಗೋಳಿಕವಾಗಿಯೂಗಲಿ, ರಾಜಕೀಯವಾಗಲಿಯೂಗಲಿ, ಸಾಮಾಜಿಕವಾಗಿಯೂ ಸಹ ಪೂರ್ವ ಏಷ್ಯಾ ಪ್ರದೇಶದಲ್ಲಿ ಸಂಪೂರ್ಣವಾಗಿ ಒಂಟಿಯಾಗಿ ಉಳಿದಿಲ್ಲ. ಒಂದು ಮಧ್ಯಮ ಅಥವಾ ಸಣ್ಣ ದೇಶವಾಗಿಯೂ ಸೂಪರ್ ಪವರ್ ಎಂಬುದೂ ಎಲ್ಲರಿಗೂ ಸ್ಪಷ್ಟವೇ ಆಗಿದೆ. ಸಣ್ಣ ಮತ್ತು ಮಧ್ಯಮ ಗಾತ್ರದ ಈ ದೇಶಗಳ ಏಕತೆಯನ್ನು ರಕ್ಷಿಸುತ್ತೇನೆಂಬ ಮಾತ್ರವೇ ಮಾತುಗಳ ಬಗ್ಗೆ ಕೇಳುವುದಾದರೆ, ಏಷ್ಯಕೇತರ ವೃತ್ತಕಾರಿಣಿ ದೇಶಗಳನ್ನು ತನ್ನ ಆಧೀನಕ್ಕೆ ಒಳಪಡಿಸಿಕೊಳ್ಳಲು ಚೀಕಿಂಗ್ ಹವಣಿಸುತ್ತಿದೆಯೆಂಬ ಫಿಲ್ಮ್ ಜಕ್ರವರ್ತಿಯ ಪಾತ್ರವಿಕ್ಕೆ ಸಂಗತಿಗಳು ತೋರಿಸುತ್ತವೆ. 'ಮಧ್ಯವರ್ತಿ ವಲಯ'ದ ದೇಶಗಳು ಅಮೆರಿಕನ್ ಸಾಮ್ರಾಜ್ಯವಾದ ಮತ್ತು ಸೋವಿಯೆತ್ ಒಕ್ಕೂಟದ ವಿರುದ್ಧ "ಸಂಪೂರ್ಣ ವಿಜಯ ಸಾಧನೆವರೆಗೂ ಹೋರಾಡಲು ಏಕ್ಯರಂಗವನ್ನು ಕಟ್ಟಬೇಕು, ಬಲವಾಗಿ ಸಮರ ನಡೆಸಬೇಕು" ಎಂದು ಕೀಕಿಂಗ್ ನಾಯಕರು ಬಹಿರಂಗವಾಗಿಯೆ ಕರೆಕೊಡುತ್ತಾರೆ. ಮತ್ತೆ ಈ ಏಕ್ಯರಂಗದ ನಾಯಕತ್ವದ ಪಟ್ಟವು ಚೀಣಕ್ಕೇ. ಇನ್ನಿಷ್ಟು ನಿಸ್ಸರ್ಪವಾಗಿ ಹೇಳುವುದಾದರೆ, ಮಾಸ್ಕೊ ಮತ್ತು ಅವರ ಗುಂಪಿಗೆ ಸಲುತ್ತದೆಯೆಂಬುದನ್ನಂತೂ ಹೇಳುವುದೇ ಬೇಡ.

ಚೀಣಿ ಕಮ್ಯೂನಿಸ್ಟ್ ಪಾರ್ಟಿಯ ಮಹಾಧಿವೇಶನದಲ್ಲಿ 'ಚೀಣವು ಅಮೆರಿಕನ್ ಸಾಮ್ರಾಜ್ಯವಾದ ಮತ್ತು ಸೋವಿಯೆತ್ ಪರಿಷ್ಕರಣವಾದಗಳೆಂದೆ ಸ್ಪಷ್ಟವಾಗಿಯೆ ದೂರವಿರುತ್ತದೆ' ಎಂದು ಘೋಷಿಸಿದ ಬಳಿಕ, 'ಮಾವೋವಾದಿಗಳು, ಸಾಮ್ರಾಜ್ಯವಾದ ಮತ್ತು ಸಮಾಜವಾದಗಳ ನಡುವೆ ಸಂತಿರುವ ಜಾಗಾ ಅವೆರಡನ್ನೂ ವಿರೋಧಿಸುತ್ತಿರುವ "ತೃತೀಯ ಶಕ್ತಿ" ತಾವಾಗಿದ್ದೇವೆ ಎಂದೂ ಕಂಠೋಕ್ತವಾಗಿ ಹೇಳಿದರು. ಆದರೆ ಇತ್ತೀಚಿನ ಬೆಳವಣಿಗೆಗಳು ಮಾತ್ರ, ಮಾವೋವಾದಿಗಳು ತಮ್ಮ ಧೋರಣೆಗಳನ್ನು ಸಂಯುಕ್ತ ಸೋವಿಯೆತ್ ವಿರೋಧಿ ನೆಲೆಯಲ್ಲಿ ಅಮೆರಿಕದೊಂದಿಗೆ ಕ್ರೋಢೀಕರಿಸುತ್ತಿದ್ದಾರೆಂಬುದನ್ನು ಹೆಚ್ಚು ಹೆಚ್ಚು ಸ್ಪಷ್ಟವಾಗಿ ತೋರಿಸುತ್ತಿವೆ.

ಹೀಗೆ ಮಾವೋವಾದೀ "ಮಧ್ಯವರ್ತಿ ವಲಯಗಳ" ಸಿದ್ಧಾಂತವು ಮಾವೊತ್ಸೆ ತುಂಗರೇ ಒಮ್ಮೆ ಅಲಂಕಾರಿಕವಾಗಿ ಹೇಳಿ ಕೊಂಡಂತೆ 'ಹರಿದ ಕೊಡೆಯನ್ನು ಹಿಡಿದು ಕೊಂಡು ಏಕಾಂಗಿಯಾಗಿ ದಾರಿಯನ್ನು ತುಳಿಯುತ್ತಿರುವ ಸನ್ಯಾಸಿಯ' ಅಪಾಯರಹಿತ ಮೋಸಕ್ಕೆಂತ ಕಡಿಮೆಯೇನಾಗಿಲ್ಲ, ಬದಲು ಹೂರಾ ರಕ್ಕುತನದ, ತಂಟೆಕೋರ ಅನ್ಯಾಕ್ರಮಣಶೀಲ ಸ್ವದೇಶಾಭಿಮಾನೀ ಪ್ರತಿಗಾಮಿ ಸಿದ್ಧಾಂತವೆ ಆಗಿದೆ. ಸ್ವತಂತ್ರ್ಯಕ್ಕಾಗಿ ಮತ್ತು ದಬ್ಬಾಳಿಕೆಯ ವಿರುದ್ಧ ಹೋರಾಡುತ್ತಿರುವವರ ಕೈವಾರಿ ತಾನು ಎಂಬ ಅದರ ಘೋಷಣೆ ಬಗ್ಗೆ ಹೇಳುವುದಾದರೆ, ಪ್ರಪಂಚ ಸಂಸ್ಥೆಯಲ್ಲಿ ಇತ್ತೀಚಿನ ಚೀಣಿ ನಡವಳಿಕೆಗಳನ್ನು ಕಂಡು ಜಗತ್ತು ಅದರ ಬಗ್ಗೆ ತೀರಾ ಅನುಮಾನದಿಂದಲೇ ಇರುತ್ತದೆಯೆನ್ನುವುದರಲ್ಲಿ ಸಂಶಯವಿಲ್ಲ.

●●

ಅಂತೋನ್ ಚೇಖವ್‌ರ ಟಿಪ್ಪಣಿ ಪುಸ್ತಕಗಳಿಂದ

ತಮ್ಮ ಜೀವನದ ಕೊನೆಯ 14 ವರ್ಷಗಳ ಕಾಲದಲ್ಲಿ ಅಂತೋನ್ ಚೇಖವ್‌ರು ನಾಲ್ಕು ನೋಟ್‌ಬುಕ್ಕುಗಳ ಭರ್ತಿ ಬರೆದರು. ಮುಂದಿನ ಬರೆವಣಿಗೆಗೆಂಬ ಆವರು ಅವುಗಳಲ್ಲಿ ಮುಂಜಾಹೋಗುತ್ತಿದ್ದ ವಿಚಾರಗಳನ್ನೂ, ಪ್ರಭಾವಗಳನ್ನೂ ಬರೆದರು. ಒಂದು ಚಿತ್ರದ ಸೂತ್ರ ವಾಕ್ಯ ದೊಡನೆ ಒಂದು ಸಾಧಾರಣ ಜೋಕು, ಒಂದು ಮೋಜಿನ ಪ್ರಸಂಗದೊಡನೆ ಸಂಭವನೀಯ ಕಥಾವಸ್ತುವಿನ ಹೊಳಹು, ಒಂದೆಡೆ ರೇಖಾಚಿತ್ರಗಳ ಸ್ವಾರಸ್ಯಕರ ಸ್ವಗತ: ಅಸ್ಪೊಂದು ಪ್ರೇಷಿಸುತ್ತಿದ್ದ ಸಂಸ್ಕೃತಿ ವಿರೋಧಿಯ ಆಥನು ನುಡಿ.. ಇಲ್ಲಿ ಕೆಲವೊಂದನ್ನು ಆರಿಸಿಕೊಡಲಾಗಿದೆ.

ಜನರನ್ನು ಗೌರವಿಸುವುದು ಎಷ್ಟೊಂದು ಸಂತೋಷಕರ!

ಂ ಂ ಂ

ಸ್ಪಷ್ಟ ಯೋಜನೆಯಿಂದಿರಬೇಕು—ಶೀಲದಿಂದ ಶುದ್ಧ, ಶಾರೀರಿಕವಾಗಿ ಜೊಕ್ಕಟವಾಗಿರಬೇಕು.

ಂ ಂ ಂ

ತನ್ನ ನಲ್ಲ ಕೀಚುತ್ತಿದೆಯೆಂದು ಗುಬ್ಬಚ್ಚಿ ಭಾವಿಸುವುದಿಲ್ಲ. ಅದು ಚೆನ್ನಾಗಿ ಹಾಡುತ್ತಿದೆಯೆಂದೇ ತಿಳಿಯುತ್ತದೆ.

ಂ ಂ ಂ

ಪುರುಷರ ಸಂಗವಿಲ್ಲದೆ ಸ್ತ್ರೀಯರು ಕಳೆಗುಂದುತ್ತಾರೆ. ಹೆಣ್ಣಿಲ್ಲದೆ ಗಂಡು ಮೂರ್ಖನಾಗತೊಡಗುತ್ತಾನೆ.

ಂ ಂ ಂ

ಅಧ್ಯಾಪಕರೊಬ್ಬರ ಅಭಿಪ್ರಾಯ: ಷೇಕ್ಸ್‌ಪಿಯರ್ ಮುಖ್ಯ ಅಲ್ಲ, ಆದರೆ ಅವರ ಬಗ್ಗೆ ಟೀಕೆಟಿಪ್ಪಣಿಗಳು ಮುಖ್ಯ.

ಂ ಂ ಂ

ಭವಿಷ್ಯತ್ ಪೀಳಿಗೆ ಸುಖವನ್ನು ಸಾಧಿಸಲಿ, ಆದರೆ ¡ಅವರು ಖಂಡಿತವಾಗಿಯೂ ತಮ್ಮಲ್ಲೇ ಒಂದು ಪ್ರಶ್ನೆ ಹಾಕಿಕೊಳ್ಳುತ್ತಾರೆ: ತಮ್ಮ ಪೂರ್ವಿಕರು ಜೀವಿಸಿದ್ದೇಕೆ? ಅವರು ಕಷ್ಟಪಟ್ಟದ್ದು ಏಕೆ?

ಂ ಂ ಂ

ಒಂದರ ಕುರಿತು ಸಾಮಾನ್ಯ ದ್ವೇಷವು ಬಲವಾಗಿ ಒಂದುಗೂಡಿಸುವಷ್ಟು ಪ್ರೇಮ ಸ್ನೇಹ ಅಥವಾ ಗೌರವಗಳಾವುವೂ ಬಂಧಿಸಿ ಬೆಸೆಯಲಾರವು.

ಂ ಂ ಂ

ಹಾಸಿಗೆಯನ್ನು ಹಾಸುವ ಪರಿಚಾರಿಕೆ ಸದಾಕಾಲವೂ ಹೊಗಳನ್ನು ನೇರವಾಗಿ ಗೋಡೆಯ ಕಡೆಗೇ ಎಸೆಯುತ್ತಿದ್ದಳು ಯಜಮಾನ—ಸ್ಥಾಲಕಾಯದವ, ಕೊನೆಗೂ ಸ್ಥಿಮಿತ ತಪ್ಪಿ ಹುಡುಗಿಗೆ ಶಾಸ್ತಿ ಮಾಡಬೇಕೆಂದು ನಿರ್ಣಯಿಸುತ್ತಾನೆ. ಈ ಕೊಬ್ಬಿನ ಮನುಷ್ಯನಿಗೆ ಒಂದಿಷ್ಟು ವ್ಯಾಯಾಮವಾಗಲೆಂದು ಡಾಕ್ಟರರೇ ಆ ಹುಡುಗಿಗೆ ಹಾಗೆ ಮಾಡಲು ಹೇಳಿದ್ದರೆಂದು ನಂತರ ತಿಳಿದುಬಂತು.

ಂ ಂ ಂ

ಸಾವು—ಭಯಂಕರವಾದುದೆ. ಆದರೆ ನೀನು ಎಂದೆಂದೂ ಜೀವಿಸುತ್ತಿ, ಎಂದೂ ಸಾಯುವುದೇ ಇಲ್ಲವೆಂಬ ಜ್ಞಾನವು ಇನ್ನಿಷ್ಟು ಭೀಕರ—ಭಯಂಕರ!

ಂ ಂ ಂ

ನೀನು ಆಶಾವಾದಿಯಾಗಲೇಬೇಕಿದ್ದರೆ, ಜೀವನವನ್ನು ಅರಿತುಕೊಳ್ಳಬೇಕೆಂದಿದ್ದರೆ, ಜನರು ಬರೆಯುತ್ತಿರುವುದರಲ್ಲಿ ಹೇಳುತ್ತಿರುವುದರಲ್ಲಿ, ನಂಬಿಕೆಯಿಡುವುದನ್ನು ನಿಲ್ಲಿಸು ಬದಲು ನೀನೆ ನಿರೀಕ್ಷಿಸು, ಪರಿಶೋಧಿಸಿ ನೋಡು.

ಂ ಂ ಂ

ಸಾಧಾರಣದವನೊಬ್ಬನ ಹುಟ್ಟಿದ ದಿನ ಅಂದು. ಆದರೆ ದರ್ಶನ ಮತ್ತು ಪರಸ್ಪರ ಪ್ರಶಂಸೆಯ ದಿನವನ್ನಾಗಿಸಿಕೊಳ್ಳಲಾಯಿತು. ಅದನ್ನು ಭೋಜನ ಮುಗಿಯುವ ಹೊತ್ತಿಗೆ ಮಾತ್ರವೇ ಆವರು ಆವನೆ ಗೈರು ಹಾಜರಿಯನ್ನು ಗಮನಕ್ಕೆ ತೆಗೆದುಕೊಂಡರು. ಆವನನ್ನೇ ಆಮಂತ್ರಿಸಲು ಅವರು ಮರೆತಿದ್ದರು.

ಂ ಂ ಂ

ಪುಟ್ಟ ಹುಡುಗಿಯೊಬ್ಬಳು ತನ್ನ ದೊಡ್ಡಮ್ಮನ ಬಗ್ಗೆ ಬಹು ಮೆಚ್ಚಿಕೆಯಿಂದ ಮಾತನಾಡುತ್ತಿದ್ದಳು: "ನಮ್ಮ ನಾಯಿಯಷ್ಟೇ ಆಕೆ ಸುಂದರಿಯೂಗಿದ್ದಾಳೆ."

ಂ ಂ ಂ

ಗಂಡ —ಹೆಂಡತಿಯರಿಬ್ಬರಿಗೂ ಆದರಾತಿಥ್ಯ ಮಾಡುವುದೆಂದರೆ ತುಂಬಾ ಇಷ್ಟ. ಯಾಕೆಂದರೆ ತಾವಷ್ಟೇ ಇದ್ದಾಗ ಯೊವಾಗಲೂ ಇವರು ಜಗಳವಾಡುತ್ತಿದ್ದರು.

ಂ ಂ ಂ

ಶ್ರೀಕೃಷ್ಣ ಮಠದಲ್ಲಿ ಶ್ರೀರಂಗ

ಕಳೆದ ತಾ. 30 ರಂದು ಉಡುಪಿಯ ಶ್ರೀಕೃಷ್ಣ ಮಠದ ವಸಂತ ಮಂಟಪದಲ್ಲಿ ಶ್ರೀ ಆದಮೂರು ಮಠಾಧೀಶ ಶ್ರೀ ಏಬುಧೇಶ ತೀರ್ಥ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಮೂರಂಭವೊಂದು ಜರಗಿ ಪದ್ಮಭೂಷಣ ಶ್ರೀ ಆದ್ಯ ರಂಗಾಚಾರ್ಯರನ್ನು ಸನ್ಮಾನಿಸಲಾಯಿತು.

ಶ್ರೀರಂಗರು ಭಗವದ್ಗೀತೆಯ ಸಂದೇಶದ ಬಗ್ಗೆ ಮಾತಾಡುತ್ತಾ, ಕ್ರಾಂತಿ ಎಂಬುದು ಬಹು ಪುರಾತನದ ಕಾಲದಿಂದಲೂ ನಡೆದುಕೊಂಡು ಬಂದಿದೆ. ಕ್ರಾಂತಿ ಎಂದರೆ ಹಿಂದೆ ಇದ್ದುದನ್ನು ನಾಶಪಡಿಸುವುದು ಎಂದರ್ಥವಲ್ಲ ಸೃಜನಾತ್ಮಕವಾಗಿ ಮಡಿಯುವ ನಿಸ್ವಾರ್ಥ ಸೇವಕನೇ ಕ್ರಾಂತಿಕಾರಿ. ನಾವು ರಾಜಕೀಯವಾಗಿ ಕ್ರಾಂತಿ ಮಾಡಿ ಸ್ವರಾಜ್ಯ ಗಳಿಸಿದ್ದರೂ ನಾವು ನಿರೀಕ್ಷಿಸಿದ ಸ್ವಾತಂತ್ರ್ಯ ಫಲ ನಮಗೆ ದೊರಕಿಲ್ಲ ಸರಿಯಾದ ಒಬ್ಬ ಕ್ರಾಂತಿಕಾರಿ ನಮಂದಾಳು ಇಲ್ಲವೆ ಇರುವುದು ಇದಕ್ಕೆ ಕಾರಣ, ಯಥಾರ್ಥವಾಗಿ ಕ್ರಾಂತಿಕಾರಿಯು ಶ್ರೀಕೃಷ್ಣ ಹೇಳಿದ ಸ್ಥಿತಪ್ರಜ್ಞನಿದ್ದಾನೆ. ಅತನಿಗೆ ಲಾಭ—ನಷ್ಟ, ಜಯ—ಅಪಜಯ, ಸುಖ—ದುಃಖ ಇವುಗಳ ಪರಿವೆ ಇರುವುದಿಲ್ಲ ನಿಸ್ವಾರ್ಥ ಸೇವೆ ಮಾಡುವ ಕ್ರಾಂತಿಕಾರಿ ವ್ಯಕ್ತಿಯನ್ನು ಇನ್ನೂ ನಾವು ಕಾಣಬೇಕಷ್ಟೆ ಎಂದು ಅವರು ನುಡಿದರು. ಕರ್ಮಾನುಬಂಧನವನ್ನುವುದು ಭಗವದ್ಗೀತೆ ಜಗತ್ತಿಗೆ ನೀಡುವ ಮಹಾನ್ ಸಂದೇಶ. ಕರ್ಮವನ್ನು ಫಲಾಪೇಕ್ಷೆಯಿಲ್ಲದೆ ಮಾಡಿದರೆ ಅದು ಪವಿತ್ರ ಎನಿಸುವುದು. ಆಂಥ ವ್ಯಕ್ತಿಗೆ ತನ್ನ ಕಾರ್ಯದಲ್ಲಿ ಸೋಲುಂಟಾದರೂ ಬೇಸರವಿಲ್ಲ ಸದು. ಆತನ ಶ್ರದ್ಧಾಪೂರ್ವಕ ಕರ್ಮಕ್ಕೂ ಭಂಗವುಂಟಾಗದು ಎಂದವರು ತಿಳಿಸಿದರು.

ಅಮೂರು ಶ್ರೀಗಳವರು ಮೂತನಾಡಿ ಭಗದ್ಗೀತೆಯ ಬಗೆಗಿನ ಶ್ರೀರಂಗರ ವಿಚಾರಧಾರೆ ಪುಸ್ತಕರೂಪದಲ್ಲಿ ಬರುವ ಬಗ್ಗೆ ಮೆಚ್ಚುಗೆ ಸೂಚಿಸಿದರು. ಅಲ್ಲದೆ ಅವರಿಗೆ ಶಾಲು ಹೊದೆಸಿ ಹರಸಿದರು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No. - 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry. Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ನವಯುಗ

ಚೆನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ನೂಡಿ

ಪ್ರೋತ್ಸಾಹಿಸಿರಿ.

ಚಾರುಚೆಯನ

ಚುನಾವಣೆಯ ಬಿಸಿ ಗಾಳಿ

ಪಾಕ್ ರಾಷ್ಟ್ರಪತಿ ಜುಲ್‌ಫಿಕರ್ ಅಲಿ ಭುಟ್ಟೊ ಅಂಕಾರಾದ ಭೆಟ್ಟಿಯನ್ನು ಮುಗಿಸಿದರು. ವಿದೇಶೀ ಶಸ್ತ್ರಾಸ್ತ್ರಗಳು ಇಸ್ಲಾಮೂಬಾದಕ್ಕೆ ಅಂಕಾರಾ ಮೂಗರ್ವಾಗಿ ಬರುವುದು ಮಾಮೂಲಿ ಸಂಗತಿ. ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡುವುದರ ವಿರುದ್ಧ ಅಲ್ಲಿ ಅಂಕಾರಾ–ಇಸ್ಲಾಮೂಬಾದಗಳು ಮತ್ತೊಮ್ಮೆ ಎಚ್ಚರಿಕೆ ನೀಡಿದುವು. ಆದರೆ, ಅದನ್ನು ಕೇಳಿದವರು ಯೂರೂ ಇದ್ದಂತಿಲ್ಲ. ಕಾಮನ್‌ವೆಲ್ತಿನ ರಾಣಿಯೂ ಸೇರಿ ಉಳಿದ ಕಾಮನ್‌ವೆಲ್ತ್ ದೇಶಗಳು ಬಾಂಗ್ಲಾದೇಶಕ್ಕೆ ಮನ್ನಣೆ ನೀಡಲು ತುದಿಗಾಲಲ್ಲಿ ನಿಂತಿರುವೆಯೆಂದು ಕೇಳಿಯೇ ಭುಟ್ಟೊ ತನ್ನ ಬ್ರಹ್ಮಾಸ್ತ್ರವನ್ನು ಬಿಟ್ಟರು–ಪಾಕಿಸ್ತಾನ ಕಾಮನ್‌ವೆಲ್ತಿನಿಂದ ಹೊರ ಬಂದಿದೆಯೆಂದು ಘೋಷಿಸಿದರು. ಇದರಿಂದ ಪಾಕಿಸ್ತಾನಕ್ಕೆ ಏನು ಲಾಭವಾಯಿತೆಂದು ಭುಟ್ಟೋರಿಗೇ ತಿಳಿಯದು....ಉಳಿದವರಿಗೆ ನಷ್ಟವಿಲ್ಲ.

ಅಂಕಾರಾದಿಂದ ಭುಟ್ಟೊ ಮೊವೋನನ್ನು ಕಾಣಲು ಪೀಕಿಂಗಿಗೆ ಹೋದರು ಅಲ್ಲಿ ಅವರು ಕಾಣಬೇಕಾದವರನ್ನೆಲ್ಲ ಕಂಡರು. ಭಾರತ–ಪಾಕ್ ವಿವಾದಗಳೆಲ್ಲೆಲ್ಲ ಚೀನಾ ಪಾಕ್ ಪರವಾಗಿದ್ದದ್ದು ಅತ್ಯಂತ ಹಳೆಯ ಕತೆ. ರಶ್ಯ–ಚೀನಾ ವಿವಾದ, ರಶ್ಯ ಭಾರತ ಬಾಂಧವ್ಯಗಳು ಬೆಳೆದಂತೆ ಪಾಕ್ ಚೀನಾ ಸಂಬಂಧಗಳು ಬಹಳ ಹತ್ತಿರವಾದುವು. ಭಾರತ–ಪಾಕ್ ಯುದ್ಧ ನಡೆದರೆ ಪಾಕ್ ಏಕಾಕಿಯಲ್ಲವೆಂದು ಉಗ್ಗಡಿಸಿದ್ದ ಯಾಹ್ಯಾಖಾನರೂ ಭುಟ್ಟೋ ಮಹಾಶಯರೂ ಕೆಂಪು ಚೀನಾದ ಮಧ್ಯೆ ಪ್ರವೇಶವನ್ನು ಅಮೆರಿಕೆಯ ಆಗಮನವನ್ನು ಕೊನೆಯ ಗಳಿಗೆಯವರೆಗೂ ನಿರೀಕ್ಷಿಸಿ ನಿರಾಶರಾದರು. ನಂಬಿದವರು ಆವರ ನೆರವಿಗೆ ಮುಂದೆ ಬಂದಂತೆ ನಟಿಸುವುದರಲ್ಲೇ ತೃಪ್ತರಾದರು.

ಪೀಕಿಂಗು ತಾನು ನೇರವಾಗಿ ಸಹಾಯ ನೇಕೆ ನೀಡಲಿಲ್ಲವೆಂದಿಗ ಭುಟ್ಟೋಗೆ ವಿವರಣೆ ನೀಡಬಹುದು. ಈ ವಿವರಣೆಯನ್ನವರು ಒಪ್ಪಿಕೊಳ್ಳಲೇ ಬೇಕಷ್ಟೆ. ಬಾಂಗ್ಲಾ ಪಾಕಿಸ್ತಾನದಿಂದ ಸಿಡಿದು ಬೇರೆಯಾದ ಮೇಲೆ ಈಗ ಚೀನಾ ಮಾಡುವುದಾದರೂ ಏನು? ಆದರೂ ಅದು ಭರವಸೆ ನೀಡಿದೆ–ನಷ್ಟವಾದ ಸೈನಿಕ ಶಕ್ತಿಯನ್ನು ಮತ್ತೆ ಕೂಡಿಸಿ ಕೊಡುವುದಾಗಿ ಅಂದರೆ, ಪಾಕಿಸ್ತಾನದ ಮಿಲಿಟರಿ ಶಕ್ತಿಯನ್ನು ಹೆಚ್ಚುಸುವುದಾಗಿ, ಹಿಂದೆ ಅಮೆರಿಕೆಯೊಂದೇ ಮಾಡುತ್ತಿದ್ದ ಕೆಲಸವನ್ನು ಇಂದು ಚೀನಾವೂ ಸೇರಿ ಮಾಡುತ್ತದೆ. ಐದೂವರೆ ಕೋಟಿ ಪಾಕ್ ಪ್ರಜೆಗಳ ಜೀವನ ಮಟ್ಟವನ್ನು ಎತ್ತರಿಸಿ ಜನಹಿತ ಸಾಧನೆಯನ್ನು ಮಾಡುವುದನ್ನು ಬಿಟ್ಟು ಅನ್ನದ ಬದಲಿಗೆ ಅಸ್ತ್ರವನ್ನು ನೀಡುವ ಚೀನೀ ಬಯಕೆಯೇನು ಎಂಬುದು ವಿಶಾಲ ಜಗತ್ತಿಗೆ ಗೊತ್ತು.

ಭುಟ್ಟೊ ಮುಂದಿನ ಪಯಣ ವಾಶಿಂಗ್ಟನ್ನಿಗಿರಬಹುದು. ಅಲ್ಲಿಂದಲೂ ನಿಕ್ಸನ್ ಸರಕಾರದ ಪೂರ್ಣ ಸೈನಿಕ ಬಲದ ಆಶ್ವಾಸನೆ ಪಡೆದು ಮರಳ ಬಹುದು. ತಮ್ಮ ಹಿಂದೆ ಚೀನಾ–ಅಮೆರಿಕೆಗಳೆರೆಯೆಂದ ವರು ಕೊಚ್ಚಿಕೊಂಡು ಮತ್ತೆ ಬಾಂಗ್ಲಾದೇಶ ಪಡಿಸಲು ಭಾರತದ ಮೇಲೆ ಎರಗುತ್ತಾರೆಯೆ? ಅಷ್ಟರಲ್ಲಿ ಅಮೆರಿಕೆ—ಚೀನಾಗಳನ್ನುಳಿದು ಹೆಚ್ಚಿನ ದೇಶಗಳು ಬಾಂಗ್ಲಾದೇಶಕ್ಕೆ ಮನ್ನಣೆ ನೀಡಿಯೂಗುತ್ತದೆ. ಭೂಟ್ಟೋರ ಈ ಪರದಾಟ ಬಾಂಗ್ಲಾದೇಶವನ್ನಾಗಲೀ ಭಾರತವನ್ನಾಗಲೀ ಕೊಂಕಿಸಬಾರದು; ವಾಕ್ ಜನತೆಯನ್ನು ಸಮೂಹಾನ ಪಡಿಸುವುದಕ್ಕಾದರೂ ಸಹಾಯವಾದರೆ ಅಷ್ಟರಿಂದಲೇ ಭುಟ್ಟೋ ತೃಪ್ತಿ ಹೊಂದುತ್ತಾರೆ.

ಂ ಂ ಂ

ಪ್ರಧಾನಿ ಶ್ರೀಮತಿ ಗಾಂಧಿಯವರು ಮುಂದಿನ ತಿಂಗಳು ನಡೆಯಲಿರುವ ವಿಧಾನ ಸಭಾ ಚುನಾವಣೆಗಳಲ್ಲಿ ತಮ್ಮ ಪಕ್ಷವನ್ನು ಗೆಲ್ಲಿಸಲು ಉತ್ಸುಕರಾಗಿದ್ದಾರೆ. ಕಳೆದ ಮಾರ್ಚಿ ತಿಂಗಳಲ್ಲಿನ ಲೋಕ ಸಭಾ ಚುನಾವಣೆಗಳ ವಿಜಯ ಪರ್ವ ಮತ್ತು ದಶಂಬರದಲ್ಲಿ ಪಾಕಿಸ್ತಾನದ ಮೇಲೆ ಸಾಧಿಸಿದ ವಿಜಯ ಗರ್ವಗಳು ಇಂಡಿಕೇಟಿನ ಬಂಡವಾಳಗಳು. ಆದುದರಿಂದಲೇ ಒಂದೊಂದು ಸ್ಥಾನಕ್ಕೆ ಮೂರು ಮೂರು ಹುದ್ದರಿಗಳನ್ನು ಸಿಫಾರಸು ಮಾಡಿದ್ದರೂ ಹಲವಾರು ಹೆಸರುಗಳನ್ನು ಪ್ರಾಥಮಿಕ ಹಂತದಲ್ಲಿಯೇ ಕೈ ಬಿಡಬೇಕಾಯ್ತು. ಅಂದರೆ, ಅಧಿಕಾರ ಕ್ಕಾಗಿ ಅರ್ಜಿ ಗುಜರಾಯಿಸಿದವರು ಲಕ್ಷ ಮುಂದಿಯೆಂಬುದು ಸ್ಪಷ್ಟ. ಇಂಡಿಕೇಟಿನ ನಾಮ ಬಲವೊಂದರಿಂದಲೇ ಚುನಾವಣೆ ಗೆಲ್ಲ ಬಹುದೆಂದು ಹೆಚ್ಚಿನ ಅಧಿಕಾರಪ್ರಿಯರು ವೈಥವಾಗಿ ನಂಬಿದ್ದಾರೆ.

ಪ್ರಧಾನಿ ಗಾಂಧಿಯವರು ಚುನಾವಣಾ ಪೂರ್ವ ಸಂಧ್ಯೆಯಲ್ಲಿ ಹಲವಾರು ಹೆಚ್ಚಿನ ಹೊಣೆಗಾರಿಕೆಯನ್ನು ವಹಿಸಿಕೊಳ್ಳಬೇಕಾಗಿದೆ. ಇವುಗಳಲ್ಲಿ ಮೊದಲನೆಯದು ಭಿನ್ನಾಭಿಪ್ರಾಯ. ಕರ್ನೇಸಾಮಾನ್ಯವಾಗಿ ಎಲ್ಲ ರಾಜ್ಯಗಳಲ್ಲಿಯೂ ಭಿನ್ನ ಮತಗಳಿದ್ದೇ ಇವೆ. ಕೆಲವೆಡೆಯಂತು ವಿಕೋಪಕ್ಕೆ ಹೋಗಿರಬಹುದು, ಇನ್ನುಳಿದೆಡೆ ಒಳಗಿಂದೊಳಗೇ ಹೊಗೆಯಾಡುತ್ತಿರ ಬಹುದು. ಪಕ್ಷದ ಏಕತೆಗಾಗಿ ಆಸಾಮು ಮತ್ತು ಮಧ್ಯಪ್ರದೇಶದ ಮುಖ್ಯಮಂತ್ರಿಗಳಂದು ಆಕೆ ರಾಜೀನಾಮೆ ಕೊಡಿಸಿದರು ನಿಜ; ಆದರೆ, ಹುದ್ದರಿಗಳೂ ಸ್ಥಾನದಾಸೆಯನ್ನು ಬಿಟ್ಟುಕೊಟ್ಟು ಪಕ್ಷ ಬಲ ಸಂವರ್ಧನೆಗಾಗಿ ದುಡಿಯುವಂತೆ ಮಾಡಲು ಅವರು ಶಕ್ತರಾಗುತ್ತಾರೆಂದು ಹೇಳಬರುವುದಿಲ್ಲ.

ಅವಿಭಜಿತ ಕಾಂಗ್ರೆಸ್ಸಿನಲ್ಲಿ ಅಧಿಕಾರ ವಂಚಿತರಾದವರು, ಅಧಿಕಾರವು ಕನಸಿನ ಗಂಟಾಗಿ ಕಂಡವರೆಲ್ಲರೂ ವಿಭಜನೆಯ ನೇಳೆ 'ಮನಸ್ಸಾಕ್ಷಿ'ಯ ಸಾಕಾರಮೂರ್ತಿಯಾಗಿ ನಿಂತ ಶ್ರೀಮತಿ ಗಾಂಧಿಯ ಪಕ್ಷ ಸೇರಿದರು. 'ಯುವಕರ' ನಾಮಜಪ ಮಾಡಿದ್ದರಿಂದ ಯುವಕರೂ ಆಕೆಯಿಂದ ಆಕರ್ಷಿತರಾದರು. ಆಕೆಯ ಬಲವನ್ನು ಊಹಿಸಿಕೊಂಡವರೂ ತಮ್ಮ ಅಧಿಕಾರ ಸ್ಥಾನಗಳನ್ನುಳಿಸಲು ಆಕೆಗೇ ಬೆಂಬಲ ನೀಡಿದರು. ಹೀಗೆ ಇಂದಿರಾ ಗಾಳಿ ಬೀಸಿತು, ಕಳೆದ ವರ್ಷ ಉಳಿದೆಲ್ಲ ಪಕ್ಷಗಳನ್ನೂ ಉರುಳಿಸಿ ಬೇಟೆ ಸಾಧಿಸಿತು

ಇಂದು ಪರಿಸ್ಥಿತಿ ಬದಲಾಗಿದೆ ವಿಧಾನ ಸಭಾ ಸ್ಥಾನಗಳು ಹೆಚ್ಚಿರುವುದರಿಂದ, ಗೆಲ್ಲುವ ಭರವಸೆ ಅಧಿಕವಿರುವುದರಿಂದ ತಾವೂ ಏಕೆ ಅಧಿಕಾರ ಪಡೆಯಬಾರದು ಎಂಬ ವಿಚಾರಧಾರೆ ಹಲವರಲ್ಲಿ ಬಲವಾಗಿದೆ. ಆದುದರಿಂದಲೇ ಭಿನ್ನಮತ—ಭಿನ್ನಾಭಿಪ್ರಾಯ ಇದನ್ನು ಬಿಟ್ಟುಕೊಟ್ಟು, ಪಕ್ಷವನ್ನು ಏಕ ಪುರುಷನಂತೆ ಸಂಘಟಿಸಲು ಶ್ರೀಮತಿ ಗಾಂಧಿ ಸಶಕ್ತರಾದಾರೆ? ಅಧಿಕಾರದಾಸೆಯಿಂದ ಪಕ್ಷ ಸೇರಿದವರು, ಜನತೆಯ ಮೇಲೆ ಇನ್ನೂ ಪ್ರಭಾವವಿಟ್ಟುಕೊಂಡವರು ಸ್ಥಾನ ವಂಚಿತರಾದವರ ಯೂನ ನಿಲುಮೆ ಹೊಂದುತ್ತಾರೆ? ಆದುದರಿಂದ ಶ್ರೀಮತಿ ಗಾಂಧಿಯವರ ಗೇಲು ಕಳೆದ ಬಾರಿಯಷ್ಟು ಸುಲಭವಿದ್ದಂತಿಲ್ಲ. ವಿಜಯೋತ್ಸವದ ಪೂರ್ಣ ಪ್ರಯೋಜನವನ್ನು ಆಕೆ ಪಡೆಯಲೆತ್ನಿಸಿದರೂ ಅದರಿಂದ ಹೆಚ್ಚಿನ ಲಾಭವಾಗದು. ಶ್ರೀ ಸಾಮಾನ್ಯನು ಕಷ್ಟದ ಮೇಲೆ ಕಷ್ಟವನ್ನೇ ಅನುಭವಿಸುತ್ತ ಬಂದಿರುವಾಗ ಈ ಚುನಾವಣೆಯ ಪರಿಣಾಮ ಮತ್ತೊಂದು ಕುತೂಹಲವನ್ನು ನಿರ್ಮಿಸಿದರೂ ನಿರ್ಮಿಸಬಹುದು.

ಆದುದರಿಂದಲೇ ಶ್ರೀಮತಿ ಗಾಂಧಿ ಹೇಳುತ್ತಾರೆ—ಇಂಡಿಕೇಟಿನರು ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಮರೆಯಬೇಕು. ಜನ ಸೇವೆಗೆಯ್ಯಲು ಒಂದಾಗಿ ಶ್ರಮಿಸಬೇಕು. ಈ ಕರೆಯನ್ನು ಪಕ್ಷೀಯರು ಎಷ್ಟರ ಮಟ್ಟಿಗೆ ಕೇಳುತ್ತಾರೆಂಬುದರ ಮೇಲೆ ಪಕ್ಷದ ವಿಜಯ ವಿಹಿತವಾಗಿದೆ.

ಂ ಂ ಂ

ಕರ್ನಾಟಕದಲ್ಲಿ ಇಂಡಿಕೇಟ್ ಹುದ್ದರಿಗಳ ಯಾದಿಯ ಮೇಲೆ ಭಿನ್ನಾಭಿಪ್ರಾಯ ಬಹಳ ತೀವ್ರವಾಗಿದೆ. ಇಲ್ಲಿ ಇಂಡಿಕೇಟು ಬಲ ಕಮ್ಯೂನಿಸ್ಟ್ ಪಕ್ಷದೊಡನೆ ಹೊಂದಾಣಿಕೆ ಮಾಡಿಕೊಂಡು ಅದಕ್ಕೆಂದು ನಾಲ್ಕು ಸ್ಥಾನಗಳನ್ನು ವಿೂಸಲಿಟ್ಟಿತು. ಉಳಿದ ೨೧೨ಸ್ಥಾನಗಳಿಗೂ ಆನು ಸ್ಪರ್ಧಿಸುವುದು. ಪಕ್ಷದ ಅಭ್ಯರ್ಥಿಗಳ ಆಯ್ಕೆ ಪ್ರಾಥಮಿಕ ಹಂತದಲ್ಲೇ ವಿವಾದಾಸ್ಪದವಾದ ವಿಷಯವಾಗಿತ್ತು. ಹಳೆಯ ಹುಲಿಗಳಿಗೂ ಸ್ಥಾನ, ಹೊಸಬರ ಹೆಸರುಗಳೇ ಹೆಚ್ಚು. ಅಂದರೆ, ಎಲ್ಲರನ್ನೂ ಖುಶಿ ಮಾಡುವ ಪ್ರಯತ್ನ. ಆದರೆ, ರಾಜ್ಯಕೀಯಕ್ಕೆ ತೀರ ಹೊಸಬರಾದವರನ್ನು ಸೇರಿಸಿಕೊಂಡು, ಅನುಭವಿಗಳನ್ನು ಕೈ ಬಿಡಲಾಯಿತೆಂದು ಭಾರೀ ದೂರು. ಇದರಿಂದ ಅಸಮಾಧಾನ–ತೀವ್ರ ಅಸಮಾಧಾನ ಕೆಲವು ಕಡೆ ಬಂಡಾಯ ಮತ್ತೆ. 'ಮನಸ್ಸಾಕ್ಷಿ'ಯು ಜಾಗೃತವಾಗುವ ಭಯ.

ಕಾಂಗ್ರೆಸ್ ಹೈಕಮಾಂಡು ರಾಷ್ಟ್ರಪತಿ ಸ್ಥಾನಕ್ಕೆ ಆಯ್ದ ಅಭ್ಯರ್ಥಿ ತನಗೆ ಸಮೂಹಾನಕರವಲ್ಲರೆಂಬ ಕಾರಣದಿಂದ ಶ್ರೀಮತಿ ಗಾಂಧಿಯವರು ಮನಸಾಕ್ಷಿಯಂತೆ ಮತ ನೀಡುವ ಹೊಸ ಚಳುವಳಿಯನ್ನು ಆರಂಭಿಸಿದರು. ಆವರ 'ಮನಸಾಕ್ಷಿ'ಗೇ ಮತ್ತೆ ಜೀವ ಕೊಡುವ ಪ್ರಯತ್ನ ಅಲ್ಲಲ್ಲಿ ನಡೆದಿದೆಯೆಂದು ಸುದ್ದಿ. ಕೇಂದ್ರ ಚುನಾವಣಾ ಸಮಿತಿಯ ಆನ್ಯಾಯವನ್ನು ಕಂಡು ಮೌನ ಪ್ರೇಕ್ಷಕರಾಗಿ ಕುಳಿತಿರಲು ಈ ಸಾಲಿನವರು ಸಿದ್ಧರಿಲ್ಲನಂತೆ. ಆದುದರಿಂದ ಅಧಿಕೃತ ಅಭ್ಯರ್ಥಿಗೆ ವಿರುದ್ಧವಾಗಿ 'ಮನಸಾಕ್ಷಿ'ಗುಂಪಿನ ಅಭ್ಯರ್ಥಿಯನ್ನು ನಿಲ್ಲಿಸುವ ಬಗ್ಗೆ ತೀವ್ರ ಸಮಾಲೋಚನೆ ನಡೆಯುತ್ತಿದೆ. ಇದು ಒಂದೆಡೆ ಕಾರ್ಯರೂಪಕ್ಕೆ ಬಂದರೆ, ಅದರ ಸೋಂಕು ಉಳಿದೆಡೆಯೂ ಬಡಿಯದಿರಲಿಯದು.ಆಗ ಇಂಡಿಕೇಟು ತುಂಡಾದರೆ ಆಶ್ಚರ್ಯವಿಲ್ಲ. ರಾಜ್ಯದ, ದೇಶದ ಹಿತದೃಷ್ಟಿಯಿಂದ, ರಾಜ್ಯಕೀಯ ಪಕ್ಷಗಳ ಸಂಖ್ಯೆ ಬೆಳೆಯದಂತೆ ನೋಡಿಕೊಳ್ಳುವುದು ಅಗತ್ಯವಾದುದರಿಂದ ಈ ಬಂಡಾಯ ನಡೆಯಗೊಡದಂತೆ ಎಚ್ಚರಿಕೆ ಅಗತ್ಯ. ಶ್ರೀಮತಿ ಗಾಂಧಿಯವರೂ ಇತರ ಇಂಡಿಕೇಟ್ ನಾಯಕರೂ ಈ ಬಗ್ಗೆ ಒಂದಾಗಿ ಶ್ರಮಿಸಬೇಕಾದ ಅಗತ್ಯ ತೀವ್ರವಿದೆ. ಇಲ್ಲವಾದರೆ, ದೇಶದ ರಾಜ್ಯಕೀಯ ಪರಿಸ್ಥಿತಿ ಮತ್ತೆ ದೋಲಾಯಮಾನವಾಗುತ್ತದೆ. ●

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಿಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಗಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ಕರ್ಮಭೂಷಣ ಪೈಯವರಿಗೆ ಕರ್ನಾಟ-

ಅಭಿಮಾನಕ್ಕೆ ಅಭಿನಂದನೆ

ಸ್ವಾರ್ಥ ತ್ಯಾಗಕ್ಕೆ ಕರೆ

'ಕರ್ಮಭೂಷಣ' ರಾಷ್ಟ್ರಪ್ರಶಸ್ತಿಗಳಿಸಿದ ಶ್ರೀ ಟಿ. ಅನಂತ ಪೈಯವರನ್ನು ಅವರ ಹುಟ್ಟೂರಲ್ಲಿ ಉಡುಪಿಯಲ್ಲಿ—ಗೌರವಿಸಲಾಯ್ತು. ಸೆರವನಿಗೆ, ಸ್ವಾಗತ, ನೂಲಾರ್ಪಣೆ, ಪ್ರಬಂಧೆ ಮೊದಲಾದ ನೂರೂಲಿ ಕಾರ್ಯಕ್ರಮಗಳಲ್ಲೂ ಜೀವ—ಹೃದಯ—ತುಂಬಿ ನಿಂತಿದ್ದು ಈ ಸಮಾರಂಭದ ವೈಶಿಷ್ಟ್ಯ.

ಕಲ್ಪನಾ ಸರ್ಕಲ್‌ನಿಂದ ಸಮಾರಂಭ ನಡೆದ ನಿಕ್ಕೋಲಿಯಂ ಜುಬಿಲಿ ಯೂನಿಯನ್ ಕ್ಲಬ್ಬಿನ ಬಯಲು ಸಭಾಂಗಣಕ್ಕೆ ಮೆರವಣಿಗೆಯಲ್ಲಿ ಶ್ರೀ ಪೈಯವರನ್ನು ಕರೆತಂದರು; ಆಲ್ಲಿ ಮೂರ್ಕಲಂ ಭವ ಗೌರವ ನೀಡಿದರು ಸಭಾನೇದಿಕೆಯನ್ನೇ ರುತ್ತಿಂತೆ ವೇದಘೋಷಗಳನ್ನು ಮೊಳಗಿಸಿದರು.

ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಕೆ. ಕೆ. ಪೈಯವರಿಂದ ಸ್ವಾಗತ ಭಾಷಣವಾದ ಬಳಿಕ ಪ ಪ್ಯಾಯ ಶ್ರೀ ಪಾದರಿಂದ ಬಂದ ಸಂದೇಶ ವಾ ಚನವಾಯ್ತು. ಆನಂತರ, ಉಡುಪಿ ನಾಗರಿಕರ ಪರವಾಗಿ ನಗರ ಸಭಾಪತಿ ಡಾ। ವಿ. ಎಸ್. ಆಚಾರ್ಯ, ತಾಲೂಕು ಅಭಿವೃದ್ಧಿ ಮಂಡಳಿಯ ಪರವಾಗಿ ಅಧ್ಯಕ್ಷ ಶ್ರೀ ಎಂ. ನುಭ್ಮರಾಜ್, ಸಿಂಡಿಕೇಟ್ ಬ್ಯಾಂಕಿನ ಪರವಾಗಿ ಪ್ರಾದೇಶಿಕ ಪ್ರಬಂಧಕರಾದ ಶ್ರೀ ಎಚ್. ವಿ. ಎಸ್. ಪೈ, ವಿಕ್ಕೋಲಿಯಂ ಜುಬಿಲಿ ಕ್ಲಬ್ಬಿನ ಪರವಾಗಿ ಅಧ್ಯಕ್ಷ ಶ್ರೀ ಬಿ. ಶಾಜೀವ ಹೆಗ್ಡೆಯವರು ಶ್ರೀ ಪೈ ಯವರಿಗೆ ಅಭಿನಂದನಾ ಪತ್ರಗಳನ್ನು ಅರ್ಪಿಸಿ ದರು.

ಜಿಲ್ಲೆಯ ವಿವಿಧ ಕ್ಷೇತ್ರಾಧಿಕಾರಿ ಶ್ರೀ ನೀರೇಂದ್ರ ಪೈಗ್ಡೆ, ಜೆಕಾಂಬಿಯ ಬಿಷಪ್ ಶ್ರೀ ಇಗ್ನೇಶಿಯಸ್ ಜೋಜೋ, ಪದ್ಮಶ್ರೀ ಡಾ ಟಿ. ಮೋವ ಪೈ ಮತ್ತು ಶ್ರೀಲ್ಯಾಂಡರ್ಸ್ ರು ಪದ್ಮಜಿಷಣ ಪ್ರಶಸ್ತಿ ಪಡೆದ ಶ್ರೀ ಪೈಯ ವರ ಸೇವಾ ದೀಕ್ಷೆಮನ್ನೂ ಕರ್ತವ್ಯ ಪರಾಯ ಣತೆಯನ್ನು ವ್ಯಾಪಕಿಸಿ ಅಭಿನಂದಿಸಿದರು

ಮಣ್ಣಿಪಾಲ ಜನರ ಅಪಾರಾಭಿಮಾನಗಳನ್ನು ನೆನೆಪುಕೊಂಡ ಶ್ರೀ ಪೈಯವರು ನಾವು ಸರಕಾಲ ಉಳಿಯಬೇಕು ಮಾಡಿಪುವರು ಕನ್ನ ಶ್ರೀ ಯುಸ್ಸಿನ ಕಮ್ಮಿಲ್ಲರ ಸರಕಾರವೇ ಕಾರಣವೆಂದು ವಿನೀತರಾಗಿ ನಿವೇದಿಸಿಕೊಂಡರು. 'ನಾನು ಇನ್ನು ಬಿಂದಬೇ ಭಾಗ್ಯ ಪಡೆದಿದ್ದೇನೆ; ಕೋಟಿಕೋಟಿ ಜನರು ಹೊಂದಿದಾರವ ಅನುಕೂಲಕೆಗಳನ್ನು ಹೊಂದಿದ್ದೇನೆ ಆನುಕೂಲಕೆಗಳಿಂದ ನಮಿಯು ತ್ರಿರುವ ಕೋಟ್ಯಂತರ ಜನತೆಯ ಏಳಿಗೆಗಾಗಿ ದುಡಿಯುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ. ಬಡ ಜನರ—ವಿನಕ್ಕೆ ೬೯ ಪೈಸೆಯಷ್ಟೂ ಆದಾಯ ನಿಲ್ಲದವರ—ಬಗ್ಗೆ ನಾವು ಕಳಕಳಿ ವಹಿಸದೆ ಹೋದರೆ ನನ್ನ ಸಮಸ್ಯೆಗಳು ಹೇಗೆ ಪರಿಹಾರವಾಗುತ್ತವೆ?' ಎಂದು ಪ್ರಶ್ನಿಸಿದ ಶ್ರೀ ಪೈಯವರು 'ನಿಮಗೊಬ್ಬನಿಗೆ ಬಿನ್ನೋಗೆ ನೂರಕಿಸುವ, ಆಮ ಮೊರಕನ ಮೇಲೆ ಹೆಚ್ಚು ಸಂಬಳ ಸವಲತ್ತುಗಳನ್ನು ನುಸುತ್ತಾಕಾಂಕ್ಷೆಯ ನಾವು ನಮಗಿಂತ ಯೋಗ್ಯರೂ ಅರ್ಹರೂ ನಮ್ಮೋಗಿಗಳಾಗಿಯೇ ಉಳಿದಿದ್ದಾರೆಂಬ ಸತ್ಯ ವನ್ನು ಮರೆತು ಬಿಡುತ್ತೇವೆ ಈ ಸ್ವಾರ್ಥ ದೂರ ವಾಗಿನೆ ವೇಶವೆ ಕಲ್ಯಾಣ ಸಾಧ್ಯವಿಲ್ಲವೆಂದು ಹೇಳಿದರು.

ಅಧಿಕಾರ ಸ್ಥಾನದಲ್ಲಿರುವವರು ತಮ್ಮ ಅಧಿ ಕಾರ ಬಲದಿಂದ ಜನಹಿತ ಮಾಡಬೇಕು; ಕೀಟಲೆ ಕೊಡುಜಾರನೆಂದವರು ಅಧಿಕಾರಿ ಜನರನ್ನು ವಿನಂತಿಸಿದರು. ಪ್ರತಿಯೊಬ್ಬನೂ ತನ್ನ ಕರ್ತವ್ಯ ವನ್ನು ನಿರ್ವಂಚನೆಯಿಂದ ಪ್ರಾಮಾಣಿಕರಾಗಿ ನೂಡಬೇಕೆಂದೂ ದುಡಿಮೆಯೇ ದೇವರೆಂದೂ ಅವರು ಹೇಳಿ, ಉಡುಪಿಯ ನಾಗರಿಕರ ಸಮ್ಮಾ ನಗಳನ್ನು ಪ್ರಕಟಿಸಿದರು.

ಅಧ್ಯಕ್ಷ ಸೀರವಲ್ಲಿ ಪೇಜಾವರ ಮಠಾಧೀಶರಿ ದ್ದರು. ಅವರು ಶ್ರೀ ಪೈಯವರು ದೇಶದ ಅರ್ಥ ಮಂತ್ರಿಯಾಗಿ ಮಾಡ್ಡೊಮ್ಮೆ ಸನ್ಮಾನಿತರಾಗಲೆಂದು ಹಾರೈಸಿದರು. ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಧನ್ಯವಾದ ನೀಡಿದರು.

ಪೂರ್ಣಪ್ರಜ್ಞ ಕಾಲೇಜಿನ ವಾರ್ಷಿಕೋತ್ಸವ ಹಾಗೂ ಯೂನಿಯನ್ ಡೇ ಸಮಾರಂಭ

ಉಡುಪಿಯ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ವಾರ್ಷಿಕೋತ್ಸವವು ತಾ 4ರಂದು ಕೆನರಾ ಚೇಂ ಕಿಂಗ್ ಕಾಪೋರೇಶನ್ ಲಿಮಿಟೆಡ್‌ನ ಚೆಯ ರ್‌ಮೇನ್ ಶ್ರೀ ಎಂ ಆರ್. ಕಾಮತ್‌ರವರ ಅ ಧ್ಯಕ್ಷತೆಯಲ್ಲಿ ಜರಗಿತು.

ಯೂನಿಯನ್ ಡೇ ಸಮಾರಂಭವು ತಾ. 5 ರಂದು ಬಂಟ್ವಾಳದ ಎಸ್. ವಿ. ಕಾಲೇಜಿನ ಪ್ರಿ ನ್ಸಿಪಾಲ್ ಪ್ರೊ| ಯು ವೇಣುಮಾಧವನಾಯಕರ ಅಧ್ಯಕ್ಷತೆಯಲ್ಲಿ ಜರಗಿತು ಆರಂಭದಲ್ಲಿ ಡಾ। ಪಿ ನಾರಾಯಣರಾಯರು ಸ್ವಾಗತಿಸಿದರು. ವಿ ದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ರಾಘವೇಶ್ವ ಕಿಟ್ಟಿಯವರು ಸಂಘದ ಚಟುವಟಿಕೆಗಳ ವರದಿ ಯನ್ನು ಮತ್ತು ಶ್ರೀ ಸತೀಶ್ ಪಿಯ ಹೆಗ್ಡೆಯವ ರು ಕ್ರೀಡಾ ವರದಿಯನ್ನು ಓದಿದರು. ಪಾರ್ಥ ಪು ಶ್ರೀ ಪಾದಂಗಳವರು ಆಶೀರ್ವಚನಗೈದರು. ಅಧ್ಯಕ್ಷರೆ ಭಾಷಣದ ಬಳಿಕ ಸಂಘದ ಕಾರ್ಯ ದರ್ಶಿ ಶ್ರೀ ಕೃಷ್ಣ ಸೂರ್ಕಿ ಉಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು

ಎರಡು ದಿನವೂ ಕಾಲೇಜು ವಿದ್ಯಾರ್ಥಿ ವಿ ದ್ಯಾರ್ಥಿನಿಯರಿಂದ ವಿವಿಧ ಮನರಂಜನಾ ಕಾ ರ್ಯಕ್ರಮಗಳು ಜರಗಿದವು.

ದ. ಕ. ಜಿಲ್ಲೆಯ ಕಾಲೇಜುಗಳ ಪ್ರಿನ್ಸಿಪಾಲರ ಹಾಗೂ ಅವರ ಸಹೋದ್ಯೋಗಿಗಳ 'ವಿಚಾರ ಸಂಕಿರಣ'

ಕಳೆದ ತಾ 1ರಂದು ಸುಬ್ರಹ್ಮಣ್ಯದಲ್ಲಿ ದಕ್ಷಿ ಣ ಕರ್ನಾಟಕದ 22 ಕಾಲೇಜುಗಳ ಪ್ರಿನ್ಸಿಪಾಲರು ಮತ್ತು ಅವರ ಸಹೋದ್ಯೋಗಿಗಳಿಗಾಗಿ ಏರ್ಪಡಿ ಸಿದ 'ವಿಚಾರ ಸಂಕಿರಣ'ದ ಸಮಾರೋಪ ಸಮಾ ರಂಭದಲ್ಲಿ ಯುನಿಕ್ಸೋ ತಜ್ಞ ಡಾ| ಆನಂದ ಗು ರುಗೆ ಮಾತಾಡಿದರು ಜಿಲ್ಲೆಯ ಕಾಲೇಜು ಗಳ ಪ್ರಾಧ್ಯಾಪಕರುಗಳಿಗೆ ಮಾರ್ಗದರ್ಶನ ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ನಿರ್ಮಾಣದ ಉದ್ದೇಶದಿಂದ ಮೂರು ದಿವಸಗಳ ವಿಚಾರ ಸಂಕಿರಣವನ್ನು ಯೋಜಿಸಲಾಗಿತ್ತು. ಡಾ। ಗುರುಗೆಯವರ ನೇತೃತ್ವದಲ್ಲಿ ವಿಚಾರ ಸಂ ಕಿರಣವು ಉತ್ಸಾಹಪೂರ್ಣ ವಾತಾವರಣದಲ್ಲಿ ನಡೆಯಿತು.

ಡಾ। ಗುರುಗೆಯವರು ಮಾತಾಡುತ್ತಾ, ಆಧು ನಿಕ ಕ್ಷೇತ್ರ ಸಮಸ್ಯೆಗಳಿಂದ ಕೂಡಿದ್ದು ಶಿಕ್ಷಣ ರಂಗದಲ್ಲಿ ಅದು ಇನ್ನಷ್ಟು ಜಟಿಲವೂ ಸಂಕೀ ರ್ಣವೂ ಆಗಿರುತ್ತದೆ ವಿದ್ಯಾ ಸಂಸ್ಥೆಗಳ ಅಧಿ ಕಾರವರ್ಗ, ಅಧ್ಯಾಪಕ ವರ್ಗ ಮತ್ತು ವಿದ್ಯಾ ರ್ಥಿ ವರ್ಗಗಳ ಪರಸ್ಪರ ಸಹಭಾಗಿತ್ವ ಮತ್ತು ಸಮಸ್ಯೆಗಳ ಯಥಾರ್ಥ ಗ್ರಹಣದಿಂದ ಮಾತ್ರ ವೇ ಆವುಗಳ ನಿವಾರಣ ಸಾಧ್ಯ ಹಾಗೂ ಶಿಕ್ಷಣ ಕ್ಷೇತ್ರದ ಮುನ್ನಡೆಯೂ ಸಾಧ್ಯ ಎಂದರು. ಈ "ವಿಚಾರ ಸಂಕಿರಣ" ಶಿಕ್ಷಣಕ್ಕೆ ಪಥಪ್ರದರ್ಶನ ನೂಡುವಂತಾಗಲೆ ಎಂದವರು ಹಾರೈಸಿದರು

ಅಧ್ಯಕ್ಷತೆ ವಹಿಸಿದ್ದ ಡಾ| ಟಿ ಎಂ. ಎ ಪೈಯವರು ತಮ್ಮ ಭಾಷಣದಲ್ಲಿ, ವಿದ್ಯಾರ್ಥಿಗ ಳು, ಶಿಕ್ಷಕರು ನುತ್ತು ರಕ್ಷಕರೊಳಗೆ ಸೌಹಾ ರ್ದಯುತ ವಾತಾವರಣ ನಿರ್ಮಾಣವಾಗಿ ಆದು ಶೈಕ್ಷಣಿಕ ಕ್ಷೇತ್ರದ ಪ್ರಗತಿಗೆ ಪೋಷಕವಾಗಲಿ ಎಂದರು.

ವಿಚಾರ ಸಂಕಿರಣದ ಪ್ರತಿನಿಧಿಗಳ ನತಿಯಿಂ ದ ಡಾ। ಸಿ. ನಾರಾಯಣ ರಾವ್, ರೀ ಫಾ ಕ್ಯಾಸ್ಸಲಿನೋ, ಪ್ರೊ. ಜೋಷಿ ಮೊದಲಾದವ ರು ಮಾತಾಡಿ ತಮ್ಮ ಅನುಭವಗಳನ್ನು ವಿವರಿಸಿ ದರು. ಆರಂಭದಲ್ಲಿ ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದ್ದರು.

ಉಡುಪಿ ಜೀವವಿಮಾ ಸಂಸ್ಥೆಯ ರಿಕ್ರಿಯೇಶನ್ ಕ್ಲಬ್ಬಿನವರಿಂದ ಶ್ರೀ ಟಿ. ಎ. ಪೈಯವರಿಗೆ ಗೌರವಾರ್ಥ ಸಮಾರಂಭ

ಉಡುಪಿ ಜೀವವಿಮಾ ಸಂಸ್ಥೆಯ ನೌಕರರ ರಿಕ್ರಿಯೇಶನ್ ಕ್ಲಬ್‌ನವರು ತಾ. 30ರಂದು ಪದ್ಮಭೂಷಣ ಶ್ರೀ ಟಿ. ಎ. ಪೈಯವರಿಗೆ ಗೌರ ವಾರ್ಥ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಕ್ಲಬ್ಬಿನ ಉಪಾಧ್ಯಕ್ಷ ಶ್ರೀ ಶಶಿಧರ ಹೆಗ್ಡೆಯವ ರು ಸ್ವಾಗತಿಸಿದರು.

ಶ್ರೀ ಟಿ ಎ. ಪೈಯರು ಮಾತಾಡಿ, ರಾ ಷ್ಟ್ರೀಕರಣದ ಉದ್ದೇಶವು ಜನತೆಯ ಹಿತಾಭಿವೃ ದ್ಧಿಯದಾಗಿದೆ. ಜನರು ಗುಡಿರುವ ಉಳಿತಾಯ ವನ್ನು ಯೋಗ್ಯರೀತಿಯಲ್ಲಿ ವಿನಿಯೋಗಿಸಿ ಆಭಿವೃ ದ್ಧಿ ಸಾಧಿಸುವುದು ಎಲ್. ಐ. ಸಿ ಯ ಉದ್ದೇ ಶವಾಗಿದೆ. ಜನರಲ್ಲಿ ಉಳಿತಾಯದ ಹವ್ಯಾಸ ವನ್ನು ಬೆಳೆಸಿದರೆ ಮಾತ್ರ ದೇಶದ ಆರ್ಥಿಕ ಸಮ ಸ್ಯೆ ಬಗೆಹರಿಯ ಬಹುದು ನೌಕರರು ಯೋಧ ರಂತೆ ಕಾರ್ಯನಿಸಿಗಬೇಕೆಂದು ತಿಳಿಸಿದ ಶ್ರೀ ಪೈಗಳು ನಿಮ್ಮ ಕಲಸದಿಂದ ಜನತೆಗೆ ವಿನು ಪ್ರ ತಿಫಲ ದೊರಕಿದೆ ಎನ್ನುವುದು ಮುಖ್ಯ ಎಂದರು. ವರ್ಗರಹಿತ ಮನೋಭಾವ ಬೆಳೆಸಿಕೊಳ್ಳಲು ಆವರು ನೌಕರರಿಗೆ ಕರೆ ನೀಡಿದರು ಆಲ್ಲದೆ ಉ ಡುಪಿ ಡಿವಿಜನು ಸಾಧಿಸಿದ ಪ್ರಗತಿಗಾಗಿ ಮೆಚ್ಚು ಗೆ ವ್ಯಕ್ತಪಡಿಸಿದರು.

ಶ್ರೀಗಳಾದ ಬಿ. ಶಾಮರಾಯ ಶೆಟ್ಟಿ, ಬಿ. ಪಿ. ಕಿಲ್ಲಾಯ, ಶ್ರೀಮತಿ ಶಾಂತಿ ಡಿ ಶೆಣೈ, ಎ. ಡಿ. ಎಂ ಗಣಪತಿ ರಾವ್‌ರವರು ಶ್ರೀ ಪೈ ಗಳಿಗೆ ಮೊರೆತ ಪ್ರಶಸ್ತಿ ಆವರ ಯೋಗ್ಯತೆಗೆ ಆನ್ಯರ್ಥವಾಗುವಂತಾದ್ದಾಗಿದೆ ಎಂದರು.

ಆಂತ್ಯದಲ್ಲಿ ಜತೆ ಕಾರ್ಯದರ್ಶಿ ಶ್ರೀ ನಿಲ್ಲಿ ಯಂ ನಾರ್ಟನ್‌ರವರು ಧನ್ಯವಾದ ಆರ್ಪಿಸಿದರು.

ಜೀವ ವಿಮೆಯ ನಿಗಮದ ಆಸೆಯ ಮೌಲ್ಯಮಾಪನ

೧೯೭೧ನೆ ಮಾರ್ಚ್ ೩೧ರಲ್ಲಿದ್ದಂತೆ ಜೀವ ವಿ ಮೆ ನಿಗಮದ ಸಾಲ-ಮೂಲಗಳ ಮೌಲ್ಯಮಾ ಪನದ ಪರಿಣಾಮವೀಗ ಬಹಿರಂಗವಾಗಿದೆ. ರೂ. ೧೧೫ ಕೆಲ ಕೋಟಿ ರೂಪಾಯಿಗಳ ಲಾಭಾಂಶವು ಹಂಚಲು ದೊರೆತಿದೆ ಈ ನೊತ್ತದಲ್ಲಿ ರೂ ೧೧೨ ೧೮ ಕೋಟಿಯನ್ನು ಪಾಲುಪತೆಯಾಜ ಪಾಲಿಸಿದಾರರಿಗೆ ಹಂಚುವುದಕ್ಕೂ ರೂ. ೫ ಲಂ ಕೋಟಿಯನ್ನು ಕೇಂದ್ರ ಸರಕಾರಕ್ಕೂ ನಿಗದಿ ಮಾಡಿದೆ. ಈ ಮೊದಲಿನ ಮೌಲ್ಯಮಾಪನದ ಪ್ರಮಾಣದಲ್ಲಿಯೇ ಪಾಲಿಸಿದಾರರಿಗೆ ಲಾಭಾಂಶ ವನ್ನು ಹಂಚಲು ನಿಗಮವು ನಿರ್ಧರಿಸಿದೆ. ಆದು ಆ ಜೀವ ವಿಮೆಗೆ ಪ್ರತಿ ಸಾವಿರಕ್ಕೆ ಪ್ರತಿ ವರ್ಷ ಕ್ಕೆ ರೂ. ೩೨.೮೦. ಎಂಡೋಮೆಂಟ್‌ಗೆ ಪ್ರತಿವರ್ಷ ಕ್ಕೆ ಪ್ರತಿ ಸಾವಿರಕ್ಕೆ ರೂ ೧೭ ೬೦.

ನಿಯಮಾನುಸಾರ ಮೊದಲಿನ ವಿಮೊ ಕಂಪೆ ನಿಗಳ ಪಾಲಿಸಿದಾರರಿಗೂ ಲಾಭಾಂಶವನ್ನು ಹಂ ಚಿದೆ.

ಮೌಲ್ಯಮಾಪನದ ದಿನ ಇದ್ದ ಜೀವ ವಿ ಮೊ ಪಾಲಿಸಿಗಳ ಸಂಖ್ಯೆ— ೧೨೪,೨೪,೯೭,೬೭

ವಿಮೊ ಮೊತ್ತ ಮತ್ತು ಅದರ ಮೇಲಿನ ಲಾ ಭಾಂಶ ರೂ. ೭೧೮೫,೬೨,೫೩,೬೬೦. ಅನ್ಯುಟಿ ಪಾಲಿಸಿಗಳು: ೧೧,೪೪೦.ಅನ್ಯುಟಿ ಪಾಲಿಸಿಗಳ ವಾ ರ್ಷಿಕ ಮೊತ್ತ ರೂ ೨,೧೧,೪೬,೭೯೩.

ಈ ನೊದರಿನಂತೆಯೇ ತಿದ್ದಿದ ಒರಿಯಂಟಲ್ ಆಶ್ಯೂರೆನ್ಸ್ ಟೀಟಲ್‌ನ್ನು ಮೋರ್ಟ್ಗಾಲಿಗೆ ಆ ಧಾರವಾಗಿ ಈ ಮೌಲ್ಯಮಾಪನದಲ್ಲಿಯೂ ಬಳ ಸಿಕೊಳ್ಳಲಾಯ್ತು.

ಮೌಲ್ಯಮಾಪನ ಮಧ್ಯಾವಧಿಯಲ್ಲಿ ನಿಗಮವು ಸೇ ೫೬೦ರಂತೆ ಬಡ್ಡಿಗಳಿಸಿತು ಹಿಂದಿನ ಬಾರಿ ಈ ದರವು ಸೇ. ೫೨೪ ಇತ್ತು. ಹಿಂದಿನ ಮೌಲ್ಯಮಾಪನದಲ್ಲಿ ಸೇ. ಮೂರೂಕಾಲರ ಬಡ್ಡಿದರವನ್ನು ಬಳಸಿದ್ದರೆ ಈ ಬಾರಿ ಸೇ. 3೪/೪ರ ದರವನ್ನು ಇಟ್ಟುಕೊಳ್ಳಲಾಯ್ತು.

ನಿಗಮವು ೬೯–೭೦ರಲ್ಲಿ ಸೇ ೨೭ ೬೯ ಮತ್ತು ೭೦.೭೧ರಲ್ಲಿ ಸೇ. ೨೭.೧೯ ರಷ್ಟು ಒಟ್ಟು ವೆಚ್ಚ ಮಾಡಿತು. ರಿನೆವೆಲ್ ವೆಚ್ಚ ಪ್ರಮಾಣವು ಈ ವರ್ಷಗಳಲ್ಲಿ ಸೇ. ೧೬.೧೫ ಮತ್ತು ೧೪.೬೫ ಇತ್ತು.

ಪುಥ್ವರಾಜರಿಂದ ಧರ್ಮಾರ್ಥ ಆಕ್ಕಿ ವಿತರಣೆ

ಮುಲ್ಪೆಯ ಕೊರೊನೇಟ್ ಕ್ಯಾಸಿಂಗ್ ಕಂಪೆ ನಿಯ ಮಾಲಕರಾದ ಶ್ರೀ ಎಂ. ಪುಥ್ವರಾಜರು ತಮ್ಮ ಹುಟ್ಟು ಹಬ್ಬದ ನೆನಪಿಗಾಗಿ ವರ್ಷಂಪ್ರ ತಿಯಂತೆ ಈ ಸಲವೂ ತಾ. 31ರಂದು ತಮ್ಮ ಸ್ವಗೃಹವಾದ 'ಸ್ವಾಗತ' ದಲ್ಲಿ ಒಟ್ಟು ನೂರ ಹತ್ತು ಮುಡಿ ಆಕ್ಕಿಯನ್ನು ಧರ್ಮಾರ್ಥ ವಿತರಣೆ ಮಾಡಿದರು. ಅಲ್ಲದೆ ನಗದು ಹಣವನ್ನು ದಾನ ವಿತ್ತಿದ್ದರು.

ಸಂಜೆ ಉಡುಪಿ 'ರಂಗಭೂಮಿ' ಆರ್ಕೆಸ್ಟ್ರಾದ ವರಿಂದ ಲಘು ಸಂಗೀತ ಕಾರ್ಯಕ್ರಮವೂ ರಾತ್ರಿ ಮಂದರ್ತಿ ಮೇಳದವರಿಂದ ಯಕ್ಷಗಾನ ಬಯಲಾಟ ಯಶಸ್ವಿಯಾಗಿ ಪ್ರದರ್ಶಿತವಾಯ್ತು.

ದ. ಕ. ಜಿಲ್ಲಾ ರಾಜಕೀಯ ಸಂತ್ರಸ್ತರ ಸಂಘದ ಮಹಾಸಭೆ

ತಾ 26—1—72ರಂದು ದೇ ಭ ಕಾ ರ್ನಾಡ್ ಸದಾಶಿವ ರಾಯರ ಸ್ಮಾರಕ ಮಂದಿರ ದಲ್ಲಿ ಶ್ರೀ ಕೆ. ಆರ್. ಆಚಾರ್ಯ, ಮೂಜಿ ಯಂ. ಪಿ ಇವರ ಅಧ್ಯಕ್ಷತೆಯಲ್ಲಿ ಜರಗಿದ ಬಲ್ಲಾ ರಾಜಕೀಯ ಸಂತ್ರಸ್ತರ ಮಹಾಸಭೆಯಲ್ಲಿ ಆದ ನಿರ್ಣಯಗಳು:

ಸಂಘವನ್ನು ರಿಜಿಸ್ಟ್ರಿ ಮಾಡುವ ಅವಶ್ಯಕತೆ ಕುರಿತು ಅಧ್ಯಕ್ಷರೂ, ಶ್ರೀ ಗಂಗಾಧರರಾವ್ ಇ ವರೂ ಇದರ ತೊಡರುಗಳನ್ನು ಸವಿಸ್ತರವಾಗಿ ವಿವರಿಸಿದರು. ಚರ್ಚೆ ಮುಗಿದ ಬಳಿಕ ಜಿಲ್ಲೆಯ ಎಲ್ಲಾ ರಾಜಕೀಯ ಸಂತ್ರಸ್ತರು ಸಂಘದ ಸದ ಸ್ಯರಾಗುವಂತೆ, ಮತ್ತು ಆಯಾಯ ತಾಲೂಕಿನ ಲ್ಲಿ ಜೀವನತಿವಿರುವ ಹಾಗೂ ಮರಣ ಪಟ್ಟವರ ಹೆಸರು, ವಿಳಾಸ, ಅನುಭವಿಸಿದ ಶಿಕ್ಷೆ ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸುವಂತೆ ಸಂಘದ ಪತಿ ಯಿಂದ ಒಬ್ಬರನ್ನು ನೇಮಿಸಿ ಧನ ಸಂಗ್ರಹ ಮೊದಲಾದ ಕಾರ್ಯಗಳನ್ನು ಪ್ರಾರಂಭಿಸಬೇಕೆಂ ದು ಸಂಘದ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಿ, ನುಂದೆ ಸಂಘವನ್ನು ರಿಜಿಸ್ಟ್ರಿ ಮಾಡುವ ಕುರಿ ತು ಆಲೋಚಿಸುವುದು ಒಳವೆಂದು ಶ್ರೀ ಯುತ್. ಕೆ. ತಿಂಗಳಾಯರ ಅಭಿಪ್ರಾಯವನ್ನು ಸರ್ವಾನು ಮತದಿಂದ ಮಂಜೂರು ಮಾಡಲಾಯ್ತು. ರಾಜ ಕೀಯ ಸಂತ್ರಸ್ತರಿಗೆ ಈಗ ದೊರೆಯುವ ನಿವೃ ತ್ತಿ ವೇತನವನ್ನು ಆಯಾಯ ವಿಳಾಸದಾರರಿಗೆ ಮನಿಯರ್ಡರ್ ಮೂಲಕ ತಲಪುವಂತೆ ಯೂ ಸೌಲಭ್ಯ ಬೇಕಾಗುವ ಮುಖಾಂತರ ಸಿಗುವಂತೆ ಏರ್ಪಾಡು ಮಾಡಬೇಕೆಂದು ಈ ಸಭೆಯು ಘನ ಸರಕಾರವನ್ನು ಅತೀ ವಿನಯದಿಂದ ಕೇಳಿಕೊ ಳ್ಳುತ್ತದೆ.

ಪ್ರತಿಕೆಗಳಲ್ಲಿ ಬಂದ ವಾರ್ತೆಯಂತೆ ಇದೇ ಬರುವ ಆಗೋಸ್ತು 15ರಿಂದ ರಾಜಕೀಯ ಸಂ ತ್ರಸ್ತರಿಗೆ (6 ತಿಂಗಳ ಮೇತೆ ಶಿಕ್ಷೆ ಅನುಭವಿಸಿ ದವರಿಗೆ ಮಾತ್ರ) ರೂ. 200—00 ಪೆನ್‌ಶನ್ ಕೊಡಲು ನಿಶ್ಚಯಿಸಿದ್ದರೆ, ಅದನ್ನು ತಿದ್ದುಪಡಿ ಮಾಡಿ, ಕಾನೂನು ಉಲ್ಲಂಘಿಸಿ ಬಂಧನಕ್ಕೊಳ ಗಾದ ಎಲ್ಲಾ ರಾಜಕೀಯ ಸಂತ್ರಸ್ತರಿಗೆ, ಆನು ಭವಿಸಿದ ಶಿಕ್ಷೆಯ ಮಿತಿಯನ್ನು ಮನ್ನಿಸಿ ಮಾಡಿ ಸಲಸೂನಾನವಾದ ಮತ್ತು ನ್ಯಾಯವಾದ ವಿರಾ ಮವೇತನ ಕೊಡಬೇಕೆಂದು ಈ ಸಭೆಯು ಕಳ ಕಳಿಯಿಂದ ಸರಕಾರವನ್ನು ವಿನಂತಿಸುತ್ತದೆ.

ಮೈಸೂರು ರಾಜ್ಯದ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮ್ಮೇಳನವನ್ನು ಮಂಗಳೂ ರಿನಲ್ಲಿ ಕರೆಯಬೇಕೆಂದು ಶ್ರೀ ರೋಕಯ್ಯ ಶೆಟ್ಟಿ ರ ಅಭಿಪ್ರಾಯವನ್ನು ಸರ್ವಾನುಮತದಿಂದ ಅಂ ಗೀಕರಿಸಲಾಯ್ತು. ಶ್ರೀ ಪ್ರಭಾಕರ ಶೇಟ್ ಕಲ ಬೇಂಕಿರರು ಧನ್ಯವಾದವನ್ನು ಆರ್ಪಿಸಿದರು.

ನೋಟೀಸು

ಪುತ್ತೂರು IIrd ಎಡಿಶನಲ್ ಮು. ಕೋರ್ಟು

R.R.C. 416/71.

S. ತಿಮ್ಮಪ್ಪ ಶೈ. —ಅರ್ಜಿದಾರ.
ಮತ್ತು
ಜೇಸಪ್ಪ ಗೌಡ ಸಜಂ —ಎದ್ರಿರು.

R ೬. ಪುಗ್ಗಪ್ಪ. ನಾರ್ಣಗೌಡರ ಬಿಧವೆ. ಪುತ್ತೂರು ತಾಲೂಕು. ಪುನ್ಚಾಡಿ ಗ್ರಾಮ್ದ ಬಿದಿರಾಡಿ ಎಂಬಲ್ಲಿ P O.ಸವಣೂರು(ದ ಕ)

R ೮. ವೆಂಕಪ್ಪ ಗೌಡ ನಾರ್ಣ ಗೌಡರ ಮಗ. ಪುತ್ತೂರು ತಾಲೂಕು ಪುನ್ಚಾಡಿ ಗ್ರಾಮ್ದ ಬಿದಿರಾಡಿ ಎಂಬಲ್ಲಿ. P.O. ಸವಣೂರು (ದ.ಕ.) ಇವರಿಗೆ

ಆರ್ಜಿದಾರನು ಗೇಣಿ ವ್ಯಸಲು ಬಗ್ಗೆ ಮೂಡಿದ ಮೇಲಿನ ಪಾಮೆಯಲ್ಲಿ (ಆರ್ಬಿಯಲ್ಲಿ) ೩,೮ ನೇ ಎದ್ರಿರಾದ ನೀವು ತಾ. 3–4–1972ಕ್ಕೆ ಇ ಟ್ಟ್ರಿರುತ್ತೀದೆ. ಸದ್ರಿ ದಿವಸ ಈ ಕೋರ್ಟು ಮುಂ ದೆ ಹಾಜರಾಗಿ ಉದಪರಿನತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುಕ್ತ ಕಂಡಂತೆ ತೀ ರ್ಮಾನಿಸಲಾದೀತು.

(By Order of the Court)

Sd/- K. Raghunath Rai

Advocate for Peter.

Puttur S.K. 5-2-72.

ಉಳಿದುದು

ಕಳೆಯುಗ ೧೯–೩–೧೯೭೨

(ಎರಡನೇ ಪುಟದಿಂದ)

ತಮ್ಮ ಪ್ರಯೋಗದ ಪರಿಣಾಮವನ್ನು ಕಾದು ನೋಡುವ ಉದ್ದಿಶ್ಯ ವೈದ್ಯರು ಆಕೆಯಿಂದ ದೂರ ಸರಿದು, ಹಾಸಿದ್ದ ರತ್ನಗಂಬಳಿಯ ಮೇಲೆ ಕುಳಿತರು. ಉಳಿದವರಿಗೆ ನಿಂತು ಕಾಲು ಸೋತಿತ್ತು. ಅವರು ವೈದ್ಯರನ್ನು ಅನುಸರಿಸಿದರು.

ನರಸಿಂಹನಿಗೆ ತನ್ನ ಕೂಳ್ಳುದಿಯನ್ನು ಸಹಿಸಿಕೊಳ್ಳಲಾಗಲಿಲ್ಲ.

ಸಹನೆ ಕಳೆದುಕೊಂಡ ಆತ 'ದೇವಿಯ ಆರೋಗ್ಯ ಹೇಗಿದೆ ವೈದ್ಯರೇ?' ಎಂದು ಬಹಳ ಕಷ್ಟದಿಂದ ಅವರನ್ನು ನುಡಿಸಿದ.

'ದೈವ ಯತ್ನ. ಯಾವುದನ್ನೂ ಹೇಳಲು ಬರುವುದಿಲ್ಲ. ಆತ ಕರೆಸಿ ಕೊಳ್ಳ ಬಯಸಿದರೆ ಯಾರ ಪ್ರಯತ್ನ ನಡೆಯುತ್ತದೆ? ಎಲ್ಲ ಅವನಿಗೆ ಕೂಡಿದ್ದು'

ತಮ್ಮ ಹೆಗಲ ಮೇಲೆ ಬಿದ್ದ ಭಾರವನ್ನು ವೈದ್ಯರು ನಿರಾತಂಕವಾಗಿ ವೈಪದ ಹೆಗಲ ಮೇಲಿರಿಸಿದರು. ಸಂದಿಗ್ಧ ಪರಿಸ್ಥಿತಿಯಲ್ಲಿ ಇದು ಎಲ್ಲರೂ ಆಡುವ ಮಾತು. ಉದ್ವಿಗ್ನಗೊಂಡ ಚಿತ್ತವನ್ನು ಸಮಸ್ಥಿತಿಗೆ ತರಲು ಹೇಳುವ ಸಾಂತ್ವನದ ಮಾತು. ಅವನ ಇಚ್ಛೆಯಂತೆ ಎಲ್ಲ ನಡೆಯುವುದಿದ್ದರೆ ಪುರುಷ ಪ್ರಯತ್ನದ ಮಾತು? ಎಲ್ಲವನ್ನೂ ಅವನಿಗೆ ಒಪ್ಪಿಸಿ ಕುಳಿತರಾಯಿತು.

ಆದರೆ ಯಾರೂ ಹಾಗೆ ತೆಪ್ಪಗೆ ಕುಳಿತುದಿಲ್ಲ.

ನುಂಪೆ ಕುಳಿತಿರುವುದೂ ತೀರ ಅಸಂಭವ!

ಮಾಡುವ ಪ್ರಯತ್ನ ಮಾಡಿಯೇ ತೀರುತ್ತಾರೆ. ಆದರಿಂದ ಚಿತ್ತಕ್ಕೆ ತೃಪ್ತಿ.

ಪ್ರಯತ್ನ ನಡೆಸಿದೆವು-ಯಶ ದೊರೆಯಲಿಲ್ಲವೆಂಬ ಸಮಾಧಾನ.

ವೈದ್ಯರ ಹಾರಿಕೆಯ ಉತ್ತರದಿಂದ ನರಸಿಂಹನಲ್ಲಿ ಕಸಿವಿಸಿಯುಂಟಾಯಿತು.

"ಹೇಗಾದರೂ ಮಾಡಿ ನನ್ನ ಭಾಗದ ಭಾಗ್ಯವನ್ನು ಉಳಿಸಿ ಕೊಡಿ ವೈದ್ಯರೇ! ಈ ಹಾಲು ಹಸುಳೆಗಾಗಿಯಾದರೂ ಅವಳ ಜೀವವಳಿಸಿ." ದೀನನಂತೆ ಪ್ರಾರ್ಥಿಸಿದ ಧರಸಿಂಹ. ತಾನು ರಾಜ ಸಂಬಂಧಿ, ರಾಜ ವಂಶೀಯ ಎಂಬುದೂ ಅವನ ಸ್ಮೃತಿ ಪಥದಿಂದ ಅಳಿಸಿ ಹೋಯಿತು. ರಣಾಂಗಣದಲ್ಲಿ ಸಹಸ್ರ ಸಂಖ್ಯೆಯಲ್ಲಿ ಸೈನಿಕರು ಇದಿರಾದರೂ ಎದೆಗುಂದದ ಸೇನಾನಿ, ರಾಜ ವೈದ್ಯರ ಮುಂದು ಪುಟ್ಟ ಮಗುವಿನಂತೆ ಅಂಗಲಾಚಿದ.

ಅಂಗ ವಿಕಲ ಸೈನಿಕರ ಚೀರಾಟವನ್ನು ಆತ ಯುದ್ಧ ಭೂಮಿಯಲ್ಲಿ ಕೇಳಿದ್ದ. ನೆತ್ತರಿನ ಮಡುವಿನಲ್ಲಿ ನರಳುತ್ತ ಬಿದ್ದ ಸಾವಿರಾರು ಯೋಧರು ಸಾವಿನೊಡನೆ ಸೆಣಸುವ ದೃಶ್ಯವನ್ನು ಆತ ಅದೆಷ್ಟೋ ಬಾರಿ ಕಂಡಿದ್ದ. ಹೃದಯವಿದಾರಕ ದೃಶ್ಯಗಳು. ಆದರೆ ಅವನೆದೆ ಕರಗಿರಲಿಲ್ಲ. ಕರ್ತವ್ಯದಿಂದ ಆತ ವಿಮುಖನಾಗಿರಲಿಲ್ಲ.

ಆದರೆ ಇಂದು—?

ಎಲ್ಲ ವಿರು—ನೇರು!

ತನ್ನ ಕೈ ಹಿಡಿದು, ತನಗೆ ಭಾಗ್ಯವನ್ನೂ, ಸುಖವನ್ನೂ ತಂದು ಕೊಟ್ಟ ಕಾಂತೆ, ಸಾವಿನೊಡನೆ ನಡೆಸುತಿದ್ದ ಹೋರಾಟವನ್ನು ಕಂಡು ವಿಚಲಿತನಾದ.

ಅವನ ಧೀರ ಮನಸ್ಸು ಅಧೀರವಾಯಿತು.

ಅವನಿಗೆ ತಿಳಿಯದಂತೆ ಬಾಷ್ಪವಾರಿ ಧಾರೆ ಧಾರೆಯಾಗಿ ಹರಿಯಲಾರಂಭಿಸಿತು.

ಹೊದ್ದುಕೊಂಡ ಸೆಲ್ಲೆಯಲ್ಲಿ ಅದನ್ನೊರಸಿಕೊಂಡು, ಬದುಕು—ಸಾವಿನ ತೂಗುಯ್ಯಾಲೆಯಲ್ಲಿ ಮಲಗಿದ್ದ ಮಡದಿಯನ್ನು ನೋಡುತ್ತ ನಿಂತ —ಅವಳ ಮುಖವಲ್ಲಾಗುವ ನಿಮಿಷ, ನಿಮಿಷದ ಬದಲಾವಣೆಯನ್ನು ಗಮನಿಸುತ್ತ—

ವೈದ್ಯರು ಗಳಿಗೆಯ ಬಟ್ಟಲತ್ತ ದೃಷ್ಟಿ ಹರಿಸಿದರು.

ಇಟ್ಟ ಗಡು ಆಗಲೇ ಕಳೆದಿತ್ತು. ವೈದ್ಯರು ಪುನಃ ಎದ್ದರು. ರೋಗಿಯ ನಾಡಿಯನ್ನು ಪುನಃ ಪರೀಕ್ಷಿಸಲಾರಂಭಿಸಿದರು.

ಆದರೆ ನಾಡಿಯ ಮಿಡಿತ ನಿಮಿಷ ನಿಮಿಷಕ್ಕೂ ಬದಲಾಯಿಸುತಿತ್ತು.

ಒಮ್ಮೊಮ್ಮೆ ಅಸ್ಪಷ್ಟ

ಮತ್ತೊಮ್ಮೆ ಅತಿ ವೇಗ! ಇನ್ನೊಮ್ಮೆ ಅತಿ ಮಂದ!

ಅವರ ಮುಖ ವಿವರ್ಣವಾಯಿತು.

ಬದ್ದೆಗ ಅದನ್ನು ಗ್ರಹಿಸಿದ. ಅವನಲ್ಲಿ ಎಲ್ಲಿಲ್ಲದ ಆತಂಕ ಮೂಡಿತು. ಕಂಸಿಸುವ ಸ್ವರದಲ್ಲಿ ಆತ 'ವೈದ್ಯರೇ—' ಎಂದು ಏನನ್ನೋ ಹೇಳಲು ಚಡಪಡಿಸಿದ. ಸೂಕ್ಷ್ಮ ಮತಿಗಳಾದ ವೈದ್ಯರು ಮಾತನ್ನು ತಿರುಗಿಸಿದರು.

'ಕಾಲ ಮಿಂಚಿಲ್ಲ. ಇನ್ನೂ ಆಸೆ ಇದೆ. ಇದು ಬಾಣಂತಿ ಸನ್ನಿ. ರೋಗ ಉಲ್ಬಣಿಸಿದೆ. ಜ್ವರ ಇಳಿದಲ್ಲಿ ಜೀವಕ್ಕೆ ಭಯವಿಲ್ಲ. ಇದನ್ನೊಮ್ಮೆ ಕೊಟ್ಟು ನೋಡುವ' ಹೀಗೆ ಜೇನು ತುಪ್ಪ ತರಿಸಿಕೊಂಡರು.

ಜೋಪಾನವಾಗಿಟ್ಟು ಕೊಂಡ ಫೂಟ್ಟಣವನ್ನು ಬಿಚ್ಚಿದರು. ಅದರಿಂದ ಚಿಟಿಕೆಯಷ್ಟು ಭಸ್ಮವನ್ನು ಹೊರ ತೆಗೆದು ತುಪ್ಪದಲ್ಲಿ ಕಲಸಿ "ಇದನ್ನು ರೋಗಿಗೆ ನೆಕ್ಕಿಸು" ಎಂದು ದಾದಿಗೆ ಸೂಚಿಸಿದರು-

ಬಹು ಪ್ರಯಾಸದಿಂದ ಚಂಪಾ ಆ ಕೆಲಸವನ್ನು ನಿರ್ವಹಿಸಿದಳು.

ತೇಲಿ ಹೋಗುವವರು ಹುಲ್ಲು ಕಡ್ಡಿಯನ್ನು ಆಶ್ರಯಿಸುವಂತೆ ಆಶ್ಲೇಷಿದ್ದವರು ಹೊಸ ಭರವಸೆಯನ್ನು ತಂದುಕೊಂಡರು.

ವೈದ್ಯರ ಸೆಣಸಾಟ, ಕಾಣದ ಕೈಯೊಡನೆ ನಡೆಸುವ ಸಾಹಸ. ಆದರೂ ಅದು ಕಾಲದ ಮುಂದು ಮಕ್ಕಳಾಟ ಎನಿಸದಿರಲಿಲ್ಲ.

ರೋಗಿ ಪುನಃ ಕಣ್ತೆರೆದಳು.

ಹೋದ ಜೀವ ಮರಳಿ ಬಂಪಂತಾಯಿತು ಆಲ್ಲಿದ್ದವರಿಗೆ.

ರೋಗಿ ಚಂಪೆಯತ್ತ ಕಣ್ಣು ಹೊರಳಿಸಿ, ಕಿವಿಗೊಟ್ಟು ಕೇಳಿದರೂ ಕೇಳಿಸದಷ್ಟು ಕ್ಷೀಣವಾದ ಸ್ವರದಲ್ಲಿ 'ಮಗು ಮಲಗಿದೆಯಾ! ಅದನ್ನೊಮ್ಮೆ ತೋರಿಸು. ಕಣ್ತುಂಬ ನೋಡುವ ಆಸೆ' ಎಂದಳು.

ಅವಳ ಅಪೇಕ್ಷೆಯಂತೆ ಮಲಗಿದ್ದ ಮಗುವನ್ನು ಎತ್ತಿ ತಂದು ಅವಳ ಮುಂದು ಹಿಡಿಯಲಾಯಿತು.

"ಎಲ್ಲ ಆನಂತೆ. ಎರಕ ಹೊಯ್ದಂತಿದೆ." ಹೀಗೆ ಗುಣುಗುಣಿಸಿ ಏನೋ ನೆನೆಸಿಕೊಂಡು 'ಅವರು ಇಂದು ಬಂದೇ ಇಲ್ಲವೇ? ಅವರನ್ನು ಕಂಡು ಮಾತನಾಡುವುದಿತ್ತು. ಈ ಕಂದಮ್ಮನನ್ನು ಅವರ ಉಡಿಯಲ್ಲಿ ಹಾಕುವುದೊಂದು ಉಳಿದಿತ್ತು- ರಾಜಕಾರಣದಲ್ಲಿ ಸಿಲುಕಿ ಕೊಂಡವರಿಗೆ ಸಮಯವೆಲ್ಲಿದೆ—?"

ರೋಗಿಗೆ ಬಂದವರ ಗುರುತು ಸಿಗುತ್ತಿಲ್ಲ; ಅಭ್ಯಾಸ ಬಲದಿಂದ ಮಾತನಾಡುತಿದ್ದಾಳೆಂಬುದು ನಿಚ್ಚಳವಾಯಿತು.

ಆದನ್ನು ತಿಳಿದ ನರಸಿಂಹ ಅವಳ ಹತ್ತಿರಕ್ಕೆ ಸರಿದು 'ಇಲ್ಲಿಯೆ, ನಿನ್ನ ಬಳಿಯೇ ಇರುವೆನಲ್ಲಾ ಚಿನ್ನ' ಎಂದು ಮಾತನಾಡಿಸಿದ.

"ನನ್ನ ರಾಜಾ! ಅಂತೂ ಬಂದಿರಾ? ನಿಮಗೆ ಬರಲಾಗುತ್ತದೆಯೋ- ಇಲ್ಲವೋ ಎಂದು ಭಯಗೊಂಡಿದ್ದೆ. ಹಾಳು ಆಸೆಯೊಂದಿದೆಯಲ್ಲ—' ಆಕೆ ಅರ್ಧಕ್ಕೇ ಮಾತು ನಿಲ್ಲಿಸಿದಳು.

'ಏನು ದೇವಿ, ನಿನ್ನ ಮನೋಗತ?'

'ನೀವು ಹೀಗೆಯೇ ನನ್ನ ಬಳಿ ಕುಳಿತಿರಬೇಕು. ನಿಮ್ಮ ಮುಖ ದರ್ಶನ ಆಗುತ್ತಿರಬೇಕು ನನಿಯದಲ್ಲಿ ಈ ಕಂದ ಕೇಕೆ ಹಾಕುತ್ತ ಮಲಗಿರಬೇಕು. ನಿಮ್ಮ ಮುಖಾವಲೋಕನ ಕಣ್ಣಿಗೆ ತಂಪೆರಲಂತೆ ಕಂದನ ಕೇಕೆ ಕಿವಿಗೆ ಇಂಪು. ಆದರಿಂದ ಮನಸ್ಸಿಗೆ ಸೊಂಪು. ಇಷ್ಟು ಕೊನೆಯವರೆಗೂ ದಕ್ಕಿದರೆ ನಾನು ಕೃತಾರ್ಥಳು.'

ಹೀಗೆ ನುಡಿದು ಆಕೆ ನಿಡುಸುಯ್ಲೊಂದನ್ನು ಬಿಟ್ಟಳು.

'ಹೆಚ್ಚು ಮಾತನಾಡಬೇಡ. ಆಯಾಸವಾಗುತ್ತೆ. ಮಲಗಿಕೋ! ನಾನಂತೂ ಕೋಣೆ ಬಿಟ್ಟು ಕದಲುವುದಿಲ್ಲ. ಇಲ್ಲೇ ಇರುತ್ತೇನೆ. ತಿಳಿಯಿತೇ'

'ನೀವಿಲ್ಲಿ ಕುಳಿತು ನಿದ್ದೆ ಕೆಟ್ಟರೆ ನಾಳಿನ ಕೆಲಸ ಯಾರು ಮಾಡುತ್ತಾರೆ? ದಣಿವು ಇದೆ. ಆದರೆ ದಣಿವು ಎಂದು ಮೌನವಾಗಿರುವುದಕ್ಕೆ ಸಾಧ್ಯವೇ? ಎಷ್ಟೋ ದಿನಗಳ ನಂತರ ಬಂದಿರಿ. ಹೇಳಿ ಬಿಡಬೇಕು ಎಂಬ ಆತುರ. ಹೇಳಿ ಈ ಹೃದಯ ಹಗುರ ಮಾಡಿಕೊಳ್ಳಬೇಕು. ಆದರಿಂದ ನನ್ನ ಮನಸ್ಸಿಗೆ ನೆಮ್ಮದಿ. ಬಚ್ಚಿಟ್ಟುಕೊಂಡ ಭಾವಗಳು ಈಚೆಯೊಡೆದು ಬರಲಾರಂಭಿಸಿವೆ. ಏನು ಮಾಡುವುದು?ಹೇಳಲಾಗುವುದಿಲ್ಲ. ಹೇಳದೆ ಇರುವಂತಿಲ್ಲ.'

"ಹೇಳುವೆಯಂತೆ. ಅದಕ್ಕೇಕೆ ಇಷ್ಟು ಅವಸರ? ಮೊದಲು ನಿನ್ನ ದೇಹ ಸ್ಥಿತಿ ಸುಧಾರಿಸಲಿ. ಅನಂತರ ಇದ್ದೇ ಇದೆಯಲ್ಲ ಬಿಡುವು. ಆಗ ಹೇಳುವೆಯಂತೆ"

'ಆರೋಗ್ಯ. ಅದಿನ್ನು ಸುಧಾರಿಸುವುದೂ ಇಲ್ಲ. ನಾನು ಮೊದಲಿನಂತಾಗುವುದೂ ಇಲ್ಲ ಪ್ರಭು! ನಾನಿನ್ನು ಬಹಳ ದಿನ ಬದುಕಿ ಉಳಿಯಲಾರೆ. ನನ್ನ ಅಂತರಾತ್ಮ ಹಾಗೆ ಹೇಳುತ್ತಿದೆ. ಅದರಿಂದಲೇ ಒಳಗಿರುವುದನ್ನು ಹೇಳುವ ಚಪಲ.'

ಈ ಮಾತುಗಳನ್ನು ಕೇಳಿ ನರಸಿಂಹನ ಕಣ್ಣುಗಳು ತೇವಗೊಂಡವು.

"ನೀವು ಚಿಂತಿಸ್ತಿದ್ದೀರಾ? ಆಳಲು ಏನಾಗಿದೆ? ನೀವು ಅಳಬಾರದು. ಅಳುವವರು ಹೆಂಗಸರು; ಹೇಡಿಗಳು.' ಎಂದು ಬಿಳಚಿಕೊಂಡ ತನ್ನ ಕೋಮಲ ಬೆರಳುಗಳಿಂದ ಅವನ ಕಂಬನಿಯನ್ನೊರಸಿ "ನೀವು ಅತ್ತರೆ ನನಗೆ ಸಂಕಟವಾಗುತ್ತೆ. ಅಳಬೇಡಿ ನನ್ನ ರಾಜಾ! ನೀವು ಸದಾ ನಗುತ್ತಿರಬೇಕು. ನನ್ನ ಸಾವಿಗಾಗಿ ದುಃಖಿಸುತ್ತೀರಾ? ಮರಣಕ್ಕೆ ಅಂಜಬಾರದೆಂದು ನೀವೇ ಹಿಂದೊಮ್ಮೆ ಹೇಳಿದ ನೆನಪು. ಮೃತ್ಯು ಭೀತಿಯನ್ನು ಮೆಟ್ಟಿನಿಂತ ನನ್ನ ಸ್ವಾಮಿ, ನನ್ನ ಸಾವಿಗೆ ಅಳುವುದು ನ್ಯಾಯವೇ? ನೋಡಿದವರು ನಗರೇ? ಹೆಣ್ಣಿನ ಮೇಲಿನ ಮೋಹದಿಂದ ನೀವು ಮಕ್ಕಳಂತೆ ಪಲುಬಿದರೆ ಜನ ಏನೆಂದಾರು? ಈ ಜನ ನಿಂದೆ ನಿಮ್ಮ ಮೇಲೆ ಬರಬಾರದು. ಅದನ್ನು ಕೇಳಿದರೆ ನಾನು ಇಳಿದೇ ಹೋಗುತ್ತೇನೆ. ಎದೆಗುಂದ ಬೇಡಿ. ಹೃದಯವನ್ನು ಕಲ್ಲುಮಾಡಿಕೊಳ್ಳಿ. ನನ್ನ ಪ್ರೀತಿಯ ನೆನಪಿಗೆಂದು ಬಿಟ್ಟು ಹೋಗುವ ಈ ಕಾಣಿಕೆಯನ್ನು ಜತನದಿಂದ ಬೆಳೆಸಿ ಎಲ್ಲವನ್ನು ಮರೆತು ಬಿಡಿ" ಎಂದು ಮಗುವಿನ ಕಡೆ ಬೊಟ್ಟು ಮಾಡಿದಳು.

(ಮುಂದುವರಿಯುವುದು)

NAVAYUGA 10-2-1972
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಶ್ರೀ ಸಾಮಾನ್ಯನ ಸಂಸತ್ತಿನಲ್ಲಿ

ನಿಕ್ಸನ್ ಧೋರಣೆ ಹೇಗೆ?

ವಿಶ್ವದ ಶ್ರೀಮಂತ ದೇಶಗಳಲ್ಲೊಂದಾದ ಅಮೇರಿಕೆಯು ರಾಷ್ಟ್ರಾಧ್ಯಕ್ಷರಾಗಿರುವ ನಿಕ್ಸನ್‌ರವರು ಉಲ್ಲಾಸವೊಂದನ್ನು ಹೊಡಿಸ್ಥೇ ಇಲ್ಲವೆ, ಕವಳಿ ಬಿಸ್ಥರೂ ಮೊಗುಸೇಲೆ ಎಂದು ಹೇಳುವುದರಲ್ಲಿ ತನ್ನ ಜಾಣತನವನ್ನು ಸ್ರದರ್ಶಿಸಿದ್ದಾರೆ. ಈ ಮೊಡ್ಡ ಮೇರೆ ಸಿಸ್ಥ ಮೊರೆಗೆ ಉಲ್ಲಾ ಶ್ರೀ ಸಾಮಾನ್ಯನೊಬ್ಬನಿಗೂ ತಲೆನಪ್ಪು ನಿವೇಕವು ಉಭಾವವಾಗಿತ್ತೆಂಬುದನ್ನು ಕಡೆನ ಫಾರ ಓ-ವಾಕ್ ಮುಷ್ಟಿದಲ್ಲಿಯೇ ನಾವು ಗಮನಿಸಬಹುದಾಗಿದೆ

ಬ್ಯಕ್ತ ಧಾರಣೆ ರಾಷ್ಟ್ರವೊಂದಕ್ಕೆ ಸಿಡಿಮುಮೋದ ಭಾಗವೇ ವಾಕ್‌ಸ್ವಾತಂತ್ರ್ಯ. ಆನು ಬರಿವೇ ಕಾಲುಕೆವರಿ ನೆಲ್ಮ ಮೇಲೆ ಯುದ್ಧ ನಾರಿವಾಗಲೂ ಸಹನೆಯಿಂದ ಅವನ್ನೆಮರಿಸಿ ನಾವು ಬಿಡಿಮೆ ವಾಷ್ಟ್ರವೆಂಬ ವಿನೇಕವಲ್ಲಿ ಕಾಶ್ಮೀರವೆ ಕೆಲವು ಭಾಗಗಳನ್ನೂ ಇವರ ಆಕಪೆಕ್ಷೆಗೆ ಇದುವರೆಗೂ ಬಿಟ್ಟು ಕೊಟ್ಟಿದ್ದೇವೆ. ಮುಕ್ತ ರಾಷ್ಟ್ರ ಸಂಸ್ಥೆ. ವಿಶ್ವ ಸಂಸ್ಥೆ ಮೊದಲಾದ ಶಾಂತಿ ರಕ್ಷಣಾ ಸಮಿತಿಗಳೇ ಏಕೆ, ತಾನ್ಸೆಂಗ್ ಒಪ್ಪಂದ ಕೂಡಾ ನಮಗೇ ಬರೆಯೆಳೆಯಿತೆಂಬುದನ್ನು ಮರೆಯಬಾರದು. ಆದರೂ ಭಾರತೀಯರು ನೋಲುತ್ತಲೇ ಬಂದಿದ್ದಾರೆ.

ಮೊನ್ನೆ ದಶಂಬರದಲ್ಲೂ ನನ್ನು ಗಡಿ ರಕ್ಷಣಾ ವ್ಯವಹಾರ ಮೇಲೆ ಪಾಕಿಸ್ತಾನ ಹಲ್ಲೆ ಮಾಡಿದಾಗ ನಾವು ಮುಂಮಸರಿಯುವುದು ಅನಿವಾರ್ಯವಾಯಿತು. ತಕ್ಷಣ ಜನರಲ್ ಯಹ್ಯಾಖಾನರು ಯುದ್ಧ ಸಾರಿದರು. ಆಗ ಅಲಿಯನ್ಸ್ ಕುರಿತು ಬೆಳಗಾಗಾಗ ತಿಳಿಯಿತು. ಸಮಯಕ್ಕಾದವನ ನೆಟ್ಟಿ, ಆಪತ್ತಿಗೊದಗಿದವ ಬಂಟನೆಂಬ ಗೂತ್ತಾಯಿತು.

ಬಂಗ್ಲಾನ ಅಸಂಖ್ಯಾತ ನಿಷ್ಪಾಪಿಗಳ ಕಗ್ಗೊಲೆಗೆ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಸುತ್ತಿದ್ದ ಅಮೇರಿಕ ಯುದ್ಧ ಸುರುವಾಮೆನೇ ತಡ, ಒಂಸೇ ಸವನೆ ಪಾಕಿಗೆ ಶಸ್ತ್ರಗಳನ್ನು, ಫೈಟರ್ ಪ್ಲೇನ್‌ಗಳನ್ನು, ಬಾಂಬು-ಟ್ಯಾಂಕು ಇತ್ಯಾದಿಗಳನ್ನು ಕಳುಹಿಸಿ ಹುರಿದುಂಬಿಸಿತು. ರೇಡಾರ್ ಸಂದೇಶ ಕೇಂದ್ರಗಳನ್ನು ನಿರ್ವಹಣೆಗೊಳಿಸುವ ಸಾಧನಗಳನ್ನೂ ಕೂಡ ಭಾರತದಲ್ಲಿ ಸ್ಥಾಪಿಸಲು ಪಾಕಿಗೆ ರವಾನಿಸಿತು ನಿಷ್ಪಸಂಶೆಯಲ್ಲಿ ಭಾರತ-ವಾಕ್‌ಗಳ ಕುರಿತು ನಡೆದ ಮತದಾನದಲ್ಲಿ ಭಾರತದ ನಿರುದ್ಧ ಮತ ಚಲಾಯಿಸಿತು. (ಸಿಂಹಳವ ಸಿನಿಮೂವೊ ಬಂಡಾರ ನಾಯಿಕೆಯನರಿಗೆ ಮೆಣಸು ಹೋಗಬೇಕಾದ್ದು ಭಾರತದಿಂದ ಆದರೆ ತಮ್ಮ ಚಪಾದ ನೆರಕುಗಳಿಗೆ ಎಲ್ಲಿ ಬೆಲೆ ಬೀಳಬಹುದೋ ಎಂದನರು ಭಾರತದ ವಿರುದ್ಧವೇ ಅಮೇರಿಕೆಯ ಪಕ್ಷ ವಹಿಸಿ ಮತು ಹಾಕಿದ್ದರು) ಅದನರಿಗೆ ಭಾರತಕ್ಕೆ ಮಿತ್ರರಂತಿದ್ದ ಅನೇಕ ರಾಷ್ಟ್ರಗಳ ಬಣ್ಣ ಬದಲಾಯಿಸಿತು. ಭಾರತದ ಪತನಕ್ಕೆ ನಿಕ್ಸನ್ ಸಾಕಷ್ಟು ಪ ಪಡೆಸಿದರು.

ಭಾರತವಲ್ಲಿ ಹೆಣ್ಣೊಬ್ಬಳ ಆಳ್ವಿಕೆಯಿರಬಾರದು. ಅದರೆ ಶಾಂತಿ ಸಮಿತಿಯ ಬೃಹತ್ ರಾಷ್ಟ್ರ ನಿಷ್ಪಾಪಿ ದೇಶ ಅದೆಂದು ವಿಶ್ವದ ರಾಷ್ಟ್ರಗಳೆಲ್ಲಾ ತಿಳಿಯಬೇಕಿತ್ತು. ಅಬ್ದುಲ್ ನಾಸೆರ್ ನಾಯುವ ವರೆಗೂ ಸುಯೆಜ್ ಕಾಲುವೆಯನ್ನು ಪ್ರತಿಬಂಧಿಸಿ, ಪಾಕಿನ ಯಾವ ನೌಕೆಯೂ ಭಾರತದತ್ತ ನುಗ್ಗದಂತೆ-ತಡೆದಿದ್ದರು. ಅವರು ಸತ್ತ ಮೇಲೆ ಅದೂ ಇಲ್ಲ. ಈ ಸಂಕಟ ಸಮಯದಲ್ಲಿ ನಮಗೆ ಬೆಂಗಾವಲಿತ್ತ ಏಕೈಕ ಆಪದ್ಬಾಂಧವ ಮಿತ್ರರಾಷ್ಟ್ರವೆಂದರೆ ರಶಿಯವೇ ಸೈ.

ನಿಕ್ಸನ್ನರು ತಮ್ಮ ತನವನ್ನು ಮರೆತರು. ಭಾರತದ ಸ್ನೇಹ ಹಸ್ತವನ್ನು ಮುರಿದಿಕ್ಕಿದರು. ಹಿಂದಿದ್ದ ಅಬ್ರಹಾಂ ಲಿಂಕನ್, ಜಾನ್ ಕೆನೆಡಿ ನೊದಲಾದವರು ಭಾರತಕ್ಕೆ ಕೊಟ್ಟಿದ್ದ ಬೆಲೆ, ಗೌರವ, ಸ್ನೇಹಗಳ ಪಾಖಲೆಗಳನ್ನು ಸುಟ್ಟು ಹಾಕಿ ಸಕಲನನ್ನೂ ಮರೆತು, ಭಾರತವನ್ನುದ್ರೋಹದ ಕತ್ತಿಯಿಂದ ಇರಿದರು. ಪಾಕಿನ ಸಹಾಯಕ್ಕಾಗಿ ಏಳು ಬೃಹತ್ ನೌಕೆಗಳ "ಎಂಟರ್ ಪ್ರೈಸ್" ದಳವನ್ನು ಕಳುಹಿಸಿಕೊಟ್ಟರು. ಆದರೆ ದುರದೃಷ್ಟ! ಅಮೇರಿಕಕ್ಕೆ ಎಲ್ಲಿದ್ದರೂ ವಿರೋಧಿಗಳೇ- ಕ್ಯೂಬಾದ ಗಸ್ತಿದಳದವರು ಆದರಲ್ಲಿ ಒಂದನ್ನಾಕೆಯನ್ನು ಮುಳುಗಿಸಿದರು. ಅದರೊಂದಿಗೆ ರಶಿಯದ ಇಪ್ಪತ್ತು ಯುದ್ಧ ನೌಕೆಗಳು ನಮ್ಮತ್ತ ಬರುತ್ತಿದ್ದವೆನ್ನಿ. ಹೀಗಾದರೂ ವಾಕ್ ಗೆಲ್ಲಲ್ಲಿಲ್ಲ; ಅಮೆರಿಕ ನಾಲಗೆ ಮಸಿದದ್ದೇ ಲಾಭ.

ಅಮೇರಿಕೆ ಒಂದು ಘನತೆವೆತ್ತ ರಾಷ್ಟ್ರ. ಅದು ತನ್ನ ಗಾಯದ ಉರಿಯನ್ನು ಈ ಸಂದರ್ಭದಲ್ಲಿ ದಕ್ಷಿಣ ವಿಯಟ್ನಾಮಿನ ಮೇಲೇ ಕಾರಿ, ಬಾಂಬು ಹಾಕಿ, ಯುದ್ಧದ ಕಹಳೆಯೆಬ್ಬಿಸಿದುದು ಆಕ್ಷಮ್ಯ. ಮುಜಿಬರ ಬಿಡುಗಡೆಯಲ್ಲಿ ಅಮೇರಿಕ ತೋರಿದ ಔದಾಸೀನ್ಯ ಕರಾಳ. ಅಮೇರಿಕದ ಗೌರವ ನಿಕ್ಸನ್ನರ ಕಾಲದಲ್ಲಿ ಮಣ್ಣು ಪಾಲಾದುದು ಶೋಚನೀಯ ಆದರೂ ಯುದ್ಧದಲ್ಲಿ ಭಾರತ ಗೆದ್ದಾಗ ರಶಿಯಕ್ಕೆ ಶ್ಲಾಘನೆಯ ಪತ್ರ ಬರೆದುದು ಅವರ ವಿಸನೆಗೆ ಮಣ್ಣಾಗದ ಬುದ್ಧಿಯೇ ನಿಜ. ಬರುವ ಚುನಾವಣೆಯಲ್ಲಿ ಇವೇ ದುರಾಡಳಿತದ ನಿಕ್ಸನ್ ಗದ್ದುಗೆಯೇರಿ, ಇನ್ನೆಂಥ ದುರ್ಬಲ ರಾಷ್ಟ್ರಗಳ ಮಣ್ಣು ಗೂಡಿಸುತ್ತಾರೋ ಅಥವಾ ಕರುಣಾಳು ಸೆನೆಟರ್ ಕೆನೆಡಿ ಚುನಾಯಿತರಾಗಿ ಕೆಲವು ಸಾಧು ರಾಷ್ಟ್ರಗಳಿಗೆ ಸಹಾಯವೀಯುತ್ತಾರೋ ಎಂಬುದನ್ನು ಕಾದು ನೋಡಬೇಕು..

ಭಾರತದಲ್ಲಿ ಅಮೇರಿಕದ ರಾಯಭಾರಿಯಾಗಿದ್ದ ಗಾಲ್‌ಬ್ರೈತ್ ಮತ್ತು ವಿಶ್ವದ ಅಸಂಖ್ಯಾತ ಸಂಭಾವಿತರು ಅಮೇರಿಕದ ಈ ಕುಟಿಲ ನೀತಿಯನ್ನು ಖಂಡಿಸಿದ್ದಾರೆ. ಅವಾಮಿಲೀಗಿನ ಪತನಕ್ಕೆ ವಾಕಿಗೆ ಮಿಲಿಟರಿ ನೆರವು ಕಳುಹಿಸುವ ಬದಲು ಅಮೇರಿಕ ತಾಟಸ್ಥ್ಯ ನೀತಿ ತಾಳಿದ್ದರೇ ಚೆನ್ನಾಗಿತ್ತು. ಭಾರತ ಹೊತ್ತ ಒಂದು ಕೋಟಿ ನಿರಾಶ್ರಿತರ ಹೊರೆಯ ಭಾರವನ್ನು ಅಮೇರಿಕ ಅರಿಯಬೇಕಿತ್ತು.

ಚುನಾವಣೆ ನವಂಬರದಲ್ಲಿ ನಡೆಯಲಿರುವುದರಿಂದ ನಿಕ್ಸನ್ನರು ವಿಯೆಟ್ನಾಮಿನಿಂದ ತನ್ನ ನೇನೆಯನ್ನೆಲ್ಲ ವಾಪಾಸಾತಿ ಮಾಡಿಕೊಳ್ಳಲಿದ್ದಾರೆ. ಚೀನದೊಂದಿಗೆ ಸ್ನೇಹವಲ್ಲದೆ ಅದಕ್ಕೆ ಅಧಿಕೃತ ಮನ್ನಣೆ ಕೊಡುವುದಿಲ್ಲವೆಂದು ಅವರು ಹೇಳಿದ್ದಾರೆ. ಏನೆಂದರೂ ಅಮೇರಿಕದಂಥ ಅಪಾಯಕಾರಿ ದೇಶ ಅದಷ್ಟೂ ದೂರವಿರುವುದೇ ಉತ್ತಮ. ನಿಕ್ಸನ್ ಬೇಕಾದಂತೆ ಬದಲಾಯಿಸಿಕೊಳ್ಳಬಲ್ಲರೆಂಬುದಕ್ಕೆ ಇದೇ ನಿದರ್ಶನ. ಅವರು ಹೇಯ ಧೋರಣೆಯನ್ನು ಆಡಿಕೊಳ್ಳ ಬಲ್ಲರು; ಅದನ್ನು ಸಮರ್ಥಿಸಲೂ ಅಲ್ಲಗಳೆಯಲೂ ಅವರಿಗೆ ಜೆನ್ನಾಗಿ ಗೊತ್ತಿದೆ.

—ಶ್ರೀ ಹ. ರಾಮಕೃಷ್ಣ ಶಾಸ್ತ್ರಿ

●●

(ಒಂದನೇ ಪುಟದಿಂದ)

ಹೊರಕಳಿಸಬೇಕೆಂದು ಬಯಸಿದರಂತೆ;ಹಾಗಾಗಿ ಶ್ರೀ ಸುಖಾಡಿಯೂ ತುಸು ಬೇಗನೇ ಮಾನ್ಯ ಸುಖಾಡಿಯೂ ಆದರು. ರಾಜಸ್ತಾನದಲ್ಲಿ ಸಲ್ಲದ ಸುಖಾಡಿಯೂ ಕರ್ನಾಟಕದಲ್ಲಿ ಸಲ್ಲುತ್ತಾರೆ. ಶ್ರೀ ಧರ್ಮವೀರರು ತಿರುಗಿಸಿದ ಧರ್ಮಚಕ್ರ ಇನ್ನೆರಡು ತಿಂಗಳು ತಿರುಗಿದರೆ, ಮುಂದೆ ಜನಪ್ರಿಯ ಸರಕಾರ ಬಂದೇ ಬರುತ್ತದೆ ಆಗ ಮಾನ್ಯ ಸುಖಾಡಿಯೂ ಸುಖವಾಗಿ ನಿವೃತ್ತ ಜೀವನ ಬದುಕ ಬಹುದು.

ಹೊಸ ರಾಜ್ಯವಾಲರಿಗೆ ಸ್ವಾಗತ. ಅವರ ಅಧಿಕಾರಾವಧಿ ಜನಸಮಾನ್ಯರಿಗೆ ಶುಭ ಪ್ರದವಾಗಲೆಂದು ಹಾರಯ್ಕೆ.

●●

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 449/71. in O. S. 59/1970.

ಮುಕಾಂಬಿಕೆ ಅಂದು —ಅರ್ಜಿದಾರಳು,
ಲೋರೆನ್ಸ್ ಸೂರ್ಕ ಡಿ'ಸೋಜ ಕೂಡಾ ಎದ್ರಿರು.

1ನೇ ಎದ್ರಿ ಲೋರೆನ್ಸ್ ಸೂರ್ಕ ಡಿ'ಸೋಜ, ಪ್ಯಾಸ್ಸಿನ್ ಡಿ'ಸೋಜರ ಸುಗ, ಬೆಳ್ತಂಗಡಿ ತಾಲ್ಲೂ ಬೆಳ್ತಂಗಡಿ ಕ್ಷೇಮಾ ಗ್ರಾಮ ಕೋಸ್ಕ್ಯ. ಬೆಳ್ತಂಗಡಿ ಇವರಿಗೆ.

ಅರ್ಜಿದಾರರು ದಾಕ್ಲು ಮಾಡಿದ ಸೇಲಿನ ಅಮಲ್‌ಜ್ಞಾರಿಯು ತಾ. 7-3-1972ಕ್ಕೆ ನಿಮ್ಮ ಹಾಜರಾತಿಯ ಬಗ್ಗೆ ಇರುತ್ತದೆ. ನೀವು 7-3-1972ಕ್ಕೆ ಬೆಳಿಗ್ಗೆ 11 ಗಂಟೆಗೆ ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಂದ ಕೋರ್ಟಿನವರಿಗೆ ಯುಕ್ತ ಕಂಡಂತೆ ಮುಂದು ವರಿಸಲಾದೀತೆಂತ ಈ ಮೂಲಕ ತಿಳಿಸಲಾಗಿದೆ.

(By Order of Court)

Pulu Narayana Bhat
Advocate for Petitioner.

Belthangady, 29-1-72.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. No 532/1971.

ರುಕ್ಮಿಣಿ —ವಾದಿ.
ಉಂಪಕ್ಕೆ, ಕೊರಪೊಳು ಮಗಳು, ಪುತ್ತೂರು ತಾಲ್ಲೂ ಪಡುವನ್ನೂರು ಗ್ರಾಮದ ಕುದ್ವಾಡಿಯಲ್ಲಿ —ಪ್ರತಿವಾದಿ.

ಇವರೀಗೆ ಕೋರ್ಟು ಹ್ಯುಂ ಪ್ರಕಾರ ತಿಳಿಸುವುದೇನೆಂದ್ರೆ

ವಾದಿಳು ನಿಂಮ ಮೇಲೆ ನಾಕ್ಲು ಮೂಡಿದ ಮೇಲ್ಕಂಡ ದಾವೆಯು ತಾರೀಕು 20-2-72ಕ್ಕೆ ನಿಂಮ ಹಾಜರಾತಿಗೆ ಯಿಟ್ಟಿರುವುದರಿಂದ ಅದಕ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ರೆ , ಸದ್ರಿ ದಿನ್ನ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಮೇಲ್ಕಂಡ ಕೋರ್ಟು ಮುಂದೆ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ರೆ ನಿಂಮ ಗೈರುಹಾಜರಿಯಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋಣಾಗಿಗಿಯದೆ.

(Sd) B. Ishwara Bhat
Advocate for Piff.

ಪುತ್ತೂರು, ತಾ. 2—2—1972.

Edited, Printed & Published by K. U. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೨೪

NAVAYUGA

17-2-1972

"ಪಂಪಭಾರತ-ಒಂದು ನಿವೇಶ"

ಲೇಖಕರು:- ಶ್ರೀ ಬಿ. ಕೃಷ್ಣಪ್ಪ, ಭದ್ರಾವತಿ.

ನಮ್ಮ ಪ್ರಾಚೀನ ಕತೆ, ಕಾವ್ಯಗಳನ್ನು ಇಂದು ಹೊಸ ವೈಜ್ಞಾನಿಕ ದೃಷ್ಟಿಯಿಂದ ನೋಡಿ ವಿಶ್ಲೇಷಿಸುವ ಅಗತ್ಯವಿದೆ. ಅವುಗಳ ಮೌಲಿಕ ಸತ್ಯಗಳು ಕಾಲಾತೀತವಾದುವೆ? ಹಾಗಿದ್ದರೆ ಅವುಗಳ ಅಂತಃಸತ್ವಗಳೇನು? ಎಂಬುದರ ನಿಷ್ಕರ್ಷೆ ಆಗಲೇಬೇಕು ಈ ನಿಟ್ಟಿನಲ್ಲಿ ಪಂಪಭಾರತದ ಒಂದುಸುಟ್ಟ ನಿವೇಶ ನಾನು ಮಾಡಿರುವ ಒಂದು ಕಿಂಚಿತ್ ಪ್ರಯತ್ನ.

ಅರ್ಜುನನನ್ನು ವಧಿಸಲು ಕರ್ಣ ಪ್ರಯೋಗಿಸಿದ ಸರ್ಪಾಸ್ತ್ರ ವಿಫಲವಾಯಿತು. ತಾನು ಹೇಳಿದಂತೆ ಆಸ್ತ್ರಪ್ರಯೋಗ ಮಾಡಲಿಲ್ಲವೆಂದು ಬೇಸರಿಸಿ ಶಲ್ಯ, ಏಕಾಗ್ರಾಹಿಗೆ, ಒರಟನಿಗೆ ನಾನು ರಥವನ್ನು ನಡೆಸಲಾರೆ ಎಂದು ಯುದ್ಧ ಮಧ್ಯದಲ್ಲಿ ರಥವನ್ನು ಬಿಟ್ಟು ಹೊರಟುಹೋಗುತ್ತಾನೆ. ಕರ್ಣನಿಗೆ ಸಾರಥಿ ಇಲ್ಲವಾಗುತ್ತದೆ. ನನ್ನ ತೋಳಬಲ ಮತ್ತು ಬಿಲ್ಲುಗಳೇ ನನ್ನ ಸಹಾಯಕರು ಎಂದು ಭಾವಿಸಿ ಕರ್ಣ ರಥವನ್ನು ತಾನೇ ಜೋಡಿಸಿ ಅರ್ಜುನನಿಗೆ ಎದುರಾಗುತ್ತಾನೆ. ಹೀಗಿರುವಲ್ಲಿ ಭೂದೇವಿ ಮತ್ಸರಿಸಿ ಅವನ ರಥದ ಗಾಲಿಗಳನ್ನು ನುಂಗಿ ಬಿಡುತ್ತಾಳೆ. ದುರ್ದೈವಿ ಕರ್ಣ ರಥದಿಂದ ಇಳಿದು ಗಾಲಿಗಳನ್ನು ಎತ್ತುವುದರಲ್ಲಿ ಮಗ್ನನಾಗುತ್ತಾನೆ. ಈ ಕಡೆ ಕೃಷ್ಣ ಇದೇ ತಕ್ಕ ಸಮಯವೆಂದು ತಿಳಿದು "ಕರ್ಣನನ್ನು ಈಗಲೇ ಕಡಿದೊಟ್ಟು. ಇಲ್ಲದೇ ಹೋದರೆ, ಆನಂತರ ಅವನನ್ನು ನೀನು ಗೆಲ್ಲಲಾರೆ ಎಂದು ಅರ್ಜುನನನ್ನು ಪ್ರಚೋದಿಸುತ್ತಾನೆ. ಆಗ ಅರ್ಜುನ ಶ್ರೀ ಕೃಷ್ಣನಿಗೆ ಹೇಳಿದ ಮಾತುಗಳು ಮನನೀಯವಾಗಿವೆ. ಪಂಪ ಹೀಗೆ ಬರೆಯುತ್ತಾನೆ—"ಬರುವಂ ಸಾರಥಿ ಇಲ್ಲ. ಮೆಯ್ಗೆ ಮರೆಯುಂ ತಾನಿಲ್ಲ, ಆದೆಂತು ಈಗಳಾನಿರಿವೆಂ? ಇಸಲುಂ ಕಯ್ಯೇಳಮು, ಏಕೆಂದುಂ ಆನರಿಯೆಂ ಕೂರ್ಮೆಯೆ ಮಿಕ್ಕು ಬಂದಪುದು. ಇದರ್ಕೆ ಏಗೆಯ್ವೆನ್? ಎನೆಂದೆನ್ ಆಂ ಮರೆದೆಂ ಮುನ್ನಿನ ಅದೊಂದು ವೈರಮನ್. ಇದು ಇಂತು ಏಕಾರಣಂ? ಭೂಧರಂ" ಎಂದು ಅರ್ಜುನ ಕೃಷ್ಣನನ್ನು ಪ್ರಾರ್ಥಿಸುತ್ತಾನೆ. ಈ ಪದ್ಯದಲ್ಲಿ ವ್ಯರ್ಥ ಎನ್ನಬಹುದಾದ ಒಂದು ಶಬ್ದವೂ ಇಲ್ಲ. ಕರ್ಣನ ಕೈಯ್ಯಲ್ಲಿ ಆಯುಧವಿಲ್ಲ, ಸಾರಥಿ ಇಲ್ಲ. ಮೈಗೆ ಮರೆಯೂ ಕವಚವಿಲ್ಲ. ಆದೆಂತು ಈಗ ನಾನು ಅವನನ್ನು ಇರಿಯಲಿ ಎಂಬುದೂ ಹೊಡೆಯಲು ಕೈಯ್ಯೇಳದು, ಏತಕ್ಕೆ ಎಂದು ನಾನರಿಯೆ ಎಂಬುದೂ ಪ್ರೀತಿಯೇ ಉಕ್ಕಿ ಬರುತ್ತಿದೆ ಇದಕ್ಕೆ ಏನು ಮೂಡಲಿ ಎಂಬುದೂ, ಏನೆಂದು ಹೇಳಲಿ ಮುನ್ನಿನ ವೈರವನ್ನು ಮರೆತುಬಿಟ್ಟಿದ್ದೀನೆ. ಇದೆಲ್ಲಕ್ಕೂ ಏನು ಕಾರಣ ಎಂಬುದೂ ಕರ್ಣನ ನಿಸ್ಸಹಾಯಕತೆಯನ್ನೂ ಅರ್ಜುನನ ಮನಸ್ಸಿನ ತೊಳಲಾಟವನ್ನೂ ಚಿತ್ರಿಸುತ್ತದೆ. ಅದರಲ್ಲೂ "ಆದೆಂತು ಈಗಳಾನಿರಿವೆಂ" ಮತ್ತು "ಇದರ್ಕೆ ಏಗೆಯ್ವೆನ್" ಎಂಬ ಮಾತುಗಳಂತೂ ಅರ್ಜುನನ ಮನಸ್ಸಿನಲ್ಲಿ ಉಂಟಾದ ಚಿತ್ತ ಕ್ಷೋಭೆಯನ್ನು ಪ್ರತಿಬಿಂಬಿಸುತ್ತದೆ. ಕರ್ಣ ಇಷ್ಟು ವರ್ಷಗಳ ವರೆಗೂ ತನ್ನ ಶತ್ರು, ತನ್ನ ಪ್ರತಿಸ್ಪರ್ಧಿ ಎಂದು ತಿಳಿದಿದ್ದ ಅರ್ಜುನ ಇದ್ದಕ್ಕಿದ್ದಂತೆ ಇಂತಹ ಭಾವಾತಿರೇಕಕ್ಕೆ ಒಳಗಾಗಿರುವುದು ಅವನಿಗೇ ಅರ್ಥವಾಗುತ್ತಿಲ್ಲ. ಇದೆಲ್ಲ ಏಕೆ ಹೀಗೆ ಆಗುತ್ತಿದೆ. ಇದಕ್ಕೆಲ್ಲ ಏನು ಕಾರಣ ಎಂದು ಪ್ರಶ್ನಿಸುತ್ತಾನೆ. ಅವನಿಗೆ ದಿಗ್ಭ್ರಮೆ ಹಿಡಿದಂತಾಗಿದೆ. ಮಂಕು ಕವಿದಂತಾಗಿದೆ. ಕರ್ಣ ಎಂದು ಸಿಕ್ಕನೋ ಕೊಲ್ಲಲಿಕ್ಕೆ ಎಂದು ಬಯಸುತ್ತಿದ್ದವನಿಗೆ ಅನಕಾಶ ಸಿಕ್ಕರುಬಾಗ ಇಂತಹ ಭಾವಾತಿರೇಕ ಉಂಟಾಗಬೇಕೆ? ಕರ್ಣ ತನ್ನ ಶತ್ರು, ಅವನು ಪಾಂಡವರಿಗೆ ಮಾಡಿರುವ ಅನ್ಯಾಯಕ್ಕೆ ಅರೆಕೊರೆಯುಂಟೆ? ಕೊಟ್ಟ ಕೋಟಲೆಗಳಿಗೆ ಲೆಕ್ಕವುಂಟೆ? ಇಂಥವನ ದುಃಸ್ಥಿತಿಯನ್ನು ಕಂಡು ಆನಂದ ಪಡಬೇಕಾಗಿರುವಾಗ ಈ ತರದ ಸಂಕಟವೇಕಾಗಬೇಕು?ಕರುಳು ಇರಿಯುವಂತಹ ವೇದನೆ! ಇದಕ್ಕೇನು ಕಾರಣ? ಅರ್ಜುನ ಕೃಷ್ಣನಿಂದ ಅಂತಹ ಕಾರಣವನ್ನು ತಿಳಿಯಲು ಇಚ್ಛಿಸುತ್ತಾನೆ. ಆದರೆ ಕೃಷ್ಣನನ್ನು ಹೊರತು, ಶತ್ರು ಪಕ್ಷದಲ್ಲಿ ನಿಂತು ಹೋರಾಡುತ್ತಿರುವ ಕರ್ಣ ನಿನ್ನ ಅಣ್ಣ ಎಂದು ಅರ್ಜುನನಿಗೆ ತಿಳಿಸಬಲ್ಲವರಾರು? ಯುದ್ಧ ಮಧ್ಯದಲ್ಲಿ ಕತ್ತಿಗಳು ಮಸೆದಿರುವಾಗ ಹಾಗೆ ಹೇಳಲಿಕ್ಕೆ ಬಂದೀತೆ? ಕರ್ಣ–ಪಾಂಡವರು ಅಣ್ಣ ತಮ್ಮಂದಿರು ಎಂದು ಹೇಳಬೇಕಾಗಿದ್ದ ಕಾಲ ಮೀರಿಹೋಗಿದೆ, ಮಿಂಚಿಹೋಗಿದೆ. ಸೋದರತ್ವದ ಪ್ರೀತಿ ಮಮತೆಯ ಗಡಿಯನ್ನು ಮೀರಿ ಅವರು ಬಹುದೂರ ಸಾಗಿದ್ದಾರೆ. ಹೀಗಿರುತ್ತ ರಣರಂಗ ಮಧ್ಯದಲ್ಲಿ ಅರ್ಜುನನಿಗೆ ಕರ್ಣ ನಿನ್ನ ಅಣ್ಣ ಎಂದು ಹೇಳುವುದು ಉಚಿತವಲ್ಲವೇನೋ! ಅದು ಮತ್ತೊಂದು ಮಾನಸಿಕ ಕ್ಲೇಷಕ್ಕೆ ದಾರಿ. ಒಂದು ಹೋಗಿ ಮತ್ತೊಂದು ಸಂಭವಿಸುವ ಸಾಧ್ಯತೆಗಳು ಉಂಟು. ಪೂರ್ವ ನಿಯೋಜಿತ ಗುರಿಯನ್ನು ಮುಟ್ಟಲು ಸಾಗುತ್ತಿರುವವರಿಗೆ ಮಧ್ಯೆ ಪಥಭ್ರಾಂತಿಯನ್ನುಂಟು ಮಾಡುವುದು ಸಭ್ಯತೆಯ ಲಕ್ಷಣವಲ್ಲ. ಆಲ್ಲದೆ ಅರ್ಜುನನಿಗೆ ಕರ್ಣ ನಿನ್ನ ಅಣ್ಣ ಎಂದು ಹೇಳುವುದರಿಂದ ಬರಬಹುದಾದ ಲಾಭಕ್ಕಿಂತ, ಕರ್ಣನನ್ನು ಕೊಲ್ಲಿಸುವುದರಿಂದ ಬರಬಹುದಾದ ಲಾಭವೇ ಜಾಸ್ತಿ. ಅಧಿಕ ಲಾಭಕ್ಕಾಗಿ ಅಲ್ಪ ಲಾಭವನ್ನು ತ್ಯಜಿಸುವುದು ವೀರನ ಲಕ್ಷಣ. ಒಂದು ಪಕ್ಷ ಕೃಷ್ಣ ಅರ್ಜುನನಿಗೆ ಕರ್ಣ ನಿನ್ನ ಅಣ್ಣ ಎಂದು ಹೇಳಿದ್ದರೂ ಅರ್ಜುನ ಅವನನ್ನು ಕೊಲ್ಲುತ್ತಿರಲಿಲ್ಲ ಎಂಬುದಕ್ಕೆ ನಮಗೆ ಯಾವ ನಂಬಿಕೆಯೂ ಇಲ್ಲ. ಏಕೆಂದರೆ ತಮ್ಮನ್ನು ಚಿಕ್ಕಂದಿನಿಂದಲೂ ಎತ್ತಿ ಮುದ್ದಾಡಿ, ತಂದೆಯಿಲ್ಲದ ಮಕ್ಕಳು ಎಂದು ಸಾಕಿದ ಭೀಷ್ಮರನ್ನೇ ಅವನು ಬಿಡಲಿಲ್ಲ. ಹೀಗಿರುತ್ತ ಎಲ್ಲಿಯೋ ಹುಟ್ಟಿ, ಹೇಗೋ ಬೆಳೆದು ಇಷ್ಟು ವರ್ಷಗಳೂ ತನ್ನ ಮೇಲೆ ಸೂತ್ಸರ್ಯವನ್ನು ಕಾರಿ, ತನ್ನ ಮಗನನ್ನು ಕೊಂದ ಕರ್ಣನನ್ನು "ನಿನ್ನ ಅಣ್ಣ" ಎಂದ ಮಾತ್ರಕ್ಕೆ ಬಿಟ್ಟುಬಿಡುತ್ತಿದ್ದನೆ? ಅರ್ಜುನನ ದೃಷ್ಟಿಯ ಅಧಮಾ ಒಟ್ಟು ಪಾಂಡವರ ದೃಷ್ಟಿಯಲ್ಲಿ ಪಿತಾಮಹ ಭೀಷ್ಮರ ಜೀವಕ್ಕೆ ಇರುವಷ್ಟು ಪೂಜ್ಯತೆ ಹಾಗೂ ಬೆಲೆ ಕರ್ಣನ ಜೀವಕ್ಕೆ ಇಲ್ಲ. ಹೀಗೆ ತಮ್ಮ ದೃಷ್ಟಿಯಲ್ಲಿ ಅತಿಪೂಜ್ಯರೂ ಪವಿತ್ರರೂ ಎನ್ನಿಸಿಕೊಂಡ ಅಂತವರನ್ನೇ ಕೊಂದ ಅರ್ಜುನ ಕರ್ಣನನ್ನು ಕೊಲ್ಲುತ್ತಿರಲಿಲ್ಲುಂಬೆರೆ ಯಾರೂ ನಂಬದಂತಹ ವಿಚಾರ. ಇದನ್ನೆಲ್ಲಾ ತಿಳಿದಿದ್ದರಿಂದಲೇ ಕೃಷ್ಣ ಅರ್ಜುನನಿಗೆ 'ಕರ್ಣ ನಿನ್ನ ಅಣ್ಣ' ಎಂದು ಹೇಳುವುದಕ್ಕೆ ಬದಲಾಗಿ ಅವನನ್ನು ಕೊಲ್ಲು ಎಂದದ್ದು. ಕರ್ಣ ಅರ್ಜುನನ ಅಣ್ಣ, ಆದ್ದರಿಂದಲೇ ಅವನಿಗೆ ಹೀಗೆ ಆಗುತ್ತಲಿದೆ ಎಂಬುದರ ಬಗ್ಗೆ ಕೃಷ್ಣನಿಗೆ ಸಂತಾಪವುಂಟು. ಆದರೆ ಆಪ್ಪಕ್ಕಾಗಿಯೇ ಕರ್ತವ್ಯಭ್ರಷ್ಟನಾಗುವಂತಹ ಮೂರ್ಖ ಕೃಷ್ಣನಲ್ಲ. ಅವನು ಕರ್ತವ್ಯನಿಷ್ಠ. ಯುದ್ಧ ಭೂಮಿಯಲ್ಲಿ ಎದುರಾಗಿ ನಿಂತವನು ತಂದೆಯಾಗಲಿ, ಅಣ್ಣನಾಗಲಿ, ತಮ್ಮನಾಗಲಿ, ಗುರುವಾಗಲಿ ಯುದ್ಧ ಮಾಡುವುದು ವೀರನ ಕರ್ತವ್ಯ. ಪ್ರೀತಿ ನಮಸ್ಕಾರಗಳು ಮನೆಯಲ್ಲಿ, ಕುರುಭೂಮಿಯಲ್ಲಿ ಇಲ್ಲ. ಇದಕ್ಕಿಂತಲೂ ಹೆಚ್ಚಾಗಿ ಕೃಷ್ಣನಿಗೆ ಬೇಕಾದದ್ದು ಧರ್ಮ ಸಂರಕ್ಷಣೆ. ಧರ್ಮರಕ್ಷಣೆ ಲೋಕ ಕಲ್ಯಾಣ. ಈ ಪಥದಲ್ಲಿ ಸೋದರ ಪ್ರಕ್ಕೆ ಗೌಣ ಮೌಲ್ಯ. ಕರ್ಣ ಪಾಂಡವರ ಅಣ್ಣನಾಗಿದ್ದಿರಬಹುದು. ಆದರೆ ಅವನು ನಿಂತ ನೆಲ-ಭೂಮಿ ಅಧರ್ಮದ ಭೂಮಿ. ಅದು ಶುದ್ಧವಾಗಲು ಅವನ ಬಲಿ ಆಗತ್ಯ. ಅಧೀರಗೊಂಡ ಅರ್ಜುನನ ನರನಾಡಿಗಳನ್ನು ಶ್ರೀಕೃಷ್ಣ ತಿರುವಿ. ಮೀಟ, ಕ್ರೋಧಾವಿಷ್ಟನಾಗುವಂತೆ ಪ್ರಚೋದಿಸುತ್ತಾನೆ.

ಇನ್ನು ಮುಂದಿನ ಪದ್ಯವು ಕೃಷ್ಣನ ಭೇದೋಪಾಯವನ್ನು. ಕರ್ಣನ ಕೊಲೆಗೆ ಅರ್ಜುನನನ್ನು ಹುರಿದುಂಬಿಸುವ ತೀಕ್ಷ್ಣ ಚತುರಮತಿಯನ್ನೂ ಎತ್ತಿ ಹೇಳುತ್ತದೆ. ಅರ್ಜುನನಲ್ಲಿ ಈಗ ಎರಡು ದೌರ್ಬಲ್ಯಗಳು ಕಾಣಿಸಿಕೊಂಡಿವೆ. ಒಂದು, ಕರ್ಣನ ಬಗ್ಗೆ ಉಂಟಾದ ಅತೀವ ವ್ಯಾಮೋಹವು ಅವನನ್ನು ಚಿತ್ತಸ್ಥಾನಿಯನ್ನಾಗಿ ಮಾಡಿದೆ. ಮತ್ತೊಂದು ಮಾನಸಿಕ ವಿಕಾರವು ದೈಹಿಕವಾಗಿ ಪ್ರವಹಿಸಿ, ಬಿಲ್ಲನ್ನು ಎತ್ತಿಹಿಡಿದು ಯುದ್ಧಮಾಡುವಷ್ಟು ಕೈಗಳಲ್ಲಿ ಶಕ್ತಿ ಇಲ್ಲದಾಗಿದೆ. ಈ ಎರಡು ದೌರ್ಬಲ್ಯಗಳನ್ನು ಕಳೆಯದ ಹೊರತು ಅರ್ಜುನನ ಪೌರುಷತ್ವಕ್ಕೆ ಮುಕ್ತಿಯಿಲ್ಲ ಈ ನಿನ್ನಿವೇಶವು ಎಷ್ಟರ ಮಟ್ಟಿಗೆ ಅರ್ಜುನನ ಸತ್ವ ಪರೀಕ್ಷೆಯ ಕಾಲವೋ ಅಷ್ಟರ ಮಟ್ಟಿಗೆ ಕೃಷ್ಣನ ಸತ್ಯ ಪರೀಕ್ಷೆಯ ಕಾಲವೂ ಹೌದು. ಇಂತಹ ಕಡೆಗಳಲ್ಲಿಯೇ ನಾವು ಕೃಷ್ಣನ ಪಾತ್ರಮಹಿಮೆಯನ್ನು ಅರಿಯಬೇಕು. ಮೊದಲು ಕರ್ಣನ ಬಗ್ಗೆ ಅರ್ಜುನನಲ್ಲಿ ಕವಿದಿರುವ ವ್ಯಾಮೋಹವನ್ನು ಕತ್ತರಿಸಿ ಹಾಕಬೇಕು ತದನಂತರ ಕರ್ಣನ ಬಗ್ಗೆ ಅರ್ಜುನನ ಹೃದಯದಲ್ಲಿ ಕ್ರೋಧವನ್ನು ಬಿತ್ತಬೇಕು. ಹಾಗಾದಾಗಲೇ ಕರ್ಣನ ವಧೆ ಸಾಧ್ಯ. ಕೃಷ್ಣ ಈಗ ಈ ಎರಡು ಕೆಲಸಗಳನ್ನೂ ಮಾಡುತ್ತಾನೆ ಕೃಷ್ಣ ಹೇಳುತ್ತಾನೆ. "ಎಲೆ ಅರ್ಜುನ ಈ ಕರ್ಣನು 'ನೆಗಳ್ದ ತಪಮನ್ಯವಂ ಚಲದಿನ್ ಅಂದು ಇಂದ' 'ನಿಜಾಗ್ರಜಾತನಂ ಸೆಗಿವಿನಮ್ ಎಚ್ಚು' ವೀರತನದಿಂದ ಬೀಗುತ್ತಿರುವ ಸೂತಪುತನಿಗೆ ನೀನು ಭಯದಿಂದ ಹೆದರಿದ್ದೇ ಆದರೆ, ನಾನೇ ಈ ಕರ್ಣನನ್ನು 'ಚಕ್ರನಿ ಘಾತವಿನ್ ಇಕ್ಕು, ವೀರಮ್ ಉರ್ವಗೆ ಪಡಿಚಂದಮೊಗೆ ತರಿದೊಟ್ಟೆ ಜಯೊಂಗನೆಗೆ ಅಣ್ಮನಾಂದಪೆಂ.' 'ಕರ್ಣ ತನ್ನ ಪ್ರೀತಿಯ ಮಗನನ್ನು ಕೊಂದವನು, ತನ್ನ ಅಣ್ಣ ಧರ್ಮರಾಯನನ್ನು ಬೆದರುನಂತೆ ಹೊಡೆದವನು" ಎಂದು ಹೇಳುವ ಕೃಷ್ಣನ ಮಾತುಗಳು, ಅರ್ಜುನನ ವೈಚಾರಿಕ ಶಕ್ತಿಯನ್ನು

(ಹನ್ನೆರಡನೇ ಪುಟ ನೋಡಿರಿ)

ಸರ್ವಾರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭವ್ಯಾವತಿ

(ಕಳೆದ ಸಂಚಿಕೆಯಿಂದ)

"ಕಾಲ ಎಲ್ಲವನ್ನೂ ಮರೆಸುತ್ತದೆ. ಆದರೆ ಕಾಲ ಉರುಳಲು ಕಾಲ ಹಿಡಿಯುತ್ತೆ. ಅವರೂ ನೆನಪು ಮರುಕಳಿಸಿ ಬಂದು ಎದೆಯನ್ನು ತಿನಿಯುತ್ತೆ. ನೋವನ್ನು ನುಂಗಿಕೊಳ್ಳುವುದು ಅಷ್ಟೇನು ಸುಲಭವಲ್ಲ. ಜಾನಕಿ ಕುಡಿಯುತ್ತೀಯಾ? ನಾಲಿಗೆಯೊಣಗಿನಂತಿದೆ.'

'ಕೊಡಿ! ಕುಡಿಯುತ್ತೇನೆ. ತೃಪ್ತಿಯಾಗುವವರೆಗೂ ಕುಡಿಯುತ್ತೇನೆ. ಬರಿಯ ನಾಲಿಗೆಯೇ ಏಕೆ? ಇಡಿಯ ದೇಹವೇ ಒಣಗಲಾರಂಭಿಸಿದೆ. ಒಣಗಬೇಕಾದ್ದು ಒಣಗದಿರುತ್ತವೆಯೇ?'

ಅತ ಜಾನಕಿ ಕುಡಿಸಿದ. ಆಕೆ ಚೇತರಿಸಿಕೊಂಡಳು.

'ಸ್ವಾಮೀ! ನೀವು ನನ್ನೊಬ್ಬಳನ್ನೇ ಬಿಟ್ಟು ಹೋಗಬೇಡಿ.'

'ಪತ್ತಿರದಲ್ಲೇ ಇರುವೆನೆಲ್ಲ ದೇನಿ'

"ಇನ್ನಷ್ಟು ಹತ್ತಿರ ಬಂದು ಗಟ್ಟಿಯಾಗಿ ಹಿಡಿದುಕೊಳ್ಳಿ. ಸರ್ವಾಂಗ ಕಂಪಿಸುವಂತಿದೆ.'

ಮತ್ತಷ್ಟು ಪತ್ತಿರಕ್ಕೆ ಸರಿದು ನರಸಿಂಹ ಅವಳನ್ನು ಬಿಗಿಯಾಗಿ ಹಿಡಿದು ಕೊಂಡ.

'ಇದನ್ನೇ ನಾನು ಬಯಸಿದ್ದು. ದೇವಿಯಲ್ಲಿ ಬೇಡಿ ಕೊಂಡಿದ್ದು'

"ದೇವಿಯೊಡನೆ ಏನು ಕೇಳಿಕೊಂಡೆ ಜಾಕಿ?"

'ಮಟ್ಟವಾರಿ ನಾಯುತ್ತಾಕೆ. ಬೇಡನೆಂದರೆ ನಡೆಯುವುದಿಲ್ಲ. ನಾವು ಬರಲಿ ಅದಿ ನಾವು ಜರುಪ್ಪೆವೇ ನಿಜನಿವ್ವರೆ. ನಿಮ್ಮ ತೋಳಿನಾಶ್ರಯದೆಲ್ಲಿ ಮಲಗಿ ನಿದ್ದೆ ಕೋಗುವಂತೆ ಆನುಗ್ರಹಿಸು ಎಂದು ಕೇಳಿಕೊಂಡೆ. ಆ ಕಾಯಿ ಕನ್ನು ಎಂದಳು."

ಆಕೆಯ ಕೈರ ಶಿಥಿರವನ್ನು ಅತ ಎತ್ತಿ ತೆನ್ನೆ ಅಂಕೆಯಲ್ಲಿರಿಸಿ ಕೊಂಡ. ಅವಳ ಕೈಗಳು ಅವನ ಮುಂಗುರುಳೆಳೆನ್ನು ನೀವರಿಸಿದವು.

ಮುಖ ತೃಪ್ತಿಯನ್ನು ಸೂಚಿಸಿತು.

ಅವಳ ಎದೆ ಬಾಕು. ಭುಜಗಳೆ ನೇಲೂ ಅವಳ ಕೈಯೋಡಿತು.

'ಈ ಕರುಳಿನ ಕುಡಿಕಾಕನ್ನು ಬೆಳೆಸಿ ನಿಮ್ಮ ಬಾಳಿನ ಹೆರಹು ವಿಸ್ತಾರಗಳನ್ನು ತುಂಬಿಸಿ ನಾನು ವಿಸರ್ಜನೆ ಮಾಡಲಾರದ ಸ್ಥಿತಿಯಲ್ಲಿದ್ದೇನೆ. ಅವನ ಉಳಿವಿನ ಪ್ರಯತ್ನವನ್ನು ನೋಡಿ ಕುಹಿನುವ ಪುಣ್ಯವನ್ನು ಪಡೆದು ಬಂದಿಲ್ಲ. ಅವನನ್ನು ಬೆಳೆಸುವ ಭಾರ ನಿಮ್ಮದು. ನಿಮ್ಮ ನೂರು ಕೆಲಸಗಳ ಮಧ್ಯೆ ಅಗಜ್ಜೆ ನಮೆಸಿ ಕೊಪಿ. ಆ ಪಸರ ನನಗೆ ಅಮೃತ ಸೇಜನ.'

'ಅವನ ಶ್ರೇಯೋಭಿವೃದ್ಧಿಗಾಗಿಯೇ ಈ ಬಾಳು ಮೀಸಲು. ಈ ಮಾತಿನ್ನು ಖಂಡಿತ ಖಾಲಿಸುತ್ತೇನೆ.'

ಹಾಗೆಂದು ನರಸಿಂಹ ಅವಳನ್ನೇ ಬಿಟ್ಟೆದ.

'ನಟ್ಟ ದೃಷ್ಟಿಯಿಂದ ಜೀಗೇಕೆ ನೋಡುತ್ತೀರಿ. ನೋಡಿ ಸಿಗುವ ಲಾಭವಾದರೂ ಏನು? ರಸೋಲ್ಲಾನ, ರಸೋಲ್ಲಾನ ಎರೆತನ್ನೂ ಚಿಮ್ಮಿಸುವ ರಕ್ತಯುಕ್ತ ಕ್ಷಯದಾಗಿದೆ ಈ ದೇಹದ ಅಂಗಾಂಗಗಳಲ್ಲಿ. ಬಂಡಿ ಬಿಟ್ಟ ಕಬ್ಬಿನ ಜಲ್ಲೆಯಂತಿದೆ ಈ ದೇಹ. ಉತ್ಸಾಹವನ್ನುತ್ತಿಸಬಲ್ಲ ಮನಸೋ ಆದೂ ಬರಡಾಗಿದೆ—ನೀವು ಇನ್ನು ಮುಂದೆ ಅದಕ್ಕೆ ಉನ್ಮೇಷವನ್ನು ಆಶ್ರಯಿಸದೇಕು'

'ಅನ್ಯರ ಆನರಿ ನನಗೆ ಬೇಕ ದೇವಿ'

'ಹಾಗೆ ಹೇಳಿದರೆ ಹೇಗೆ—? ಸಿರಿಗನ್ನೂ ಸಂಪತ್ತನ್ನು, ಅಧಿಕಾರ, ಅಂತಸ್ತು, ಜಿಸ್ತಿ ಪಾಸ್ತಿ ಎಲ್ಲಾ ಇವೆ. ಒಳ್ಳೆಯವಳೊಬ್ಬಳು ಒಲಿದು ಬಂದಾಳು. ಅವಳೊಡನೆ ಸುಖವಾಗಿ ಬಾಳಿ. ತಾಯಿಯ ವಾತ್ಸಲ್ಯದಿಂದ ವಿವಂಚಿತವಾದ ಈ ಕಂದನ್ನು ಅವಳ ಪ್ರೀತಿಯಲ್ಲಿ ಬೆಳೆಯಲಿ'

'ತಾಯಿಲ್ಲದ ತಬ್ಬಲಿಯನ್ನು ದಾದಿಯು ಉಡಿಯಲ್ಲಿ ಹಾಕೆದ್ದು ಎಯಾ? ನಿನ್ನ ಜೊತೆ ಕಂಡಿಕೊಂಡ ಪ್ರೇಮವನ್ನು ಅನ್ಯರೊಡನೆ ಹಂಚಿ ಕೊಳ್ಳಲೇ? ಆಗದ ಮಾತು, ಯಾವಜ್ಜೀವವೂ ನನ್ನ ಪ್ರೀತಿ ನಿನಗೆ ಮಿಸಲು'

ನರಸಿಂಹನ ನಿರ್ಧಾರದ ಮಾತು.

ಅದರಿಂದ ಆ ಕೋಮಲ ಹೃದಯ ನಲುಗಿತು.

ಅವಳ ಅಂತರಂಗದ ಯಾತನೆಯನ್ನು ಅವಳ ಮುಖ ಹೇಳಿತು. ಈ ಸಂಕಟವನ್ನು ಮುಚ್ಚಿಟ್ಟುಕೊಳ್ಳಲು ಆಕೆ ಪ್ರಯತ್ನಿಸುತ್ತಿರುವಂತೆ ಕಂಡು ಬಂತು. ಆದರೆ ಆದನ್ನು ಬಚ್ಚಿಟ್ಟು ಕೊಳ್ಳುವುದರಲ್ಲಿ ಕೃತಕೃತ್ಯಳಾಗಲಿಲ್ಲ.

ಎರಡು...

ಸ್ವಪ್ನ ತಂತ್ರ ಮತ್ತು ಹಾಸಿಕ ಕಾದಂಬರಿ

'ಇದೊಂದು ಮಾತನ್ನು ನಡೆಸಿ ಕೊಡಿ'

ರೋಗಿಯ ಧ್ವನಿಯಲ್ಲಿ ದೈನ್ಯತೆ ಇತ್ತು.

ಅವಳೊಡನಾಳಿದ ಮನೆಯನ್ನು ಇನ್ನೊಬ್ಬಳ ಜೊತೆಯಾಳುವುದು ನರಸಿಂಹನಿಗೆ ಸರಿಬರಲಿಲ್ಲ. ಯಾವ ರೀತಿಯು ಉತ್ತರ ಕೊಟ್ಟರೂ ಅದು ಅವನನ್ನು ಪೇಚಿನಲ್ಲಿ ಬೀಳಿಸುತಿತ್ತು. ಒಪ್ಪಿದೆನೋ ಅದರಂತೆ ನಡೆಯಬೇಕು.

ಆದರೆ ಆ ರೀತಿ ನಡೆಯಲು ಮನಸ್ಸು ಒಪ್ಪಲಿಲ್ಲ. ಅವಳಿಗಾಗಿ ಒಪ್ಪಬೇಕು. ಆದರೆ ಮನಸ್ಸೊಪ್ಪದ ಕೆಲಸ. ಆದ್ದರಿಂದ ತ್ಯಜಿಸಬೇಕು—ಯಾವುದನ್ನು ಹಿಡಿವುದು, ಯಾವುದನ್ನು ಬಿಡುವುದು? ನರಸಿಂಹ ತೊಳಲಾಡಿದ.

'ನಿನ್ನ ಯಾವ ಮಾತನ್ನು ನಡೆಸದೆ ಬಿಟ್ಟಿರುತ್ತೇನೆ'

ಅವನ ಕೈಗಳು ಮೃದುವಾಗಿ ಅನಳ ಕೂದಲನ್ನು ನೀವುತಿದ್ದುವು.

ವೈದ್ಯರು ಪುನಃ ಆಕೆಯನ್ನು ಪರಿಕಿಸಿದರು. ವೌನವಾವರಿಸಿತ್ತು ಕೋಣೆಯನ್ನು. ಅವರೇನು ಮಾಡುತ್ತಾರೋ ನುಡಿಯುತ್ತಾರೋ—ಅದನ್ನು ತಿಳಿಯಲು ಅಲ್ಲಿದ್ದವರ ದೃಷ್ಟಿ ಅವರತ್ತ ಹೊರಳಿದುವು.

ಅವರು ತುಟಿಯಲುಗಿಸಲಿಲ್ಲ. ಭಾರವಾದ ಹೆಜ್ಜೆ ಹಾಕುತ್ತಾ ಕೋಣೆಯಿಂದ ಹೊರಟು ಹೋದರು. ಅವರನ್ನು ನೆರಳಿನಂತೆ ಅನುಸರಿಸಿದ ರಾಷ್ಟ್ರಕೂಟ ಇಂದ್ರ. ಅವರಿಬ್ಬರನ್ನು ಅನುಸರಿಸಿತು, ಪರಿವಾರ ಪರಿಜನ.

ಎಲ್ಲರೂ ಒಬ್ಬರನ್ನೊಬ್ಬರು ನೋಡಲಾರಂಭಿಸಿದರು. ಬಾಯಿಂದಲೂ ಮಾತು ಹೊರಡಲಿಲ್ಲ. ಕೊನೆಯಲ್ಲಿ ರಾಷ್ಟ್ರಕೂಟ ಇಂದ್ರ ಆ ವೌನವನ್ನು ಮುರಿದು 'ತಂಗಿಯನ್ನು ಉಳಿಸಿಕೊಳ್ಳುವುದು ಸಾಧ್ಯವಿಲ್ಲವೇ? ಅವಳನ್ನಿರಿಸಿಕೊಳ್ಳುವ ಆದೃಷ್ಟದಿಂದ ನಾವು ವಿವಂಚಿತರೇ'? ಎಂದು ಕೇಳಿದ.

'ಪ್ರಭೂ ನನ್ನನ್ನು ಕ್ಷಮಿಸಬೇಕು. ಈ ಮನೆಯ ಉಪ್ಪುಂಡವನು ನಾನು. ಸುಳ್ಳು ಹೇಳಲಾರೆ. ತಿಳಿದ ವಿದ್ಯೆಯ ಬಲದಿಂದ ರೋಗವನ್ನು ಗುರುತಿಸಬಲ್ಲೆ. ಅದರ ಉಪಶಮನಕ್ಕೆರುವ ಔಷಧಿಯನ್ನು ಹೇಳಬಲ್ಲೆ. ಆಯುರ್ವೇದ ಆಯುರ್ದಾನ ಮಾಡಲಾರದು. ರೋಗ ನಿರೋಧಕ ಶಕ್ತಿ ದೇಹದಲ್ಲಿದ್ದರೆ ಕೊಟ್ಟ ಸುದ್ದಿನಿಂದ ಪ್ರಯೋಜನವಾಗುತ್ತೆ. ಇದು ಮನುಷ್ಯ ಯತ್ನಕ್ಕೆ ಮೀರಿದ್ದು. ನಾಡಿ ಬೀಳಲಾರಂಭಿಸಿದೆ. ಎದೆ ಗುಂಡಿಗೆ ದುರ್ಬಲವಾಗಿದೆ. ಅದು ಸಂಯಾಗಿ ಕೆಲಸ ಮಾಡುತ್ತಿಲ್ಲ. ರಾಜಕುಮಾರಿಗೆ ಸಣ್ಣ ವ್ಯಾಯ. ದಂಡನಾಯಕರಿಗೆ ತುಂಬು ತಾರುಣ್ಯ. ಈಗ ತಾನೇ ಹಸುಗೂಸೊಂದು ಜನ್ಮತಳೆದಿದೆ. ಇದನ್ನೆಲ್ಲ ಯೋಚಿಸುವಾಗ ದೇವಿಯವರ ಸ್ಥಿತಿ ಸುಧಾರಿಸಲಿ ಎಂದನಿಸುತ್ತೆ—ಆದರೆ ಹಾಗಾಗುವುದು ತೀರ ಅಸಂಭವ.

ಬಹು ಕಷ್ಟದಿಂದ—ಆದರೆ ಕಡ್ಡಿಮುರಿದಂತೆ — ವೈದ್ಯರು ತಮ್ಮ ಖಚಿತವಾದ ಅಭಿಪ್ರಾಯವನ್ನು ಸೂಚಿಸಿದರು.

ಹೀಗವರು ನುಡಿಯುತಿದ್ದಂತೆ ಒಳಗೆ ಯಾರೋ ಚಿಟ್ಟನೆ ಚೀರಿದಂತಾಯಿತು. ಎಲ್ಲರೂ ಕೋಣೆಯೊಳಕ್ಕೆ ನುಗ್ಗಿದರು.

'ಜಾಕೀ! ಕೋನೆಗೂ ನೀನು ನನ್ನನ್ನು ಬಿಟ್ಟೇ ಹೋದೆಯಾ' ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ ಚಾಳುಕ್ಯ ನರಸಿಂಹ.

ಈ ಗಲಭೆಗೆ ಎಚ್ಚರಗೊಂಡ ಶಿಶು—ತನ್ನ ತಬ್ಬಲಿತನದ ಆರಿವಿನಿಂದಲೋ—ಎಂಬಂತೆ ಅಳಲಾರಂಭಿಸಿತು.

ಹೊರಗಿದ್ದವರು ಒಳಗೆ ಬರುವುದರಲ್ಲಿ ಎಲ್ಲ ಮುಗಿದಿತ್ತು. ಜಾನಕಿ ತನ್ನ ಕೊನೆಯುಸಿರು ಎಳೆದಿದ್ದಳು.

ಜಾನಕಿ ವಿಧಿವಶಳಾಗಿ ಅಂದಿಗೆ ಹನ್ನೊಂದು ದಿನ.

ಅದು ಕಳೆಯುವ ವರೆಗೆ ರಾಜಧಾನಿಯಲ್ಲು ಯಾನ ಶುಭ ಸಮಾರಂಭಗಳೂ ನಡೆಯಲಿಲ್ಲ.

ಶೋಕತಪ್ತರಾದ ಪ್ರಜೆಗಳು ಸೂತಕವನ್ನು ಶೃದ್ಧೆಯಿಂದ ಆಚರಿಸಿದರು. ಯಾವ ಕೆಲಸದಲ್ಲಿಯೂ ಉತ್ಸಾಹದಿಂದ ಭಾಗವಹಿಸುವ ಆಸಕ್ತಿ ಅವರಲ್ಲಿ ಉಳಿಯಲಿಲ್ಲ. ಜಾನಕಿ ಅವರ ಗೌರವ, ಆದರಗಳಿಗೆ ಪಾತ್ರಳಾಗಿದ್ದಳು. ತನ್ನ ಗುಣ, ಶೀಲ, ಚಾರಿತ್ರ್ಯಗಳಿಂದ ಆಕೆ ಅವರ ಹೃನ್ಮಂದಿರದಲ್ಲಿ ಶಾಶ್ವತ ಮುದ್ರೆಯನ್ನೊತ್ತಿದ್ದಳು. ಅವಳ ಅನಿರೀಕ್ಷಿತ ಸಾವನ್ನು ಪ್ರಜೆಗಳು ತಮ್ಮ ಮನೆಯಲ್ಲೇ ನಡೆದು ಹೋದ ದುರಂತವೆಂದು ಪರಿಗಣಿಸಿದರು.

ಜಾನಕಿ ಅವರೊಳಗಿದ್ದುದು ಸೇವ್ಯ—ಸೇವಕ ಸಂಬಂಧ.

ಆದರೆ ರೂಪುಗೊಂಡುದು ಈ ಸಂಬಂಧವಲ್ಲ—ಭಾವ ಸಂಬಂಧ. ಈ ಬೆಸುಗೆ ಗಾಢವಾದ್ದು, ಶಾಶ್ವತವಾದ್ದು. ಆ ನಿಸ್ಪೃ ನಡತೆಯಲ್ಲಿ ಕಾಣಿಸಿಕೊಂಡಿತು.

ರಾಜ ಪರಿವಾರದವರು ಹನ್ನೊಂದು ದಿನಗಳ ಸೂತಕವನ್ನಾಚರಿಸಿದರು.

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 24

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೭೫

ಚಿಕ್ಕ ಜೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಪಾಕಿಸ್ತಾನದಲ್ಲಿ ಬುದ್ಧಿಜೀವಿಗಳೂ ಇದ್ದಾರೆ!

ಚೌ—ಎನ್—ಲಾಯ್ ಮತ್ತು ಮಾವೋ ಮುಖದಿಂದ ಭಾರತ ಖಂಡನೆಯ ಮಾತುಗಳನ್ನು ಕೇಳಿದ ಪಾಕ್ ರಾಷ್ಟ್ರಪತಿ ಭುಟ್ಟೊ ಕಿವಿನೆಟ್ಟಗೆ ಮಾಡಿದರು. ಅವು ಅವರ ಹೃದಯಕ್ಕೆ ಇಳಿಯಿತು. ಯುದ್ಧದಲ್ಲಿ ಅವರು ಕಳೆದುಕೊಂಡ ಸೈನಿಕ ಶಕ್ತಿಯನ್ನು ತುಂಬಿಸಿಕೊಡುವುದಾಗಿ ಹೇಳಿದಾಗ, ಅವರು ಮತ್ತೆ ಹಗಲುಗನಸು ಕಾಣ ತೊಡಗಿದರು. ಭಾರತ ದ್ವೇಷವೊಂದೇ ಪಾಕಿಸ್ತಾನದ ವೈಭವ ಸಾಧನವೆಂದು ನಂಬಿ ಕೊಂಡಲೆಯ ಹತ್ತಿರುವ ಭುಟ್ಟೊ ತನ್ನ ಕನಸಿನ ಬ್ರಹತ್ ಪಾಕಿಸ್ತಾನವನ್ನು ಕಟ್ಟಲೆಂದು ಹಿರಿದಾಡುತ್ತಿರುವಾಗ, ಅವರ ದೇಶದೊಳಗಡೆಯೇ ಸಿಡಿಮದ್ದುಗಳು ಸಿಡಿಯ ತೊಡಗಿವೆ. ಪಾಕಿಸ್ತಾನದಿಂದ ಬಾಂಗ್ಲಾ ಸಿಡಿದು ಹೋಗಿ ಸ್ವತಂತ್ರ ಸಾರ್ವಭೌಮ ದೇಶವಾಯ್ತು. ಇದನ್ನು ಪಾಕ್ ಪರಮಮಿತ್ರ ಅಮೆರಿಕೆಯೂ ಮನ್ನಿಸುವ ಇರಾದೆಯಿಂದಿದೆ ನಿಕ್ಸನ್ ಪೀಕಿಂಗ್ ಭೇಟಿ ಮುಗಿಸಿ ಬಂದ ಬಳಿಕ ಈ ಬಗ್ಗೆ ತುರ್ತು ಗಮನ ನೀಡುತ್ತಾರೆ. ಉಳಿದ ಪಾಕಿಸ್ತಾನದಲ್ಲಿಯೂ ಸ್ಫೋಟಕ ಪರಿಸ್ಥಿತಿಯನ್ನು ಭುಟ್ಟೋ ನಿರ್ಮಿಸುತ್ತಲೇ ಹೋಗುತ್ತಿದ್ದಾರೆ. ಅವಾಮಿಲೀಗಿನ ನಾಯಕ ವಾಲಿಖಾನರು ಅವರಿಗೆ ತೀವ್ರ ಎಚ್ಚರಿಕೆ ನೀಡಿದ್ದಾರೆ ಒಂದು ತಿಂಗಳಲ್ಲಿ ಮೂರ್ಖಲ್ ಆಡಳಿತೆಯನ್ನು ಕೊನೆಗೊಳಿಸಿ ಪ್ರಜಾ ಪ್ರಾತಿನಿಧಿಕ ಸರಕಾರ ರಚಿಸ ಬೇಕೆಂಬ ಅವರ ಬೇಡಿಕೆ ಶೇಕ ಮುಜಿಬುರ್ ರೆಹಮಾನರ ಮೊದಲ ಬೇಡಿಕೆಯನ್ನು ನೆನಪಿಗೆ ತರುತ್ತದೆ ಆದರೆ, ಭುಟ್ಟೋ ಈ ವರ್ಷಾರ್ಥ ದೊಳಗೆ ಮಿಲಿಟರಿ ಶಾಸನವನ್ನು ಹಿಂತೆಗೆದುಕೊಳ್ಳುವುದಾಗಿ ಹೇಳುತ್ತಾರೆ. ತಮ್ಮ ಬೇಡಿಕೆ ಈಡೇರದೆ ಹೋದರೆ ಉಗ್ರ ಚಳುವಳಿ ಆರಂಭಿಸಲಾಗುವುದೆಂಬ ವಾಲಿಖಾನರ ಮಾತುಗಳು ಭುಟ್ಟೋರ ಮೇಲೆ ಯಾವ ಪ್ರಭಾವವನ್ನೂ ಬೀರಿದಂತಿಲ್ಲ. ಪಾಕಿಸ್ತಾನವನ್ನು ತನ್ನ ದಂಡಿನ ಬಲದಿಂದ ಉಳಿಸಿಕೊಳ್ಳ ಬಹುದೆಂದು ಅವರು ನಂಬಿದಂತಿದೆ. ಆದರೆ, ಜನಮತದ ಮುಂದೆ ತಲೆ ಬಾಗದೆ ಹೋದರೆ, ಈ ಪಾಕಿಸ್ತಾನವೂ ಬಲೂಚಿಸ್ತಾನ ಮತ್ತು ಫಕ್ತೂನಿಸ್ತಾನಗಳೆಂಬ ಎರಡು ತುಕುಡಿಯಾಗುವ ಸಾಧ್ಯತೆಗಳು ಇಲ್ಲವೆಂದಿಲ್ಲ. ರಾಜ್ಯಕೀಯ ಪ್ರಜ್ಞತ್ತರು ಇದಾವುದನ್ನೂ ಗಮನಿಸದೆ ತಮ್ಮ ದಂಡಿನ ಬಲವನ್ನೇ ನೆಚ್ಚಿ ಮೈ ಮರೆತರೆ ಮತ್ತೊಂದು ಅನಾಹುತ ಸನ್ನಿಹಿತವಾದಂತೆಯೇ ಎಂಬುದು ನಿರ್ವಿವಾದ.

ಕರಾಚಿಯ ಪ್ರಸಿದ್ಧ ದಿನಪತ್ರಿಕೆ 'ಡಾನ್' ಪಾಕ್ ಲಷ್ಕರಿ ಸರಕಾರವನ್ನು ಎಚ್ಚರಿಸಿದೆ. ಪಾಕಿಸ್ತಾನದ ಮತಾಂಧರು ತಮ್ಮ ಕುದುರೆಗೆ ಮೂರು ಕಾಲಿದೇ ವಾದಿಸುತ್ತಿರುವುದನ್ನು ಮುಂದುವರಿಸುತ್ತಿರುವರಾದರೂ ಬುದ್ಧಿ ಜೀವಿಗಳಿಗೆ ಭವಿಷ್ಯದ ಕರಾಳತೆಯ ದರ್ಶನವಾಗದಿಲ್ಲ. ಭಾರತದೊಂದಿಗೆ ನೇರ ಸಂಪರ್ಕ ಹೊಂದುವುದರಿಂದ ಮಾತ್ರವೇ ಪಾಕಿಸ್ತಾನ ಉಳಿದೀತು. ಪಾಕಿಸ್ತಾನದ ಸಧ್ಯದ ರಾಜ್ಯಕೀಯ ವಾತಾವರಣ ಆಂಧಕಾರಮಯ — ಡೋಲಾಯಮಾನ — ಅಸ್ಥಿರ. ಅದಕ್ಕೆ ಭವಿಷ್ಯತ್ತೆಂಬುದೇ ಇಲ್ಲ. ಎಂದಿನ ವರೆಗೆ ಪಾಕಿಸ್ತಾನವು ವಸ್ತುಸ್ಥಿತಿಯನ್ನು ಅರಿತುಕೊಳ್ಳುವಷ್ಟ ತಾಳ್ಮೆಯನ್ನು ತೋರಿಸುವುದಿಲ್ಲವೋ ಅಲ್ಲಿಯ ವರೆಗೆ ಪಾಕ್ ಬೆಳೆಯುವುದು ಅಸಾಧ್ಯ; ಅದರ ಅಸ್ತಿತ್ವವೇ ಅಭದ್ರ. ಬಾಂಗ್ಲಾ ದೇಶದ ಉದಯ ಹಗಲಿನಷ್ಟು ಸ್ಪಷ್ಟವೆಂದು ಬುದ್ಧಿ ಜೀವಿ ಪಾಕಿಸ್ತಾನಿಗಳು ಮನನರಿಕೆ ಮಾಡಿಕೊಂಡಿದ್ದಾರೆ. ಭಾರತೀಯ ಉಪಖಂಡದಲ್ಲಿ ಶಾಶ್ವತ ಶಾಂತಿ ಸ್ಥಾಪನೆಯಾದರೇನೇ ಪಾಕಿಸ್ತಾನದ ಪ್ರಗತಿ ಸಾಧ್ಯ. ಬರಿಯ ಸೈನಿಕ ಬಲದಿಂದ ಭಾರತವನ್ನು ಮಣಿಸುವುದು ಬಾಹ್ಯ ಒತ್ತಡಗಳ ಮುಂದೆ ತಲೆಬಾಗುವಂತೆ ಮಾಡ ಬಹುದೆಂದು ನಂಬುವುದು ಬರಿಯ ಕನಸು ಮಾತ್ರ ಭಾರತ—ಬಾಂಗ್ಲಾ ಮತ್ತು ಪಾಕಿಸ್ತಾನಗಳ ಒಕ್ಕೂಟ ರಚನೆಯ ಸಲಹೆ ಕಾರ್ಯರೂಪಕ್ಕೆ ಬಂದರೆ ಮಾತ್ರ ಪಾಕ್ ಪತನದಿಂದ ಉಳಿದೀತು. ಕನಿಷ್ಠ ಪಕ್ಷ ಆರ್ಥಿಕ–ಸಾಂಸ್ಕೃತಿಕ ರಂಗಗಳಲ್ಲಾದರೂ ಈ ಏಕತೆ ಸ್ಥಾಪಿತವಾದರೆ ಅದು ನೆಮ್ಮದಿಯಿಂದ ಉಸಿರಾಡ ಬಹುದು. ಆದರೆ, ಪಾಕ್ ಅಧಿಕಾರ ಸ್ಥಾನದಲ್ಲಿರುವವರು ಸೈನಿಕ ಬಲದಿಂದಲೇ ದೇಶ ಕಟ್ಟುವ ಹುಚ್ಚನ್ನು ಬಿಟ್ಟುಕೊಟ್ಟಿಲ್ಲ. ಭಾರತ ದ್ವೇಷವೊಂದರ ಮೇಲೆಯೇ ಪಾಕ್ ಅಸ್ತಿವಾರ. ಇದನ್ನು ಸುಸ್ಪಷ್ಟನಾಗಿ ಡಾನ್ ಪತ್ರಿಕೆ ಬರೆದಿದೆ; ಪಾಕ್ ಮತಾಂಧರಿಗೆ ತಿಳಿ ಹೇಳಿದೆ. ಎಂದರೆ, ವಸ್ತುಸ್ಥಿತಿಯನ್ನು ಅರಿತು ಆಲೋಚಿಸ ಬಲ್ಲ ಬುದ್ಧಿ ಜೀವಿಗಳೂ ಪಾಕಿಸ್ತಾನದಲ್ಲಿದ್ದಾರೆಂಬುದು ಸಿದ್ಧವಾಗುತ್ತದೆ. ಭಾರತ ಪಾಕಿಸ್ತಾನದ ಅಸ್ತಿತ್ವವನ್ನೇ ಅಲ್ಲಗಳೆಯಲು ಹೊಂಚು ಹಾಕಿತ್ತು ಎಂರು ಮೊದಲು ದೂರಿದ್ದ ನಿಕ್ಸನ್, ಪಾಕಿನ ಸೈನಿಕ ಶಕ್ತಿಯನ್ನು ಧ್ವಂಸ ಮಾಡಲು ಬಯಸಿತ್ತು ಎಂದು ತಮ್ಮ ಹೇಳಿಕೆಯನ್ನು ತಿದ್ದುವಷ್ಟು ಈಗ ಮುಂದಾದರು. ಅವರ ಈ ಹೇಳಿಕೆ ಬರುವುದಕ್ಕೆ ಎರಡು ತಿಂಗಳು ಮೊದಲೇ ಭಾರತ ಆ ಉದ್ದೇಶವನ್ನು ಡಣಾಡಂಗುರವಾಗಿ ಸಾರಿದೆ. ಅದು ವಾಹಿಂಗ್ಟನ್ನಿಗೆ ಮುಟ್ಟಲು ಇಷ್ಟು ಸಮಯ ಬೇಕಾಯ್ತೆನೋ! ಯಾರನ್ನು ನಂಬಿ ಪಾಕಿಸ್ತಾನ ಭಾರತದೊಡನೆ ನೈರತ್ವವನ್ನು ವೃದ್ಧಿಸುತ್ತ ಬಂದಿದೆಯೋ ಅವರೇ ಸತ್ಯವನ್ನು ಮನ್ನಿಸ ಮಾಡಲು ಪ್ರಯತ್ನಿಸುತ್ತಾರೆ. ಆದರೂ ಪಾಕಿಸ್ತಾನ ತನ್ನ ಕುರುಡು ನೀತಿಯನ್ನು ಬದಲಾಯಿಸಲು ಇಚ್ಛಿಸುವುದಿಲ್ಲವೆಂದರೆ, ಅದಕ್ಕೆ ಭವಿಷ್ಯವಿಲ್ಲವೆಂದೇ ಅರ್ಥ.

ಪಾಕ್ ನಾಯಕರು ತಮ್ಮ ದೇಶದ ಭೌಗೋಳಿಕ ಸನ್ನಿವೇಶವನ್ನು ಮನನರಿಕೆ ಮಾಡಿಕೊಳ್ಳ ಬೇಕು. ಉಪಖಂಡದಲ್ಲಿ ಶಾಂತಿ ನೆಲಸುವುದರಿಂದಲೇ ಅವರ ಪ್ರಗತಿ ಸಾಧ್ಯವೆಂಬುದನ್ನು ನಂಬಬೇಕು. ನೆರೆಹೊರೆಯೊಡನೆ ಉತ್ತಮ ಸಂಬಂಧವಿಟ್ಟುಕೊಳ್ಳ ಬೇಕೆಂದು ತಿಳಿಯ ಬೇಕು. ಗುಂಡಿನ ಇಲ್ಲವೇ ದುಡಿನ ಬಲದಿಂದ ಉತ್ತಮ ನೆರೆ ಹೊರೆ ಲಭಿಸುವುದೆಂಬ ನಂಬಿಕೆಯನ್ನು ಬಿಡಬೇಕು. ಭಾರತ ತನ್ನ ಶತ್ರು ರಾಷ್ಟ್ರವಲ್ಲ ವೆಂಬುದನ್ನು ಮೊದಲು ಅರಿಯ ಬೇಕು. ಅದು ತನ್ನ ಉನ್ನತಿಯನ್ನು, ಪ್ರಗತಿಯನ್ನು ಬಯಸುವ ದೇಶವೆಂಬುದನ್ನು ಗಮನಿಸಿ, ಉಳಿದ ಭೂಭಾಗವನ್ನಾದರೂ ಉಳಿಸಲು ಉಪಖಂಡದ ಶಾಂತಿಗೆ ಶ್ರಮಿಸ ಬೇಕು. ಇದು ಭಾರತೀಯರ ಸದಾಶಯ. ಪಾಕಿಸ್ತಾನದ ಬುದ್ಧಿ ಜೀವಿಗಳಿಗೂ ಇದು ಪ್ರಿಯಕರ, ಹಿತಕಾರಕವಾದೀತು. ಭುಟ್ಟೊ ಈ ಸತ್ಯವನ್ನು ಎಷ್ಟು ಬೇಗ ಅರಿತು ಕೊಳ್ಳುತ್ತಾರೆಯೋ ಅಷ್ಟು ತೀವ್ರವಾಗಿ ಪಾಕಿಸ್ತಾನ ಪ್ರಗತಿ ಹೊಂದುತ್ತದೆ.

ನಿಕ್ಸನ್ ಪೀಕಿಂಗ್ ಭೇಟಿ

ಬಹು ದಿನಗಳಿಂದ ನಿರೀಕ್ಷಿಸಲಾಗಿದ್ದ ಅಧ್ಯಕ್ಷ ನಿಕ್ಸನ್ನರ ಪೀಕಿಂಗ್ ಭೇಟಿ ಇನ್ನೇನು, ಆರಂಭವಾಯ್ತು ಎನ್ನ ಬಹುದು. ಈ ಭೇಟಿಯ ನಿಶ್ಚಯ–ಮತ್ತು ಅದು ಕಾರ್ಯರೂಪಕ್ಕೆ ಬಂದ ದಿನಗಳ ನಡುವೆ ದಕ್ಷಿಣ ಏಶ್ಯಾದಲ್ಲಿ ಹೊಸತೊಂದು ಇತಿಹಾಸವು ನಿರ್ಮಾಣವಾಯ್ತು. ಪೀಕಿಂಗಿಗೆ ಪಾಕ್ ರಾಷ್ಟ್ರಪತಿ ಭುಟ್ಟೊ ಹೋಗಿ ಬಂದ ನಂತರ ನಿಕ್ಸನ್ನರ ಭೇಟ್ಟಿ ನಡೆಯಲಿರುವುದರಿಂದ ಪಾಕ್ ಬಗ್ಗೆ ಭವಿಷ್ಯ ನೀತಿಯ ಬಗೆಗೆ ವಿವೇಚನೆ ನಡೆಯುವುದೆಂದು ನಂಬಿದ್ದರೆ, ಅದೂ ನಡೆಯ ಬಹುದಷ್ಟೆ ಎನ್ನ ಬೇಕಾಗುತ್ತದೆ. ಅಮೆರಿಕಾ—ಚೀನಾಗಳ ಭೇಟ್ಟಿಯ ಬಗ್ಗೆ ಚೀನೀ ನಾಯಕರು ಹೆಚ್ಚಿನ ಮಹತ್ವವನ್ನು ಸೀಡಿಲ್ಲವಾದುದರಿಂದ ಹೇಳಿ ಕೇಳಿಸಿ ಹೋದ ನಿಕ್ಸನ್‌ಗೆ ವಿಶೇಷ ಲಾಭವೇನೂ ಆಗದು. ಆ ಕೆಲವೊಂದು ವ್ಯಾಪಾರಿ ಒಡಂಬಡಿಕೆಗಳಿಗೆ ಈ ಭೇಟ್ಟಿ ನಾಂದಿಯಾಗ ಬಹುದಷ್ಟೆ.

ಐಸನ್ ಹಾವರರು ಮೋಸ್ಕೋವಿಗೆ ಭೇಟಿ ನೀಡಿ ಐತಿಹಾಸಿಕ ದಾಖಲೆಯನ್ನು ನಿರ್ಮಿಸಿದ್ದಂತೆ, ತನ್ನ ಪೀಕಿಂಗ್ ಭೇಟಿಯಿಂದ ಹೊಸತೊಂದು ನಿಕ್ಸನ್ ಮತ್ತವರ ಮುಖ ಕೇಸಿಂಜರ್ ನಂಬಿದ್ದಾರೆ, ಅದು ಬರಿಯ ಭ್ರಮೆ ಮಾತ್ರವಾದೀತು. ಪೀಕಿಂಗ್ ನಿಕ್ಸನ್ನರ ಬಗ್ಗೆ ಆಸಕ್ತಿ ತೋರದಿದ್ದರೂ ನಿರಾಸಕ್ತಿ ತೋರಿಸದಿದ್ದರೆ ಅವೇ ಮಹತ್ವದ ಸಂಗತಿ.

ಗಾಂಧೀ ಪುಣ್ಯತಿಥಿ ಆಚರಣೆ

ತಾ. 12–2–72ರಲ್ಲು ಪ್ರಾತಃ ಗಂಟೆ 7ಕ್ಕೆ ಶ್ರೀ ಎಸ್ ಎಸ್. ನಾಯಕರ ಅಧ್ಯಕ್ಷತೆಯಲ್ಲಿ ಮಹಾತ್ಮಾ ಗಾಂಧಿ ಪುಣ್ಯ ತಿಥಿಯನ್ನು ಸುಪ್ತ ವತಭಾಂಡೇಶ್ವರದಲ್ಲಿ ಗಾಂಧಿ ಪ್ರತಿಮೆಯ ಸಮಕ್ಷಮ ಆಚರಿಸಲಾಯಿತು ಈ ಕಾರ್ಯ-ಕ್ರಮವನ್ನು ಕಳೆದ 24 ವರುಷಗಳಿಂದ "ಕತಾಯಿ ಮುಂಡಳದ" ಶ್ರೀ ಶ್ರೀನಿವಾಸ ಪೈಗಳು ನಡೆಸಿಕೊಂಡು ಬರುತ್ತಿದ್ದರು. ಈ ಸುಸಂದರ್ಭದಲ್ಲಿ ಮುಂದಿನ ನರುಷದ ೭೫ನೇ ಪುಣ್ಯತಿಥಿಯನ್ನು ಆತ್ಯಂತ ವಿಜೃಂಭಣೆಯಿಂದ ಆಚರಿಸಲು ಸುಮಾರು ಐವತ್ತು ಶ್ರದ್ಧಾವಂತ ಜನರು ಸೇರಿ ಸಭೆಯಲ್ಲಿ ನಿರ್ಧರಿಸಲಾಯಿತು. ಗಾಂಧಿ ಪ್ರಾರ್ಥನೆ, ಭಜನೆ, ಅವರ ಪ್ರಿಯ ಗೀತೆ, ಬ್ಯಾಬಲ್, ಕುರಾನ್, ಪ್ರವಚನ ನಡೆಯಿತು. ಪ್ರಸಾದ ವಿತರಣೆಯ ನಂತರ ಶ್ರೀ ರಾಘವೇಂದ್ರಕೃಷ್ಣ ಭಟ್ಟರು ಧನ್ಯವಾದ ಅರ್ಪಿಸಿದರು.

ಗೇಹರಾಜ್ಯದಲ್ಲಿ

ನಾನು, ನನ್ನದು ಅಂದರೆ ಹೋಯ್ ಹೋಯ್

"ಕೇಳಿದಿರಾ?"

"ಏನು?"

"ಮುತ್ತಿಗೇನು ವಿಚಾರ? ದಕ್ಷಿಣದವಲ್ಲಿಯುದ್ಧ. ಜನವರಿಯಲ್ಲಿ ಬಾಂಗ್ಲಾ...."

"ಈಗ ಫೆಬ್ರವರಿಯಲ್ಲ?"

'ಇಲೆಕ್ಷನ್ನು....'

'ಮತ್ತೆ ಮೋರ್ಗೆ?'

'ಮೋರ್ಜಗೇನಂತೆ? ತಿರಿಗೆಗಳ ಬಗ್ಗೆ ತಲೆ ತುರಿಸಿದರೆ ಸಿರಿ....'

'ಹ್ಞೂಂ...ಈ ಬಾರಿ ಹದಿನಾರು ರಾಜ್ಯಗಳು ನುತ್ತು ಎರಡು ಕೇಂದ್ರಾಧೀನ ಪ್ರದೇಶಗಳಲ್ಲಿ ಚುನಾವಣೆ ನಡೆಯುತ್ತದೆ....'

'ಇಪ್ಪತ್ತು ಕೋಟಿ ಮತದಾರರು ಇದರಲ್ಲಿ ಭಾಗವಹಿಸುತ್ತಾರಂತೆ. ಸುಮಾರು ಎರಡೂ ಮುಕ್ಕಾಲು ಲಕ್ಷ ಮತಕಟ್ಟೆಗಳು ತಲೆಯೆಂದೆ. ಇವುಗಳಲ್ಲಿ ಒಟ್ಟು ಜನಿಮೊದ ಲಕ್ಷ ಸಿಬ್ಬಂದಿಗಳಿರುತ್ತಾರಂತೆ, ಅಂದರೆ ಸರಾಸರಿ ಒಂದು ಕೇಂದ್ರಕ್ಕೆ ಏನರು....'

"ಮತ್ತೆ?ಎಂದು ಸುಸ್ತಿ ನೋಡು, ಈ ಬಾರಿ ಸಾಮಾನ್ಯವಾಗಿ ಎರಡು ಕಿಲೋಮೀಟರಿಗೆ ಒಂದರಂತೆ ಮತದಾನ ಕೇಂದ್ರಗಳನ್ನು ನಿರ್ಮಿಸಿದ್ದಾರಂತೆ...."

'ಆಗಲಪ್ಪ, ಜನರಿಗೆ ನಡೆಯುವ ತ್ರಾಣವಾದರೂ ಇನು ತಪ್ಪಿತು....'

'ನೋಡು. ಅದೇ ಕೆಟ್ಟದ್ದು....'

'ಯಾವುದು?'

'ಅಲ್ಲ. ಮತದಾನವನ್ನು ಪ್ರಜಾಪತ್ತೆ ಯಲ್ಲಿ ಬೆಲೆ ಇರಾದ. ಇದನ್ನು ಶೀತುವು ದೊಡದೆ. ಪ್ರಜೆಯು ತನ್ನ ಕರ್ತವ್ಯವನ್ನು ಪಾಲಿಸಿದಂತೆ....'

'ಹ್ಞೂಂ....'

"ಈ ಕರ್ತವ್ಯಪಾಲನೆಯಲ್ಲಿ ಇನು ನಡೆಯುವ ರೈನು ಪಡಿಸಲು ಹಿಂದೇಟು ಹಾಕುವನರು ಪ್ರಜಾಪತ್ತೆಗೆ ನಾಲಾಯಕ್ಕು..."

"ಇರಬಹುದೊನ್ನಿ. ಆದ್ರೆ ನಮ್ಮ ಜನ ಹೇಳುವುದುಂಟು—ಯೊರು ಉಸ್ಟು ದೂರ ನಡೆಯುತ್ತಾರೆ? ಮತ್ತೆ ಒಟು ಹಾಕಿದರೂ ನಮಗೇನು ಲಾಭ ಅಂತ...."

'ನೋಡು ಇದರ ಅರ್ಥ ಅಂದರೆ. ನಾವು ಪ್ರಜಾಪ್ರಭುತ್ವವನ್ನು ರೂಢಿಸಿಕೊಂಡಿಲ್ಲಾಂತ. ನಮ್ಮ ಶಾಸಕರನ್ನು ನಾವೇ ಆರಿಸಿಕೊಂಡಿದ್ದೇವೆಯೆಂಬ ಆತ್ಮತೃಪ್ತಿಯೂದರೂ ಇದೆಯೆಲ್ಲವೆ?'

'ಆದರೆ ನೋಡಿ, ಈಗ ಎಲ್ಲವನ್ನೂ ಹಣದಿಂದ ಅಳೆಯಲಾಗುತ್ತಿದೆಯಲ್ಲಾ?"

'ಭೌತಿಕ ತೃಪ್ತಿ—ಪ್ರಾಪ್ತಿಗಳು ಸ್ಥಿರವಲ್ಲ....'

'ಇದು ವೇದಾಂತವಾಯ್ತು. ಆದರೆ ಆತ್ಮ ತೃಪ್ತಿಯಿಂದ ಹೊಟ್ಟೆ ತುಂಬುವುದಿಲ್ಲ. ...'

'ಅದು ಸುಳ್ಳು ಆತ್ಮ ತೃಪ್ತಿಸಿಗೆ ಹಸಿವೆಯೆಂಬುದೇ ಇರುವುದಿಲ್ಲ. ಆತನಿಗೆ ಅವರ ಕತೆಗಳೇ ಇಲ್ಲ....'

'ಅಲ್ರಿ, ಏನೆಲ್ಲ ಹಿಂದಿನ ಕಾಲದ ಮಾತಾಯ್ತು. ಕಾಡಿಗೆ ಹೋಗಿ...."

'ಕಾಡಿಗೆ ಯಾಕೆ ಹೋಗಬೇಕು? ಕೈನೆ ಸಿಕ್ಕುವರಲ್ಲೇ ತೃಪ್ತಿಪಟ್ಟು ಕೊಂಡಿರುವವರು ಎಷ್ಟು ಜನರಿಲ್ಲ? ಸುಖ ನುಣುಗಳಲ್ಲಿ ಸಮತೋಲದಿಂದಿರುವವನೆರಿಲ್ಲ? ಏರುವ ಆಸೆಯಿಲ್ಲವಾದರೆ ಬೀಳುವ ಆಂಜಿಕೆಯೂ ಇಲ್ಲ....'

'ಅಲ್ರಿ, ಇದು ಪಲಾಯನ ವಾದಕ್ಕೆ ಕೀರ ಹಿಡ್ತಿರವಾಗುತ್ತದೆ....'

'ಪಲಾಯನವಾದ ಕರ್ಮ ತ್ಯಾಗಕ್ಕೆ ನಾಂದಿಯಾಗ.ತ್ತನೆ. ಆಂಜಿಕೆಯಿಂದ ಕರ್ಮವನ್ನು ಬಿಟ್ಟು ನಿಷ್ಠಾವ ಯೋಗದ ಅರ್ಜುನನಂತೆ ನಲಾಯನ ಮಾಡುತ್ತಾನೆ. ಆದರೆ. ಈ ಆತ್ಮ ತೃಪ್ತ ಕರ್ಮವನ್ನು ತ್ಯಜಿಸುವುದಿಲ್ಲ: ಕರ್ಮಯೋಗಿಯಾಗಿ ಕರ್ಮ ನಲನವನ್ನು ತ್ಯಜಿಸುತ್ತಾನೆ—ಆಗ ಆತನಿಗೆ ಕರ್ಮಾಮಾನ ತೃಪ್ತಿ ಬರುತ್ತದೆ. ಸುಖ ದುಃಖ, ಶೀತ ಉಷ್ಣ, ನಿಂದೆ-ಸ್ತುತಿ.ಎಲ್ಲೆ ಡೆಯೂ ಸಮಬರ್ತಿಯೊಗುತ್ತಾನೆ.'

'ಅಲ್ರಿ. ಭಾರಿ ಲೆಕ್ಚರ್ ಬಿಟ್ಟು ಬಿಟ್ರಿ. ಎಲ್ಲಾದ್ರೂ ಕಾಲೇಜದಲ್ಲಾಗುತಿದ್ರೆ ಡೆಸ್ಕು ಒಡೆದು ಹೋಗುವಷ್ಟು ಮೆಚ್ಚುಗೆ ವ್ಯಕ್ತ ವಾಗುತ್ತಿತ್ತು.'

'ಅಧವಾ ಡೆಸ್ಕಿನ ಕಾಲುಗಳು ಮೇಡಿಕೆ ಮೇಲೆ ಹಾರಿ ಬರುತಿದ್ದುದ್ದೋ....'

'ಅದಿರ್ಲಿ....ಅಂದ್ರೆ ಒಟು ಹಾಡುವುದು ಪ್ರಜೆಯ ಕರ್ತವ್ಯ....'

'ನಿಜಕ್ಕೂ....'

'ಯಾರಿಗೆ?'

'ಯಾರು ತನಗೆ ಮೆಚ್ಚುಗೆಯೊಗುತ್ತಾರೋ ಅವರಿಗೆ ...'

'ಅಲ್ರಿ, ಇಲ್ಲಿ ರಾಜ್ಯಕೀಯ ಪಕ್ಷಗಳು ಆಷ್ಟೆ ಬರುತ್ತವಲ್ಲಾ'

'ಬರುತ್ತವೆ. ಆನರೆ, ತನ್ನ ಧ್ಯೇಯ—ನೀತಿಗಳಿಗೆ ಹೊಂದಿಕೊಳ್ಳುವ ಪಕ್ಷದ ಅಭ್ಯರ್ಥಿಗೆ....'

'ಆ ಅಭ್ಯರ್ಥಿ ತನಗೆ ಬೇಡದವನಾದರೆ....'

'ಆದಕ್ಕೇನು ಮಾಡಲಾಗುತ್ತೆ? ಪಕ್ಷೀಯ ಪ್ರಣಾಳಿಯ ಪ್ರಜಾಸತ್ತೆಯನ್ನು ಒಪ್ಪಿಕೊಂಡ ಮೇಲೆ ಪಕ್ಷ ಬೇಡನೆಂದರಾಗುತ್ತದೆಯೆ? ಬೆಟ್ಟದ ಮೇಲೊಂದು ಮನೆಯ ಮಾಡಿ ಹುಲಿಗಂಜಿದಡಾಗುವುದಿಲ್ಲ ನೋಡು....'

'ಅಂದರೆ, ಪಕ್ಷಾತೀತರಿಗೆ ಇಲ್ಲಿ ಬೆಲೆಯಿಲ್ಲ...'

'ಒಂದು ರೀತಿಯಿಂದ ಇಲ್ಲಾನ್ನು. ಆದರೆ, ನನ್ಮ ರಾಜ್ಯಕೀಯದ ಗತಿ ವಿಚಿತ್ರ....'

'ಯಾಕೆ?'

'ಗೆದ್ದು ಬರಲು ಪಕ್ಷಾತೀತರಾಗುವುದು, ಗೆದ್ದ ಮೇಲೆ ಅಧಿಕಾರಕ್ಕಾಗಿ ಪಕ್ಷ ಸೇರುವುದೊಂದು ಅಂಟು ರೋಗ....'

'ಪಕ್ಷಾಂತರಕ್ಕೆ ತಡೆ ಬಂದರೆ ಮಾತ್ರ ಈ ರೋಗ ನಾಸಿಯೊಗಬಹುದು ...'

'ಅದೂ ಸಾಧ್ಯವಿಲ್ಲ. ಅಭಿಪ್ರಾಯ ನಂಬಿಕೆ ಬದಲಾಯಿಸುವುದು ತಪ್ಪಾಗಲಾರದು....'

'ಹ್ಞೂಂ. ಅವರವರ ಇಚ್ಛೆಯಂತೆ ಜಾತಿ—ಮತ ಹೆಸರುಗಳನ್ನೂ ಬದಲಾಯಿಸ ಬಹುದಾಗಿರುವಾಗ, ರಾಜ್ಯನೀತಿ ನಂಬುಗೆಯನ್ನು ಬದಲಾಯಿಸುವುದು ಹೇಗೆ ತಪ್ಪಾಗುತ್ತದೆ? ಒಂದು ರೀತಿಯಿಂದ ಪ್ರಗತಿಯ ಯಶಸ್ಸು ಆಡಗಿರುವುದೇ ಈ ಬದಲಾವಣೆಯಲ್ಲಿ.'

'ಇದೂ ಹೌದೂನ್ನು ನದಿಯ ನೀರಿಗೆ ಶಾಸ್ತ್ರವಿಲ್ಲ; ಏಕೆಂದರೆ ಅದು ಹರಿಯುತ್ತದೆ, ಗತಿಶೀಲವಿದೆ. ಆದರೆ, ಹಳ್ಳದ ನೀರು ಹಾಗಲ್ಲ. ಹಾಗೆಯೇ ಪದೇಪದೇ ನಂಬಿಕೆ—ವಿಶ್ವಾಸಗಳು ಬದಲಾಗುತ್ತ ಗತಿ ಶೀಲವಾದರೆ, ಅದು ಪ್ರಗತಿಶೀಲವಾಗುತ್ತದೆ.'

'ಆದರೆ ಒಂದು. ಈ ಬದಲಾವಣೆ ಆತ್ಮ ಪ್ರೇರಿತವಾಗ ಬೇಕು; ನಿಸ್ವಾರ್ಥವಾಗಿರ ಬೇಕು....'

'ಅದು ಸರೀನ್ನು....'

'ಆದರೆ, ಇಂದಿನ ಪಕ್ಷಾಂತರ ಆತ್ಮ ಪ್ರೇರಿತವಾಗಿದೆಯೆ?'

'ಅಲ್ರೆ, ಆತ್ಮದಲ್ಲೂ ಸತ್—ಅಸತ್ ಎಂಬಂಶಗಳಿವೆ. ಅಸದಾತ್ಮ ಪ್ರೇರಣೆಯ ಬಲದಿಂದಲೇ ಇಂದಿನ ಹೆಚ್ಚಿನ ಪಕ್ಷಾಂತರಗಳು ನಡೆಯುತ್ತಿವೆಯೆಂಬುದು ನಿರ್ವಿವಾದ....'

'ಇಲ್ಲವಾದರೆ, ಚುನಾವಣೆಗಳಲ್ಲಿ ಸ್ಪರ್ಧಿಸಲು ತಾನೇ ಸುಯೋಗ್ಯನೆಂಬ ದುರಭಿಮಾನ ಮೂಡಿ ಪಕ್ಷತ್ಯಾಗವೇಕೆ ಮೂಡಬೇಕು?'

'ನೋಡು, ಒಂದು ವರ್ಷಕ್ಕೆ ಮೊದಲು ಇಂಡಿಕೇಟೇ ಉತ್ತಮ ಪ್ರಗತಿಶೀಲ, ದೇಶೋದ್ಧಾರ ಕಾರ್ಯ ಸಮರ್ಥ ಪಕ್ಷವೆಂದು ನಂಬಿ ಆದಕ್ಕೆ ಪಕ್ಷಾಂತರಗೊಂಡವರು ಈಗ ತಮಗೆ ಟಿಕೇಟು ಸೀಡಲಿಲ್ಲ, ತಮ್ಮವರಿಗೆ ಟಿಕೇಟು ಸಿಗಲಿಲ್ಲಯೆಂದು ವಿಶ್ವಾಸಾಂತರ ಮಾಡಬೇಕಾದರೆ, ಅವರ ವಿಶ್ವಾಸ ಆಸದಾತ್ಮ ಪ್ರೇರಿತವೆಂದು ಬೇರೆ ಹೇಳಬೇಕೆ?'

'ಹೌದ್ರಿ, ದೆಹಲಿಯಲ್ಲಿ ಜಂತರ್—ಮಂತರ್‌ನ ಕಾಂಗ್ರೆಸ್ ಕಾರ್ಯಾಲಯವನ್ನು ಸಿಂಡಿಕೇಟಿಗೇ ಬಿಟ್ಟುಕೊಟ್ಟರಂತಲ್ಲಾ?'

'ಹ್ಞೂಂ, ತಮ್ಮ ತಪ್ಪನ್ನು ಒಪ್ಪಿಕೊಂಡು ಇಂಡಿಕೇಟು ನೀಡಿದ್ದಲ್ಲ; ಅದು ಬಹಳ ಕಾಲದಿಂದಲೂ ಸಿಂಡಿಕೇಟಿನ ವಶದಲ್ಲೇ ಇತ್ತು ಎಂಬುದರಿಂದ ನ್ಯಾಯೂಲಯ ಹಾಗೆ ಮಾಡಿತು.'

'ಇನ್ನು ಬೆಂಗಳೂರಿನ ಕಾಂಗ್ರೆಸ್ ಭವನವೂ ಹಾಗೇ ಆಗಬಹುದು...'

'ಆಗ ಬಹುದು...'

'ಇದು ಇಂಡಿಕೇಟಿಗೊಂದು ಶುಭ ಚಿಹ್ನೆ..

'ಹ್ಞೂಂ....

"ಮತ್ತೆ ನೋಡಿ, ಇಂಡಿಕೇಟಿನ ಕೋಟೆ ಭಾರೀ ಬಿರುಕು ಬಿದ್ದಿದೆ...."

'ಹೌದು. ಆಸಾಮದಿಂದ ತೊಡಗಿ ಕರ್ನಾಟಕದವರೆಗೂ ತಿರಸ್ಕೃತ ಟಿಕೇಟಿಗರು ಪಕ್ಷದ ನಾಯಕತ್ವದ ವಿರುದ್ಧ ಬಂಡೆದ್ದಿದ್ದಾರೆ.'

'ಕೆಲವರಿಗೆ ಎಮ್ಮೆಲ್ಸಿ ಆಮಿಶ ತೋರಿಸಿ ನಮೂಧಾನ ಪಡಿಸ ಬಹುದು; ಕೆಲವರಿಗೆ ಏನಾದರೂ ಹುದ್ದೆ, ಉಳಿದ ಕೆಲವರಿಗೆ ಉಚ್ಚಾಟನೆಯ ಬೆದರಿಕೆ....'

'ಏನೂ ಮಾಡಿದರೂ ಬಂಡಾಯಗಾರರ ಕಪಿಸೇನೆ ದೀರ್ಘವಿದೆ....'

'ಹಾಗಾದರೆ ಮುತ್ತಿನ್ನೇನು? ಇಂಡಿಕೇಟ್ ನೊಳಗಿನ ಸಿಂಡಿಕೇಟನ್ನು ಖಂಡಿಸಿ ಭಂಗಿಸಿ ತಮ್ಮದೊಂದು ಕೇಟ್ ರಚಿಸುವುದು..'

'ಅದೂ ಕೆಲನೆಡೆಯೊಗಿದೆ.'

'ಅಲ್ಲಿಗೆ ಕಾಂಗ್ರೆಸ್ಸು ಮತ್ತೆ ಜೂರು ಜೂರಾಗುತ್ತದೆ...ಅಲ್ರಿ, ಪಾಠಶಾಲೆ ಮತ್ತೆ ಹೋಳು ಹೋಳು ಆಗುತ್ತದಂತಲ್ಲಾ?'

'ನೋಡನ್ನು. ಎಂದಿನ ವರೆಗೆ ನಾವು—ನಮ್ಮವರು ಎಂಬುದನ್ನು ಆಲೋಚಿಸದೆ ನಾನು—ನನ್ನದು ಎಂದೇ ಮಾನವ ಚಿಂತಿಸುತ್ತಾನೆಯೋ ಅಲ್ಲಿಯವರೆಗೆ ಎಲ್ಲವೂ ಹೋಳು ಹೋಳು....'

(ಹತ್ತನೆ ಪುಟ ನೋಡಿರಿ)



ವಿಜಯ ಬ್ಯಾಂಕ್‌ಗೆ

ಪ್ರತಿ ವರ್ಷವೂ ದಾಖಲೆಯ ವರ್ಷ



ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-೩.
ಆಡಳಿತ ಕಚೇರಿ: ರೇಸ್‌ಕೋರ್ಸ್ ರೋಡ್, ಬೆಂಗಳೂರು-೧.
ಚೇರ್ಮನ್: ಎಂ. ಸುಂದರ್‌ರಾಮ್ ಶೆಟ್ಟಿ

ಶೇಕ್ ಮುಜಿಬುರ್‌ರಿಂದ
ಅಮರ ಸ್ನೇಹದ ಭರವಸೆ

ಬಾಂಗ್ಲಾದೇಶದ ಪ್ರಧಾನಿ ಮಾನ್ಯ ಬಂಧು ಮುಜಿಬುರ್—ಭಾರತದ ಪ್ರಧಾನಿ ಭಾರತ ರತ್ನ ಇಂದಿರಾ ಗಾಂಧಿ—ಇವರ ಬೆಟ್ಟ—ಕಲ್ಲುತ್ತೆಯಲ್ಲಿ.

ಜಾತ್ಯಾತೀತತೆ, ರಾಷ್ಟ್ರೀಯತೆ, ಪ್ರಜಾಸತ್ತೆ ಮತ್ತು ಸಮಾಜವಾದಗಳ ಸುಭದ್ರ ಸ್ತಂಭಗಳ ಮೇಲೆ ನಿಂತ ಎರಡು ದೇಶಗಳ ಪ್ರಧಾನಿಗಳ ನೊತ್ತ ಮೊದಲ ಶಿಖರಸ್ಥ ಆನಿಶ್ಚರ್ಣೀಯ

ಬಾಂಗ್ಲಾ ಮತ್ತು ಶೇಕ್ ಮುಜಿಬುರ್ ಹೆಸರು ಮನೆ ಮನೆಯ ಮಗುವಿಗೂ ಸುಪರಿಚಿತ. ಎರಡು ತಿಂಗಳುಗಳಿಗೆ ನೊದಲು ಬಾಂಗ್ಲಾ ಕನಸು ನೂತ್ರ: ಶೇಕ್ ಬಂಧಿ ನೂತ್ರ ಬಾಂಗ್ಲಾ ನಾಗರಿಕರು ನಿರಾಶ್ರಿತರು ಆರಕ್ಷಿತರು ನೂತ್ರ.

ಇವೀಗ ಪಾಕ್ ಪದವಲಿತ ಬಾಂಗ್ಲಾ ವಿನೋಚನೆಗೊಂಡಿದೆ, ಮೂವತ್ತಕ್ಕೂ ಹೆಚ್ಚು ರಾಷ್ಟ್ರಗಳ ಮನ್ನಣೆ ಪಡೆದಿದೆ.

ಶೇಕ್ ಮುಜಿಬುರ್ ರೆಹಮಾನರು ಬಂಧ ಮುಕ್ತರಾಗಿ ಬಾಂಗ್ಲಾ ದೇಶದ ಪ್ರಜೆಗಳ ಆಯೋಕ್ತರಗಳ ಪ್ರತೀಕವಾಗಿ ನವ ರಾಷ್ಟ್ರದ ನಿರ್ಮಾಣದ ಸೂತ್ರಧಾರರಾಗಿ ಪ್ರಧಾನಮಂತ್ರಿಯಾಗಿದ್ದಾರೆ.

ಕೋಟಿ ನಿರಾಶ್ರಿತರು ತಮ್ಮ ಮಾತೃ ಭೂಮಿಗೆ ಮರಳಲು ಉತ್ಸುಕರಾಗಿದ್ದಾರೆ. ನಿರಾಶ್ರಿತರ ಸ್ವದೇಶಾಭಿಗಮನ ಪ್ರಕ್ರಿಯೆ ಶೀಘ್ರದಲ್ಲಿಯೇ ಸಂಪೂರ್ಣವಾಗಿ ಜರುಗುವುದು.

ಎರಡು ತಿಂಗಳುಗಳಿಗೆ ಮೊದಲು ಕವಿದಿದ್ದ ಮೋಡಗಳು, ದೊಳಗುತ್ತಿದ್ದ ಗುಡುಗುಗಳು ಕೊಳೆಯುತ್ತಿದ್ದ ಮಿಂಚುಗಳು, ಉಮ್ಮಳಿಸುತ್ತಿದ್ದ ಜೆನಗಳು ನಿಃಶಿಷೆ. ಸ್ವತಂತ್ರ ಬಾಂಗ್ಲಾದೇಶ ಪ್ರಜಾ ಸತ್ತಾತ್ಮಕ ಬಾಂಗ್ಲಾ ದೇಶ ಉದಯವಾಗಿದೆ.

ಸಂಗ ಬಾಂಧವಿಗೆ ತಿರಿದೆದೆಯ ಸ್ವಾಗತ, ಗೌರವ ರಕ್ಷೆ.

ಬಾಂಗ್ಲಾ ವಿಮೋಚನೆಯಲ್ಲಿ ಭಾರತ ವೇಕೆ ನೆರವಾಯ್ತು?

ಯಾವುದೇ ಸ್ವಾರ್ಥದಿಂದಲ್ಲ; ಆಕೆ-ಈ ವಿಷಗಳಿಂದಲೂ ಅಲ್ಲ. ಬಾಂಗ್ಲಾ ವಿಮೋಚನೆಯಿಂದ ಭಾರತದ ಬುನ್ನತ ಆದರ್ಶಗಳು, ನೀತಿ ತತ್ವಗಳು ಬಲಗೊಂಡವು.

ಪಾಕ್ ನೊಗಕ್ಕೆ ಹೂಡಲ್ಪಟ್ಟು ಬಹಳಷ್ಟು ಹಿಂಸೆಗೆ ಗುರಿಯಾಗಿದ್ದ ಬಾಂಗ್ಲಾ ರಾಜ್ಯಕೀಯ ಸ್ವಾತಂತ್ರ್ಯವನ್ನು ಗಳಿಸಿತು. ಬಾಂಗ್ಲಾದಲ್ಲಿ ಶರಣಾಗುವುದಕ್ಕೆ ಮೊದಲು ಪಾಕ್ ಸೇನೆಯು ಅಲ್ಲಿನ ಆರ್ಥಿಕ ವ್ಯವಸ್ಥೆಯನ್ನು, ಸಂಪರ್ಕ ಸಾಧನಗಳನ್ನು, ಆಹಾರ ಸಂಗ್ರಹಗಳನ್ನು ಅದನ್ನು ಇದನ್ನು ಎಲ್ಲವನ್ನೂ ನಷ್ಟಗೊಳಿಸಿತು.

ಆದುದರಿಂದ ಆರ್ಥಿಕ ಪುನರ್ನೇತನ ಬಾಂಗ್ಲಾದ ಪ್ರಥಮಾವಶ್ಯಕತೆ. ಇದನ್ನು ಗಳಿಸದೆ ಹೋದರೆ ರಾಜ್ಯಕೀಯ ಸ್ವಾತಂತ್ರ್ಯ ಮಾತ್ರದಿಂದ ದೇಶ ಕಟ್ಟುವುದು ಅಸಾಧ್ಯ.

ಬಾಂಗ್ಲಾ ದೇಶದ ರಾಜ್ಯಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀಮಂತ ಬಂಗಾಳಗಳು ದೇಶದ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಕಟಿಬದ್ಧರಾಗಬೇಕು – ಇದು ಶ್ರೀಮತಿ ಇಂದಿರಾಗಾಂಧಿಯ-ಭಾರತದ ಕೋಟಿ ಕೋಟಿ ನಾಗರಿಕರ ಹೃದಯವಾಳದ ಸಮಾಶಯ.

ಶೇಕ್ ಮುಜಿಬುರ್ ಬಾಂಗ್ಲಾ ದೇಶದ ಕೃತಜ್ಞತಾ ಭಾವನವನ್ನು ಹೊತ್ತು ತಂದವರು. ಸಂಕಟದ ಸಮಯನಲ್ಲಿ ನೆರವು ನೀಡಿದ ಭಾರತವನ್ನು ಬಾಂಗ್ಲಾ ಮರೆಯುವು ದೆಂದರೆ ಅದೊಂದು ಕೃತಘ್ನತೆಯೆಂದು ನಂಬಿ ಬಂದವರು. 'ಒಂದೊಮ್ಮೆ ನಿಮ್ಮೆಲ್ಲರ ನೆರವು ದೊರೆಯದಿರುತಿದ್ದರೆ ಏನಾಗುತಿತ್ತೋ!' ಎಂದು ಒಂದೇ ವಾಕ್ಯದಲ್ಲಿ ಆಭಾರ ಮನ್ನಿಸಿದರು.

'ಭಾರತ ನಮ್ಮ ಶತ್ರು, ಅದನ್ನು ದಮನಗೊಳಿಸಬೇಕು'— ಇಂದು ಪಾಕ್‌ನ ಭಾರತ ಪರಕ ನೀತಿ. ಇದನ್ನು ಮುಜಿಬುರ್ ಬಹಿರಂಗಗೊಳಿಸಿದರು.

'ಇಸ್ಲಾಮನ್ನು ರಕ್ಷಿಸಿ, ಕಾಶ್ಮೀರವನ್ನು ಸಪಡಿಸಿಕೊಳ್ಳಿ, ಹಿಂದುಗಳು ನಮ್ಮ ಪರಮ ಶತ್ರುಗಳು'— ಇದು ಪಾಕ್ ಸಮರ ನೀತಿ.

'ಪಾಕ್ ಆಡಳಿತಗಾರರು ಉಗ್ರ ವಿಷದ ಹಾವುಗಳು. ಎಲ್ಲಿದೆಯೂ ವಿಷಕಾರುತ್ತಿರುವವುಗಳು; ಅವುಗಳಿಂದ ಶಾಂತಿ ಸ್ಥಾಪನೆ ಹೇಗಾದೀತು?'— ಇದು ಶೇಕರ ಸವಾಲು.

'ಬಾಂಗ್ಲಾದ ನಿರಪರಾಧಿ ಸ್ವಾತಂತ್ರ್ಯ ಪ್ರಿಯ ಪ್ರಜೆಗಳ ಮೇಲೆ ಪ್ರಯೋಗಿಸಲು ಪಾಕಿಗೆ ಶಸ್ತ್ರಾಸ್ತ್ರ ಸರಬರಾಜು ಮಾಡಿದ ಅಮೆರಿಕೆಯ ನೀತಿ ಪ್ರಜಾಸತ್ತಾತ್ಮಕವಲ್ಲ?— ಅಮೆರಿಕನ್ ನಿಲುಮೆಯ ತೀವ್ರ ಖಂಡನೆ.

'ಬಾಂಗ್ಲಾ ದೇಶವನ್ನು ಮತ್ತೆ ವಶಪಡಿಸಿಕೊಳ್ಳುವ ಬಗ್ಗೆ ಯಾವುದೇ ಸಂಚು — ಹೊಂಚು ಹೂಡಬೇಡಿ. ಬಾಂಗ್ಲಾದೇಶದ ಪ್ರಜೆಯ ದೇಹದಲ್ಲಿ ಒಂದು ತೊಟ್ಟು ರಕ್ತವಿರುವವರೆಗೂ ಅದು ಸಫಲವಾಗದು'—ಪಾಕ್ ಸರ್ವಾಧಿಕಾರಿ ಜುಲ್ಫಿಕರ್ ಅಲಿ ಭುಟ್ಟೊಗೆ ಎಚ್ಚರಿಕೆ.

'ಕಳೆದ ಇಪ್ಪತ್ತನಾಲ್ಕು ವರ್ಷಗಳಿಂದ ನೀವು ನಮ್ಮನ್ನು ಹತ್ತಿಕ್ಕಿದಿರಿ; ಆಷ್ಟರಿಂದ ಲೇ ತೃಪ್ತರಾಗದೆ ಬಾಂಗ್ಲಾ ದೇಶದ ಸಂಸ್ಕೃತಿ ಭಾಷೆಗಳನ್ನು ನಿರ್ನಾಮಗೊಳಿಸಲು ಮುಂದುನರಿದಿರಿ'-ಇದು ಪಾಕ್ ಆಡಳಿತ ಗಾರರ ಮೇಲಿನ ಆರೋಪ.

'ಭಾರತ ನಮ್ಮ ಶತ್ರುವಲ್ಲ; ಭಾರ್ಥತೀಯರೆಲ್ಲರೂ ನಮ್ಮ ಸಹೋದರರು—ಭಾರತ—ಬಾಂಗ್ಲಾ ದೇಶಗಳ ನಡುವಣ ಸ್ನೇಹ ವಿಶುದ್ಧ, ಅಭೇದ್ಯ, ಅಮರ, ಮಧುರ. ವಿಶ್ವದ ಯಾವ ಶಕ್ತಿಗೂ ಅದರೆಲ್ಲಿ ಹುಳಿ ಹಿಂಡುವುದು ಸಾಧ್ಯವಿಲ್ಲ-ಇದು ಪ್ರಧಾನಿಯ ಕೆಚ್ಚಿನ ವಿಶ್ವಾಸ.

ಬಾಂಗ್ಲಾ—ಭಾರತ ಪ್ರಧಾನಿಗಳ ಭೇಟ್ಟಿ ಉಭಯ ದೇಶಗಳ ಹೊಸ ಸಂಬಂಧಕ್ಕೆ ನಾಂದಿ. ಮುಂದಿನ ತಿಂಗಳ ಮಧ್ಯಾವಧಿಯಲ್ಲಿ ಡಾಕ್ಕಾದಿಂದ ಭಾರತೀಯ ಸೇನೆಗಳು ಮರಳುವ ನಿರೀಕ್ಷೆ. ಉಪಖಂಡದ ಅರುವತ್ತೈದು ಕೋಟಿ ಪ್ರಜೆಗಳು ಒಂದಾದರೆ, ವಿಶ್ವರಾಜ್ಯಕಾರಣದಲ್ಲೂ ಮಹತ್ವ ಪೂರ್ಣ ಪಾತ್ರವಹಿಸುವುದು ಸಾಧ್ಯವಿದೆ.

●●

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
142 ಶಾಖೆಗಳಿಂದ ಹಬ್ಬರುವ **"ವಿಜಯಾ ಬ್ಯಾಂಕ್"**ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಜೆಯರ್‌ಮೆನ್.

ಪ್ರಾಥಮಿಕ ಆಕರ್ಷಣೆ

ಮುಂದಿನ ತಿಂಗಳಲ್ಲಿ ನಡೆಯಲಿರುವ ರಾಜ್ಯವಿಧಾನ ಸಭಾ ಚುನಾವಣೆಗಳಿಗೆ ನಾಮಪತ್ರಗಳನ್ನು ಸಲ್ಲಿಸುವ ದಿನ ಕಳೆಯಿತು. ಅವನ್ನು ಹಿಂದೆಗೆದುಕೊಳ್ಳುವ ದಿನವೂ ಕಳೆಯುತ್ತಿದೆ. ಇಷ್ಟರಲ್ಲೇ ಚುನಾವಣಾರಂಗದಲ್ಲಿ ಖಚಿತವಾಗಿ ಹೋರಾಡುವ ಉಮೇದ್ವಾರರ ಸ್ಪಷ್ಟ ಚಿತ್ರ ಮೂಡಿ ಬರುತ್ತಿದೆ.

ಒಟ್ಟಿನಲ್ಲಿ ಈ ಚುನಾವಣೆಗಳಿಗೆ ಅತ್ಯಧಿಕ ನಾಮಪತ್ರಗಳು ಬಂದಿವೆ. ಇದುವರೆಗಿನ ಎಲ್ಲ ಪಾಖಲೆಗಳನ್ನೂ ಮೆಟ್ಟಿನಿಂತಿದೆ. ಇದು ಪಕ್ಷಾಧಿಕ್ಯದ ಪರಿಣಾಮವೆನ್ನಲೂ ಬಹುದು; ಕೆಲವು ಪಕ್ಷಗಳ ಬಲಾಧಿಕ್ಯದ್ಯೋತಕವೆನ್ನಲೂ ಬಹುದು; ಪಕ್ಷಾತೀತರ ಸಂಖ್ಯೆಯನ್ನು ಗಮನಿಸುವಾಗ ಅದುವೇ ಕಾರಣವೆನ್ನಬಹುದು. ಈ ಮೂರೂ ಸ್ವಲ್ಪ ಸ್ವಲ್ಪ ಕಾರಣವಾಗಿ ಉಮೇದ್ವಾರರ ಸಂಖ್ಯೆ ಹೆಚ್ಚಿತೆಂಬುದು ಸರಿಯೊಗಬಹುದು. ಜನತೆಯಲ್ಲಿ ರಾಜ್ಯಕೀಯ ಪ್ರಜ್ಞೆ ಮೂಡಿಲ್ಲ, ರಾಜ್ಯಕೀಯದಿಂದ ಜನ ಜಿಗುಪ್ಸೆಗೊಂಡಿದ್ದಾರೆ ಎಂದು ಹೇಳುತ್ತಿರುವವರಿಗೆ ಈ ಉಮೇದ್ವಾರರ ಕಪಿಸೇನೆ ಸೂಕ್ತ ಉತ್ತರಕೊಡುತ್ತದೆ.

ವಿಧಾನ ಸಭೆಯ ಒಟ್ಟು ೨೧೬ ಸ್ಥಾನಗಳಿಗೆ ವಿವಿಧ ಪಕ್ಷಗಳ ಪರವಾಗಿ ಸ್ಪರ್ಧಿಸಿದ ಹುರಿಯಾಳುಗಳ ಸಂಖ್ಯೆ ಹೀಗಿದೆ—

ಇಂಡಿಕೇಟ್	—೨೧೨.
ಸಿಂಡಿಕೇಟ್	—೭೭.
ಜನ ಸಂಘ	—೧೦೫
ಸ್ವತಂತ್ರ	— ೫೫
ಸಮಾಜವಾದಿ	— ೨೫
ಮಾರ್ಕ್ಸಿಸ್ಟ್	— ೨೦
ಸಿ.ಪಿ.ಐ.	— ೪
ಬ್ರಾಮುಕ	— ೭

ಈ ಪಕ್ಷಗಳೆಲ್ಲದೆ ಕನ್ನಡ ಚಳುವಳಿಗಾರರ ಪಕ್ಷ, ಕನ್ನಡ ಸಂಯುಕ್ತರಂಗ, ರಿಪಬ್ಲಿಕನ್ ಪಕ್ಷಗಳೂ, ತಂತಮ್ಮ ಅಭ್ಯರ್ಥಿಗಳನ್ನು ಕೆಲವೆಡೆ ನಿಲ್ಲಿಸಿವೆ. ಇಂಡಿಕೇಟಿನ ಅಧಿಕೃತ ಅಭ್ಯರ್ಥಿಯ ಆಯ್ಕೆಯಿಂದ ಕೆಂಡವಾಗಿ ಬಂಡೆದ್ದ 'ಯುವ ತುರುಷ್ಕರೂ' ಪ್ರತ್ಯೇಕವಾಗಿ ಕೆಲವು ಸ್ಥಾನಗಳಿಗೆ ನಾಮಪತ್ರ ಸಲ್ಲಿಸಿದ್ದಾರೆ. ಅಧಿಕ ಸಂಖ್ಯೆಯಲ್ಲಿ ಪಕ್ಷಾತೀತರೂ ರಂಗಕ್ಕಿಳಿದಿದ್ದಾರೆ.

ಇಂಡಿಕೇಟು ನಾಲ್ಕು ಸ್ಥಾನಗಳನ್ನು ಸಿ. ಪಿ.ಐ.ಗೆ ಬಿಟ್ಟುಕೊಟ್ಟು ಅಧಿಕ ಸ್ಥಾನಗಳಿಗೆ ಸ್ಪರ್ಧಿಸಿದ ಪಕ್ಷ. ಅನಂತರದ ಸ್ಥಾನ ಸಿಂಡಿಕೇಟಿಗೆ. ಕಳೆದ ಬಾರಿ ೫೦ ಸ್ಥಾನಗಳಿಗೆ ಸ್ಪರ್ಧಿಸಿದ ಜನಸಂಘವು ಈ ಬಾರಿ ಸುಮಾರು ಸೇ. ಐವತ್ತರಷ್ಟು ಸ್ಥಾನಗಳಿಗೆ ಹುರಿಯಾಳುಗಳನ್ನು ನಿಲ್ಲಿಸಿದ್ದು ಇದು ಅದರ ಬಲ ಸಂವರ್ಧನೆಯ ಪ್ರತೀಕವೆನ್ನಬಹುದು. ಪಕ್ಷಾತೀತರ ಸಂಖ್ಯೆ ಮಿತಿಮೀರಿದ್ದು, ಕೆಲವರು ಹಲವೆಡೆಗಳಿಂದ ನಾಮಪತ್ರ ಸಲ್ಲಿಸಿದ್ದು ಈ ಬಾರಿಯ ಮತ್ತೊಂದು ವೈಶಿಷ್ಟ್ಯ.

ಇಂಡಿಕೇಟಿನ ದೇವರಾಜ ಅರಸು ಮತ್ತು ಸಿಂಡಿಕೇಟಿನ ವೀರೇಂದ್ರ ಪಾಟೀಲ ಇಬ್ಬರೂ ಈ ಬಾರಿಯ ಚುನಾವಣೆಗಳಿಂದ ದೂರವುಳಿದಿದ್ದಾರೆ. ತಂತಮ್ಮ ಪಕ್ಷಗಳ ಬಗೆಗೆ ತುರುಸಿನ ಪ್ರಚಾರ ಕಾರ್ಯದಲ್ಲಿ ನಿರತರಾಗುವುದೇ ಈ ಹಿಂಜರಿತದ ಹಿನ್ನೆಲೆ. ಇಂಡಿಕೇಟು ಬಹುಮತವನ್ನು ಗಳಿಸಿದರೆ, ಅರಸರನ್ನು ಹಿಂದಿನ ಬಾಗಿಲಿನಿಂದ ವಿಧಾನ ಸಭೆಗೆ ಎಳೆದು ತರುವ ಬಗ್ಗೆ (ಮುಖ್ಯ ಮಂತ್ರಿ ಮಾಡುವುದಕ್ಕೆ) ಈಗಾಗಲೇ ಮಾತುಕತೆ ನಡೆದಿದೆಯೆಂದು ದಟ್ಟ ವದಂತಿ. ಆದರೆ, ಪಾ

ಹೊಸ ಕಾಂಗ್ರೆಸಿನ ಹಳೆಯ ಮಾತು ಹಳೆಯ ಕೃತಿ

ಹಳೆಯ ಮುಖಂಡರನ್ನು ಹೊರಹಾಕಿ ಕಾಂಗ್ರೆಸ್ಸಿನಲ್ಲಿ ಹೊಸರಕ್ತ ತುಂಬಿಸಿ, ಹೊಸ ಅಧ್ಯಾಯವನ್ನು ತೆರೆದಿರುವುದಾಗಿ, ಹೊಸ ದಾಖಲೆಯನ್ನು ಂಟುಮಾಡಿರುವುದಾಗಿ ಡಾ| ಇಂದಿರಾ ಗಾಂಧಿಯವರು ಅನ್ನುತ್ತ ಬರುತ್ತಿದ್ದಾರೆ. ಹಳೆಯ ಮುಖಂಡರ ಹಿಂದೆ ನಿಂತಿದ್ದವರು!ಮುಖಂಡರನ್ನು ಮುಂದೆಯೇ ಬಿಟ್ಟ ಹೊಸ ಕಾಂಗ್ರೆಸ್ಸಿನಲ್ಲಿ ಹಳೆಯ ಸದಸ್ಯರಾಗಲು ಹಂದ್ಯಾಟ ನಡೆಸುತ್ತಿದ್ದಾರೆ. ಲೋಕ ಸಭೆಯ ಮೂರರಲ್ಲಿ ಎರಡಂಶಕ್ಕಿಂತಲೂ ಅಧಿಕ ಸ್ಥಾನಗಳನ್ನು ಇಂದಿರಾ ಕಾಂಗ್ರೆಸ್ಸು ಪಡೆದುಕೊಂಡುದೇ ತಡ, ಉಳಿದ ಕಾಂಗ್ರೆಸ್ಸಿಗರ ಕಾಲಿನ ಬಲ ಉಡುಗಿ ಹೋಯಿತು. ಹೊಸ ಅಧ್ಯಾಯ ತೆರೆಯಲ್ಪಡುತ್ತದೆಂದೇ ಜನತೆ ನಂಬಿತ್ತು.

ಹೊಸ ಕಾಂಗ್ರೆಸ್ಸಿಗೆ ವರರೂಪವಾಗಿ ನಿರಾಶ್ರಿತರ ಪ್ರವಾಹ ಹರಿದು ಬಂತು; ಪಾಕಿಸ್ತಾನ ಆಕ್ರಮಣ ನಡೆಸಿತು; ವಿಮಾನ ದಾಳಿ ಹತ್ತಾನೆ ನಡೆಸಿತು. ನಮ್ಮ ವೀರ ವೈಮಾನಿಕರು ಆಕ್ರಮಣಗಾರರ ವಿಮಾನವನ್ನು ಹೊಡೆದುರುಳಿಸಿದರು. ಉರುಳಿಸಿದವರು ಯಾರು, ಯಾವ ರಾಜ್ಯದವರು, ಯಾವ ಭಾಷೆಯನ್ನಾಡುವವರು ಯಾವ ಮತಸ್ಥರು ಇತ್ಯಾದಿ ವೈಯಕ್ತಿಕ ಹಾಗೂ ಚಿಕ್ಕ ವಿಷಯಗಳತ್ತ ಜನತೆಯ ಗಮನ ಹರಿಯಲಿಲ್ಲ. ಅವರಲ್ಲಿ ಉತ್ಸಾಹದ ಹೊಳೆ ಹರಿಯಿತು. ಅವರ ಪಾಲಿಗೆ 'ನಮ್ಮ ವೀರ ವೈಮಾನಿಕರು' ಅಷ್ಟೇ.

ಇಂದಿರಾ ಗಾಂಧಿಯವರ ನಿವಾಸಸ್ಥಾನದಲ್ಲಿ ಕಾಂಗ್ರೆಸ್ಸ್ ಕಾರ್ಯಕರ್ತರು ಕೂಡಿದ್ದರು. ಅವರನ್ನು ಉದ್ದೇಶಿಸಿ ಇಂದಿರಾಜಿಯವರು ಭಾಷಣ ಮಾಡಿದರು. ಇದು ಯಾವಾಗಲೂ ನಡೆಯುತ್ತಿರುವ ಘಟನೆಯ ಹಾಗೆನೇ ಇದ್ದರೂ, ಈ ಸಭೆ ಸೇರಿದ್ದು ಪಾಕಿಸ್ತಾನ ವೈಮಾನಿಕ ದಾಳಿ ನಡೆಸಿದೊಡನೆ ಆ ಕೂಟದಲ್ಲಿ ಇಂದಿರಾಜೀಯವರು ಮಾತಾಡುತ್ತ ಪಾಕಿಸ್ತಾನದ ವಿಮಾನಗಳನ್ನು ಹೊಡೆದುರುಳಿಸಿದವರು ಯಾರು ಯಾವ ಮತಕ್ಕೆ ಸೇರಿದವರು ಮುಂತಾದ ವಿಷಯಗಳನ್ನು ಹೊರಗೆಡಹಿದರು. ಪಾಕಿಸ್ತಾನದ ವಿಮಾನದಾಳಿಯನ್ನೆದುರಿಸಿದ ನಾಲ್ಕು ಫೈಲಟುಗಳಲ್ಲಿ ಮುವ್ವರು ಕ್ರಿಸ್ತೀಯರು. ಹಾಗಾದರೆ ಉಳಿದವರು ಇಂದಿರಾಜೀಯವರ ದೃಷ್ಟಿಯಲ್ಲಿ ಹೆಸರುಲ್ಲದನಮೆಂದೆ ಹಿಂದೂ ಗಳು, ಹಿಂದೂಗಳ ಹೆಸರು ಉಚ್ಚರಿಸಲೂ ಯೋಗ್ಯ ಇಲ್ಲವೋ ಏನೋ! ಕ್ರಿಸ್ತೀಯರು ಕದನ ಕಲಿಗಳೋ ಏನೋ! ಹಿಂದೂಗಳು ಹೇಡಿಗಳು ತಾನೆ!....ಈ ಒಡೆದು ಗೆದ್ದು ಕೊಳ್ಳುವ ಗತ್ತುಗಾರಿಕೆ ಏಕೆ? ಒಂದು ದೇಶದ ಚುಕ್ಕಾಣಿಯನ್ನು ಹಿಡಿದುಕೊಂಡಿರುವವರು ಆ ದೇಶದ ಪ್ರಜೆಗಳನ್ನು ಪ್ರತ್ಯೇಕಿಸಬಹುದೇನು?—ಆದೂ ಗಂಡಾಂತರಕಾರಿ ಪರಿಸ್ಥಿತಿಯಲ್ಲಿ! ಕ್ರಿಸ್ತೀಯರೂ, ಮಹಮ್ಮದೀಯರೂ, ಸಿಖ್ಖರೂ, ಜೈನರೂ, ಬೌದ್ಧರೂ, ಶೈವರೂ, ವೈಷ್ಣವರೂ....ಎಲ್ಲರೂ ಹಿಂದೂಗಳೇ ಆಲ್ಲವೇನು? ಎಲ್ಲರೂ ಭಾರತೀಯರೇ ಅಲ್ಲವೇನು?....ಇದು ಕಾಂಗ್ರೆಸ್ಸಿನ ಹಣೆಯ ಬರಹವೇ ಇದೆ. ಹೊಸ ಕಾಂಗ್ರೆಸ್ಸೆಂದೊಡನೆ ಹೊಸ ಬರಹ ಅಲ್ಲಿ ಮೂಡಿ ಬರುವದಿಲ್ಲ. ಕಾಂಗ್ರೆಸ್ಸಿನ ಆರಂಭ ಕಾಲದಿಂದಲೂ ಈ ಜಾಡ್ಯ ಇದಕ್ಕೆ ತಗಲಿದೆ. ಒಡೆದು ಆಳುವದರಲ್ಲಿ ನಿಪುಣರಾದ ಬ್ರಿಟಿಷರು ತಮ್ಮ ಗುಣವನ್ನು ತಾವು ಬೀಜ ಹಾಕಿ ಬೆಳೆಸಿರುವ ಕಾಂಗ್ರೆಸ್ಸಿಗೆ ದಾನವಿತ್ತು ಹೋಗಿದ್ದಾರೆ. ಆದರ ಪರಿಣಾಮವೇ ಭಾರತದ ವಿಭಜನೆ. ಆದರಿಂದಲಾದರೂ ಕಾಂಗ್ರೆಸ್ಸು ಬುದ್ಧಿ ಕಲಿತುಕೊಂಡಿತೇ?—ಇಲ್ಲ. ಅದು ಕೆಲವರನ್ನು ಕನಿಷ್ಟ ಸಂಖ್ಯೆಯವರೆಂದು ತಲೆಯ ಮೇಲಿಟ್ಟುಕೊಂಡು, ಬಹು ಸಂಖ್ಯಾಕರನ್ನು ಬಗ್ಗು ಬಡೆಯುತ್ತಿದೆ.

ಡಾ| ಇಂದಿರಾರವರು ತಾವು ಕೆಂಡು ಹಿಡಿದ ರಹಸ್ಯವನ್ನು ಬಯಲಿಗೆಳೆಯುವದರಲ್ಲೇ ತೃಪ್ತಿಪಟ್ಟುಕೊಳ್ಳಲಿಲ್ಲ. ಅವರು ಆಂಮೆ ಬಹುಸಂಖ್ಯಾಕರನ್ನು ಜರೆದರು; ಬಹು ಸಂಖ್ಯಾಕರು ಇನ್ನು ಮುಂದೆ ಅಲ್ಪ ಸಂಖ್ಯಾಕರು ಕಮ್ಮಿ ಇಲ್ಲವೆಂಬುದನ್ನು ಅರಿತುಕೊಡಿರ ಬಹುದೆಂದರು. ಯಾಕೆ ಇವೆಲ್ಲಾ? ಪಾಕ್ ವಿಮಾನವನ್ನುರುಳಿಸಿದ ಗಣಪತಿ ಕರ್ನಾಟಕದವರೆಂದಾಕ್ಷಣ ಉಳಿದವರ ಕುರಿತು ಕರ್ನಾಟಕದವರು ಗೌರವ ವ್ಯಕ್ತಪಡಿಸದಿರುವದುಂಟೇ? ಅವರಿಗೆ ತಿಳಿಯದಿದ್ದ ಕ್ಷುದ್ರ ಮನೋಭಾವನೆಯನ್ನು ಡಾ| ಇಂದಿರಾಜೀ ಪ್ರಜ್ಞೋದಿಸಿದರೆಂದರೆ ತಪ್ಪಾಗಲಾರದು.

ಹೊಸ ಕಾಂಗ್ರೆಸ್ಸಿಗೆ ಹಾಗಾದರೆ ಅಲ್ಪ ಸಂಖ್ಯಾಕರ ಮೇಲೆ ಅಮಿತ ಪ್ರೇಮ ಅಂಕುರಿಸಿತೇನು? ಅವರಿಗೆ ಅಲ್ಪಸಂಖ್ಯಾಕರ ಜ್ಞಾಪಕ ಬರುವದು ಚುನಾವಣಾ ಸಮಯದಲ್ಲಿ ಮಾತ್ರ. ಹೊಸ ಕಾಂಗ್ರೆಸ್ಸಿಗರು ಹೊಸ ಹೊಸ ಮಾತುಗಳಿಂದ ಅಲ್ಪಸಂಖ್ಯಾಕರನ್ನು ಹೊಗಳುವ ಮೋಜಿನಲ್ಲಿದ್ದಾಗ, ಆಗ್ರಾ ನಗರ ಸಭೆಯು ಮೇಸ್ತ್ರಿ, ಗಣಪತಿ ಮತ್ತು ಲಾಝುರಸ್.—ಪಾಕಿಸ್ತಾನದ ವಿಮಾನಗಳನ್ನುರುಳಿಸಿದ ಮುವ್ವರು ವೀರ ವೈಮಾನಿಕರಿಗೆ ದಮರ್ಥ ನಿವಾಸ ಸ್ಥಳವನ್ನು ಕೊಡುವದಾಗಿ ತೀರ್ಮಾನಿಸಿತು. ಈ ತೀರ್ಮಾನವನ್ನು ತಂದವರು ಯಾರು? ಹೊಸ ಕಾಂಗ್ರೆಸ್ಸಿಗರೇ? ಇಂತಹ ತೀರ್ಮಾನ ತರಲು ಅವರಿಗೆ ತೋಚುವದುಂಟೇ? .ಅವರು ತೀರ್ಮಾನ ಮಂಡಿಸುವದು ಹಾಗಿರಲಿ, ಸುಮ್ಮಗಿದ್ದರೂ ಗೌರವ ಉಳಿಸಿಕೊಳ್ಳಬಹುದಿತ್ತು. ಆ ತೀರ್ಮಾನವನ್ನು ಎದುರಿಸಿದರು! ಯಾಕೆ? ಆ ತೀರ್ಮಾನವನ್ನು ಭಾರತೀಯ ಜನ ಸಂಘದವರು ತಂದಿದ್ದರು.

ಇಂದಿರಾ ಗಾಂಧಿಯವರು ಬಹು ಸಂಖ್ಯಾಕರೆನ್ನುವಾಗ ಅವರ ಮನಸ್ಸಿನಲ್ಲಿದ್ದದ್ದು ಭಾರತೀಯ ಜನಸಂಘ. ಅವರ ಮಾತಿಗೂ ಜನಸಂಘದ ಕೃತಿಗೂ ಅಬ್ಬಾ, ಅದೆಂತಹ ಹೋಲಿಕೆ! ಹೊಸ ಕಾಂಗ್ರೆಸ್ಸಿಗೆ ಮಾತೇ ಬಂಡವಾಳ, ಭಾರತೀಯ ಜನಸಂಘಕ್ಕೆ ಕೃತಿಯೇ ಬಂಡವಾಳ ಇರಬಹುದು. ಜನತೆ ಮೋಸ ಹೋಗುವುದು ಯಾವ ರೀತಿಯ ಬಂಡವಾಳಕ್ಕೆ? ಡಿಲ್ಲಿಯಲ್ಲಿ ಹೊಸ ಕಾಂಗ್ರೆಸ್ಸು ಅಲ್ಪ ಸಂಖ್ಯಾತರ ಜಪ ಮಾಡುತ್ತಿದ್ದಾಗ ಆಗ್ರಾದಲ್ಲಿ ಭಾರತೀಯ ಜನ ಸಂಘವು ಭಾರತೀಯ ವೈಮಾನಿಕ ದಳದವರಿಗೆ ಗೌರವ ಸಲ್ಲಿಸಿತು. ಒಂದೇ ದಿನ ನಡೆದ ಸಂಭವಗಳವು. ಜನಸಂಘವು ಗೆದ್ದ ಕ್ರೈಸ್ತೀಯರಿಗೆ ಅಥವಾ ಕನ್ನಡಿಗರಿಗೆಂದು ಗೌರವ ಸಲ್ಲಿಸಿರುವದಲ್ಲ; ಭಾರತೀಯರಿಗೆ ಆ ಪವಿತ್ರ ಗಂಗೆಯಲ್ಲಿ ನಾವೆಲ್ಲರೂ ಒಂದು ಹನಿ ಅಷ್ಟೆ.

ಇಂದಿರಾಜಿಯವರು ನಿಜಲಿಂಗಪ್ಪಾದಿಗಳನ್ನು ದೂರಕ್ಕೋಡಿಸಿ ಬಿಟ್ಟೊಡನೆ ಹೊಸ ಕಾಂಗ್ರೆಸ್ಸನ್ನು ಕಟ್ಟಿ ಬಿಟ್ಟರೆಂದು ತಿಳಿದುಕೊಳ್ಳುವದು ಕನಸೇ ಸರಿ. ಇಂದಿರಾ ಗಾಂಯವರು ತಮ್ಮ ಹಿಂಬಾಲಕರಿಗೆ ಹೊಸ ಕಾಂಗ್ರೆಸ್ಸಿಗರೆಂದು ಹೆಸರು ಕೊಡಬಹುದು. ಆದರೆ ಅವರೆಲ್ಲರ ಹಳೆಯ ಅಭ್ಯಾಸಗಳನ್ನು ದೂರಕ್ಕೋಡಿಸಲಾರರು. ಹಿಂದಿನಿಂದಲೂ ಕಾಂಗ್ರೆಸ್ಸಿಗೆ ಭಾರತೀಯರನ್ನು ಹಿಂದೂ-ಮುಸ್ಲಿಂ—ಕ್ರಿಸ್ತೀಯರೆಂದು ತ್ರಿಕೋಣದ ಮೂರು ಗೆರೆಗಳನ್ನಾಗಿ ಕಂಡೇ ಅಭ್ಯಾಸವಾಗಿದೆ. ಆ ಹುಟ್ಟುಗುಣ ಸುಟ್ಟರೂ ಹೋಗಲಾರದು. ಹೊಸ ಕಾಂಗ್ರೆಸ್ಸಿನ ಮಾತೂ ಹಳತು, ಕೃತಿಯೂ ಹಳತೇ ಇದೆ.

ಈಗ ಜನತೆಯ ಮುಂದಕ್ಕೆ ಮಾತು ಒಂಡೆದೆ, ಕೃತಿ ಇನ್ನೊಂದೆಡೆ ಬಂದು ನಿಂತಿವೆ. ಯಾರನ್ನು ಜನತೆ ಆರಿಸಿಕೊಳ್ಳುತ್ತದೆ? ಮಾತಿಗೆ ಮೋಡಿಗೆ ಮರುಳಾಗುತ್ತದೆಯೆ?

—ಶ್ರೀ ಶಿವಶಂಕರ

●●

ಟೀಲರ ಬಗ್ಗೆ ಈ ರೀತಿಯ ಮಾತು ಕೇಳಿ ಬರುತ್ತಿಲ್ಲ. ಅಂದರೆ ಬಹುಮತ ಗಳಿಸುವ ಆಶೆಯಿಲ್ಲವೆಂದರ್ಥವಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ೧೪ ಸ್ಥಾನಗಳ ಬಗ್ಗೆ ಒಟ್ಟು ೧೮೩ ಅಂದರೆ ಒಂದಕ್ಕೆ ಎಂಟರಷ್ಟು ನಾಮ ಪತ್ರಗಳು ದಾಖಲಾಗಿದ್ದವು.

ಇಂಡಿಕೇಟ್ — ೧೩
ಜನಸಂಘ — ೧೩
ಸಿಂಡಿಕೇಟ್ — ೯
ಸ್ವತಂತ್ರ — ೬
ಸಮಾಜವಾದಿ— ೪
ಮಾರ್ಕ್ಸಿಸ್ಟ್ — ೪
ಸಿ ಪಿ ಐ — ೯
ಪಕ್ಷೇತರರು — ೩೩
ಉಳಿದವರು ಡಮ್ಮಿ.

ವಿಸರ್ಜಿತ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀಗಳಾದ (ಮಂತ್ರಿ) ವಿಠಲದಾಸ ಶೆಟ್ಟಿ, ಬಿ. ಎಂ. ಇದಿನಬ್ಬ, ಮಣೇಲ್ ಶ್ರೀನಿವಾಸ ನಾಯಕ್; ಸಿ. ವಿ. ಐತಾಳ, ಹಲ್ಸನಾಡು ಸುಬ್ಬ ರಾವ್, ಶ್ರೀಮತಿ ಲೀಲಾವತಿ ರೈಯವರು ಸ್ಪರ್ಧೆಗೆ ಇಳಿದಿಲ್ಲ.

ಶ್ರೀಮತಿ ವಿನ್ನಿಫ್ರೆಡ್ ಪೆರ್ನಾಂಡಿಸ್ ತಮ್ಮ ಹಿಂದಿನ ಕ್ಷೇತ್ರ ಕುಂದಾಪುರದಿಂದಲೇ ಮರುವಾಯ್ಕೆ ಬಯಸಿದ್ದಾರೆ. ಶ್ರೀ ಎಸ್ ಕೆ. ಅಮೊಸರು ಉಡುಪಿಯ ಬದಲು ಮಂಗಳೂರು ೧೯ಂದ ಸ್ಪರ್ಧಿಸಿದ್ದಾರೆ. ಮೂಡಬಿದ್ರೆಯ ರತನ್ ಕುಮಾರ್ ಕಟ್ಟೆಮಾರ್ ಸುರತ್ಕಲ್ಲಿಗೆ ಬದಲಾಯಿಸಿದ್ದಾರೆ. ಶ್ರೀಗಳಾದ ಬೋಳ ರಘುರಾಮ ಶೆಟ್ಟಿ, ಬಿ. ಭಾಸ್ಕರ ಶೆಟ್ಟಿ, ಜಯ ಪ್ರಕಾಶ ಶೆಟ್ಟಿ, ಚಿದಾನಂದ—ಇವರು ತಂತಮ ಕ್ಷೇತ್ರದಿಂದಲೇ ಮತ್ತೆ ಅಯ್ಕೆಯಾಗ ಬಯಸಿದ್ದಾರೆ. ಶ್ರೀ ಎ. ರಾಮಚಂದ್ರರು ಪಕ್ಷೇತರರಾಗಿ ನಿಂತಿದ್ದಾರೆ. ಅವರಿಗೆ ಇಂಡಿಕೇಟ್ ಸೀಟು ಕೊಡಲ್ಲಿಲ್ಲ.

ತಾಲೂಕು ಅಭಿವೃದ್ಧಿ ಮಂಡಳಿಯಲ್ಲಿ ಅಧಿಕಾರಿಯಾಗಿದ್ದ ಶ್ರೀ ಡಿ. ಗಣಪಯ್ಯ ಯೆಂಬವರು ತನ್ನ ಉದ್ಯೋಗಕ್ಕೆ ರಾಜಿನಾಮೆ ನೀಡಿ ಬೈಂದೂರು ಕ್ಷೇತ್ರದಿಂದ ಪಕ್ಷಾತೀತರಾಗಿ ಚುನಾವಣಾರಂಗಕ್ಕೆಳಿದಿದ್ದಾರೆ.

ಅತೃಪ್ತ ಇಂಡಿಕೇಟಿಗರೂ ಕೆಲವರು ನಾಮ ಪತ್ರ ಸಲ್ಲಿಸಿದ್ದು ಅವರು ಎಲ್ಲಿಯ ತನಕ ಚುನಾವಣಾರಂಗದಲ್ಲಿ ನಿಲ್ಲುವರೆಂದು ಕಾದುನೋಡಬೇಕಷ್ಟೆ.

ಯಾರು ಯಾರು ಎಲ್ಲಿ ಎಲ್ಲಿ ಎಂಬ ಸ್ಪಷ್ಟ ಚಿತ್ರವನ್ನು ಇದೇ ಸಂಚಿಕೆಯ ಬೇರೆ ಪುಟದಲ್ಲಿ ಕಾಣಬಹುದು. ●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No — 1 72303
2 72304

Grams: HOST SATKAR

Vegetarian Cuisine

Attached Bath Rooms and Phones.
Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden
Quiet, Calm Atmosphere
Personalised Service.

ಚಂದಾ ಹಣ ಬಾಕಿ ಇರುವವರು ದಯವಾಡಿ ಆದಷ್ಟು ತ್ವರ್ಯಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಭಾರತ-ಪಾಕ್ ಸೈನಿಕ ಘರ್ಷಣೆಯ ಪಾಠಗಳು

ಭಾರತದೊಂದಿಗೆ ಎರಡು ವಾರಗಳ ಘರ್ಷಣೆಯಲ್ಲಿ ಪಾಕಿಸ್ತಾನವು ಗಂಭೀರವಾದ ಪರಾಭವವನ್ನು ಅನುಭವಿಸಿತು ಅದರ ವಾಯುಪಡೆಯ ಮೂರನೆ ಒಂದು ಭಾಗವೂ, ಅದರ ಟ್ಯಾಂಕುಗಳಲ್ಲಿ ಐದನೆ ಒಂದು ಭಾಗವೂ, ಅದೇ ರೀತಿ ಹಲವು ಯುದ್ಧನೌಕೆಗಳೂ ನಾಶಗೊಂಡುವು. ಇಷ್ಟಲ್ಲದೆ ಪಾಕಿಸ್ತಾನದ ಇಡೀ ಭೂಪಡೆಯ ಐದನೆ ಒಂದು ಭಾಗವಷ್ಟು ಸೇನೆಯು ಪೂರ್ವ ಬಂಗಾಳದಲ್ಲಿ ಶರಣಾಗಬೇಕಾಯಿತು.

ಸೋಲಿನ ಕಾರಣಗಳನ್ನು ಈಗ ವಿವರಿಸಲು ಪ್ರಯತ್ನಿಸುತ್ತ ನೈರಿಯ ಹಿರಿಮೆಯಿಂದ ಸೋಲುಂಟಾಗಿಲ್ಲ. ಆದರೆ ಪಾಕಿಸ್ತಾನ ದಂಡನಾಯಕತ್ವದಲ್ಲಿಯ ಅಸ್ತವ್ಯಸ್ತತೆಯಿಂದ ಸೋಲುಂಟಾಗಿನೆಯೆಂದು ಪಶ್ಚಿಮ ಪಾಕಿಸ್ತಾನವು ಹೇಳುತ್ತಿದೆ. ಈ ವ್ಯಾಕ್ಯಾನವೊಂದಿಗೆ ತಪ್ಪಿತಸ್ಥರನ್ನು ದಂಡಿಸಬೇಕೆಂಬ ನಿರ್ದೇಶನ ಮೇಲೆ ನೇಡು ಹೀರಿಸಿಕೊಳ್ಳಬೇಕೆಂಬ ಕರೆಕೊಡಲಾಗುತ್ತಿದೆ. ಹೀಗೆ ಬಹುಕಾಲದಿಂದ ಬರೀ ಯುದ್ಧ ವಿಜ್ಞಾನದಲ್ಲೇ ಬೆಳೆಸಲ್ಪಟ್ಟಿರುವ ಪಾಕಿಸ್ತಾನೀ ಜನರ ಮನಸ್ಸಿನ ಸ್ಥಾನಗಳ ಮನೋಭಾವವ ಚಿಪ್ಪಗಳನ್ನು ಬಿತ್ತಲಾಗುತ್ತಿದೆ.

ಅರ್ಥಾತ್, ಘಟನೆಗಳ ಗತಿಯು ಮೇಲೆ ವೈಮನಸ್ಕ ಸಂಗತಿಗಳ ಪರಿಣಾಮಗೇನನ್ನೂ ಯೋಚಿಸದೆಯುಮಂತಿಲ್ಲ. ಆದರೆ ಇವುಗಳೇ ನಿರ್ಣಾಯಕ ಪಾತ್ರವನ್ನಾತುತ್ತವೆಯೆಂದೂ ಯೋಚಿಸಲಾರದು ಪಂಡನಾಯಕರ ವ್ಯೂಹ ನಾಮರ್ಥ್ಯಗಳಿಗಿಂತ ಬೇರೆಯೊಕವೆ ಸಂಗತಿಗಳು ಹೆಚ್ಚು ಮಹತ್ವದ್ದಾಗಿವೆ.

ಸೈನಿಕ ವೀಕ್ಷಣೆಯಲ್ಲೇ ಮಾತ್ರವಾಡುವುದಾದರೆ, ಭಾರತವು ಪಾಕಿಸ್ತಾನಕ್ಕಿಂತ ಹೆಚ್ಚಿನ ಸೈನಿಕ ಹಿರಿಮೆಯನ್ನು ಪಡೆದಿದ್ದರೂ ಅದ್ವಿತೀಯ ಪೂರ್ವಕವಾಗಿಯೆ ಆದರೆಲ್ಲ ಪ್ರಯೋಜನಗಳನ್ನೂ ಅದು ಪಡೆಮಕೊಳ್ಳಲು ಹೋಗಲಿಲ್ಲವೆಂಬುದನ್ನು ಎಲ್ಲರೂ ಗಮನಕ್ಕೆ ತೆಗೆದುಕೊಳ್ಳಬೇಕು. ಸತ್ಯ ಸಂಗತಿಗಳೇ ತೋರಿಸುವಂತೆ, ಬೂರ ಘೋರ ಸ್ಥಿತಿಯು ಭಾರತಕ್ಕೂ ಅಸಹನೀಯವಾದ ಸ್ಥಿತಿಯನ್ನು ನಿರ್ಮಿಸಿತೋ ಆ ಪೂರ್ವ ಬಂಗಾಳದ ಜನರಿಗೆ ಸಹಾಯ ನೂಡುವದ ಸ್ಪೇ ಭಾರತೀಯ ಸೇನೆಯು ಗುರಿಯಾಗಿದ್ದಿತು. ಅದೇ ಕಾಲಕ್ಕೆ ಭಾರತವು, ಪಶ್ಚಿಮದ ಪ್ಲೈ ನೈರಿಯನ್ನು ತಡೆಗಟ್ಟಿ ನಿಲ್ಲಿಸುವುದಕ್ಕೆ ಮಾತ್ರವಷ್ಟೇ ತನ್ನ ಸೈನಿಕ ಕಾರ್ಯಾಚರಣೆಗಳನ್ನು ಮಿತಿಗೊಳಿಸಿಕೊಂಡಿದ್ದಿತು.

ಘರ್ಷಣೆಯನ್ನು ಕೆದಕಿದವರು-ಪಾಕಿಸ್ತಾನದ ದಂಡನಾಯಕತ್ವ- ಕೆಲವೊಂದು ವಿಭಾಗಗಳಲ್ಲಿ ತಮ್ಮ ಉತ್ಕೃಷ್ಟ ಶಕ್ತಿಯನ್ನು ಕೇಂದ್ರೀಕರಿಸಿಕೊಂಡಿದ್ದರು. ಕೆಲವೊಂದು ಸ್ಥಳಗಳಲ್ಲಿ ಉಪಕ್ರಮ ಶಕ್ತಿಯನ್ನೂ ಹೊಂದಿದ್ದರು. ಪಶ್ಚಿಮ ರಂಗದ ಒಂದೆರಡು ವಿಭಾಗಗಳಲ್ಲಿ ವ್ಯೂಹೋಪಾಯದ ಯಶಸ್ಸುಗಳನ್ನು ಬಿಟ್ಟರೆ, ಪಾಕಿಸ್ತಾನಿ ಸೇನೆಗಳು ತಾವೆ ಮೊದಲು ಮೇಲೆ ಬಿದ್ದು ಸಾಧಿಸಬೇಕೆಂದಿದ್ದ ಗುರಿಗಳನ್ನು ಸಾಧಿಸಿಕೊಳ್ಳಲಾರದೆ ಹೋದುವು.

ಪಾಕಿಸ್ತಾನೀ ದಂಡನಾಯಕತ್ವದ ವ್ಯೂಹ ಸಾಮರ್ಥ್ಯದ ಅಭಾವ—ಇದನೇ ಕಾರಣವೆನ್ನುವುದಾದರೆ—ದಿಂದ ಮೊತ್ತವೇ ಪೀಗಾಯಿತೆಂದರೆ ಸಾಲದು. ಪಾಕಿಸ್ತಾನೀ ಸೈನಿಕ ಆಡಳಿತದ ಪಾಭವಕ್ಕೆ ಇದಕ್ಕಿಂತ ಗಾಢವಾದ ಬೇರೆ ಕೆಲವು ಕಾರಣಗಳು ಇವೆ.

ಆ ಒಂದು ವೇಳೆನ ಸೈನಿಕ ವ್ಯವಸ್ಥೆಯಲ್ಲಿರುವ ವೈಚಾರಿಕ—ತಾತ್ವಿಕ ನೆಲೆಗಟ್ಟನ್ನೂ ಪ್ರಶ್ನೆಸ್ಪ ಮೂರ್ಗದರ್ಶನವನ್ನೂ—ಜಿಟ್ಟಾರಿ ಅವರ ನೈತಿಕ ಸಿದ್ಧಾಂತವನ್ನು—ಪರೀಕ್ಷಿಸಿ, ಅಂಗಾಜು ಮಾಡುವುದು ಅಗತ್ಯವಾಗಿರುತ್ತದೆ—ಒಂದು ಗಂಭೀರವಾದ ಸೈನಿಕ ಘರ್ಷಣೆಯಲ್ಲಿ ಇಮ ಆ ರಾಜ್ಯದ ಧೋರಣೆಯ ಸ್ವರೂಪಜನಕ್ಕೆ ತಿರಿಳ್ಪಟ್ಟಿರುತ್ತದೆ ಹಾಗೂ ಸಂಪೂರ್ಣ ಅನುಗುಣವೂ ಆಗಿರುತ್ತದೆ.

ಪಾಕಿಸ್ತಾನೆವು ನಿರಂತರವಾಗಿ ಮತ್ತು ವ್ಯವಸ್ಥಿತವಾಗಿ ಸಂ. ರಾ. ಅಮೆರಿಕದಿಂದ ಸೈನಿಕ ಸಹಾಯವನ್ನು ಪಡೆದುದೇ ಅಲ್ಲದೆ ಪಾಕಿಂಗ್ಸ್ಟನ್ನಿನ ಕೈವಾಶ್ರಯದಲ್ಲಿ ಮತ್ತು ಸ್ವತಃ ಅದರ ಪಾಲುಗಾರಿಕೆಯಲ್ಲೂ ಸ್ಥಾಪನೆಗೊಂಡ ಆಕ್ರಮಣಕಾರೀ ಸೈನಿಕ ಕೂಟಗಳಲ್ಲೂ ನೆಲೆಯಲ್ಪಟ್ಟಿತು. ಪಾಕಿಸ್ತಾನವು ತನ್ನ ಸೈನ್ಯ ನಿರ್ಮಾಣದಲ್ಲಿ ಹೆಚ್ಚು ಕಡಿಮೆ ಪೆಂಟಗನ್ನಿನ ಕುಪ್ರಸಿದ್ಧ ಗುವಾಮ್ ಸಿದ್ಧಾಂತವು—ಮುಖ್ಯವಾಗಿ ಏಶಿಯದ ನರನ್ನೇ ಏಶಿಯದವರ ವಿರುದ್ಧ ಎತ್ತಿಕಟ್ಟುವ—ಪ್ರತಿಬಿಂಬಿಸುವ ಕಲ್ಪನೆಯನ್ನೇ ಅನುಸರಿಸಿಕೊಂಡು ಬಂದಿತು.

ಇದರೊಂದಿಗೆ, ಪಾಕಿಸ್ತಾನದ ಸೇನೆಯು ನೇಲೆ, ಏತಿಯದ ಜನರ ನಡುವೆ ಭಿನ್ನತೆಯ ಬೀಜ ಬಿತ್ತುವ 'ಗುವಾಮ್ ಸಿದ್ಧಾಂತ'ದಂಥವೇ ಆದ ಪೇಕಿಂಗ್ ಪ್ರಭಾವಕ್ಕೂ ಒಳಗಾಯಿತು

ಆದರೆ ಈ ಭಾರಿಯೂ ಈ ಮತ್ಸರಮೂಲಿತ ಸಿದ್ಧಾಂತವು ಕಾಲನ ಪರೀಕ್ಷೆಯನ್ನು ತಡೆದುಕೊಳ್ಳಲಿಲ್ಲ. ಇಂದೋ—ಚೀನದಲ್ಲಿಯಂತೆಯೇ ಅದರ ಬಳಕೆ ಇಲ್ಲಿಯೂ ವಿಫಲ ಗೊಂಡಿತು. ಕಾರಣಗಳೂ ಒಂದೇ ಬಗೆಯೂಗಿವೆ. ಇಂದೋ—ಚೀನಾದಲ್ಲಿಯ ಸೈಗಾನ್ — ಅಮೆರಿಕನ್ ಸೇನೆಯಂತೆಯೆ ಪಾಕಿಸ್ತಾನಿ ಸೇನೆಯು ತುಂಬಾ ಭ್ರಷ್ಟ ಗೊಂಡಿದೆ, ಅದರ ಮೇಲೆ ಹೇರಲಾಗಿರುವ ಕೊಲೆಗಡುಕನ ಪಾತ್ರದಿಂದಾಗಿ ನೈತಿಕವಾಗಿಯೆ ಅದು ಅಧಃಪಾತಕ್ಕೆಳಿದಿದೆ. ಆದರೆ ಹೋರಾಟದ "ಧಾರ್ಮಿಕ ಮತ್ತು ರಾಷ್ಟ್ರೀಯ ಗುರಿಗಳು" ಕೇವಲ ಸ್ವಪ್ನನೆಯಷ್ಟೇ. ಸಹಜವಾಗಿಯೆ ಇವಾವುದೂ ಅವುಗಳಲ್ಲಿ ಉನ್ನತ ನೈತಿಕ ಬಲವನ್ನು ತುಂಬಲಿಲ್ಲ ಹಾಗೂ ದಕ್ಷ ರೀತಿಯಿಂದ ಸೈನ್ಯವು ಹೋರಾಡುವಂತೆಯೂ ಮಾಡಲಿಲ್ಲ.

ತಮ್ಮ ಪ್ರಜಾತಾಂತ್ರಿಕ ಹಕ್ಕುಗಳಿಗಾಗಿ ಹೋರಾಡುತ್ತಿದ್ದ ಪೂರ್ವ ಬಂಗಾಳದ ಜನರ ಅತ್ಯುತ್ತಮ ಪ್ರತಿನಿಧಿಗಳನ್ನು ಪಾಕಿಸ್ತಾನಿ ಸೇನೆಯು ಎದುರಿಸಬೇಕಾಯಿತು. ಈ ಹೋರಾಟದ ನ್ಯಾಯವಾದ ಗುರಿಗಳು, ಆ ಜನರಿಗೆ ಸಹಾಯ ನೀಡುವಂತೆ ಭಾರತದ ಸೇನೆಗೂ ಸ್ಫೂರ್ತಿಯೂದುವು. ಅಂತೆಯೇ ವೈರಿಗಿಂತ ಇಲ್ಲಿ ನೈತಿಕ ಹಿರಿಮೆ ದೊಡ್ಡದಾಗಿತ್ತೆಂಬುದು ನಿರ್ವಿವಾದಾತ್ಮಕ.

ಒಂದು ನ್ಯಾಯವಾದ ಯುದ್ಧದಲ್ಲಿ ಆ ಚಲ ಕಾರಣಗಳ ಹಾಗೂ ಗುರಿಗಳ ಅರಿವು ಜನರಿಗೆಲ್ಲ ಚೆನ್ನಾಗಿ ಇರುವುದು ಪರಮ ಆವಶ್ಯಕತೆಯೂಗಿದೆ ಮತ್ತು ಅದುವೇ ವಿಜಯವನ್ನೂ ಭರವಸೆಗೊಳಿಸುತ್ತದೆ ಎಂದು ಲೆನಿನ್‌ರು ಏತಿಹಾಸಿಕವಾಗಿ ನಿರೂಪಿಸಿದ ಸೂತ್ರ ಮತ್ತೊಮ್ಮೆ ಹೀಗೆ ದೃಢಪಟ್ಟಿದೆ.

ಜಾಗತಿಕ ಪ್ರತಿಗಾಮಿ ಶಕ್ತಿಯು ಆಧುನಿಕ ಕಾಲದ ಅಭೇದ್ಯ ಪ್ರಕ್ರಿಯೆಗೆ-ಸಾಮ್ರಾಜ್ಯವಾದ-ವಿರೋಧಿ ವಿಮೋಚನಾ ಚಳವಳಿಗೆ, ಸರಿಸಾಟಿಯೂಗಲು ನಡೆಸಿರುವ ಪ್ರಯತ್ನಗಳ ನಿರಾಶಾದಾಯಕತೆಯನ್ನೇ ಇದೆಲ್ಲವೂ ತೋರಿಸುತ್ತಿದೆ. ಸೈನಿಕ ಕಾರ್ಯಾಚರಣೆಯನ್ನೊಳಗೊಂಡು ಯಾವುದೂ ಈ ಅದಮ್ಯ ಏತಿಹಾಸಿಕ ಪ್ರಕ್ರಿಯೆಗೆ ಅಡ್ಡಿಯೂಗಿ ನಿಲ್ಲಲಾರದು. ಪ್ರಗತಿಯನ್ನು ದ್ವೇಷಿಸುವಂಥವರು ಸೂತ್ರವೇ, ಯಾರ ಅವಸಾನವು ಖಚಿತವಾಗಿದೆಯೊ ಅಂಥವರು, ಅನಿವಾರ್ಯವಾಗಿರುವುದನ್ನು ಅಂಧತೆಯಿಂದ ವಿಳಂಬಗೊಳಿಸಲು ಶಕ್ತಿಗೇ ಜೋತುಬೀಳುವಂಥವರು, ಸೂತ್ರವೇ ಇಂಥ ದಾರಿಗಳಿಗೆ ಶರಣು ಹೋಗುತ್ತಾರೆ.

"ಹಿಂದೂಸ್ತಾನದಲ್ಲಿ ಯುದ್ಧವು ಕೊನೆಗೊಂಡಿರುವುದು ಈ ಪ್ರದೇಶದ ಜನಗಳೆಲ್ಲರ ಹಿತಗಳಿಗೂ ಅನುಗುಣವಾಗಿದೆ. ರಾಷ್ಟ್ರೀಯ ಅಭಿವೃದ್ಧಿ ಮತ್ತು ಪ್ರಗತಿಯ ಪಥದಗುಂಟ ಅವರ ಮುನ್ನಡೆಗೆ ಅಗತ್ಯವಾದ ಪರಿಸ್ಥಿತಿಗಳನ್ನು ನಿರ್ಮಿಸುತ್ತದೆ, ಹಾಗೂ ಜಗತ್ತಿನಲ್ಲಿ ಭೀಕರ ಪ್ರಕ್ಷುಬ್ಧತೆಯ ನೆಲೆಗಳನ್ನು ತೊಡೆದುಹಾಕುತ್ತದೆ" ಎಂಬುದಾಗಿ ಸೋವಿಯೆತ್ ವಿದೇಶಾಂಗ ಸಚಿವಾಲಯವು ಡಿಸೆಂಬರ್ 17ರಂದು ನೀಡಿದ ಹೇಳಿಕೆಯು ತಿಳಿಸುತ್ತದೆ.

ಭಾರತೀಯ ಉಪಖಂಡದಲ್ಲಿ ವಾಸವಾಗಿರುವ ಜನರೆಲ್ಲರ ನ್ಯಾಯವಾದ ಹಕ್ಕುಗಳನ್ನೆಲ್ಲ ಗಣನೆಗೆ ತೆಗೆದುಕೊಂಡು ಅಲ್ಲಿ ಶಾಂತಿಯು ಶಿಘ್ರವಾಗಿ ಸುನಃ ಸ್ಥಾಪನೆಗೊಳ್ಳುವುದಕ್ಕೆ ಸಹಾಯಕವಾಗುವಂತೆ ಕಾಣಿಕೆ ಸಲ್ಲಿಸುವುದು ಎಲ್ಲ ಶಾಂತಿಪ್ರಿಯ ದೇಶಗಳ ಕರ್ತವ್ಯವಾಗಿದೆ.

—ಎಸ್. ಕೊಜ್ಲೋವ್

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಡಾಗರಾ ವಜ್ರಗಳಿಗೆ ಆಧುನಿಕ ಶೇಷನಸ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಏಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

Gram: VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

NOTICE

ಕುಂದಾಪುರ ನ್ಯು. ಕೋರ್ಟಿನಲ್ಲಿ

S. C. 202/71

ವಾದಿ— ಪೆಂಕಪ್ಪ ಶೆಟ್ಟಿ

ಪ್ರತಿವಾದಿ— ಆಂಕ ಮೇಣ್ಯ

ಕುಂದಾಪುರ ತಾಲ್ಲು ಹೇರಂಜಾಲು ಗ್ರಾಮದಲ್ಲಿರುವ ಕೃಷ್ಣ ಮೇಣ್ಯನ ಮಗ ಅಂಕ ಮೇಣ್ಯನಿಗೆ ಈ ಮೂಲಕ ತಿಳಿಯಪಡಿಸಿದ್ದು—

ಮೇಲೆ ಹೆಸರು ಕಾಣಿಸಿದ ವಾದಿ ಪೆಂಕಪ್ಪ ಶೆಟ್ಟಿಗೆ ನೀವು 29—9—68ರಲ್ಲು ಬರಕೊಟ್ಟ ಡಿ. ನೋಟಿನ ಬಾಬ್ತು ನಿಮ್ಮಿಂದ ಬಹಾ ಹಣಗಳ ಕುರಿತು ವಾದಿ ನಿಮ್ಮ ಮೇಲೆ ಮೂಡಿದ ದಾವೆ ತಾ. 11—8—72ಕ್ಕೆ ತನ್ನಿಗೆ ಇರುತ್ತದೆ. ಆ ದಿನ ನೀವು ಸ್ವತಹಾ ವ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜ್ರಾಗಿ ಸದ್ರಿ ದಾವೆಯಲ್ಲಿ ನೀವು ಉದಾಹರಿಸಲಿಕ್ಕೆ ತಪ್ಪಿದ್ದಲ್ಲಿ ನಿಮ್ಮನ್ನು ಎಕ್ಸ್ ಪಾರ್ಟ ಮಾಡಿ ಮುಂದಿನ ಕ್ರಮ ಕೈಕೊಳ್ಳಲಾಗುತ್ತದೆಂಬ ಸಂಗತಿ ಈ ಮೂಲಕ ನಿಮಗೆ ತಿಳಿಸಿಯದೆ.

(By order of the Court)

(sd) A. N. Rao

Advocate for Plff.

Coondapur, 8—2—72

ಸ್ನೇಹ ಹಸ್ತ – ಕುಲು ಕುಲು ಕುಲಿಕೆ

ಶ್ರೀಮತಿ ಗಾಂಧಿಯವರು ಚುನಾವಣೆ ಮುಗಿಯುವವರೆಗೆ ತನ್ನ ಪಕ್ಷದ ವಿಜಯ ಕ್ಕಾಗಿ ಪ್ರಚಾರ ಕಾರ್ಯದಲ್ಲಿ ತೊಡಗುವುದು ಅನಿವಾರ್ಯ. "ಇಂದಿರಾ ಗಾಳಿ"ಯು ತಾ ನಾಗಿ ಬೀಸುವುದನ್ನು ಅದೆಂಥೋ ನಿಲ್ಲಿಸಿ ದೆ. ಆದ್ದರಿಂದ ಬಲವಂತವಾಗಿಯಾದರೂ ಅದು ಬೀಸುವಂತೆ ಮಾಡುವುದು ಅವರ ಶ ರವೇಗದ ಪ್ರಚಾರ ಭಾಷಣ ಮೂಲೆಗಳ ಉ ದ್ದೇಶ. ರಾಜ್ಯಕೀಯದಲ್ಲಿ ಇದು ಅನಿವಾ ರ್ಯ. ಪ್ರಧಾನ ಮಂತ್ರಿಯೂ ಒಂದು ಪಕ್ಷ ದ ಸದಸ್ಯನಾದುದರಿಂದ ತನ್ನ ಪಕ್ಷಕ್ಕಾಗಿ ಆತ ಸಲ್ಲಿಸ ಬೇಕಾದ ಸೇವೆ ಬಹಳಷ್ಟಿದೆ.

ಆದರೆ, ಶ್ರೀಮತಿ ಗಾಂಧಿಯವರು ಆ ರಂಭದಲ್ಲೇ ಹಲವಾರು ಗೊಂದಲಗಳನ್ನು ಎದುರಿಸಬೇಕಾಯ್ತು. ತನ್ನ ಹೃದಯಗತ ಇರಾದೆಗೆ ವಿರುದ್ಧವಾಗಿ ಯುವ ತುರುಷ್ಕ ನಾಯಕ ಚಂದ್ರಶೇಖರ್ ಕೇಂದ್ರ ಚುನಾ ವಣಾ ಸಮಿತಿಗೆ ಆಯ್ಕೆಯಾದ ಗಳಿಗೆ ಯಲ್ಲೇ ಆಕೆ ಸೋತು ಹೋಗಿದ್ದಾರೆ. ಎಂ ದೂ ಸೋಲೊಪ್ಪದ ಆಕೆ 'ಇವರ ಆಯ್ಕೆ ನನಗೇನೂ ಬೇಡವಾದುದಲ್ಲ'ವೆಂದು ಸ್ವಾ ಗತ ನೀಡಿದ್ದರು. ಇದು ಶುಷ್ಕ ಸ್ವಾಗತವೆಂ ಬುದು ಅವರಿಗೇ ತಿಳಿದಿತ್ತು; ಉಳಿದವರಿಗೆ ತಿಳಿಯದೆ?

ಅಧಿಕಾರಬಾನೆ ಹೊತ್ತವರು ಅಧಿಕಾರ ಕ್ಕಾಗಿಯೇ ತನ್ನ ಪಕ್ಷ ತೊರಿದ್ದಾರೆಂಬುದು ಆಕೆಗೆ ತಿಳಿಯದ ವಿಷಯವಲ್ಲ. ಈಯೊಂ ದು ವರ್ಷದಲ್ಲಿ ಆಕೆ ಅಧಿಕಾರದ ಬಗ್ಗೆ ಒ ಲವು ಕಳೆದುಕೊಳ್ಳುವಂತೆ ಮಾಡುವಲ್ಲಿ ಅ ಶಕ್ತರಾಗಿದ್ದಾರೆ. ಮಂತ್ರಿಯೂಗಿದ್ದವರಿಗೆ ಮುಂದೆಯೂ ಮಂತ್ರಿಯೂಗಬೇಕು. ಶಾಸ ಕರಾಗಿದ್ದವರಿಗೆ ಶಾಸಕತನವಾದರೂ ಬೇ ಕು—ಅಂದರೆ, ಉಳಿದವರ ಪಾಡೇನು? ಎಸೆಂಬ್ಲಿ ಸೀಟುಗಳನ್ನು ಹೆಚ್ಚಿಸುವುದು ಹೇಗೆ ಸಾಧ್ಯ? ಅದುದರಿಂದಲೇ ಅಭ್ಯರ್ಥಿ ಗಳ ಆಯ್ಕೆಯ .ಸಂಬಂಧದಲ್ಲಿ ತೀವ್ರ ಭಿ ನ್ನಾಭಿಪ್ರಾಯ– ಹೊಸಬರಿಗೆ ಅವಕಾಶ– ಜನತೆಯು ಆಕಾಂಕ್ಷೆಯೆಂದು ಆಕೆ ಸಾರಿದ ರೂ ಹಲವಾರು ಹಳೆಯದರಲ್ಲಿ ಹಳೆಯ ಮುಖಗಳು ಮತ್ತೆ ಚುನಾವಣಾರಂಗದಲ್ಲಿ ಕಂಡು ಬರುತ್ತಿವೆ.

ಹಿಂದೆ ಕಾಮರಾಜರು ಕಾಂಗ್ರೆಸ್ ಅ ಧ್ಯಕ್ಷರಾಗಿರುವಾಗಲೂ ಹೊಸ ಮುಖಗಳಿ ಗೆ ಅವಕಾಶ ನೀಡಲು ಪ್ರಯತ್ನಿಸಿದ್ದರು. ನೀಲಂ ಸಂಜೀವ ರೆಡ್ಡಿಯವರು ಎರಡು ಅ ವಧಿಗಳಿಗಿಂತ ಹೆಚ್ಚುಕಾಲ ಶಾಸಕತನ ಒ ಬ್ಬನಿಗೆ ನೀಡಬಾರದೆಂದರು. ಶ್ರೀಮತಿ ಗಾಂ ಧಿಯವರು ಅಷ್ಟು ಖಡಾಖಂಡಿತ ಹೇಳದೆ 'ಯುವಜನರಿಗೆ ಹೆಚ್ಚಿನ ಅವಕಾಶ'ವೆಂದರು. ಮೇಲಿನ ಮೂರು ಬಾರಿಯೂ ಪಕ್ಷದ ಸದಸ್ಯರಿಂದ "ಹೇಳಿದವರು" ಭಾರಿ ವಿರೋಧ ಕಟ್ಟಿಕೊಳ್ಳಬೇಕಾಯ್ತು. ಜವಾಹರಲಾ ಲರು ಅಧಿಕಾರಕ್ಕೆ ಅಂಟಿಕೊಳ್ಳುವುದರ ವಿರುದ್ಧ ಕಾಂಗ್ರೆಸ್ಸಿಗರಿಗೆ ಪ್ರತಿನಿತ್ಯವೆಂಬಂತೆ ತಿಳಿಹೇಳಿದ್ದರು; ತಾನೇ ಅಧಿಕಾರ ಬಿಡಲು ಮುಂದಾಗಿದ್ದರು. ಆದರೆ, ಅವರನ್ನು ಬ ಲಾತ್ಕಾರವಾಗಿ ಅವಕ್ಕೆ ಅಂಟಿ ಕುಳ್ಳಿರಿಸ ಲಾಯ್ತು; ಮತ್ತೆ ಉಳಿದವರ ಪಾಡೇನು?

ಶ್ರೀಮತಿ ಗಾಂಧಿ ಪಕ್ಷ ಶುದ್ಧೀಕರಣದ ಹೆಸರಿನಲ್ಲಿ ಹಳೆಯ ನಾಯಕರೆಲ್ಲರನ್ನೂ ತಿರಸ್ಕರಿಸಿ ಅವರ ಎದೆಯ ಮೇಲೆ ನಿಂತ ರು. ತನ್ನದೇ ಕೂಟವೊಂದನ್ನು ಕಟ್ಟಿಕೊಂ ಡರು. ಅದು ಯಶವನ್ನೂ ಸಂಪಾದಿಸಿತು. "ಅಮೃತ ಮಥನದಲ್ಲಿ ದೇವತೆಗಳು ದೈತ್ಯ ರ ನೆರವನ್ನು ಬೇಕಷ್ಟು ಪಡೆದರು. ಆದರೆ, ಅಮೃತದಂದ ಅವರನ್ನು ವಂಚಿಸಲು ಉ ಜ್ಜುಗಿಸಿದರು. ಅದುದರಿಂದಲೇ ವಂಚಕ– ವಂಚಿತರ ನಡುವೆ ದೀರ್ಘ ಕಾಲದ ಸಮರ ನಡೆಯುತ್ತ ಬಂತು. ಒಮ್ಮೊಮ್ಮೆ ಇದು ಹೊಗೆಕಾರಿ ಸುಮ್ಮಗಾಗುತ್ತದೆ. ಒಮ್ಮೊ ಮ್ಮೆ ಗರಿಗೆದರಿ ಸುಡತೊಡಗುತ್ತದೆ; ಒ ಮ್ಮೊಮ್ಮೆ ಪ್ರಚ್ಛನ್ನವಾಗುತ್ತದೆ. ಶ್ರೀಮತಿ ಗಾಂಧಿ ಈ ಅಗ್ನಿಯನ್ನು ತಣಿಸಲು ಶಿಸ್ತಿನ ಕ್ರಮಕ್ಕೆ ಶರಣು ಹೋಗುತ್ತಾರೆಯೆ?'ಮ ನೆಸ್ಸಾಕ್ಷಿ'ಯನ್ನು ಮನ್ನಿಸುತ್ತಾರೆಯೆ? ತಾನುಹಾಕಿದ ಉರುಲು ಒಂಗಲ್ಲ ಒಂ ದು ದಿನ ತನ್ನ ಕೊರಳಿಗೇ ಉರುಳಾಗುವು ದೆಂಬುದು ಹಳೆಯದರಲ್ಲಿ ಹಳೆಯಗಾದೆ.

೦೦ ೦೦ ೦೦

ಬಾಂಗ್ಲಾ ಪ್ರಧಾನ ಮಂತ್ರಿ ಶೇಕ ಮು ಜಿಬುರ್ ರೆಹಮಾನ--ಭಾರತ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಕಲಕ ತ್ತೆಯಲ್ಲಿ ಪರಸ್ಪರ ಭೆಟ್ಟಿ ಮಾಡಿದರು. ಬಾಂಗ್ಲಾ ದೇಶವನ್ನು ಮೂಲತ್ತಕ್ಕಿಂತಲೂ ಹೆಚ್ಚು ನೇಶಗಳು ಮಾನ್ಯ ಮಾಡಿವೆ. ಇ ನ್ನೂ ಕೆಲವಾರು ದೇಶಗಳು ಮಾನ್ಯ ಮಾಡ ಲಿವೆ. ಎಳೂವರೆ ಕೋಟಿ ಜನತೆಯನ್ನು ತಿರಸ್ಕರಿಸುವುದು ಸಾಧ್ಯವಿಲ್ಲವೆಂದು ಪಾಕ್ ಉತ್ತೇಜಕ ನಿಕ್ಸನ್ನರೇ ಹೇಳುತ್ತಾರೆಂದ ಮೇಲೆ ಉಳಿದವರ ಪಾಡೇನು?

ಶೇಕ ಮುಜಿಬುರರನ್ನು ಭುಟ್ಟೋ ಭೇ ಟಿ ಮಾಡ ಬಯಸುತಿದ್ದಾರೆ. ಇದು ದಾ ರ್ತರಾಷ್ಟ್ರಲಿಂಗನವಾಗದು.ಆದರೆ ದೂರ್ತ ರಾಷ್ಟ್ರಾಲಿಂಗನ ಆಗಲೇಬೇಕು. ಈ ದೂ ರ್ತತೆಯನ್ನು ತೊಳೆಯ ಬೇಕಾದರೆ ಬಾಂ ಗ್ಲಾ ದೇಶಕ್ಕೆ ಮನ್ನಣೆ ನೀಡಿಯೆನ್ನುತ್ತಾ ರೆ ಶೇಕ್. ಆದರೆ, ಮೊದಲು ಭೆಟ್ಟಿ ಆ ನಂ ತರ ಮನ್ನಣೆಯ ಮಾತು ಎನ್ನುತ್ತಾರೆ ಭು ಟ್ಟೊ. ಬಾಂಗ್ಲಾದಲ್ಲಿ ಭಾರತೀಯ ಸೇನೆ ಯಿರುವವರೆಗೆ ಮಾನ್ಯತೆ ನೀಡುವುದು ಸಾ ಧ್ಯವಿಲ್ಲವೆಂದು ಕೆನೆಡ, ಇಂಡೋನೇಶ್ಯಾ ಮೊದಲಾದ ದೇಶಗಳು ಹೇಳಿದ್ದುಂಟು.

ಭಾರತೀಯ ಸೇನೆ ಬಾಂಗ್ಲಾದಲ್ಲಿ ಪ್ರ ಭುತ್ವ ಜವಾಯಿಸಲು ಹೋಗಿಲ್ಲ. ಬಾಂ ಗ್ಲಾ ನಿರ್ಮೋಚನೆಯಷ್ಟೇ ಅವರ ಉದ್ದೇಶ. ಬಾಂಗ್ಲಾ ಸರಕಾರ ಬಯಸಿದಷ್ಟು ದಿನ ಡಾ ಕ್ಕಾದಲ್ಲಿದ್ದು ಆಡಳಿತವನ್ನು ಸುವ್ಯವಸ್ಥಿಗೊ ಳಿಸಲು ನೆರವಾಗುವುದು ಅದರ ಇಂದಿನ ಕೆಲಸ. 'ನಾವು ಹೋಗಿಯೆಂದ ಕೂಡಲೆ; ಭಾರತೀಯ ಸೇನೆಗಳುಹೋಗುತ್ತವೆ'ಯೆಂ ದು ಶೇಕರು ವಿಶ್ವಾಸದ ನುಡಿಯಾಡಿದ್ದರು. ಅದರಂತೆ ಮೂರ್ತಿ ತಿಂಗಳ ಕೊನೆಯೊ ಳಗೆ ಭಾರತೀಯ ಸೇನೆಗಳು ಡಾ ಕ್ಕಾವನ್ನು ತೆರವು ಮಾಡುವುದೀಗ ನಿ ರ್ಧಾರಿತವಾಗಿದೆ. ಬಾಂಗ್ಲಾ ನಿರಾಶ್ರಿತರ ಪು ನರ್ವಸತಿಯ ಕಾರ್ಯಕ್ರಮವೂ ಮುಕ್ಕಾ ಲು ಮೂರು ನೀಸ ಪಾಲು ನಡೆದಿದೆ. ಆದ ರೂ ಕೆಲವರು ಸ್ವದೇಶಕ್ಕೆ ಮರಳಿ ಬಯಸು ವುದಿಲ್ಲವಂತೆ. ಮೂತಿನ ಭಾಷೆಯಲ್ಲಿ ಹೇಳು ವುದಾದರೆ 'ನಾವು ನಿರಾಶ್ರಿತರನ್ನು ಆಳಿಯ ನನ್ನು ನೋಡುವಂತೆ ನೋಡುತ್ತಿದ್ದೇವೆ'. ಈ ಉಪಚಾರವನ್ನು ಕಳೆದುಕೊಳ್ಳಲು ಅ ವರು ಸಿದ್ಧರಿಲ್ಲ.' ಆದೇನಿದ್ದರೂ ಎಲ್ಲ ನಿರಾ ಶ್ರಿತರೂ ಸ್ವದೇಶಕ್ಕೆ ಮರಳುವಂತೆ ಮಾಡ ಬೇಕಾದದ್ದು ತುರ್ತು ಅವಶ್ಯ.

ಭಾರತ ತಾನು ಮಾಡಿದ್ದ ವಾಗ್ದಾನಗ ಳನ್ನು ಪೂರೈಸಿ ತನ್ನ ಮುತ್ಸದ್ದಿತನವನ್ನು ಪ್ರದರ್ಶಿಸಿತು. ಅದುದರಿಂದಲೇ ಹಿಂದೂ ಸಾಗರದ ಭದ್ರತೆಯಲ್ಲಿ ಭಾರತವು ನಿರ್ಣಾ ಯಕ ಪಾತ್ರವಹಿಸ ಬಲ್ಲುದೆಂಬ ಪ್ರಶಂಸೆ ಬ್ರಿಟನ್ ವಿದೇಶ ಮಂತ್ರಿ ಬಾಯಿಂದ ಬಂ ತು. ಭಾರತದಂತೆಯೇ ಉಳಿದ ದೇಶಗಳೂ ಈಗ ಮುತ್ಸದ್ದಿತನವನ್ನು ತೋರಿಸಬೇಕು. ಭಾರತೀಯ ಸೇನೆಗಳು ಡಾಕ್ಕಾದಲ್ಲಿ ಬಹು ಕಾಲವುಳಿಯುವುದೆಂದು ನಂಬಿದ್ದ ತಮ್ಮ ಭ್ರಮೆ ನಿರಸನಗೊಂಡದ್ದರಿಂದ ಬಾಂಗ್ಲಾ ದೇಶವನ್ನು ಮನ್ನಿಸಲು ತರ್ಕ್ಷಣ ಮುಂ ದೆ ಬರಬೇಕು.

೦ ೦ ೦

ಅಮೆರಿಕೆಯು ಭಾರತ—ಪಾಕ್ ಸಮ ರದ ವೇಳೆ ತಳೆದ ಪಕ್ಷಪಾತ ಪೂರ್ಣ ನೀ ತಿಯಿಂದ ಉಭಯದೇಶಗಳ ಸಂಬಂಧ ಕೆ ಟ್ಟು ಹೋಗಿದೆ. ಅಧ್ಯಕ್ಷ ನಿಕ್ಸನ್ನರ ನೀತಿ ಯು ಅವರ ದೇಶದಲ್ಲೇ ಕಟು ಟೀಕೆಗೆ ಗು ರಿಯಾಗಿದೆ. ಅವರ ರಾಜ್ಯಕೀಯ ಸಲಹೆ ಗಾರ—ಬಾಂಗ್ಲಾ ದುರಂತ ನಾಟಕದ ನಿ ರ್ದೇಶಕ–ಕೇಸಿಂಜರ್ ಕೂಡಾ ಬಾಂಗ್ಲಾ ವನ್ನು ಮನ್ನಿಸುವ ಬಗ್ಗೆ ಮೂತಾಡ ತೊಡ ಗಿದ್ದಾರೆ. ಹೆಚ್ಚಿನ ದೇಶಗಳು ವಸ್ತು ಸ್ಥಿತಿ ಯನ್ನು ಮನಗಂಡಾಗ ತಾನದರಿಂದ ಅನ ಭಿಜ್ಞನೆಂತಿದ್ದರೆ, ತನ್ನ ಮುಖಕ್ಕೆ ಕರಿ ಬಳಿ ದಂತೆಯೆಂಬುದವರಿಗೂ ಗೊತ್ತು.

ಆದುದರಿಂದ ಅಮೆರಿಕೆ ಭಾರತದೊಡ ನೆ ಸಂಬಂಧವನ್ನು ಕುದುರಿಸಲು ಉತ್ಸುಕ ವಿನೆಯೆನ್ನುತ್ತಾರೆ ನಿಕ್ಸನ್. ಭಾರತವು ತ ನ್ನ ನೆರೆಹೊರೆಯ ದೇಶಗಳನ್ನು ಹೇಗೆ ಕಾಣುತ್ತದೆಯೆಂಬುದನ್ನಿದು ಹೊಂದಿಕೊಂ ಡಿದೆಯೆನ್ನುತ್ತಾರೆ ಅವರು. 'ನೆರೆ ಹೊರೆ ಯದೇಶ'ವೆಂದರೆ ಪಾಕಿಸ್ತಾನವೆಂಬುದು ಸ್ವಯಂಸಿದ್ಧ. ಪಾಕಿಸ್ತಾನದೊಡನೆ ಸ ಹೋದರ ಸಂಬಂಧವನ್ನು ಬಯಸುತ್ತದೆ ಎಂದು ಎಂದೋ ಡಂಗುರ ಸಾರಿದ ಭಾರತ ಇಂದೂ ಅದನ್ನೇ ಸುನರುಚ್ಚರಿಸುತ್ತದೆ. ಆದರೆ, ಮಹತ್ವಾಕಾಂಕ್ಷೆಯಿಂದ ಅಂಧರಾ ದ ಪಾಕ್ ನಾಯಕರು ಭಾರತ ದ್ವೇಷವ ನ್ನೇ ತಮ್ಮ ಬಂಡವಳವನ್ನಾಗಿ ದೇಶಕಟ್ಟ ಹೊರಟಿದ್ದಾರೆ. ಈ ಸತ್ಯವನ್ನು ನಿಕ್ಸನ್ ಮನಗಾಣದೆ ಹೋದರೆ, ಭಾರತವೇನು ಮಾಡಬೇಕು? ತಾನಾಗಿ ಅಮೆರಿಕೆಯ ಸ್ನೇಹವನ್ನು ಭಾರತ ಬಿಟ್ಟಲ್ಲ. ವಸ್ತು ಸ್ಥಿತಿಗೆ ಅಪಚಾರವೆಸಗುವಂತಹ ಕಾರ್ಯಕ್ರಮಗಳಲ್ಲಿ ಅಮೆರಿಕೆ ತೊಡಗಿದ್ದರಿಂದ ಅವರ ಭಾರತ ಪರಕ ನೀ ತಿಯು ತೀವ್ರ ಟೀಕೆಗೆ ಗುರಿಯಾಯ್ತು. ಈಗ ನಿಕ್ಸನ್ ಮತ್ತೆ ಸ್ನೇಹ ಹಸ್ತವನ್ನು ಮುಂದೆ ಮಾಡುವುದಾದರೆ, ಅದನ್ನು ಕು ಲುಕಲು ಭಾರತ ಹಿಂಜರಿಯುವುದಿಲ್ಲ. ಉಪಖಂಡದಲ್ಲಿ ಶಾತಿ ಬಯಸುವ ನಿಕ್ಸನ್ ಪಾಕಿಸ್ತಾನವನ್ನು ನಮ್ಮ ವಿರುದ್ಧ ಎತ್ತಿಕಟ್ಟುವುದನ್ನು, ಶಸ್ತ್ರಾಸ್ತ್ರ ಪೂರಯ್ಸುವುದನ್ನು ಬಿಟ್ಟು ಬಿಡಬೇಕು.

ಇದು ಅಮೆರಿಕಕ್ಕೆ ಪಥ್ಯವಾದೀತೆ? ವ್ಯಾಪಾರಿ ಮನೋಭಾವದ ಅಮೆರಿಕೆಗೆ ವ್ಯಾಪಾರ ನಡೆದರೆ ಸಾಕು. ಗಿರಾಕಿ ಪಾಕಿಸ್ತಾನವಾದರೇನು? ಚೀನಾ ಆದರೇನು? ಅಥವಾ ಭಾರತವೇ ಆದರೇನು?

●●

ಅಮೃತಾಂಜನ

● ತಲೆ ನಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-೫

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮುಖ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ವಿಧಾನ ಸಭಾ ಚುನಾವಣೆ—

ಜಿಲ್ಲೆಯ ೧೪ ಸ್ಥಾನಗಳಿಗೆ ೭೦ ಅಭ್ಯರ್ಥಿಗಳು

ದಕ್ಷಿಣ ಕನ್ನಡ ಜಿಲ್ಲೆಯ ವಿಧಾನ ಸಭಾ ಸ್ಥಾನಗಳು ೧೪. ಇವುಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಒಟ್ಟು ೭೦ರುವತ್ತು. ಇವರಲ್ಲಿ ೮. ಕಾಂಗ್ರೆಸ್—೧೩. ಸಂ. ಕಾಂಗ್ರೆಸ್—೯. ಜನಸಂಘ—೧೧. ಸ್ವತಂತ್ರ—೪. ಸಿಪಿಎಂ—೪. ಸಮಾಜವಾದಿ—೩. ಸಿಪಿಐ—೧ ಪಕ್ಷೇತರರು—೧೪ ಶ್ರೀ ಪೆರೋಡಿ ವಿಟ್ಠಲ ಶೆಟ್ಟರು ಏಳು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಬಯಸಿರುವ ಏಕೈಕ ಪಕ್ಷೇತರ ಅಭ್ಯರ್ಥಿ. ಕಳೆದ ವಿಧಾನ ಸಭಾ ಚುನಾವಣೆಗಳಲ್ಲೂ ಲೋಕ ಸಭಾ ಚುನಾವಣೆಯಲ್ಲೂ ಶ್ರೀ ಶೆಟ್ಟರು ಸ್ಪರ್ಧಿಸಿದ್ದಾರೆ.

ಈಗ ಚುನಾವಣಾ ಕಣವಲ್ಲಿ ಉಳಿದಿರುವವರಲ್ಲಿ ಬಂಡುಗಾರ ಆ ಕಾಂಗ್ರೆಸ್ಸಿಗರೂ ಕೆಲವಿದ್ದಾರೆ. ಇವರನ್ನು ಪ್ರಾದೇಶಿಕ ಸಮಿತಿಯು ಉಚ್ಚಾಟನೆ ಮಾಡಿ ಜಿಲ್ಲೆ ಹೊರಡಿಸಿದೆ. ಆ. ಕಾಂಗ್ರೆಸ್ಸಿನ ಟಿಕೇಟು ನೀಡಿಕೆಯಲ್ಲಿ ಪರಮಾವಧಿ ಅನ್ಯಾಯವಾಗಿದೆಯೆಂಬ ಆರೋಪ ಈ ಜಿಲ್ಲೆಗೆ ಮಾತ್ರ ಸೀಮಿತವಲ್ಲ, ಇಡಿಯ ದೇಶದಲ್ಲೇ ಪ್ರತಿಧ್ವನಿಸಿತ್ತಿದೆ. ಪಕ್ಷಾಂತರಕ್ಕೆ ಮತ್ತೊಮ್ಮೆ ರಂಭವಾಗಿದೆ.

ದ. ಕ. ಜಿಲ್ಲೆಯ ಅಭ್ಯರ್ಥಿಗಳ ವಿವರ ಈ ರೀತಿಯಿದೆ:—

ಮಂಗಳೂರು—೧

ಅಡ್ಡಿ ಸಾಲ್ಯಾನ್— ಆ. ಕಾಂ.
ಎಸ್. ಕೆ. ಅಮೀನ್ —ಸಂ. ಕಾಂ.
ಸಿ. ಜಿ. ಕಾನ್ತ್— ಜ ಸಂ.
ಪಿ. ರಾಮಚಂದ್ರ ರಾವ್— ಸಿ. ಪಿ. ಎಂ.
ಜೋಸೆಫ್ ಅರಾನಾ—ಪಕ್ಷೇತರ.

ಮಂಗಳೂರು—೨

ಯು. ಫರೀದ್— ಆ. ಕಾಂ
ಎಂ. ಎ. ಖಾದರ್— ಸಂ. ಕಾಂ.
ಕೆ. ನಾರಾಯಣ ಶೆಟ್ಟಿ— ಜ. ಸಂ.
ಎ ಕೃಷ್ಣ ಶೆಟ್ಟಿ— ಸಿಪಿಎಂ.
ಲೋಯಲ್ಲಾ ಲೋಬೊ ಪ್ರಭು—ಸ್ವ.
ಎ. ರಾಮಚಂದ್ರ— ಪಕ್ಷೇತರ.

ಪುತ್ತೂರು

ಎ. ಶಂಕರ ಆಳ್ವ— ಆ. ಕಾಂ.
ಜಾಕೆ ಪರಮೇಶ್ವರಗೌಡ—ಸಂ. ಕಾಂ
ಕೆ. ರಾಮ ಭಟ್— ಜ. ಸಂ.
ಪಿ ನೇಮಿರಾಜ್—ಸ್ವ.
ಪದ್ಮನಾಭ ಪೈ—ಪಕ್ಷೇತರ

ಸುಳ್ಯ

ಪಿ. ಡಿ. ಬಂಗೇರ—ಆ. ಕಾಂ.
ಮುದರ—ಜ. ಸಂ.
ಕೆ. ಸುಬ್ಬಯ್ಯ ನಾಯಕ್—ಪಕ್ಷೇತರ.
ಯು ನರಸಯ್ಯ ಪಕ್ಷೇತರ

ಬಂಟ್ವಾಳ

ಬಿ. ವಿ. ಕಕ್ಕಿಲ್ಲಾಯ—ಸಿಪಿಐ
ಎ. ರಕ್ಷಿಯ್ಯ ಪೂಜಾರಿ—ಜ. ಸಂ.
ಈಶ್ವರ ಭಟ್ ಪಿ.—ಸಮಾಜವಾದಿ.
ಎಸ್. ಎ. ಜೆ ನೊರಾನ್—ಪಕ್ಷೇತರ.
ಶೇಕ್ ಇಬ್ರಾಹಿಂ ಸಾಹೇಬ್—ಪಕ್ಷೇತರ.

ಬೆಳ್ತಂಗಡಿ

ಕೆ. ಸುಬ್ರಹ್ಮಣ್ಯ ಗೌಡ—ಆ. ಕಾಂ
ನೇಮಿರಾಜ ಶೆಟ್ಟಿ—ಜ ಸಂ.
ಕೆ. ವಿ. ಎಳತ್ತಾಯ—ಸಿ ಪಿ ಎಂ.
ಸಿ. ಈಶ್ವರ ಭಟ್—ಸ್ವ.
ಕೆ. ಚಿದಾನಂದ— ಸಂ. ಕಾಂ.

ಮೂಡಬಿದ್ರೆ

ನಾನೋದರ ಮೂಲ್ಕಿ—ಆ. ಕಾಂ.
ಅಮರನಾಥ ಶೆಟ್ಟಿ—ಸಂ. ಕಾಂ.
ಪಿ. ವಿಟ್ಠಲ ಶೆಟ್ಟಿ— ಪಕ್ಷೇತರ.

ಉಡುಪಿ

ಮನೋರಮಾ ಮಧ್ವರಾಜ್—ಆ ಕಾಂ
ವಿ. ಎಸ್. ಆಚಾರ್— ಜ. ಸಂ.
ಎಂ. ಗೋವಿಂದ ಶೆಟ್ಟಿ—ಸಮಾಜವಾದಿ.
ಪಿ. ವಿಟ್ಠಲ ಶೆಟ್ಟಿ—ಪಕ್ಷೇತರ
ಸುರೇಂದ್ರನಾಥ— "
ಶ್ರೀಧರ ಎಂ. ಕಲ್ಮಾಡಿ —"

ಕಾಪು

ಬಿ. ಭಾಸ್ಕರ ಶೆಟ್ಟಿ—ಆ. ಕಾಂ.
ಎಂ ಎಸ್. ದಯಾಕರ —ಸಮಾಜವಾದಿ.
ಮುದ್ದು ಸುವರ್ಣ—ಪಕ್ಷೇತರ.
ಪಿ. ವಿಟ್ಠಲ ಶೆಟ್ಟಿ — "
ಸಂಜೀವನಾಥ ಐಕಳ —"

ಸುರತ್ಕಲ್

ಬಿ. ಸುಬ್ಬಯ್ಯ ಶೆಟ್ಟಿ—ಆ. ಕಾಂ.
ಪ್ರಭಾಕರ ರೈ —ಸಂ. ಕಾಂ.
ರಘುನಾಥ ಕೋಟ್ಯಂಕರ್ —ಜ. ಸಂ.
ರತನ್ ಕುಮೂರ್ ಕಟ್ಟೆಮೊರ್—ಸ್ವ.
ಕೆ. ವೆಂಕಟ ರಾವ್—ಪಕ್ಷೇತರ.

ಕುಂದಾಪುರ

ವಿನ್ಸೆಂಟ್ ಫೆರ್ನಾಂಡಿಸ್—ಆ. ಕಾಂ.
ಕೆ. ಸಂಜೀವ ಶೆಟ್ಟಿ —ಸಂ. ಕಾಂ.
ಅಬ್ರಾಹಾಂ ಕರ್ಕಡ —ಸಿಪಿಎಂ.

ಬೈಂದೂರು

ಎ.ಗೋಪಾಲಕೃಷ್ಣ ಕೊಡ್ಗಿ—ಆ.ಕಾಂ.
ಎಸ್. ವಿಟ್ಠಲ ಪೈ —ಜ. ಸಂ.
ಡಿ. ಗಣಪಯ್ಯ—ಪಕ್ಷೇತರ

ಬ್ರಹ್ಮಾವರ

ಜಯಪ್ರಕಾಶ ಶೆಟ್ಟಿ,ಕೆ.—ಆ. ಕಾಂ.
ಎಂ. ಎಂ. ಹೆಗ್ಡೆ—ಸಂ. ಕಾಂ.
ಮಹಾಬಲೇಶ್ವರ ಅಡಿಗ—ಜ. ಸಂ.
ಪಿ. ವಿಟ್ಠಲ ಶೆಟ್ಟಿ —ಪಕ್ಷೇತರ.

ಕಾರ್ಕಳ

ಎಂ. ವೀರಪ್ಪ ಮೊಯ್ಲಿ— ಆ. ಕಾಂ.
ಸುಂದರ ಹೆಗ್ಡೆ— ಸಂ. ಕಾಂ.
ಬಿ. ರಘುರಾಮ ಶೆಟ್ಟಿ— ಜ. ಸಂ.
ಎ. ವಿಟ್ಠಲ ಶೆಟ್ಟಿ— ಪಕ್ಷೇತರ
ವೈ. ತನಿಯಪ್ಪ— "

●●

ಗೇಪರಾಜ್ಯದಲ್ಲಿ

(ನಾಳ್ಕನೇ ಪುಟದಿಂದ)

'ಅದನ್ನೇ ನೋಡಿ ಕನಕದಾಸರು ಅಂದದ್ದು — ನಾನು ಹೋದರೆ ಹೋದೇನ ಎಂದು....'

'ಜ್ಞಾಂ....'

'ಅವರೆ. ಆ ನಾನು ಎಂದು ಹೋಗುವುದೋ!'

'ಭೌತಿಕವಾದದಿಂದ ಜರ್ಜರಿತವಾದ ಮೊನವನ ಬದುಕಿನಲ್ಲಿ ಆಧ್ಯಾತ್ಮವಾದ ಕ್ಕೂ ನ್ಯಾನೊಂದು ಹೊರಕೆದರೆ ಆಗ ಹೋಗ ಒಕುಮೋ ವಿನೋ!'

'ಓ ಹಾರೀ ದೂರೆ....ಹಾರೀ ದೂರೆ....'

'ಇಲ್ಲ ಕಕ್ಕೇ. ದೂರ ಹತ್ತಿರವಾಗುತ್ತೆ ಬರಬೆತ್ತಿದೆ....'

'ಪಾವೇ....!'

'ಜ್ಞಂ..'

—ಗೋರಾ.

●●

ನೋಟೀಸು

ದಕ್ಷಿಣ ಕನ್ನಡ ಜಿಲ್ಲಾ ಜಜ್ಜರ
ಕೋರ್ಟಿನಲ್ಲಿ, ಮಂಗಳೂರು

P. & Sr No 10/1972

ಮೃತ ಮಂಜಯ್ಯ ಶೆಟ್ಟಿಗೆ ಬರಬೇಕಾದ ಣ ವೇಜಸ್ ಬಾಬ್ತು ಕೆ. ಮಹಾಬಲ ಶೆಟ್ಟಿ ಪಕ್ಕೆರೆದು ಅರ್ಜಿದಾರರು,

ಮೇಲ್ಕಂಡ ಅರ್ಜಿದಾರರು ಇವರ ಅಳ್ಳ ಪುಟ್ಟಮ್ಮ ಶೆಟ್ತಿ ಮಗ ಮೃತ ಮಂಜಯ್ಯ ಶೆಟ್ಟಿ, ಕುಂದಾಪುರ ತಾಲೂಕು ಕಾಳಾವರ ಗ್ರಾಮದ ನಿವಾಸಿ, ಇವರಿಗೆ ಬರೆತಕ್ಕ ಕೆಲ ಬಡೇಜಸ ಬಾಬ್ತು 1ನೇ ಕೆ ಮಹಾಬಲ ಶೆಟ್ಟಿ ಹೆಸರಿನಲ್ಲಿ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕೆಂದು ಅರ್ಜಿ ಕೊಟ್ಟಿದ್ದು ಆದಕ್ಕೇನಾದರೂ ಆಕ್ಷೇಪವಿದ್ದಲ್ಲಿ ತಾ. 16-8-1972ರಂದು ಬೆಳಿಗ್ಗೆ ಘ. 11ಕ್ಕೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪದಾರರು ಹಾಜರಾಗಿ ತಿಳಿಸತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

Sd/—K. Rajaram Hegde
ಅರ್ಜಿದಾರರ ಕಡೆ ಎಡ್ವೋಕೇಟ್

ಮಂಗಳೂರು, 11-8-1972

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ. 1921— ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಬಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಉಡುಪಿಯಲ್ಲಿ 'ಕವಿ ಮುದ್ದಣ ರಸ್ತೆ'ಯ ಉದ್ಘಾಟನೆ

ಉಡುಪಿ ಚರ್ಚ್ ರೋಡಿನಲ್ಲಿ ಕವಿ ಮುದ್ದಣ ನೆಲಸಿರುವಲ್ಲಿ ಆತನ ಸವಿ ನೆನಪಿಗಾಗಿ ಒಂದು ಫಲಕ ಇರಿಸಿ ಆ ರಸ್ತೆಗೆ 'ಕವಿ ಮುದ್ದಣ ರಸ್ತೆ' ಎಂದು ಹೆಸರಿಸುವ ಸಮಾರಂಭವನ್ನು ತಾ ೨ರಂದು ಎಂ. ಜಿ. ಎಂ. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಉದ್ಘಾಟಿಸಿದರು. ಆರಂಭದಲ್ಲಿ ನಗರ ಸಭಾಪತಿ ಡಾ ವಿ. ಎಸ್. ಆಚಾರ್ಯರು ಸ್ವಾಗತಿಸಿದರು ಸರೂರಂಭವ ಎಂ. ಜಿ ಎಂ. ಸರಕಾರಿ ಶಾಲೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಕವಿ ಮುದ್ದಣನ ಮೊಮ್ಮಗ ಶ್ರೀ ನಂದಳಿಕೆ ಸೀತಾರಾಮರು ಉಪಸ್ಥಿತರಿದ್ದು ಅವರಿಗೆ ಶಾಲನ್ನಿತ್ತು ಗೌರವಿಸಲಾಯಿತು. ಶ್ರೀ ಸೀತಾರಾಮರು ತನ್ನಜ್ಜನಿಗೆ ಸಲ್ಲಿಸಿದ ಗೌರವಕ್ಕಾಗಿ ಕೃತಜ್ಞತೆ ಸೂಚಿಸಿದರು

ಪ್ರೊ। ಎಸ್. ಕೆ ಶ್ರೀಪತಿ ಆಚಾರ್ಯರು ಕವಿಯ ಹುಟ್ಟಿತು ನೂತಾಡಿ ಉಡುಪಿ ಧಾರ್ಮಿಕ, ಶೈಕ್ಷಣಿಕ ನಾಡಾಗಿರುವಂತೆ ಕವಿಗಳ ಬೀಡೂ ಆಗಿದೆ. ನಂದಳಿಕೆ ಲಕ್ಷ್ಮೀನಾರಾಯಣಯ್ಯನವರು ಕನ್ನಡಿಗರ ಹೃದಯವನ್ನು ಅರಳಿಸಬೇಕೆನ್ನುವುದರಿಂದ ಕುಮಾರ ವಿಜಯ, ರತ್ನಾವತಿ ಕಲ್ಯಾಣ ಎಂಬ ಯಕ್ಷಗಾನ ಗ್ರಂಥಗಳನ್ನೂ, ಅದ್ಭುತ ರಾಮಾಯಣ, ರಾಮೋಪ್ಮಮೇಧಗಳಂಥ ಅತ್ಯುನ್ನತ ಕೃತಿಗಳನ್ನೂ ತನ್ನ ನಿಜಹೆಸರಿನಿಂದ ಬರೆಯದೆ 'ಮುದ್ದಣ' ಎನ್ನುವ ಕಾವ್ಯನಾಮದಿಂದ ಬರೆದರು. ಬಡತನದ ಜೀವನ ನಡೆಸಿಯೂ ಸುಖ ಸಡೆಯಬಹುದೆನ್ನುವ ಆದರ್ಶವನ್ನು ಜನಸಾಮಾನ್ಯರಿಗೆ ತೋರಿಸಿ ಕೊಟ್ಟವರು ವರಕವಿ ಮುದ್ದಣ ಎಂದರು

ಕು. ಶಿ. ಹರಿದಾಸ ಭಟ್ಟರು ಉದ್ಘಾಟಿಸುತ್ತಾ 19ನೇ ಶತಮಾನದ ಬಳಿಕ ಸಾಹಿತ್ಯ ಭೂಮಿ ಬರಡಾಗಿದ್ದ ವೇಳೆಯಲ್ಲಿ ಕವಿ ಮದ್ದಣ ತನ್ನ ಸಾಹಿತ್ಯದಿಂದ ಆ ಕೊರತೆ ನೀಗಿಸಿದರು. ಅವರು ಚಿರಕಾಲ ಹೃದಯದಲ್ಲಿ ನಿಲ್ಲುವಂಥ ಕೃತಿಗಳನ್ನು ರಚಿಸಿರುತ್ತಾರೆ ಎಂದರು. ಅಲ್ಲದೆ ಕವಿಯ ಸ್ಮಾರಕಾರ್ಥವಾಗಿ ನಗರ ಸಭೆಯವರ ಈ ಕಾರ್ಯಕ್ಕೆ ಸಂತೋಷ ವ್ಯಕ್ತಪಡಿಸಿ ಇದೇ ಸ್ಥಳದಲ್ಲಿ ಕವಿ ಮುದ್ದಣ್ಣನ ಪ್ರತಿಮೆಯನ್ನು ನಿಲ್ಲಿಸುವಂತಾಗ ಬೇಕೆಂದರು. ಮೈಸೂರು ವಿ. ವಿದ್ಯಾಲಯದವರು ಕವಿಯ ಸ್ಮರಣೆಗಾಗಿ ದೊಡ್ಡ ಗ್ರಂಥವನ್ನು ಪ್ರಕಟಿಸಿದ್ದರೂ ಮುದ್ದಣ್ಣ ಪರಿವಾರದವರಿಗೆ ಏನಾದರೂ ಪರಿಹಾರ ನೀಡುವುದು ನಮ್ಮ ಕರ್ತವ್ಯ ಎಂದರು

ಆರಂಭದಲ್ಲಿ ಮುನಿಸಿಪಲ್ ಸದಸ್ಯ ಶ್ರೀ ಕೆ. ರಾಮದಾಸ ಶೆಣೈ ಧನ್ಯವಾದ ಸಮರ್ಪಿಸಿದರು.

ಫಲಕದಲ್ಲಿ "ಇದು ಕವಿ ಮುದ್ದಣ ವಾಸಿಸುತಿದ್ದ ನೆಲೆ (1870-1901)" ಎಂದು ಕೆತ್ತಲಾಗಿದೆ.

ಪರ್ಕಳ ಹೈಸ್ಕೂಲ್ ವಾರ್ಷಿಕೋತ್ಸವ

ಪರ್ಕಳ ಹೈಸ್ಕೂಲಿನ ವಾರ್ಷಿಕೋತ್ಸವವು ಇತ್ತೀಚೆಗೆ ಉಡುಪಿ ಎಂ ಜಿ. ಎಂ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕು ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು ಪರ್ಕಳ ಎಜುಕೇಶನ್ ಸೊಸ್ಯಾಟಿಯ ಅಧ್ಯಕ್ಷ ಶ್ರೀ ಕೆ. ಶ್ರೀನಿವಾಸ ಆಚಾರ್ಯರು ಸ್ವಾಗತಿಸಿದರು. ಹಳೆ ವಿದ್ಯಾರ್ಥಿ ಶ್ರೀ ಜಯರಾಮ ಕೆ. ಶೆಟ್ಟರು ಸ್ವಸ್ತಿವಚನ ನುಡಿದರು. ಶ್ರೀ ವಿ ಜಯರಾಮ ಶೆಟ್ಟರು ವಿವಿಧ ಸ್ಪರ್ಧೆಗಳಲ್ಲಿ ಜಯಗಳಿಸಿದವರಿಗೆ ಪ್ರಶಸ್ತಿ ಪತ್ರಗಳನ್ನು ಹಂಚಿದರು. ಕೊನೆಯಲ್ಲಿ ಶ್ರೀ ಕೆ. ಪದ್ಮನಾಭ ಭಟ್ಟರು ವಂದನೆಗಳನ್ನು ಅರ್ಪಿಸಿದರು. ಬಹುಮಾನಿತರು ತಮ್ಮ ಬಹುಮಾನಗಳ ಮೌಲ್ಯವನ್ನು ರಕ್ಷಣಾನಿಧಿಗೆ ಸಮರ್ಪಿಸಲು ನಿರ್ಧರಿಸಿರುವರು.

ನೆಲಗ್ಗೆ ಪರ್ಕಳ ಪಂಚಾಯತ್ ಅಧ್ಯಕ್ಷ ಶ್ರೀ ಪಿ. ಗುರುರಾಜ ಆಚಾರ್ಯರಿಂದ ಧ್ವಜಾರೋಹಣ ನೆರವೇರಿತು.

(ಎರಡನೇ ಪುಟದಿಂದ)

ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವುದು ಅವರಿಗೆ ಪ್ರಯಾಸವಾಯಿತು—ಜಾನಕಿಯ ಸಾವನ್ನು ಅವರು ಮರೆಯಲು ಯತ್ನಿಸಿದರು. ಈ ಪ್ರಯತ್ನ ನೋವನ್ನು ಮರೆಸುವ ಬದಲು, ಅದು ಮರುಕೊಳಿಸುವಂತೆ ಮಾಡಿತು.

೦೦ ೦೦ ೦೦

ರಾಷ್ಟ್ರಕೂಟ ರಾಜದಂಪತಿಗಳಿಗೆ ಹುಟ್ಟಿದ ಒಂದೇ ಒಂದು ಹೆಣ್ಣು ಮಗು ಜಾನಕಿ. ಜಾನಕಿಗೆ ಜನ್ಮ ಕೊಟ್ಟು ತಾಯಿ ಮೃತ್ಯುವನ್ನಪ್ಪಿದಳು. ತಂದೆ ಮರು ಮದುವೆ ಮಾಡಿಕೊಳ್ಳಲಿಲ್ಲ. ಆಳಿದ ರಾಜ್ಯವನ್ನೂ, ಪ್ರಜೆಯನ್ನೂ ಬೇರೊಬ್ಬಳೊಡನೆ ಆಳಲು ಅವನ ಮನಸ್ಸು ಒಡಂಬಡಲಿಲ್ಲ. ತಬ್ಬಲಿಯಾದ ಜಾನಕಿಯನ್ನೂ, ತಂದೆಯಿಂದ ಎಂಟು ವರ್ಷಕ್ಕೆ ಮೊದಲು ಹುಟ್ಟಿದ ಇಂದ್ರನನ್ನೂ ಬೆಳೆಸಿ ದೊಡ್ಡವರನ್ನಾಗಿ ಮಾಡುವುದನ್ನೇ ಬಾಳಿನ ಗುರಿಯಾಗಿ ಇಟ್ಟುಕೊಂಡ. ಮಕ್ಕಳಿಗೆ ಯೋಗ್ಯ ಶಿಕ್ಷಣ ಕೊಡಿಸಿದ. ಅರಸು ಮಕ್ಕಳು ಕಲಿಯಲೇ ಬೇಕಾಗಿದ್ದ ಶಸ್ತ್ರ ವಿದ್ಯೆಯನ್ನೂ, ಕುದುರೆ ಸವಾರಿಯನ್ನೂ ಕಲಿಸಿದ. ರಾಜ್ಯಭಾರ ಕ್ರಮವನ್ನೂ ಹೇಳಿ ಕೊಟ್ಟ. ಅವರಿಬ್ಬರೂ ಬೆಳೆಯುವ ಮೊದಲು–ತಮ್ಮ ಕಾಲ ಮೇಲೆ ನಿಂತು ಕೊಳ್ಳುವಷ್ಟು ಶಕ್ತರಾಗುವ ಮೊದಲು– ತನ್ನ ಇಹದ ಯಾತ್ರೆ ಮುಗಿಸಿದ. ಅವನ ಮರಣಾನಂತರ ಇಂದ್ರ ರಾಷ್ಟ್ರಕೂಟ ಸಾಮ್ರಾಜ್ಯದ ಗದ್ದುಗೆಯನ್ನೇರಿದ. ಅಪ್ರಬುದ್ಧನಾದರೂ ಅಡಳಿತದಲ್ಲಿ ಹಿಡಿತವನ್ನು ತೋರಿಸಿದ. ಅದು ತನಕವೂ ಮಾಂಡಳಿಕರಾಗಿದ್ದುಕೊಂಡು, ಪ್ರತಿಷ್ಠಿತ ಪ್ರತಿಷ್ಠಿತ ರಾಜಪ್ರತಿನಿಧಿಗಳಂತೆ ನಡೆಯುತ್ತಿದ್ದ ಪೂರ್ವ–ಪಶ್ಚಿಮದ ಚಾಳುಕ್ಯರು ಒಳಗೊಳಗೇ ಕತ್ತಿ ಮಸೆಯಲಾರಂಭಿಸಿದರು. ಆಸನಸ್ಥಭವಿಕನಾದ ಇಂದ್ರನನ್ನು ಅಲಕ್ಷಿಸಲಾರಂಭಿಸಿದರು. ಸಾಮ್ರಾಜ್ಯದಿಂದ ಸಿಡಿದು ಹೋಗಿ ಸ್ವತಂತ್ರರಾಗಲು ಬಯಸಿದರು. ಸಾಮ್ರಾಜ್ಯದೊಳಗೆ ಮೋರೆ ಹಾಕಿದ ಈ ಆಂತಃಕಲಹದಿಂದ ರಾಷ್ಟ್ರಕೂಟ ಸಿಂಹಾಸನದ ಅಡಿಗಲ್ಲೇ ಅಲ್ಲಾಡಿತು.

ಒಂದು ಕಡೆ ಮಾಂಡಳಿಕರು ಸಾಮ್ರಾಜ್ಯದಿಂದ ಬೇರೆಯಾಗಲು ಹೆಣಗಿದರು. ಇನ್ನೊಂದೆಡೆ ರಾಷ್ಟ್ರಕೂಟ ರಾಜಮನೆತನಕ್ಕೇ ಸೇರಿದ ಕೆಲವರು ನಾಯಾದಿ ಮಾತ್ಸರ್ಯದಿಂದ ಉದ್ದೀಪಿತರಾಗಿ ಸಿಂಹಾಸನವನ್ನೇ ಆಕ್ರಮಿಸಲು ಉದ್ಯುಕ್ತರಾದರು. ಈ ಸ್ಥಿತಿಯಲ್ಲಿದ್ದ ಸಾಮ್ರಾಜ್ಯವನ್ನು ಉರುಳಿಸಲು ಹೊರಗಿನಿಂದ ಪ್ರವಾಹ ರೂಪದಲ್ಲಿ ಹರಿದು ಬರುವ ದಂಡಯಾತ್ರೆಗಳಿಗೆ ಏನೂ ಕೊರತೆ ಇರಲಿಲ್ಲ. ಈ ಮೂರು ಪ್ರವೃತ್ತಿಗಳನ್ನೂ ತನ್ನ ಅಧಿಕಾರದ ಮೊದಲ ದಿನಗಳಲ್ಲಿ ರಾಷ್ಟ್ರಕೂಟ ಇಂದ್ರ ಎದುರಿಸಬೇಕಾಯಿತು.

ಸಾಮ್ರಾಜ್ಯಕ್ಕೊದಗಿದ ವಿಪತ್ತನ್ನು ನಿವಾರುಗಾಣಿಸುವುದರಲ್ಲಿ, ಈ ಪರಿಸರದಲ್ಲಿ ಅವನ ಜೊಬಲಕ್ಕೆ ನಿಂತವರಲ್ಲಿ ಪ್ರಮುಖರಿಬ್ಬರು. ಒಂದು ಇಂದ್ರನ ಚಿಕ್ಕಪ್ಪ ಬಧ್ದೆಗ. ಇನ್ನೊಂದು ಚಾಳುಕ್ಯ ನರಸಿಂಹ. ನರಸಿಂಹ ಇಂದ್ರನ ಸಮ ವಯಸ್ಕ. ಆತನ ಮತಿ ಕುಶಾಗ್ರ. ಆತ ಕುಶಲ ಸಂಘಟಕ. ಅವನ ನಿಷ್ಠೆ ಗಟ್ಟಿಯಾದದ್ದು. ಶಸ್ತ್ರ–ಶಾಸ್ತ್ರಗಳಲ್ಲಿ ಪರಿಣತ. ನರಸಿಂಹ-ಅದು ಅವನ ನಿಜನಾಮ. ಅನ್ವರ್ಥ ನಾಮವೂ ಆಹುದು. ಈ ಚಾಳುಕ್ಯ ನರಸಿಂಹ ಸಾಮ್ರಾಜ್ಯದ ಇತಿಹಾಸದ ಸಂಯುಕಟ್ಟಿನ ದಿನಗಳಲ್ಲಿ ತನ್ನ ಬಾಹು ಬಲದಿಂದಲೂ, ಬುದ್ಧಿ ಸಾಮರ್ಥ್ಯದಿಂದಲೂ ಅದನ್ನುಳಿಸಲು ಸರ್ವ ಸಾಹಸ ಮಾಡಿ ಕೃತಕೃತ್ಯನಾದ.

ಆತನ ಸೇವೆಯಿಂದ ಸಂಪ್ರೀತನಾದ ಇಂದ್ರ ಅವನನ್ನು ತನ್ನ ದಂಡಾಧಿಪತಿಯನ್ನಾಗಿ ನೇಮಿಸಿದ. ಆಪ್ತ ಸಲಹೆಗಾರನನ್ನಾಗಿ ಮಾಡಿಕೊಂಡ. ಹೀಗೆ ಸಾಮಾನ್ಯ ಮಾಂಡಳಿಕನಾಗಿದ್ದ ನರಸಿಂಹ, ಸ್ವಸಾಮರ್ಥ್ಯದಿಂದ ಪ್ರಭುಗಳ ಕೃಪೆಗೆ ಪಾತ್ರನಾದ. ರಾಷ್ಟ್ರಕೂಟ ಸಾಮ್ರಾಜ್ಯದ ಆಧಾರವಾದ. ಹರೆಯದ ಹುಮ್ಮಸ್ಸು, ಬಾಹು ಬಲದಲ್ಲಿದ್ದ ಆತ್ಮ ವಿಶ್ವಾಸ, ಸಾಮ್ರಾಜ್ಯದ ಸೀಮಾ ರೇಖೆಯನ್ನು ವಿಸ್ತರಿಸುವ ಮಹತ್ವಾಕಾಂಕ್ಷೆ–ಎಲ್ಲ ಅವನಲ್ಲಿದ್ದುವು. ಜೊತೆಯಲ್ಲಿ ಉಕ್ಕೇರುವ ಉತ್ಸಾಹವನ್ನು, ಪ್ರೀತಿಯಿಂದ ಪತಿಕರಿಸಿ ಹುರಿದುಂಬಿಸುವ ದೊರೆ.

ನರಸಿಂಹ ದೊರೆಯ ಆಣತಿ ಪಡೆದು, ಘೂರ್ಜರದ ಮೇಲೆ ದಂಡೆತ್ತಿ ಕೊಂಡು ಹೋಗಿ ರಾಜ ಮಯೂರವರ್ಮನನ್ನು ಸೋಲಿಸಿ, ಅಲ್ಲಿ ವಿಜಯ ಧ್ವಜವನ್ನೂರಿದ.

ಹಿಂತಿರುಗಿದ ಸೇನಾಧಿಪತಿಯನ್ನು ಇಂದ್ರ ಯಥೋಚಿತ ರೀತಿಯಲ್ಲಿ ಸತ್ಕರಿಸಿದ. ಮನೆಯಲ್ಲಿ ಬೆಳೆದು ನಿಂತ ತಂಗಿ ಜಾನಕಿಯನ್ನು ಉಡುಗೊರೆಯಾಗಿ ಧಾರೆ ಎರೆದು ಕೊಟ್ಟ. ಅದು ಅನುರೂಪದ ಅನುರೂಪ ದಾಂಪತ್ಯ. ಈ ವಿವಾಹದ ಮೂಲಕ, ರಾಷ್ಟ್ರಕೂಟ ಇಂದ್ರ ಇನ್ನೊಂದನ್ನು ಸಾಧಿಸಿದ. ರಾಷ್ಟ್ರಕೂಟ ರಾಜರಿಗೆ ಯುದ್ಧದಲ್ಲಿ ಸೋತು, ಅವರ ಸಾಮಂತಿಕೆಯನ್ನೊಪ್ಪಿದ್ದ -- ಪೂರ್ವ—ಪಶ್ಚಿಮದ ಚಾಳುಕ್ಯರು—ಆಗಾಗ್ಯೆ ಶಕ್ತಿಸಂಚಯ ಮಾಡಿಕೊಂಡು ಸ್ವತಂತ್ರರಾಗಲು ಸಮಯ ಕಾಯುತ್ತಿದ್ದರು. ರಾಷ್ಟ್ರಕೂಟರು ಅದನ್ನು ಮೆಟ್ಟಿ ಹಾಕಿದ್ದರೂ ಅವರೀರ್ವರೊಳಗಿದ್ದ ದ್ವೇಷ ಬೂದಿ ಮುಚ್ಚಿದ ಕೆಂಡದಂತಿತ್ತು. ಅನುಕೂಲ ಗಾಳಿ ಬೀಸಿದಾಗ ಅದು ಭುಗಿಲೆಂದೇಳುತಿತ್ತು. ಚಾಳುಕ್ಯ ಶಾಖೆಯೊಂದರೊಡನೆ ಮಾಡಿದ ಈ ನೂತನ ಶರೀರ ಸಂಬಂಧದಿಂದ ಈ ಆತಂಕ ಹರಿದುಹೋಯಿತು.

ಇದರಿಂದ ಉಭಯ ಪಕ್ಷದವರಿಗೂ ಮಂಗಳವಾಯಿತು.

ಈ ಬಾಹು ಬಂಧನದಿಂದ ಕರ್ಣಾಟಕದ ಭಾವೈಕ್ಯತೆ ಭದ್ರಗೊಂಡಿತು.

೦೦ ೦೦ ೦೦

'ಹೀಗೆ ಕುಳಿತರೆ ಹೇಗೆ ಪ್ರಭು? ಹೋದವರು ಹೋದರು. ಅವರಿನ್ನು ಬರುವಂತಿಲ್ಲ. ಅವರನ್ನೇ ನೆನೆಸಿ ಅಳುತ್ತ ಕುಳಿತರೆ ಉಳಿದವರ ಪಾಡು ಏನು? ನೋವು, ಸಂಕಟ ನಮಗೂ ಆಗಿದೆ. ಸಹಿಸಿಕೊಳ್ಳದೆ ವಿಧಿಯಿಲ್ಲ. ಮಾಡುವುದನ್ನು ಮಾಡದಿರುವುದು ಹೇಗೆ? ನೀವು ದುಃಖವನ್ನು ಸಹಿಸಿಕೊಂಡು ಉಳಿದವರಿಗೆ ದಾರಿ ತೋರಿಸಬೇಕು. ತಾವೇ ಅಧೀರರಾದರೆ—?'

ಅರಮನೆಯ ಪುರೋಹಿತರು ಯಾವುದೋ ವಿಚಾರ ಸುಳಿಯಲ್ಲಿ ಸಲುಕಿದ್ದ ನರಸಿಂಹನನ್ನು ಎಚ್ಚರಿಸಿದರು. ಅವರ ಮಾತಿನಿಂದ ನರಸಿಂಹ ಕಲ್ಪನಾಲೋಕದಿಂದ ವಾಸ್ತವ ಪ್ರಪಂಚಕ್ಕಿಳಿಯಬೇಕಾಯಿತು.

ಎದ್ದು ನಿಂತು ನರಸಿಂಹ 'ಆಗಲೇ ಬಂದಿರಾ ಪುರೋಹಿತರೇ? ಬಂದುದೂ ತಿಳಿಯಲಿಲ್ಲ ಏನೋ ಯೋಚಿಸುತ್ತ ಕುಳಿತಿದ್ದೆ ಮನ್ನಿಸಬೇಕು. ಏನು ಬಂದಿರಿ? ಸನ್ನಿಂಸೇನಾಗಬೇಕು?'

'ಇದು ನರೆಗೂ ಸೂತಕ ಇತ್ತು. ಇಂದು ದೇಹ ಶುದ್ಧಿ ಮಾಡಿಸಿಕೊಳ್ಳಬೇಕು. ಹಾಗೆಯೇ ಇನ್ನೊಂದು ಕೆಲಸವೂ—'

ನಡುವೆ ಬಾಯಿ ಹಾಕಿ ನರಸಿಂಹ ಉದ್ವಿಗ್ನತೆಯಿಂದ 'ಯಾವುದು ಆ ಇನ್ನೊಂದು ಕೆಲಸ?

"ಕುಮಾರನ ಜಾತಕರ್ಮ ನಾಮಕರಣ ಇತ್ಯಾದಿ. ಈ ವಿಚಾರದಲ್ಲಿ ತಮ್ಮ ಮನದಿಂಗಿತವನ್ನು ತಿಳಿಯಲು ರಾಜಾಜ್ಞೆಯಾಯಿತು. ಅದನ್ನು ತಮ್ಮಲ್ಲಿ ನಿವೇದಿಸಿಕೊಳ್ಳಲು ಬಂದೆ'

'ಅಷ್ಟೆ ತಾನೆ? ಅದರ ವ್ಯವಸ್ಥೆ ಮಾಡಿ'

ನರಸಿಂಹ ಯಾಂತ್ರಿಕವಾಗಿ ಉತ್ತರಿಸಿದ. ತನಗಾವ ರೀತಿಯ ಸಂಬಂಧವೂ ಇಲ್ಲವೋ ಎನ್ನುವ ಅಲಿಪ್ತತೆ ಮಾತಿನಲ್ಲಿ ಮೂಡಿತ್ತು.

ಅದನ್ನು ಗ್ರಹಿಸಿದ ರಾಜ ಪುರೋಹಿತರು 'ಇದು ತಾವೇ ನಿಂತು ಮಾಡುವ ಕೆಲಸ.'

'ಇಷ್ಟರಲ್ಲೇ ಅದಕ್ಕೆ ಸಿದ್ಧನಾಗಿ ಬರುತ್ತೇನೆ.'

'ಶಿಶುವಿಗೇನು ಹೆಸರಿಡಲಿ? ಇದು ರಾಣೀವಾಸದವರನ್ನು ಕಾಡುತ್ತಿರುವ ಪ್ರಶ್ನೆ. ತಮಗೆ ಒಪ್ಪಿಗೆಯಾದ ಹೆಸರನ್ನಿಡುವುದು ಎಂದು ಅವರೆಲ್ಲ ತೀರ್ಮಾನಿಸಿದ್ದಾರೆ. ತಮ್ಮ ಸೂಚನೆಯನ್ನು ಅವರು ಇದಿರು ನೋಡುತ್ತಿದ್ದಾರೆ.'

'ಹೆಸರಲ್ಲೇನಿದೆ ಪುರೋಹಿತರೇ—?'

ಅವನಿಗರಿಯದಂತೆ ಮರುತ್ತರ ಹೊರಟಿತು. ಆತ ಅಷ್ಟಕ್ಕೇ ಮಾತು ನಿಲ್ಲಿಸಿದ.

ಅವನಾವುದೋ ಗುಂಗಿಗೆ ಬಲಿಯಾದಂತೆ ಕಂಡಿತು.

'ಹೆಸರಲ್ಲೇನಿದೆ—'

ಇದೇ ನುಡಿಗಟ್ಟು.

ಹಿಂದೊಮ್ಮೆ—ಬಹಳ ದಿನಗಳ ಹಿಂದೆ—ಇದೇ ಮಾತು ಅವನ ಬಾಯಿಂದ ಬಂದಿತ್ತು.

ಎಲ್ಲಿ? ಎಂದು? ಯಾರೊಡನೆ?

ಹೆಸರಲ್ಲೇನಿದೆ?

ಆತ ತಲೆಯನ್ನೊಮ್ಮೆ ಕೊಡಹಿಕೊಂಡ.

ಆಲೆ, ಆಲೆಯಾಗಿ ತೇಲಿ ಬಂತು ಗತಕಾಲದ ನೆನಪು.

ಹೆಸರಲ್ಲೇನಿದೆ?

ಜಾನಕಿ ಬದುಕಿದ್ದಾಗ ಅವಳೊಡನಾಡಿದ ಮಾತು.

ಆ ಸುಂದರ ಸನ್ನಿವೇಶದ ನೆನಪು ಬಂದು ಆತ ತನ್ನೊಳಗೇ ನಕ್ಕ.

ಆತನ ಜೊತೆ ಉದ್ಯಾನವನಲ್ಲಿ ಆಡ್ಡಾಡುತಿದ್ದ ಆಕೆ ಇದ್ದಕ್ಕಿದ್ದಂತೆ ವಾಂತಿ ಮಾಡಿದಳು. ಅವನ್ನು ನೋಡಿ ನರಸಿಂಹ ಗಾಬರಿಯಾದ. ಬಾಚಿ ತಬ್ಬಿಕೊಂಡು ತೊಡೆಯ ಮೇಲೆ ಮಲಗಿಸಿಕೊಂಡ, ವೈದ್ಯರಿಗೆ—ತಡವಾದರೆ ಏನು ಅನರ್ಥ ಸಂಭವಿಸಬಹುದೋ ಎಂದು ಹೆದರಿ—ಕರೆ ಕಳುಹಿದ.

ದೂರದಲ್ಲಿ ಇದನ್ನು ನೋಡುತ್ತ ನಿಂತಿದ್ದ ಸ್ತ್ರೀಯರು ಕೆಲಕಿಲನೆ ನಕ್ಕರು.

ಆತ ನಗು ಕೇಳಿ ಬಂದ ದಿಕ್ಕಿಗೆ ಮೊಗ ತಿರುಗಿದ.

ಅವರು ಸೀರೆಯ ನೆರಿಗೆಯನ್ನು ಮುಖದ ಮೇಲೆಳೆದುಕೊಂಡು ಮುಸಿ, ಮುಸಿ ನಕ್ಕರು.

ಅವರಿಂದ ನಗುವನ್ನು ನುಂಗಿಕೊಳ್ಳುವುವಾಗಲಿಲ್ಲ.

(ಮುಂದುವರಿಯುವುದು)

NAVAYUGA 17-2-1972
Registered with the Registrar of News Papers for India under No R. N. 3548/57

REGD. No. B. G. 176
LICENCE No. 33
Licensed to Post without Prepayment

ಪಂಪ ಭಾರತ – ಒಂದು ಸನ್ನಿವೇಶ

(ಒಂದನೇ ಪುಟದಿಂದ)

ಬಡಿದೆಬ್ಬಿಸುತ್ತನೆ. ಇವನು ನನ್ನ ಮಗನನ್ನು ಕೊಂದ, ನನ್ನ ಋಣವನ್ನು ಛೇಕರವಾಗಿ ಹೊತೆದ ಎಂಬ ಅರಿವು ಅರ್ಜುನನಿಗೆ ಉಂಟಾದಾಗ, ಇಷ್ಟು ಹೊತ್ತಿನವರೆಗೂ ಅವನನ್ನು ಬೆನ್ನಹತ್ತಿದ್ದ ಕರ್ಣ ವ್ಯಾಮೋಹವ ಗ್ರಹ ಅವನನ್ನು ಬಿಟ್ಟು ಹೋಗುತ್ತದೆ. ಆವರಿಸಿದ್ದ ಕಾರ್ಮೋಡಗಳು ಹರಿದು ಆಕಾಶವು ನಿರ್ಮಲವಾಗುವಂತೆ. ಮನಸ್ಸು ಜೇತೋಹಾರಿಯಾಗುತ್ತದೆ. ಬುದ್ಧಿ ಚಟುವಟಿಕೆಯಿಂದ ಕೆಲಸ ಮಾತಕೊಡಗುತ್ತದೆ. ಅರ್ಜುನನ ಚಿತ್ತಕ್ಷೇತ್ರ ಈಗ ಹದವಾಗಿದೆ. ಇದನ್ನು ತಿಳಿವ ಕೃಷ್ಣ ಒಲ್ಲಿ ಕ್ರೋಧನ ಬೀಜವನ್ನು ನೆಡಲು ಉಯ್ಯುತ್ತನಾಗುತ್ತಾನೆ. "ನೀನು ಸೂತ ಸುತನಿಗೆ ಹೆದರಿದ್ದೀಯ ರಥ ನಡೆಸುವುದನ್ನು ಬಿಟ್ಟು ಈ ಚಕ್ರದಿಂದ ನಾನೇ ಅವನನ್ನು ಕೊಲ್ಲುತ್ತೇನೆ. ನನ್ನ ಕೀರ್ತಿ ಧ್ರುವಂಚಕ್ರಕ್ಕೆಲ್ಲ ಹಬ್ಬುತ್ತದೆ. ಜಯಂಗನೆಗೆ ನಾನೇ ಗಂಡನಾಗುತ್ತೇನೆ" ಎಂಬ ಕೃಷ್ಣನ ಮಾತುಗಳು ಶ್ರೀಕೋಕ ವೀರನಾದ ಅರ್ಜುನನಿಗೆ ಹಿಡಿಸ ಬಲ್ಲವೆ? ಅರ್ಜುನ ಕರ್ಣನಿಗೆ ಎಂದೂ ಹಿಂಜರಿಯದವನು. ಹೀಗಿರುತ್ತ ಸೂತ ಸುತನಿಗೆ ನೀನು ಹೆದರಿದ್ದೀಯೂ ಎಂಬ ಮಾತುಗಳನ್ನು ಕೇಳಲು ಅವನು ಹೇಗೆ ಶಕ್ತನಾಪಾನು? ಕೃಷ್ಣ ತನ್ನ ಸಾರಥಿ. ಕುರುಭೂಮಿಯಲ್ಲಿ ಚಕ್ರ ಹಿಡಿಯುವುದಿಲ್ಲ ಎಂದಿನ್ನ. "ಈಗ ನೀನು ಕೈಲಾಗದ ಹೇಡಿ. ನಾನೇ ಚಕ್ರದಿಂದ ಕರ್ಣನನ್ನು ಕೊಂದು ಜಯಲಕ್ಷ್ಮಿಗೆ ಋಣ್ಣನಾಗುತ್ತೇನೆ" ಎಂದು ಕೃಷ್ಣ ಹೇಳುತ್ತಿರುವಾಗ ಅರ್ಜುನನಂತಹ ವೀರನಿಗೆ ಇದಕ್ಕಿಂತಲೂ ಅವಮಾನಕರವಾದ ಮಾತುಬೇಕೇ? ಅರ್ಜುನನ ಕ್ಷಾತ್ರ ತೇಜವನ್ನು ಪ್ರಜ್ವಲಿಸಿತು. ಇಷ್ಟು ಹೊತ್ತಿನವರೆಗೂ ಕ್ಷತವಿಕ್ಷತವಾಗಿದ್ದ ಅವನ ವ್ಯಕ್ತಿತ್ವ ಮತ್ತೆ ಪ್ರೌಢತ್ವವನ್ನು ಪಡೆಯಿತು. ರಾಹುವಿನ ಹಿಡಿತದಿಂದ ಬಿಡಿಸಿಕೊಂಡು ಬಂದ ಸೂರ್ಯನಂತೆ ಅವನು ಜೇತೋಹಾರಿಯೂದ. ಇಲ್ಲಿಗೆ ಕೃಷ್ಣನ ಉದ್ದೇಶವೂ ಸಫಲವಾಯಿತು. ಇನ್ನು ಅರ್ಜುನನಿಂದ ಕರ್ಣನ ಕೊಲೆಯಾಗುವುದರಲ್ಲಿ ಯಾವ ಸಂಶಯವೂ ಉಳಿಯುವುದಿಲ್ಲ.

ಹೀಗೆ ಭಾರತದ ಉದ್ದಕ್ಕೂ ಅರ್ಜುನ ವೀಣೆ ಅಪಶ್ರುತಿಗೊಂಡಾಗ ಅದನ್ನು ಮೀಟಿ ಶ್ರುತಿ ಮಾಡಿದ ಮಹಾವೈಣಿಕನಾಗಿ ಕೃಷ್ಣ ಕಾಣುತ್ತಾನೆ. ಕುರುಭೂಮಿಯಲ್ಲಿ ಕರ್ತವ್ಯ ಪ್ರಜ್ಞೆ ಹೃದಯಂಗಮವಾಗಿ ಚಿತ್ರಿತವಾಗಿನೆ. ಎರಡೇ ಎರಡು ಪದ್ಯಗಳಲ್ಲಿ ಅರ್ಜುನನ ಮನಸ್ಸಿನಲ್ಲಿ ಉಂಟಾದ ಕ್ಲೇಷ ಅದನ್ನು ಕೃಷ್ಣ ಪರಿಹರಿಸಿದ ಪೂರ್ಣವನ್ನು ಪಂಪ ಮಹಾಕವಿ ಚೆತಿತ್ಯಪೂರ್ಣವಾಗಿ ಮನನಾಟುವಂತೆ ಹೇಳಿದ್ದಾನೆ. ಅವನು ಬಳಸುವ ಒಂದೊಂದು ಮಾತೂ ಅರ್ಥವತ್ತಾಗಿದೆ, ತೂಕ ಮಾಡಿದಂತಿದೆ. ಇದರಲ್ಲಿ ಒಂದು ಮಾತು ಹೆಚ್ಚುಕಡಿಮೆಯಾಗಿದ್ದರೆ, ಕಾವ್ಯನೇ ಹಾಳಾಗಿ ಹೋಗುತ್ತಿತ್ತೋ ಎಂಬ ಭ್ರಮೆ ಬರುವಂತಿದೆ. ಕವಿ ಕುಲ ಗುರು ಪಂಪನಿಗೆ ನಮೋ ನಮಃ!

●●

ಕ್ರಿಯಾ ಸಮಿತಿಯಿಂದ

ಸರ್ಕಾರಿ ಕೈಗಾರಿಕೆಗಳ ಕಾರ್ಯ ವಿಮರ್ಶೆ

ನಾಲ್ಕನೇ ಯೋಜನೆಯಲ್ಲಿ ಸಾಧಿಸಬೇಕಾಗಿರುವ ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ಸರ್ಕಾರಿ ವಲಯದ ಕೈಗಾರಿಕೆಗಳಿಗೆ ಪ್ರಮುಖ ಸ್ಥಾನ ನೀಡಲಾಗಿದೆ. ಈ ಪಾತ್ರ ವಹಿಸುವಂತಹ ಕೆಲವು ಕೈಗಾರಿಕೆಗಳನ್ನು ಆಯ್ಕೆ ಮಾಡಬೇಕೆಂದು ನಾಲ್ಕನೇ ಯೋಜನೆಯ ಕೈಪಿಡಿಯೊಸ ಕೈಗಾರಿಕಾ ನೀತಿಯಲ್ಲಿ ತಿಳಿಸಲಾಗಿದೆ ಈ ರೀತಿ ಆಯ್ಕೆ ಮಾಡಿದ ಕೈಗಾರಿಕೆಗಳೆಲ್ಲ ಹೂಡುವ ಮುಕ್ಕಾಲು ಭಾಗ ಬಂಡವಾಳವು ಸರ್ಕಾರಿ ವಲಯಕ್ಕೆ ವಿನಿಸಲಾಗಿದೆ. ನಾಲ್ಕನೇ ಯೋಜನೆಯಲ್ಲಿ ರೂಪಿಸಿರುವ ಕಾರ್ಯಕ್ರಮಗಳ ಹೂರೈಕೆ ಹಾಗು ಕೈಗಾರಿಕಾ ಬೆಳವಣಿಗೆಯ ಪ್ರಮಾಣವು ಸರ್ಕಾರಿವಲಯದನ ಕೈಗಾರಿಕೆಗಳ ಸಾಧನೆಯನ್ನು ಅವಲಂಬಿಸಿದೆ.

ಭಾರತದಲ್ಲಿ ೧೯೫೦ರಲ್ಲಿ ಯೋಜನಾಯುಗ ಆರಂಭವಾದಾಗಿನಿಂದ ಸರ್ಕಾರಿ ಕೈಗಾರಿಕೆಗಳು ತೀವ್ರಗತಿಯಲ್ಲಿ ಬೆಳೆದಿವೆ. ಪ್ರಥಮ ಯೋಜನೆಯ ಆರಂಭದಲ್ಲಿ ೯೯ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಿಂದ ಐದು ಕೈಗಾರಿಕಾ ಘಟಕಗಳು ಕಾರ್ಯರಂಭ ಮಾಡಿದುವು. ಪ್ರಥಮ ಯೋಜನೆಯ ಅಂತ್ಯದಲ್ಲಿ ೮೧ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೨೧ ಘಟಕಗಳಿದ್ದುವು. ಎರಡನೇ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ೯೫೫ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೪೮ ಕೈಗಾರಿಕಾ ಘಟಕಗಳಿದ್ದುವು. ಮೂರನೇ ಯೋಜನೆಯ ಅಂತ್ಯದಲ್ಲಿ ೩೪೧೫ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೭೪ ಕೈಗಾರಿಕಾ ಘಟಕಗಳಿದ್ದವು ನಾಲ್ಕನೇ ಯೋಜನೆಯ ಆರಂಭದಲ್ಲಿ ೧೯೬೮ರಲ್ಲಿ ೩೯೦೨ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೮೫ ಕೈಗಾರಿಕಾ ಘಟಕಗಳಿದ್ದವು ೭೦–೭೧ನೇ ವಾರ್ಷಿಕ ಸಾಲಿನ ಕೊನೆಯಲ್ಲಿ ಬಂಡವಾಳ ಹೂಡಿಕೆ ೪೭೦೦ಕೋಟಿ ರೂಪಾಯಿ ಗೇರಿತ್ತು.

ಕುಂಠಿತ ಸಾಧನೆ

ಯೋಜನಾ ಆಯೋಗವು ಕಳೆದ ವರ್ಷ ನಡೆಸಿದ ಸಮೀಕ್ಷೆಯಿಂದ ಸರ್ಕಾರಿ ವಲಯದ ಕೈಗಾರಿಕೆಗಳ ಸಾಧನೆ ಕುಂಠಿತಗೊಂಡಿರುವುದು ಗೋಚರವಾಗಿದೆ. ಅನೇಕ ಘಟಕಗಳಲ್ಲಿ ಪೂರ್ಣ ಮಟ್ಟದಲ್ಲಿ ಯಂತ್ರಗಳ ಬಳಕೆಯಾಗುತ್ತಿರಲಿಲ್ಲ; ಹಣಕಾಸಿನ ವಹಿವಾಟು ತೃಪ್ತಿಕರವಾಗಿರಲಿಲ್ಲ. ಸರ್ಕಾರಿ ವಲಯದ ಕೈಗಾರಿಕೆಗಳಲ್ಲಿ ಹೂಡಿದ ಬಂಡವಾಳಕ್ಕೆ ಲಾಭವೊಂದೇ ಮುಖ್ಯವಾಗಿರಲಿಲ್ಲ. ಕೆಲವು ಘಟಕಗಳು ವ್ಯಾರಂಭಿಕ ಹಂತದಲ್ಲಿ ಅತ್ಯಲ್ಪ ಲಾಭಗಳಿಸಿದುವು. ಅನೇಕ ಸರ್ಕಾರಿ ಕೈಗಾರಿಕಾ ಘಟಕಗಳಲ್ಲಿ ಸುಧಾರಣೆಗೆ ಅವಕಾಶವಿದೆ.

ಯೋಜನೆಯ ಗುರಿಯನ್ನು ಸಾಧಿಸಬೇಕಾದರೆ ಸರ್ಕಾರಿ ಕೈಗಾರಿಕೆಗಳ ಕಾರ್ಯಕ್ಷಮತೆಯಲ್ಲಿ ಸುಧಾರಣೆಯೊಗಬೇಕಾಗುವುದು ಅತ್ಯಗತ್ಯ. ಈ ಘಟಕಗಳಲ್ಲಿರುವ ಸಮಸ್ಯೆಗಳು ತುಂಬಾ ಬೇರು ಬಿಟ್ಟುದಾಗಿವೆ ಆಡಳಿತ ನಿರ್ವಹಣೆ, ತಾಂತ್ರಿಕ ವಿಭಾಗ ಹಾಗು ಕೈಗಾರಿಕಾ ಬಾಂಧವ್ಯಕ್ಕೆ ಸಂಬಂಧಿಸಿದಂತಹ ಹಲವಾರು ಸಮಸ್ಯೆಗಳನ್ನು ಪರಿಹರಿಸುವುದು ಅತ್ಯಗತ್ಯವಾಗಿದೆ

ಈ ಕಾರಣಕ್ಕಾಗಿ ಆಯ್ಕೆ ಮಾಡಿದ ಸರ್ಕಾರಿ ವಲಯದ ಕೈಗಾರಿಕೆಗಳ ಕಾರ್ಯ ನಿರ್ವಹಣೆಯನ್ನು ವಿಮರ್ಶಿಸಿ ಸೂಕ್ತ ಶಿಫಾರಸುಗಳನ್ನು ಮಾಡಲೆಂದು ಉನ್ನತ ಮಟ್ಟದ ಕ್ರಿಯಾ ಸಮಿತಿಯೊಂದನ್ನು ರಚಿಸಲು ನಿರ್ಧರಿಸಲಾಯಿತು. ಈ ಸಮಿತಿಯಲ್ಲಿ ಅತ್ಯಂತ ಶ್ರೇಷ್ಠರಾದ ಅನುಭವಿ ಔದ್ಯೋಗಿಕ ತಜ್ಞರನ್ನು ನೇಮಿಸಲು ನಿರ್ಧಾರ ಕೈಗೊಳ್ಳಲಾಯಿತು. ಅದರ ಪ್ರಕಾರ ಕಳೆದ ತಿಂಗಳು ಯೋಜನಾ ಆಯೋಗದ ಸದಸ್ಯರಾದ ಶ್ರೀ ಎಂ. ಎಸ್. ಪಥಕ ಅಧ್ಯಕ್ಷತೆಯಲ್ಲಿ ಕ್ರಿಯಾ ಸಮಿತಿಯೊಂದನ್ನು ಸರ್ಕಾರ ನೇಮಿಸಿತು.

ಕ್ರಿಯಾ ಸಮಿತಿಯ ಕಾರ್ಯ

ಈ ಕ್ರಿಯಾ ಸಮಿತಿಯ ಕಾರ್ಯದಲ್ಲಿ ಅಧ್ಯಯನ ತಂಡಗಳು ವ್ಯಕ್ತಿಗಳು ಮತ್ತು ಸಂಸ್ಥೆಗಳು ಹಾಗು ಸಮೂಲೋಚನ ತಜ್ಞರು ನಿರ್ದಿಷ್ಟ ವಿಷಯದಲ್ಲಿ ಸಹಾಯ ನೀಡುತ್ತಾರೆ.

ಈ ಸಮಿತಿಯ ಶಿಫಾರಸುಗಳನ್ನು ಸರ್ಕಾರವು ಉನ್ನತ ಮಟ್ಟದಲ್ಲಿ ವಿಮರ್ಶಿಸಿ ನಿರ್ಧಾರ ಕೈಗೊಳ್ಳುತ್ತದೆ ಯೋಜನಾ ಆಯೋಗದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲು ಈ ಸಮಿತಿಯು ರಾಜ್ಯ ಸರ್ಕಾರಗಳು, ಸರ್ಕಾರದ ಶಾಖೆಗಳು ಮತ್ತಿತರ ಸಂಸ್ಥೆಗಳೊಂದಿಗೆ ನಿಕಟ ಸಮೂಲೋಚನೆ ನಡೆಸುತ್ತದೆ ಕೇಂದ್ರ ಹಣಕಾಸು ಶಾಖೆಯ ಸರ್ಕಾರಿ ಕೈಗಾರಿಕೆಗಳ ಸಂಸ್ಥೆಯು ಈ ಸಮಿತಿಗೆ ಅಗತ್ಯವಾದ ಸಿಬ್ಬಂದಿಯನ್ನು ಒದಗಿಸುತ್ತದೆ

ಕ್ರಿಯಾ ಸಮಿತಿಯು ಕಾಲಾನುಕ್ರಮದಲ್ಲಿ ಶಿಫಾರಾಸುಗಳನ್ನು ಮಂಡಿಸುತ್ತದೆ. ಈ ಸಮಿತಿಯ ಕಾರ್ಯವು ಒಂದರಿಂದ ಒಂದೂವರೆ ವರ್ಷದೊಳಗೆ ಮುಕ್ತಾಯವಾಗುವ ನಿರೀಕ್ಷೆಯಿದೆ. ●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದರ್ನ್ ಡ್ರಗ್ ಫ್ಯಾಕ್ಟರಿ (ಪೇಟೆಂಟ್) ಲಿಮಿಟೆಡ್
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಗಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೨೫

NAVAYUGA

24-2-1972

ರಾಜ್ಯದಲ್ಲಿ ಚುನಾವಣೆ—

ವಿಜಯಮಾಲೆ ಯಾರ ಕೊರಳಿಗೆ?

ಕರ್ನಾಟಕದ ವಿಧಾನ ಸಭೆಗೆ ಚುನಾವಣೆಗಳು ಮಾರ್ಚ್ ೬ ಮತ್ತು ೯ರಂದು ನಡೆಯಲಿದ್ದು ಇದಕ್ಕೆ ಪೂರ್ವಭಾವಿ ಪ್ರಮಗಳೆಲ್ಲ ಮುಕ್ತಾಯಗೊಂಡಿವೆ. ಅಭ್ಯರ್ಥಿಗಳು ಅದ್ದೂರಿಯ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಕೆಲವೆಡೆ ನೇರ ಸ್ಪರ್ಧೆ. ಇನ್ನು ಕೆಲವೆಡೆ ತ್ರಿಕೋಣ ಸ್ಪರ್ಧೆಗಳಿದ್ದರೂ ಹೆಚ್ಚಿನೆದೆ ಬಹುಕೋಣ ಸ್ಪರ್ಧೆಯೇ ಇರುವುದರಿಂದ ಆಯಾ ಕ್ಷೇತ್ರದ ಪ್ರಭಾವಶಾಲಿ ಅಭ್ಯರ್ಥಿ ಗೆಲ್ಲುವುದು ಸಾಧ್ಯವಾಗುವುದು. ಶ್ರೀಮತಿ ಇಂದಿರಾ ಗಾಂಧಿಯವರ ನಾಮಬಲದಿಂದ ಇಂಡಿಕೇಟಿನ ಅಭ್ಯರ್ಥಿ ತುಸು ಪ್ರಭಾವಶಾಲಿಯಿದ್ದರೆ, ಗೆದ್ದು ಬರುವುದು ಅಕಕ್ಯನೇನಲ್ಲ.

ರಾಜ್ಯದ ಚುನಾವಣಾ ರಂಗದಲ್ಲಿ ದು ಮುಖರಿರುವ ರಾಜ್ಯಕೇಯ ಪಕ್ಷಗಳಲ್ಲಿ ಇಂಡಿಕೇಟ್, ಸಿಂಡಿಕೇಟ್, ಜನಸಂಘ, ಸ್ವತಂತ್ರ ಮತ್ತು ಸಮಾಜವಾದಿಗಳು ಮುಖ್ಯ. ನೂರಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ನಿಲ್ಲಿಸಿದ ಪಕ್ಷಗಳು ಮೊದಲ ಮೂರು ಮಾತ್ರ. ಸಿಪಿಐಯು ಇಂಡಿಕೇಟಿನೊಳಗೆ ತೂಕೊಂಡಿದ್ದರೆ, ಸಿಪಿಎಂನ ಸ್ಪರ್ಧೆ ನಗಣ್ಯ. ಕನ್ನಡ ಚಳುವಳಿಗಾರರು, ಜನತಾ ಪಕ್ಷದವರು, ಪ್ರಾಮುಕರು ಉಳಿದ ಕೆಲ ಪಕ್ಷಗಳವರು. ಇವರೆಲ್ಲರನ್ನೂ ಮೆಟ್ಟಿ ನಿಂತವರು ಪಕ್ಷೇತರ ಅಭ್ಯರ್ಥಿಗಳು. ಗಾಳಿ ಬಂದತ್ತ ತೂರಿಕೊಳ್ಳುವ ಪಕ್ಷಾಂತರ ಸ್ಪರ್ವತ್ತಿಯ ಜನರೂ ಇವರಲ್ಲಿದ್ದಾರೆ.

ಈ ಚುನಾವಣೆಗಳಲ್ಲಿ ಒಂದು ವೈಶಿಷ್ಟ್ಯವಿದೆ. ಪ್ರಗತಿಪರರೆಂದೂ ಪ್ರಗತಿಶೀಲರೆಂದೂ ಹೇಳಿಕೊಳ್ಳುತ್ತಿರುವ ಎರಡೂ ತುಕುಡಿ ಕಾಂಗ್ರೆಸ್‌ಗಳು ಹಳೆಯ ಮುಖಗಳನ್ನು ಸಾಧ್ಯವಾದಷ್ಟು ದೂರಕ್ಕೆ ದೂಡಿವೆ ಹೊಸ ಮುಖಗಳನ್ನೂ ಯುವರಕ್ತವನ್ನೂ ವಿಧಾನ ಸಭೆಗೆ ತರಲು ಪ್ರಯತ್ನ ನಡೆಸಿವೆ. ಆದರೆ, ಈ ನಿಟ್ಟಿನಲ್ಲಿ ಇಂಡಿಕೇಟಿಗಿಂತ ಸಿಂಡಿಕೇಟೇ ಒಂದು ಹೆಜ್ಜೆ ಮುಂದು. ಇಂಡಿಕೇಟು ತನ್ನ ೬೧೨ ಅಭ್ಯರ್ಥಿಗಳಲ್ಲಿ ಅರುವತ್ತರ ಗಡಿ ದಾಟಿದವರು ಐವಾರು ಮಂದಿಯೆಂದರೆ ಸಿಂಡಿಕೇಟು ತನ್ನ ೧೬೦ ಅಭ್ಯರ್ಥಿಗಳಲ್ಲಿ ಅಂಥವರು ಯಾರೂ ಇಲ್ಲ ತನ್ನ ಅಭ್ಯರ್ಥಿಗಳ ಸರಾಸರಿ ವಯಸ್ಸು ೪೦ ಚಿಲ್ಲರೆಯೆಂದು ಡಣಾಡಂಗುರ ಸಾರಿದೆ. ಇಂಡಿಕೇಟು ಮತ್ತದರ ಮಿತ್ರಪಕ್ಷ ಸಿಪಿಐಗಳು ಒಂದಾಗಿ ೩೧೬ ರೂ. ಸ್ಥಾನಗಳಿಗೆ ಸ್ಪರ್ಧಿಸಿದರೆ, ಸಿಂಡಿಕೇಟು ಏಕಾಕಿಯಾಗಿ ೧೬೦ ಸ್ಥಾನಗಳಿಗೆ ಹುದ್ದರಿಗಳನ್ನು ನಿಲ್ಲಿಸಿದೆ. ಮತ್ತು ಸುಮಾರು ೨೦ ಕ್ಷೇತ್ರಗಳಲ್ಲಿ ಪಕ್ಷೇತರರಿಗೆ ಬೆಂಬಲ ಸೂಚಿಸಿದೆ

ರಾಜ್ಯದ ಚುನಾವಣೆಗಳಲ್ಲಿ ಪ್ರಮುಖ ಸ್ಪರ್ಧೆಯಿರುವುದು ಕಾಂಗ್ರೆಸ್ಸಿನ ಎರಡು ತುಕುಡಿಗಳಲ್ಲಿ. ಕೆಲವೆಡೆ ಸಿಂಡಿಕೇಟಿನ ಬದಲು ಇಂಡಿಕೇಟು ಜನಸಂಘವನ್ನು ಎದುರಿಸಬೇಕಾಗಿದೆ. ಮತ್ತೆ ಕೆಲವೆಡೆ ಪಕ್ಷೇತರರೂ ಪ್ರಭಾವಶಾಲಿಗಳಾಗಿ ಇಂಡಿಕೇಟ್—ಸಿಪಿಐಗೆ ಸವಾಲೊಡ್ಡಿದ್ದಾರೆ ಇಂಡಿಕೇಟಿನ ಭಾವಿ ಮುಖ್ಯಮಂತ್ರಿಯೆಂದು ಹೇಳಲಾಗುತಿದ್ದ ದೇವರಾಜ ಅರಸರು ಸ್ಪರ್ಧೆಯಿಂದ ದೂರವುಳಿಯುವ ನಿರ್ಧಾರ ನೂಡಿದರು; ಆದರೆ, ಕೈಗೆ ಬಂದ ಮುಖ್ಯಮಂತ್ರಿ ಪದವನ್ನು ಅನುಭವಿಸಲಾಗದ ಸಿದ್ದವೀರಪ್ಪನವರು ಟಿಕೇಟು ಗಿಟ್ಟಿಸಿಕೊಂಡಿದ್ದಾರೆ. ಮಾಜಿ ಮಂತ್ರಿಗಳಿಗೆ ಟಿಕೇಟು ನೀಡುವುದೆಂದರೆ, ಅವರಿಗೆ ಮಂತ್ರಿಪದ ನೀಡಿದಂತೆಯೆಂದು ಭಾವಿಸಲಾಗದು ಎಂಬ ಎಚ್ಚರಿಕೆ ಇಂಡಿಕೇಟ್ ಧುರೀಣರು ಮೊದಲೇ ನೀಡಿರುವುದರಿಂದ ಸಿದ್ಧವೀರಪ್ಪನವರು ಗೆದ್ದು ಬಂದರೆ, ಪಕ್ಷದ ನಾಯಕರಾಗುವರೆಂದು ನಂಬುವುದು ಅಥಾಸಕರವಾಗುವುದು.

ದೇವರಾಜ ಅರಸರು ಟಿಕೇಟು ನೀಡುವಲ್ಲಿ ತುಂಬ ಎಚ್ಚರಿಕೆ ತೋರಿದ್ದಾರೆ. ಆವರೇ ನೀಡಿದ ಹೇಳಿಕೆಯೊಂದು ಹೇಳುತ್ತದೆ—ಒಕ್ಕಲಿಗರು ಮತ್ತು ಲಿಂಗಾಯತರಿಗೆ ಇದುವರೆಗೆ ಸಿಂಹಪಾಲು ಸಿಗುತಿತ್ತು. ಈ ಬಾರಿ ಆ ಎರಡೂ ಕೋಮುಗಳನ್ನು ಕೆಳಗೆ ತಳ್ಳಿ ಇತರ ಕೋಮುಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡಲಾಗಿದೆ. ಕೆಲವು ತಿಂಗಳುಗಳ ಹಿಂದೆ ಇಂಡಿಕೇಟಿನಲ್ಲಿ ಬಿರುಗಾಳಿಯೊಂದು ಬೀಸಿತ್ತು—ಬಹು ಸಂಖ್ಯಾತಕೋಮಿನವರ ಮೇಲೆ ಅಲ್ಪ ಸಂಖ್ಯಾತಕೋಮಿನವರನ್ನು ಎತ್ತಿ ಕಟ್ಟುವ ಪ್ರಯತ್ನ ನಡೆಯುತ್ತಿದೆಯೆಂದು ಇಂದು ದೇವರಾಜ ಅರಸರು ಅದನ್ನು ಸತ್ಯವಾಗಿ ಮಾಡಿ ತೋರಿಸಿದರು. ಕೋಮುವಾರು ಭಾವನೆಯು ಪ್ರಜಾಸತ್ತೆಗೆ ಅತಂಕಕಾರಿಯೆಂದು ಹೇಳುವನರೇ ಅಭ್ಯರ್ಥಿಗಳ ಕೋಮುವಾರು ಪಟ್ಟಿಯನ್ನು ಬಹಿರಂಗ ಪಡಿಸಲು ಮುಂದಾದದ್ದು ಎಂದರೆ, ತನ್ನ ಮುಂದೆ ಲಿಂಗಾಯತರಾದ್ದೂ ಒಕ್ಕಲಿಗರದ್ದೂ ಒಂದೂ ನಡೆಯಲಿಲ್ಲವೆಂದು ಹೆಗ್ಗಳಿಕೆ ಹೇಳಿಕೊಳ್ಳುವುದಕ್ಕೇ ಇರಬೇಕು.

ಸಿಂಡಿಕೇಟಿನ ಪ್ರಗತಿಶೀಲ-ಯಶಸ್ವೀ ಮುಖ್ಯಮಂತ್ರಿಯೆನಿಸಿದ್ದ ಯುವಕ ವೀರೇಂದ್ರ ಪಾಟೀಲರು ಸ್ಪರ್ಧೆಗಿಳಿಯಲಿಲ್ಲ ಮತ್ರನಲ್ಲದೆ ಮತ್ತೊಬ್ಬ ಧುರೀಣ ರಾಮಕೃಷ್ಣ ಹೆಗ್ಗಡೆಯವರೂ ನಾಮಪತ್ರ ಹಿಂದೆಗೆದುಕೊಂಡರು 'ಅಧಿಕಾರ ಪ್ರಿಯರು' ಎಂಬ ಅಪಖ್ಯಾತಿಯನ್ನು ಹೊರಿಸುತ್ತಿರುವ ಇತರ ಪಕ್ಷಗಳಿಗೆ ಸಿಂಡಿಕೇಟು ಈ ರೀತಿ ಪ್ರಬಲ ಏಟು ನೀಡಿದೆ. ಈ ಇಬ್ಬರು ರಾಜ್ಯಕೇಯ ಭಾಷೆಯ ಎಳೆಯರು ರಾಜ್ಯದ ಚುನಾವಣೆಗಳಲ್ಲಿ ವಕ್ಕಿದ ವಿಜಯಕ್ಕೆಂದು ದುಡಿಯಲು ಪೂರ್ಣಾವಧಿಯ ಸಮಯವನ್ನು ಉಪಯೋಗಿಸುವ ದೃಢ ನಿರ್ಧಾರ ಮಾಡಿದ್ದಾರೆ. ಇದು ಕಡಿಮೆ ಮಹತ್ವದ್ದೆಂದು ಹೇಳಬರುವುದಿಲ್ಲ.

ಚುನಾವಣೆಗಳ ಪರಿಣಾಮಗಳ ಬಗ್ಗೆಯೂ ಕಾಂಗ್ರೆಸ್ ತುಕ್ಕುಡಿಗಳಲ್ಲಿ ವಿಚಾರ ನಡೆದಿದೆ ೨೧೬ರಲ್ಲಿ ೧೫೦ ತಮ್ಮದು ಎಂದು ಇಂಡಿಕೇಟು ಹೇಳುತ್ತದೆ ೧೬೦ ತಮ್ಮದೆನ್ನುತ್ತದೆ ಸಿಂಡಿಕೇಟು ಈ ಎರಡು ಕೇಟುಗಳ ಒಸುಮಾನಿತ ಸಂಖ್ಯೆಯಷ್ಟು ಕುರ್ಚಿಗಳು ವಿಧಾನ ಸಭೆಯಲ್ಲಿಲ್ಲವಾಗಿರುವಾಗ ಉಳಿದ ಪಲವು ಪಕ್ಷೀಯರನ್ನೂ ಪಕ್ಷೇತರರನ್ನೂ ಲಾಬಿಗಳಲ್ಲಿಯೇ ಕೂರಿಸಬೇಕಸ್ಟೆ ಇಂಡಿಕೇಟು ಕಳೆದ ಲೋಕ ಸಭಾ ಚುನಾವಣೆಗಳಲ್ಲಿ ೧೫ರಿಂದ ೨೦ ಸ್ಥಾನ ನಿರೀಕ್ಷಿಸಿ ೨೭ನ್ನೂ ಪಡೆಯಿತು. ಇದರ ಆಧಾರವೆ ನೋಲೆ ೧೫೦ರ ನಿರೀಕ್ಷೆಯನ್ನದು ಮಾಡಿದ್ದರೆ, ಮೂಲ ನಿರೀಕ್ಷೆ ೧೨೦ ನೂತ್ರವೆನ್ನೆ ಬೇಕು. ಇದನ್ನೇ ಸಿಂಡಿಕೇಟಿಗೂ ಅನ್ವಯಿಸಿದರೆ?

ಆದರೆ ಒಂದು ಮಾತು ಶ್ರೀಮತಿ ಗಾಂಧಿಯ ನಾಮಬಲ ಆಧವಾ ಇಂದಿರಾಗಾಳಿ ಕಳೆದ ಸಲಕಂತೆ ಈ ಬಾರಿ ಬಿಸುಸಾಗಿ ಬೀರುವ ಲಕ್ಷಣಗಳು ಕಡಿಮೆ. ತಮ್ಮ ಫೆತ್ತಿ ಪತ್ರಗಳಲ್ಲಿ ಆಧವಾ ಕರ ಪತ್ರಗಳಲ್ಲಿ ಶ್ರೀಮತಿ ಗಾಂಧಿಯ ಚಿತ್ರ ಹಾಕಿಸಿಗೊಳ್ಳಬಾರದೆಂದು ದೇವರಾಜ ಅರಸರು ಸಂದೇಶ ನೀಡಿದ್ದಾರೆ. ಅಂದರೆ, ಶ್ರೀಮತಿ ಗಾಂಧಿಯವರನ್ನು ರಾಜ್ಯ ಮಟ್ಟದ ರಾಜ್ಯಕೇಯಕ್ಕೆಳೆದು ತರುವುದು ಬೇಡವೆಂದಿರಬಹುದು ಆಧವಾ ಹಿಂದಿನ ಮಹಾವಿಜಯ ಆಕೆಯೆದಾದಂತೆ ಇಂದಿನ ವಿಜಯ ತನ್ನದೇ ಆಗಬೇಕೆಂದೂ ಇರಬಹುದೋ ಏನೋ! ಶ್ರೀಮತಿ ಗಾಂಧಿಯವರು ವ್ಯಕ್ತಾನಿಯೂ ರಾಜಕೀಯವುದರಿಂದಲೇ ವಾಕಿಸ್ತಾನವನ್ನು ಭಾರತೀಯ ಸೇನೆಗಳು ಸೋಲಿಸಿದುವು ಎಂಬ ಭಾವನೆಯನ್ನೂ ಮತದಾರರಲ್ಲಿ ಮೂಡಿಸುವ ಪ್ರಯತ್ನ ನಡೆಯಿತು ಆದರೆ, ಇದಕ್ಕೂ ಎಲ್ಲೆಡೆ ತೀವ್ರ ವಿರೋಧ ವ್ಯಕ್ತವಾಯ್ತು

ಇಂಡಿಕೇಟು ಶ್ರೀಮತಿ ಗಾಂಧಿ ಜನಾಧರಣೆಗೆ ಎರವಾಗಿದ್ದಾರೆಂದು ಹೇಳಲಾಗದು. ಆದರೆ, ಮತದಾರರು ಕಳೆದ ವರ್ಷದ ಪುಟಿನ ಪೋಡಿಯಿಂದ ವಂಚಿತರಾಗಲಾರರು. ಕೇಂದ್ರದ ಕತೆ ಬೇರೆ—ರಾಜ್ಯದ್ದು ಬೇರೆ ಎನ್ನುವವರೂ ಕೆಲವರು. ಕೇಂದ್ರದಲ್ಲಿ ಅಧಿಕಾರಾರೂಢವಾದ ಮಾತ್ರಕ್ಕೆ ರಾಜ್ಯಗಳೆಲ್ಲೂ ಇಂಡಿಕೇಟಿನ ಸರಕಾರವೇ ಇರಬೇಕೆನ್ನುವ ವಾದಕ್ಕೂ ಪುರಸ್ಕಾರ ಕಡಮೆಯಾಗಿದೆ. ತನ್ನದಲ್ಲದ ಸರಕಾರಗಳನ್ನು ಉರುಳಿಸುವ ಪ್ರಯತ್ನ ನಡೆಸಿದೆಯೆಂಬ ಅಪವಾದದಿಂದ ಇಂಡಿಕೇಟು ಕೈತೊಳೆದು ಕೊಳ್ಳುವಂತಿಲ್ಲ. ವೀರೇಂದ್ರ ಪಾಟೀಲರ ಪ್ರಗತಿಶೀಲ ಸರಕಾರವನ್ನು ಉರುಳಿಸುವಲ್ಲಿ ಇಂಡಿಕೇಟು ಹೇಗೆ ಯಶಗಳಿಸಿತೆಂದು, ಉರುಳಿಸಲು ನೆರವಾದವರನ್ನು ಅಧಿಕಾರದಾಹಿಗಳೆಂದು ಈಗ ಹೆಸರಿಸಿರುವುದನ್ನು ಮರೆಯುವುದು ಸಾಧ್ಯವಿಲ್ಲ

ಈ ಬಾರಿಯ ಚುನಾವಣೆಯ ಫಲಿತಾಂಶ ಹೇಗೆ ಹೊರಡಬಹುದು? ಸಿಂಡಿಕೇಟಿಗೆ ಇರುವ ಅವಕಾಶವೆಂದರೆ, ಹಿಂದಿನ ತನ್ನ ಸರಕಾರ ಮಾಡಿತೋರಿಸಿದ ಸಾಧನೆಗಳು ಮಾತ್ರ. ಈಗಾಗಲೇ ಕೆಲವೇ ರಾಜ್ಯಗಳಲ್ಲಿ ಬದುಕುಳಿದಿರುವ ಇವನ್ನು ಮತ್ತೆ ಅಧಿಕಾರಕ್ಕೆ ಜನ ತರಬಲ್ಲುದೆ? ಆಧವಾ ಇಂದಿಕೇಟ್ ಸರಕಾರವನ್ನೆ ರಚಿಸಿಕೊಳ್ಳುವುದೆ? ಚುನಾವಣಾ ಭವಿಷ್ಯವನ್ನು ಯಾವ ಭವಿಷ್ಯದರ್ಶಿಯೂ ಹೇಳಲಾರ, ಹೇಳಬಾರದು. ಸದ್ಯ ನೇಳಬಹುದಾದುದಿಷ್ಟು— ರಾಜ್ಯದಲ್ಲಿ ಸಿಂಡಿಕೇಟ್ ಬಹುಮತ ಪಡೆದರೆ ಅದು ಆಶ್ಚರ್ಯವಲ್ಲ. ಇಂಡಿಕೇಟ್ ಸರಕಾರ ರಚನೆಯೊಗವೆ ಹೋದರೇನೇ ಅದು ಮತ್ತೊಂದು ಸೋಜಿಗವಾಗುವುದು.

ಸರ್ವಾರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಆಕೆಯ ವರ್ತನೆ ಅವನಿಗೆ ವಿಚಿತ್ರವೆನಿಸಿತು. ಜಾನಕಿಯು ಆಸ್ವಸ್ಥತೆಯಿಂದ ಆತ ವಿಹ್ವಲನಾಗಿದ್ದ.

ಆತ ನಖ ಶಿಖಾಂತ ಉರಿದ.

ಕೋಪದಿಂದ ಬೆಂಡುಗಟ್ಟಿದ. ಹಲ್ಲು ಕಡಿದ.

ಸರ್ಪದಿಂದ 'ಯಾರಲ್ಲಿ' ಎಂದು ಗರ್ಭ ನಿರ್ಭಯವಾಗುವಂತೆ ಆರ್ಭಟಿಸಿದ.

ಅಷ್ಟರಲ್ಲಿ ಜಾನಕಿ ಸುಧಾರಿಸಿಕೊಂಡಿದ್ದಳು.

ಸ್ವಾಮಿಯ ಗದರು ಧ್ವನಿಯಿಂದ ಆವಳೂ ಗಾಬರಿಯಾದಳು.

'ಏನು ಪ್ರಭು? ಯಾಕೀ ಆವೇಶ' ತಡೆತಡೆದು ಆಕೆ ಪತಿಯನ್ನು ಪ್ರಶ್ನಿಸಿದಳು.

ದೂರದಲ್ಲಿ ನಗುತ್ತ ನಿಂತಿದ್ದ ಪ್ರವಿೂಲಾ ರಾಜ್ಯನತ್ತ ಆತ ಬೆಟ್ಟು ತೋರಿಸಿದ.

ಆವರ ನಗುವಿನ ಕಾರಣವನ್ನು ಆವಳು ಗ್ರಹಿಸಿದಳು.

'ಅವರು ನನ್ನ ಸ್ಥಿತಿಯನ್ನು ನೋಡಿ ನಗುತಿದ್ದಾರೆ. ಈಗ ಅವರದು ಸರಿದಿ. ಹೋ! ಮಾಡಿಕೊಳ್ಳಲಿ' ಆಕೆ ಮಾತನ್ನು ತೇಲಿಸಿದಳು.

ಅಷ್ಟರಲ್ಲಿ ರಾಜ ವೈದ್ಯರು ಅಲ್ಲಿಗೆ ಬಂದಿದ್ದರು.

ವೈದ್ಯರೊತನೆ ಮಾತು ಮುಂದುವರಿಸಲು ನರಸಿಂಹ ಮುಂದಾದ.

ನಡುವೆ ಬಾಯಿ ಹಾಕಿ ಜಾನಕಿ 'ನಿಮ್ಮ ಶುಶ್ರೂಷೆಯ ಅಗತ್ಯ ನಮಗಿಲ್ಲ. ನಮ್ಮ ಮಾಮೂಲಿಗೆ ಔಷಧಿ ಇಲ್ಲ. ಅನುಭವಿಸಿಯೇ ತೀರಬೇಕು.'

ನರಸಿಂಹ—ವೈದ್ಯರು ಒಬ್ಬರ ಮುಖವನ್ನೊಬ್ಬರು ನೋಡಲಾರಂಭಿಸಿದರು—

ಜಾನಕಿ ವೈದ್ಯರಿಗೆ ಹೊರಟು ಹೋಗುವಂತೆ ಸೂಚಿಸಿದಳು.

ವಿಧಿಯಿಲ್ಲದೆ ವೈದ್ಯರು ಅಲ್ಲಿಂದ ಕಾಲ್ಕೀಳಲಿದರು

'ದೇವೀ! ಎಂಥ ವಿಚಿತ್ರ ವರ್ತನೆ ನಿನ್ನದು'

ವೈದ್ಯನಿಂದ ನರಸಿಂಹ ಆವಳನ್ನು ನುತಿಸಿದ.

'ನಿಮಗೆ ಇಷ್ಟೂ ತಿಳಿಯುವುದಿಲ್ಲವೇ ನನ್ನ ರಾಜ' ಆಕೆಯ ಮುಖ ವಲ್ಲಿ ಕುಸಿ ಮುಸಿನು.

'ಕೋಪ ನಿಮ್ಮಲ್ಲೇ ಬಚ್ಚಿಟ್ಟುಕೊಂಡರೆ ತಿಳಿಯುವುದಾದರೂ ಹೇಗೆ?'

'ಇಷ್ಟೊಷ್ಟು ದಿನ ಬಚ್ಚಿಡಲೇ ಬೇಕು'

'ಜಂಭರ—'

'ಎಲ್ಲ ನಿಮ್ಮ ಅನುಗ್ರಹ ಸ್ವಾಮಿ'

ಯಾವುದೂ ಅರ್ಥವಾಗದವನಂತೆ ನರಸಿಂಹ ತಲೆಯೆಲ್ಲಾಡಿಸಿದ.

'ಇರ್ಲಿ ಬಿಸ್ಬಿ! ನಾನೇ ತಿಳಿಸುತ್ತೇನೆ' ಎಂದು ಆತನ ಮುಖವನ್ನು ಹತ್ತಿರಕ್ಕೆ ಎಳೆದುಕೊಂಡು ಕಿವಿಯಲ್ಲಿ 'ನೀರು ನಿಂತು ಎರಡು ತಿಂಗಳಾಯಿತು. ಕೊಟ್ಟೆಯೊಳಗೆ ಪುಟ್ಟ ಕಂದ ರೂಪುಗೊಳ್ಳುತ್ತಿದೆ.'

ಆಶ್ಚರ್ಯಗೊಂಡು 'ಇಷ್ಟು ದಿನವೂ ಈ ರಹಸ್ಯವನ್ನು ಹೇಳಿಯೇ ಇಲ್ಲ ಕಳ್ಳಿ'! ಎಂದು ನರಸಿಂಹ ಆರ್ಥ ಕೆನ್ನೆಗೆ ಮೃದುವಾಗಿ ಕೊಡೆದ.

'ಹೇಳುವುದಕ್ಕೇನಿದೆ ಇದರಲ್ಲಿ. ಮುಯಿಪೆ ಮಾಡಿಕೊಂಡ ಎಲ್ಲ ಗೃಹಿಣಿಯರಂತೆ ನಾನೂ ತಾಯ್ತನದ ಪೆಟ್ಟಿಲೇರುತಿದ್ದೇನೆ. ಅಲ್ಲಿ ಸೇರಿದ ಸ್ತ್ರೀಯರಿಗೆ ಅದರ ಸುಳಿವು ಆಗಲೇ ಆಗಿದೆ. ಅದಕ್ಕೇ ಆವರು ನಿಮ್ಮ ಗಾಬರಿ ನೋಡಿ ನಕ್ಕಿರುವುದು—ಆವರ ಬೆಂಬಲ ನಮ್ಮನ್ನೆ ಕಡಿ ಕಾಯಿದಿರಿ.

ನರಸಿಂಹನಿಗೆ ಕಸ್ಸು ತಪ್ಪಿನ ಅರಿವಾಯಿತು.

'ಸಂತೋಷದ ಸುದ್ದಿಯನ್ನು ಕೊಟ್ಟ ನಿನಗೇನು ಬಹುಮಾನ ಕೊಡಲಿ?'

'ಆಸೆ ಪಡಬಾರದು. ಆಸೆಯಿಂದ ಅನರ್ಥ ಪರಂಪರೆಗಳು ಬರುತ್ತವೆಯಂತೆ. ನಿಮ್ಮನ್ನೇ ಉಡುಗೊರೆಯಾಗಿ ಒಪ್ಪಿಸಿದ ಪ್ರೀತಿಯ ಅಣ್ಣ. ನೀವು ಕರುಣಿಸಿದ ಶಿಶು ಉದರದಲ್ಲಿ ಬೆಳೆಯುತ್ತಿದೆ. ಆ ಭಾಗ್ಯದ ಮುಂದು ಇನ್ನಾವುದನ್ನು ಬಯಸಲಿ!?

'ಹಾಗಿದ್ದರೆ ಯಾವುದಾದರೊಂದು ಮರ ನೀರುವುದೊಳ್ಳೆಯದು'. –ಹೀಗೆ ನುಡಿಯುವಾಗ ಅವರಿಬ್ಬರ ದೃಷ್ಟಿ ಸಂಧಿಸಿದುವು.

ನರಸಿಂಹನಿಗೆ ಆದನ್ನು ಇಲ್ಲಿಂದ ಕೇಳುವುದಾಗಲಿಲ್ಲ.

'ದೃಷ್ಟಿಯಾದೀತು ಜೋಕೆ! ಏನಿದು ನಿಮ್ಮದು ಹುಡುಗಾಟ. ಹೊತ್ತು ಗೊತ್ತಿಲ್ಲನೇ ಆಕೆ ಅವನನ್ನು ಛೇಡಿಸಿದಳು.

'ಅವರನ್ನಿಲ್ಲಿಗೆ ಕರೆಸು. ನನ್ನ ನಡತೆಯಿಂದ ಅವರು ನಲುಗಿದರೋ ಏನೋ? ದೂರದಲ್ಲಿ ಇದೆಲ್ಲವನ್ನೂ ನೋಡುತ್ತ ನಿಂತ ಸ್ತ್ರೀಯರನ್ನು ಜಾನಕಿ ಹತ್ತಿರಕ್ಕೆ ಬರುವಂತೆ ಸೂಚಿಸಿದಳು.

ಹರ್ಷಭರದಲ್ಲಿ ಚಾಳುಕ್ಯ ನರಸಿಂಹ ಅವರೆಲ್ಲರ ಕೈಯಲ್ಲೂ ಒಂದೊಂದು ಚಿನ್ನದ ನಾಣ್ಯವನ್ನಿಟ್ಟು 'ಸಿಹಿ ಸುದ್ದಿ ಸಿಕ್ಕಿತು. ಅದಕ್ಕೇ ಬಹುಮಾನ' ಎಂದ.

ಭಯ ಭಕ್ತಿಯಿಂದ ಅವರು ಬಂದ ಹಾಗೆ ಹಿಂದೆ ಸರಿದು ಮರೆಯಾದರು.

'ಅವರಿಗೇನೋ ಉಡುಗೊರೆ ಕೊಟ್ಟಿರಿ. ನನಗೆ–' ಎಂದು ಜಾನಕಿ ಕೊರಳು ಕೊಂಕಿಸಿದಳು.

ಅರ್ಥ ಗರ್ಭಿತವಾಗಿತ್ತು ಮಾತು

'ನಿನಗಿದೇ ಬಹುಮಾನ'

ಆಷ್ಟೇ ಅರ್ಥ ತುಂಬಿದ ಉಡುಗೊರೆ ನೀಡಿದ.

ಜಾನಕಿ ಅವನ ಹಿಡಿತದಿಂದ ತಪ್ಪಿಸಿಕೊಂಡು 'ನಿಮಗೆ ನಾಚುಗೆ ಯಾಗುವುದಿಲ್ಲವೇ?' ಎಂದಳು.

ತೃಪ್ತಿಯನ್ನು ಸೂಚಿಸಿತು ಅವನ ಮುಖ.

'ಒಂದು ವಿಷಯ ಕೇಳಬಹುದೇ ಪ್ರಭು? ಏನು ತಿಳುಕೊಳ್ಳುತ್ತೀರಾ?'

'ತಿಳುಕೊಳ್ಳುವುದೇನು ಬಂತು? ತಿಳಿಸಿ ಬಿಡು.'

'ನಿಮಗಾವ ಮಕ್ಕಳು ಬೇಕೆಂಬಾಸೆ. ಗಂಡೋ ಹೆಣ್ಣೋ?'

'ಅವನು ಅನುಗ್ರಹಿಸಿದ್ದು. ಹೆಣ್ಣೇನು, ಗಂಡೇನು? ಎಲ್ಲಾ ಒಂದೇ! ಮೊದಲಿನದಂತೂ ಹೆಣ್ಣೇ ಇರಬೇಕು.'

'ಗಂಡಾಗಲಿ ಎಂದು ನಾನು ಹಾರೈಸುತ್ತೇನೆ.'

'ನಾವು ಬಯಸಿದಂತಹ ಮಕ್ಕಳೇ ನಮಗೆ ದಕ್ಕುತ್ತಾರೆಯೇ ದೇವಿ?'

'ನನಗೆ ಖಾತರಿಯಾಗಿದೆ; ನಮ್ಮ ಜೊಚ್ಚಲ ಮಗು ಗಂಡು'

'ಹೆಣ್ಣಾಗಿ ಹುಟ್ಟಿದ ನೀನು, ಗಂಡೇ ಬೇಕೆಂದು ಬಯಸುವುದು ವಿಚಿತ್ರ!'

'ಎರಡು ದೃಷ್ಟಿಯಿಂದ ಲಾಭಕರ. ಅವನು ಬೆಳೆದು ದೊಡ್ಡವನಾದಾಗ ಮನೆಗೊಬ್ಬಳು ಸೊಸೆ ಬರುತ್ತಾಳೆ. ಅವನನ್ನು ಮಗಳೆಂದು ಪ್ರೀತಿಸಿದರಾಯಿತು. ಬೆಳೆದು ನಿಂತ ಮಗಳು ಪರರೊಡವೆ. ಯಾರನ್ನು ಸೇರಬೇಕೋ ಅವನನ್ನು ಕೊಡುತ್ತಾಳೆ. ಆಗ ಮನ–ಮನೆ ಎರಡೂ ಬಿಕೋ ಅನ್ನುತ್ತೆ.'

'ಆದೇನೋ ನಿಜವೆ. ಆದರೆ ಹುಟ್ಟುವುದು ಹೆಣ್ಣಾದರೆ.'–

'ಅವಳಿಗೇನು ಹೆಸರಿಡುವುದು?'

'ಹೆಸರಲ್ಲೇನಿದೆ ಚಿನ್ನಾ?'

'ಆದರೂ ಒಂದು ಒಳ್ಳೆಯ ಹೆಸರು. ಕರೆಯುವುದಕ್ಕೆ ಸುಲಭವಾಗಿರಬೇಕು. ಕೇಳುವುದಕ್ಕೆ ಹಿತವಾಗಿರಬೇಕು. ಅಂತಹ ಒಂದು ಮುದ್ದು ಮುದ್ದಾದ ಹೆಸರನ್ನಿಡಬೇಕು'

'ಆಗಲಿ, ಯಾರ ಆಡ್ಡಿ ಆದಕ್ಕೆ'

'ಯೋಚಿಸಿಟ್ಟುಕೊಳ್ಳಬೇಕು'

'ಹೆಣ್ಣಾದರೆ ಶಕುಂತಲೆಯೆಂದಿಡುವ. ಮುದ್ದಾದ ಹೆಸರು.'

'ಕವಿ ಕಾಳಿದಾಸನಿಗೆ ಅದರಿಂದ ಗೌರವ ಸಂದ ಹಾಗಾಯಿತು. ಆದರೂ ಈ ಹೆಸರು ನನ್ನ ಮನಸ್ಸಿಗೇಕೋ ಸರಿ ಬರಲಿಲ್ಲ.

'ಯಾಕೆ?'

'ಆಕೆ ಹುಟ್ಟಿದೊಡನೆ ತಬ್ಬಲಿಯಾದಳು. ಜನ್ಮ ಕೊಟ್ಟ ಜನನಿಯ ಪ್ರೀತಿಯಿಂದ ವಂಚಿತಳಾದಳು. ಪಡೆದ ತಂದೆಯಿಂದ ದೂರವಾದಳು. ಕಂಡವರ ಪೋಷಣೆಯಲ್ಲಿ ಬೆಳೆದಳು. ನಮ್ಮ ಕಂದಮ್ಮ ಹಾಗಾಗಬಾರದಲ್ಲ. ಒದಕ್ಕಾಗಿ'

'ಗಂಡೇ ಆದರೆ—'

'ಇದೆಯಲ್ಲ ಹಿರಿಯರ ಹೆಸರು. ಅದನ್ನಿಟ್ಟರಾಯಿತು.'

'ನಿಮ್ಮ ಹೆಸರೂ ಅದರಲ್ಲಿ ಸೇರಬೇಕು'

'ಉಗ್ರ ನರಸಿಂಹ ಎಂದಿಟ್ಟರಾಯಿತು. ದೇವರ ಹೆಸರನ್ನಿಟ್ಟಂತೂ ಆಯಿತು.'

'ನನಗೊಂದು ಯೋಚನೆ ಬಂತು. ಹೇಳಿ ಬಿಡಲೇ? ನಿಮಗೊಪ್ಪಿಗೆ ಯಾದರೆ'

'ನಿನಗಿಷ್ಟವಾದ್ದು, ನನಗೂ ಇಷ್ಟವೇ'

'ನಿಮ್ಮ ಹೆಸರು—ಅವರ ಅರ್ಥ ಮನುಷ್ಯರಲ್ಲಿ ಸಿಂಹಪ್ರಾಯರು ಎಂದು—ಆ ಅರ್ಥ ಹುಟ್ಟುವ ಹೆಸರಾಗಬೇಕು. ನಿಮ್ಮ ಹೆಸರನ್ನಿಟ್ಟರೆ, ನಾನು ಹೆಸರಿತ್ತಿ ಕರೆಯುವಂತಿಲ್ಲ. ನಾನೊಬ್ಬಳು ಬೇರೆ ಹೆಸರಿನಿಂದ ಕೂಗಬೇಕು.'

(ಇಸ್ಮೊಂದನೇ ಪುಟ ನೋಡಿರಿ)

ಪಕ್ಷ-ವ್ಯಕ್ತಿ ನಿಷ್ಠೆಯಲ್ಲ, ತಾತ್ಕಾಲಿಕ ಪ್ರಯೋಜನ ನಿಷ್ಠೆ

ಭಾರತದಲ್ಲಿ ಪ್ರಜಾಸತ್ತೆ ನೆಲೆ ನಿಂತು ಎರಡು ದಶಕಗಳುರುಳಿದವು. ಹಲವು ಸಾರ್ವತ್ರಿಕ ಚುನಾವಣೆಗಳು ನಡೆದುವು. ಇದೀಗ ಐದನೆಯ ಸಾರ್ವತ್ರಿಕ ಮಹಾ ಚುನಾವಣೆ ನಡೆಯಲಿದೆ—ಹಲವು ರಾಜ್ಯಗಳ ವಿಧಾನ ಸಭೆಗಳಿಗೆ. ಈ ನಡುವೆ ಉಪ ಚುನಾವಣೆಗಳು, ಸ್ಥಳೀಯ ಸಂಸ್ಥೆಗಳ ಚುನಾವಣೆಗಳು, ಹಲವೆಡೆ ಮಧ್ಯಂತರ ಚುನಾವಣೆಗಳು—ಹೀಗೆ ಎಷ್ಟೋ ಚುನಾವಣೆಗಳು ನಡೆದಿವೆ. ನಿಜವಾಗಿ ಈ ಹೊತ್ತಿಗೆ ನಮ್ಮ ರಾಜ್ಯಕೀಯ ಪಕ್ಷಗಳೆಲ್ಲವೂ ಅವುಗಳ ಕಾರ್ಯಕರ್ತರೆಲ್ಲವೂ, ಮತದಾರರೆಲ್ಲವೂ ಚುನಾವಣಾ ಪ್ರಜ್ಞೆ ಮೂಡಿ ಬರಬೇಕಿತ್ತು. ಆದರೆ, ಅದು ಮೂಡಿದಿಯೇ ಎಂಬ ಪ್ರಶ್ನೆ ಇನ್ನೂ ಪ್ರಶ್ನೆಯಾಗಿಯೇ ಮುಂದುವರಿದಿದೆ. ಇದಕ್ಕೆ ನಮ್ಮಲ್ಲಿನ ಲೋಪದೋಷಗಳೇ ಕಾರಣವೆಂದು ಹೇಳಿದರೆ, ಅಪ್ರಿಯವಾಗಬಹುದು. ಆದರೂ ಸತ್ಯವೆಂಬುದು ನಿಷ್ಪಕ್ಷಪಾತಿಗಳಿಗೆ ಮನವರಿಕೆಯಾಗುತ್ತಿದೆ.

೧೯೬೭ರಿಂದಲೂ ಕಾಂಗ್ರೆಸ್ಸು—ಅದು ಇಂದಿರಾ, ಕಡಿಯಿರಲಿ-ದೇಶದ ಏಕಮೇವ ಶಕ್ತಿಶಾಲಿಯೂದ ಪಕ್ಷವಾಗಿ ಬೆಳೆದು ನಿಂತಿತು. ದಿ| ಜವಹರಲಾಲರ ವ್ಯಕ್ತಿಗತ ಚರಿತ್ರ ಬಲದಿಂದಲೂ ಸ್ವಾತಂತ್ರ್ಯ ಹೋರಾಟದಲ್ಲಿ ಹೊತ್ತ ನಾಯಕತ್ವದಿಂದಲೂ ಕಾಂಗ್ರೆಸ್ಸು ತುಂಬಿ ತುಳುಕಾಡುವ ಬಹುಮತ ಪಡೆದು ದೇಶದಲ್ಲಿ ಏಕ ಚಕ್ರಾಧಿಪತ್ಯವನ್ನೇ ಸ್ಥಾಪಿಸಿತ್ತು. ಕಾಂಗ್ರೆಸಿನಿಂದ ಸಿಡಿದು ಹೋದವರು ಬೇರೆ ಬೇರೆ ಪಕ್ಷಗಳನ್ನು ಕಟ್ಟಿಕೊಂಡರೂ ಅವುಗಳ ವಿರುದ್ಧ ಬಿರುಸಿನ ಪ್ರಚಾರವು ನಡೆದದ್ದರಿಂದ ಅವು ಜೀವ ಹಿಡಿದಿರುವುದೇ ದುಸ್ತರವಾಯ್ತು. ದೇಶದ ಕೆಲವು ಮೂಲೆಗಳಲ್ಲಿ ಕಮ್ಯುನಿಸ್ಟ್ ಪಕ್ಷವು ಬಲವಾದಂತೆ ಕಂಡರೂ ಅದರ ಸತ್ತ್ವವನ್ನು ಕಾಂಗ್ರೆಸ್ಸೇ ಹೀರಿಕೊಂಡು ಅದರ ಬೆಳವಣಿಗೆಯನ್ನು ಕುಂಠಿತಗೊಳಿಸಿತು. ಜವಾಹರಲಾಲರ ಸಮಾಜವಾದದ ಘೋಷಣೆಯಿಂದ ಕಮ್ಯುನಿಸ್ಟರ ಪ್ರಭೆ ಮಂದವಾಯ್ತು. ಆನಂತರ ಕಾಂಗ್ರೆಸಿನ ಆಡಳಿತ ನೀತಿಯಿಂದಾಗಿ ಅದರ ಶಕ್ತಿ ಕುಂಟುತ್ತ ಬಂದು, ೧೯೬೭ರ ಹೊತ್ತಿಗೆ ಅದರ ಏಕ ಸತ್ತತೆಗೆ ಭಂಗ ಬಂದದ್ದು ಸರ್ವವೇದ್ಯ. ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ಸು ಅಧಿಕಾರಕ್ಕೆ ಎರವಾಗಬೇಕಾಯ್ತು. ಮೂತ್ರವಲ್ಲದೆ ಕೇಂದ್ರದಲ್ಲಿಯೂ ಅದರ ತುಳುಕುವ ಮತ ಬಹುಮತಕ್ಕೆ ಇಳಿಯಿತು. ಇದರಿಂದ ದೇಶದ ರಾಜ್ಯಕೀಯ ಬದಲಾಗಬಹುದೆಂದೂ ವಿರೋಧಿ ಪಕ್ಷಗಳ ಬಲ ಸಂವರ್ಧನೆಯಿಂದ ಪಕ್ಷೇಯ ಪದ್ಧತಿಯು ಆಡಳಿತೆ ಸುಖದಾಯಕವಾಗಬಹುದೆಂದೂ ಯೋಚಿಸಿದ್ದರೆ, ಆದಕ್ಕೆ ವಿರೋಧಿ ಪಕ್ಷಗಳೇ ಕೊಡಲಿ ಹಾಕಿದವು. ಸಂಖ್ಯಾಧಿಕ್ಯದ ಪಕ್ಷಗಳು ಸಂಯುಕ್ತ ರಂಗವನ್ನು ಸ್ಥಾಪಿಸಿ ಆಡಳಿತೆ ಕೈಗೆ ತೆಗೆದುಕೊಳ್ಳುವಲ್ಲಿ ತೋರಿಸಿದ ಉತ್ಸಾಹದ ಒಂದಂಶವಾದರೂ ಆದನ್ನು ಉಳಿಸುವಲ್ಲಿ ಪ್ರದರ್ಶಿಸದೆ ಹೋದವು. ಯಾವುದೇ ಕಲಹದಿಂದ ಸರಕಾರಗಳು ಉರುಳಿದವು—ಮಧ್ಯಾವಧಿ ಚುನಾವಣೆಗಳಲ್ಲಿ ಕೆಡಿಡಿ ಸರಕಾರಗಳ ವೈಫಲ್ಯವೇ ಕಾಂಗ್ರೆಸ್ಸಿನ ಮೇಲ್ಕೈಗೆ ಸಹಕಾರಿಯಾಯ್ತು.

ಹೀಗೆ ಕಲಸು ಮೇಲೋಗರವಾದ ದೇಶದ ರಾಜ್ಯಕೀಯಕ್ಕೆ ಹೊಸ ತಿರುವನ್ನು ಕೊಡದೆ ಹೋದರೆ ನೆಮ್ಮದಿಯಿಲ್ಲವೆಂದು ಮನವರಿಕೆ ಮೂಡಿಕೊಂಡವರು ಪ್ರಧಾನಿ ಇಂದಿರಾಗಾಂಧಿ. ಮಿತ ಸಂಖ್ಯೆಯ ವಿರೋಧಿ ಪಕ್ಷಗಳು ಪ್ರಜಾಪ್ರಭುತ್ವದ ಯಶಸ್ಸಿಗೆ ಪೋಷಕವೆಂಬುದು ಸರ್ವ ಸಮ್ಮತ. ಆದರೆ, ನಮ್ಮಲ್ಲಿ ಆ ಪ್ರಶ್ನೆಯಿಲ್ಲ. ಬಿಹಾರ ಪೋಂದರಲ್ಲೇ ಮೂರು ಡಜನಿನಷ್ಟು ಪಕ್ಷಗಳಿವೆಯೆಂದರೆ ಯಾರ ಬಲ ಹೇಗಿದ್ದೀತು? ವಿಧಾನ ಸಭೆಯಲ್ಲಿ ಯಾವ ಪಕ್ಷದ ಸರಕಾರ ರಚಿತವಾದೀತು? ಶ್ರೀಮತಿ ಗಾಂಧಿ ಕಾಂಗ್ರೆಸ್ಸಿನ ಅಕರ್ಮಣ್ಯತೆಯನ್ನು ದೂರ ಮಾಡಿ, ಅದನ್ನು ಜನಪ್ರಿಯಗೊಳಿಸುವ ನಿರ್ಧಾರ ತಾಳಿದರು—ಪರಿಣಾಮ ಪಕ್ಷ ಒಡೆಯಿತು—ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸಲು ಅವರು ಕೈಕೊಂಡ ದಾರಿ ತಪ್ಪೆಂದು ಕೆಲವರ ಅಭಿಮತ—ತಾನು ಹೊಸ ಪೀಳಿಗೆಯ ಹೊಸ ಭೋರಣೆಯ ಹೊಸ ನಾಯಿಕೆಯೆಂದು ಆಕೆ ಹೇಳಿಕೊಂಡರು. ಅವರ ಯೋಜನೆಯೇನೋ ಫಲಿಸಿತು. ಆದರೆ, ಅಧಿಕಾರ ಪಾಹಿಗಳು, ಶ್ರೀಮಂತರು, ಅವರು, ಇವರು ಎಲ್ಲರೂ ಆಕೆಯ ಹಿಂದೆ ನಿಂತರು. ದೇಶನಲ್ಲಿ ಹಳೆಯ ರಾಜ್ಯಕೀಯ ನಾಶವಾಗಿ ಹೊಸತು ಟನ್ನ ತಳೆಯಲಿದೆಯೆಂಬಾಗ ಮತ್ತೆ ಹಳೆಯ(ಕೊಳಕು)ಜೆ ಜದರಲ್ಲೇ ಸೇರಿಕೊಂಡಿತು. ಪರಿಣಾಮ ಸುಸ್ಪಷ್ಟ—ಪ್ರಧಾನಿ ಗಾಂಧಿ ಕಳೆದ ವರ್ಷದ ಲೋಕ ಸಭಾ ಚುನಾವಣೆಗಳಲ್ಲಿ ವಿರೋಧಿ ಪಕ್ಷಗಳನ್ನು ಅಪಮೌನ ಕಾರಕ ರೀತಿಯಲ್ಲಿ ಸೋಲಿಸಿ, ತನ್ನ ಪಕ್ಷದ ಏಕಚ್ಛತ್ರಾಧಿಕಾರವನ್ನು ಪಡೆಯಲು ಶಕ್ತರಾದರು.

ಈಗ ನಡೆಯಲಿರುವ ವಿಧಾನ ಸಭೆಗಳ ಚುನಾವಣೆಯ ಪ್ರಚಾರವೂ ರಾಜ್ಯಕೀಯಕ್ಕೆ ನೆಮ್ಮದಿ ತರುವುದಿಲ್ಲ. ರಾಜ್ಯ ಕೇಂದ್ರಗಳಲ್ಲಿ ಏಕ ಪಕ್ಷೀಯ ಸರಕಾರವಿರಬೇಕೆಂಬ ಸಂಗತಿಗೆ ಅತ್ಯಂತ ಪ್ರಾಮುಖ್ಯ ನೀಡಲಾಗುತ್ತಿದೆ. ಇದನ್ನು ಸರ್ವಾಧಿಕಾರ ಪ್ರಿಯತೆಯೆಂದು ಪ್ರಧಾನಿಯ ವಿರೋಧಿಗಳು ಖಂಡಿಸುತ್ತಾರೆ. 'ತಮ್ಮ ತುಕುಡಿ ಕೇಂದ್ರ ದೊಡನೆ ಸಮರ ಹೂಡಿದ್ದುಂಟೆ? ತಮ್ಮ ಸರಕಾರ ಸಮಾಜವಾದಿ ಪ್ರಗತಿಶೀಲವಲ್ಲವೆ?' ಎಂದು ವೀರೇಂದ್ರ ಪಾಟೀಲರು ಸವಾಲೊಡ್ಡುತ್ತಾರೆ. ಶ್ರೀಮತಿ ಗಾಂಧಿಯವರು ಭಾರತೀಯ ಜನಸಂಘವನ್ನು ಜಾತೀಯವಾದಿ—ಮತೀಯವಾದಿಯೆಂದು ಭಂಗಿಸಿದರೆ ಜನಸಂಘವು ಅವರ ಪಕ್ಷ ಕಮ್ಯುನಿಸ್ಟ್ ಎಂದು ಹೇಳುತ್ತದೆ. ಶ್ರೀಮತಿ ಪ್ರಧಾನಿಯಿಂದ ತೊಡಗಿ ಎಲ್ಲ ರಾಜ್ಯಕೀಯ ಪಕ್ಷಗಳೂ ಪರಸ್ಪರರನ್ನು ದೂರುವುದರಲ್ಲೇ ನಿರತರಾಗಿದ್ದಾರೆ; ಅವರ ಚುನಾವಣಾ ಪ್ರಣಾಳಿಕೆಗಳು ಕೆಲವು ಭರವಸೆಗಳನ್ನು ನೀಡಿದರೂ ಆ ಭರವಸೆಗಳು ಕೈಗೂಡುವ ಭರವಸೆ ಮತದಾರನಿಗಿದ್ದಂತಿಲ್ಲ. ಯಾವ ದೇಶದಲ್ಲಿ ಒಬ್ಬನ ಸರಾಸರಿ ಗಳಿಕೆ ದಿನಕ್ಕೆ ೭೦ ಪೈಸೆಯಾಗಿದೆಯೋ ಅಂತಹ ದೇಶದ ಕಲ್ಯಾಣ—ಪ್ರಗತಿ — ಬಡತನ ನೀಗುವಿಕೆ ಪ್ರಣಾಳಿಕೆ ಸಾರುವಷ್ಟು ಸುಲಭವಲ್ಲ. ಇಂತಹ ಭರವಸೆಗಳು ಎರಡು ದಶಕಗಳಿಂದಲೂ ನೂರಾರು ಬಂದಿವೆ, ಬಂದಂತೆಯೇ ಮಾಯವಾಗಿವೆ. ಆದುದರಿಂದ ಮತದಾರ ಆಕರ್ಷಕನಾಗುವುದು ಪ್ರಣಾಳಿಕೆಯಿಂದಲ್ಲ, ಘೋಷಣೆಯಿಂದಲ್ಲ, ಪಕ್ಷ ನಿಷ್ಠೆಯಿಂದಂತೂ ಮೊದಲೇ ಅಲ್ಲ. ತಾತ್ಕಾಲಿಕ ಆಕರ್ಷಣೆಯಿಂದ ಎಂಬುದನ್ನು ಅಲ್ಲಗಳೆಯುವುದು ಅಸಾಧ್ಯ.

ಇದು ರಾಜ್ಯಕೀಯ ಪಕ್ಷಗಳಿಗೂ ಅರಿಯದ ಸಂಗತಿಯಲ್ಲ. ಅವು ತಮ್ಮ ಅಭ್ಯರ್ಥಿಗಳನ್ನು ಆರಿಸುವಾಗ : ತಾತ್ಕಾಲಿಕ ಪ್ರಯೋಜನವನ್ನೇ ದೃಷ್ಟಿ ಕೋನಗಳಲ್ಲಿ ತೂಗಿ ನೋಡುತ್ತವೆ. ಆದುದರಿಂದಲೇ ವಿಪರೀತ ಸಂಖ್ಯೆಯಲ್ಲಿ ಪಕ್ಷೇತರ ಅಭ್ಯರ್ಥಿಗಳೂ ಚುನಾವಣಾ ಕಣಗಳಲ್ಲಿ ಇಳಿದಿದ್ದಾರೆ. 'ಪಕ್ಷವೇ ಮುಖ್ಯವಲ್ಲ, ಅಭ್ಯರ್ಥಿಯನ್ನೂ ನೋಡಿಕೊಳ್ಳಬೇಕು' ಎಂಬ ವಾದದ ಬುದ್ಧಿ ಜೀವಿಗಳೂ ಕಾಣಿಸಿಕೊಳ್ಳುತ್ತಾರೆ. ಪಕ್ಷದ ಅಭ್ಯರ್ಥಿ ಪಕ್ಷದ ಬಂಧನದಿಂದ ಮುಕ್ತನಾಗಿ ತನ್ನ ಮತದಾರ ಕ್ಷೇತ್ರದ ಹಿತ ಚಿಂತನೆ ಮಾಡಲಾರನೆಂದೂ ಹೇಳುವವರಿದ್ದಾರೆ. ಸರ್ವೇ ಸಾಮಾನ್ಯ ಕಮ್ಯುನಿಸ್ಟರಿಂದ ತೊಡಗಿ ಸ್ವತಂತ್ರ ಪಕ್ಷದವರೆಗಿನ ಎಲ್ಲ ಸಮಾಜವಾದಿ- ಪ್ರಗತಿಯ ಮಂತ್ರ ಪಠಿಸತೊಡಗಿದ ಮೇಲೆ ಆ ಮಂತ್ರದ ಅರ್ಥ ಕೆಟ್ಟು ಹೋಯಿತೆಂದೇ ಹೇಳಬೇಕು. ಆದುದರಿಂದಲೇ ಪಕ್ಷೇತರರ ದಂಡು-ವಿಶಾಲ ಆಕಾಶದಲ್ಲಿ ಹಾರುವ ಹಕ್ಕಿಗಳ ಕೊತ್ತಳ ವ್ಯಕ್ತಿಗತ ಪ್ರಭಾವದಿಂದ ಚುನಾವಣಾ ರಂಗ ಕ್ಕೆಳಿದಿವೆ—ಸಮಾಜವಾದಿಯೇ ಪ್ರಗತಿಶೀಲವೇ. ಆದರೆ ಪಕ್ಷೀಯ ಪದ್ಧತಿಯ ಆಡಳಿತೆಯನ್ನು ನೆಮ್ಮಿಕೊಂಡ ನಮ್ಮ ದೇಶಕ್ಕೆ ಇದರಿಂದ ಪ್ರಯೋಜನವಿದೆಯೇ ಎಂಬುದು ಮುಖ್ಯ ಪ್ರಶ್ನೆ. ವಿರೋಧ ಪಕ್ಷಗಳು ಶಾಸನ ಸಭೆಗಳಲ್ಲಿ ನಿರ್ಬಲವಾದರೆ ಪಕ್ಷೇಯ ಪದ್ಧತಿಯ ಸರ್ವಾಧಿಕಾರ ನಡೆಯುತ್ತದೆ; ಇದುವೇ ಒಂದು ರೀತಿಯಲ್ಲಿ ಏಕವ್ಯಕ್ತಿಯ ಸರ್ವಾಧಿಕಾರವೆನ್ನಲೂ ಸಾಧ್ಯ. ಅಂದರೆ ಪ್ರಬಲ ವಿರೋಧ ಪಕ್ಷ ಪ್ರಜಾಸತ್ತೆಯ ಆರೋಗ್ಯಕ್ಕೆ ಅತ್ಯವಶ್ಯವೆಂದಂತಾಯ್ತು. ಇದನ್ನು ಯಾರು ಕಟ್ಟಬೇಕು?

ಆಳುವ ಪಕ್ಷವು ವಿರೋಧಿ ಪಕ್ಷಗಳನ್ನು ಹೀನಾಯಮಾನವಾಗಿ ಕಾಣುತ್ತ ಬಂದಿರುವುದರಿಂದ ಅವು ಬೆಳೆಯುವುದು ಸಾಧ್ಯವಾಗಿಲ್ಲ. ಇದು ಒಂದು ಆರೋಪ. ಹಲವು ಸಂಖ್ಯೆಯ ಪಕ್ಷಗಳು ಇರುವುದರಿಂದ ಪ್ರಬಲ ವಿರೋಧಿ ಪಕ್ಷ ರೂಪುಗೊಳ್ಳುವುದು ಸಾಧ್ಯವಾಗಲಿಲ್ಲ— ಇದು ಇನ್ನೊಂದು ದೂರು. ಒಂದೊಂದರಲ್ಲೂ ಸೇಕಡಾ ಐವತ್ತರಷ್ಟು ಸತ್ಯಾಂಶವಡಗಿದೆ. ಚುನಾವಣೆಯಲ್ಲಿ ಆಡಳಿತ ಪಕ್ಷ ಮತಯಾಚಿಸದಿರುವುದು ಸಾಧ್ಯವಿಲ್ಲವಾದ್ದರಿಂದ, ಉಳಿದ ಸನುಯವಲ್ಲಿ ವಿರೋಧಿ ಪಕ್ಷಗಳು ಸಂಘಟನೆಯಲ್ಲಿ ನಿರತರಾಗ ಬೇಕು. ಅಧಿಕಾರ ಸ್ಥಾನವಲ್ಲಿದ್ದರೆ ಮಾತ್ರ ಜನ ಸೇವೆ ಸಾಧ್ಯವೆಂದು ಅವು ನಂಬಿದ್ದರೆ, ಅದು ತಪ್ಪಾಗುತ್ತದೆ. ಚುನಾವಣಾ ಮೇಳೆಯ ಭಾಷಣ—ಘೋಷಣೆಗಳ ಸಂವಿನುಳಿಯಿಂದ ಮತ ಕೊಚ್ಚಿ ಒಯ್ಯಬಹುದೆಂದು ನಂಬಿದ್ದರೆ, ಅದು ಸುಳ್ಳು. ಏಕೆಂದರೆ, ಮತದಾರರ ಮೇಲೆ ಎಲ್ಲ ಅಭ್ಯರ್ಥಿಗಳೂ ಏಕ ಪ್ರಕಾರವಾಗಿ ತಾತ್ಕಾಲಿಕ ಆಕರ್ಷಣೆ ಬೀರಲಾರರು. 'ವ್ಯಕ್ತಿ ಬೇಕು, ಪಕ್ಷವೂ ಬೇಕು' ಎನ್ನುವುದಕ್ಕಿಂತ "ವ್ಯಕ್ತಿಯೇ ಬೇಕು" ಎನ್ನುವ ಘೋರಣೆ ಇಂದಿನ ದಿನಗಳಲ್ಲಿ ಬಲವತ್ತರವಾಗಿದೆ. ಶ್ರೀಮತಿ ಇಂದಿರಾಗಾಂಧಿಯವರು ಮತದಾರರಿಗೆ ಮುಖ ದರ್ಶನ ನೀಡುವ ಯೋಜನೆ ಹಾಕಿಕೊಂಡದ್ದೂ ಒಂದು ರೀತಿಯಿಂದ ಇದೇ : ಆಕರ್ಷಣೆ ಬೀರಲು. ಆಕೆಯ ಮುಂದೆ ಎಲ್ಲರ ವ್ಯಕ್ತಿತ್ವವೂ ಭಸ್ಮಾವಶೇಷವೆಂಬುದು ನಿಜ. ಆದುದರಿಂದ ಇದೀಗ ರಾಜ್ಯ—ಕೇಂದ್ರಗಳ ದೃಷ್ಟಿಕೋನದಿಂದ ಏನಾದರೂ ಬದಲಾವಣೆಯಾಗ ಬೇಕಷ್ಟೆ. ಆದರೆ ಇದು ಸದ್ಯದ ವಾತಾವರಣದಲ್ಲಿ ಅಸಾಧ್ಯವೆನಿಸುತ್ತದೆ.

ನಿಕ್ಸನ್ನರ ಹವಾ ಬದಲಾವಣೆ

ಎರಡೂವರೆ ದಶಕಗಳಿಂದ ಅಸ್ಪೃಶ್ಯವಾಗಿದ್ದ ಚೀನವನ್ನು ಅಮೆರಿಕನ್ ಅಧ್ಯಕ್ಷ ನಿಕ್ಸನ್ ಭೆಟ್ಟಿ ನೀಡಿದರು. ಇಷ್ಟು ದೀರ್ಘ ಕಾಲದ ದ್ವೇಷ ನಾಲ್ಕು ದಿನಗಳ ಸಂದರ್ಶನದಿಂದ ದೂರವಾಗದೆಂದು ನಿಕ್ಸನ್ನರೇ ಹೇಳುತ್ತಾರೆಂದ ಮೇಲೆ ಅವರ ಭೇಟಿಯ ಫಲಶ್ರುತಿಯ ಬಗ್ಗೆ ಉಹಾಪೋಹ ಮಾಡಬಹುದು. ಚೀನಾದಲ್ಲಿ ನಿಕ್ಸನ್ನರ 'ಇತಿಹಾಸ ಪ್ರಸಿದ್ಧ' ಯಾತ್ರೆಯ ಬಗ್ಗೆ ಯಾವ ಪ್ರಚಾರವೂ ನಡೆಯಲಿಲ್ಲವೆಂಬುದು 'ಹೇಳಿಕೆ ಮಾಡಿಸಿ ಮದುವೆಗೆ ಹೋದ' ಎಂಬುದನ್ನು ನೆನಪಿಗೆ ತರುತ್ತದೆ. ಇನ್ನೆರಿಕೆ ಚೀನಾಗಳ ನಡುವಣ ಯಾವ ಸಮಸ್ಯೆಯೂ ಚರ್ಚೆಯಾಗುವುದಿಲ್ಲವಂತೆ. ಕೋರಿಯೂ, ವಿಯತ ನಾಮ—ಇಂಡೋ ಚೀನಾ-ಹೀಗೆ ಯಾವುವೂ ಪ್ರಸ್ತಾಪವಾಗುವುದಿಲ್ಲವಂತೆ. ವ್ಯಾಪಾರಿಕ-ಸಾಂಸ್ಕೃತಿಕ ನಿಯಮಯವೂ ಇಲ್ಲವಂತೆ. ಯಾವ ಪುರುಷಾರ್ಥವೂ ಇಲ್ಲದೆ ನಿಕ್ಸನ್ನರು ಪೀಕಿಂಗಿಗೇಕೆ ಹೋಗುತ್ತಾರೆ? ಹವಾ ಬದಲಾವಣೆಯೆ? ಏಳೆಂಟು ತಿಂಗಳು ಮೊದಲೆಯೇ ನಿಶ್ಚಿತವಾದ ಈ ಹವಾ ಬದಲಾವಣೆಗೆ ಪ್ರೇರಕ ರೋಗ ಯಾವುದು?

ಪ್ರಾಯಃ ಅದು ಶಕ್ತಿಯ ಸಮತೋಲನದ ಹಳೆಯ ರೋಗವಿರಬೇಕು. ಚೀನಾ ರಶ್ಯಗಳ ನಡುವಣ ವಿರಸದ ಸಮಪಯೋಗ ಪಡೆದು ಚೀನಾವನ್ನು ಸುಭದ್ರವಾಗುವಂತೆ ಕಟ್ಟುವ ಹವಣಿಕೆಯಿರಬೇಕು. ಭಾರತಕ್ಕೆ ಎದುರು ಪಾಕಿಸ್ತಾನವನ್ನೂ ರಶ್ಯದ ವಿರುದ್ಧ ಚೀನಾವನ್ನೂ ಎತ್ತಿ ಕಟ್ಟಿ ಏಷ್ಯಾ ಖಂಡದ ಮೇಲೆ ತನ್ನ ಪ್ರಭಾವವನ್ನು ಉಳಿಸುವ ಕೊನೆಯ ಪ್ರಯತ್ನವಿದು ಇರಬಹುದು. ಶಕ್ತಿಯ ಸಮತೋಲನ ಸವಕಲು ನಾಣ್ಯವೆಂಬುದನ್ನು ನಿಕ್ಸನ್ ಅರಿತುಕೊಳ್ಳದೆ ಮುಂದುವರಿದರೆ, ಅವರ ಪೀಕಿಂಗ್ ಭೆಟ್ಟಿ ಏಶ್ಯಾಖಂಡದ ಅಭದ್ರತೆಗೆ ನಾಂದಿ ಹಾಡುತ್ತದೆ. ಆದುದರಿಂದ ನಿಕ್ಸನ್ನರಿಗೆ ತಿಳಿಹೇಳ ಕೊಡಬೇಕು!

ಗೇಹರಾಜ್ಯದಲ್ಲಿ

ತೀರ್ಥ ತೊಟ್ಟಾದರೇನು, ಕೊಳಗವಾದರೇನು?

'ಅಲ್ರಿ, ನೀವೊಳ್ಳೇ ದಿನಾ ನೋಡಿ....'

'ಏನು ಸಾಯ್ಸೇಕೂಂತೀಯೂ?'

"ಛೆ ಛೆ... ಶಾಂತಂ ಪಾಪಂ ಶಾಂತಂ ಪಾಪಂ. ಅಲ್ವಾ, ನೀವು ಸತ್ತು ನಾನು ಕಾಣಬಯವಾದ ಸುಖವಾದ್ರೂ ಏನೂಂತೆ?"

'ಏನೂ ಇಲ್ಲೆ? ಬದುಕಿರುವಾಗ ಸುಖ ಕೊಡೋಕೆ ಆಗ್ಲಿಲ್ಲ, ಅಧ್ರಿಂದ....'

'ಬಾಯ್ಮುಚ್ಚೀಂದ್ರೆ ...ಏಂಥ ಅಬದ್ಧ ಮೂನಾಡ್ತಿದೀರಾ ಆಮೂ ಈ ಮುನ್ಸಂಜೆ ವೇಳೆಗೆ....ರಾಮ ರಾಮೂ ಅನ್ನಿ...'

"ಹ್ಞೂಂ .ಆಯ್ತಪ್ಪ. ಏನು ಮತ್ತೆ?"

'ನೊದ್ಲಿಗೆ ರಾಮ ರಾಮೂನ್ನಿ...'

'ರಾಮ ರಾಮೂ...'

'ನೋಡಿ, ನಾನು ಪ್ರಧಾನಿಯನ್ನುನೋಡಿದೆ....'

'ಏನಂತೀಯೂ?'

'ಅಲ್ರಿ. ಶ್ರೀಮತಿ ಗಾಂಧಿಯನ್ನು ನಾನು ನೋಡಿದೇಂದ್ರೆ....'

'ಓಹಾಗೋ. ಬಾರೀ ಒಳ್ಳೇವಾಯ್ತು. ಏನಂತೆ, ಎಷ್ಟ ತಲೆನೂರುಗಳು ಸ್ವರ್ಗಸಡೆಮನಂತೆ?'

'ಗಾಂಧಿಗೂ ಸ್ವರ್ಗಕ್ಕೂ ಏನು ಸಂಬಂಧಾಂತ?'

'ನೋಡು, ಮಹಾ ಪುರುಷರ ದರ್ಶನವಿಂದ ಸ್ವರ್ಗ ಸಿಗುತ್ತಂತೆ.'

"ಹ್ಞೂಂ..."

'ನಮ್ಮ ಕಾಲದ ಮಹಾ ವಿಭೂತಿಗಳಲ್ಲಿ ಶ್ರೀಮತಿ ಗಾಂಧಿಯೂ ಒಬ್ಬಳು....'

'ನಿಜಕ್ಕೂ. ತಿಲ್ವಾದ್ರೆ ಅಷ್ಟಮ್ಟ ಜನ ಎಲ್ಲೆಲ್ಲಿಂದ ಏಕೆ ಬರ್ತಾರೆ!'

'ಜನ ಒಂದಪ್ಪರಿಂದ ಆಕೆ ವಿಭೂತಿಯೂ ಗಲಿಲ್ಲ ಆಕೆ ವಿಭೂತಿಯೊದ್ದರಿಂದ ಜನ ಸೇರಿತು....'

'ನಾನೆಂದಮ್ಮ ಮತ್ತಿನ್ನೇನು?'

"ಶ್ರೀಮತಿ ಗಾಂಧಿಯೆಂದರೆ ರಾಣಿ ಲಕ್ಷ್ಮೀಬಾಯಿ ಜನತಾರ ಅಂದರೂ ಸರಿಯೇ...."

'ಹ್ಞೂಂ...'

'ರಾಣಿ ಬ್ರಿಟಿಷರೊಪನೆ ಹೋರಾಡಿ ಮಡಿದಳು. ಶ್ರೀಮತಿ ಗಾಂಧಿ ಪಕ್ಷದೊಳಗಣ ಆಕಿರಧ ಮಹಾರಧರೊಪನೆ ದೋರಾಡಿ ಗೆದ್ದಳು....'

'ಅಲಿ, ಪಾಕಿಸ್ತಾನದೊಡನೆ?'

'ಅವರೊಡನೆ ಹೋರಾಡಿದವರು ನಮ್ಮ ವೀರಯೋಧರು .'

'ಆದರೂ ಅವರಿಗೆ ಆಜ್ಞೆ ನೀಡಿದ್ದು...'

"ಅಂತಹ ಆಜ್ಞೆ ಹಿಂದೆ ಸರ್ದಾರ ಪಟೇಲರೂ ನೀಡಿದ್ದರು, ಲಾಲ ಬಹದ್ದೂರರೂ ನೀಡಿದ್ದರು. ಆಜ್ಞೆ ನೀಡುವ ಸ್ಥಾನದಲ್ಲಿದ್ದರು, ನೀಡಿದರು. ಆದರೂ ಆ ಕೆಚ್ಚೆದೆಯ ಮುಂದೆ ಶರಣಾಗ ಬೇಕೆನ್ನು..."

"ಮತ್ತೆ! ಹಾಗೆ ಬನ್ನಿ. ನಿಮಗೆ ಆವರನ್ನು ನೋಡುವ ಭಾಗ್ಯವಿರಲಿಲ್ಲ."

'ಭಾಗ್ಯವಿತ್ತು ಕಣೇ, ಆದರೆ, ನಾನೇ ಅದನ್ನು ನಿರಾಕರಿಸಿದೆ...."

'ಯಾಕೆ? ಭಾರತ ಭಾಗ್ಯವಿಧಾತೆಯೆಂದು ಹೆಸರಾದ ಮಹಾ ಮಹಿಳೆ....'

"ಆನರೆ ನೋಡು ಆಕೆ ಭಾರತದ ಪ್ರಧಾನಿಯಾಗಿ ಇಲ್ಲಿಗೆ ಬರಲಿಲ್ಲ. ತನ್ನ ಪಕ್ಷದ ಅಭ್ಯರ್ಥಿಗಳಿಗೆ ಓಟು ಕೊಡಿರೆಂದು ವಿನಂತಿಸಲು ಬಂದಿನ್ನಾರೆ. ಆಂದರೆ, ಆವರ ವ್ಯಕ್ತಿತ್ವ ಸಣ್ಣಗಾಯ್ತು....."

"ಅದಕ್ಕಾಗಿಯೇ ಬರಲಿಲ್ಲವೇನು?"

'ನೋಡು, ನಮ್ಮ ಕರ್ತವ್ಯ ಮುಗಿಯುವಾಗಲೇ ಆರೂವರೆ. ಮತ್ತೆ ಬರುವುದಾದರೂ ಹೇಗೆ? ಮತ್ತೆ, ನಾನು ಹಿಂದೆಯೇ ಆವರನ್ನು ನೋಡಿದ್ದೆ....'

'ಯಾವಾಗ?'

'ಆಗ ನೀನಿನ್ನೂ ಈ ಊರಿಗೆ ಬಂದಿರಲಿಲ್ಲ. ಆಕೆ ಕಾಂಗ್ರೆಸ್ಸಿನ ಅಧ್ಯಕ್ಷೆಯೂಗಿದ್ದರು.'

'ಹ್ಞೂಂ....ಆದ್ರೆ ನೋಡಿ, ಆಕೆಯ ಮಾತು ಮಾತ್ರ ಏನೂ ಸಾಲದೆನ್ನುತ್ತೆ....'

'ಅಲ್ವೆ, ಆಕೆ ಬಂದದ್ದು ಚುನಾವಣಾ ಪ್ರಚಾರಕ್ಕೆ. ಸೂತ್ರದ ಹಾಗೆ ನಾಲ್ಕು ವಾಕ್ಯ ಆಡಿದರೆ ಸಾಕು. ಅವನ್ನು ವ್ಯಾಖ್ಯಾನಿಸಲು ಉಳಿದವರಿದ್ದಾರೆ....'

'ಮತ್ತೆ ತಷ್ಟು ದೂರದಿಂದ ಅಷ್ಟು ಖರ್ಚು ಮಾಡಿಕೊಂಡು ಬಂದದ್ದು ಯಾಕೇ ತ?'

'ಯಾಕೆ ಅಂದರೆ? ತನ್ನ ಪಕ್ಷದ ಅಭ್ಯರ್ಥಿಗಳಿಗೆ ಮತ ಬೇಡುವುದಕ್ಕೆ. ಒಂದೂರಿನಲ್ಲೇ ಮೊಕ್ಕಾಂ ಮಾಡುವುದು ಅವರಿಗೆ ಹೇಗೆ ಸಾಧ್ಯ? ಇತರತ್ರವೂ ಮುಖ ತೋರಿಸ ಬೇಕು ತಾನೆ?'

'ಆದರೂ....'

'ಆದರೂ ಇಲ್ಲ, ಹೋದರೂ ಇಲ್ಲ. ಶಾಂತಿಂದ ಇಳಿದದ್ದು ತೀರ್ಥವಾಗುತ್ತದೆ. ಆದು ನಾಲ್ಕು ತೊಟ್ಟಾದರೇನು? ನಾಲ್ಕು ಕೊಳಗವಾದರೇನು?'

'ಹಿಂದೆ ಸನ್ಯಾಸಿಗಳು ಗ್ರಾಮೈಕರಾತ್ರ ರಾಗಿಯಾದರೂ ಇರುತಿದ್ದರು....'

'ಸರಿ ಕಣೇ, ಆಗ ರೇಲು—ಬಸ್ಸು—ಕಾರುಗಳಿರಲಿಲ್ಲ. ವಿಮಾನವೂ ಇರಲಿಲ್ಲ. ಹೆಲಿಕಾಪ್ಟರು ಇತ್ತೀಚೆಯದ್ದು. ಮತ್ತವರು ಗ್ರಾಮೈಕಾತ್ರರಾಗದೆ ಗತ್ಯಂತರ ವೆಲ್ಲಿ?'

'ಅಂದ್ರೆ ಸಂಚಾರ—ಸಂಪರ್ಕ ಸಾಧನಗಳಿದ್ದುದರಿಂದ....'

'ಹ್ಞೂಂ. ಆದ್ದರಿಂದಲೇ ಅದಷ್ಟು ಹೆಚ್ಚು ಜನರನ್ನುದ್ದೇಶಿಸಿ ಮಾತನಾಡುವುದು ಸಾಧ್ಯವಾಗುತ್ತೆ. ಮತ್ತೊಂದು ವಿಷಯ...'

'ಏನು?'

'ಶ್ರೀಮತಿ ಗಾಂಧಿಯ ಸ್ವಂತ ವ್ಯಕ್ತಿತ್ವ—ಪ್ರತಿಭೆಯಿಂದ ಆಕೆಯ ಪಕ್ಷ ಹುಟ್ಟಿ ಬೆಳೆದಿದೆ. 'ಇಂದಿರಾ ಗಾಳಿ'ಯಿಂದಲೇ ತಮಗೆ ಕಳೆದ ವರ್ಷ ಗೇಲಾಯಿತೆಂದು ಆಕೆಯ ಪಕ್ಷದವರೆಲ್ಲ ಒಪ್ಪಿಕೊಂಡಿದ್ದಾರೆ ಆದುದರಿಂದಲೇ ಈ ಬಾರಿಯೂ ಅಂತಹದೇ ಗಾಳಿ ಬೇಕೆಂಬ ಇರಾದೆಯಿಂದ ಆಕೆಯನ್ನು ಕರೆದು ಕೊಂಡಿದ್ದಾರೆ....'

'ಹ್ಞೂಂ. ನನಗೊಂದು ನೆನಪಿಗೆ ಬರುತ್ತೆ....'

'ಏನು?'

'ಮತ್ತೆ ನೀವು ತಾಳಿ ಬಡೆದು ನಗಬಾರದು, ಗೇಲಿ ಮಾಡಬಾರದು....'

'ಯಾಕೆ? ಅಂತದ್ದೇನು?'

'ನೀವು ಮಾತು ಕೊಟ್ರೆ....'

'ಒಳ್ಳೆ ಪಚೀತಿ...ಹ್ಞೂಂ. ಆಯ್ತಮ್ಮ.'

'ನೋಡಿ, ದೇವರ ಉತ್ಸವ ಮೂರ್ತಿಗೆ ಕಟ್ಟೆಪೂಜೆ ನಡೆಯುತ್ತಲ್ಲಾ'

'ಹಾದೂನ್ನು. ಆದ್ರೆ ಆ ಸಂಗ್ತಿ ಈಗ ಯಾಕೆ? ನಮ್ಮೂರ ಕಟ್ಟೆ ಪೂಜೆಗೆ ಇನ್ನೂ ಒಂದೂವರೆ ತಿಂಗಳು....'

'ಅಲ್ಲಾರಿ, ಹಾಗೇ ಶ್ರೀಮತಿ....'

'ಹ್ಞೆ ಹ್ಞೆ....ಹ್ಞೂಂ....'

'ನೋಡಿ ಮತ್ತೆ....'

'ಇಲ್ಲ ಇಲ್ಲ....ಬಾಯ್ಮುಚ್ಚಿದೆ. ಆರಾಧ್ಯ ಮೂರ್ತಿಯನ್ನು ಕಂಡು ಕೃತಾರ್ಥರಾದೆವೆಂದು ನಂಬಿ ಸುಖ ಪಡೆಯಬಹುದು. ಶ್ರೀಮತಿ ಗಾಂಧಿ ಹೇಳಿಬೇಕಾದ್ದನ್ನೆಲ್ಲಾ ಆಕೆಯ ಪಕ್ಷದ ನಾಯಕರು ಹೇಳುತ್ತಾರೆ; ಆಕೆಯ ವೇದಗಳಿಗೆ ಭಾಷ್ಯ ವ್ಯಾಖ್ಯಾನ ಎಲ್ಲಾ ಬರೆಯುತ್ತಾರೆ. ತಮ್ಮ ಪಕ್ಷವೊಂದೇ ಮೋಕ್ಷ ತಂದೀಯಬಲ್ಲುದೆಂಬುದೇ ಅವುಗಳ ಸಾರ ಸಂಗ್ರಹ....'

"ಹ್ಞೂಂ ...ಅದೇನೇ ಹೇಳಿ, ಶ್ರೀಮತಿ ಗಾಂಧಿಯವರ ಸಂದರ್ಶನದಿಂದ ಗಾಳಿ ಬೀಸತೊಡಗಿದ್ದು ಖಂಡಿತ...."

'ಇರಬಹುದೂನ್ನು. ಕಳೆದ ಬಾರಿ ಈ ಗಾಳಿ ಅನಿರೀಕ್ಷಿತವಾಗಿ ಬೀಸಿತ್ತು. ಅದರ ಪ್ರಭಾವ—ಶಕ್ತಿಯೆಷ್ಟು ಎಂಬುದರ ಕಲ್ಪನೆಯೂ ಇರಲಿಲ್ಲ. ಆದರೆ, ಈ ಬಾರಿ ಹಾಗಲ್ಲ ನೋಡು ಆದ್ದರಿಂದ ಉಳಿದ ಪಕ್ಷಗಳು ಬಾಯಲ್ಲಿ ಕಲ್ಲು ಹಾಕಿಕೊಂಡಿರಲಾರವು ...'

'ಆದರೂ ಈ ಬಾರಿಯೂ ಶ್ರೀಮತಿ ಗಾಂಧಿಯವರ ಪಕ್ಷ ನಿಚ್ಚಳ ಬಹುಮತ ಪಡೆಯುತ್ತದೆ....'

'ಹ್ಞೂಂ....ಇರಬಹುದು. ನೋಡು, ಮೊನ್ನೆ ಒಂದು ವ್ಯಂಗ ಚಿತ್ರ ನೋಡಿದೆ....'

'ಏನು?'

"ಒಬ್ಬ ಅಭ್ಯರ್ಥಿ ಹಸ್ತ ಸಾಮುದ್ರಿಕನಲ್ಲಿ ತನ್ನ ಅನ್ಯತ ಹಸ್ತವನ್ನು ತೋರಿಸಿ ಚುನಾವಣೆಯ ಪರಿಣಾಮದ ಬಗ್ಗೆ ಕೇಳುತ್ತಾನೆ ..."

'ಹ್ಞೂಂ....ಯಾವ ಪಕ್ಷದವನು?'

'ಯಾವನೋ ಪಕ್ಷೇತರನೆಂದಿಟ್ಟುಕೋ....'

'ಏನು ಹೇಳ್ತಾನೆ ಭವಿಷ್ಯ?'

'ನಿನ್ನ ಜಯೂಪಜಯಗಳು ಬೀಸೋ ಇಂದಿರಾ ಗಾಳಿಯ ವೇಗ—ಬಲವನ್ನು ಹೊಂದಿಕೊಂಡಿದೆ ಅಂತಾನೆ...'

"ಅಂದ್ರೆ ಇಂದಿರಾ ಗಾಳಿ ತೀವ್ರವಾದರೆ ಆತ ಹಾರಿ ಹೋಗ್ತಾನೆ ."

'ಹಾರಿ ಹೋಗ್ತಾನೆ ಮಾತ್ರವಲ್ಲ, ಇಡು ಗಂಟನ್ನೂ ಕಳೆದುಕೊಳ್ತಾನೆ....'

"ಅಂದ್ರೆ, ಭವಿಷ್ಯ ಕೈಯ ರೇಖೆಗಳಲ್ಲಿಲ್ಲ;

(ಒಂಭತ್ತನೆಯ ಪುಟ ನೋಡಿರಿ)

THE VIJAYA BANK LTD.,

Uchila (South Kanara)

ಏಲಂ ನೋಟೀಸು

ಈ ಕೆಳಗೆ ಕಾಣಿಸಿದ ಮಹಾಜನರು ನಮ್ಮ ಶಾಖೆಯಿಂದ ಚಿನ್ನಾಭರಣ ನಗದಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ—ವ—ಅವರ ಹಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸಾಲದ ಬಾಬ್ತು ಬೇಂಕಿಗೆ ಸಲ್ಲಕ್ಕೆ ಮೊಬಲಗನ್ನು ಇದೇ ತಿಂಗಳ ತಾ. 29—2—72ರ ಒಳಗಾಗಿ ಬೇಂಕಿಗೆ ಸುರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಆಡವಿಟ್ಟ ನಗದಗಳನ್ನು ತಾ 7—3—72 ಆಪ ರಾತ್ರಿ ಗಂಟೆ 3—00ಕ್ಕೆ ಸರಿಯಾಗಿ ಬೇಂಕಿನ ವರಾಂಡದಲ್ಲಿ ಬಹಿರಂಗ ಹರಾಜು ಮಾಡಲಾದೀತು. ಯಾ— ಬೇಂಕಿಗೆ ಯಾತ್ರ ಕಂಡ ಅತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ—ಯಾ— ವಾಗಿದೆಯಾಗಿ ಸರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು —ವೆ— ಗಳನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ಕೆಳಿದಿರಲಿ.

ಜಾಜರಾ ಸಂಖ್ಯೆ	ಸಾಲದ ಸಂಖ್ಯೆ	ಸಾಲಗಾರನ ಹೆಸರು ಮತ್ತು ವಿಳಾಸ.	ಮೊಬಲಗು ರೂ. ಪೈ.
1.	J.L 35/70	ಲಚ್ಚು ಶೆಟ್ಟಿ, S/o. ರಾಮು ಶೆಟ್ಟಿ, ಕನ್ಯಾಗಂಗತ್ತು, P.O ತೆಂಕ ಎರ್ಮಾಳ್, ಉಡುಪಿ ತಾಲೂಕು, ಜ.ಕ.	139 - 95
2.	247/70	ಶೇಕ್ ಹುಸೇನ್, S/o. ಸಾಬು ಹುಸೇನ್ ಸ್ಕಾಳಲ್ ಶೋಪು, P.O. ಉಚ್ಚಿಲ, ದ.ಕ.	189 - 00
3.	76/71	ಯು.ಯನ್. ಕೃಷ್ಣಮೂರ್ತಿ, ಟೀಚರ್, ಶ್ರೀ ಸರಸ್ವತಿ ಮಂದಿರ ಹಾಯರ್ ಎಲಿಮೆಂಟರಿ ಶಾಲೆ, P.O. ಉಚ್ಚಿಲ,ದ.ಕ.	70 - 80
4.	334/71	ಯು.ಯನ್. ಕೃಷ್ಣಮೂರ್ತಿ, ಟೀಚರ್, ಶ್ರೀ ಸರಸ್ವತಿ ಮಂದಿರ ಹಾಯರ್ ಎಲಿಮೆಂಟರಿ ಶಾಲೆ, P.O. ಉಚ್ಚಿಲ, ದ ಕ.	130 - 00

ಉಚ್ಚಿಲ (ದ.ಕ.)
15—2—72.

Sd/—
Manager,
UCHILA (S.K.)

ಪ್ರಸ್ತುತ ಆರ್ಥಿಕ ಪರಿಸ್ಥಿತಿ

ಲೇಖಕರು: ಶ್ರೀ ಹಾ. ನಾದಿರಾಜ ತಂತ್ರಿ

ಒಂದು ದೇಶದ ಆರ್ಥಿಕ ಪ್ರಗತಿಯು ನೂನದಂಡ ಆಲ್ಲಿ ಪ್ರತಿ ವರ್ಷ ಬೆಳೆಯುತ್ತಿರುವ ಔದ್ಯೋಗಿಕ ಮತ್ತು ವ್ಯಾವಸಾಯಿಕ ಉತ್ಪಾದನೆ. ಈ ಎರಡು ವಲಯಗಳಲ್ಲಿ ಉತ್ಪಾದನೆ ಪ್ರಗತಿಶೀಲವಾಗಿ ಏರಬೇಕಾದರೂ ಸರಕಾರ ಅನೇಕ ಯುಕ್ತ ಧೋರಣೆಗಳನ್ನು ನೂಡಬೇಕಾಗುವುದು. ಕಳೆದ ವರ್ಷದ ವ್ಯಾವಸಾಯಿಕ ಉತ್ಪಾದನಾ ಸ್ಥಿತಿಯನ್ನು ಪರಿಶೀಲಿಸಿದಲ್ಲಿ ತೃಪ್ತಿದಾಯಕ ಅಂಶವನ್ನು ಗೊತ್ತು ಮೂಡಬಹುದು. ಆಹಾರ ಧಾನ್ಯಗಳ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ. ಅನೇಕ ಪ್ರದೇಶಗಳು ಅತಿವೃಷ್ಟಿಯ ತೊಂದರೆಗೊಳಪಟ್ಟ ದ್ದಾಗ್ಯೂ ನಾವು ಜೂನ್ 1971ರ ವರೆಗೆ ಸುಮಾರು 8.5 ಮಿಲಿಯನ್ ಟನ್ನುಗಳ ಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಿಸಿದ್ದೇವೆ ಆದರೂ ಕೂಡಾ ನಾಲ್ಕನೆಯ ಯೋಜನೆಯಲ್ಲಿ ನಿರೂಪಿಸಿದ ಗುರಿಗಿಂತ ಸುಮಾರು 200 ಕೋ. ರೂ. ಗಳಷ್ಟು ಕಡಿಮೆ ಬಂಡವಾಳ ಹೂಡಿಕೆ ಆಗಿದೆ. ಇದರಿಂದಾಗಿ 10ರಿಂದ 15 ಶೇಕಡಾದಷ್ಟು ಗುರಿಗಿಂತ ಕಡಿಮೆ ಉತ್ಪನ್ನವಾಗಬಹುದೆಂದು ಅಂದಾಜು ಮೂಡಿದ್ದಾರೆ.

ಬೆಲೆ ಏರಿಕೆ

ದೇಶದಲ್ಲಿ ಬೆಲೆ ಏರಿಕೆಯು ವಿಷವ್ಯೂಹ ಜನತೆಯ ಹೃದಯವನ್ನು ಹದಗೆಡಿಸುತ್ತಿದೆ. ಈ ಬೆಲೆ ಏರಿಕೆಯು ಕೊರತೆ ಹಣದ ತೊಡಗಿಸುವುದರಿಂದ ಉಂಟಾಗಿದೆ. ಇತ್ತೀಚೆಗೆ ಎಲ್ಲಾ ರಾಜ್ಯ ಸರಕಾರಗಳು ವಿವೇಕ ಶೂನ್ಯರಾಗಿ ರಿಸರ್ವ್ ಬ್ಯಾಂಕಿನಿಂದ ಸಾಲಪಡೆದು ಸಿಕ್ಕಾಬಟ್ಟೆ ಖರ್ಚು ಮೂಡುತ್ತಿದ್ದಾರೆ. ಪಡೆದ ಸಾಲ ಉತ್ಪಾದನಾ ಕಾರ್ಯ ಕ್ರಮಗಳಿಗೆ ವ್ಯಯವಾದರೆ ವಸ್ತುಗಳ ಬೆಲೆ ಅತೀವವಾಗಿ ಏರಲಿಕ್ಕಿಲ್ಲ. ಆದರೆ ಪಡೆದ ಸಾಲದ ಹೆಚ್ಚಿನಂಶ ಆಡಳಿತ ವೆಚ್ಚವನ್ನೆದುರಿಸಲು ವ್ಯಯವಾಗುವುದರಿಂದ ಅಧಿಕ ಗೊಂಡ ಚಾಲಿತ ಹಣ ವಸ್ತುಗಳ ಬೆಲೆಯನ್ನೇರಿಸುತ್ತವೆ. 1971 ಜೂನ್ ಅಂತ್ಯದಲ್ಲಿ ಸುಮಾರು 924 ಕೋ. ರೂ ಗಳಷ್ಟು ಮೊಬಲಗನ್ನೂ ರಾಜ್ಯ ಸರಕಾರಗಳು ರಿಸರ್ವ್ ಬ್ಯಾಂಕಿನಿಂದ ಸಾಲವಾಗಿ ಪಡೆದಿದೆ. ಇದು ಅದಕ್ಕಿಂತ ಹಿಂದಿನ ವರ್ಷಕ್ಕಿಂತ 2 ಕೋ. ರೂ. ಗಳಷ್ಟು ಹೆಚ್ಚಾಗಿದೆ.

ಕುಂಠಿತ ಉತ್ಪಾದನೆ

ಗ್ರಾಮೀಣ ಪ್ರದೇಶಗಳಲ್ಲಿ ಏಳುತ್ತಿರುವ ಆದಾಯಕ್ಕನುಗುಣವಾಗಿ ಔದ್ಯೋಗಿಕ ಉತ್ಪಾದನೆ ಹೆಚ್ಚುತ್ತಿಲ್ಲವೆಂದು ಅನೇಕ ವೀಕ್ಷಕರ ಅಭಿಮತ. ಅಲ್ಲದೆ 1971ರಲ್ಲಿ ನಾಲ್ಕನೆಯ ಯೋಜನೆಯಲ್ಲಿ ನಿರೂಪಿತ ಪಾದಂತಹ ಗುರಿಗಿಂತ ಕಡಿಮೆ ಔದ್ಯಮಿಕ ಉತ್ಪಾದನೆ ಆಗುತ್ತಿರುವುದು ಖೇದಕರ. ಇದರಿಂದಾಗಿಯೂ ವಸ್ತುಗಳ ಬೆಲೆ ಏರುವುದು ಸಾಧ್ಯ. ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚುತ್ತಿದ್ದರೆ ವಾಜಿಜ್ಯ ಬೆಳೆಗಳ ಉತ್ಪಾದನೆ ಹೆಚ್ಚುತ್ತಿಲ್ಲ. ಕಾರಣ, ಅಧಿಕ ಇಳುವರಿ ಕೊಡುವಂತಹ ತಳಿಗಳ ಪೂರೈಕೆಯಲ್ಲಿ ಕೊರತೆ ಕಂಡು ಬರುತ್ತದೆ. ಇದರಿಂದಾಗಿ ಕೆಲವು ಔದ್ಯಮಿಕ ಸಂಸ್ಥೆಗಳಿಗೆ ಕಚ್ಚಾವಸ್ತುಗಳ ಕೊರತೆ ಕಂಡು ಬರುತ್ತದೆ. ಕಚ್ಚಾವಸ್ತುಗಳ ಪೂರೈಕೆಯಲ್ಲಿ ಕೊರತೆ ಕಂಡು ಬರುವುದರಿಂದ ಔದ್ಯಮಿಕ ಉತ್ಪಾದನೆಯೂ ಕಡಿಮೆಯಾಗಿದೆ.

ಶಿಸ್ತಿನ ಅಭಾವ

ಔದ್ಯಮಿಕ ವಲಯದಲ್ಲಿ ಅನೇಕ ಕುಂದು ಕೊರತೆಗಳು ಕಂಡು ಬರುವುದು. ಅನೇಕ ಔದ್ಯೋಗಿಕ ಕಾರ್ಯಾಗಾರಗಳು ತಮ್ಮ ಸ್ಥಾಪಿತ ಶಕ್ತಿಯನ್ನು ಸಂಪೂರ್ಣ ಉಪಯೋಗಿಸಲು ಸಾಧ್ಯವಾಗುತ್ತಿಲ್ಲ. ಕಾರಣ ಕಚ್ಚಾವಸ್ತುಗಳ ಕೊರತೆ. ಕೆಲವು ಸಂಸ್ಥೆಗಳಿಗೆ ಸರಿಯಾದ ಹಣಕಾಸಿನ ಪೂರೈಕೆ ಆಗುತ್ತಿಲ್ಲ.

ಅನೇಕ ಕಾರ್ಮಿಕರು ವೇತನವನ್ನು ಅಧಿಕಗೊಳಿಸಲು ಚಳುವಳಿ ಮೂಡುತ್ತಿದ್ದಾರೆ. ಕಾರ್ಮಿಕ ವರ್ಗದಲ್ಲಿ ಪ್ರಕ್ಷುಬ್ಧ ವಾತಾವರಣ ಆಗಾಗ್ಗೆ ಕಂಡು ಬರುತ್ತದೆ. ಇದರಿಂದಾಗಿ ನಮ್ಮ ಶ್ರಮ ಶಕ್ತಿಯಲ್ಲಿ ನೈತಿಕ ಶಕ್ತಿಯ ಕೊರತೆ ಮತ್ತು ಯೋಗ್ಯ ಅನುಶಾಸನದ ಸಂವಿದೆಯ ಆಭಾವ ಹರಡಿಕೊಂಡಿದೆ. ಕಾರ್ಮಿಕ ವರ್ಗದಲ್ಲಿ ಶಿಸ್ತಿನ ಅಭಾವದಿಂದಾಗಿ ಉತ್ಪಾದನಾ ಕ್ಷಮತೆ ಕುಂಠಿತವಾಗಿದೆ. ಏಕಸ್ವಾಮ್ಯವನ್ನು ತೊಲಗಿಸುವ ಧೋರಣೆಗಳೂ ಉತ್ಪಾದನಾ ಶಕ್ತಿಯನ್ನು ಹೆಚ್ಚುಗೊಳಿಸುವಲ್ಲಿ ಪ್ರತಿಬಂಧಕಗಳಾಗಿ ಸ್ಪರ್ಧಿಸುತ್ತಲಿವೆ.

ಕಾಳಧನ ಚಲಾವಣೆ

ಇತ್ತೀಚೆಗೆ ಮಾಜಿ ಸುಪ್ರೀಂ ಕೋರ್ಟು ಮುಖ್ಯ ನ್ಯಾಯಾಧೀಶ ಶ್ರೀ ಕೆ. ಎನ್. ವಾಂಚೂ ಅವರ ಅಧ್ಯಕ್ಷತೆಯಲ್ಲಿ ನಿರ್ಮಿಸಿದ ಸಮಿತಿ ಭಾರತದಲ್ಲಿ ಪ್ರತಿವರ್ಷ 1400 ಕೋ. ರೂ.ಗಳಷ್ಟು ಕಾಳಧನ ಚಲಾವಣೆಯಲ್ಲಿರುವುದಾಗಿ ತಿಳಿಸಿದೆ. ಇದರಿಂದಾಗಿಯೂ ಬೆಲೆ ಏರಿಕೆ ಉಂಟಾಗಿದೆ. ಸುಳ್ಳು ಲೆಕ್ಕ ನೀಡಿಕೆಯ ಮೂಲಕ ತೆರಿಗೆ ತಪ್ಪಿಸುವವರ ವಿಚಾರಣೆ, ತನಿಖೆ ಹಾಗೂ ತಪಾಸಣೆಗಳ ಮೂಲಕ ಕಂಡು ಹಿಡಿಯಲು ಹೆಚ್ಚು ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕು. ಕಠಿಣ ದಂಡನೆ ನೀಡುವ ಮೂಲಕ ಕಾಳಧನ ಚಲಾವಣೆಯನ್ನು ಕೊನೆಗೊಳಿಸಲು ಯತ್ನಿಸಬೇಕು. ಅಲ್ಲದೆ ನ್ಯಾಮೂಣಿಕವಾಗಿ ತೆರಿಗೆ ಪಾವತಿ ಮಾಡುವವರಿಗೆ ಹೆಚ್ಚು ಪ್ರೋತ್ಸಾಹ ದೊರೆಯುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ರಾಷ್ಟ್ರೀಕೃತ ಉದ್ಯಮ ಪರಿಣಾಮಕಾರಿಯಾಗಿ ಕಾರ್ಯ ಎಸಗ ಬೇಕಾದರೆ ರಾಷ್ಟ್ರೀಯ ಪ್ರಜ್ಞೆ ಇರಬೇಕೆಂಬ ಭಾವನೆಗೆ ಪ್ರತಿರೋಧದ ಮಾತಿಲ್ಲ. ಇಲ್ಲದಿದ್ದರೆ ಅಂತಹ ಉದ್ಯಮಗಳೆಲ್ಲ ಕೇವಲ ದುರಾಡಳಿತ, ನಷ್ಟ, ಭ್ರಷ್ಟಾಚಾರ ಮುಂತಾದ ಅವ್ಯವಹಾರಗಳ ಕೇಂದ್ರಗಳಾಗಿ ಪರಿಣಮಿಸುತ್ತವೆ.

ನಿರುದ್ಯೋಗ ಸಮಸ್ಯೆ

ಗ್ರಾಮೂಣ ಪ್ರದೇಶಗಳಲ್ಲಿ ನಿರುದ್ಯೋಗ ಮತ್ತು ಅರೆ ಉದ್ಯೋಗ ಗಣನೀಯ ಪ್ರಮಾಣದಲ್ಲಿ ಆವರಿಸಿಕೊಂಡಿದ್ದು ಜನಜೀವನ ಮಟ್ಟ ನಿಕೃಷ್ಟ ಸ್ಥಿತಿಯಲ್ಲಿರುವುದಕ್ಕೆ ಕಾರಣವಾಗಿದೆ. ನಗರ ಪ್ರದೇಶಗಳಲ್ಲಿ ಅತೀವವಾಗಿ ನಿರುದ್ಯೋಗ ಸಮಸ್ಯೆಯು ಭಯಾನಕವಾಗಿ ಆವರಿಸಿದೆ. ಇಪ್ಪತ್ತು ವರ್ಷಗಳ ಸುದೀರ್ಘವಾದ ಯೋಜಿತ ಪ್ರಯತ್ನಗಳ ಮೂಲಕವೂ ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ಮೂಲೆ ಪಾಲಾಗಿಸಲು ಸಾಧ್ಯವಾಗಿಲ್ಲ ವೆಂದಾದ ಮೇಲೆ ಈ ಸಮಸ್ಯೆಯ ಭೂತಾಕಾರವನ್ನು ನಾವು ಊಹಿಸಿಕೊಳ್ಳಬಹುದು.; ವಿವಿಧ ಪ್ರದೇಶಗಳ ಅವಶ್ಯಕತೆಗಳನ್ನು ಹಾಗೂ ಸಂಪನ್ಮೂಲಗಳನ್ನು ಅಂದಾಜು ಮೂಡಲು ಮತ್ತು ಅಭಿವೃದ್ಧಿ ಯೋಜನೆಗಳನ್ನು ತಯೂರಿಸಲು ಸ್ವತಂತ್ರ ಆಯೋಗಗಳನ್ನು ರಚಿಸಿ ತನ್ಮೂಲಕ ಸ್ಥಾನಿಕ ಸಂಪನ್ಮೂಲಗಳನ್ನು ಉಪಯೋಗಿಸುವ ಪ್ರಯತ್ನ ಮೂಡಿದರೆ ಈ ನಿರುದ್ಯೋಗವನ್ನು ನಿವಾರಣೆ ಮೂಡಬಹುದು. ಸಂಪನ್ಮೂಲಗಳ ಯೋಗ್ಯ ವಿತರಣೆ, ಸಮಾನ ಉದ್ಯಮಾಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಗಳಿಗಾಗಿ ದೇಶದಲ್ಲಿ ರಾಷ್ಟ್ರಮಟ್ಟದ ಹಾಗೂ ಜಿಲ್ಲಾ ಮಟ್ಟದ ಯೋಜನೆಗಳಿರುವುದು ಅಗತ್ಯ. ಇದರಿಂದಾಗಿ ಭಯಾನಕವಾಗಿ ವ್ಯಾಪಿಸಿರುವ ನಿರುದ್ಯೋಗ ನಿವಾರಣೆ ಆಗಲು ಸಾಧ್ಯ.

ಕಾರ್ಮಿಕರ ಗೊಂದಲ

ಕಾರ್ಮಿಕ ಸಂಘಗಳ ಕಾರ್ಯಾಚರಣೆಗಳೂ ಔದ್ಯಮಿಕ ಪ್ರಗತಿಗೆ ಪ್ರತಿಬಂಧಕಗಳಾಗಿ ಹರಡಿವೆ. ಕಾರ್ಮಿಕರು ಮೂಲಿಕರಿಗೆ ಅಪ್ಪಣೆಗಳನ್ನು ಕೊಡುವಷ್ಟರ ಮಟ್ಟಿಗೆ ಪ್ರಬಲರಾಗಿದ್ದಾರೆ ಸ್ಟೈಕ್ಗಳು ಮತ್ತು ಲೋಕ್ ಔಟುಗಳಿಂದಾಗಿ ಔದ್ಯಮಿಕ ಉತ್ಪಾದನೆ ಸ್ಥಗಿತಗೊಳ್ಳುತ್ತಿದೆ ಔದ್ಯೋಗಿಕ ಕೌಶಲ್ಯ ಹೆಚ್ಚುತ್ತಿದ್ದರೂ ಚಳುವಳಿಯು ಮೂಲಕ ಉತ್ಪಾದನಾ ಕ್ಷಮತೆ ಕುಗ್ಗುತ್ತಿದೆ.

ಅನುತ್ಪಾದಕ ವ್ಯಯ

ಸರಕಾರ ಅನುತ್ಪಾದಕ ಕಾರ್ಯಗಳಿಗೆ ವ್ಯಯವನ್ನು ಹೆಚ್ಚುಗೊಳಿಸುತ್ತಿದೆ. ಸರಕಾರಿ ಕಾರ್ಮಿಕರಿಗೆ ಮತ್ತು ನಿವೃತ್ತ ಉದ್ಯೋಗಿಗಳಿಗೆ ವೇತನ ಎಷ್ಟು ಹೆಚ್ಚು ಕೊಟ್ಟರೂ ತೃಪ್ತಿ ಇಲ್ಲ ಸರಕಾರಿ ಸಂಸ್ಥೆಗಳಲ್ಲಿ ಕಾರ್ಮಿಕ ಗೊಂದಲಗಳೂ ಸರ್ವಸಾಮಾನ್ಯ. ಅವರ ಬೇಡಿಕೆಗಳನ್ನು ವಿಧಿಪೂರ್ವಕ ಮಾನ್ಯತೆ ನೀಡಿ ವೇತನಗಳನ್ನು ಪ್ರತಿವರ್ಷವೂ ವಿವೇಚನಾರಹಿತವಾಗಿ ಹೆಚ್ಚುಗೊಳಿಸುತ್ತದೆ. ಇದರಿಂದಾಗಿ ಅನುತ್ಪಾದಕ ವ್ಯಯ ಹೆಚ್ಚಾಗಿ ವಸ್ತುಗಳ ಬೆಲೆ ಏರುವುದು. ಇದರಿಂದ ಬಡವನ ಒಡಲಿಗೆ ಹೊಡೆತ.

ಕೊನೆಯ ಮಾತು

ಅನೇಕ ವೇಳೆ ಯೋಜನಾ ವೈಫಲ್ಯಗಳೆಲ್ಲಾ ಪರಿಸರದ ಪ್ರತ್ಯತ್ಪನ್ನಗಳಾಗಿವೆ. ನಮ್ಮ ಸಾಮಾಜಿಕ ಮತ್ತು ರಾಜಕೀಯ ವಾತಾವರಣಗಳು ಆರ್ಥಿಕ ಪ್ರಗತಿಯನ್ನು ಹೆಚ್ಚಿಸುವುದಕ್ಕೆ ಅನೇಕ ಪ್ರತಿಬಂಧಕಗಳನ್ನೊಡ್ಡುತ್ತವೆ. ಅಲ್ಲದೆ ಹೊಸ ವಾತಾವರಣಕ್ಕೆ 'ಹೊಂದಿಕೊಳ್ಳಲು ಹಿಂಜರಿಯುತ್ತವೆ. ಆದರೆ ದೇಶದಲ್ಲಿ ಆರ್ಥಿಕ ಪ್ರಗತಿ ಸಂಭವಿಸ ಬೇಕಾದರೆ ಇನ್ನೂ ಸಾಹಸದ ಧ್ಯೇಯ ಧೋರಣೆಗಳನ್ನು ಇಟ್ಟುಕೊಂಡು ಆರ್ಯಗತ ಗೊಳಿಸಬೇಕಾಗಿದೆ. ಏರುತ್ತಿರುವ ಜನಸಂಖ್ಯೆಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸಬೇಕಲ್ಲದೆ ಹೊಸವಾಗಿ ಶ್ರಮ ಮೂರುಕಟ್ಟೆಗೆ ಬರುವ ಪ್ರವೇಶಿಕರಿಗೆ ಉದ್ಯೋಗಾವಕಾಶಗಳನ್ನೊದಗಿಸುವುದೂ ಆವಶ್ಯವಾಗಿದೆ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವಿದ್ಯಾಶಾಲಾ (ಪೇಟೆಂಟ್) ಲಿಮಿಟೆಡ್,
ವಲ್ಲಭಪುರಿ
ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಭ್ಯರ್ಥಿಗಳಿಂದ ಪ್ರಮಾಣ ವಚನ ಸಾಧ್ಯವೆ?

ಚುನಾವಣೆ ಬಂದಿತೆಂದರೆ ನಾಯಕರ ಸಂಖ್ಯೆ ಬೆಳೆಯುತ್ತದೆ. ರಾಜ್ಯಕೀಯ ಚಟುವಟಿಕೆಗಳಿಗೆ ಹೊಸತೊಂದು ತಿರುವು ಬರುತ್ತದೆ.

ವಿವಿಧ ರಾಜ್ಯಕೀಯ ಪಕ್ಷಗಳೂ ಪಕ್ಷೇತರ ಅಭ್ಯರ್ಥಿಗಳೂ ನಾನಾತರದ ಭರವಸೆಗಳನ್ನು ಜನತೆಗೆ ನೀಡುತ್ತಾರೆ. ಚುನಾವಣೆ ಮುಗಿದ ಮೇಲೆ ಗೆದ್ದವರಾಗಲೀ ಸೋತವರಾಗಲೀ ಶ್ರೀ ಸಾಮಾನ್ಯನನ್ನು ನೆನಪಿಸಬೇಕಾದರೆ ಮತ್ತೊಂದು ಚುನಾವಣೆ ಬರಬೇಕು.

ಭಾರತದ ಶ್ರೀ ಸಾಮಾನ್ಯರಲ್ಲಿ ಅಧಿಕ ಸಂಖ್ಯಾಕರು ನಿರಕ್ಷರರು. ಮತದ ಪೌಲ್ಯ ಮತ್ತದರ ಪರಿಣಾಮಗಳ ಬಗ್ಗೆ ಅನಭಿಜ್ಞರು. ವಿದೇಶೀ ಮಿಶನರಿಗಳು ನಾನಾ ತೆರನ ಆಸೆ-ಆಮಿಷಗಳನ್ನು ತೋರಿಸಿ ಮತಾಂತರಕ್ಕೆ ಪ್ರಯತ್ನಿಸುತ್ತಿದ್ದಂತೆ ರಾಜ್ಯಕೀಯ ನೇತಾರರು ವಿವಿಧ ಭರವಸೆಗಳನ್ನು ನೀಡಿ ಮತಗಟ್ಟಿಸಿ ಅನಂತರ ಮತದಾರರನ್ನು ಅವರ ಗೊಡವೆಗೇ ಬಿಟ್ಟು ಬಿಡುವುದು ಈ ಇಪ್ಪತ್ತು ವರ್ಷಗಳಲ್ಲಿ ಸರ್ವೇಸಾಮಾನ್ಯ. ಇವಕ್ಕೆ ಕೆಲವೊಂದು ಅಪವಾದ ವಿದ್ದರೂ ಅದು ಅಗಣ್ಯ.

ಅದಕ್ಕಿಂದಲೇ ಬೆಂಗಳೂರಿನ ಮತದಾರೊಬ್ಬರು ಮತ ಚೀಟಿಯನ್ನಿಂದ ಪ್ರಮಾಣ ಸಹಿತ ಬೇಕೆಂದು ಬಯಸಿದ್ದಾರೆ. ಈ ಮತದಾರರ ಹೆಸರು ಶ್ರೀ ಡಿ. ಆರ್. ಕೃಷ್ಣಮೂರ್ತಿ. ಚುನಾವಣಾ ಪ್ರಣಾಳಿಕೆ ನುಂಚಿಯೇ ಇದು ಮತದಾರರ ವ್ರಣಾಳಿಕೆ.

ಒಂದು ಕಿನ್ನ ಕಾರ್ಯಕ್ರಮಕ್ಕೆ ಅಭ್ಯರ್ಥಿಯು ಲಿಪಿತ ಒಪ್ಪಿಗೆ ನೀಡುವಂತೆ ಮಾಡುವುದು ಇವರ ಮುಖ್ಯ ಗುರಿ.

ಅಭ್ಯರ್ಥಿಯೊಂದು ಪ್ರಮಾಣ ಪತ್ರಕ್ಕೆ ಸಹಿ ಹಾಕ ಬೇಕು. ಈ ಪ್ರಮಾಣ ಪತ್ರದಲ್ಲಿ ಅತನು ತನ್ನ ಅದಾಯ, ಅದಾಯ ತೆರಿಗೆ, ಸ್ಥಿರ-ಚರ ಆಸ್ತಿಗಳ ನಿಪರ-ಇವರಲ್ಲಿ ಮಗ, ಮಗಳು, ತಂದೆ, ತಾಯಿ, ಸೊಸೆ, ಅಣ್ಣಿ, ತಮ್ಮ, ಅಕ್ಕ, ತಂಗಿ ಹೀಗೆ ಎಲ್ಲರೂ ಸೇರುತ್ತಾರೆ,-ಬಾಂಗ್ಲಾ ನಿಧಿಗೆ ನೀಡಿದ ನೆರವಿನ ಸೊತ್ತ ಮೊದಲಾದುವುಗಳ ಉಲ್ಲೇಖವಿರಬೇಕು.

ಅಭ್ಯರ್ಥಿಯು ಓಟು ಪಡೆಯುವುದಕ್ಕೆ ಮೊದಲು ಕೆಲವೊಂದು ಸಂಗತಿಗಳಿಗೆ ತನ್ನ ಒಪ್ಪಿಗೆಯನ್ನು ಅನಿವಾರ್ಯವಾಗಿ ನೀಡ ಬೇಕು.

'ಬಡತನವನ್ನು ದೂರವೋಡಿಸಿ' ಎಂಬ ತತ್ವವಹನ್ನು ಒಪ್ಪಿದ ಮೇಲೆ ಸಾಮಿತರೂ. ೫೦೦ಕ್ಕಿಂತ ಹೆಚ್ಚು ವೇತನ ಪಡೆಯುವ ಹಕ್ಕನ್ನು ಕಳೆದುಕೊಳ್ಳ ಬೇಕು ಹೆಚ್ಚಿನ ಹಣ ಬಂದರೆ ಅದನ್ನು ನಿರಾಕರಿಸಬೇಕು. ಉಚಿತ ಪ್ರಯಾಣದ ಸೌಲಭ್ಯಗಳನ್ನು ಪಡೆಯಬಾರದು.

ಸಂಪುಟದ ಮಂತ್ರಿಗಳ ಸಂಖ್ಯೆ ಯಾವುದೇ ಸಂದರ್ಭದಲ್ಲಿ ಇಪ್ಪತ್ತನ್ನು ಮೀರಬಾರದು. ಮಂತ್ರಿಗಳ ವೇತನ, ಸಾರಿಗೆ, ಭತ್ತೆಯೆಲ್ಲ ಒಟ್ಟು ಸೇರಿ ಮಾಸಿಕ ಒಂದೂವರೆ ಸಾವಿರ ರೂಪಾಯಿಗಳಿಗೆ ಹೆಚ್ಚಬಾರದು.

ಇನಕ್ಕೆ ಅನುಗುಣವಾದ ಶಾಸನವನ್ನು ತರಲು ಬೆಂಬಲ ನೀಡಬೇಕು.

ಪಕ್ಷಾಂತರವನ್ನು ನೂಡಬಾರದು. ಈ ಅಂಶಗಳನ್ನು ಉಲ್ಲಂಘಿಸಿದರೆ, ಅವನ ಮೇಲೆ ನ್ಯಾಯಾಲಯವನ್ನಲ್ಲಿ ಮೊಕದ್ದಮೆ ಹೂಡ ಬಹುದು.

ಶ್ರೀ ಕೃಷ್ಣಮೂರ್ತಿಯವರು ಯಾವುದೇ ರಾಜ್ಯಕೀಯ ಪಕ್ಷ ಸೇರಿದವರಲ್ಲ. ಅವರು ಅಭ್ಯರ್ಥಿಗಳು ಮತಯಾಚನೆಗೆ ಬಂದಾಗ, ಅವರು ರಾಜ್ಯಕೀಯ ಪಕ್ಷಕ್ಕೆ ಸೇರಿದವರಾಗಿರಲಿ, ಪಕ್ಷೇತರರೇ ಇರಲಿ, ಈ ರೀತಿಯ ವಾಗ್ದಾನ ಪಡೆದುಕೊಳ್ಳುವಂತೆ ಮತದಾರರಿಗೆ ವಿನಂತಿಸಿದ್ದಾರೆ.

ಇಂತಹ ಪ್ರಮಾಣಕ್ಕೆ ಶ್ರೀ ಕೃಷ್ಣಮೂರ್ತಿಯವರು ಬಲವಾದ ಕಾರಣಗಳನ್ನೂ ಕೊಟ್ಟಿದ್ದಾರೆ.

ದೇಶದಲ್ಲಿ ಹಲವು ರೀತಿಯ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಒಮ್ಮೆ ಚುನಾಯಿಸಿದ ಪ್ರತಿನಿಧಿಯನ್ನು ಹಿಂದೆ ಕಳೆದುಕೊಳ್ಳುವ ಅವಕಾಶ ಮತದಾರರಿಗೆ ಇಲ್ಲ. 'ಸಾಮೂಹಿಕ ಜೀವನವೆಂದರೆ ಅಸ್ಪಾಮೂಹಿಕತೆ' ಎಂಬ ತಪ್ಪು ಕಲ್ಪನೆ ಹರಡಿಬಿಟ್ಟಿದೆ. ರಾಜ್ಯಕೀಯದಲ್ಲಿ ಸ್ವಾಮೂಹಿಕತೆಗೆ ಅವಕಾಶ ಬೆಲೆಯೂ ಉಳಿದಿಲ್ಲ.

ಶಾಸಕತನ ಮತ್ತು ಮಂತ್ರಿ ಪದಗಳ ಆಕರ್ಷಣೆ ಹದ ಮೀರಿದೆ. ಅವು ಸೇವಾ ಸ್ಥಾನಗಳೆಂಬ ಭಾವನೆ ಗಾಳಿಯಲ್ಲಿ ಹಾರಿ ಹೋಗಿ ವೈಭವನ—ವಿಲಾಸಗಳ ಸಾಧನವೆಂಬ ಕಲ್ಪನೆ ಮೂಡಿದೆ.

ಸರಕಾರದ ವರಮಾನದ ಸಿಂಹಪಾಲು ಸಿಬ್ಬಂದಿಗೇ ವೆಚ್ಚವಾಗಿ ಶ್ರೀ ಸಾಮಾನ್ಯನ ಸ್ಪಗತಿಗೆ ಹಣವೇ ದೊರೆಯುತ್ತಿಲ್ಲ. ಒಬ್ಬೊಬ್ಬ ಮಂತ್ರಿಯ ವೆಚ್ಚ ಪ್ರತಿ ತಿಂಗಳೂ ಇಪ್ಪತ್ತು ಸಾವಿರವನ್ನೂ ಮೀರುತ್ತಿದೆ. ತೆರಿಗೆಗಳ ವಸೂಲಿ ಸರಿಯಾಗಿ ನಡೆಯುತ್ತಿಲ್ಲ. ಶ್ರೀಮಂತರಿಗಿಂತ ಬಡವರ ಮೇಲೆಯೇ ಅಧಿಕ ತೆರಿಗೆಯ ಭಾರವಿದೆ. ಭಾರತದ ಶ್ರೀ ಸಾಮಾನ್ಯನ ಸರಾಸರಿ ಗಳಿಕೆ ದಿನಕ್ಕೆ ಎಸ್ಪತ್ತು ಪೈಸೆ. ಅಂದರೆ, ಬಡವರ, ದರಿದ್ರರ ಸಂಖ್ಯೆ ಎಷ್ಟು ಎಂಬುದು ಅನುಮಾನಿತ.

ರಾಜ್ಯಕೀಯದಲ್ಲಿ ಅಸ್ಥಿರತೆಯಿದೆ. ಒಂದಾಗಿದ್ದ ಕಾಂಗ್ರೆಸ್ಸು ತುಕುಡಿಗಳಾಯಿತು. ಬಹು ಮಂದಿ ಒಂದೆಡೆಗೆ ನಿಂದು ತಮ್ಮ ಪಾಳಯವನ್ನು ಬಲಗೊಳಿಸಿದಾಗ, ಇತರ ರಾಜ್ಯಕೀಯ ಪಕ್ಷಗಳೆಲ್ಲ ಅತ್ಯಂತ ದುರ್ಬಲವಾದಾಗ ಈ ಚುನಾವಣೆಗಳು ನಡೆಯುತ್ತಿವೆ. ಗರೀಬೀ ಹಟಾವೊ "ಇಂದಿರಾ ಗಾಳಿ" ಅಥವಾ 'ಪಾಕ್ ವಿಜಯ'ಗಳ ಘೋಷಣೆ ಮಾಡಿ ನಾನಾ ರೀತಿಯ ಆಸೆ ಆಮಿಷಗಳೆ ಮದೋದಕವನ್ನು ಮತದಾರರಿಗೆ ಕುಡಿಸಿ ಮತಗಳಿಸುವ ಪ್ರಯತ್ನ ನಡೆಯುತ್ತಿದೆ.

ಆದುದರಿಂದ ಮತದಾರರು ಅಭ್ಯರ್ಥಿಯಿಂದ—ಅವರು ಯಾರೇ ಆಗಿರಲಿ-ಈ ಮೇಲಿನಂತೆ ವಚನ ತೆಗೆದುಕೊಂಡ- ತಮ್ಮ ಮತವನ್ನು ಚಲಾಯಿಸಬೇಕು ಇಲ್ಲವಾದರೆ, ಹಿಂದಿನಂತೆಯೇ ಮತದಾರರನ್ನು ಗೆದ್ದ ಮೇಲೆ ಮರೆತು ಬಿಡುವ ಶಾಸಕರು ತಮ್ಮ ಸ್ವಾರ್ಥ ಸಾಧನೆಯಲ್ಲಿ ತೊಡಗುತ್ತಾರೆ.

ಶ್ರೀ ಕೃಷ್ಣ ಮೂರ್ತಿಯವರ ವಿಚಾರ ಧಾರೆಯಲ್ಲಿ ತಿರುಳಿದೆ. ಆದರೆ, ಈ ಬಗೆಯ ಪ್ರಮಾಣ ಪತ್ರಕ್ಕೆ ಸಹಿ ಹಾಕಿ ತಮ್ಮ ಕಾಲುಗಳ ಮೇಲೆ ಕೊಡಲಿ ಹಾಕಿಕೊಳ್ಳಲು ಅದೆಷ್ಟು ಅಭ್ಯರ್ಥಿಗಳು (ಗೆಲ್ಲುವ ಅಕಯ ವಿದ್ದವರು) ಸಿದ್ಧರು?

ಚುನಾವಣಾ ಶಾಸನದಲ್ಲಿಯೇ ಈ ಅಂಶಗಳನ್ನು ಸೇರಿಸುವುದು ಸಾಧ್ಯವಾದರೆ ಸಮಂಜಸವಾದೀತೋ ಏನೋ!

●●

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
142 ಶಾಖೆಗಳಿಂದ ಹಬ್ಬರುವ **"ವಿಜಯಾ ಬ್ಯಾಂಕ್"**ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೇರ್‌ಮೆನ್.

ಮಾವು - ಹಣ್ಣುಗಳ ರಾಜ

ಲೇಖಕರು: ಶ್ರೀ ಬಿ. ವಿ. ನಾಯಕ್

"ಹಣ್ಣುಗಳ ರಾಜ" ಎಂದು ಪ್ರಖ್ಯಾತ ಗೊಂಡಿರುವ ಮಾವು, ಏಶ್ಯಾದ ದಕ್ಷಿಣ-ಪೂರ್ವ ಭಾಗಗಳಲ್ಲಿ ಕಂಡು ಬರುತ್ತದೆ. ಭಾರತದಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಲೂ ಮಾವನ್ನು ಬೆಳೆಸುತ್ತಿದ್ದಾರೆ. ಯಾವಾಗಲೂ ಹಸುರು ಬಣ್ಣದಿಂದ ಕಂಗೊಳಿಸುವ ಮಾವಿನ ಮರಗಳು ಭಾರತದ ಕೃಷಿ ಭೂಮಿಯಲ್ಲಿ ಉತ್ತಮ ಸ್ಥಾನವನ್ನು ಪಡೆದುಕೊಂಡಿವೆ.

ನಮ್ಮ ದೇಶದಲ್ಲಿ ಸುಮಾರು ಮೂವತ್ತಕ್ಕೆಂತಲೂ ಹೆಚ್ಚು ಜಾತಿಯ ಮಾವಿನ ಮರಗಳನ್ನು ಕಾಣಬಹುದು. ಲಾಂಗ್ರಾ, ಮಲ್ ಗೋವಾ, ಪೈರಿ, ರಸಪೂರಿ, ಆಲ್‌ಫೊನ್ಸೊ- ಇವು ಹೆಚ್ಚು ಜನಪ್ರಿಯತೆ ಗಳಿಸಿರುವ ವಿವಿಧ ಜಾತಿಯ ಮಾವುಗಳು. ಮಧುರವಾದ, ಸಿಹಿಯೂದ ರುಚಿಯುಳ್ಳ ರಸಭರಿತ ಹಣ್ಣುಗಳಲ್ಲಿ ಮಾವು ನೊದಲ ನೆಯದಾಗಿದೆ. ಭಾರತದಿಂದ ಪ್ರತಿವರ್ಷವೂ ಮಾವನ್ನು ದೊಡ್ಡ ಪ್ರಮಾಣದಲ್ಲಿ ಪರದೇಶಗಳಿಗೆ ಕಳುಹಿಸುತ್ತಾರೆ.

100 ಗ್ರಾಂ ತೂಕದ ಬಲಿತ ಅಲ್‌ಫೊನ್ಸೊ ಮಾವು ಕಳಿಗಿನ ಪೋಷಕಾಂಶಗಳನ್ನು ಒಳಗೊಂಡಿವೆ.

ನೀರು	81.6 ಗ್ರಾಂ
ಪ್ರೋಟೀನ್	0.9 ಗ್ರಾಂ
ಕೊಬ್ಬು	0.4 ಗ್ರಾಂ
ಕಾರ್ಬೋಹೈಡ್ರೇಟ್	16.3 ಗ್ರಾಂ
ಕೆಲ್ಸಿಯಂ	40 0 ಮಿ. ಗ್ರಾಂ.
ರಂಜಕ	16.0 ಮಿ. ಗ್ರಾಂ.
ಕಬ್ಬಿಣ	1.6 ಮಿ. ಗ್ರಾಂ.
ಪೊಟೆಸಿಯಂ	200.0 ಮಿ. ಗ್ರಾಂ.
ಸೋಡಿಯಂ	9.0 ಮಿ. ಗ್ರಾಂ.
ವಿಟಾಮಿನ್ 'A'	20,000 ಐ. ಯು.
ವಿಟಾಮಿನ್ B1	0.08 ಮಿ. ಗ್ರಾಂ.
ವಿಟಾಮಿನ್ B2	0.09 ಮಿ. ಗ್ರಾಂ.
ನಿಯಾಸಿನ್	4.1 ಮಿ. ಗ್ರಾಂ.
ವಿಟಾಮಿನ್ C	125.0 ಮಿ. ಗ್ರಾಂ.
ಕ್ಯಾಲೋರಿಗಳು	50

ಈ ಪೋಷಕಾಂಶಗಳ ಪ್ರಮಾಣ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಬೇರೆಯಾಗಿರುತ್ತದೆ.

'ಎ' ಜೀವಸತ್ವ ಹೆಚ್ಚಾಗಿರುವ ಹಣ್ಣುಗಳಲ್ಲಿ ಮಾವು ಮುಖ್ಯವಾಗಿದೆ. 'ಎ' ಜೀವಸತ್ವದಲ್ಲಿ ವಿಪುಲವಾಗಿರು 'ಕಾವರೋಟೆನ್' ಎಂಬ ಪದಾರ್ಥದಿಂದಲೇ ಬಲಿತ ಮಾವಿನ ಹಣ್ಣಿಗೆ ಕಡು ಹಳದಿ ಮಿಶ್ರಿತ ಕಂದು ಬಣ್ಣ ಬಂದಿರುತ್ತದೆ. ಈ ಜೀವಸತ್ವದ ಪೂರೈಕೆಯಿಂದ ಚರ್ಮದ ಆರೋಗ್ಯ ಮತ್ತು ಕಾಂತಿ ಚೆನ್ನಾಗಿರುತ್ತದಲ್ಲದೆ, ಕಣ್ಣಿನ ದೃಷ್ಟಿಗೂ ಇದು ಅಗತ್ಯ. 'ಎ' ಜೀವಸತ್ವದ ಕೊರತೆಯಿಂದ ಕೇವಲ ಚರ್ಮದ ಆರೋಗ್ಯ ಮಾತ್ರವಲ್ಲದೆ, ದೇಹದ ಆರೋಗ್ಯವೂ ಕೆಡುವ ಸಂಭವವಿರುತ್ತದೆ. ಮಕ್ಕಳ ಆಹಾರದಲ್ಲಿ 'ಎ' ಜೀವಸತ್ವದ ಕೊರತೆಯಿದ್ದರೆ ಅದು ಅವರ ಬೆಳವಣಿಗೆಯ ಮೇಲೂ ಕೆಟ್ಟ ಪರಿಣಾಮ ಬೀರಿ, ಬೆಳವಣಿಗೆಯನ್ನು ಮುಂದಗತಿಯಲ್ಲಿ ಸಾಗಿಸುತ್ತದೆ.

ಮಾವು ಮಲಬದ್ಧತೆಯನ್ನು ನಿವಾರಿಸು

ಕರ್ನಾಟಕದಲ್ಲಿ—

ಕಾಂಗ್ರೆಸ್ ತುಕುಡಿಗಳ ನಡುವೆ

ವೀರ ಸ್ಪರ್ಧೆ

ಕರ್ನಾಟಕದ ಚುನಾವಣೆಗಳಲ್ಲಿ ತೀವ್ರ ಪೈಪೋಟಿ ಇಂಡಿಕೇಟ್ ಮತ್ತು ಸಿಂಡಿಕೇಟ್‌ಗಳ ನಡುವೆ. ಕೆಲವೆಡೆ ಇಂಡಿಕೇಟ್–ಜನಸಂಘ ಅಥವಾ ಪಕ್ಷಾತೀತರ ನಡುವೆ ತೀವ್ರ ಸ್ಪರ್ಧೆಯಿರಬಹುದು.

ಒಂದು ವರ್ಷದ ಮೊದಲಿನವರೆಗೆ ಬಂಡೆಕಲ್ಲಿನಂತೆ ಸ್ಥಿರವಾಗಿದ್ದ, 'ಇಂದಿರಾಗಾಳಿ'ಯಿಂದಾಗಿ ಆಕಸ್ಮಿಕವಾಗಿ ಉರುಳಿಹೋದ ತಮ್ಮ ಅಧಿಕಾರವನ್ನು ಮರಳಿ ಪಡೆಯುವುದೇ ಸಿಂಡಿಕೇಟಿನ ಆಶಯ.

ಕಳೆದ ವರ್ಷ ವಿರೋಧಿ ಪಕ್ಷಗಳನ್ನು ತರಗೆಲೆಯಂತೆ ಹಾರಿಸಿದ ಅಮರ ಕೀರ್ತಿಯನ್ನು ಉಳಿಸಿಕೊಳ್ಳಬೇಕೆಂದು ಇಂಡಿಕೇಟಿನ ಪಟ್ಟು.

ಇಬ್ಬರೂ ಸರಿಯೇ. ಆದುದರಿಂದಲೇ ಮೊರಾರ್ಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರೂ ಮೂಜಿ ಮಂತ್ರಿ ರಾಮಕೃಷ್ಣ ಹೆಗ್ಗಡೆಯವರೂ ಚುನಾವಣಾ ಪ್ರಚಾರಕ್ಕಾಗಿ ರಾಜ್ಯ ತುಂಬ ತಿರುಗಾಡುತಿದ್ದಾರೆ; ಇವರು ಅಭ್ಯರ್ಥಿಸೇನೆಯಲ್ಲಿ ಸೇರಿಲ್ಲ.

ದೇವರಾಜ ಅರಸರೂ ಕಡಿಮೆಯಲ್ಲ. ಹಲವು ಮತದಾರರ ಮನಸ್ಸೋಯಿಸಿಯೇ ಅವರು ಪೂರ್ಣಾವಧಿಯ ಪ್ರಚಾರಕ್ಕೆ ಇಳಿದಿದ್ದಾರೆ. ಭಾರಕ ಮಟ್ಟದ ಚುನಾವಣಾ ಪ್ರಣಾಳಿಕೆಗೆ ತಮ್ಮ ಪೂರಕ ಆಶ್ವಾಸನೆಗಳನ್ನೂ ಸೇರಿಸಿಕೊಂಡಿದ್ದಾರೆ.

ರಾಜ್ಯದ ನೆಲ—ಜಲ ವಿವಾದದ ಬಗ್ಗೆ ಕಳೆದ ವರ್ಷ ಸಿಂಡಿಕೇಟು ಭಾರೀ ಹೇಳಿಕೊಂಡಿತ್ತು. ಈ ವರ್ಷವೂ ಹೇಳಿಕೊಳ್ಳುತ್ತದೆ. ಈ ಬಾರಿ ರಾಜ್ಯ ಸಮಸ್ಯೆಗಳೇ ಪ್ರಮುಖ ಪಾತ್ರ ವಹಿಸಲಿರುವುದರಿಂದ ಅವುಗಳ ಬಗ್ಗೆ ಪೂರಕ ಭರವಸೆ ನೀಡುವುದು ಇಂಡಿಕೇಟಿಗೆ ಅಗತ್ಯವಾಯ್ತು.

ನೆಲದ ವಿಷಯದಲ್ಲಿ ಮಹಾಜನ ವರದಿಯನ್ನು ಇದ್ದಕ್ಕಿದಂತೆ ಕಾರ್ಯಗತಗೊಳಿಸುವ ಆಶ್ವಾಸನೆಯನ್ನು ಇಂಡಿಕೇಟು ನೀಡಿದೆ. ಸಿಂಡಿಕೇಟು ಎಂದಿನಿಂದಲೂ ಇದನ್ನೇ ಹೇಳಿಕೊಂಡು ಬಂದಿದೆ.

ಮರಾಠರ ನೆಲದಾಹವನ್ನು ಆರಿತೂ ಆರಿತೂ ಇಂಡಿಕೇಟು ಈ ಬಗ್ಗೆ ಸ್ವಲ್ಪ ಭರವಸೆ ನೀಡಿದ್ದು ವಿಲಕ್ಷಣ. ಮಹಾಜನವರದಿ ತಿಪ್ಪೆಗೆ ಸೇರಿದಂತೆಯೆಂಬುದು ಎಲ್ಲರಿಗೂ ಗೊತ್ತು. ಯಥಾಸ್ಥಿತಿಯೊದರೂ ಉಳಿಯಲಿ ಎಂಬುದು ಕನ್ನಡಿಗರ ಇಚ್ಛೆ.

ಜಲ ವಿವಾದವನ್ನು ಸರ್ವಸಮ್ಮತವಾಗಿ ಬಗೆ ಹರಿಸುವ ಇರಾದೆ ಇಂಡಿಕೇಟಿನದ್ದು. ಇದು ಹೇಗೆ ಸಾಧ್ಯವೆಂಬುದು ದೇವ ರಾಜ ಅರಸರಿಗೇ ಗೊತ್ತು. ರಾಜ್ಯಕ್ಕೆ ಕಾವೇರಿ ನೀರಿನಲ್ಲಿ ನ್ಯಾಯವಾದ ಪಾಲು ಬೇಕೆಂಬುದು ಸಿಂಡಿಕೇಟಿನ ಹಳೆಯ ನೀತಿ.

ಎರಡೂ ತುಕುಡಿಗಳು ತಂತಮ್ಮ ಪಕ್ಷಗಳ ಪ್ರಮುಖರನ್ನು ಪ್ರಚಾರಕಾರ್ಯಕ್ಕೆ ಕರೆದುಕೊಳ್ಳತೊಡಗಿವೆ. ಈ ಪ್ರಮುಖರಲ್ಲಿ ಇಬ್ಬಗೆ. ಇಂಡಿಕೇಟಿಗರು ಹಾಲಿಗಳು, ಸಿಂಡಿಕೇಟಿಗರು ಮಾಜಿಗಳು.

ಮಾಜಿ ಉಪ ಪ್ರಧಾನಿ ಮುರಾರ್ಜಿ ದೇಸಾಯಿಯವರು ಉತ್ತರ ಕರ್ನಾಟಕದ ಸಂಚಾರ ಮಾಡಿ ಹೋದರು. ಶ್ರೀಮತಿ ಗಾಂಧಿಯವರಿಂದ ಅಪಮಾನಿತರಾಗಿದ್ದ ಶ್ರೀ ದೇಸಾಯಿಯವರು ರಾಜ್ಯದ ರಾಜ್ಯಕೀಯವನ್ನು ವಿವರಿಸಿದರು.

ಒಕ್ಕಲಿಗರನ್ನು ಲಿಂಗಾಯತರ ವಿರುದ್ಧ ಮತ್ತು ಅಲ್ಪ ಸಂಖ್ಯಾಕರನ್ನು ಬಹು ಸಂಖ್ಯಾಕರ ವಿರುದ್ಧ ಇಂಡಿಕೇಟು ಎತ್ತಿ ಕಟ್ಟಿದೆಯೆಂದು ಆರೋಪಿಸಿದರು. 'ಇಂಡಿಕೇಟು ಶ್ರೀಮತಿ ಗಾಂಧಿಯವರ ಕೈಗೊಂಬೆಯಂತೆ ವರ್ತಿಸುತ್ತದೆ. ಮಂತ್ರಿ ಮೂಡುವುದೂ ತೆಗೆಯುವುದೂ ಶ್ರೀಮತಿ ಗಾಂಧಿಯವರ ಲೀಲೆ. ಆಕೆಯ ಸರ್ವಾಧಿಕಾರದಿಂದ ಹಿರಿಯ ನಾಯಕರೂ ಸಚಿವರೂ ಮುಖಭಂಗಿತರಾಗಿದ್ದಾರೆ'— ಇದು ಶ್ರೀ ದೇಸಾಯಿಯವರ ಸ್ವಂತ ಅನುಭವ.

ಪ್ರಜಾಪ್ರಭುತ್ವ ಮತ್ತು ಅಹಿಂಸೆಯಲ್ಲಿ ಸ್ವಲ್ಪವೂ ನಂಬಿಕೆಯಿಲ್ಲದ ಕಮ್ಯುನಿಸ್ಟರೊಡನೆ ಇಂಡಿಕೇಟಿನ ಸ್ನೇಹ ದೇಶಕ್ಕೆ ಅಪಾಯಕಾರಿ ಎಂದು ಸಾರಿ ತನ್ನ ಪಕ್ಷ ಪ್ರಜಾಪ್ರಭುತ್ವವನ್ನು ಉಳಿಸಲು ನಾಗರಿಕರ ಹಿತಾಸಕ್ತಿಗಳನ್ನು ಸಂರಕ್ಷಿಸಲು ಹೋರಾಡುವುದೆಂದು ಆಶ್ವಾಸನೆ ನೀಡಿದರು.

ಗರೀಬೀ ಹಟಾವೊ ಎಂದು ಕೂಗಿದ ಮಾತ್ರಕ್ಕೆ ಬಡತನ ನೀಗದು, ತಿಪ್ಪುಗೇಡಿಗಳಿಂದ ಪರಿಶುದ್ಧ ಆಡಳಿತ ದೊರೆಯದು, ಎಂದು ದೃಢವಾಗಿ ಅವರು ಸಾರಿದರು.

"ಪ್ರಗತಿ ವಿರೋಧಿ ಎಂದು ಶ್ರೀಮತಿ ಗಾಂಧಿಯವರು ಆರೋಪಿಸುವಾಗ, ನಾನು ಮುಂಬಯಿಯ ಮಂತ್ರಿಯಾಗಿದ್ದಾಗ ಭೂ ಸುಧಾರಣಾ ಶಾಸನ, ಹರಿಜನ ಶಾಸನ, ಮೊದಲಾದ ಪ್ರಗತಿಪರ ಶಾಸನಗಳನ್ನು ತಂದಿದ್ದೆನೆಂಬುದನ್ನವರು ಮರೆಯುತ್ತಾರೆ" ಎಂದು ತಾನೂ ಪ್ರಗತಿಪರನೆಂದು ಹೇಳಿಕೊಂಡರು.

ಶ್ರೀ ದೇಸಾಯಿಯವರ ಹಿಂದೆ ಅವರ ಪ್ರಬಲ ವಿರೋಧಿ ಪ್ರಧಾನಿ ಶ್ರೀಮತಿ ಗಾಂಧಿಯವರು ರಾಜ್ಯ ಸಂಚಾರವನ್ನು ಮಿಂಚಿನಂತೆ ಮಾಡಿದರು. ಉತ್ತರ ಕರ್ನಾಟಕದಿಂದ ಆರಂಭವಾದ ಇವರ ಪ್ರಚಾರ ಸಭೆಗಳು ಮಲೆನಾಡು—ಕರಾವಳಿ ಮಾರ್ಗವಾಗಿ ಬಯಲು ಸೀಮೆಯತ್ತ ಸಾಗಿದುವು. (ಉಡುಪಿಯಲ್ಲಿ ಶ್ರೀಮತಿ ಗಾಂಧಿಯವರು ಮಾಡಿದ ಭಾಷಣದ ಸಾರವನ್ನು ಇದೇ ಸಂಚಿಕೆಯ ಬೇರೆ ಪುಟದಲ್ಲಿ ನೀಡಲಾಗಿದೆ.)

ಎಲ್ಲರಿಗೆ ಮೊದಲು ಜನಸಂಘದ ಅಧ್ಯಕ್ಷ ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಪ್ರಚಾರಕ್ಕಾಗಿ ಬಂದಿದ್ದರು. ಇದೀಗ ಸಿಂಡಿಕೇಟಿನ ಅಧ್ಯಕ್ಷ ಸಾದಿಕ್ ಆಲಿ, ಆಗ್ರನಾಯಕ ಕಾಮರಾಜ್ ಮತ್ತು ಶ್ರೀಮತಿ ಸುಚೇತಾ ಕೃಪಲಾನಿಯವರೂ ಬರಲಿವ್ವಾರೆ. ಇಂಡಿಕೇಟಿನ ವತಿಯಿಂದ ಕೇಂದ್ರ ಮಂತ್ರಿ ಮೊಗಧರ ಪಡೆ ವಿಂಥ್ಯೋಲ್ಲಂಘನ ಮಾಡಲಿದೆ.

ಇವೆಲ್ಲರ ನಡುವೆ ದೇವರಾಜ ಅರಸರೂ ವಿರೇಂದ್ರ ಪಾಟೀಲರೂ ತಂತಮ್ಮ ಕರ್ತವ್ಯ ನಿರತರಾಗಿದ್ದಾರೆ. ರಾಜ್ಯದಲ್ಲಿ ಸುಭದ್ರ ಸರಕಾರವಿರಬೇಕೆಂದು ಇವರಿಬ್ಬರೂ ಒಪ್ಪುತ್ತಾರೆ, ಅದು ತಂತಮ್ಮ ಪಕ್ಷದ್ದೇ ಆಗಿರಬೇಕೆಂಬುದು ಅವರವರ ಇರಾದೆ.

ಕೇಂದ್ರದಲ್ಲಿ ಇಂಡಿಕೇಟ್ ಸರಕಾರವಿರುವಾಗ, ಇದರೊಡನೆ ಸಂಪೂರ್ಣ ಹೊಂದಿಕೊಂಡು ಹೋಗಬಲ್ಲ ಪ್ರಗತಿಪರವಾದ ಸರಕಾರ ರಾಜ್ಯದಲ್ಲಿ ಬೇಕು – ಇಂತಹ ಸರಕಾರ ರಚಿಸುವುದು ಇಂಡಿಕೇಟಿಗೆ ಮಾತ್ರ ಸಾಧ್ಯ—ಇದು ದೇವರಾಜರ ಅಭಿಪ್ರಾಯ.

ಕಳೆದ ಮಾರ್ಚಿ ಮಧ್ಯದವರೆಗೆ ರಾಜ್ಯದಲ್ಲಿ ಸಿಂಡಿಕೇಟ್ ಸರಕಾರವಿತ್ತು. ಅದು ರಾಜ್ಯದಲ್ಲಿ ಸುಭದ್ರವೂ ಆಗಿತ್ತು. ಅದನ್ನು ಉರುಳಿಸಿದವರು ಇಂಡಿಕೇಟಿಗರು—ಇದು ವಿರೇಂದ್ರರ ಆರೋಪ.

ಆ ಸರಕಾರ ಕೇಂದ್ರದೊಡನೆ ಪೂರ್ಣ ಮನಸ್ಸಿನಿಂದ ಸಹಕರಿಸಿತ್ತು; ಅದರೊಡನೆ ಜಗಳವಾದದ್ದುಂಟೆ?—ಎಂದು ಪ್ರಶ್ನಿಸುತ್ತಾರೆ ಪಾಟೀಲರು.

ಆ ಸರಕಾರ ಒಂದಲ್ಲ ನೂರು ಪ್ರಗತಿಪರ ಶಾಸನಗಳನ್ನು ತಂದಿದ್ದಿಲ್ಲವೆ? ತನ್ನ ವಿರೋಧಿಗಳಿಂದಲೂ 'ಪ್ರಗತಿಪರ' ವೆಂಬ ಪ್ರಶಂಸೆಯನ್ನು ಅದು ಪಡೆದಿದ್ದಿಲ್ಲವೆ?—ಎನ್ನುವ ಸವಾಲು ಹಾಕುತ್ತಾರೆ ಅವರು.

ಸಮರ್ಥ, ದಕ್ಷ, ಪ್ರಾಮಾಣಿಕ, ಸೇವಾಕಾಂಕ್ಷಿ, ಪ್ರಗತಿಪರ, ಸಮಾಜವಾದಿ—ಹೀಗೆ ಒಂದಲ್ಲ ಹಲವು ವಿಶೇಷಣಗಳಿಗೆ ಅರ್ಹವಾದ ಸಿಂಡಿಕೇಟ್ ಸರಕಾರವನ್ನು ಮತ್ತೆ ಅಧಿಕಾರಕ್ಕೆ ತರಬೇಕು. ಎಂದು ಕಳಕಳಿಯಿಂದವರು ಮತದಾರರನ್ನು ವಿನಂತಿಸುತ್ತಾರೆ.

ಪಕ್ಷದ ಚುನಾವಣಾ ಘೋಷಣೆಯನ್ನು ಕಾರ್ಯರೂಪಕ್ಕೆ ತರುವುದಾಗಿ ಭರವಸೆ ನೀಡುತ್ತಾರೆ.

ಅವರವರ ದಾರಿಯಲ್ಲಿ ಅವರವರು ನಡೆಯುತ್ತಾರೆ. ಮತದಾರರು ಅವರು ನಡೆದ, ನಡೆಯುತ್ತಿರುವ, ನಡೆಯಬಹುದಾದ ದಾರಿಯನ್ನು ಒರೆಗೆ ಹಚ್ಚಿ ಮತದಾನ ಮಾಡಬೇಕಷ್ಟೆ.

ತ್ತದೆ. ಶುದ್ಧ ಮೊವಿನ ಹಣ್ಣಿನ ರಸವನ್ನು ಮೂತ್ರಕೋಶಗಳ ಭಾದೆಯಿಂದ ನರಳುವವರಿಗೂ, ಎನಾಮಿಯ ಉಳ್ಳವರಿಗೂ ಕೊಡುವುದು ಉತ್ತಮ. ಅಲ್ಲದೆ ಮೊವಿನಲ್ಲಿ ಫ್ರುಕ್ಟೋಸ್, ಗ್ಲೂಕೋಸ್, ಮೆಲಿಟೋಸ್, ಪೆಂಟೋಸ್ ಮುಂತಾದ ಹಣ್ಣು ಸಕ್ಕರೆಗಳಿರುವುದರಿಂದ(Fruit Sugars) ಬೆಳೆಯುವ ಮಕ್ಕಳಿಗೆ ಉತ್ತಮ ಶಕ್ತಿಯನ್ನು ಒದಗಿಸುತ್ತದೆ.

ಮೊವಿನ ಹಣ್ಣಿನ ರಸವನ್ನು ಹಾಲು ಮತ್ತು ಜೇನುತುಪ್ಪಗಳೊಡನೆ ಸೇರಿಸಿ ಕುಡಿಯುವುದು ಉತ್ತಮ. ಈ ಹಣ್ಣಿನಿಂದ ಐಸ್ ಕ್ರೀಮ್, ಸಲಾಡ್, ರಸಾಯನ ಮೊದಲಾದವುಗಳನ್ನು ತಯಾರಿಸಬಹುದು.

ಮೊವಿನ ಮಿಡಿಯೂ ಅನೇಕ ಜೀವಸತ್ವಗಳನ್ನು, ಲವಣಾಂಶಗಳನ್ನು ಒಳಗೊಂಡಿದೆ. ಅಲ್ಲದೆ ಇದರಲ್ಲಿ ಕೆಲವು ಆಮ್ಲಗಳು ಮತ್ತು ಪೆಕ್ಟಿನ್ ಎಂಬ ಪದಾರ್ಥವೂ ಇದೆ. ಇದರಿಂದ ಉಪ್ಪಿನಕಾಯಿ ಮೊದಲಾದ ಅನೇಕ ಬಗೆಯ ವಸ್ತುಗಳನ್ನು ತಯಾರಿಸಿ ಹಲವು ತಿಂಗಳವರೆಗೆ ಕೆಡದಂತೆ ಇಡಬಹುದು.

ಹೀಗೆ ಮೊವು ಹಲವು ದೇಹ ಪೋಷಕಾಂಶಗಳ ಭಂಡಾರವಾಗಿರುವುದರಿಂದ ಮತ್ತು ಮಧುರವಾದ ರುಚಿಯುಳ್ಳದ್ದರಿಂದ ಹೆಚ್ಚು ಜನಪ್ರಿಯತೆ ಗಳಿಸಿದೆ.

(ಆಧಾರಿತ)

●●

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಗಿಗ ಮತ್ತು ವಿವಿಧ ರತಿದಿ ಪುಸ್ತಕಗಳೂ ಸಿಗುತ್ತವೆ.

ಚುನಾವಣಾ ವೇಳೆ ಹೀಗೆ ನಡೆದು ಕೊಳ್ಳಬೇಕು

ಚುನಾವಣೆಯೆಂದೊಡನೆಬೇಕಾಗಿಯೂ ದರೂ ಬೇಡವಾಗಿಯೂದರೂ ಅನಪೇಕ್ಷಿತ ಘಟನೆಗಳು ನಡೆಯುವುದು ಅಸಂಭವವಲ್ಲ. ವಿವಿಧ ಭಾಷೆ-ಜಾತಿಗಳ ತವರೂರಾದ ಭಾರತದಲ್ಲಿ ಈ ಸಂಬಂಧದ ಗಲಭೆಗಳಿಗೆ ಚುನಾವಣೆಗಳು ಅವಕಾಶ ಕೊಡಬಾರದು ಮುಕ್ತ ಮತ್ತು ನಿರ್ಭೀತಿಕ ಮತದಾನ ನಡೆದರೆ ಮಾತ್ರ ಅದು ನಿಜವಾದ ಚುನಾವಣೆಯೆನಿಸುವುದು. ಆದುದರಿಂದ ಚುನಾವಣೆಯ ವೇಳೆ ಹೇಗೆ ನಡೆದು ಕೊಳ್ಳಬೇಕೆಂದು ಸಂಹಿತೆಯೊಂದಿದ್ದು, ಇದನ್ನು ಅಭ್ಯರ್ಥಿಗಳೂ ರಾಜಕೀಯ ಪಕ್ಷಗಳೂ ಪ್ರಚಾರಕರೂ ನಾಗರಿಕರೂ ಕಟ್ಟುನಿಟ್ಟಿನಿಂದ ಅನುಸರಿಸಬೇಕು ಜಗತ್ತಿನ ಅತಿ ದೊಡ್ಡ ಪ್ರಜಾಸತ್ತೆ ಯೆನಿಸಿದ ನಮ್ಮ ಭಾರತದಲ್ಲಿ ನಿಷ್ಪಕ್ಷಪಾತ ಚುನಾವಣೆಗಳು ನಡೆಯುವಂತೆ ಎಚ್ಚರಿಕೆ ನಹಿಸಬೇಕು.

ಬೇರೆ ಬೇರೆ ಮತ-ಭಾಷೆ, ಸಮೂಜ-ಜಾತಿಗಳ ನಡುವೆ ನಿವಾದ ಹುಟ್ಟಿಸುವ ಅಥವಾ ಅವುಗಳಲ್ಲಿ ವಿರಸ-ದ್ವೇಷವುಂಟು ಮಾಡುವ ಯಾವುದೇ ರೀತಿಯ ಚಟುವಟಿಕೆಗಳಿಗೆ ಅವ್ಪದ ನೀಡಬಾರದು

ರಾಜ್ಯಕೀಯ ಪಕ್ಷಗಳ ನೇರಿನ ಟೀಕೆಗಳು ಪಕ್ಷಗಳ ಕಾರ್ಯನೀತಿ, ಕಾರ್ಯಕ್ರಮ. ಸಾರ್ವಜನಿಕ ಜೀವನಕ್ಕೆ ಮಾತ್ರ ಪರಿಸೀಮಿತವಾಗಿರಬೇಕು. ಪಕ್ಷಗಳ ನಾಯಕರ ಅಥವಾ ಪಾ ಕಾರ್ಯಕರ್ತರ ವ್ಯಕ್ತಿಗತ ಟೀಕೆ ಸಲ್ಲದು. ನಿರಾಧಾರವಾದ ಆಪಾದನೆಗಳನ್ನು ಮತ್ತು ವಿದರ್ಯಸ್ತ ಸಂಗತಿಗಳನ್ನು ಪಕ್ಷ-ನಾಯಕ-ಕಾರ್ಯಕರ್ತರ- ಅಭ್ಯರ್ಥಿಗಳನ್ನು ಟೀಕಿಸುವಾಗ ಬಳಸಿಕೊಳ್ಳಬಾರದು.

ರಾಜ್ಯಕೀಯ ಪಕ್ಷಗಳೂ ಅಭ್ಯರ್ಥಿಗಳೂ ತಮ್ಮಲ್ಲಿಲ್ಲದ ಚುನಾವಣಾ ಸಭೆ-ಪ್ರಚಾರ-ಮೆರವಣಿಗೆ ಮೊದಲಾದುವುಗಳು ನಡೆಯೆಂದಂತೆ ಭಂಗ ಕೆಂದೊಡ್ಡಬಾರದು. ಅಂತಹ ಸಭೆಗಳಲ್ಲಿ ಗೊಂದಲಗಳನ್ನುಂಟುಮಾಡಬಾರದು. ಒಂದು ಸಭೆ ನಡೆದಿರುವಲ್ಲಿಯೇ ತಮ್ಮ ಸಭೆಯನ್ನು ನಡೆಸಬಾರದು, ಮೆರವಣಿಗೆ ತರಬಾರದು.

ಪೋಲೀಸ್ ವಿಭಾಗದ ಯಾವುದೇ ವ್ಯಕ್ತಿಯ ವಿರುದ್ಧ ಯಾವುದೇ ದೂರು ಇದ್ದರೂ ಅದನ್ನು ಸಂಬಂಧಿತ ಐ ಜಿ ಪಿಯವರಿಗೆ ತಿಳಿಸಬೇಕು ಅಲ್ಲಿಂದ ತೆಗೆದುಕೊಂಡ ಕ್ರಮಗಳಿಂದ ತೃಪ್ತಿಯಾಗದೆ ಹೋದರೆ ಅಂತಹ ಪ್ರಸಂಗಗಳನ್ನು ಸಾರ್ವಜನಿಕರ ಎದುರಿಗೆ ತರಬಹುದು.

ಸರಕಾರಿ ಅಧಿಕಾರಿಗಳು ಕಾನೂನು-ವ್ಯವಸ್ಥೆಯನ್ನು ಸಾಲಿಸಲು ಕ್ರಮಗಳನ್ನು ಕೈಕೊಳ್ಳುವರು. ಅವರೆ. ಆಗ ನಾಗರಿಕರ ಸ್ವಾತಂತ್ರ್ಯವನ್ನು ಮೀರಿ ಅನಾವಶ್ಯಕ ನಿರ್ಬಂಧ ಹೇರುವುದು ಉಚಿತವಲ್ಲ. ಚುನಾವಣಾ ಪ್ರಚಾರ ಭಿಗಳು ತೃಪ್ತಿಕರವಾಗಿ ನಡೆಯುತ್ತಿರುವಾಗ ಅವುಗಳ ನಡುವೆ ಹಸ್ತಕ್ಷೇಪ ನಡೆಸುವುದು ಸರಿಯಲ್ಲ.

ಚುನಾವಣಾ ಪ್ರಚಾರಕ್ಕೆ ಸರಕಾರಿ ವಾಹನಗಳ ಬಳಕೆಯೋಗನಂತೆ ಅಡಳಿತವು ಎಚ್ಚರದಿಂದಿರಬೇಕು.

ಮತ ಗಳಿಸುವುದಕ್ಕಾಗಿ ಮತೀಯ ಅಥವಾ ಜಾತೀಯ ಭಾವನೆಗಳನ್ನು ಪ್ರಚೋದಿಸಬಾರದು. ದೇವಾಲಯ, ಮಸೀದಿ, ಇಗರ್ಜಿ ಅಥವಾ ಇನ್ನಾವುದೇ ಪವಿತ್ರ ಸ್ಥಾನಗಳನ್ನು ಚುನಾವಣಾ ಪ್ರಚಾರದ ವೇದಿಕೆಯನ್ನಾಗಿ ಬಳಸಬಾರದು.

ಮತದಾರನು ನಿರಾತಂಕವಾಗಿ ಮತ ಚಲಾಯಿಸುವಂತೆ ಅತನಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಮತದಾನವು ಶಾಂತವಾಗಿಯೂ ಸುವ್ಯವಸ್ಥಿತವಾಗಿಯೂ ನಡೆಯಬೇಕು. ಈ ದಿಸೆಯಲ್ಲಿ ರಾಜ್ಯಕೀಯ ಪಕ್ಷಗಳು, ಕಾರ್ಯಕರ್ತರು, ಅಭ್ಯರ್ಥಿಗಳು ಮತ್ತು ಅಧಿಕಾರಿಗಳ ಹೊಣೆಗಾರಿಕೆ ಸಮಾನವಾಗಿದೆ ಮತದಾನದ ಅಧಿಕಾರಿಗಳೂ ಕೊಡನೆ ಸಂಬಂಧಿತರು ಸಂಪೂರ್ಣ ಸಹಕರಿಸಬೇಕು. ಮತದಾರರಿಗೆ ಹಿಂಸೆ ಕೊಡಬಾರದು. ಮತಕಟ್ಟೆಗಳಲ್ಲಿ ಕಾನೂನು ಸಮ್ಮತವಾದ ಕಾರ್ಯ ಕಲಾಪಗಳಿಗೆ ಅಡಚಣೆಯೊಗಬಾರದು. ಮತ ಕಟ್ಟೆಯೊಳಗಿರುವ ಅಭ್ಯರ್ಥಿಗಳ ಪ್ರತಿನಿಧಿಗಳು ಪರಿಚಯ ಪತ್ರ ಪಡೆದಿರಬೇಕು.

ಎಲ್ಲ ರಾಜ್ಯಕೀಯ ಪಕ್ಷಗಳು ಅಭ್ಯರ್ಥಿಗಳು ಚುನಾವಣಾ ಶಾಸನದ ಮೇರೆಗೆ ಶಿಕ್ಷಾರ್ಹವಾದ ಭ್ರಷ್ಟಾಚಾರ ಕ್ರಮಗಳಿಂದ ದೂರವಿರಬೇಕು. ಲಂಚ ನೀಡುವುದು, ಬೆದರಿಕೆ ಹಾಕುವುದು, ಇನ್ನೊಬ್ಬರ ಹೆಸರಿನಲ್ಲಿ ಮತ ಹಾಕುವುದು, ಮತಕಟ್ಟೆಯ ೧೦೦ ಏಟರು ಸುತ್ತ ಚುನಾವಣಾ ಪ್ರಚಾರ ಮಾಡುವುದು, ಮತದಾನ ಮುಕ್ತಾಯಕ್ಕೆ ಆ೪ ತಾಸುಗಳಿಗಿಂತ ಕಡಿಮೆ ಅವಧಿಯಿರುವಾಗ ಸಾರ್ವಜನಿಕ ಸಭೆ ನಡೆಸುವುದು, ಮತಕಟ್ಟೆಗೆ ಬಂದು ಹೋಗಲು ಮತದಾರರಿಗೆ ವಾಹನ ಸೌಕರ್ಯ ಒದಗಿಸುವುದು – ಮೊದಲಾದುವು ಶಿಕ್ಷಾರ್ಹ ಅಪರಾಧಗಳೆನಿಸುವುವು.

ಮತದಾರರಿಗೆ ರಾಜ್ಯಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ನೀಡುವ ಗುರುತಿನ ಚೀಟಿಗಳಲ್ಲಿ ಚಿಹ್ನೆಗಳು, ಅಭ್ಯರ್ಥಿಯ ಹೆಸರು, ಪಕ್ಷದ ಹೆಸರುಗಳು ಇರಬಾರದು.

ಮತದಾನದ ದಿನ ಹಾಗೂ ಅದರ ಹಿಂದಿನ ೧೨ ಘಂಟೆಗಳ ಅವಧಿಯಲ್ಲಿ ಮದ್ಯ ಪೇಯಗಳನ್ನು ಮಾರುವುದು ಅಥವಾ ಹಂಚುವುದು ಇತ್ಯಾದಿಗಳನ್ನು ಮಾಡಬಾರದು.

ಈ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ದೂರುಗಳನ್ನು ಪರಿಶೀಲಿಸಲು ಒಂದು ಸ್ಥಾಯಿ ಸಮಿತಿಯಿರುವುದು.

ಎಲ್ಲರೂ ಈ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ; ನಿಷ್ಪಕ್ಷಪಾತನದಿಂದ ಚುನಾವಣೆಗಳು ನಡೆಯುವುದು ಸಾಧ್ಯವಾಗುವುದು.

ಸೋವಿಯತ್-ಭಾರತ ಸಹಕಾರಕ್ಕೆ ದೀರ್ಘ ಕಾಲದ ಹಿತಗಳ ಆಧಾರ

"1971ರ ಆಗಸ್ಟ್ 9ರಂದು ಸೋವಿಯೆತ್ ಒಕ್ಕೂಟ ಮತ್ತು ಭಾರತಗಳ ನಡುವೆ ಅಂಕಿತ ಹಾಕಲ್ಪಟ್ಟ ಶಾಂತಿ, ಸ್ನೇಹ ಹಾಗೂ ಸಹಕಾರಗಳ ಒಪ್ಪಂದವು ಇತಿಹಾಸ ನಿರ್ಮಾಪಕ ದಸ್ತಾವೇಜು ಆಗಿದೆಯೆಂದೂ ಸೇವಿಯೆತ್ ಒಕ್ಕೂಟ ಮತ್ತು ಭಾರತಗಳ ನಡುವೆ ಆರ್ಥಿಕ ಹಾಗೂ ತಾಂತ್ರಿಕ ಸಹಕಾರಗಳ ಬೆಳವಣಿಗೆಗೆ ಅದು ತುಂಬಾ ಮಹತ್ವದ್ದಾಗಿದೆಯೆಂದೂ ಸೋವಿಯೆತ್ ಜನರು ಭಾವಿಸುತ್ತಾರೆ" ಎಂಬುದಾಗಿ ಸೋವಿಯೆತ್ ಸಚಿವ ಸಂಪುಟಕ್ಕೆ ಸೇರಿರುವ ರಾಜ್ಯ ವಿದೇಶಾಂಗ ಆರ್ಥಿಕ ಸಂಬಂಧಗಳ ಸಮಿತಿಯ ಉಸಾಧ್ಯಕ್ಷರಾದ ವಸೀಲಿ ಸೆರ್ಗೆಯೆವ್ ಅವರು **ಮಾಸ್ಕೊ ನ್ಯೂಸ್** ಎಂಬ ಒಂದು ಇಂಗ್ಲಿಷ್ ವಾರಪತ್ರಿಕೆಯ ಇತ್ತೀಚಿನ ಸಂಚಿಕೆಯಲ್ಲಿ ಬರೆದಿರುವ ಒಂದು ಲೇಖನದಲ್ಲಿ ನುಡಿದಿದ್ದಾರೆ.

'ಈ ಎರಡು ದೇಶಗಳ ನಡುವೆ ಈಗಾಗಲೇ ಇರುವ ಆತ್ಮೀಯವಾದ ಮೈತ್ರಿ, ಗೌರವ ಹಾಗೂ ಪರಸ್ಪರ ವಿಶ್ವಾಸ, ಒಳ್ಳೇ ನೆರೆ ಹೊರೆ ಹಾಗೂ ಫಲಪ್ರದ ಸಹಕಾರದ ಸಂಬಂಧಗಳನ್ನು ಈ ಒಪ್ಪಂದವು ಮತ್ತಷ್ಟು ಬಲಪಡಿಸುತ್ತದೆ' ಎಂದೂ ಅವರು ನುಡಿದಿದ್ದಾರೆ.

ಸೋವಿಯತ್—ಭಾರತ ಸ್ನೇಹವು ತಾತ್ಕಾಲಿಕ ಸಂಗತಿಗಳನ್ನು ಅವಲಂಬಿಸಿಲ್ಲ. ಆದರೆ, ಸೋವಿಯತ್ ಮತ್ತು ಭಾರತ ರಾಷ್ಟ್ರಗಳ ದೀರ್ಘಾವಧಿಯ ಹಿತಗಳನ್ನೇ ಆಧರಿಸಿದೆ. ಹಾಗೂ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗಾಗಿ, ವಿಶ್ವದಲ್ಲೂ ಜಗತ್ತಿನಲ್ಲೂ ಶಾಂತಿಯನ್ನು ಕಾಪಾಡುವ ದಕ್ಕಾಗಿ ಸರ್ವತೋಮುಖವಾದ ಸಹಕಾರವನ್ನು ಬೆಳೆಸಿಕೊಳ್ಳಬೇಕೆಂಬ ಅಪೇಕ್ಷೆಯನ್ನೇ ಆಧರಿಸಿದೆಯೆಂಬುದನ್ನು ಈ ಒಪ್ಪಂದದ ಹಸ್ತಾಕ್ಷರವೆ ದೃಢಪಡಿಸುತ್ತದೆ.

"ತೈಲ ಉದ್ದಿಮೆಯಲ್ಲಿ ಸಾಧಿಸಲಾದ ಮುನ್ನಡೆಯೆ ಸೋವಿಯತ್—ಭಾರತ ಸಹಕಾರದ ಹಿರಿಯ ಯಶಸ್ಸಿಗೆ ದ್ಯೋತಕವಾಗಿದೆ".

"ಸೋವಿಯತ್ ತಜ್ಞರ ನೆರವಿನಿಂದ ಕಂಡು ಹಿಡಿಯಲಾದ ತೈಲ ನಿಕ್ಷೇಪಗಳ ಸ್ಥಳಗಳಲ್ಲಿ ಎಣ್ಣೆ ಭಾವಿಗಳನ್ನು ತೋಡಲಾಗಿದೆ. ೧೪ ಮಿಲಿಯಗಿಂತಲೂ ಹೆಚ್ಚು ಎಣ್ಣೆಯನ್ನು ಈಗಾಗಲೇ ಉತ್ಪಾದಿಸಲಾಗಿದೆ. ಇಂದು ಭಾರತದಲ್ಲಿ ಉತ್ಪಾದಿಸಲಾಗುತ್ತಿರುವ ಅರ್ಧಕ್ಕಧಿಕ ಪ್ರಮಾಣದಷ್ಟು ಎಣ್ಣೆಯನ್ನು ಪ್ರಮುಖ ತೈಲಕ್ಷೇತ್ರದಲ್ಲೇ ತೆಗೆಯಲಾಗುತ್ತಿದೆ".

ರಾಂಚಿಯಲ್ಲಿರುವ ಘನ ಎಂಜಿನೀಯರಿಂಗ್ ಮತ್ತು ಹರದ್ವಾರದಲ್ಲಿಯ ಘನ ವಿದ್ಯುಚ್ಛಕ್ತಿ ಎಂಜನಿಯರಿಂಗ್ ನಂಥ ಬೃಹತ್ ಉದ್ದಿಮೆ ಸಂಸ್ಥೆಗಳು ಭಾರತದ ಅರ್ಥ ವ್ಯವಸ್ಥೆಗೆ ತುಂಬಾ ಮಹತ್ವದವಾಗಿವೆ ಸೋವಿಯತ್—ಭಾರತ ಸ್ನೇಹದ ದ್ಯೋತಕವಾಗಿರುವ ಭಿಲಾಯಿ ಉಕ್ಕು ಯಂತ್ರಾಗಾರವಂತೂ ಭಾರತದ ಗಡಿಗಳಾಚೆಯೂ ಪ್ರಖ್ಯಾತವಾಗಿದೆ. ಭಾರತದಲ್ಲೇ ಇಂಥ ದೊಡ್ಡ ಉದ್ದಿಮೆ ಸಂಸ್ಥೆ ಇದೊಂದೇ ಆಗಿದ್ದು ಭಾರತದಲ್ಲಿ ತಯಾರಾಗುತ್ತಿರುವ ಉಕ್ಕಿನ ಮೂರನೆ ಒಂದು ಭಾಗವನ್ನು ಇದುನೇ ತಯಾರಿಸಿ ಕೊಡುತ್ತದೆ. ಇದು ಉತ್ಪಾದನಾ ಕಾರ್ಯವನ್ನು ಆರಂಭಿಸಿದಂದಿನಿಂದ ಈವರೆಗೂ ೩,೦೦೦ಮಿಲಿಯಟನ್ನುಗಳಷ್ಟು ಉಕ್ಕನ್ನು ಉತ್ಪಾದಿಸಿದೆ.

"ವಿದ್ಯುಚ್ಛಕ್ತಿ, ಕಲ್ಲಿದ್ದಲು, ಗಣಿಗಳು, ಔಷಧ ಕಾರ್ಖಾನೆಗಳು ಕೃಷಿಕ್ಷೇತ್ರಗಳು ಮತ್ತು ಇನ್ನೂ ಬೇರೆ ಕೆಲವು ಔದ್ಯೋಗಿಕ ಪ್ರಾಯೋಜನಗಳನ್ನು ಕಟ್ಟಲೂ ಸೋವಿಯೆತ್ ಒಕ್ಕೂಟವು ಭಾರತಕ್ಕೆ ನೆರವು ನೀಡಿದೆ.

'ಭಾರತದಲ್ಲಿ ಕಾರ್ಯ ಮಾಡುತ್ತಿರುವ ಸೋವಿಯೆತ್ ತಜ್ಞರು ವ್ಯಾಂಜಲ ಮನಸ್ಸಿನಿಂದ ತಮ್ಮ ವಿಜ್ಞಾನಾನುಭವಗಳನ್ನು ಭಾರತೀಯ ಒಡನಾಡಿಗಳಿಗೆ ಕೊಡಮಾಡಿದ್ದು ಈ ವರೆಗೂ ೩೦,೦೦೦ ಭಾರತೀಯ ತಜ್ಞರನ್ನೂ, ಕಾರ್ಮಿಕರನ್ನೂ ತರಬೇತುಗೊಳಿಸಿದ್ದಾರೆ. ಅದೇ ರೀತಿ, ಸೋವಿಯೆತ್ ಸ

ಅಮೃತಾಂಜನ

● ತಲೆ ನಿಡಿತ ● ಮೈ ನೋವು
● ಉಳುಕು ● ಕಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-೪

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.
Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden
Quiet, Calm Atmosphere
Personalised Service.

ತೀರ್ಥ ತೊಟ್ಟಾದರೇನು, ಕೊಳಗವಾದರೇನು?

(ನಾಳ್ಕನೇ ಪುಟದಿಂದ)

ಇಂದಿರಾ ಗಾಳಿಯಲ್ಲಿದೇಂದ ಹಾಗಾಯ್ತು'

"ಹ್ಞೂಂ...."

"ಅದೂ ಹೌದೂನ್ನಿ...."

"ಯೂಕೆ?"

'ಯೂಕೇಂದ್ರೆ, ನಾವೆಲ್ಲ ನಮ್ಮ ನಿಶ್ಚಯ ಬದಲಾಯ್ಸಿ ಬಿಟ್ಟಿದ್ದೇವೆ....'

"ಏನು? ನಿಜ್ಞಾಂತರ?"

'ನಮ್ಮ ಪ್ರಧಾನಿಯೇ ಬಂದು ನಮ್ಮ ಮತವನ್ನು ಕೊಡಬೇಕೆಂದು ಕೇಳಿದಾಗ ಇಲ್ಲಾಂತನ್ನೋದು ಸಾಧ್ಯವೆ? ಅದ್ದರಿಂದ....'

"ಅಲ್ವೆ, ಆಕೆ ಪ್ರಧಾನಿಯಾಗಿ ಬಂದಿಲ್ಲ"

"ಅದೆಲ್ಲಾ ನಮಗೆ ಗೊತ್ತಿಲ್ಲ. ಆಕೆ ಪ್ರಧಾನಿ ಹೌದೋ ಇಲ್ಲವೋ...."

'ಹೇಗೆ ಇಲ್ಲವೆನ್ನಬಹುದು?'

'ಮತ್ತೆ ನಮ್ಮ ಓಟು ಅವಳಿಗೇ....'

'ಅವಳು ಚುನಾವಣಾ ರಂಗದಲ್ಲೇ ಇಲ್ವಲ್ಲಾ?'

"ಅವಳಿಲ್ಲವಾದರೇನು? ಅವಳ ಪಕ್ಷದವರಿದ್ದಾರೆ. ಅವರಿಗೇ...."

"ಹ್ಞೂಂ....ಮತ ಸ್ವಾತಂತ್ರ್ಯವಿದೇನ್ನಿ. ಮತ್ತೆ ಮಹಿಳಾ ಮತದಾರರ ಸಂಖ್ಯೆಯೇ ಜಾಸ್ತಿಯಿರುವಾಗ, ನಿಮ್ಮ ನಿರ್ಧಾರ ಗೆಲ್ಲುವುದೂ ಸಾಧ್ಯನ್ನಿ...."

'ಅದ್ಯಾಕೆ? ನೀವೂ ಹಾಕಬೇಕು....'

'ನನಗೂ ಮತ ಸ್ವಾತಂತ್ರ್ಯವಿದೆಯೆಂದು ಒಪ್ಪಿಕೋ ಬೇಕು....'

'ಅದೆಲ್ಲಾ ಆಗೋದಿಲ್ಲ. ಹಾಕ್ತೇನೆ ಅಂತ ಅಂದ್ರೆ ಮಾತ್ರ ಊಟ ಈವತ್ತು?"

'ಇದೊಳ್ಳೆ ತೊಂದ್ರೆಗಿಟ್ಟಲ್ಲಾ....ಅಲ್ವೆ, ಅವರವರಿಗೆ ಇಷ್ಟ ಬಂದ ಅಭ್ಯರ್ಥಿಗೆ ಓಟು ಹಾಕೋ ಸ್ವಾತಂತ್ರ್ಯ....?'

'ಅದೆಲ್ಲಾ ನನ್ಗೆ ಟೀಡ ನೀವು ಹಾಕ್ತೀರೋ ಇಲ್ವೋ ಹೇಳಿ....'

'ಅಯ್ಯೋ ಮಹಾರಾಯ್ತಿ, ನೀನೆಂದ ಮೇಲೆ ಹಾಕದೆ ಇರೋದಕ್ಕಾಗುತ್ತೆ?'

'ಅದೆಲ್ಲಾ ಮೂತು ತಿರುಗಿಸೋದು ಬೇಡ. ಖಂಡಿತ ಹೇಳಿ....'

'ಓಟು ಇದ್ರೆ ಹಾಕೋದು ಖಂಡಿತ.'

'ಯಾರಿಗೇಂತ ಹೇಳಿ....'

'ನೀನು ಯಾರಿಗೇಂತ ಹೇಳ್ತೀಯೂ ಅವರಿಗೆ....'

'ಹ್ಞೂಂ. ಹಾಗೆ ಬನ್ನಿ ಮತ್ತೆ ...'

'ಆದ್ರೆ ನೋಡು....'

'ಆದ್ರೂ ಇಲ್ಲ, ಹೋದ್ರೂ ಇಲ್ಲ....'

'ಅಲ್ವೆ, ನಾನನ್ನೋ ಮೊತನ್ನಾದ್ರೂ ಕೇಳು....'

'ಏನಪ್ಪಾ ಅಂತ ಮುತ್ತು ಉದುರೋ ಮೂತು?'

'ಅಲ್ವೆ, ನನ್ನ ಹೆಸ್ರೇ ಮತದಾರಯಾದಿಯಲ್ಲಿಲ್ಲವಂತೆ?'

ಹ್ಞಾಂ....ಏನಂದ್ರಿ? ಯೂಕೆ ಹಾಗಾಯ್ತು!'

'ಯೂಕೋ ದೇವ್ರಿಗೇ ಗೊತ್ತು...'

'....ಓ....ತಿಳೀತೋನ್ನಿ. ಅಯ್ಯೋ, ನಾನೇ ಅಂದು ನಿಮ್ಮ ಹೆಸ್ರು ಹೇಳವೆ ಒಂದು ಓಟು ಕಳೆದು ಕೊಂಡೆ....'

'ಅದೇ ನಾನನ್ನೋದು. ಹೀಗೆ ಹೆಸ್ರು ಹೇಳದೇ ಇದ್ದದ್ದರಿಂದ್ಲೇ ಮಹಿಳಾ ರಾಜ್ಯ ರಾಜ ಆಗಿರೋದು ಇಲ್ಲಿ....'

'ಅಲ್ರೀ ನಿಮ್ಗೂದ್ರೂ ಹೆಸ್ರು ಸೇರ್ಸ ಬಹುದಿತ್ತಲ್ಲ?'

'ಅದಕ್ಕೆ ಪುರ್ಸೊತ್ತು ಯಾರಿಗುಂಟು?'

'ಇದೇ ನೋಡಿ, ಹೇಳೋದು ಶಾಸ್ತ್ರ, ಇಕ್ಕೋದು ಗಾಳಿ....ಮತ ಅಮೂಲ್ಯ, ಮತ ಸ್ವಾತಂತ್ರ್ಯವಿದೆಯೆಂದು ಮುಂತಾಗಿ ಲೆಕ್ಚರ್ ಬಿಡೋವ್ರು ಆ ಮತವನ್ನು ಹಾಳು ಮಾಡಿದ್ರಲ್ಲಾ....'

"ಏನು ಮಾಡೋದೆ?ಮುಂದಿನ್ಸಾರಿ....'

'ನೀವೇನೂ ಹೇಳ್ಬೇಡಿ. ಮನೆಗೆ ಬಂದಾಗ ನಾನೇ ಹೇಳಿ ಬರೆಸ್ತೇನೆ. ಆಯ್ತಲ್ಲಾ....'

'ಆಯ್ತಪ್ಪಾ ಆಯ್ತು. ಈ ಇಂದಿರಾ ಗಾಳಿ ಅಷ್ಟಾದ್ರೂ ಮಾಡಿದ್ರೆ ದೊಡ್ಡ ಉಪಕಾರ....'

'ಯೂಕೆ?'

'ಅಲ್ವೆ, ಹೆಸ್ರು ಹೇಳೋದಕ್ಕೂ ನಾಚೋ ಹೆಂಗಸ್ರಿಂದ ಮತ್ತೆ ಆಗೋದೇನೂಂತ....'

'ಎಲ್ಲಾ ಆಗುತ್ತೆ....ನೋಡಿ—'

'ಖಂಡಿತಕ್ಕೂ?'

'ಹ್ಞೂಂ....'

'ಅಷ್ಟಾದ್ರೆ ಸಾಕು....'

'ಎಷ್ಟು....?'

'ಇಷ್ಟು....'

—ಗೋತಾ.

●●

ಹಾಯದಿಂದಲೇ ಮುಂಬೈಯಲ್ಲಿ ಕಟ್ಟಲ್ಪಟ್ಟಿರುವ ಭಾರತ ಯಂತ್ರ ವಿದ್ಯಾಪೀಠದಲ್ಲಿ (ಐ ಐ ಟಿ) ಮತ್ತು ಭಾರತದ ಪ್ರೌಢ ಶಾಠಶಾಲೆಗಳಲ್ಲಿ ಸ್ಥಾಪಿಸಲಾಗಿರುವ ಸ್ವಾಯತ್ತ ವಿಭಾಗಗಳಲ್ಲಿಕೂಡ ಭಾರತದ ತಜ್ಞರನ್ನು ತರಬೇತುಗೊಳಿಸಲಾಗುತ್ತಿದೆ. ಟೆಕ್ನಿಷಿಯನ್‌ರನ್ನೂ ಯೋಗ್ಯತಾ ವಿಶೇಷ ಸಂಪನ್ನ ಕಾರ್ಮಿಕರನ್ನೂ ತರಬೇತುಗೊಳಿಸಲು ಸೆಕೆಂಡರಿ ವಿಶೇಷೀಕೃತ ತಾಂತ್ರಿಕ ಶಾಲೆಗಳನ್ನೂ ಮತ್ತು ತರಬೇತು ಕೇಂದ್ರಗಳನ್ನೂ ಸ್ಥಾಪಿಸಲಾಗುತ್ತಿದೆ".

"ಸೋವಿಯೆತ್ ಒಕ್ಕೂಟದ ಉದ್ದಿಮೆ ಸಂಸ್ಥೆಗಳಲ್ಲೂ, ಪ್ರೌಢ ವಿದ್ಯಾಭ್ಯಾಸ ಪೀಠಗಳಲ್ಲೂ ಬಹಳಷ್ಟು ಜನ ಭಾರತೀಯರು ತರಬೇತುಗೊಂಡಿದ್ದಾರೆ. ಇಂದು ಸರಿಸುಮಾರು ೪೦೦ ಜನ ಭಾರತೀಯರು ನಮ್ಮ ದೇಶದಲ್ಲಿ ಅಭ್ಯಸಿಸುತ್ತಿದ್ದಾರೆ.

"ಈ ಸಹಕಾರವು ಎಲ್ಲ ದೃಷ್ಟಿಯಿಂದಲೂ ಸಮಾನ ರೀತಿಯದಾಗಿದ್ದು ಉಭಯ ಪ್ರಯೋಜನಕಾರಿಯೂ ಆಗಿದೆ. ಸೋವಿಯೆತ್ ಆರ್ಥ ವ್ಯವಸ್ಥೆಗೆ ಅಗತ್ಯವಾದಂಥ ಭಾರತದ ಕೆಲವು ಮುಖ್ಯ ವ್ಯಾಪಾರೀ ಸರಕುಗಳನ್ನೂ ಮತ್ತು ಅವರ ಆರ್ಥಿಕ ಅಭಿವೃದ್ಧಿಯಂತೆ ಅವರ ಸಿದ್ಧ ಕೈಗಾರಿಕಾ ಸರಕುಗಳನ್ನೂ ಸೋವಿಯೆತ್ ಒಕ್ಕೂಟವು ಭಾರತದಿಂದ ಪಡೆಯುತ್ತಿದೆಯೆಂಬುದು ತಿಳಿದ ಸಂಗತಿಯಾಗಿದೆ ಪರಸ್ಪರ ಸ್ನೇಹ ವಿಶ್ವಾಸಗಳ ಬೆಳಕಿನಲ್ಲಿ ಮಾತ್ರವೆ ಸೋವಿಯೆತ್ ಭಾರತ ಆರ್ಥಿಕ ಸಹಕಾರಗಳನ್ನು ನೋಡುವುದು ಸಾಧ್ಯ."

●●

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಜಾಗಣ ವಜ್ರಗಳಿಗೆ ಅಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂಮ ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್ ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಪ್ರಧಾನಿ ಗಾಂಧಿಯವರಿಂದ ಆದ್ಧರಿಯ ಚುನಾವಣಾ ಪ್ರಚಾರ

ಕಳೆದ ಸಾರ್ವತ್ರಿಕ (ಮಧ್ಯಾವಧಿ) ಚುನಾವಣೆಗಳಲ್ಲಿ (ಲೋಕ ಸಭೆ) ಪ್ರಧಾನಿ ಇಂದಿರಾ ಗಾಂಧಿಯವರ ಕೈಗಳನ್ನು ಏಕೈಕ ಮನಸ್ಸಿನಿಂದ ಬೆಂಬಲಿಸಿದ ರಾಜ್ಯ ಕರ್ನಾಟಕ. ಕರ್ನಾಟಕಕ್ಕೆ ಆಕೆ ಎಷ್ಟು ಕೃತಜ್ಞರಾದರೂ ಸಾಲದು; ಆಕೆಯ ಪ್ರಬಲ ವಿರೋಧಿ ರಾಜ್ಯದಲ್ಲಿ ಸಂಪೂರ್ಣ ಬೆಂಬಲ ಪಡೆದದ್ದು ಅದ್ಭುತ.

ರಾಜ್ಯ ವಿಧಾನ ಸಭೆಗೆ ನಡೆಯಲಿರುವ ಚುನಾವಣೆಗಳಲ್ಲಿ ತಮ್ಮ ಪಕ್ಷದ ಪರವಾಗಿ ಆಕೆ ಕರ್ನಾಟಕದ ಹಲವು ನಗರಗಳನ್ನು ಮಿಂಚಿನ ವೇಗದಲ್ಲಿ ಸಂಚರಿಸಿದರು. ಚುನಾವಣೆ ಮುಗಿಯುವುದಕ್ಕೆ ಮೊದಲು ಉಳಿದ ಕೆಲವೆಡೆ ಬರುವುದಾಗಿ ನಾಯಕರಿಗೆ ಭರವಸೆಯಿತ್ತರು.

ಬಿಜಾಪುರ, ಹುಬ್ಬಳ್ಳಿ, ಶಿವಮೊಗ್ಗ, ದಾವಣಗೆರೆ, ಬಾಗಲಕೋಟೆ, ಮಂಗಳೂರು, ಚಿಕ್ಕಮಗಳೂರು, ಮಡಿಕೇರಿ, ಉಡುಪಿ—ಮೊದಲಾದುವು ಪ್ರಧಾನಿ ಭೇಟ್ಟಿ ನೀಡಿದ ಕೆಲವು ನಗರಗಳು.

ಚುನಾವಣಾ ಪ್ರಚಾರ ಸಭೆಗಳಲ್ಲಿ ಪ್ರಚಾರ ಭಾಷಣವನ್ನು ಮಾಡಿ, ತನ್ನ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂದು ಕೇಳಿಕೊಳ್ಳುವುದಷ್ಟೇ ಅವರ ಸಂಚಾರದ ಪರಿಮಿತ ಉದ್ದೇಶ. ಆದುದರಿಂದ ಎಲ್ಲಿಡೆಯಲ್ಲೂ ಅವರು ಮಾಡಿದ ಭಾಷಣದ ಸಾರ ಒಂದೇ. ಆದರೂ ಅಲ್ಲಲ್ಲಿನ ವಿರೋಧವನ್ನು ಗಮನಿಸಿ ವಿರೋಧಿ ಪಕ್ಷವನ್ನು ಟೀಕಿಸಲು ಒಂದೊಂದು ವಾಕ್ಯವಾಡಿದ್ದೂ ಉಂಟು. ಅತ್ಯಲ್ಪಾವಧಿಯ ಭಾಷಣವಾದ್ದರಿಂದ ದೀರ್ಘವಿವರಣೆ — ಖಂಡನೆ—ಮಂಡನೆಗೆ ಅವಕಾಶವಿಲ್ಲ.

ಆಕೆ ಸ್ಪರ್ಶಿಸಿದ ಮುಖ್ಯಾಂಶಗಳನ್ನು ಈ ರೀತಿಯಾಗಿ ಕ್ರೋಢೀಕರಿಸ ಬಹುದು:—

● ಸಮಾಜದಲ್ಲಿನ ದುರ್ಬಲ ವರ್ಗದ ಉದ್ಧಾರ. ಈ ನಿಟ್ಟಿನಲ್ಲಿ ತನ್ನ ಪಕ್ಷವೂ ಸರಕಾರವೂ ತೆಗೆದುಕೊಂಡ ಕಾರ್ಯಕ್ರಮಗಳ ಸಮರ್ಥನೆ.

● ರಾಜ್ಯಕೀಯ ಸ್ವಾತಂತ್ರ್ಯವೇ ಪರಮ ಗುರಿಯೂಗಲಾರದು. ಆರ್ಥಿಕ ಸ್ವಾತಂತ್ರ್ಯವಿಲ್ಲದ ರಾಜ್ಯಕೀಯ ಸ್ವಾತಂತ್ರ್ಯ ಅರ್ಥಹೀನ. ಗರೀಬೀ ಹಟಾವೋ—ಬಡತನ ನೀಗಿಸಿರಿ—ತನ್ನ ಪಕ್ಷವು ಇದಕ್ಕಾಗಿ ಪಣವೊಡ್ಡಿ ನಿಂತಿದೆ. ರಾತ್ರೆ ಬೆಳಗಾಗುವುದರಲ್ಲಿ ಬಡತನ ನಿರ್ಮೂಲವಾಗಲಾರದು. ಇದಕ್ಕೆ ನಿರಂತರ ಪ್ರಾಮಾಣಿಕ ಪ್ರಯತ್ನ —ಹೋರಾಟ ಆಗತ್ಯ.

● ಬಾಂಗ್ಲಾ ದೇಶದ ನಿರಾಶ್ರಿತರ ಸಮಸ್ಯೆಯನ್ನು ಎಂಟೆದೆಯಿಂದ ಎದುರಿಸಿ ಜಯಶೀಲರಾಗಿದ್ದೇವೆ. ವಿದೇಶೀಯರ ಮುಂದೆ ನಾವೊಂದು ಅಪೂರ್ವ ಶಕ್ತಿಯಾಗಿ ನಿಂತಿದ್ದೇವೆ. ದೇಶದ ಒಳಗಿನ ಸಮಸ್ಯೆಗಳನ್ನೂ ಇದೇ ಎದೆಗಾರಿಕೆಯಿಂದ ಎದುರಿಸಲು ತನ್ನ ಪಕ್ಷ ನಿರ್ಧಾರಾತ್ಮಕವಾಗಿ ಹೋರಾಡುತ್ತಿದೆ. ನಮಗೆ ಇದರಲ್ಲಿ ಜಯ ಸುನಿಶ್ಚಿತ.

● ಕರ್ನಾಟಕದ ರಾಜ್ಯಕೀಯದಲ್ಲಿ ಜಾತಿ—ಮತಗಳು ತಾಂಡವವಾಡುತ್ತಿವೆಯೆಂದು ಕೇಳಿದ್ದೇನೆ. ನವ ಸಮಾಜ ನಿರ್ಮಾಣದಲ್ಲಿ ಜಾತೀಯತೆ—ಮತೀಯತೆಗಳ ಕ್ಷುದ್ರ ಭಾವನೆಗೆ ಬೆಲೆಯಿಲ್ಲ. ಜಾತ್ಯಾತೀತ ವರ್ಗ ರಹಿತ ಸಮಾಜವೊಂದು ನಮ್ಮಲ್ಲಿ ನಿರ್ಮಾಣವಾದರೆ ಮಾತ್ರ ನಮ್ಮ ಕಲ್ಯಾಣ ಶತಃ ಸಿದ್ಧ.

● ನೀವು ನನ್ನನ್ನು ಹೃದಯ ಪೂರ್ವಕವಾಗಿ ಬೆಂಬಲಿಸಿದ್ದೀರಿ. ಅದಕ್ಕಾಗಿ ಕೃತಜ್ಞತೆಗಳು

● ಕೇಂದ್ರದಲ್ಲಿ ಸುದೃಢ ಸರಕಾರವಿದ್ದುದರಿಂದಲೇ ಸಮರದಲ್ಲಿ ವಿಜಯಸಾಧ್ಯವಾಯ್ತು. ರಾಜ್ಯದಲ್ಲಿಯೂ ಅದೇ ರೀತಿಯ ಸುಭದ್ರ ಸರಕಾರವನ್ನು ರಚಿಸಬೇಕು. ರಾಜ್ಯ ಮತ್ತು ಕೇಂದ್ರಗಳಲ್ಲಿ ಒಂದೇ ಪಕ್ಷದ ಆಡಳಿತೆಯಿರುವುದರಿಂದ ಪಕ್ಷದ ಧ್ಯೇಯ — ಘೋರಣೆಗಳನ್ನು ಅನುಷ್ಠಾನಕ್ಕೆ ತರಲು ಸುಗಮವಾಗುವುದು.

● ಆದುದರಿಂದ ಯಾವುದೇ ರೀತಿಯ ಹೆಂಗು ದಾಕ್ಷಿಣ್ಯಗಳಿಗೆ ಬಲಿಬೀಳಬೇಡಿ. ಪ್ರಗತಿಶೀಲವಾದ ಸಮಾಜವಾದದ ನಿಷ್ಠಾವಂತ ಅನುಷ್ಠಾನ ಪ್ರತಿಜ್ಞಾವಾದ ತನ್ನ ಪಕ್ಷದ ಅಭ್ಯರ್ಥಿಯನ್ನು ಪ್ರಚಂಡ ಬಹುಮತದಿಂದ ಆರಿಸುತ್ತೀರೆಂದು ವಿಶ್ವಾಸ. ●

READ & ADVERTISE IN NAVAYUGA Weekly

ಉಡುಪಿ ಕ್ಷೇತ್ರದ ಅಭ್ಯರ್ಥಿ

ಶ್ರೀಮತಿ ಮನೋರಮಾ ಮಧ್ವರಾಜ್

ಮೊದಲ ಬಾರಿಗೆ ನಡೆಯಲಿರುವ ವಿಧಾನ ಸಭಾ ಚುನಾವಣೆಗಳಲ್ಲಿ ಉಡುಪಿ ಕ್ಷೇತ್ರದಿಂದ ಸ್ಪರ್ಧಿಸಲಿರುವ ಅಭ್ಯರ್ಥಿಗಳಲ್ಲಿ ಶ್ರೀಮತಿ ಮನೋರಮಾ ಮಧ್ವರಾಜ್ ಒಬ್ಬರು

ಈಕೆ ಎಡಪಂಥೀಯ ಕಾಂಗ್ರೆಸ್ಸಿನ ಅಭ್ಯರ್ಥಿ. ಚುನಾವಣಾ ಚಿಹ್ನೆ—ಜನ-ಕರು

ಶ್ರೀಮತಿ ಮಧ್ವರಾಜರು ಎಳೆ ಹರೆಯದವರು, ಹಿಂದುಳಿದ ಸಮಾಜಕ್ಕೆ ಸೇರಿದವರು (ಮಹಿಳೆಯರು)

ಶ್ರೀ ಮಧ್ವರಾಜರೂ ಎಳೆ ವಯಸ್ಸಿನಲ್ಲೇ ರಾಜ್ಯಕೀಯಕ್ಕೆ ಬಂದವರು—ಒಬ್ಬರ ಅಧಿಯಲ್ಲಿ ರಾಸಕಾರಾಗಿದ್ದರು ಇದರಿಂದ ಶ್ರೀಮತಿ ಮಧ್ವರಾಜರೂ ರಾಜ್ಯಕೀಯದಲ್ಲಿ ಹೆಚ್ಚಿನ ಅನುಭವ ಪಡೆದಿರು; ಜನ ಸಂಪರ್ಕ ಹೊಂದಿದವರೂ.

ಉಡುಪಿ ತಾಲೂಕು ಅಭಿವೃದ್ಧಿ ಮಂಡಲಿಯಲ್ಲಿ ಕಾಪು ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಶ್ರೀಮತಿ ಸುಧಾರಾಜರು ತಾಲೂಕಿನ ಅಭಿವೃದ್ಧಿಯೆಡೆ ಅತ್ಯಂತ ಆಸಕ್ತಿ ಯುಳ್ಳವರು

ವಿವಿಧ ಸಂಘ—ಸಂಸ್ಥೆಗಳಲ್ಲಿ ಸಂಪರ್ಕ ವಿರಿಸಿಕೊಂಡಿರುವ ಇವರು ತಮ್ಮ ಪತಿಯೇತೆಯೇ ಉದ್ಯಮಿಗಳೂ ಹೌದು. ಕರ್ನಾಟಕ ಫಿಶರೀಸ್ ಸಂಸ್ಥೆಯ ಒಡತಿಯಾಗಿ ಉದ್ಯಮ ರಂಗದಲ್ಲಿ ನಿಂತಿರುವ ಇವರು ಬಗೆಳಿಗೆ ಉದ್ಯೋಗಾವಕಾಶ ನೀಡಿದ್ದಾರೆ.

ತಮ್ಮ ಪತಿಯೊಡನೆ ಮತ್ಸ್ಯೋದ್ಯಮದಲ್ಲಿ ಹೆಚ್ಚಿನ ಅನುಭವ ಗಳಿಸಲು ವಿದೇಶ ಸಂಚಾರವನ್ನು ಮಾಡಿ ಬಂದಿದ್ದಾರೆ

ಶ್ರೀಮಂತ ಕುಟುಂಬಕ್ಕೆ ಸೇರಿದ ಶ್ರೀಮತಿ ಮನೋರಮಾ ಮಧ್ವರಾಜ್ ಪತಿಯಂತೆಯೇ ದಾನಶೀರರು ದೀನದಲಿತರನ್ನು ಕಂಡರೆ ಹೃದಯ ಕರಗುವ ಹೆಣ್ಣು ತನ— ಅವರ ಹೊಟ್ಟೆ ತುಂಬಾಗಿಡುವ ಉದಾರತನ.

ಶ್ರೀಮತಿ ಮಧ್ವರಾಜರದ್ದು ಸ್ವಯಂ ಪ್ರತಿಭೆಯುಳ್ಳ ವ್ಯಕ್ತಿತ್ವ. ಇದು ಮುನ್ನಡಿ ನಿಯನ್ನು, ರಾಜ್ಯಕೀಯ ಪಕ್ಷದ ಸಹಕಾರದಿಂದ ಬೆಳೆದು ಅರಳಿನಿಂತಿದೆ ತನ್ನ ಕಂಪನ್ನು ಸುತ್ತ ಪಸರಿಸಲು ಸಮರ್ಥವಿದೆ.

ಸಮಾಜವಾದಿ ಕಾರ್ಯಕ್ರಮಗಳು ಕಾರ್ಯಗತವಾಗಬೇಕು, ಬಡತನ, ನಿರುದ್ಯೋಗಗಳು ನಿವಾರಣೆಯಾಗಬೇಕು—ಇದಕ್ಕೆ ರಾಜ್ಯ—ಕೇಂದ್ರ ಸರಕಾರಗಳಲ್ಲಿ ಸಾಮರಸ್ಯವಿರಬೇಕು, ಸುಭದ್ರ ಸರಕಾರಗಳಿರಬೇಕು—ಇದು ಅಕೆಯ ಆಶಯ

ತಾನು ವಿಧಾನ ಸಭಾ ಸದಸ್ಯೆಯಾದರೆ, ಕ್ಷೇತ್ರದ ಬಡ ಜನತೆಯ ಸಂಕಷ್ಟಗಳನ್ನು ನಿವಾರಿಸಲು ಆವಶ್ಯಕ ಕ್ರಮ ತೆಗೆದುಕೊಳ್ಳಲು ರಕ್ತವಿಸರಿ ದುಡಿಯುತ್ತೇನೆಂದು ಅಕೆ ಭಂಡವನೆ ನೀಡುತ್ತಾರೆ

ಅಕೆಯ ಪ್ರಬಲ ಪ್ರತಿಸ್ಪರ್ಧಿ ಜನಸಂಘದ ಡಾ| ಪಿ ಎಸ್. ಆಚಾರ್ಯರು (ಉಡುಪಿ ನಗರ ಸಭಾಪತಿ)

●●

ಉಡುಪಿಯಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಉದ್ಘಾಟನೆ

ಉಡುಪಿಯಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಉದ್ಘಾಟನೆಯನ್ನು ಶ್ರೀ ಎಸ್ ಡಿ ಸಾಕ್ಯಾಳ್ಯಕ ಅಧ್ಯಕ್ಷತೆಯಲ್ಲಿ ತಾ 12ರಂದು ಲೋಕ ಸಭಾ ಸದಸ್ಯ ಶ್ರೀ ಪಿ ರಂಗನಾಥ ಶೆಣೈ ಯವರು ನೆರವೇರಿಸಿ ಉಡುಪಿ ಕ್ಷೇತ್ರದ ಅಭ್ಯರ್ಥಿ ಶ್ರೀಮತಿ ಮನೋರಮಾ ಮಧ್ವರಾಜರನ್ನು ಪ್ರಲ್ಲೇಜ ಬಹುಮತದಿಂದ ಆರಿಸುವಂತೆ ಮತದಾರರನ್ನು ಕೇಳಿಕೊಂಡರು ಪ್ರಾರಂಭದಲ್ಲಿ ಉಡುಪಿ ಬ್ಲಾಕ್ ಕಾಂಗ್ರೆಸ್ಸಿನ ಕನ್ವೀನರ್ ಶ್ರೀ ಬಿ ಯೋಗೀಶ್ವರ ಹೊಳ್ಳರು ಸ್ವಾಗತಿಸಿದರು

ಶ್ರೀ ಶೆಣೈಯವರು ನೂತಾದಿ ಪ್ರತಿಪಕ್ಷೀಯರ ಕುರಿತು ಟೀಕಿಸಿ ಶ್ರೀಮತಿ ಗಾಂಧಿಯವರ ಧೂರೀಣತ್ವದಿಂದ ಭಾರತವಿಂದು ಜಗತ್ತಿನ ಪ್ರಬಲ ರಾಷ್ಟ್ರಗಳ ಪಂಙ್ತಿಯಾಗಿರುತ್ತದೆ. ಅವರ ಕೈಯನ್ನು ಬಲಗೊಳಿಸುವುದು ನಮ್ಮ ಕರ್ತವ್ಯ ಎಂದರು ತರುಣಾಯ ಸ್ಥಳೀಯ ಸಮಸ್ಯೆಗಳ ಕುರಿತು ಅವರು ಪ್ರಸ್ತಾಪಿಸಿ ಶ್ರೀಮತಿ ಮನೋರಮಾ ಮಧ್ವರಾಜರು ಈ ಕ್ಷೇತ್ರಕ್ಕೆ ಸಮರ್ಥ ಅಭ್ಯರ್ಥಿ ಎಂದೂ ಎಲ್ಲರೂ ಅವರನ್ನು ಆರಿಸಬೇಕೆಂದು ವಿನಂತಿಸಿದರು.

ಶ್ರೀ ಪಿ. ಆನಂದಕುಂದ ಹೆಗ್ಡೆ ಮತ್ತು ಶ್ರೀ ಎ. ಜೆ ಆಲ್ವೆಯವರು ಶ್ರೀಮತಿ ಮನೋರಮಾ ಮಧ್ವರಾಜರ ದಕ್ಷತೆ—ಯೋಗ್ಯತೆಯನ್ನು ವಿವರಿಸಿ ಅವರನ್ನು ಬೆಂಬಲಿಸುವಂತೆ ಕೇಳಿಕೊಂಡರು ಶ್ರೀ ನುಟ್ಕಿ ರಾಮಚಂದ್ರ ರಾಯರು ಮಾತಾಡಿ ಉಡುಪಿ ಯುವಕ ಕಾಂಗ್ರೆಸಿನವರ ಸಂಪೂರ್ಣ ಬೆಂಬಲ ಶ್ರೀಮತಿ ಮಧ್ವರಾಜರಿಗಿದೆ ಎಂದು ಹೇಳಿದರು

ಶ್ರೀಮತಿ ಮನೋರಮಾ ಮಧ್ವರಾಜರು ಮಾತಾಡಿ ಮತದಾರರ ಸಹಕಾರವನ್ನು ಅಪೇಕ್ಷಿಸಿ ತನ್ನನ್ನು ಆರಿಸುವಂತೆ ಜನರನ್ನು ಕಳಕಳಿಯಿಂದ ವಿನಂತಿಸಿ ಜನತೆಯ ಮತ್ತು ಈ ಕ್ಷೇತ್ರದ ಸೇವೆಸಲ್ಲಿಸುವ ಅವಕಾಶವನ್ನು ದೊರಕಿಸ ಬೇಕೆಂದರು

ಶ್ರೀ ಎಸ್. ಡಿ ಸಾಕ್ಯಾಜ್ಯರು ತನ್ನ ಅಧ್ಯಕ್ಷ ಭಾಷಣದಲ್ಲಿ ವಿರೋಧಿ ಪಕ್ಷಕ್ಕೆ ಬೆಂಬಲವಿತ್ತಲ್ಲಿ ಸುಖವಿಲ್ಲವೆಂದು ತಿಳಿಸಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರ ಗಾಡಿಯೆ ಎರಡು ಚಕ್ರಗಳಂತೆ ಎಂದೂ ಕೇಂದ್ರದಲ್ಲಿ ಪ್ರಬಲ ಅಡಳಿತ ಕಾಂಗ್ರೆಸ್ ಅಡಳಿತವಿರುವಾಗ ರಾಜ್ಯದಲ್ಲಿ ಸಹ ಅದೇ ಅಡಳಿತಪೇಕ್ಷಿಸುವುದು ಅವಶ್ಯವೆಂದೂ ಆದ್ದರಿಂದ ಅಡಳಿತ ಕಾಂಗ್ರೆಸಿಗೆ ಬೆಂಬಲ ನೀಡಬೇಕು ಎಂದೂ ಕೇಳಿಕೊಂಡರು

ಒಂತ್ಯದಲ್ಲಿ ಶ್ರೀ ಅರ್ ನರಸಿಂಹ ಪಾಂಗಣ್ಣಾಯರು ಧನ್ಯವಾದ ಸಮರ್ಪಿಸಿದರು

ಕರ್ನಾಟಕ ಬ್ಯಾಂಕಿನ ಕೊಡಿಯಾಲ್‌ಬೈಲ್ ಶಾಖೆಯ ಉದ್ಘಾಟನೆ.

ಕರ್ನಾಟಕ ಬ್ಯಾಂಕಿನ 113ನೇ ಶಾಖೆಯಾದ ಕೊಡಿಯಾಲ್‌ಬೈಲ್ ಶಾಖೆಯ ಉದ್ಘಾಟನೆಯನ್ನು ತಾ 18ರಂದು ಮಂಗಳೂರಿನ ಜಿಪಸ್ ರೈಟ್ ರೆನರೆಂಡ್ ಡಾ| ಐ ಎಸ್. ಡಿ'ಸೋಜಾರವರು ಉದ್ಘಾಟಿಸಿದರು. ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರು ಅಧ್ಯಕ್ಷತೆವಹಿಸಿದ್ದರು ನಗರದ ಕೆನರಾ ಸೇಲ್ಸ್ ಕಾರ್ಪೊರೇಶನ್‌ನ ಚೆಯರ್‌ಮೇನ್ ಡಾಗೂ ಸನಹಾರತದ ಸಂಪಾದಕ ಶ್ರೀಸಂಜೀವ ವಿ ಕುಡ್ವಾರವರು ಸೇಫ್ ಡಿಪಾಸಿಟ್ ಲೋಕರ್ಸ್‌ನ ಉದ್ಘಾಟನೆಯನ್ನು ನೆರವೇರಿಸಿದರು

ಆರಂಭದಲ್ಲಿ ಬೇಂಕಿನ ಚೆಯರ್ ಮೇನ್ ಶ್ರೀ ಕೆ ಸೂರ್ಯನಾರಾಯಣ ಆಡಿಗರು ಸಾಗ್ತತಿನ ಬೇಂಕಿನ ಸಾಧನೆಯನ್ನು ವಿವರಿಸಿದರು. ಈ ಹೊಸ ಶಾಖೆಯಲ್ಲಿ ಸೇಫ್ ಡಿಪಾಸಿಟ್ ಲಾಕರ್ಸ್ ತೆರೆಯುವುದರ ಮೂಲಕ ಜನರಲ್ಲಿರುವ ನಮ್ಮು ಒಡವೆಗಳನ್ನು ಸುಭದ್ರವಾಗಿ ಇರಿಸುವ ಅನುಕೂಲತೆ ಕಲ್ಪಿಸಲಾಗಿದೆ ಎಂದರು.

ಪೂಜ್ಯ ಬಿಷಪ್‌ರು ಉದ್ಘಾಟಿಸುತ್ತಾ ಈ ಹೊಸ ಶಾಖೆಯು ಜನರಿಗೆ ಉಪಯೋಗಕರವಾಗಿ ಬಾಳಿ ಕೀರ್ತಿಗಳಿಸಲೆಂದು ಹರಸಿದರು ಬ್ಯಾಂಕ್‌ಗಳು ಆರ್ಥಿಕ ಜೀವನದಲ್ಲಿ ಸೇವೆಸಲ್ಲಿಸುವುದು ಮಾತ್ರವಲ್ಲದೆ ಅವುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ ಪ್ರಯೋಜನ ಹೊಂದಬಹುದಾದ ದಾರಿಯನ್ನು ತೋರಿಸಲು ಆಸಕ್ತಿವಹಿಸಬೇಕೆಂದು ತಿಳಿಸಿ ತಾವು ಸ್ವತಃ ಬೇಂಕ್‌ನಲ್ಲಿ ಒಂದು ಎಕೌಂಟನ್ನು ತೆರೆದರು.

ಶ್ರೀ ಸಂಜೀವ ವಿ ಕುಡ್ವರವರು ಸೇಫ್ ಡಿಪಾಸಿಟ್ ಲಾಕರ್‌ಗಳನ್ನು ಉದ್ಘಾಟಿಸಿ ಬೇಂಕ್ ಉದ್ದಿಮೆ ರಂಗದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ ಎಂದರು ಬೇಂಕ್‌ಗಳ ಏಳಿಗೆ ಕೇವಲ ಧನ ಬಲದಿಂದ ಆಗಿದೆದೆ ಜನ ಬೆಂಬಲದಿಂದಲೂ ನಡೆದಿದೆ ಎಂದರು ಈ ಬೇಂಕ್ ಕಳೆ ಜಿಲ್ಲೆಯ ವ್ಯಾಪಾರ, ಕೈಗಾರಿಕೆಗಳಿಗೆ ನೆರವಾಗಿ ಜನಜೀವನದಲ್ಲಿ ಹಾಗೂ ಜಿಲ್ಲಾಭಿವೃದ್ಧಿಗೆ ಸಹಕರಿಸುವುದರಿ ಮೂಲಕ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಹಾರೈಸಿದರು.

ಕೆನರಾ ಚೇಂಬರ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರೀನ ಅಧ್ಯಕ್ಷ ಶ್ರೀ ಯು ರಾಜಾರಾಮ ನುಳ್ಳರು ಅಭಿನಂದನಾ ಭಾಷಣ ಮಾಡಿದರು.

ಪ್ರೊ| ಎಸ್.ವಿ. ಪರಮೇಶ್ವರ ಭಟ್ಟರಿಗೆ ಸನ್ಮಾನ

ತಾ 8ರಂದು ಮಂಗಳೂರಿನ ಪುರಭವನದಲ್ಲಿ ಪ್ರೊ| ಎಸ್.ವಿ. ಪರಮೇಶ್ವರ ಭಟ್ಟರನ್ನು ಸನ್ಮಾನಿಸುವ ಹಾಗೂ ಸಂಭಾವನಾ ಗ್ರಂಥ ಸಮರ್ಪಣಾ ಸಮಾರಂಭವು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಮೈಸೂರು ವಿವಿ ನಿಲಯದ ಕುಲಪತಿ ಪ್ರೊ| ದೇ. ಜವರೇ ಗೌಡರು ಪ್ರೊ| ಭಟ್ಟರ ಶಿಷ್ಯರೇ ಬರೆದು ಪ್ರಕಟಿಸಿದ "ಪೂರ್ಣ ಕುಂಭ"ವನ್ನು ಪ್ರೊ| ಭಟ್ಟರಿಗೆ ಸಮರ್ಪಿಸಿದರು ಅಲ್ಲದೆ ಅವರು, ಪ್ರೊ| ಭಟ್ಟರು ಬರೆದ "ಕಣ್ಣಮುಚ್ಚಾಲೆ, "ನೆನಪಿಗೆ ಬಂದ ಗಾದೆಗಳು" ಮತ್ತು "ಮುನ್ನುಡಿಗಳು" ಎಂಬ ಮೂರು ಪುಸ್ತಕಗಳನ್ನು ಪ್ರಕಟಿಸಿದರು.

ಪೂರ್ಣಕುಂಭದ ಸಂಪಾದಕ ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳರು ಸ್ವಾಗತಿಸಿ ಆತಿಥಿಗಳ ಪರಿಚಯ ಮಾಡಿಸಿದರು ಶ್ರೀ ಬಿ ವಿ ವಿವೇಕ ರೈಯವರು ಸಂದೇಶಗಳನ್ನೋದಿದರು ಶ್ರೀ ಕೆ ಸುಬ್ರಹ್ಮಣ್ಯ ಕೆವ್ವಾಯರು ವರದಿ ಓದಿದರು ದೇ ಜ.ಗೌ ಅವರು ಎಸ್.ವಿ ಪರಮೇಶ್ವರ ಭಟ್ಟರ ಬಾಳಿನ ಸಿಹಿಕಹಿಗಳನ್ನು ಸ್ಮರಿಸಿದರು

ಎಸ್ ವಿ ಪಿ ಯವರ ಗುರುಗಳಾದ ಪ್ರೊ| ಕೆ. ವೆಂಕಟರಾಮಪ್ಪನವರು ಶ್ರೀಯುತ ಪ್ರಾರ್ಥನೆ ಮಾಡಿದರು ಡಾ| ಹಾ ಮಾ. ನಾಯಕ್, ಪ್ರೊ| ಕು ಶಿ ಹರಿದಾಸ ಭಟ್, ಶ್ರೀ ವೆರ್ಯ ಲಕ್ಷ್ಮೀನಾರಾಯಣ ಆಳ್ವ ಮೊದಲಾದವರು ಪ್ರೊ| ಭಟ್ಟರ ಬಗ್ಗೆ ಮಾತಾಡಿದರು

ಪ್ರೊ| ಭಟ್ಟರು ತನ್ನ ಕುರಿತು ತೋರಿದ ಅಭಿಮಾನಕ್ಕೆ ಕೃತಜ್ಞತೆ ಸಲ್ಲಿಸುತ್ತಾ, "ಗುರುಗಳು, ಸ್ನೇಹಿತರು ಪ್ರಕಾಶಕರು ನನ್ನನ್ನು ಪ್ರಕಾಶಕ್ಕೆ ತಂದರು ಮಿತ್ರರ ಪ್ರೋತ್ಸಾಹ ಪ್ರಭಾವ ನನ್ನ ಸ್ವಭಾವವನ್ನು ಬದಲಿಸಿ ಇಷ್ಟು ಕಾರ್ಯ ಮಾಡಿಸಿದುದು" ಎಂದು ಹೇಳಿದರು.

ಅಧ್ಯಕ್ಷ ಶ್ರೀ ಹೆಗ್ಗಡೆಯವರು ಪ್ರೊ| ಭಟ್ಟರಿಗೆ ಮಂಜುನಾಥ ಸ್ವಾಮಿಯ ಹಾಗೂ ಧರ್ಮದೇವತೆಗಳ ಶ್ರೀ ರಕ್ಷೆ ಹೊರೆಯಂತೆಂದು ಹಾರೈಸಿದರು ●

ಬಳಸಿ ಬಾಯಿ ಬಿಡುವದಕ್ಕಿಂತ ಉಳಿಸಿ ಗಳಿಸುವುದೇ ಲೇಸು

o o o

In the Court of the Munsif of Bantwal, S. K.

Ex. Case No. 88/71 in
O. S. No. 39/69

Between:

K. Venugopal Naik
Decree-Holder
and
Shanthiraja Ajila and others
—Judgement-Debtors

NOTICE

To

1) Devaraja Ajila-(J D.No-4)
S/o Laxmimathi Jain-
2) Rajarathna, (J. D. No. 5)
D/o Padmavathi

Both are permanently residing in Kadeshwalya village of Bantwal Taluk. P. O. Kadeshwalya. S. K.

Please take notice that in the above suit the execution petitioner (Decree-Holder) has applied for the sale of the immoveable properties belonging to you and fully described in the sale proclamation and 14th March 1972 has been fixed for setting terms of the proclamation of sale granting permission to the Petitioner to bid and set off.

(By order of Court)

Sd|—P. Narayana Bhat
Advocate for Decree-Holder.

19—2—72.

(ಎರಡನೇ ಪುಟದಿಂದ)

'ಯಾವುದದು ನೀನು ಯೋಚಿಸಿದ ಹೆಸರು?'

'ನೀವು ಮನುಷ್ಯರೊಳಗೆ ಸಿಂಹಪ್ರಾಯರು, ನಮ್ಮ ಕುಮಾರ ಶತ್ರುಗಳಿಗೆ ಮಾತ್ರ ಸಿಂಹದಂತಿದ್ದು, ಉಳಿಕೆಯವರಿಗೆ ಪ್ರಿಯನಾಗಿರ ಬೇಕು. ಆದ್ದರಿಂದ 'ಅರಿಕೇಸರಿ' ಎಂದಿಟ್ಟರಾಗದೇ?'

ಂಂ ಂಂ ಂಂ

ಈ ನೂರಾರು ನೆನಪುಗಳು ನರಸಿಂಹನ ಚಿತ್ತಭಿತ್ತಿಯಲ್ಲಿ ಮೂಡಿ ಮಾಯವಾದುವು.

ಆವುದನ್ನೂ ಅರಿಯದ ಅರಮನೆಯ ಪುರೋಹಿತರು ಅವನಿಂದ ಉತ್ತರ ನಿರೀಕ್ಷಿಸುತ್ತ ನಿಂತಿದ್ದರು.

'ಪುರೋಹಿತರೇ, ಶಿಶುವಿಗೆ ಅರಿಕೇಸರಿ ಎಂದು ಹೆಸರಿಡುವ. ಇದು ಅವಳು ಬದುಕಿದ್ದಾಗ ಸೂಚಿಸಿದ ಹೆಸರು. ಆ ಹೆಸರಿಟ್ಟರೆ ಅವಳ ಆತ್ಮಕ್ಕೂ ತೃಪ್ತಿ.'

ಹೀಗೆ ನುಡಿದು ನರಸಿಂಹ ಪುರೋಹಿತರನ್ನು ಬೀಳ್ಕೊಟ್ಟು ಸ್ನಾನದ ಮನೆಗೆ ನಡೆದ.

೪

ಮೆಲ್ಲಗೆ, ಬಹುಮೆಲ್ಲಗೆ ತಿಂಗಳೆರಡು ಕಳೆಯಿತು.

ಕಾಲಗತಿಯಲ್ಲಿ ನಿಜಕ್ಕೂ ಯಾವ ಬದಲಾವಣೆಯೂ ಆಗಿರಲಿಲ್ಲ. ಎಂದಿನಂತೆಯೇ ಆದು ಉರುಳುತಿತ್ತು.

ಮನಸ್ಸಿನಲ್ಲಿ ಹುದುಗಿದ್ದ ಭಾರ, ಕಾಲ ಮಂದಗತಿಯಿಂದ ಕ್ರಮಿಸುತ್ತದೆ ಎಂಬ ಅನುಭವವನ್ನು ಮಾತ್ರ ತಂದುಕೊಡುತ್ತದೆ. ರಾಜ ಪರಿವಾರಕ್ಕೂ ಆಗಿದ್ದುದು ತದನುರೂಪದ ಅನುಭವ.

ದುಃಖದಿಂದಾಗಿ ಅವರಿಗೆ ಹೊತ್ತು ಹೋಗಿದ್ದು ತಿಳಿಯಲಿಲ್ಲ.

ಹೊತ್ತೇನೋ ಜಲಿಸುತಿತ್ತು. ಚಲಿಸಿದ್ದು ತಿಳಿಯುತ್ತಿರಲಿಲ್ಲ.

ರಾಜ ಪರಿವಾರದವರು ಕ್ರಮ ಕ್ರಮವಾಗಿ ಜಾನಕಿಯ ಸಾವನ್ನು ಮರೆಯಲಾರಂಭಿಸಿದರು. ಹೊಸ ಉತ್ಸಾಹದಿಂದ ತಮ್ಮ-ತಮ್ಮ ಕೆಲಸಗಳಲ್ಲಿ ನಿರತರಾದರು. ಅಂತಹ ಒಂದು ಅನಾಹುತ ನಡೆಯಲಿಲ್ಲವೇನೋ ಎನ್ನುವಂತೆ ವರ್ತಿಸಲಾರಂಭಿಸಿದರು.

ನಿಧಾನವಾಗಿ ಹೊಸ ಜೀವಕಳೆ ತುಂಬಿ ಕೊಂಡಿತು.

ನರಸಿಂಹನೂ ಬಹುವಾಗಿ ಪ್ರಯತ್ನಿಸಿದ. ಮರೆಯಲೆಂದು ನೂರು ಹೆಣ್ಣಾಸಗಳಲ್ಲಿ ಮನಸ್ಸನ್ನು ತೊಡಗಿಸಿದ. ದಿನದ ಬಹುಭಾಗವನ್ನು ಒಂದಲ್ಲ ಒಂದು ಕೆಲಸದಲ್ಲಿ ಆತ ಕಳೆಯಲು ಮನಸ್ಸು ಮಾಡಿದ. ಆದರೆ ಮನಸ್ಸು ಮಾತ್ರ ಹಿಡಿದ ಕೆಲಸದಲ್ಲಿ ಗಟ್ಟಿಯಾಗಿ ನಿಲ್ಲುತ್ತಿರಲಿಲ್ಲ.

ಚಿತ್ತ ಸ್ವಾಸ್ಥ್ಯವಿಲ್ಲದಾಗ ಚಿತ್ತೈಕಾಗ್ರತೆ ಬರುವುದಾದರೂ ಹೇಗೆ?

ಅನ್ನ ನಿದ್ರೆಯನ್ನು ಕಾಣದೆ ಅವನ ದೇಹ ಕಡ್ಡಿಯಾಯಿತು. ಕಣ್ಣಿನ ಸುತ್ತ ಕರಿಯ ನೆರಳು ಕಾಣಿಸಿ ಕೊಂಡಿತು. ತುಂಬಿಕೊಂಡ ಕೆನ್ನೆಗಳು ಗುಳಿ ಬಿದ್ದವು. ಯಾವ ಸಮಾಧಾನೋಕ್ತಿಗೂ ನೋವಿನ ಉಪಶಮನ ಮಾಡುವುದು ಆಗದೆ ಹೋಯಿತು.

ಜಾನಕಿಯನ್ನು ಆತ ಹೀಗೆ ಹಚ್ಚಿಕೊಂಡಿದ್ದ ಎಂಬುದರ ಅರಿವು ಉಳಿಕೆಯವರಿಗೆ ಆದುದು ಆಗಲೇ!

ಸಂಜೆ ಎಂಟರ ಸಮಯ ಇರಬಹುದು, ನರಸಿಂಹ ಒಬ್ಬನೇ ತನ್ನ ಅರಮನೆಯ ವಿಶಾಲವಾದ ಹಜಾರದಲ್ಲಿ ಶತಪಥ ತಿರುಗುತಿದ್ದ. ಕಂಡ ವಸ್ತುವಿನಲ್ಲಿ ಕೈಯಿಟ್ಟು, ಅದನ್ನೊಮ್ಮೆ ಎತ್ತಿಕೊಂಡು ಕೆಳಗಿಡುತ್ತಿದ್ದ.

ಅವನ ಎಲ್ಲ ವ್ಯವಹಾರ ಯಾಂತ್ರಿಕವಾಗಿತ್ತು.

ಮುಟ್ಟಿದ ಯಾವ ವಸ್ತುವೂ ಅವನ ಮನಸ್ಸನ್ನಾಕರ್ಷಿಸಲಿಲ್ಲ. ಸ್ಪರ್ಶಿಸಿದ ಪ್ರತಿ ವಸ್ತುವೂ ಜಾನಕಿಯ ಜ್ಞಾಪಕ ತಂದು ಕೊಟ್ಟು ಅವನಲ್ಲಿ ಅನಾಸಕ್ತಿಯನ್ನು ಹುಟ್ಟಿಸುತಿತ್ತು.

ಬೀರುವಿನ ಬಾಗಿಲು ತೆರೆದರೆ ಅಲ್ಲಿ ಕಂಡುವು-ಅವಳ ವಸ್ತ್ರಾಲಂಕಾರಗಳು. ತಿಜೋರಿಯನ್ನು ತಿರುಗಿಸಿದರೆ, ಅಲ್ಲಿ ಕಣ್ಣಿಗೆ ಬಿದ್ದವು—ಅವಳ ಆಭರಣಗಳು. ದೀಪದ ಮಂದ ಪ್ರಕಾಶದಲ್ಲಿ ಹೊಳೆಯುತ್ತಿದ್ದ ಅವುಗಳು ಅವನನ್ನು ಅಣಕಿಸುತಿದ್ದುವು. ಆತ ಅಸಹ್ಯವಾದ ವೇದನೆಯನ್ನನುಭವಿಸಿದ.

ದೊಪ್ಪನೆ ಕುರ್ಚಿಯೊಂದರಲ್ಲಿ ಕುಳಿತು, ತಲೆಯನ್ನು ಗಟ್ಟಿಯಾಗಿ ಕೈನೆರಡು ಕೈಗಳಿಂದಲೂ ಒತ್ತಿ ಹಿಡಿದುಕೊಂಡ. ತಲೆ ಒಡೆದು ಹೋಗುವಂತೆ ಸಿಡಿಯುತ್ತಿತ್ತು.

ಮನಸ್ಸು—ನಿಗ್ರಹಿಸಲು ಯತ್ನಿಸಿದಷ್ಟು ವ್ಯಗ್ರವಾಗುತ್ತಿತ್ತು.

ಸ್ಥಿಮಿತಕ್ಕೆ ತಂದುಕೊಳ್ಳಲೇ ಬೇಕೆಂಬ ದೃಢ ನಿರ್ಧಾರದಿಂದ, ಕಣ್ಣುಗಳನ್ನು ಮೇಜಿನ ಮೇಲೆ ಅರ್ಧ ಬಿಚ್ಚಿಟ್ಟ ಗ್ರಂಥದ ಮೇಲೆ ಹಾಯಿಸಿದ.

ದುಃಖ ಬಂದಾಗ ಉದ್ವಿಗ್ನಗೊಳ್ಳದೆ, ಸುಖ ಬಂತೆಂದು ಹರ್ಷಿಸದೆ, ಸದಾ ಸಮ ಸ್ಥಿತಿಯಲ್ಲಿರು.

ಈ ಸಾಲುಗಳನ್ನು ಮತ್ತೊಮ್ಮೆ, ಮಗುದೊಮ್ಮೆ ಹತ್ತಾರು ಬಾರಿ ಆತ ಓದಿದ.

ಅಪರಿಂದ ಭಾರವಾಗಿದ್ದ ಹೃದಯ ಹಗುರಾಯಿತು.

ಎಷ್ಟು ಹೊತ್ತು ಈ ಮಾತುಗಳನ್ನು ಮೆಲುಕು ಹಾಕುತ್ತ ಕುಳಿತನೋ ಅವನಿಗೆ ತಿಳಿಯದು.

'ಆರೋಗಣೆ ಸಿದ್ಧವಾಗಿದೆ. ಆರಿ ಹೋದೀತು. ಬಡಿಸಲೇ?'

ಹಜಾರದ ಬಾಗಿಲ ಸಂದಿಯಲ್ಲಿ ನಿಂತುಕೊಂಡು ಯಾರೋ ಅವನನ್ನು ಊಟಕ್ಕೆ ಕರೆದರು.

ಜಾನಕಿ ಬದುಕಿದ್ದಷ್ಟು ದಿನವೂ ರಾಜಕಾರಣದ ಗುಂಗಿನಲ್ಲಿ ಮೈಮರೆತ್ತಿದ್ದ ಅವನನ್ನು ಹೀಗೆ ಊಟಕ್ಕೆಬ್ಬಿಸುತ್ತಿದ್ದಳು

ಹೀಗೆ ಕರೆದಾಗ ಅವಳ ನೆನಪು ಅವನಿಗೆ ಬಾರದಿರಲಿಲ್ಲ.

ಅವಳು ಜೀವಂತವಿದ್ದರೆ ಇಂದೂ ಅವನನ್ನು ಆರೋಗಣೆಗೆ ಬರಮಾಡಿಕೊಳ್ಳುತ್ತಿದ್ದಳು. ಕೈಹಿಡಿದು ಕರೆದೊಯ್ಯುತಿದ್ದಳು.

ಆದರೆ ಇಂದು—?

ಅವಳಿರಲಿಲ್ಲ.

ಅವಳಿರಲಿಲ್ಲ ನಿಜ!

ಆದರೂ ಅದೇ ಅಕ್ಕರೆ, ಮಾರ್ದವತೆ ತುಂಬಿದ ಧ್ವನಿ.

ಅದು ತೀರ ಅಪರಿಚಿತವಾದ ಧ್ವನಿ. ಹಿಂದೆಂದೂ ಕೇಳದ ಧ್ವನಿ. ಅವನಿಗೆ ತಿಳಿದ ಹಾಗೆ ಅವನ ಪರಿವಾರದಲ್ಲಾರಿಗೂ ಇಲ್ಲದ ಧ್ವನಿ. ಹೊಸ ಬಳಿರುವಂತೆ ಕಂಡಿತು.

ಅವಳನ್ಯಾರು ಕೆಲಸಕ್ಕೆ ನಿಯೋಜಿಸಿದರು.

ಈ ಅನುಮಾನ ಅವನನ್ನು ಬಾಧಿಸದಿರಲಿಲ್ಲ.

ಆತ ಇನ್ನೂ ಕುಳಿತ ಕುರ್ಚಿಗೆ ಅಂಟಿಕೊಂಡಿದ್ದ.

'ಪ್ರಭುಗಳು ದಯ ಮಾಡಿಸುತ್ತೀಂ' ಬಾಗಿಲ ಬಳಿ ನಿಂತಿದ್ದ ಕೋಮಲ ಧ್ವನಿಯಾಕೆ ವಿನಯದಿಂದ ಪ್ರಾರ್ಥಿಸಿದಳು. ಎರಡನೆಯ ಬಾರಿಗೆ ಕರೆದಾಗ ಆ ಮಧುರ ಸ್ವರದೊಡನೆ ಕೇಲಿ ಬಂತು ತೊಟ್ಟ ಬಳೆಗಳ ಕಿಂಕಿಣಿ ರವ.

ನರಸಿಂಹ ಕುಳಿತಲ್ಲಿಂದೆದ್ದ.

ಭೋಜನ ಗೃಹಕ್ಕೆ ತೆರಳಲನುವಾದ.

ಹಜಾರವನ್ನು ದಾಟಿ ಭೋಜನ ಗೃಹಕ್ಕೆ ಹಾದು ಹೋಗುವಾಗ, ತನಗೆ ಬೆನ್ನು ಹಾಕಿ ತನ್ನಿಂದ ಅನತಿ ದೂರದಲ್ಲಿ ನಡೆದು ಹೋಗುತ್ತಿದ್ದ ಅಪರಿಚಿತ ಸ್ತ್ರೀಯನ್ನು ನೋಡಿದ. ಗಾಳಿಯಲ್ಲಿ ಆಕೆ ತೇಲಿ ಹೋಗುತ್ತಿರುವಂತೆ ಕಂಡಿತು.

ಆ ನಡೆಯಲ್ಲೊಂದು ಸೊಗಸು, ನವಿನತೆ ಅವನಿಗೆ ಕಂಡಿತು.

ನರಸಿಂಹ ಭೋಜನ ಶಾಲೆಯನ್ನು ಪ್ರವೇಶಿಸಿ ತನಗಾಗಿ ಹಾಸಿದ್ದ ಮೆಲ್ವಾಸನದ ಮೇಲೆ ಕುಳಿತ. ಆಕೆ ಆತನ ಮುಂದು ಬೆಳ್ಳಿಯ ಚಂಬು ತುಂಬ ನೀರು ತಂದಿಟ್ಟಳು. ಭಂಗಾರದ ತಾಟೊಂದನ್ನು ಹಾಕಿದಳು. ಆ ತಟ್ಟೆಯ ಸುತ್ತ ಬೆಳ್ಳಿಯ ನಾಲ್ಕು ಪುಟ್ಟ ಬಟ್ಟಲುಗಳನ್ನಿರಿಸಿದಳು. ತಯಾರಿಸಿದ ವಿಧ ವಿಧದ ಪದಾರ್ಥಗಳನ್ನು ಅವುಗಳಲ್ಲಿ ಬಡಿಸಿದಳು. ಮಲ್ಲಿಗೆಯ ಹೂವಿನಂತಿದ್ದ—ಸುವಾಸನೆಯ ಆಕ್ಕಿಯಿಂದ ತಯಾರಿಸಿದ ಅನ್ನವನ್ನು ನೀಡಿದಳು.

ಮಾಡಿದ್ದ ಅಡುಗೆ ರುಚಿಯಾಗಿತ್ತು.

ಹಸಿವಿಲ್ಲದವರನ್ನೂ ಉಣ್ಣುವಂತೆ ಮಾಡುವ ರುಚಿಯಾದ ಅಡುಗೆ.

ಆ ಪದಾರ್ಥಗಳಿಂದೇಳುವ ವಾಸನೆಯಿಂದ—ಊಣದೆಯೇ ಅಡುಗೆ ರುಚಿಯಾಗಿತ್ತೆಂದು—ಹೇಳಬಹುದು.

ನರಸಿಂಹ ಮುಖವೆತ್ತದೆ, ಅತ್ತಿತ್ತ ತಿರುಗದೆ ಊಣಲಾರಂಭಿಸಿದ.

'ಹುಳಿಯನ್ನಿಷ್ಟು ಬಡಿಸಲಾ'

——

'ಮುಳುಗಾಯಿಯ ವೊಸರು ಬಜ್ಜಿ ಇಷ್ಟು'

——

'ಆಲೂ ಪಲ್ಯ'

——

'ಗಸಗಸೆಯ ಪಾಯಸ'

——

'ಕುಡಿಯುವುದಕ್ಕಿಷ್ಟು ಸಾರು ತುಂಬಿ ತರಲಾ'

——

ಒಂದಕ್ಕೂ ನರಸಿಂಹ ಉತ್ತರಿಸಲಿಲ್ಲ. ಸಾಕು—ಬೇಕು ಹೇಳಲಿಲ್ಲ. ಬಡಿಸಿದ್ದನ್ನು ಪ್ರಯಾಸದಿಂದ ಉಣ್ಣುತಿದ್ದ.

(ಮುಂದುವರಿಯುವುದು)

NAVAYUGA 24-2-1972
Registered with the Registrar of News Papers for India under No R. N. 3546/'57

REGD. No. B, G. 176
LICENCE No. 33
Licensed to Post without Prepayment

ಮಕ್ಕಳಿಗೆ ಕಥೆ—

ಕೋಶಾಧಿಕಾರ

ಲೇಖಕರು:— ಶ್ರೀ "ನನಗಿರಿನಂದ"

ಮಗಧ ದೇಶದಲ್ಲಿ ಸೋಮನೆಂಬ ರಾಜನಿಗೆ ಬುದ್ಧಿವಂತನಾದ ಖಜಾನೆಯ ಅಧಿಕಾರಿಯೊಬ್ಬನಿದ್ದ. ಅವನು ಬುದ್ಧಿವಂತ ಮಾತ್ರವಲ್ಲದೆ ವ್ಯಾಮೋಹಕನೂ, ನಿಃಸ್ವಾರ್ಥಿಯೂ ಆಗಿದ್ದ. ಅವನು ತುಂಬ ಮುಂಜಾಗ್ರತೆಯಿಂದ ಆ ಪದವಿಗೆ ಇನ್ನೊಬ್ಬ ನನ್ನು ನಿಯೆನಿಸಬೇಕೆಂತಿತು. ಅದಕ್ಕೆ ತಕ್ಕವನನ್ನು ಹೇಗೆ ಆರಿಸಿಕೊಳ್ಳುವುದೆಂದು ರಾಜನು ಮುಖ್ಯ ಮಂತ್ರಿಯೊಂದಿಗೆ ಆಲೋಚನೆ ನಡೆಸಿದನು. ಅನಂತರ ಅವನು ಉಪಾಯವನ್ನು ಕಂಡುಹಿಡಿದು, ನಗರದಲ್ಲಿ ಸ್ವಲ್ಪ ರೀತಿಯಾಗಿ ಒಂದು ಡಂಗುರ ಹಾಕಿಸಿದನು.

"ಅನ್ನಾನದಲ್ಲಿ ಒಂದು ಮುಖ್ಯ ಪದವಿಗೆ ತಕ್ಕವರೊಬ್ಬರು ಬೇಕು. ನಿಷ್ಠಾವಂತರಾದ ಯುವಕರು ರಾಜರ ಸಭೆಗೆ ಬರತಕ್ಕದ್ದು. ರಾಜರು ಕೆಲವು ಪ್ರಶ್ನೆಗಳನ್ನು ಕೇಳುವರು. ಅದಕ್ಕೆ ಸರಿಯಾದ ಉತ್ತರಕೊಟ್ಟವರಿಗೆ ಬಹುಮಾನ ಕೊಡುವರು. ಪರೀಕ್ಷೆಯಲ್ಲಿ ಗೆದ್ದವರಿಗೆ ಪದವಿಕೊಡುತ್ತಾರೆ."

ಎಷ್ಟೋ ದಿವಸದಿಂದ ಬರಕ್ಕೆದ್ದಿದ್ದ ಮೂಗುರ ಸಾರಲಾಯಿತು. ಆ ವ್ಯಕಾರ ನು ಸಾರು ವಷ್ಟು ಮಂದಿ ಯುವಕರು ರಾಜರಭೆಗೆ ಬಂದರು ಎಷ್ಟೊಂದು ವಿದ್ವಾಂಸರೇ. ಮಂತ್ರಿ ಅವರನ್ನೆಲ್ಲ ಪ್ರತ್ಯೇಕವಾಗಿ ಕರೆಯಿಸಿ ಕೆಲವು ಪ್ರಶ್ನೆಗಳನ್ನು ಕೇಳಿದನು. ಅವರೊಳಗೆ ಹತ್ತು ಮಂದಿಯನ್ನು ಮಾತ್ರ ಆರಿಸಿ ಇಟ್ಟುಕೊಂಡು ಉಳಿದವರನ್ನು ಹಿಕ್ಕೆ ಪುಟ್ಟಿ ವಕ್ಷಿಣೆ ಕೊಡಿಸಿ ಮನೆಗೆ ಕಳುಹಿಸಿದನು.

ಅನಂತರ ಮಂತ್ರಿ ಆಹತ್ತು ಮಂದಿಯನ್ನು ಕರೆಯಿಸಿಕೊಂಡು ದೇವಾಲಯದ ಬಳಿಗೆ ಹೋದನು. ಅಲ್ಲಿ ಕೆಸರು ತುಂಬಿದ ಒಂದು ಚಿಕ್ಕ ಗದ್ದೆ ಇತ್ತು. ಆ ಗದ್ದೆ ದಾಟಿ ಬಟ್ಟೆಗೆ ದೇವಾಲಯ.

ಮಂತ್ರಿ ಹತ್ತು ಮಂದಿ ಯುವಕರನ್ನು ನೋಡಿ, 'ನೀವು ಭೂಮಾತೆಗೆ ಸೇವೆ ಮಾಡುವುದಿರಿಂಬ ಶ್ರದ್ಧೆಯಿಂದ ಕೆಸರಿನಲ್ಲಿ ಇಳಿದು ಗದ್ದೆಯನ್ನು ದಾಟಿರಿ.' ಎಂದನು.

ಹಾಗೆಯೆ ಹತ್ತು ಮಂದಿಯೂ ಆಜ್ಞೆಗೆ ದಾಟಿದರು. ಅವರ ಪಾದಗಳ ಮೇಲೆ ಸೊಣಗಂಟಿನವರೆಗೂ ಗಟ್ಟಿ ಕೆಸರು ಅಂಟಿಕೊಂಡಿತು

ಅಲ್ಲಿ ಹತ್ತು ತಂಬಿಗೆಗಳಲ್ಲಿ ನೀರು ತುಂಬಿ ಸಾಲಾಗಿ ಇಡಲ್ಪಟ್ಟಿದ್ದವು. ಒಂದೊಂದು ತಂಬಿಗೆಯ ಮೇಲೆಯೂ ತೆಳ್ಳಗಿನ ಹಲಗೆ ತುಂಡೊಂದು ಮುಚ್ಚಿಡಲ್ಪಟ್ಟಿತ್ತು.

ಮಂತ್ರಿ ಅವರನ್ನು ನೋಡಿ 'ನೀವು ಒಬ್ಬೊಬ್ಬರೂ ಈ ತಂಬಿಗೆಯನ್ನು ತೆಗೆದುಕೊಂಡು, ಅಲ್ಲಿ ಬೇರೆ ಬೇರೆಯಾಗಿರುವ ಒಂದೊಂದು ಸಡಿಕೆ ಕೋಣೆಗೆ ಹೋಗಿ ಕಾಲು ತೊಳೆದುಕೊಂಡು ಬನ್ನಿ' ಎಂದನು.

ಮಂತ್ರಿ ತೋರಿಸಿದಲ್ಲಿ ತಡಿಕೆಗಳಿಂದ ಬೇರೆ ಬೇರೆ ಹತ್ತು ಕೋಣೆಗಳಿದ್ದುವು. ಒಂದರೊಳಗೆ ಇದ್ದವರಿಗೆ ಇನ್ನೊಂದು ಕೋಣೆ ಕಾಣುವುದಿಲ್ಲ.

ಹತ್ತು ಮಂದಿ ಯುವಕರೂ ತಂಬಿಗೆ ತೆಗೆದುಕೊಂಡು ಆ ಕೋಣೆಯೊಳಗೆ ಹೋಗಿ ಕಾಲು ತೊಳೆದುಕೊಂಡು ಬಂದರು. ಅನಂತರಲ್ಲಿ ಇಬ್ಬರು ಮಾತ್ರವೇ ಒಂದು ಚೂರೂ ಕೆಸರಿನ ಪಸೆ ಇಲ್ಲದ ಹಾಗೆ ಶುಭ್ರವಾಗಿ ಕಾಲು ತೊಳೆದುಕೊಂಡಿದ್ದರು.

ಉಳಿದವರು 'ಈ ನೀರು ಸಾಲದು;— ಇನ್ನೊಂದು ನೀರು ಹೇಗೆ ಸಾಕು?—ಇನ್ನೊಂದು ತಂಬಿಗೆ ನೀರು ಕೊಡಿಸಿ—ಕೆರೆಗೆ ಹೋಗಿ ತೊಳೆದುಕೊಂಡು ಬರುತ್ತೇನೆ' ಹೀಗೆ ಒಬ್ಬೊಬ್ಬರು ಒಂದೊಂದು ಅಡಚಣೆ ಹೇಳಿದರು.

ಉಂಧನರೆಲ್ಲರಿಗೂ ಒಂದೊಂದು ಬೆಳ್ಳಿ ದಕ್ಷಿಣೆ ಕೊಟ್ಟು ಮನೆಗೆ ಕಳುಹಿಸಿ ಬಿಟ್ಟನು ಮಂತ್ರಿ.

ಉಳಿದ ಇಬ್ಬರನ್ನು ಕುರಿತು ಮಂತ್ರಿ "ತಂಬಿಗೆ ನೀರಿನಲ್ಲಿ ಹೇಗೆ ಕಾಲು ತೊಳೆದು ಕೊಂಡಿರಿ" ಎಂದು ಕೇಳಿದ.

"ತಂಬಿಗೆಯ ಮೇಲೆ ಮುಚ್ಚಿದ ಹಲಗೆಯ ತುಂಡಿನಿಂದ ಕೆಸರನ್ನೆಲ್ಲ ಗೀರಿ ತೆಗೆದು ಇದ್ದ ನೀರಿನಲ್ಲೇ ತೊಳೆದು ಕೊಂಡೆವು" ಎಂದು ಉತ್ತರವಿತ್ತರು.

"ಸರಿ. ನೀನಿಬ್ಬರೂ ಈಗ ದೇವಾಲಯದೊಳಗೇ ದೇವರನ್ನು ಧ್ಯಾನಿಸಿ ಕೊಂಡಿರಿ. ರಾತ್ರಿಯಲ್ಲಿ ನಮ್ಮ ಸೇವಕನು ತೋರಿಸುವ ಕೋಣೆಯೊಳಗೇ ಮಲಗಿರಿ ಬೆಳಿಗ್ಗೆ ನಿಮ್ಮ ಮನೆಗೆ ಹೋಗಿ, ಮಧ್ಯಾಹ್ನದ ಮೇಲೆ ರಾಜಾಸ್ಥಾನಕ್ಕೆ ಬನ್ನಿರಿ" ಎಂದು ಹೇಳಿ ಮಂತ್ರಿ ಹೊರಟು ಹೋದನು.

ಇಬ್ಬರು ಯುವಕರೂ ಆ ದೇವಾಲಯದೊಳಗೇ ಕುಳಿತರು ರಾತ್ರಿಯಲ್ಲಿ ಸೇವಕನು ಇಬ್ಬರಿಗೂ ಬೇರೆ ಬೇರೆ ಕತ್ತಲೆ ಕೋಣೆಯನ್ನು ತೋರಿಸಿದನು ತಮ್ಮ ಧೈರ್ಯವನ್ನು ಕೋಧಿಸಲಿಕ್ಕೇ ಹೀಗೆ ನೂಡುತ್ತಿದ್ದಾರೆನಿಸಿತು ಇವರಿಗೆ ಅವರು ಆ ಕೋಣೆಯೊಳಗೆ ಹೊಕ್ಕ ಕೂಡಲೇ ಸೇವಕನು ಬಾಗಿಲು ಹಾಕಿ ಹೊರಗಿನಿಂದ ಚಿಲಕ ಹಾಕಿದನು.

ಇಬ್ಬರೂ ಕತ್ತಲೆಯಲ್ಲಿ ತಡವಿನೋಡಿ ಕೊಂಡು ಬಟ್ಟೆ ಹಾಸಿಕೊಂಡು ಮಲಗಿದರು. ಬೆಳಗಾದ ಕೂಡಲೇ ಸೇವಕ ಬಾಗಿಲು ತೆಗೆದ. ಕೋಣೆಯೊಳಗೆ ಬೆಳಕು ಹರಿಯಿತು.

ಇಬ್ಬರೂ ತಮ್ಮ ತಮ್ಮ ಮನೆಗೆ ಹೋಗಲು ಸಿದ್ಧರಾದರು. ಅಷ್ಟರೊಳಗೆ ಒಬ್ಬ ಸೇವಕ ಓಡೋಡಿ ಬಂದು, ನೀವಿಬ್ಬರೂ ಇಲ್ಲೇ ಇರಬೇಕಂತೆ. ಮಹಾಮಂತ್ರಿಗಳ ಆಜ್ಞೆ. ಅವರೇ ಬರುತ್ತಿದ್ದಾರೆ" ಎಂದ.

ನೋಡುತ್ತಿದ್ದ ಹಾಗೆ ಸೇವಕ ಪರಿವಾರಗಳೊಂದಿಗೆ ಮಂತ್ರಿಯೂ ಬಂದನು. ಸೇವಕರು ಯುವಕರಿಬ್ಬರಿಗೂ ಹೊಸ ಪಂಚೆಗಳನ್ನು ಕೊಟ್ಟರು "ನಮ್ಮ ಇದಿರಿನಲ್ಲಿಯೇ ನಿಮ್ಮ ಹಳೆಯ ದುಸ್ತುಗಳನ್ನು ತೆಗೆದು ಈ ಹೊಸ ಪಂಚೆ ಉಟ್ಟುಕೊಳ್ಳಿರಿ" ಎಂದ ಮಂತ್ರಿ.

ಒಬ್ಬನು ಮಾತ್ರವೇ ಹೊಸ ಪಂಚೆಯನ್ನು ಉಟ್ಟುಕೊಂಡು ಹಳೆ ಪಂಚೆಯನ್ನು ಜಾರಿಸಿಕೊಂಡನು.

ಇನ್ನೊಬ್ಬನು—'ಹಾಗೆ ನನಗೆ ಅಭ್ಯಾಸವಿಲ್ಲ. ಮನೆಗೆ ಹೋಗಿ ಉಟ್ಟುಕೊಂಡು ಬರುತ್ತೇನೆ" ಎಂದ.

ಕೂಡಲೇ ಮಂತ್ರಿ ಸೇವಕರಿಗೆ ಸನ್ನೆ ಮಾಡಿದನು. ಸೇವಕರು ಆ ಎರಡನೇಯವನ ಪಂಚೆಯನ್ನು ಕೋಧಿಸಿದಾಗ, ಅವನು ಟೊಂಕದೆಡೆಯಲ್ಲಿ ಮರೆಸಿಟ್ಟುಕೊಂಡ ನಾಲ್ಕಾರು ಚಿನ್ನದ ನಾಣ್ಯಗಳು ಹೊರಬಿದ್ದುವು.

ಅವರಿಬ್ಬರೂ ಮಲಗಿದ್ದ ಕತ್ತಲೆ ಕೋಟಡಿಯಲ್ಲಿ ಕೇಳುವವರಿಲ್ಲದ ಹಾಗೆ ಚಿನ್ನದ ನಾಣ್ಯಗಳನ್ನು ಜೆಲ್ಲಿಸಿದ್ದನು ಮಂತ್ರಿ.

ಎರಡನೆಯವನನ್ನ ಮನೆಗೆ ಕಳಿಸಿ ಬುದ್ಧಿಶಾಲಿಯೂ, ಮಿತವ್ಯಯಿಯೂ, ಪ್ರಾಮಾಣಿಕನೂ ಆದ ಮೊದಲನೆಯವನಿಗೇ ಖಜಾನೆಯ ಅಧಿಕಾರದ ಪದವಿ, ಅಂದರೆ ಕೋಶಾಧಿಕಾರವು ಕೊಡಲ್ಪಟ್ಟಿತು.

●●

Gram: VI-HWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಅಂತೋನ್ ಚೇಕವ್‌ರ ಟಿಪ್ಪಣಿ ಪುಸ್ತಕಗಳಿಂದ

ಸತ್ಯ ಹೊರಬರುತ್ತದೆಯೆಂದು ಹೇಳುತ್ತಾರೆ. ಆದರೆ ಇದು ನಿಜವಲ್ಲ.

ಓ ಓ ಓ

ದೇವರೆ, ನನಗೆ ಗೊತ್ತಿಲ್ಲದ ಅಥವಾ ಅರಿಯದ.ದರ ಕುರಿತು ನಾನು ಮಾತನಾಡುವುದೂ ಇಲ್ಲ, ಖಂಡಿಸುವುದೂ ಇಲ್ಲ.

ಓ ಓ ಓ

ನಟನ ಹತ್ತಿರ ಹಣವಿದ್ದಾಗ ಆತ ತಂತಿಗಳನ್ನೇ ಬಿಡುತ್ತಾನೆ, ಪತ್ರಗಳನ್ನಲ್ಲ.

ಓ ಓ ಓ

ಮನೆಯಲ್ಲಿ ಬೆನ್ನು ಚಪ್ಪರಿಸಿ ಪೋಷಿಸುತ್ತಿರುವ ಯಜಮಾನರನ್ನು ನಾಯಿಗಳು ಅಷ್ಟು ಹಚ್ಚಿಕೊಳ್ಳುವುದಿಲ್ಲ, ಆದರೆ ಅವುಗಳನ್ನು ಹೊಡೆಯುವ ಅಡುಗೆಯವನನ್ನು ಹೆಚ್ಚು ಹಚ್ಚಿಕೊಳ್ಳುತ್ತವೆ.

ಓ ಓ ಓ

ಮೂರ್ಖರ ಪ್ರಶಂಸೆಗೆ ಪಾತ್ರರಾಗುವುದಕ್ಕಿಂತ ಅವರಿಂದ ನಾಶಗೊಳ್ಳುವುದೇ ಮೇಲು.

ಓ ಓ ಓ

ಏಕಾಂಗಿತನದ ಬಗ್ಗೆ ಹೆದರಿಕೆಯಾಗುತ್ತಿದ್ದರೆ, ಮದುವೆಯಾಗಬೇಡಿ.

ಓ ಓ ಓ

ತನ್ನ ಜೀವನದ ಉದ್ದಕ್ಕೂ ಶ್ರೀಮಾನ್ ಕ್ಷ ಪ್ರಖ್ಯಾತ ಹಾಡುಗಾರರಿಗೆ, ನಟರಿಗೆ, ಲೇಖಕರಿಗೆ ಭಂಡ ಪತ್ರಗಳನ್ನು ಬರೆದ "ನೀವೇನೋ ಕಲ್ಪಿಸುತ್ತೀರಿ, ದನಾಕೋರರೆ, ವಂಚಕರೆ ಹೀಗೆ" ಏನೇನೋ—ಅನಾಮಿಕನಾಗಿ.

ಓ ಓ ಓ

ನಿಮಗೆ ಬಾಯೊರಿಕೆಯೊದಾಗ ಇಡೀ ಸಮುದ್ರವನ್ನೇ ಕುಡಿದು ಬಿಡುತ್ತೇನೆನ್ನುತ್ತೀರಿ. ಆದು ನಂಬಿಕೆ ಕುಡಿಯಲಾರಂಭಿಸಿದಾಗ ಒಂದೆರಡು ಲೋಟ ಮುಗಿಸಲು ಸಾಕಾಗುತ್ತದೆ. ಅದು ವಿಜ್ಞಾನ.

ಓ ಓ ಓ

ಪ್ರಸಿದ್ಧ ತಂದೆಯ ಮಗ ಕ. ಅವನು ಸಮರ್ಥ ವ್ಯಕ್ತಿಯೆ. ಅವನು ಏನೇ ಮಾಡಲಿ, ಜನ ಹೇಳುತ್ತಿದ್ದರು: ಆದರೂ ಆತ ತಂದೆಯ ಸಮಾನವಲ್ಲವಾರ. ಒಮ್ಮೆ ಒಂದು ಕಾರ್ಯಕ್ರಮವಲ್ಲಿ ಆತ ಭಾಗವಹಿಸಿದ. ಪ್ರತಿಯೊಬ್ಬರೂ ಅವನ ಕಲಾಪವನ್ನು ಕಂಠೋಕ್ತವಾಗಿ ಪ್ರಶಂಸಿಸಿದರು ಆದರೆ ಅವನ ಬಗ್ಗೆ ಹೇಳಿದರು. ಇನ್ನೂ ಆತ ತನ್ನ ತಂದೆಯಲ್ಲ. ಆತ ಮನೆಗೆ ಬಂದು ಮಲ್ಲಗಲು ತಯಾರಾದಾಗ ತಂದೆಯ ಭಾವ ಚಿತ್ರದ ಕಡೆಗೆ ನೋಡಿದ. ಮತ್ತು ಆತನ ಕಡೆಗೆ ತನ್ನ ಬಿಗಿಮುಷ್ಟಿಯನ್ನು ಎತ್ತಿದ.

ಓ ಓ ಓ

ನಮ್ಮ ಸಂತಾನದವರು ಸುಖವಾಗಿರಲೆಂದು ಜೀವನವನ್ನು ಮೂರ್ಪಾಡಿಸುವುದಕ್ಕೆ ಸಾಧ್ಯವಿರುವುದೆಲ್ಲವನ್ನೂ ನಾವು ಮಾಡುತ್ತೇವೆ. ಆದರೂ ಅವರು ಮಾಮೂಲಾದ ಮಾತನ್ನೇ ಹೇಳುತ್ತಾರೆ; ಈ ಮೊದಲೇ ಜೆನ್ನಾಗಿತ್ತು, ಜೀವನವು ಇಂದು ನಿನ್ನೆಗಿಂತ ಕಟ್ಟೆದೆ.

ಓ ಓ ಓ

ಇತಿಹಾಸವೆಂದರೆ ಅರಸರ ಮತ್ತು ಕಾಳಗಗಳ ಕಥೆಯಾಗಬಾರದು, ವಿಚಾರ ಕಲ್ಪನೆಗಳ ಚರಿತ್ರೆಯಾಗಬೇಕು. ●

Edited, Printed & Published by K. H. Sharma



ಸಂಪುಟ ೫೧
ಸಂಚಿಕೆ ೨೬

ಮತದಾನದಲ್ಲಿ

ವಿವೇಚನೆ-ವಿವೇಕ

ಶ್ರೀ ದೇವರಾಜ ಅರಸರು ಕೇಂದ್ರದ ಚುನಾವಣಾ ಪ್ರಣಾಳಿಕೆಗೆ ಮತ್ತೆರಡು ಅಂಶಗಳನ್ನು ಸೇರಿಸಿದರು ಇದನ್ನು ಪೂರಕ ಪ್ರಣಾಳಿಕೆಯೆಂದು ಕರೆದರು. ಮೊದಲನೆಯದು ಮಹಾಜನ ವರದಿಯನ್ನು ಇದ್ದ ಕ್ಕಿದ್ದಂತೆ ಕಾರ್ಯಗತಗೊಳಿಸುವುದು; ಮತ್ತೊಂದು ಕಾವೇರೀ ನೀರಿನ ಸಮಸ್ಯೆಯನ್ನು ಗೌರವಯುತವಾಗಿ ಪರಿಹರಿಸುವುದು.

ಇದೀಗ ಶ್ರೀಮತಿ ಗಾಂಧಿಯವರು ರಾಜ್ಯದ ಹಲವಾರು ಕ್ಷೇತ್ರಗಳಲ್ಲಿ ಮಿಂಚಿನ ದರ್ಶನ ನೀಡಿ ಬಿರುಗಾಳಿಯಂತೆಯೇ ಬೀಸಿ ಹೋದರು. ಇದರ ಸಂಪೂರ್ಣ ಲಾಭ ಗಳಿಸುವುದು. ಪಕ್ಷವನ್ನು ವಿಜಯ ಪಥದತ್ತ ಒಯ್ಯುವುದು ಇನ್ನು ದೇವರಾಜರ ಜವಾಬ್ದಾರಿ

ಚುನಾವಣೆಗೆ ಮೊದಲು ಇನ್ನೂ ಕೆಲವು ಕ್ಷೇತ್ರಗಳಿಗೆ ಭೆಟ್ಟಿ ನೀಡುವ ಸಾಧ್ಯತೆಯ ಬಗ್ಗೆ ಭರವಸೆಯಿತ್ತಾದರೂ ಶ್ರೀಮತಿ ಗಾಂಧಿಯವರದನ್ನು ನಿರಾಕರಿಸಿದ್ದಾರೆ. ಆದುದರಿಂದ ಶ್ರೀ ದೇವರಾಜರ ಹೊಣೆಗಾರಿಕೆ ಮತ್ತಷ್ಟು ಹೆಚ್ಚಿತು.

ಮೊದಲ ತುತ್ತಿಗಿರುವ ತೃಪ್ತಿ ಸೂಜ್ಯಂಕ ಮುಂದಿನ ತುತ್ತುಗಳಿಗಿರುವುದಿಲ್ಲ ಶ್ರೀಮತಿ ಗಾಂಧಿಯವರಿಗಿರುವ ಭೆಟ್ಟಿಗಿದ್ದ ಶಕ್ತಿ ಇತರ ಭೆಟ್ಟಿಗಿರುವುದು ಸಾಧ್ಯವಿಲ್ಲ. ಹಾಗಾಗಿ, ಶ್ರೀ ಅರಸರು ತನ್ನ ಪಕ್ಷದ ಗೌರವವನ್ನು ಉಳಿಸಿಕೊಳ್ಳಲು ತುಂಬ ಶ್ರಮ ವಹಿಸಬೇಕಾಗಿದೆ, ಅವರು ಚುನಾವಣಾ ರಂಗದಿಂದ ದೂರವುಳಿದದ್ದಾದರೂ ಅದೇ ಉದ್ದೇಶ್ಯದಿಂದ.

ಶ್ರೀಮತಿ ಗಾಂಧಿ ಮತ್ತವರ ಪಕ್ಷದ ಸುಭದ್ರ ರಾಜ್ಯ ಸರಕಾರದ ಬಯಕೆ ಸರ್ವಾಧಿಕಾರ ಸ್ವಿಯತೆಯ ನಿದರ್ಶನವೆನ್ನುತ್ತಾರೆ ಅವರ ವಿರೋಧಿಗಳು ಸುಭದ್ರ ಸರಕಾರಗಳನ್ನು ಉರುಳಿಸಲು ಅವರು ಪ್ರಯತ್ನಿಸಿದರು ಎಂದು ಆರೋಪಿಸುತ್ತಾರೆ ಅವರು.

ಪ್ರಧಾನಿ ಬಯಸುವುದು ಸುಭದ್ರ ಸರಕಾರವನ್ನಲ್ಲ, ತನ್ನ ಕೈಗೊಂಬೆಯ ಸರಕಾರವನ್ನು ಎಂದು ಬಹಿರಂಗಗೊಳಿಸುತ್ತಾರೆ, ರಾಜ್ಯದ ಸಿಂಡಿಕೇಟಿಗರು. ಅಸ್ಸಾಮು, ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿದ್ದ ಸುಭದ್ರ ಮುಖ್ಯಮಂತ್ರಿಗಳನ್ನು ಗದ್ದುಗೆ ಇಳಿಸಿದರು. ಕರ್ನಾಟಕ– ಗುಜರಾತ– ಉತ್ತರ ಪ್ರದೇಶಗಳ ತನ್ನದಲ್ಲದ ಸರಕಾರ

ಗಳನ್ನು [illegible]
ನಾಯಕತ್ವ [illegible]
ವರನ್ನು ಭ [illegible]
ರ್ಧರಾಕರ [illegible]
ಕಲಕತ್ತೆಗೆ [illegible]
ದರು.

ತನ್ನ ಕೈಗೊಂ [illegible]
ಶ್ವೇ ಪ್ರಧಾನಿಯ [illegible]
ಕರ್ನಾಟಕದಲ್ಲಿ ತ [illegible]
ಮ್ಮ ಸಮೂಜಾ [illegible]
ಕ್ರಮಗಳನ್ನು ಅ [illegible]
ಬಲ ನೀಡಿ [illegible]

ರಾಜ್ಯಗಳಿಗೆ ಹೆ [illegible]
ಸುಧಾರಣೆಗಳನ್ನು ಕ [illegible]
ದು ಸಾಧ್ಯವೆಂದು ಶ್ರೀ [illegible]
ಲರು ಹೇಳುತ್ತಾರೆ [illegible]
ವಿವಾದಗಳಲ್ಲಿ ಕೇ [illegible]
ಯವಾಗುವಂತಪ [illegible]
ದೂರುತ್ತಾರೆ.

ಆದರ ಇನ್ನೊ [illegible]
ಪಾರ್ಟೀಲರನ್ನೇ [illegible]

ಸುವ್ಯವಸ್ಥಿತ [illegible]
14 [illegible]
ರ
ಸೇವಿಂ [illegible]
ಅತಿ ಲಾಭ

ದಿ [illegible]

ರಿಜಿಸ್ಟರ್ಡ್ ಆಫೀ [illegible]
ಆಡಳಿತ ಕಚೇ [illegible]
ಬ